ದಾವಣಗೆರೆ ಜಿಲ್ಲೆಯ ದೇವಾಲಯಗಳು

(ಪ್ರಾಚೀನ ಮತ್ತು ಮಧ್ಯಕಾಲೀನ ಯುಗ)

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ

ಮಹಾಪ್ರಬಂಧ

ಸಂಶೋಧಕ :

ಹೆಚ್. ತಿಪ್ಪೇಸ್ವಾಮಿ

ಮಾರ್ಗದರ್ಶಕರು:

ಶ್ರೀ ಬಾಲಸುಬ್ರಮಣ್ಯ

ಪುರಾತತ್ತ್ವ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬.

೨೦೦೦

61

61

61

61

ದಾವಣಗೆರೆ ಜಿಲ್ಲೆಯ ದೇವಾಲಯಗಳು

(ಪ್ರಾಚೀನ ಮತ್ತು ಮಧ್ಯಕಾಲೀನ ಯುಗ)

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ

ಮಹಾ ಪ್ರಬಂಧ

ಸಂಶೋಧಕ :

ಹೆಚ್. ತಿಪ್ಪೇಸ್ವಾಮಿ

ಮಾರ್ಗದರ್ಶಕರು:

ಶ್ರೀ ಬಾಲಸುಬ್ರಮಣ್ಯ

ಮುಖ್ಯಸ್ಥರು

ಪುರಾತತ್ವ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೦೦

61

ಸಂಶೋಧಕರ ಪ್ರಮಾಣ ಪತ್ರ

' ದಾವಣಗೆರೆ ಜಿಲ್ಲೆಯ ದೇವಾಲಯಗಳು ' (ಪ್ರಾಚೀನ ಮತ್ತು ಮಧ್ಯಕಾಲೀನ ಯುಗ) ಎಂಬ ಶೀರ್ಷಿಕೆಯ ಈ ಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸಲು ಶ್ರೀ ಬಾಲಸುಬ್ರಮಣ್ಯರವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಅಧ್ಯಯನದ ವಿಷಯವನ್ನು ಇದುವರೆಗೆ ಯಾವ ಪದವಿಗೂ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಹೆಚ್. ತಿಪ್ಪೇಸ್ವಾಮಿ
ಸಂಶೋಧಕ
ಪುರಾತತ್ವ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಾರ್ಗದರ್ಶಕರ ದೃಢೀಕರಣ ಪತ್ರ

ಶ್ರೀ ಹೆಚ್. ತಿಪ್ಪೇಸ್ವಾಮಿ ಅವರು ''ದಾವಣಗೆರೆ ಜಿಲ್ಲೆಯ ದೇವಾಲಯಗಳು'' (ಪ್ರಾಚೀನ ಮತ್ತು ಮಧ್ಯಕಾಲೀನ ಯುಗ) ಎಂಬ ಶೀರ್ಷಿಕೆಯ ಈ ಮಹಾ ಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಈ ಮಹಾ ಪ್ರಬಂಧದ ವಿಷಯವನ್ನು ಇದುವರೆಗೆ ಯಾವ ಪದವಿಗೂ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಬಾಲಸುಬ್ರಮಣ್ಯ

ಮಾರ್ಗದರ್ಶಕರು ಮತ್ತು ಮುಖ್ಯಸ್ಥರು

ಪುರಾತತ್ವ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಪಿಹೆಚ್.ಡಿ. ಅಧ್ಯಯನಕ್ಕೆ ಅವಕಾಶ ಕಲ್ಪಿಸಿಕೊಟ್ಟ ಅಂದಿನ ಕುಲಪತಿಗಳಾದ ಡಾ. ಚಂದ್ರಶೇಖರ ಕಂಬಾರ ಹಾಗು ಆಗಿನ ಕುಲಸಚಿವರಾದ ಡಾ. ಕೆ. ಎಂ. ಸುರೇಶ್‌ರವರಿಗೆ ಈಗಿನ ಕುಲಪತಿಗಳಾದ ಡಾ. ಎಂ. ಎಂ. ಕಲಬುರ್ಗಿ ಅವರಿಗೆ ಹಾಗು ಕುಲಸಚಿವರಾದ ಪ್ರೊ. ಮಲ್ಲೇಪುರಂ. ಜಿ. ವೆಂಕಟೇಶ ಅವರಿಗೆ ಅಧ್ಯಯನ ಕ್ರಮವನ್ನು ಬೋಧಿಸಿ ಪ್ರೀತಿಯಿಂದ ಮಾರ್ಗದರ್ಶನ ನೀಡಿದ ಶ್ರೀ ಬಾಲಸುಬ್ರಮಣ್ಯ ಅವರಿಗೆ ವಿ.ವಿ.ಯ ಹಿರಿಯ ವಿದ್ವಾಂಸರಾದ ಡಾ. ಕೆ.ವಿ. ನಾರಾಯಣ, ಶ್ರೀ ಕರಿಗೌಡ ಬೀಚನಹಳ್ಳಿ, ಪ್ರೊ. ಲಕ್ಷ್ಮಣ್ ತೆಲಗಾವಿ, ಡಾ. ಹಿ.ಚಿ. ಬೋರಲಿಂಗಯ್ಯ ಅವರಿಗೆ, ಅಧ್ಯಯನ ಅವಧಿಯಲ್ಲಿ ಎಲ್ಲಾರಿಗಿಂತಲೂ ಹೆಚ್ಚಿನ ಸಲಹೆ ಹಾಗು ಸಹಕಾರ ನೀಡಿದ ಶ್ರೀ ಪ್ರೇಮಕುಮಾರ್, ಡಾ. ಕೆ. ಜಿ. ಭಟ್ ಸೂರಿ, ಶ್ರೀಮತಿ ನೇತ್ರಾವತಿ ಬಾಲಸುಬ್ರಮಣ್ಯ ಅವರಿಗೆ ಹಾಗು ಡಾ. ಸಿ. ಮಹದೇವ ಡಾ. ಸಿ. ಎಸ್. ವಾಸುದೇವನ್, ಡಾ. ವಿರುಪಾಕ್ಷಿ ಪೂಜಾರಹಳ್ಳಿ, ಚಿನ್ನಸ್ವಾಮಿ, ಡಾ. ಕೇಶವನ್ ಪ್ರಸಾದ್, ಚಲುವರಾಜ್ , ಡಾ. ಕೆ.ಎಂ. ಮೈತ್ರಿ, ಡಾ. ಬಿ.ಎಂ. ಪುಟ್ಟಯ್ಯ, ಎ. ವೆಂಕಟೇಶ್, ಶ್ರೀನಿವಾಸ ಮೂರ್ತಿ ಇವರುಗಳಿಗೆ, ಸಲಹೆ ಸೂಚನೆ ನೀಡಿದ ಕರ್ನಾಟಕ ಪುರಾತತ್ವ ಶಾಸ್ತ್ರಜ್ಞರಾದ ಡಾ. ಅ. ಸುಂದರ, ಡಾ. ರಘುನಾಥಭಟ್ ಹಾಗು ಸಿ. ಎಸ್. ಪಾಟೀಲ್ ಮೊದಲಾದ ಬಾಹ್ಯ ವಿದ್ವಾಂಸರಿಗೆ, ಹಿರಿಯ ಗೆಳೆಯರಾದ ಎಸ್. ವೈ. ಸೊಮಶೇಖರ್, ಕೊಟ್ರೇಶ್, ಕೆ. ಸಿದ್ದಪ್ಪ, ಜ್ಞಾನಪ್ಪ ಬಡಿಗೇರಾ, ಒಡೆಯರ್, ಚನ್ನಪ್ಪ, ಮಹೇಶ್ವರಯ್ಯ, ಗೋವಿಂದ್, ವೀರನಗೌಡ, ಲಕ್ಷ್ಮಪ್ಪ, ಚಂದ್ರಶೇಖರ್ ಎಸ್. ಬಿ. , ಕಾಳಶ್ರೀ, ಜಯಣ್ಣ, ಮಾರುತಿ, ಉಮೇಶ್ ಅವರುಗಳಿಗೆ ಹಾಗು ಶಿವಪ್ಪ ಕೆ. ಎಸ್. ವಿರೇಶ್ ಕುಮಾರ್, ಉದಯ್, ಅಂಬರೀಶ್, ಶಿವಪ್ರಕಾಶ್, ನಬಿ, ಓಬಯ್ಯ ಮೊದಲಾದವರಿಗೆ ಹಾಗು ಗ್ರಂಥಾಲಯ ಸಿಬ್ಬಂದಿಗೆ ಮತ್ತು ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಕೇಂದ್ರ ಪುರಾತತ್ವ ಇಲಾಖೆಯ ನೌಕರರಿಗೆ ಹಾಗು ದಾವಣಗೆರೆ ಜಿಲ್ಲೆಯ ಸಾರ್ವಜನಿಕರಿಗೆ, ಮಾಹಿತಿ ನೀಡಿದ ಜಿಲ್ಲಾಧಿಕಾರಿ ಹಾಗು ಸಂಬಂಧಿಸಿದ ತಾಲೂಕಿನ ತಹಿಶೀಲ್ದಾರ್‌ಗಳಿಗೆ, ಇಲ್ಲಿಯವರಿಗೆ ಸಾಕಿ ಸಲುಹಿ, ಅಧ್ಯಯನಕ್ಕೆ ಪ್ರೋತ್ಸಾಹ ನೀಡಿದ ತಂದೆ, ತಮ್ಮನಾದ ಬಿ. ರುದ್ರಮುನಿ, ತಂಗಿ ಬಿ. ಮಂಜುಳ , ಶ್ರೀಮತಿ ಕಮಲ ತಿಪ್ಪೇಶ್, ಅಕ್ಕ ಮಾವಂದಿರು ಹಾಗು ಅಚ್ಚು ಕಟ್ಟಾಗಿ ಅಕ್ಷರ ಸಂಯೋಜಿಸಿ ಕೊಟ್ಟ ಜಂಬುನಾಥ ಹೆಚ್.ಎಂ., ಖಾದರ್‌ಬಾಷ (ಶಶಿ ಕಂಪ್ಯೂಟರ್ಸ್, ಹೊಸಪೇಟೆ) ಇವರೆಲ್ಲರಿಗೂ ನನ್ನ ತುಂಬು ಹೃದಯದ ಕೃತಜ್ಞತೆಗಳು ಸಲ್ಲುತ್ತವೆ. ಮೈಸೂರು ಪುರಾತತ್ವ ಇಲಾಖೆಯ ವಾರ್ಷಿಕ ವರದಿಗಳಿಂದ ಹಾಗು ಡಾ. ಸಿ.ಎಸ್.ಪಾಟೀಲ್‌ರವರ ಪುಸ್ತಕಗಳಿಂದ ದೇವಾಲಯಗಳ ತಳ ನಕ್ಷೆಯನ್ನು ಬಳಸಿಕೊಂಡು ಅಲ್ಪ ಬದಲಾವಣೆಯೊಂದಿಗೆ ನನ್ನ ಈ ಮಹಾ ಪ್ರಬಂಧದಲ್ಲಿ ಉಪಯೋಗಿಸಿಕೊಳ್ಳಲಾಗಿದೆ. ನಾನು ಅವರಿಗೆ ಕೃತಜ್ಞನಾಗಿದ್ದೇನೆ.

ಹೆಚ್. ತಿಪ್ಪೇಸ್ವಾಮಿ
ಸಂಶೋಧಕ

ಪರಿವಿಡಿ

೧. ಪ್ರಸ್ತಾವನೆ :-

ಕರ್ನಾಟಕದ ಮಧ್ಯ ಭಾಗದಲ್ಲಿರುವ ದಾವಣಗೆರೆ ಜಿಲ್ಲೆಯು ಆಗಸ್ಟ್ ೧೫, ೧೯೯೭ರಂದು ರಚಿತವಾಗಿದೆ. ಸುವರ್ಣ ಸ್ವಾತಂತ್ರ್ಯ ಮಹೋತ್ಸವದ ಅಂಗವಾಗಿ ಕರ್ನಾಟಕದಲ್ಲಿ ಹೊಸದಾಗಿ ರೂಪಿತವಾದ ಜಿಲ್ಲೆಗಳಲ್ಲಿ ಇದೂ ಸಹ ಒಂದು. ದಾವಣಗೆರೆ, ಜಗಲೂರು, ಹರಿಹರ, ಹರಪನಹಳ್ಳಿ, ಚನ್ನಗಿರಿ, ಹೊನ್ನಾಳಿ ಇವು ಈ ಜಿಲ್ಲೆಯ ಆರು ತಾಲೂಕುಗಳಾಗಿವೆ.

ಈ ಜಿಲ್ಲೆಯು ಅನೇಕ ವೈಶಿಷ್ಟ್ಯಗಳನ್ನು ಒಳಗೊಂಡಿದೆ. ಈ ಜಿಲ್ಲೆಯ ಉತ್ತಮ ಭೌಗೋಳಿಕ ಪರಿಸರವು ಪ್ರಾಗೈತಿಹಾಸಿಕ ಕಾಲದಿಂದಲೂ ಮಾನವನ ವಾಸಕ್ಕೆ ಅವಕಾಶ ಕಲ್ಪಿಸಿಕೊಟ್ಟಿದೆ. ಹಾಗೆಯೇ ಪ್ರಾಚೀನ ಕಾಲದಿಂದಲೂ ಆಳ್ವಿಕೆ ಮಾಡಿದ ರಾಜರು ಇಲ್ಲವೇ ಅವರ ಸಾಮಂತರು ದೇವಾಲಯಗಳನ್ನು ನಿರ್ಮಿಸಿ, ಮುಂದಿನ ಪೀಳಿಗೆಗೆ ಕಲಾ ಕಾಣಿಕೆಗಳಾಗಿ ಬಿಟ್ಟು ಹೋಗಿದ್ದಾರೆ. ಇವುಗಳು ಆ ಕಾಲದ ರಾಜರ ಇಲ್ಲವೆ, ಸಾಮಂತ ಅಧಿಕಾರಿಗಳ ಸೌಂದರ್ಯ ಪ್ರಜ್ಞೆಯ ದ್ಯೋತಕಗಳಾಗಿವೆ. ಈ ಜಿಲ್ಲೆಯ ಅನೇಕ ಕಡೆ ವಿವಿಧ ಧರ್ಮಗಳಿಗೆ ಸೇರಿದ ಕುರುಹುಗಳು ಕಂಡುಬರುವುದರ ಹಿನ್ನಲೆಯಲ್ಲಿ ಧಾರ್ಮಿಕ ಸಮನ್ವಯತೆ ಇತ್ತೆಂಬುವುದನ್ನು ಕಂಡುಕೊಳ್ಳಬಹುದಾಗಿದೆ.

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ :-

ಒಂದು ದೇಶದ ಇತಿಹಾಸವನ್ನು ಒಬ್ಬ ವ್ಯಕ್ತಿ ಸಮಗ್ರವಾಗಿ ಅಧ್ಯಯನ ಮಾಡುವುದು ಕಷ್ಟಸಾಧ್ಯ. ಆದರೆ ಸಂಸ್ಕೃತಿಯನ್ನು ಬಿಡಿಬಿಡಿಯಾಗಿ ತೋರಿಸುವ ನಿಟ್ಟಿನಲ್ಲಿ ಇತಿಹಾಸವನ್ನು ವಿವಿಧ ದೃಷ್ಟಿಕೋನಗಳಿಂದ ವಿಶ್ಲೇಷಣೆ ಮಾಡಲಾಗುತ್ತದೆ. ಕರ್ನಾಟಕದ ಚರಿತ್ರೆಯನ್ನು ಅಧ್ಯಯನ ಮಾಡಿರುವ ವಿದ್ವಾಂಸರ ಪ್ರಯತ್ನವನ್ನು ಗಮನಿಸಿದರೆ ಪ್ರಮುಖವಾಗಿ ಮೂರು ವಿಧಗಳು ಕಂಡುಬರುತ್ತವೆ. ಒಂದು : ರಾಜವಂಶಗಳನ್ನು ಗಮನದಲ್ಲಿಟ್ಟುಕೊಂಡು ರಚಿತವಾದ ರಾಜಕೀಯ ಇತಿಹಾಸ. ಎರಡು: ಕಾಲವನ್ನು ಆಧಾರವಾಗಿಟ್ಟುಕೊಂಡು ರಚಿತವಾದ ರಾಜಕೀಯ ಇತಿಹಾಸ ಮತ್ತು ಮೂರು: ಸಾಂಸ್ಕೃತಿಕ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ರಚಿತವಾದ ಇತಿಹಾಸ[೧].

ವಾಸ್ತು ಮತ್ತು ಮೂರ್ತಿ ಶಿಲ್ಪಗಳ ಅಧ್ಯಯನವನ್ನು ಮಾಡುವಾಗ ವಾಸ್ತು ಮತ್ತು ಮೂರ್ತಿಶಿಲ್ಪಗಳ ಬದಲಾವಣೆಯ ಹಂತಗಳನ್ನು ಆಯಾ ಕಾಲದ ರಾಜವಂಶಗಳ ಹೆಸರಿನೊಂದಿಗೆ ಸಮೀಕರಿಸಲಾಗುತ್ತದೆ. ಆಶ್ರಯದಾತರು ಇಲ್ಲದೆ, ಯಾವುದೇ ಕಲೆ ಪ್ರವರ್ಧಮಾನಕ್ಕೆ ಬರುವುದಿಲ್ಲ. ಪ್ರಾಚೀನ ಭಾರತದಲ್ಲಿ ಬಹುಪಾಲು ಎಲ್ಲಾ ಕಲಾ ಪ್ರಕಾರಗಳು ಹುಟ್ಟಿ ಬೆಳೆದಿದ್ದು ರಾಜಾಶ್ರಯದಲ್ಲಿಯೇ, ಹಾಗಾಗಿ ಆಯಾ ರಾಜಮನೆತನಗಳ ಏಳು ಬೀಳುಗಳ ಪ್ರಭಾವವು ಕಲಾ ಪ್ರಕಾರಗಳ ಮೇಲೂ ಆಗಿರುವುದು ಸ್ಪಷ್ಟವಾಗಿ ಗಮನಿಸಬಹುದಾದ ಅಂಶ. ಒಂದು ರಾಜ್ಯದ ನಿರ್ಧಿಷ್ಟ ಅವಧಿಯ ಸಮೃದ್ಧಿ, ಸ್ಥಿರತೆ, ಅರಸನಾದವನ ಕಲಾಭಿರುಚಿ, ಧರ್ಮಬುದ್ಧಿ ಇವುಗಳು ಆಯಾ ಕಾಲದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಬಿಂಬಿಸುತ್ತವೆ.

ಕರ್ನಾಟಕದ ವಾಸ್ತು ಶಿಲ್ಪವನ್ನಾಗಲಿ ಅಥವಾ ಭಾರತೀಯ ವಾಸ್ತು ಶಿಲ್ಪವನ್ನಾಗಲಿ ವಿಂಗಡಿಸುವಾಗ ಮೊದಲಿಗೆ ಅರಸು ಮನೆತನಗಳನ್ನು ಗಮನದಲ್ಲಿಟ್ಟುಕೊಂಡು, ಅನಂತರ ಅವುಗಳನ್ನು ಧರ್ಮದ ದೃಷ್ಟಿಯಿಂದ ವಿಂಗಡಿಸಲಾಗುತ್ತದೆ. ಕರ್ನಾಟಕದ ವಾಸ್ತುಶಿಲ್ಪದ ಬಗ್ಗೆ ಅಧ್ಯಯನ ಮಾಡುವಾಗ ಬಾದಾಮಿ ಚಾಲುಕ್ಯರ, ರಾಷ್ಟ್ರಕೂಟರ, ಕಲ್ಯಾಣಿ ಚಾಲುಕ್ಯರ, ಹೊಯ್ಸಳ, ವಿಜಯನಗರದ ಅರಸರ ಹಾಗು ಪಾಳೇಗಾರರ ಕಾಲವೆಂದು ವಿಭಾಗಿಸಿ, ಆಯಾ ಕಾಲದ ವಾಸ್ತು ರಚನೆಗಳ ಅಧ್ಯಯನ ಮಾಡಿರುವುದನ್ನು ಗಮನಿಸಬಹುದು.

ಪ್ರಸ್ತುತ ದಾವಣಗೆರೆ ಜಿಲ್ಲೆಯಲ್ಲಿ ಪ್ರಾಚೀನ ಮತ್ತು ಮಧ್ಯಕಾಲೀನ ಯುಗದಲ್ಲಿ ಹಲವು ರಾಜವಂಶಗಳು ಆಳ್ವಿಕೆ ನಡೆಸಿವೆ. ಅವುಗಳೆಂದರೆ; ಶಾತವಾಹನ, ಮೌರ್ಯ, ಕದಂಬ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣಿ ಚಾಲುಕ್ಯ, ಬೆಳಗುತ್ತಿ ಸಿಂಧರು, ಉಚ್ಚಂಗಿ ಪಾಂಡ್ಯರು, ನೊಳಂಬರು, ಸೇವುಣರು, ಹೊಯ್ಸಳರು ಮತ್ತು ವಿಜಯನಗರದ ಅರಸರು ಆಳ್ವಿಕೆ ನಡೆಸಿರುವುದನ್ನು ಉದಾಹರಿಸಬಹುದು[೨]. ಈ ವಿಭಿನ್ನ ರಾಜ ಮನೆತನಗಳು ಆಳ್ವಿಕೆ ನಡೆಸಿ, ತಮ್ಮದೇ ಆದ ಸಾಂಸ್ಕೃತಿಕ ಕೊಡುಗೆಯನ್ನು ನೀಡಿವೆ. ಈ ಹಿನ್ನಲೆಯಲ್ಲಿ ದಾವಣಗೆರೆ ಜಿಲ್ಲೆಯಲ್ಲಿ ಕಂಡುಬರುವ ಪ್ರಾಚೀನ ಮತ್ತು ಮಧ್ಯಕಾಲೀನ ಯುಗದ ದೇವಾಲಯಗಳ ವಾಸ್ತುಕಲೆ ಮತ್ತು ಮೂರ್ತಿಶಿಲ್ಪವನ್ನು ಕುರಿತಂತೆ ಅಧ್ಯಯನ ನಡೆಸುವುದು ಈ ಅಧ್ಯಯನದ ಉದ್ದೇಶ.

ಇಂದಿನ ದಾವಣಗೆರೆ ಜಿಲ್ಲೆಯು ಆರು ತಾಲೂಕುಗಳನ್ನೊಳಗೊಂಡಿದೆ. ಈ ಎಲ್ಲಾ ತಾಲೂಕಿನಲ್ಲಿರುವ ದೇವಾಲಯಗಳ ಅಧ್ಯಯನ ನಡೆಸಲಾಗಿದೆ. ಈ ದೇವಾಲಯಗಳು ಮುಖ್ಯವಾಗಿ ನೀಲಗುಂದ, ಬಾಗಳಿ, ಹಲವಾಗಲು (ಹರಪನಹಳ್ಳಿ ತಾಲೂಕು), ಹರಿಹರ, ನಂದಿಗುಡಿ, ನಂದಿತಾವರೆ, ದೇವರ ಬೆಳಕೆರೆ, ವಾಸನ(ಹರಿಹರ ತಾಲೂಕು), ಆನೆಕೊಂಡ, ಅವರಗೊಳ್ಳ, ಕಕ್ಕರಗೊಳ್ಳ, ಲೋಕಿಕೆರೆ, ಬೇತೂರು, ನೀರ್ಥಡಿ (ದಾವಣಗೆರೆ ತಾಲೂಕು), ಚನ್ನಗಿರಿ, ಮರವಂಜಿ, ಕಾಲ್ಕೆರೆ, ಹಿರೇಕೊಗಲೂರು (ಚನ್ನಗಿರಿ ತಾಲೂಕು), ಬೆಳಗುತ್ತಿ, ಕುರುವದಗಡ್ಡೆ, ಬಳ್ಳೇಶ್ವರ, ತೀರ್ಥರಾಮೇಶ್ವರ (ಹೊನ್ನಾಳಿ ತಾಲೂಕು)ಗಳಲ್ಲಿ ಪ್ರಮುಖ ದೇವಾಲಯಗಳು ಕಂಡು ಬರುತ್ತವೆ. ಮತ್ತೆ ಕೆಲವುಕಡೆ ಸುಸ್ಥಿತಿಯಲ್ಲಿರುವ ಹಲವು ದೇವಾಲಯಗಳಿವೆ. ಇನ್ನು ಕೆಲವು ದೇವಾಲಯಗಳು ಕಾಲನ ತುಳಿತಕ್ಕೆ ಸಿಕ್ಕು, ಅವನತಿಯ ಹಾದಿಯನ್ನು ಹಿಡಿದಿರುವುದು ವಿಪರ್ಯಾಸ. ಕೆಲ ಗ್ರಾಮಗಳಲ್ಲಿ ಸಂಪೂರ್ಣವಾಗಿ ನವೀಕರಣಗೊಂಡು ಇಲ್ಲವೇ ಅಲ್ಪಸ್ವಲ್ಪ ಜೀರ್ಣೋದ್ಧಾರಗೊಂಡು ಅಸ್ತಿತ್ವವನ್ನು ಉಳಿಸಿಕೊಂಡ ಕೆಲವು ದೇವಾಲಯಗಳು ಈ ಪ್ರದೇಶದಲ್ಲಿವೆ. ದಾವಣಗೆರೆ ಜಿಲ್ಲೆಗೆ ಸಂಬಂಧಿಸಿದ ವಿವಿಧ ವಿಷಯಗಳ ಮೇಲೆ ಅಲ್ಲಲ್ಲಿ ಅಧ್ಯಯನಗಳು ಆಗಿದ್ದರೂ ವಾಸ್ತು ಮತ್ತು ಮೂರ್ತಿಶಿಲ್ಪ ಕುರಿತಂತೆ ಹೆಚ್ಚು ಅಧ್ಯಯನ ನಡೆದಿಲ್ಲ. ಈ ಕೊರತೆಯನ್ನು ತುಂಬಲು ವ್ಯವಸ್ಥಿತ ಅಧ್ಯಯನದ ಅವಶ್ಯಕತೆ ಇದೆ. ಇಲ್ಲಿ ಆಳ್ವಿಕೆ ನಡೆಸಿದ ರಾಜರು ಅಥವಾ ಸಾಮಂತ ಅಧಿಕಾರಿಗಳು ನಿರ್ಮಿಸಿದ ದೇವಾಲಯಗಳು, ಅವುಗಳ ವಾಸ್ತು ವೈಶಿಷ್ಟ್ಯ, ವಿಭಿನ್ನ ಶೈಲಿಗಳು ಮತ್ತು ಮೂರ್ತಿಗಳ ವೈಶಿಷ್ಟ್ಯತೆಗಳನ್ನು ಗಮನದಲ್ಲಿಟ್ಟುಕೊಳ್ಳಲಾಗಿದೆ. ಇವುಗಳನ್ನು ಸ್ಥೂಲವಾಗಿ ಚರ್ಚಿಸಿ ಒಂದು ಚಿತ್ರಣ ನೀಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಶಾಸನಗಳು ಆಕಾಲದ ಪ್ರಮುಖ ದಾಖಲೆಗಳು. ಅವುಗಳಿಂದ ತಿಳಿದು ಬರುವ ಮಾಹಿತಿಯು ಬಹಳಷ್ಟು ಚದುರಿದ ಹಾಗು ಬಿಡಿ ಮಾಹಿತಿಗಳೇ ಆದರೂ ಅವುಗಳನ್ನು ಒಂದು ಚೌಕಟ್ಟಿನಲ್ಲಿ ಪರಿಶೀಲಿಸಿದಾಗ ವಾಸ್ತುಕಲೆಯನ್ನು ವಿಶ್ಲೇಷಿಸಲು ನೆರವಾಗುತ್ತವೆ. ದಾವಣಗೆರೆ ಜಿಲ್ಲೆಯಲ್ಲಿನ ದೇವಾಲಯಗಳ ವಾಸ್ತುಕಲೆ ಮತ್ತು ಮೂರ್ತಿಶಿಲ್ಪಗಳ ಪ್ರಸ್ತಾಪವನ್ನು ಹೊಂದಿರುವ ಶಾಸನಗಳನ್ನು ಈ ಅಧ್ಯಯನದಲ್ಲಿ ಪರಿಶೀಲಿಸಲಾಗಿದೆ.

ದಾವಣಗೆರೆ , ಹರಿಹರ, ಜಗಳೂರು[೩], ಹೊನ್ನಾಳಿ, ಚನ್ನಗಿರಿ[೪] ಭಾಗದಲ್ಲಿನ ಶಾಸನಗಳು 'ಎಫಿಗ್ರಾಫಿಯಾ ಕರ್ನಾಟಕಾ' ಸಂಪುಟಗಳಲ್ಲಿ ಪ್ರಕಟವಾಗಿವೆ. ಹಾಗು ಪ್ರಮುಖ ದೇವಾಲಯಗಳ ಮತ್ತು ಮೂರ್ತಿಗಳ ಛಾಯಾಚಿತ್ರ, ನಕ್ಷೆಗಳನ್ನು ಇದರಲ್ಲಿ ನೀಡಲಾಗಿದೆ. ಹಾಗೆಯೇ ಹರಪನಹಳ್ಳಿ ತಾಲೂಕಿನ ಶಾಸನಗಳನ್ನು[೫] 'ಇನ್ಸ್‌ಕ್ರಿಪ್‌ಷನ್ಸ್ ಆಫ್ ಬಳ್ಳಾರಿ ಡಿಸ್ಟ್ರಿಕ್ಟ್ '[೬] ಹಾಗೂ ಕನ್ನಡ ವಿಶ್ವ ವಿದ್ಯಾಲಯ ಹೊರತಂದಿರುವ '' ಬಳ್ಳಾರಿ ಜಿಲ್ಲೆಯ ಶಾಸನ ಸೂಚಿ ''ಯಲ್ಲಿ ಈ ಭಾಗದ ಕೆಲ ಶಾಸನಗಳನ್ನು ಪ್ರಕಟಿಸಲಾಗಿದೆ[೭]. ಇದಲ್ಲದೆ, ಮೈಸೂರು ಪುರಾತತ್ವ ಇಲಾಖೆಯ ವಿವಿಧ ವಾರ್ಷಿಕ ವರದಿಗಳಲ್ಲಿ ಈ ಭಾಗದ ಕೆಲವು ದೇವಾಲಯಗಳ ವಾಸ್ತುಕಲೆಯನ್ನು ಕುರಿತು ಪ್ರಕಟಿಸಲಾಗಿದೆ[೮]. ' ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ಹೊಯ್ಸಳ ಕಾಲದ ದೇವಾಲಯಗಳು' (ಹೊಯ್ಸಳ ಟೆಂಪಲ್ಸ್ ಇನ್ ಚಿತ್ರದುರ್ಗ ಆಂಡ್ ಶಿವಮೊಗ್ಗ ಡಿಸ್ಟ್ರಿಕ್ಟ್) ಎಂಬ ಪಿಎಚ್.ಡಿ. ಪ್ರಬಂಧದಲ್ಲಿ ರಾಮಪ್ಪನವರು, ಸಿ. ಎಸ್. ಪಾಟೀಲ್‌ರವರು ' ಟೆಂಪಲ್ಸ್ ಇನ್ ರಾಯಚೂರು ಆಂಡ್ ಬಳ್ಳಾರಿ ಡಿಸ್ಟ್ರಿಕ್ಟ್ ' ಎಂಬ ಪಿಎಚ್.ಡಿ. ಮಹಾ ಪ್ರಬಂಧದಲ್ಲಿ ಈ ಭಾಗದ ಕೆಲವು ದೇವಾಲಯಗಳ ಅಧ್ಯಯನ ಮಾಡಿದ್ದಾರೆ. ಡಿ. ಮಂಜುನಾಥರವರು ' ದಿ ಹರಿಹರ ಟೆಂಪಲ್ ಆರ್ಟ್ ಅಂಡ್ ಪ್ಯಾಟ್ರನೈಜ್ ' ಎಂಬ ತಮ್ಮ ಎಂ.ಫಿಲ್. ಪ್ರಬಂಧದಲ್ಲಿ ಹರಿಹರ ದೇವಾಲಯದ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಎಂ. ಕೊಟ್ರೇಶ್‌ರವರು ' ಉಚ್ಚಂಗಿ ದುರ್ಗ (ಐತಿಹಾಸಿಕ ಮತ್ತು ಸಾಂಸ್ಕೃತಿಕ) ಒಂದು ಅಧ್ಯಯನ' ಎಂಬ ಎಂ.ಫಿಲ್. ಪ್ರಬಂಧದಲ್ಲಿ ಉಚ್ಚಂಗಿದುರ್ಗದಲ್ಲಿನ ಕೆಲವು ದೇವಾಲಯಗಳ ಉಲ್ಲೇಖ ಮಾಡಿದ್ದಾರೆ. ಇವುಗಳಲ್ಲದೆ, ಅಲ್ಲೊಂದು ಇಲ್ಲೊಂದು ಬಿಡಿ ಲೇಖನಗಳು ಈ ಪ್ರದೇಶದ ದೇವಾಲಯಗಳ ಕುರಿತಾಗಿ ನಿಯತಕಾಲಿಕೆಗಳಲ್ಲಿ ಮತ್ತು ಸಂಸ್ಮರಣಾ ಗ್ರಂಥಗಳಲ್ಲಿ ಪ್ರಕಟವಾಗಿವೆ.

ಈ ಭಾಗದ ವಾಸ್ತು ಮತ್ತು ಮೂರ್ತಿ ಶಿಲ್ಪದ ಬಗ್ಗೆ ಅಧ್ಯಯನ ಮಾಡುವವರಿಗೆ ಮೂಲ ಸಾಮಗ್ರಿಗಳು ಸಾಕಷ್ಟು ಇವೆ. ಇವು ಕಾಲಾಂತರದಲ್ಲಿ ರೂಪಾಂತರಗೊಂಡು, ಇಲ್ಲವೆ ಮೂಲ ರೂಪದಲ್ಲಿಯೇ ಇಂದಿಗೂ ಉಳಿದುಬಂದಿವೆ. ಇವುಗಳ ವ್ಯಾಪಕ ಸಮೀಕ್ಷೆ ನಡೆಯಬೇಕಿದೆ. ಈ ದೇವಾಲಯಗಳ ಮೇಲೆ ಇತರ ವಾಸ್ತು ಶೈಲಿಗಳ ಪ್ರಭಾವ, ಈ ದೇವಾಲಯಗಳು ಸ್ಥಳೀಯವಾಗಿ ಇತರ ರಚನೆಗಳ ಮೇಲೆ ಬೀರಿರಬಹುದಾದ ಪ್ರಭಾವ ಮತ್ತು ಬೆಳವಣಿಗೆ, ಹಾಗೆಯೇ ಈ ಪ್ರದೇಶದಲ್ಲಿ ಪರಿವರ್ತಿತ ದೇವಾಲಯಗಳು, ಅಲ್ಲಿನ ವಿಭಿನ್ನ ಮತ್ತು ವಿವಿಧ ರೀತಿಯ ಮೂರ್ತಿಶಿಲ್ಪಗಳನ್ನು ತಾರ್ಕಿಕವಾಗಿ ವಿಶ್ಲೇಷಿಸಬೇಕಾದ ಅಗತ್ಯತೆ ಇದೆ.

ವರದಿಗಳು, ಗೆಜೆಟಿಯರ್‌ಗಳನ್ನು ಆಧಾರವಾಗಿಟ್ಟುಕೊಂಡು ಈ ಜಿಲ್ಲೆಯೊಳಗಡೆ ಕಂಡುಬರುವ ದೇವಾಲಯಗಳ ಪಟ್ಟಿಯೊಂದನ್ನು ಮೊದಲಿಗೆ ತಯಾರಿಸಿಕೊಳ್ಳಲಾಯಿತು. ತಾಲೂಕು ಕಛೇರಿ (ಮುಜರಾಯಿ ಇಲಾಖೆ) ಮತ್ತು ರಾಜ್ಯ ಮತ್ತು ಕೇಂದ್ರ ಪುರಾತತ್ವ ಇಲಾಖೆಯಿಂದ ದೇವಾಲಯಗಳ ಬಗ್ಗೆ ಮಾಹಿತಿ ಪಡೆದು ಕ್ಷೇತ್ರಕಾರ್ಯ ಮಾಡಬೇಕಾದ, ಸ್ಥಳಗಳನ್ನು ಖಚಿತಪಡಿಸಿಕೊಳ್ಳಲಾಯಿತು. ದೇವಾಲಯದ ಹೆಸರು, ಮುಖ-ದಿಕ್ಕು, ಸ್ಥಳ, ತಾಲೂಕು, ಜಿಲ್ಲೆ, ಪಂಥ, ಕಾಲಮಾನ, ನಕ್ಷೆ, ದೇವಾಲಯಕ್ಕೆ ಸಂಬಂಧಿಸಿದ ಶಾಸನ, ಇತರೆ ಎಲ್ಲಾ ಅಂಶಗಳನ್ನೊಳಗೊಂಡ ಪ್ರಪತ್ರವೊಂದನ್ನು ಸಿದ್ಧಪಡಿಸಿಕೊಂಡು ದೇವಾಲಯವಿರುವ ಸ್ಥಳಕ್ಕೆ ಹೋಗಿ ಅದನ್ನು ಭರ್ತಿ ಮಾಡಿ, ಜೊತೆಗೆ ಛಾಯಚಿತ್ರಗಳನ್ನು ತೆಗೆದುಕೊಂಡು ಬರಲಾಯಿತು. ಇದಲ್ಲದೆ ಪರಿಣಿತರಿಂದ ದೇವಾಲಗಳ ರೇಖಾಚಿತ್ರಗಳನ್ನು ತಯಾರಿಸಿಕೊಳ್ಳಲಾಯಿತು. ಈ ಮೊದಲು ಪ್ರಕಟಿತ ಗ್ರಂಥಗಳಿಂದ ಸಂಗ್ರಹಿಸಲಾದ ಟಿಪ್ಪಣಿ ಇತ್ಯಾದಿ ಮಾಹಿತಿಗಳನ್ನೆಲ್ಲಾ ಕಲೆಹಾಕಿ ತಾತ್ವಿಕವಾಗಿ ಚಿಂತಿಸಿ, ಈ ಪ್ರಬಂಧವನ್ನು ಸಿದ್ಧಪಡಿಸಲಾಯಿತು. ಶಾಸನಗಳು ಮತ್ತು ಪ್ರಕಟಿತ ಗ್ರಂಥಗಳಲ್ಲಿ ಉಲ್ಲೇಖವಾಗಿರುವ ಕೆಲವು ಸ್ಥಳಗಳಲ್ಲಿ ದೇವಾಲಯಗಳಿದ್ದ ಬಗ್ಗೆ ಯಾವುದೇ ಸ್ಪಷ್ಟ ಸುಳಿವುಗಳು ದೊರೆಯುವುದಿಲ್ಲ. ಆದರೂ ಅಂಥ ಸ್ಥಳಗಳಲ್ಲಿ ಆ ಕಾಲದ ದೇವಾಲಯಗಳಿದ್ದಿರಬಹುದೆಂದು ಊಹಿಸಲಾಗಿದೆ. ದೇವಾಲಯಗಳಲ್ಲಿ ದೊರೆಯುವ ಶಾಸನಗಳ ಆಧಾರದ ಮೇಲೆ ಅನೇಕ ಕಡೆ ಅವುಗಳ ಕಾಲವನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಕ್ಷೇತ್ರ ಪರಿವೀಕ್ಷಣಾ ಕಾಲದಲ್ಲಿ ತೆಗೆದ ಛಾಯಚಿತ್ರಗಳು ಈ ಅಧ್ಯಯನಕ್ಕೆ ಪೂರಕ ಮಾಹಿತಿ ಯನ್ನು ಒದಗಿಸುತ್ತವೆ. ಹೀಗೆ ಶಾಸನಗಳ ಆಧಾರದ ಮೇಲೆ ದೇವಾಲಯಗಳನ್ನು ಗುರುತಿಸಲು ಪ್ರಯತ್ನಿಸಿದಾಗ ಅವುಗಳ ಹರವು ವಿಸ್ತಾರವಾಗಿರುವುದು ಕಂಡು ಬಂದಿದೆ. ಪ್ರಸ್ತುತ ಈ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ಪೂರಕ ಸಾಮಗ್ರಿಯವೆಂದು ಪರಿಗಣಿಸಿ, ರಾಜ ವಂಶಗಳ ಮೇಲೆ ಬರೆದಿರಬಹುದಾದ ಚಾರಿತ್ರಿಕ ಗ್ರಂಥಗಳಲ್ಲದೆ, ವಾಸ್ತು ಮತ್ತು ಮೂರ್ತಿಶಿಲ್ಪಗಳನ್ನು ಆಧಾರವಾಗಿಟ್ಟುಕೊಂಡು ರಚಿತವಾದ ಗ್ರಂಥಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಹಾಗು ನಿಯತಕಾಲಿಕೆಗಳಲ್ಲಿ ಬಂದಿರುವ ಬಿಡಿ ಲೇಖನಗಳನ್ನು ಗಮನಿಸಿ, ವಿವರ ಪಡೆಯಲಾಗಿದೆ. ಈ ಕ್ಷೇತ್ರದ ಮೇಲೆ ರಚಿತವಾಗಿರುವ ಕೆಲ ಅಪ್ರಕಟಿತ ಲೇಖನಗಳನ್ನು ಅಭ್ಯಾಸಿಸಲಾಗಿದೆ. ಇವುಗಳ ಆಧಾರದ ಮೇಲೆ ಈ ಮಹಾ ಪ್ರಬಂಧವನ್ನು ರಚಿಸಲಾಗಿದೆ. ಪ್ರಬಂಧದ ಅಂತ್ಯದಲ್ಲಿ ಇದಕ್ಕೆ ಸಂಬಂಧಿಸಿದಂತೆ ಛಾಯಚಿತ್ರಗಳನ್ನು, ರೇಖಾಚಿತ್ರಗಳನ್ನು ಹಾಗು ನಕ್ಷೆಗಳನ್ನು ನೀಡಲಾಗಿದೆ. ಹಾಗೆಯೇ ಅನುಬಂಧದಲ್ಲಿ ಪಾರಿಭಾಷಿಕ ಪದಗಳನ್ನು ಮತ್ತು ಕೆಲ ಶಾಸನಗಳ ಪಾಠವನ್ನು ನೀಡಲಾಗಿದೆ.

:: **ಅಡಿ ಟಿಪ್ಪಣಿ** ::

೧. ದೇವರಕೊಂಡ ರೆಡ್ಡಿ, **ತಲಕಾಡಿನ ಗಂಗರ ದೇವಾಲಯಗಳು ಒಂದು ಅಧ್ಯಯನ**, ೧೯೯೪, ಪು.೧

೨. ಈ ಜಿಲ್ಲೆಯಾದ್ಯಂತ ದೊರೆತ ಶಾಸನಗಳು ಇದನ್ನು ಸ್ಪಷ್ಟಪಡಿಸುತ್ತವೆ.

೩. **ಎಪಿಗ್ರಾಫಿಯಾ ಕರ್ನಾಟಿಕಾ** ಸಂ. ೧೧ರಲ್ಲಿ ಬಿ. ಎಲ್.ರೈಸ್‌ರವರು ಈ ಭಾಗದ ಶಾಸನಗಳನ್ನು ಪ್ರಕಟಿಸಿದ್ದಾರೆ.

೪. **ಎಪಿಗ್ರಾಫಿಯಾ ಕರ್ನಾಟಿಕಾ** ಸಂ.೭ರಲ್ಲಿ ಬಿ. ಎಲ್. ರೈಸ್‌ರವರು ಈ ಭಾಗದ ಶಾಸನಗಳನ್ನು ಪ್ರಕಟಿಸಿದ್ದಾರೆ.

೫. **ಸೌತ್ ಇಂಡಿಯನ್ ಇನ್‌ಸ್ಕ್ರಿಪ್‌ಷನ್ಸ್** ಸಂ. ೯ರಲ್ಲಿ ಪ್ರಕಟಿಸಲಾಗಿದೆ.

೬. ಪಾಟೀಲ್,ಸಿ.ಎಸ್. ಮತ್ತು ವಿನೋದ, ಸಿ. ಪಾಟೀಲ್‌ರವರು **ಇನ್‌ಸ್ಕ್ರಿಪ್‌ಷನ್ಸ್ ಆಪ್ ಬಳ್ಳಾರಿ ಡಿಸ್ಟ್ರಿಕ್ಟ್** ಎಂಬ ಪುಸ್ತಕದಲ್ಲಿ ಹರಪನಹಳ್ಳಿ ಭಾಗದ ಶಾಸನಗಳನ್ನು ಪ್ರಕಟಿಸಿದ್ದಾರೆ.

೭. ದೇವರ ಕೊಂಡಾ ರೆಡ್ಡಿ ಮತ್ತು ಇತರರಿಂದ ರಚಿಸಲ್ಪಟ್ಟ **ಬಳ್ಳಾರಿ ಜಿಲ್ಲೆಯ ಶಾಸನ ಸೂಚಿ** ಎಂಬ ಪುಸ್ತಕದಲ್ಲಿ ಹರಪನಹಳ್ಳಿ ಭಾಗದ ಶಾಸನಗಳನ್ನು ಉಲ್ಲೇಖಿಸಿದ್ದಾರೆ.

೮. **ಎಂ. ಎ. ಆರ್.** ೧೯೨೮ ರಿಂದ ೧೯೪೬ ರವರೆಗಿನ ವರದಿಗಳಲ್ಲಿ ಪ್ರಕಟಿಸಲಾಗಿದೆ.

೨) ಜಿಲ್ಲೆಯ ಭೂ-ಮೇಲ್ಮೈ ಲಕ್ಷಣಗಳು ಪರಿಸರ ಮತ್ತು ಪ್ರಭಾವ :-

ದಾವಣಗೆರೆಯನ್ನು ಸುತ್ತಲಿನ ಪ್ರಾದೇಶಿಕ ಇತಿಹಾಸದ ಚೌಕಟ್ಟಿನಲ್ಲಿಟ್ಟು ನೋಡಿದಾಗ ಅದರ ಚಾರಿತ್ರಿಕ ಮಹತ್ವನ್ನು ಅರಿಯಬಹುದು. ದಾವಣಗೆರೆ ಹೇಗೆ ಹುಟ್ಟಿತು ಎನ್ನುವುದಕ್ಕೆ ಚಾರಿತ್ರಿಕ ಅಂಶಗಳು ಇರದಿದ್ದರೂ, ಪ್ರಚಲಿತವಾಗಿರುವ ಸ್ಥಳೀಯ ಹೇಳಿಕೆಗಳನ್ನು ಗಮನಿಸಬಹುದು. ಪ್ರಚಲಿತವಾಗಿರುವ ಅಂತಹ ಹೇಳಿಕೆಗಳಲ್ಲಿ ಒಂದು ಈ ಕೆಳಕಂಡಂತೆ ಇದೆ. ಈ ಪ್ರದೇಶದಲ್ಲಿ ಯಾವಾಗಲೂ ನೀರಿನಿಂದ ತುಂಬಿರುತ್ತಿದ್ದ ದೊಡ್ಡ ಕೆರೆಯೊಂದಿದ್ದು, ಈ ಕೆರೆಯಂಗಳದಲ್ಲಿ ದೊಡ್ಡ ಹುಲ್ಲುಗಾವಲು ಇದ್ದಿತೆಂದು, ಆಗಿನ ಕಾಲದಲ್ಲಿಯ ಕುದುರೆ ಸವಾರರು ಹಾಗು ಎತ್ತಿನ ಗಾಡಿ ಮುಂತಾದವುಗಳು ಈ ಮಾರ್ಗದಲ್ಲಿ ಪ್ರಯಾಣ ಮಾಡುತಿದ್ದವಂತೆ. ಈ ಕೆರೆಯಂಗಳದ ಹುಲ್ಲುಗಾವಲಿನಲ್ಲಿ ಕುದುರೆಗಳನ್ನು, ದನಗಳನ್ನು, ಎತ್ತುಗಳನ್ನು ದವಣೆಗಳಿಂದ (ದವಣೆ =ಹಗ್ಗ) ಬಿಗಿದು ಕಟ್ಟಿ ವಿಶ್ರಾಂತಿ ಪಡೆದು, ಮುಂದೆ ಪ್ರಯಾಣ ಮಾಡುತ್ತಿದ್ದರಂತೆ ಅದಲ್ಲದೆ, ದನಗಳನ್ನು, ಎತ್ತುಗಳನ್ನು ಒಂದೇ ಹಗ್ಗದಲ್ಲಿ ಕಟ್ಟುತ್ತಿದ್ದು, ಇದೊಂದು ವಿಶಿಷ್ಟ ರೀತಿಯ ಕಟ್ಟಾಗಿದ್ದು, 'ದವಣೆಕಟ್ಟು ' ಎಂದು ಹೇಳುತ್ತಿದ್ದುದು ಪ್ರಚಲಿತದಲ್ಲಿದೆ. 'ದವಣೆಕಟ್ಟು' ಬಿಗಿದು ದನಗಳನ್ನು ಕಟ್ಟುವ ಸ್ಥಳದ ಪಕ್ಕದಲ್ಲೇ ಕೆರೆ ಇದ್ದುದರಿಂದ 'ದವಣಕೆರೆ ' ಎಂದು ಹೇಳುತ್ತಿದ್ದರಂತೆ[೧]. ಕಾಲ ಕ್ರಮೇಣದಲ್ಲಿ 'ದವಣಕೆರೆ' ಯನ್ನು ಅಪಭ್ರಂಶಗೊಳಿಸಿ 'ದಾವಣಗೆರೆ' ಎಂದು ಹೆಸರಾಗಿಸಿರಬೇಕು.

ಶ್ರೀ ಹಿ.ಚಿ. ಶಾಂತವೀರಯ್ಯನವರು ದಾವಣಗೆರೆಯನ್ನು ಹೀಗೆ ವಿವೇಚಿಸಿದ್ದಾರೆ.

ಅ) ದಾವಣ + ಕೆರೆ (ರೆ)

ದಾವಣಿ = ದಾವಣಿ, ಹಗ್ಗ, ಕಣ್ಣಿ, ದಾವ = ಅಡವಿ, ಕಾಡು, ಕಾಡ್ಗಿಚ್ಚು

ದಾವಣ = ದಾವಣಿ, ಸಂಸ್ಕೃತ-ದಾಮನಿ = ಕಟ್ಟುವ ಹಗ್ಗ.

ದವಣಿ = ಗುಂಪು, ಸಮೂಹ.

ಬ) ಕೆರೆ = ಪ್ರವಾಹವನ್ನು ತಡೆದು ಏರಿಹಾಕಿ ನಿಲ್ಲಿಸಿದ ಪ್ರದೇಶ, ಜಲಾಶಯ.

ದೇವನ ಕೆರೆ = ದೇವ= ಒಂದು ಹೆಸರು, ಆ ಹೆಸರಿನ ಸೂಚಕವಾಗಿ ಕಟ್ಟಿದಕೆರೆ ಅಥವಾ ದೇವನು ಕಟ್ಟಿಸಿದ ಕೆರೆ.

ಕ) ದಾವ + ನಗರಿ, ದಾವ = ಯಾವ.

ನಗರಿ = ನಗರಗಳಲ್ಲಿ ದೊಡ್ಡದು.

ಡ) ದಾವನ + ಕೇರಿ, ದಾವನ ಎಂಬುವನ ಕೇರಿ, ಬೀದಿ.

ಇ) ದೇವನ + ಕೇರಿ, ದೇವರು ನೆಲಸಿದ ಬೀದಿ, ರಸ್ತೆ.

[illegible]

ದಾವಣಗೆರೆ ಎಂಬುದರ ರೂಪಾಂತರ ' ದೇವನ ಕೆರೆ ' ಎಂಬುದರಿಂದ ಬಂದಿದೆ. ದೇವನಕೆರೆ-ದೇವನಗರೆ, ದೇವನಗರೆ-ದೇವಣಗೆರೆ, ದ್ಯಾವಣಗೆರೆ - ದ್ಯಾವಣಗೆರೆಯು ಕಾಲಾನುಕಾಲಕ್ಕೆ ದಾವಣಗೆರೆಯಾಗಿರಬಹುದು[೨].

ದಾವಣಗೆರೆ ನೂರಾರು ದೇವಾಲಯಗಳ ತವರೂರು. ಇಲ್ಲಿ ಹಲವು ದೇವಾಲಯಗಳು ಇದ್ದುದರಿಂದ ಮೊದಲು ದೇವನಕೆರೆ ಎಂದು ಕರೆದಿರಬಹುದು. ಕ್ರಮೇಣ ದಾವಣಗೆರೆಯಾಗಿದೆ. ಹಾಗೆಯೆ ಉಚ್ಚಂಗಿದುರ್ಗದಿಂದ ಆಳ್ವಿಕೆ ಮಾಡುತ್ತಿದ್ದ ತ್ರಿಭುವನ ಮಲ್ಲ ಪಾಂಡ್ಯನು ತನ್ನ ಹೆಸರಿನಲ್ಲಿಯೆ, ಶಿಬಾರದ ಬಳಿ (ಇಂದಿನ ದಾವಣಗೆರೆಯ ಉಪನಗರ) ಕೆರೆಯೊಂದನ್ನು ಕಟ್ಟಿಸಿದ. ಇದನ್ನು ಶಾಸನವು '' ಕದಂಬದೇಸ ಸಹಸ್ರಾಂತರ್ಗತ ಬೆಳ್ಳೂತ್ತುರು ದ್ವಾದಶ ಮಧ್ಯೆ ಬೆಳ್ಳೂತ್ತುರು ಸೀಮಾಂತರ್ಗತ ಚಾಳುಕ್ಯ ಸಮುದ್ರಂ ನಾಮ ತಟಾಕಂ ''[೩] ಎಂದು ವರ್ಣಿಸಿದೆ. ತ್ರಿಭುವನ ಮಲ್ಲ ಪಾಂಡ್ಯನನ್ನೆ ತ್ರಿಭುವನ ಮಲ್ಲದೇವ ಎಂದು ಶಾಸನಗಳು ಉಲ್ಲೇಖಿಸಿವೆ. ತ್ರಿಭುವನ ಮಲ್ಲದೇವನು ತನ್ನ ಹೆಸರನಲ್ಲಿಯೇ ಕಟ್ಟಿಸಿದ ಕೆರೆ ಸಮೀಪದಲ್ಲಿ ಈ ಗ್ರಾಮವಿದ್ದಿರಬೇಕು. ಆ ಕೆರೆಯ ಬಳಿ ಈ ಗ್ರಾಮ ಇದ್ದುದರಿಂದಾಗಿ ದೇವನಕೆರೆ ಎಂದು ಮೊದಲಿಗೆ ಕರೆದಿರಬೇಕು[೪]. ನಂತರ ದೇವನಕೆರೆ ಹೋಗಿ ದಾವಣಗೆರೆ ಆಗಿರಬೇಕು.

ದಾವಣಗೆರೆ ಕರ್ನಾಟಕ ರಾಜ್ಯದ ಮಧ್ಯಭಾಗದಲ್ಲಿದ್ದು, ಸಮುದ್ರ ಮಟ್ಟಕ್ಕಿಂತ ಸರಾಸರಿ ೬೦೨.೬ಮೀ. ಎತ್ತರದಲ್ಲಿದೆ. ೧೪°.೨೮ ಅಕ್ಷಾಂಶ ಮತ್ತು ೭೫°.೫೯ ರೇಖಾಂಶದಲ್ಲಿರುವ ದಾವಣಗೆರೆ ನಗರವು ಬಯಲು ಹಾಗೂ ಸಮತಲದಲ್ಲಿರುವುದರಿಂದ ವರ್ಷದ ಬಹುಕಾಲ ಒಣಹವೆಯಿಂದ ಕೂಡಿರುತ್ತದೆ. ಜನವರಿ ಕೊನೆಯಿಂದ ಪ್ರಾರಂಭವಾದ ಬೇಸಿಗೆಯ ತಾಪಮಾನ ಮಾರ್ಚ್ , ಏಪ್ರಿಲ್, ಮೇ ತಿಂಗಳಲ್ಲಿ ಹೆಚ್ಚಿರುತ್ತದೆ. ೭೭.೩° ಫ್ಯಾರಾನೇಟ್‌ನಷ್ಟು ವರ್ಷದ ಸರಾಸರಿ ಉಷ್ಣಾಂಶವಿರುತ್ತದೆ. ೫೦% ಸಾಪೇಕ್ಷ ಆರ್ದ್ರತೆಯು ಮಾರ್ಚ್ ತಿಂಗಳಿನಲ್ಲಿರುತ್ತದೆ. ಆದರೆ ಜುಲೈ ಆಗಸ್ಟ್‌ನಲ್ಲಿ ೮೦%ರವರೆಗೂ ಏರುತ್ತದೆ. ಜೂನ್ ತಿಂಗಳಿನಿಂದ ಮಳೆಗಾಲ ಪ್ರಾರಂಭವಾದರೂ ಜುಲೈ, ಆಗಸ್ಟ್, ಸೆಪ್ಟಂಬರ್‌ನಲ್ಲಿ ಹೆಚ್ಚು ಮಳೆಯಾಗಿ ಅಕ್ಟೋಬರಿನವರೆಗೂ ಮಳೆ ಬರುತ್ತದೆ. ಸರಾಸರಿ ೫೭೮ ಮಿ.ಮೀ. ಮಳೆ ಬೀಳುತ್ತದೆ.[೫]

ಮೈಸೂರು ವಿಶ್ವವಿದ್ಯಾಲಯದ ಭೌಗೋಳಶಾಸ್ತ್ರ ಅಧ್ಯಾಪಕರಾಗಿದ್ದ ಡಾ. ಘೋರೆಯವರು ೧೯೬೦-೬೧ರಲ್ಲಿ ನೀಡಿದ ಉಪನ್ಯಾಸದಲ್ಲಿ ಕರ್ನಾಟಕದ ಹೃದಯ ಸ್ಥಾನದಲ್ಲಿರುವ ದಾವಣಗೆರೆ ನೀರಿನ ಆಸರೆ, ಫಲವತ್ತಾದ ಜಮೀನು, ಕಾರ್ಮಿಕರ ಸಂಘಟನೆ, ಸಮೃದ್ಧಿಗಳಿಂದ ನವ ಕರ್ನಾಟಕಕ್ಕೆ ಒಂದು ಆದರ್ಶ ರಾಜಧಾನಿಯಾಗಬಲ್ಲದು ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದರು[೧೩].

ದಾವಣಗೆರೆ ರಾಜಧಾನಿಯಾಗದಿದ್ದರೂ ತೊಂದರೆ ಇಲ್ಲ. ಜಿಲ್ಲಾ ಕೇಂದ್ರವಾದರೆ ಸಾಕು ಎನ್ನುವ ಜನರ ಆಕಾಂಕ್ಷೆ ಇಂದು ನಿನ್ನೆಯದಲ್ಲ. ಸುಮಾರು ೮೦ರ ದಶಕದಿಂದಲೇ ಬಂದಿದ್ದು, ಬಾಗಲಕೋಟೆ ಹಾಗು ದಾವಣಗೆರೆಯನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡುವ ವಿಚಾರದಲ್ಲಿ ಕರ್ನಾಟಕ ಸರ್ಕಾರ ಶ್ರೀ ಎ.ಡಿ. ಗೊರ್ವಲ ಮತ್ತು ಶ್ರೀ ಪಿ.ಸಿ. ಮಹಾಲ ನೋಬಿಸ್ ಮುಂತಾದ ತಜ್ಞರನ್ನು ಒಳಗೊಂಡ ಸಮಿತಿಯನ್ನು ನೇಮಿಸಿತ್ತು. ಈ ಸಮಿತಿ ಈ ಮುಂದಿನಂತೆ ವರದಿಯನ್ನು ಸಲ್ಲಿಸಿತ್ತು.

'' ದಾವಣಗೆರೆ ಜಿಲ್ಲೆಯಾಗಲು ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ, ಹರಪನಹಳ್ಳಿ ತಾಲೂಕು, ಶಿವಮೊಗ್ಗ ಜಿಲ್ಲೆಯಿಂದ ಚನ್ನಗಿರಿ; ಚಿತ್ರದುರ್ಗ ಜಿಲ್ಲೆಯಿಂದ ಹರಿಹರ, ಜಗಳೂರು; ಧಾರವಾಡ ಜಿಲ್ಲೆಯಿಂದ ಬ್ಯಾಡಗಿ, ರಾಣೆಬೆನ್ನೂರು, ಹಿರೇಕೆರೂರು ತಾಲೂಕುಗಳನ್ನು ಸೇರಿಸಿದರೆ ಆಗ ದಾವಣಗೆರೆಯು ಒಂಬೈನೂರು ಹಳ್ಳಿಗಳಿಂದ ಕೂಡಿ, ಒಟ್ಟು ವಿಸ್ತೀರ್ಣ ೮೪೪೦.೧೫ ಚ.ಕಿ.ಮೀ. ಆಗುತ್ತದೆ '' ಎಂದು ತನ್ನ ಅಭಿಪ್ರಾಯ ಮಂಡಿಸಿತ್ತು.

ಶ್ರೀ ಹುಂಡೇಕಾರ್ ಮತ್ತು ಗದ್ದೀಗೌಡರ್ ಸಮಿತಿಗಳ ಒಮ್ಮತದ ಶಿಫಾರಸ್ಸಿನಂತೆ ರಾಜ್ಯದಲ್ಲಿ ಏಳು ಹೊಸ ಜಿಲ್ಲೆಗಳನ್ನು ೧೯೯೭ ಆಗಸ್ಟ್ ೧೫ರಂದು ರಚಿಸಲು ಈ ಸಂಬಂಧವಾಗಿ ಕರ್ನಾಟಕ ಸರ್ಕಾರ ಆದೇಶ ಹೊರಡಿಸಿದೆ. ಈ ರೀತಿ ಹೊಸದಾಗಿ ರಚಿಸಲ್ಪಟ್ಟ ಜಿಲ್ಲೆಗಳಲ್ಲಿ ದಾವಣಗೆರೆ ಜಿಲ್ಲೆಯೂ ಒಂದು. ಕರ್ನಾಟಕದ ಜಿಲ್ಲೆಗಳ ಮರು ವಿಂಗಡಣೆ ಯೋಜನೆಯಂತೆ ಹಳೆಯ ಚಿತ್ರದುರ್ಗ , ಶಿವಮೊಗ್ಗ, ಬಳ್ಳಾರಿ ಜಿಲ್ಲೆಗಳಿಂದ ದಾವಣಗೆರೆ, ಹರಿಹರ, ಜಗಳೂರು, ಚನ್ನಗಿರಿ, ಹೊನ್ನಾಳಿ, ಹರಪನಹಳ್ಳಿ ತಾಲೂಕುಗಳ ಭೌಗೋಳಿಕ ಎಲ್ಲೆಗಳನ್ನು ಪಡೆದು ಆವಿರ್ಭವಿಸಿದ ನೂತನ ದಾವಣಗೆರೆ ಜಿಲ್ಲೆ ೧೯೯೭ ಆಗಸ್ಟ ೧೫ರಂದು ಅಸ್ಥಿತ್ವಕ್ಕೆ ಬಂದಿದೆ.

ಜಿಲ್ಲೆಯ ಭೂ-ಮೇಲ್ಮೈ ಲಕ್ಷಣಗಳು-ಪರಿಸರ ಮತ್ತು ಪ್ರಭಾವ : ಸುಮಾರು ಒಂಬೈನೂರ ಹದಿನೇಳು ಗ್ರಾಮಗಳನ್ನೊಳಗೊಂಡಂತೆ ಈ ಜಿಲ್ಲೆಯ ವ್ಯಾಪ್ತಿ ೫೯೩೮.೯೪ ಚ.ಕಿ.ಮೀ.[೭] ಪೂರ್ವಕ್ಕೆ ಚಿತ್ರದುರ್ಗ , ಉತ್ತರಕ್ಕೆ ಬಳ್ಳಾರಿ ಜಿಲ್ಲೆ, ದಕ್ಷಿಣಕ್ಕೆ ಶಿವಮೊಗ್ಗ-ಚಿಕ್ಕಮಗಳೂರು ಜಿಲ್ಲೆಯಿಂದ ದಾವಣಗೆರೆ ಜಿಲ್ಲೆ ಸುತ್ತುವರಿದಿದೆ[೮].

ಹರಪನಹಳ್ಳಿ, ಉಚ್ಚಂಗಿದುರ್ಗ, ಬೆಣ್ಣೆಹಳ್ಳಿ (ಹರಪನಹಳ್ಳಿ ತಾಲೂಕು), ದಾವಣಗೆರೆ, ಆನಗೋಡು, ಮಾಯಕೊಂಡ (ದಾವಣಗೆರೆ ತಾಲೂಕು), ಹರಿಹರ, ಮಲೆಬೆನ್ನೂರು (ಹರಿಹರ ತಾಲೂಕು) ಜಗಲೂರು, ಸೊಕ್ಕೆ,ಬಿಳಚೋಡು (ಜಗಲೂರು ತಾಲೂಕು)[೯] ,ಚನ್ನಗಿರಿ, ಬಸವಾಪಟ್ಟಣ ವೃತ್ತ ಒಂದು ಮತ್ತು ಎರಡು, ಸಂತೇಬೆನ್ನೂರು ವೃತ್ತ ಒಂದು ಮತ್ತು ಎರಡು, ಉಂಬ್ರಾಣಿ (ಚನ್ನಗಿರಿ ತಾಲೂಕು) , ಹೊನ್ನಾಳಿ ಹಾಗು ಗೋವಿನಕೋವಿ, ಸಾಸ್ವಿಹಳ್ಳಿ ವೃತ್ತ ಒಂದು ಮತ್ತು ಎರಡು[೧೦] ಮತ್ತು ಬೆಳಗುತ್ತಿ (ಹೊನ್ನಾಳಿ ತಾಲೂಕು)[೧೧] ಇವು ಈ ಜಿಲ್ಲೆಯ ಹೋಬಳಿ ಕೇಂದ್ರಗಳಾಗಿವೆ.

ಈ ಜಿಲ್ಲೆಯ ಪ್ರಮುಖ ನದಿ ತುಂಗಭದ್ರ. ಅಲ್ಲದೆ ಚಿಕ್ಕ ನದಿಗಳಾದ ಚಿನ್ನಹಗರಿ, ಚಿಕ್ಕಹಗರಿ, ಹರಿದ್ರಾವತಿಗಳು ಹರಿಯುತ್ತವೆ. ದೊಡ್ಡಹಳ್ಳಗಳಾದ ಶಾಗಲಿಹಳ್ಳ ಹಾಗು ಸೂಳೆಕೆರೆಹಳ್ಳಗಳು ಸಹ ಇಂದಿನ ರೈತರ ಜೀವನಾಡಿಯಾಗಿವೆ. ಈ ಪ್ರದೇಶ ಕೃಷ್ಣಾ ಜಲಾನಯನ ಪ್ರದೇಶಕ್ಕೆ ಒಳಪಟ್ಟಿದೆ. ಹಾಗೆಯೆ ಭದ್ರಾ ಜಲಾಶಯದಿಂದ ಎರಡು ಕಾಲುವೆ ಈ ಜಿಲ್ಲೆಯಲ್ಲಿ ಪ್ರವಹಿಸಿ, ನೀರಾವರಿಗೆ ಅನುಕೂಲವಾಗಿದೆ. ಈ ಜಲಾಶಯದಿಂದ ಮಲೆಬೆನ್ನೂರು, ದಾವಣಗೆರೆಯ ಮೂಲಕ ಹರಿಯುವ ಎರಡು ನಾಲೆಗಳೂ ೨,೭೬,೮೮೮ ಹೆಕ್ಟೇರು ಅಥವಾ ೬೦ ಸಾವಿರ ಎಕರೆಗೆ ನೀರೊದಗಿಸಿದ್ದು, ಅದು ಅಚ್ಚುಕಟ್ಟು ಪ್ರದೇಶವಾಗಿ ಮಾರ್ಪಾಡಾಗಿದೆ.[೧೨]

ದೇವರಬೆಳಕೆರೆಯಲ್ಲಿ ಶಾಗಲಿಹಳ್ಳ-ಹರಿದ್ರಾ ನದಿ (ಸೂಳೆಕೆರಹಳ್ಳ) ಸಂಗಮಸ್ಥಳದಲ್ಲಿ ಆಣೆಕಟ್ಟೆ ನಿರ್ಮಿಸಿದ್ದಾರೆ. ೬,೦೦೦ ಎಕರೆ ಪ್ರದೇಶದಲ್ಲಿ ನೀರು ಹರಡಿದ್ದು, ೧೩,೩೧೩ ಎಕರೆ ಪ್ರದೇಶಕ್ಕೆ ನೀರು ಒದಗಿಸುತ್ತದೆ. ಚನ್ನಗಿರಿಗೆ ೨೦ ಕಿ.ಮೀ. ದೂರದಲ್ಲಿರುವ ಶಾಂತಿಸಾಗರ(ಸೂಳೆಕರೆ) ದಕ್ಷಿಣ ಭಾರತದ ಸುಂದರ ಜಲಾಶಯಗಳಲ್ಲಿ ಒಂದಾಗಿದೆ. ೧೧-೧೨ನೇ ಶತಮಾನದಲ್ಲೇ ಹಿರೆಹಳ್ಳ ಮತ್ತು ಸೂಪ್ಪಿನಹಳ್ಳಗಳಿಗೆ ಕಟ್ಟೆಕಟ್ಟಿ ಜಲಾಶಯ ನಿರ್ಮಿಸಲಾಗಿದೆ. ಮುಖ್ಯ ಕಾಲುವೆಗೆ 'ಹರಿದ್ರಾವತಿ' ಎಂದು ಉತ್ತರದ ನಾಲೆಗೆ ' ಸಿದ್ಧನಾಲೆ ' ಎಂದು ದಕ್ಷಿಣದ ನಾಲೆಗೆ ' ಬಸವನಾಲೆ ' ಎಂದು ಹೆಸರಿಸಲಾಗಿದೆ. ಇವು ೧,೭೯೨.೫ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರೊದಗಿಸುತ್ತವೆ.

ತುಂಗಭದ್ರ ನದಿಯು ಜಗಲೂರು ತಾಲೂಕೊಂದನ್ನು ಹೊರತುಪಡಿಸಿ ಉಳಿದ ಹೊನ್ನಾಳಿ, ಚನ್ನಗಿರಿ, ದಾವಣಗೆರೆ, ಹರಿಹರ, ಹರಪನಹಳ್ಳಿ ತಾಲೂಕುಗಳಲ್ಲಿ ಹರಿಯುತ್ತದೆ. ಜಿನಗಿಹಳ್ಳಕ್ಕೆ ಸಂಗೇನಹಳ್ಳಿಯ ಬಳಿ ಆಣೆಕಟ್ಟೆ ನಿರ್ಮಿಸಿ ದೊಡ್ಡ ಕೆರೆಯನ್ನಾಗಿಸಿ ಜಗಳೂರು ತಾಲೂಕಿನ ನೀರಾವರಿಗೆ ಅನುಕೂಲ ಕಲ್ಪಿಸಲಾಗಿದೆ. ಜಿಲ್ಲೆಯ ಬಾಗಳಿ, ಆಣಜಿ, ಮುಂತಾದೆಡೆ ಪ್ರಾಚೀನವಾದ ಅನೇಕ ಕೆರೆಗಳಿವೆ.

ಇಷ್ಟೆಲ್ಲಾ ಜಲಸಂಪತ್ತನ್ನು ಹೊಂದಿದ ಈ ಪ್ರದೇಶ ಪ್ರಾಗೈತಿಹಾಸಿಕ ಕಾಲದಿಂದಲೂ ಜನರಿಗೆ ಅವಶ್ಯಕವಾಗಿದ್ದ ಜೀವಸೆಲೆ (ನೀರನ್ನು) ಯನ್ನು ಒದಗಿಸುತ್ತಾ ಬಂದಿದೆ. ಪರಿಣಾಮವಾಗಿ ಇಲ್ಲಿನ ನದಿ, ಹಳ್ಳ, ಕೆರೆಗಳ ಸನಿಹದಲ್ಲಿ ಪ್ರಾಗೈತಿಹಾಸಿಕ ಕಾಲದ ಜನವಸತಿಯ ತಾಣಗಳು ಕಂಡುಬಂದಿವೆ. ಪ್ರಕೃತಿಯ ಅಧೀನದಲ್ಲೇ ಬದುಕುತ್ತಿದ್ದ ಮಾನವನಿಗೆ ಶಿಲಾಯುಧಗಳನ್ನು ತಯಾರಿಸಲು ಉಪಯುಕ್ತವಾದ ಉಂಡೆಕಲ್ಲುಗಳು ಸಹ ನದಿಯ ಇಕ್ಕೆಲೆಗಳಲ್ಲಿ ಸ್ವಾಭಾವಿಕವಾಗಿ ದೊರೆಯುತ್ತಿದ್ದರಿಂದಾಗಿ ಪ್ರಾಗೈತಿಹಾಸಿಕ ಕಾಲದ ಮನುಷ್ಯ ಈ ಜಿಲ್ಲೆಯ ವಿವಿದೆಡೆ ನೆಲೆಯೂರಿದ್ದ ಬಗೆಗೆ ಮಾಹಿತಿಗಳು ದೊರಕುತ್ತವೆ[೧೩]. ಹಾಗೆಯೇ ಈ ಭಾಗದಲ್ಲಿ ಅನೇಕ ರಾಜವಂಶಗಳು ಆಳಿ ಅಳಿದು ಅವರ ಸಂಸ್ಕೃತಿಯ ಪ್ರತೀಕಗಳಾದ ದೇವಾಲಯಗಳನ್ನು ನದಿಯ ಇಲ್ಲವೇ ಕೆರೆಯದಂಡೆಯ ಮೇಲೆ ಕಟ್ಟಿಸಿ ನಮಗೆ ಕಲಾ ಕಾಣಿಕೆಯಾಗಿ ಬಿಟ್ಟು ಹೋಗಿದ್ದಾರೆ.

ದಾವಣಗೆರೆ ತಾಲೂಕಿನಲ್ಲಿ ಮಾಯಕೊಂಡದಿಂದ ಅಣಜಿವರೆಗೆ ಪೂರ್ವದಲ್ಲಿ ಅಷ್ಟೇನು ಎತ್ತರವಲ್ಲದ ಗುಡ್ಡದ ಸಾಲು ಹಬ್ಬಿದೆ. ದಾವಣಗೆರೆ ಬಳಿ ಬಾತಿಗುಡ್ಡದ ಸಾಲಿದ್ದರೆ, ಹೊನ್ನಾಳಿ ತಾಲೂಕಿನ ದಕ್ಷಿಣದಿಂದ ಉತ್ತರಕ್ಕೆ ಬೋಳು ಬೆಟ್ಟದ ದೊಡ್ಡ ಶ್ರೇಣಿ ಇದೆ. ಕಲ್ವ ರಂಗನ ಬೆಟ್ಟವು (೧,೦೩೧ ಮೀ.) ಎತ್ತರವಿದೆ. ಇದಲ್ಲದೆ ಕುದುರೆಕೊಂಡನ ಬೆಟ್ಟಗಳು ಇವೆ. ಚನ್ನಗಿರಿ ತಾಲೂಕಿನಲ್ಲಿಯೂ ದಕ್ಷಿಣ ಮತ್ತು ಪಶ್ಚಿಮ ಭಾಗದಲ್ಲಿ ಬೆಟ್ಟದ ಸಾಲುಗಳಿರುವುದು ಕಂಡುಬರುತ್ತದೆ. ಹರಪನಹಳ್ಳಿ ತಾಲೂಕಿನಲ್ಲಿ ಕಲ್ಲಳ್ಳಿ ಗುಡ್ಡದ ಶ್ರೇಣಿ ಇದ್ದು, ತಿಮ್ಮಪ್ಪನ ಬೆಟ್ಟ, ಕಲ್ಲಳ್ಳಿಬೆಟ್ಟ, ನರಸಿಂಹ ದೇವರ ಬೆಟ್ಟ, ತೆಲಗಿ ಗುಡ್ಡದ ಸಮೂಹಗಳಿವೆ. ಹರಿಹರ ತಾಲೂಕಿನಲ್ಲಿ ಮಲೆಬೆನ್ನೂರು, ಕೊಮಾರನಹಳ್ಳಿ, ಐರಣಿ, ಬಾತಿಗುಡ್ಡದ ಸಾಲನ್ನು ನೋಡಬಹುದು. ಜಗಲೂರು ತಾಲೂಕಿನ ವಾಯುವ್ಯದಲ್ಲಿ ಬೆಟ್ಟದ ಸಾಲು ಹಬ್ಬಿದ್ದು, ಅವುಗಳಲ್ಲಿ ಕಣಕುಪ್ಪೆ ಗುಡ್ಡದ ಸಾಲು, ಕೊಣಚಗಲ್ಲುರಂಗಪ್ಪನಬೆಟ್ಟ, ಕೊಡದಗುಡ್ಡ, ಹಾಲೆಕಲ್‌ಗುಡ್ಡದ ಸಾಲುಗಳು ಪ್ರಮುಖವಾಗಿವೆ.

ನೈಸರ್ಗಿಕವಾಗಿ ಇಷ್ಟೆಲ್ಲಾ ಬೆಟ್ಟಗುಡ್ಡಗಳನ್ನು ಹೊಂದಿದ ಈ ಜಿಲ್ಲೆಯ ವಿವಿಧ ಕಡೆಗಳಲ್ಲಿ ವಿಭಿನ್ನ ರೀತಿಯ ಶಿಲಾ ಸಂಪತ್ತನ್ನು, ಖನಿಜ ಸಂಪತ್ತನ್ನು ನೋಡಬಹುದು. ಮೇಲೆ ವಿವರಿಸಿದ ಈ ಭಾಗವು ಪ್ರಾಚೀನ ಆರ್ಕಿಯೆನ್ ಕಾಂಪ್ಲೆಕ್ಸ್‌ಗೆ ಸೇರಿದ್ದು[೧೪], ಇಲ್ಲಿನ ಶಿಲೆಯನ್ನು ಧಾರವಾಡ ಶಿಲಾವರ್ಗ ಮತ್ತು ಜಿರಾಸಿಕ್ ಶಿಲಾ ವರ್ಗವೆಂದು ಎರಡು ಭಾಗ ಮಾಡಬಹುದು[೧೫]. ಈ ಮೇಲಿನ ಬೆಟ್ಟಗಳಲ್ಲಿ ಗ್ರಾನೈಟ್ (ಹರಳು ಶಿಲೆ) ಹೇರಳವಾಗಿ ದೊರೆಯುತ್ತದೆ. ಹಾಗೆಯೇ ಧಾರವಾಡ ಶಿಲಾವರ್ಗದಲ್ಲಿ ಕಂಡುಬರುವ ಶಿಲೆಯು ಹೊನ್ನಾಳಿ ತಾಲೂಕಿನಲ್ಲಿ ಹೆಚ್ಚಾಗಿ ದೊರೆಯುತ್ತದೆ. ಇದು ಹೊನ್ನಾಳಿ ಗ್ರಾನೈಟ್ ಎಂದೇ ಹೆಸರುವಾಸಿಯಾಗಿದೆ. ಹಾಗೇ ಅಲ್ಲಲ್ಲಿ, ಕಾಂಗ್ಲಾಮರೇಟ್, ಬೆಣಚುಕಲ್ಲು ಅಥವಾ ಸ್ಪಟಿಕಾಂತರ ಶಿಲೆ (ಕ್ವಾರ್ಟಜೈಟ್), ಡೊಲರೈಟ್ ಡೈಕ್ (ಕಪ್ಪು ಶಿಲೆ), ವಾಲ್ಕನಿಕ್‌ರಾಕ್ಸ್ (ಅಗ್ನಿಜನ್ಯ ಶಿಲೆ) ಸುಣ್ಣದಕಲ್ಲು, ಸೋಪ್‌ಸ್ಟೋನ್(ನೀಲೆ ಛಾಯೆಯ ಹಸಿರು ಬಳಪದ ಕಲ್ಲು)ಗಳೂ ದೊರೆಯುತ್ತವೆ. ಆದರೂ ಹರಪನಹಳ್ಳಿ ತಾಲೂಕಿನ ಬಾಗಳಿ ಸಮೀಪ ಅಡವಿಯಲ್ಲಿ,ನೀಲಗುಂದ, ಹಲವಾಗಲುಗಳಲ್ಲಿ ದೊರೆಯುವ ಶಿಲೆ ಹಾಗೆಯೇ ಹೊನ್ನಾಳಿ ತಾಲೂಕಿನ ಹೊಸ ಕೊಪ್ಪದಲ್ಲಿ ದೊರಕುವ ಬಳಪದ ಕಲ್ಲು ಪ್ರಸಿದ್ಧಿ ಪಡೆದಿವೆ.

ಹೊನ್ನಾಳಿ ತಾಲೂಕಿನ ಬಲಮುರಿಯಲ್ಲಿ ಕಂಕರ್ ಎಂಬ ಹೆಸರಿನ ಶಿಲೆ ದೊರೆಯುತ್ತದೆ. ಹಾಗೆಯೇ ಚನ್ನಗಿರಿಯ ದಕ್ಷಿಣ ಭಾಗದಲ್ಲಿ, ಹೊನ್ನಾಳಿಯ ಈಶಾನ್ಯ ಮತ್ತು ವಾಯುವ್ಯ ಭಾಗದಲ್ಲಿ, ಜಗಲೂರು ತಾಲೂಕಿನ ಹೊಸಕೆರೆಯಲ್ಲಿ ಹಾಗು ದಾವಣಗೆರೆಯ ದೇವರ ಬೆಳಕೆರೆಯ ಬಳಿ ಸುಣ್ಣದಕಲ್ಲು ಹೇರಳವಾಗಿ ದೊರೆಯುತ್ತದೆ. ದಾವಣಗೆರೆಯ ಸಮೀಪದಲ್ಲಿರುವ ಮಲೆಬೆನ್ನೂರಿನಲ್ಲಿ ಉತ್ತಮ ಗುಣಮಟ್ಟದ ಜೇಡಿಮಣ್ಣು ದೊರೆಯುತ್ತದೆ.

ದಾವಣಗೆರೆ ಸಮೀಪದಲ್ಲಿ ತಾಮ್ರ, ಜಗಲೂರು ತಾಲೂಕಿನ ಹೊನ್ನಮರಡಿ, ಮರೇನಹಳ್ಳಿಯಲ್ಲಿ ಚಿನ್ನ, ಹುಲಿಕಟ್ಟೆ (ದಾವಣಗೆರ ತಾಲೂಕು) ಮತ್ತು ಜಗಲೂರು ತಾಲೂಕಿನಲ್ಲಿ ಮ್ಯಾಂಗನೀಸ್ ದೊರೆಯುತ್ತದೆ. ಉಂಬ್ರಾಣಿ, ಚಿಲಾನಹಳ್ಳಿ (ಚನ್ನಗಿರಿ ತಾಲೂಕು)ಗಳಲ್ಲಿ ಟೈಟಾನಿಯಂ ಅದಿರು ದೊರೆಯುತ್ತದೆ. ಅಲ್ಲದೆ ಕಬ್ಬಿಣದ ಅದಿರು ಜಗಲೂರು ಮತ್ತು ಹರಪನಹಳ್ಳಿ ತಾಲೂಕಿನಲ್ಲಿ ದೊರೆಯುತ್ತದೆ.

ಜಿಲ್ಲೆಯು ಬಹುತೇಕ ಬಯಲು ಪ್ರದೇಶದಿಂದ ಕೂಡಿದ್ದರೂ ಸುಮಾರು ೫೦ ಸಾವಿರ ಹೆಕ್ಟರ್‌ಗಳಲ್ಲಿ ಅರಣ್ಯವಿದೆ. ಚನ್ನಗಿರಿ ಮತ್ತು ಹೊನ್ನಾಳಿ ಭಾಗದ ಅರಣ್ಯದಲ್ಲಿ ಹಲಸು, ಬೀಟೆ, ತೇಗ, ಹೊನ್ನೆ, ನಂದಿ, ಶ್ರೀಗಂಧ, ಸಂಪಿಗೆ ಮತ್ತು ದಿಂಡಿಗ, ಬಿದಿರು ಮರಗಳು ಅಲ್ಲಲ್ಲಿ ಬೆಳೆಯುತ್ತವೆ. ಉಳಿದ ತಾಲೂಕಿನ ಅರಣ್ಯದಲ್ಲಿ ಹೆಚ್ಚಾಗಿ ಕುರುಚಲ ಗಿಡಗಂಟೆ ಮತ್ತು ಹುಲ್ಲು ಹೆಚ್ಚಾಗಿ ಬೆಳೆಯುತ್ತವೆ. ಜಿಲ್ಲೆಯಲ್ಲಿನ ಕಾಡುಗಳು ಕೈಗಾರಿಕೆಗಳಿಗೆ ಬೇಕಾಗುವ ಕಚ್ಚಾ ಪದಾರ್ಥಗಳನ್ನು ಪೂರೈಸುತ್ತಿದ್ದು, ಅವುಗಳಲ್ಲಿ ಮುಖ್ಯವಾಗಿ ಕಾಗದ, ಗಂಧ ಮತ್ತು ಬೆಂಕಿಕಡ್ಡಿ ಕಾರ್ಖಾನೆಗಳಿಗೆ ಕಚ್ಚಾ ವಸ್ತುಗಳನ್ನು ಪೂರೈಸುತ್ತವೆ. ಕಟ್ಟಡ ನಿರ್ಮಾಣಕ್ಕೆ ಬೇಕಾದ ಮರ ಮುಟ್ಟುಗಳು, ಉರುವಲು ಕಟ್ಟಿಗೆ, ಬೊಂಬುಗಳು ಮತ್ತು ಬೆತ್ತಗಳು ಪ್ರಮುಖವಾದ ಅರಣ್ಯ ಉತ್ಪಾದನೆಗಳಾಗಿವೆ. ಬೀಡಿಎಲೆ, ಎಣ್ಣೆಬೀಜ, ಹುಣಸೆಹಣ್ಣು, ಸೀಗೆಕಾಯಿ, ಹಾಲುವಾಣ, ಅಂಟುವಾಳದ ಕಾಯಿ, ಗೇರು ಬೀಜಗಳು ಸಣ್ಣ ಪ್ರಮಾಣದ ಅರಣ್ಯ ಉತ್ಪಾದನೆ ವಸ್ತುಗಳಾಗಿವೆ.

ಪ್ರಕೃತಿ ಮಾನವನಿಗೆ ಸದಾ ಉಪಕಾರವನ್ನು ಮಾಡುತ್ತಲೇ ಬಂದಿದೆ. ಇಲ್ಲಿನ ಭೌಗೋಳಿಕ ಪರಿಸರದಲ್ಲಿ ದೊರೆಯುವ ಶಿಲೆ (ಗ್ರಾನೈಟ್, ಸೋಪ್‌ಸ್ಟೋನ್ ಇತ್ಯಾದಿ) ಮರ (ಹೊನ್ನೆ, ಬೀಟೆ, ಶ್ರೀಗಂಧ ಇತ್ಯಾದಿ) ಸುಣ್ಣದಕಲ್ಲು, ಜೇಡಿ ಮಣ್ಣು ಇವುಗಳು ಒಂದಲ್ಲಾ ಒಂದು ರೀತಿ ದೇವಾಲಯದ ನಿರ್ಮಾಣದಲ್ಲಿ ಸಹಕಾರಿಯಾಗಿವೆ. ಹಾಗೆ ಅನೇಕ ದೇವಾಲಯ ಮತ್ತು ಮೂರ್ತಿ ಶಿಲ್ಪಗಳನ್ನು ನಿರ್ಮಿಸಲು ಈ ಭೌತಿಕ ಪರಿಸರವೇ ಸ್ಫೂರ್ತಿ ನೀಡಿದೆ. ಅಂದಿನಿಂದ ಇಂದಿನವರೆಗೂ ಪರಿಸರವನ್ನು ಅವಲಂಬಿಸಿಯೇ ಮಾನವ ಜೀವನ ಸಾಗಿಸುತ್ತಿದ್ದಾನೆ. ದಾವಣಗೆರೆ ಜಿಲ್ಲೆಯ ವ್ಯಾಪ್ತಿಯಲ್ಲಿ ಇರುವ ಅಸಂಖ್ಯಾತ ದೇವಾಲಯಗಳು ಹಾಗು ಮೂರ್ತಿಗಳ ನಿರ್ಮಾಣಕ್ಕೆ ರಾಜರು, ಶಿಲ್ಪಿಗಳು, ಕೂಲಿಗಳು ನೇರವಾಗಿ ಕಾರಣಕರ್ತರಾದರೆ, ಅದಕ್ಕಿಂತಲೂ ಹೆಚ್ಚಾಗಿ ಪರೋಕ್ಷವಾಗಿ ಪ್ರಕೃತಿ ತನ್ನಲ್ಲಿನ ಕಚ್ಚಾ ವಸ್ತುಗಳನ್ನು ಇಂತಹ ಕೆಲಸಕ್ಕಾಗಿ ಒದಗಿಸಿದೆ. ಈ ಭೌಗೋಳಿಕ ಪರಿಸರದ ಪ್ರಭಾವ ಇಲ್ಲಿನ ವಾಸ್ತುಕಲೆ ಮತ್ತು ಮೂರ್ತಿ ಶಿಲ್ಪದಲ್ಲಿ ಬಿಂಬಿತವಾಗಿರುವುದನ್ನು ನಾವು ಕಾಣಬಹುದು.

ಅಡಿ ಟಿಪ್ಪಣಿಗಳು

೧. ಗಿರೀಜ, ಟಿ. **ಚಿತ್ರದುರ್ಗ ಜಿಲ್ಲಾ ದರ್ಶಿನಿ,** ೧೯೯೧, ಪು. ೪೮೯

೨. ,, **ದಾವಣಗೆರೆ ದರ್ಶಿನಿ**, ೧೯೮೫, ಪು. ೫

೩. **ಎಪಿಗ್ರಫಿಯಾ ಕರ್ನಾಟಿಕಾ**, ಸಂ. ೧೧, ಶಾ.ಸಂ. ೪

೪. ಗಿರೀಜ, ಟಿ. ಪೂರ್ವೋಕ್ತ, ೧೯೯೧, ಪು. ೪೮೮,

೫. ಸತ್ಯನ್, ಬಿ.ಎನ್. **ಚಿತ್ರದುರ್ಗ ಜಿಲ್ಲಾ ಗೆಜಟಿಯರ್**, ೧೯೭೫, ಪು. ೮-೧೨

೬. ವಿದ್ವಾಂಸರ ಹೆಚ್ಚಿನ ಅಭಿಪ್ರಾಯಗಳಿಗೆ ನೋಡಿ ಗಿರೀಜ, ಟಿ. ಪೂರ್ವೋಕ್ತ, ೧೯೯೧

೭. ನೋಡಿ ದಿನಾಂಕ೦೯-೧೧-೧೯೯೭ ರಂದು **ಪ್ರಜಾವಾಣಿ**ಯ ಸಾಪ್ತಾಯಿಕ ಪುರವಣಿಯಲ್ಲಿ ಪ್ರಕಟವಾದ ಲೇಖನ.

೮. ನೋಡಿ ಸುಮತೀಂದ್ರ ನಾಡಿಗ್, **ಜನತಾವಾಣಿ**ಯಲ್ಲಿ ಬರೆದ ಲೇಖನ ದಿನಾಂಕ ೦೭.೦೮.೯೮,

೯. ಸತ್ಯನ್, ಬಿ. ಎನ್., ಪೂರ್ವೋಕ್ತ, ೧೯೭೫, ಪು. ೧೬

೧೦. ಒಂದೇ ಹೋಬಳಿ ಕೇಂದ್ರಗಳನ್ನು ಎರಡು ಸರ್ಕಲ್‌ಗಳಾಗಿ (ವೃತ್ತ) ಆಡಳಿತದ ಅನುಕೂಲಕ್ಕಾಗಿ ವಿಭಾಗಿಸಿಕೊಳ್ಳಲಾಗಿದೆ. ಹಾಗಾಗಿ ವೃತ್ತ ೧ ಮತ್ತು ೨ ಎಂದು ಬಳಸಿಕೊಳ್ಳಲಾಗಿದೆ.

೧೧. **ಶಿವಮೊಗ್ಗ ಜಿಲ್ಲಾ ಗೆಜಟಿಯರ್**, ೧೯೭೫, ಪು.೧೬-೧೮

೧೨. ಸತ್ಯನಾರಾಯಣ್ ನಾಡಿಗ್ (ಗೌ.ಸಂ.) **ವಿಜಯ**, ೧೯೯೯, ಪು.೫೧-೫೩

೧೩. ನಾಗರಾಜರಾವ್ ಎಂ. ಎಸ್. **ಪ್ರೋಟೋ ಹಿಸ್ಟಾರಿಕ್ ಕಲ್ಚರ್ ಆಫ್ ದಿ ತುಂಗಾಭದ್ರ ವ್ಯಾಲಿ** ೧೯೭೧ ಪು.೧೪-೧೫.

೧೪. ಕರ್ನಾಟಕದ ಭೌಗೋಳಿಕ ಪ್ರದೇಶಗಳನ್ನು ಕಾಲಾನುಕ್ರಮದಲ್ಲಿ ವಿಂಗಡಿಸಿರುವ ಭಾಗ, ಇದನ್ನು ಭೂಗರ್ಭ ಇತಿಹಾಸದ ಪ್ರಥಮ ಯುಗ ಎನ್ನುತ್ತಾರೆ.
ನೋಡಿ- **ಕರ್ನಾಟಕ ಚರಿತ್ರೆ**, ೧೯೯೭, ಸಂಪುಟ -೧ ಪುಟ. ೩೪

೧೫. **ಶಿವಮೊಗ್ಗ ಜಿಲ್ಲಾ ಗೆಜಟಿಯರ್**, ೧೯೭೫, ಪು.೨೧

೩. ಐತಿಹಾಸಿಕ ಹಿನ್ನಲೆ :

ಮನುಷ್ಯ ಬರವಣಿಗೆಯನ್ನು ಕಂಡುಕೊಳ್ಳುವ ಮೊದಲು ಹಾಗು ಅವನ ಜೀವನದ ರೀತಿ ನೀತಿಗಳು ಅಷ್ಟೇನು ಸುಧಾರಿಸದೇ ಇದ್ದ ಕಾಲಾವಧಿಯನ್ನು ಪ್ರಾಗೈತಿಹಾಸಿಕ ಕಾಲವೆಂದು ಕರೆಯಲಾಗುತ್ತದೆ. ದಾವಣಗೆರೆ ಜಿಲ್ಲೆಯ ವ್ಯಾಪ್ತಿಯಲ್ಲಿ ಕೆಲವು ಪ್ರಾಗೈತಿಹಾಸಿಕ ನೆಲೆಗಳು ಕಂಡುಬಂದಿದ್ದು, ಅವುಗಳಲ್ಲಿ ಆ ಕಾಲದ ಮನುಷ್ಯ ಉಪಯೋಗಿಸಿ ಬಿಟ್ಟು ಹೋದ ಕೆಲವು ಅವಶೇಷಗಳು ದೊರೆತಿವೆ. ಈ ಜಿಲ್ಲೆಯ ವ್ಯಾಪ್ತಿಯಲ್ಲಿ ಹಲವು ರಾಜಮನೆತನಗಳು ಹಾಗು ಅವರ ಸಾಮಂತರು ಆಳ್ವಿಕೆ ನಡೆಸಿದ್ದಾರೆ. ಇವರುಗಳು ತಮ್ಮ ಕಾಲಾವಧಿಯಲ್ಲಿ ಅನೇಕ ಪ್ರಜಾಹಿತ ಕಾರ್ಯಗಳನ್ನು ಕೈಗೊಂಡು, ಈ ಚಾರಿತ್ರಿಕ ಕಾಲಘಟ್ಟದಲ್ಲಿ ತಮ್ಮದೇ ಆದ ವಿಶಿಷ್ಟ ಸ್ಥಾನಗಳನ್ನು ಗಳಿಸಿಕೊಂಡಿದ್ದಾರೆ. ಇದೆಲ್ಲವನ್ನು ಒಳಗೊಂಡಂತೆ ಈ ಕೆಳಗಿನ ಶಿರೋನಾಮೆಗಳ ಅಡಿಯಲ್ಲಿ ವಿವರಿಸಲಾಗಿದೆ.

೩.೧. ಪ್ರಾಗೈತಿಹಾಸಿಕ ಕಾಲ :-

ಸೃಷ್ಠಿಯಲ್ಲಿ ಮಾನವನಿಗೆ ಒಂದು ವಿಶಿಷ್ಟ ಸ್ಥಾನವಿದೆ. ಮೂಲತಃ ಮಾನವ ಪ್ರಕೃತಿಯನ್ನು ಅವಲಂಬಿಸಿಕೊಂಡು ಜೀವಿಸಲೇಬೇಕಾದ ಪರಿಸ್ಥಿತಿ ಅವನಿಗಿತ್ತು. ಇಂದಿಗೆ ಸುಮಾರು ನಾಲ್ಕು ಮಿಲಿಯನ್ ವರ್ಷಗಳ ಹಿಂದೆ ಮನುಷ್ಯ ಜೀವಿಸಿದ್ದ ಎನ್ನುವುದಕ್ಕೆ ಸಾಕ್ಷ್ಯಾಧಾರಗಳಿವೆ[೧]. ಅಂದಿನಿಂದಲೂ ಮನುಷ್ಯ ಶಿಲೆಯೊಡನೆ ನಿಕಟ ಸಂಬಂಧ ಹೊಂದಿದ್ದಾನೆ. ಪ್ರಕೃತಿ ಮಾನವನಿಗೆ ಮೊದಲು ನೀಡಿದ ಕೊಡುಗೆಗಳಲ್ಲಿ ಶಿಲೆಯೂ ಒಂದಾಗಿದೆ. ಆರಂಭದಲ್ಲಿ ಅಲೆಮಾರಿಯಾಗಿದ್ದ ಮಾನವನಿಗೆ ಗೆಡ್ಡೆ ಗೆಣಸುಗಳನ್ನು, ಕಂಟಿಗಳನ್ನು ಅಗೆದು , ತೆಗೆಯಲು, ಗಿಡಗಳನ್ನು ಕಡಿಯಲು, ಬೇಟೆಯಾಡಲು, ಬೇಟೆಯಾಡಿದ ಪ್ರಾಣಿ ಮಾಂಸವನ್ನು ತುಂಡು ಮಾಡಲು, ಮೃತ ಪ್ರಾಣಿಗಳ ಚರ್ಮವನ್ನು ಬೇರ್ಪಡಿಸಲು, ಕಟ್ಟಿಗೆಯ ಉಪಕರಣಗಳನ್ನು, ಆಯುಧಗಳನ್ನು ತಯಾರಿಸಲು, ಶಿಲೆ ಮಾನವನಿಗೆ ನೆರವಾಗಿದೆ. ಒಟ್ಟಿನಲ್ಲಿ ಅಂದು ಮಾನವನ ಜೀವನದ ಒಂದು ಭಾಗವಾಗಿ ಶಿಲೆ ಬಳಕೆಯಾಗುತ್ತಿತ್ತು. ಅಂದರೆ ಲೋಹದ ಬಳಕೆ ಆರಂಭವಾಗುವವರೆಗೆ ಶಿಲೆಯನ್ನೇ ಮಾನವ ಅವಲಂಬಿಸಿದ್ದ ಈ ಕಾಲಾವಧಿಯನ್ನು ಶಿಲಾ ಯುಗ (ಸ್ಟೋನೇಜ) ಎಂದು ಕರೆಯುತ್ತಾರೆ. ಅತ್ಯಂತ ದೀರ್ಘವಾದ ಈ ಯುಗವನ್ನು ಕ್ರಮವಾಗಿ :

೧) ಹಳೆ ಶಿಲಾಯುಗ (ಪೆಲಿಯೋಲಿಥಿಕ್)
೨) ಸೂಕ್ಷ್ಮ ಶಿಲಾಯುಗ (ಮೆಸೋಲಿಥಿಕ್)
೩) ನವ ಶಿಲಾಯುಗ (ನಿಯೋಲಿಥಿಕ್)
೪) ಬೃಹತ್ ಶಿಲಾಯುಗ (ಮೆಗಾಲಿಥಿಕ್)

[illegible]

[illegible]

[illegible]

[illegible]

[illegible]

ಹಳೆ ಶಿಲಾಯುಗವನ್ನು :-

ಅ) ಹಳೆ ಶಿಲಾಯುಗ

ಬ) ಮಧ್ಯ ಹಳೆ ಶಿಲಾಯುಗ

ಕ) ಅಂತಿಮ ಹಳೆ ಶಿಲಾಯುಗ

ಎಂದು ಅನುಕ್ರಮವಾಗಿ ಮೂರು ಹಂತಗಳಾಗಿ ವಿಭಾಗಿಸಲಾಗಿದೆ[೨]. ಶಿಲಾಯುಗದ ಪ್ರತಿಯೊಂದು ಹಂತದಲ್ಲಿ ಜನರು ತಮ್ಮ ಉಪಕರಣಗಳನ್ನು ತಯಾರಿಸಿದರು. ಅಲ್ಲಿ ಬಳಸಿದ ತಂತ್ರಗಳ ಮತ್ತು ಅವುಗಳ ಮೂಲಕ ಸಿದ್ಧ ಮಾಡಿದ ಉಪಕರಣಗಳನ್ನು ಆಕೃತಿಗಳಿಗನುಗುಣವಾಗಿ ನಿರ್ಧರಿಸಲಾಗಿದೆ. ಅವರು ರೂಪಿಸಿಕೊಂಡ ತಂತ್ರ, ಅವರು ಉತ್ಪಾದಿಸಿದ ಉಪಕರಣಗಳ ಆಕೃತಿಗಳನ್ನು ಹಾಗು ಲಕ್ಷಣಗಳನ್ನು ನಿರ್ಧರಿಸುತ್ತಿದ್ದವು. ಮಾನವನ ಸಾಂಸ್ಕೃತಿಕ ಪ್ರಗತಿ ಪಥದಲ್ಲಿಯ ಸ್ಪಷ್ಟವಾದ ಕ್ರಮಬದ್ಧ ಹಂತಗಳನ್ನು ನಿರ್ದೇಶಿಸುತ್ತ ಮಾನವ ಸಂಸ್ಕೃತಿ ಬೆಳವಣಿಗೆಯಲ್ಲಿಯ ವಿವಿಧ ಘಟ್ಟಗಳನ್ನು ಸ್ಪಷ್ಟಗೊಳಿಸುತ್ತದೆ[೩].

ಶಿಲಾಯುಗ ಕಾಲದಲ್ಲಿ ' ಲಿಪಿ ' ಬಳಕೆ ಇರಲಿಲ್ಲ ಹಾಗು ಅಂದಿನ ಮಾನವನ ಜೀವನ ಕ್ರಮವು ಅಷ್ಟೇನು ಪ್ರಗತಿಯಲ್ಲಿರಲಿಲ್ಲ. ಆದುದರಿಂದ ಈ ಕಾಲವನ್ನು ಪ್ರಾಗೈತಿಹಾಸಿಕ ಕಾಲವೆಂದು ಕರೆಯಲಾಗುತ್ತದೆ. ಈಗಿನ ದಾವಣಗೆರೆ ಜಿಲ್ಲೆಯ ವ್ಯಾಪ್ತಿಯಲ್ಲಿ ಪ್ರಾಗೈತಿಹಾಸಿಕ ಕಾಲದ ಕುರುಹುಗಳು ನಮಗೆ ದೊರೆತಿವೆ. ಅವುಗಳನ್ನು ಆಧಾರವಾಗಿಟ್ಟುಕೊಂಡು ಪ್ರಾಗೈತಿಹಾಸಿಕ ಕಾಲದ ಜನ ಜೀವನದ ಮೇಲೆ ಬೆಳಕು ಚೆಲ್ಲಬಹುದು.

೧೮೮೧ರಲ್ಲಿ ತುಂಗಭದ್ರ ನದಿ ಸಮೀಪದ ನ್ಯಾಮತಿ(ಹೊನ್ನಾಳಿ ತಾಲೂಕು)ಯಲ್ಲಿ ಸಿಂಗಲ್‌ಬೆಡ್ ಎಂಬುವರು ಆರಂಭ ಆದಿ ಶಿಲಾಯುಗಕ್ಕೆ (ಆರ್ಲಿ ಸ್ಟೋನ್- ಏಜ್ ಟೂಲ್ಸ್) ಸೇರಿದ ಎರಡು ಶಿಲಾ ಯುಧಗಳನ್ನು ಸಂಶೋಧಿಸಿದರು[೪]. ಕ್ವಾರ್ಟ್‌ಜೈಟ್‌ನಿಂದ ತಯಾರಿಸಲಾದ ಈ ಕೈಕೊಡಲಿಗಳಲ್ಲಿ ಮುಂಭಾಗ ಚೂಪಾಗಿಯೂ, ಹಿಂಭಾಗದಲ್ಲಿ ವೃತ್ತಾಕಾರವಾಗಿ ಹಾಗು ಬಾಯಿ ಹರಿತವಾಗಿಯೂ ಇತ್ತು. ಅದನ್ನು ವಿಭಿನ್ನ ಕೆಲಸಗಳಿಗೆ ಬಳಕೆ ಮಾಡಿದ್ದಾರೆನ್ನಬಹುದು. ಇದೇ ನಿವೇಶನದ ಸಮೀಪದಲ್ಲೇ, ಅಂದರೆ ತುಂಗಭದ್ರ ನದಿಯ ಎಡ ಭಾಗದ ದಂಡೆಯ ಹಳ್ಳೂರಿನಲ್ಲಿ (ಧಾರವಾಡ ಜಿಲ್ಲೆ) ೧೯೬೫ರಲ್ಲಿ ಉತ್ಖನನ ನಡೆದ ಪರಿಣಾಮವಾಗಿ ಆ ನಿವೇಶನವು ಕ್ರಿ.ಪೂ. ೧೮೦೦ಕ್ಕಿಂತ ಹಿಂದಿನದೆಂದು ಗುರುತಿಸಲಾಗಿದೆ. ಅಲ್ಲಿ ಕೃಷಿಯ ಪರಿಕರಗಳ ಹಾಗು ಸಾಕು ಪ್ರಾಣಿಗಳ ಅವಶೇಷಗಳು ದೊರೆತಿವೆ[೫].

ಹರಪನಹಳ್ಳಿಯಿಂದ ಸುಮಾರು ೧೨೦ ಕಿ.ಮೀ. ದೂರದಲ್ಲಿನ ಬಳ್ಳಾರಿ ಜಿಲ್ಲೆಯ ನಿಟ್ಟೂರು ಹಾಗು ೧೨೫ ಕಿ.ಮೀ. ದೂರದ ಸಂಗನಕಲ್ಲುಗಳಲ್ಲಿ ನಡೆದ ಉತ್ಖನನಗಳಿಂದ ಇವು ನವ ಶಿಲಾಯುಗಕ್ಕೆ ಪೂರ್ವದ ನೆಲೆಗಳೆಂದು ತಿಳಿದು ಬಂದಿದೆ. ಚಕ್ಕೆ, ಅಲಗುಗಳು[೬] ಹಾಗು ಮೊನಚುಗಳು, ಹೆರೆಯುವ ಚಕ್ಕೆಗಳು, ತಿರಳಗಲ್ಲು ಚಕ್ಕೆಗಳು ಸೂಕ್ಷ್ಮ ಶಿಲಾಯುಗದ ಸಂಸ್ಕೃತಿಗೆ ಸೇರಿವೆ[೭] ಇವುಗಳನ್ನು ದೊರೆತ ಸ್ಥಾನದಲ್ಲಿಯೇ

ತಯಾರಿಸಿದ ಸೂಚನೆಗಳಿವೆ. ಬಹಳಷ್ಟು ಉಪಕರಣಗಳನ್ನು ಕ್ವಾರ್ಟ್‌ಜ್‌ಶಿಲೆಯಿಂದ ತಯಾರಿಸಿದ್ದರೂ ಚರ್ಟ್‌ನಿಂದ ಮಾಡಿದ ಉಪಕರಣಗಳು ಸಹ ಇಲ್ಲಿ ದೊರೆತಿವೆ.

ಉಚ್ಚಂಗಿದುರ್ಗದಲ್ಲಿ ಎರಡು ಪ್ರಾಕ್ಚಾರಿತ್ರಿಕ ನೆಲೆಗಳು ಕಂಡು ಬರುತ್ತವೆ. ಬೆಟ್ಟದ ಮೇಲೆ ಒಂದು ನೆಲೆ ಇದೆ. ಕೆಳಭಾಗದಲ್ಲಿ ಪೂರ್ವಕ್ಕೆ ಬನಶಂಕರಿ ದೇವಾಲಯದ ಆವರಣದಲ್ಲಿ ಮತ್ತೊಂದು ನೆಲೆ ಇದೆ. ಇವುಗಳನ್ನು ಮೊರಿಯರ ಮನೆಗಳೆಂದು ಕರೆಯುತ್ತಾರೆ. ಆದರೆ ಇವು ಬೃಹತ್ ಶಿಲಾಯುಗ ಕಾಲದ ಸಮಾಧಿಗಳಾಗಿವೆ. ಬೆಟ್ಟದ ಮೇಲಿರುವ ನೆಲೆಯಿಂದ ದೊರೆತ ಅವಶೇಷಗಳು ಯಾವುವೆಂದರೆ; ಬೂದು ಬಣ್ಣದ, ಕೆಂಪು ಮತ್ತು ಕಪ್ಪು ಬಣ್ಣದ ಮಡಿಕೆ ಚೂರುಗಳೊಂದಿಗೆ ಮತ್ತಿತರ ಅವಶೇಷಗಳು ದೊರೆತಿವೆ. ಬೂದು ಬಣ್ಣದ ಮಣ್ಣಿನ ದಿಬ್ಬದಲ್ಲಿ ಈ ಮೇಲಿನ ಅವಶೇಷಗಳು ಪದರ ಪದರವಾಗಿ ದೊರೆಯುತ್ತವೆ. ಬನಶಂಕರಿ ದೇವಾಲಯದ ಮುಂದಿನ ಪ್ರದೇಶವು ಪ್ರಾಚೀನ ನೆಲೆಯಾಗಿದ್ದಿತೆಂಬುದು ಅಲ್ಲಿನ ಬೂದಿ ಮತ್ತು ಮಡಿಕೆಯ ಅವಶೇಷಗಳಿಂದ ತಿಳಿದು ಬರುತ್ತದೆ.[೮] ಈ ಎರಡು ನೆಲೆಗಳಲ್ಲಿನ ಅವಶೇಷಗಳನ್ನು ಅವಲೋಕಿಸಿ ನೋಡಿದರೆ, ನವ ಶಿಲಾಯುಗ ಮತ್ತು ಬೃಹತ್ ಶಿಲಾ ಯುಗ ಕಾಲಕ್ಕೆ ಸೇರಿದವುಗಳೆಂದು ಹೇಳಬಹುದು .

ಹೊನ್ನಾಳಿ ತಾಲೂಕಿನ ಹೊಳಲೂರು ಬಳಿ ಶಿಲಾ ತಾಮ್ರಯುಗ, ಬೃಹತ್ ಶಿಲಾಯುಗಕ್ಕೆ ಸೇರಿದವುಗಳೆಂದು ಹೇಳಬಹುದಾದ ಗೀರು ಚಿತ್ರಗಳು ಕಂಡುಬಂದಿವೆ[೯]. ಜಗಲೂರಿನಿಂದ ೧೬ ಕಿ.ಮೀ. ದೂರದಲ್ಲಿರುವ ಸಂಗೇನಹಳ್ಳಿ ಕೆರೆಯ ಸುತ್ತಲೂ ೧೯೯೭ರಲ್ಲಿ ಚಿತ್ರದುರ್ಗದ ಸಂಶೋಧನಾ ತಂಡದ ಸದಸ್ಯರು ಅನ್ವೇಷಣೆ ಕೈಗೊಂಡು ಹೊಸ ಅಂಶಗಳನ್ನು ಬೆಳಕಿಗೆ ತಂದಿದ್ದಾರೆ. ಇಲ್ಲಿಯ ಕೆರೆಯಲ್ಲಿನ ದಿಬ್ಬಗಳನ್ನು ಸಾಮಾನ್ಯ ಮಣ್ಣಿನ ಗುಡ್ಡೆಗಳೆಂದು ಜನ ಭಾವಿಸಿದ್ದರು. ಆದರೆ ಅಲ್ಲಿನ ಸ್ತರಗಳಲ್ಲಿ ದೊರೆತ ಬೂದು ಮಣ್ಣನ್ನು ಹಾಗು ಅದೇ ದಿಬ್ಬದಲ್ಲಿ ದೊರೆತ ಎಲುಬಿನ ಅವಶೇಷಗಳನ್ನು ಆಧಾರವಾಗಿಟ್ಟುಕೊಂಡು ಇವುಗಳು ನವ ಶಿಲಾಯುಗ ಕಾಲಕ್ಕೆ ಸೇರಿದ ಬೂದಿ ದಿಬ್ಬಗಳೆಂದು ಹೇಳಿದ್ದಾರೆ[೧೦]. ಇದೇ ನೆಲೆಯಲ್ಲಿ ಕೈಕೊಡಲಿಗಳು, ಬೂದು , ಕಪ್ಪು ಬಣ್ಣದ ಮಡಿಕೆ ಚೂರುಗಳು ದೊರೆತಿವೆ.

ಜಗಲೂರಿನಿಂದ ಸುಮಾರು ೩೨ ಕಿ.ಮೀ. ದೂರದಲ್ಲಿ ಪ್ರಸಿದ್ಧ ಕೊಣಚಗಲ್ ರಂಗನಾಥ ಸ್ವಾಮಿ ಬೆಟ್ಟವಿದೆ. ಈ ಬೆಟ್ಟದ ಬಳಿ ನವ ಶಿಲಾಯುಗ ಕಾಲದ ಕೈಕೊಡಲಿಗಳು ಮತ್ತು ಬೂದು , ಕಪ್ಪು ಬಣ್ಣದ ಮಡಿಕೆ ಚೂರುಗಳು ಕ್ಷೇತ್ರ ಕಾರ್ಯ ಕೈಗೊಂಡಾಗ ದೊರೆತಿವೆ. ಕೈಗೊಡಲಿಗಳಲ್ಲಿ ಒಂದನ್ನು ಡಲೋರೈಟ್ ಶಿಲೆಯಿಂದ ಮಾಡಲಾಗಿದ್ದು, ಮತ್ತೊಂದನ್ನು ಅದೇ ಮಾದರಿಯ ಶಿಲೆಯಿಂದ ತಯಾರಿಸಲಾಗಿದೆ. ಇವುಗಳನ್ನು ಚೆನ್ನಾಗಿ ಉಜ್ಜಿ ನುಣುಪುಗೊಳಿಸಲಾಗಿದ್ದು, ಬಾಯಿ ಭಾಗ ಹರಿತವಾಗಿರುವಂತೆ ಮಾಡಲಾಗಿದೆ.

ಜಗಲೂರಿನಿಂದ ಸುಮಾರು ೮ಕಿ.ಮೀ. ದೂರದಲ್ಲಿ ಅರಿಶಿಣ ಗುಂಡಿ ಇದೆ. ಈ ಊರು ಬೆಟ್ಟ ಗುಡ್ಡಗಳಿಂದ ಆವೃತ್ತವಾಗಿದ್ದು, ಈ ಗ್ರಾಮದ ಬಳಿ ಒಂದು ಹಳ್ಳ ಹರಿದು ಹೋಗುತ್ತದೆ. ಈ ಊರಿನ ದಕ್ಷಿಣ ಭಾಗದಲ್ಲಿ ಅಂದರೆ; ತೋರಣಗಟ್ಟೆಗೆ ಹೋಗುವ ಮಾರ್ಗದ ಬಳಿಯ ಹಾಳೂರಿನಲ್ಲಿ ನವಶಿಲಾಯುಗ ಕಾಲಕ್ಕೆ ಸೇರಿದ ಎರಡು ಕೈಕೊಡಲಿಗಳು ದೊರೆತಿವೆ. ಇದರಲ್ಲಿ ಒಂದರ ಬಾಯಿ ಭಾಗ ತ್ರುಟಿತವಾಗಿದ್ದು, ಇನ್ನೊಂದು ಸುಸ್ಥಿತಿಯಲ್ಲಿದೆ. ಈ ಎರಡನ್ನು ಡಲೋರೈಟ್ ಶಿಲೆಯಿಂದ ತಯಾರಿಸಲಾಗಿದ್ದು, ಉಜ್ಜಿ ನುಣುಪು - ಗೊಳಿಸಲಾಗಿದೆಯಲ್ಲದೆ, ಬಾಯಿ ಭಾಗವು ಬಹಳ ಹರಿತವಾಗಿದೆ. ಇವುಗಳನ್ನು ದಿನನಿತ್ಯದ ಕೆಲಸ ಕಾರ್ಯಗಳಲ್ಲಿ ಉಪಯೋಗಿಸಿರ ಬಹುದಾದ ಸಾಧ್ಯತೆಗಳಿವೆ.

ಹರಿಹರ ತಾಲೂಕಿನ ಕೊಮಾರನಹಳ್ಳಿಯಲ್ಲಿ ನಡೆಸಿದ ಉತ್ಖನನದಿಂದಾಗಿ ರಾಗಿ, ನವಣೆಗಳನ್ನು ಬೆಳೆದ ಬಗ್ಗೆ ಆಧಾರಗಳು ದೊರತಿವೆ[೧೧]. ನವಶಿಲಾಯುಗದ ವೇಳೆಗೆ ರಾಗಿ ಮತ್ತು ನವಣೆಗಳನ್ನು ಮನುಷ್ಯ ವ್ಯವಸಾಯ ಮಾಡಿ ಬೆಳೆಯುತ್ತಿದ್ದ , ಜೊತೆಗೆ ಅವುಗಳನ್ನು ಆಹಾರ ಧಾನ್ಯಗಳಿಗಾಗಿ ಪ್ರತಿನಿತ್ಯ ಬಳಸುತ್ತಿದ್ದನೆಂದು ಸ್ಪಷ್ಟವಾಗುತ್ತದೆ.

ಉಚ್ಚಂಗಿದುರ್ಗ, ಕಣ್ಣುಕುಪ್ಪೆ ಬೆಟ್ಟ ಮೊದಲಾದೆಡೆ ಬೃಹತ್ ಶಿಲಾಯುಗದ ಸ್ವಸ್ತಿಕ್ ಹಾಗು ಆಯತಾಕಾರದ ಸಮಾಧಿಗಳು ಇರುವುದನ್ನು ಕ್ಷೇತ್ರಕಾರ್ಯದಲ್ಲಿ ಗಮನಿಸಲಾಗಿದೆ. ಪ್ರಾಗೈತಿಹಾಸಿಕ ಕಾಲದಲ್ಲಿ ಬೇಟೆಯಾಡುವುದು, ಹಸಿ ಮಾಂಸ ತಿನ್ನುವುದು ಸರ್ವೇಸಾಮಾನ್ಯವಾಗಿತ್ತು. ಈ ಜಿಲ್ಲೆಯೊಳಗಡೆ ನಡೆಯುವ ಗ್ರಾಮ ದೇವತೆಯ ಜಾತ್ರೆಗಳಲ್ಲಿ ' ಗಾವು ' ಎನ್ನುವ ವಿಶಿಷ್ಟ ಜಾನಪದ ಆಚರಣೆ ರೂಢಿಯಲ್ಲಿದೆ. ಜಗಲೂರು ತಾಲೂಕಿನ ಆಕನೂರು ಎಂಬಲ್ಲಿ ' ಪೋತರಾಜಲು ' ಎನ್ನುವ ವಿಶಿಷ್ಟ ಜನವರ್ಗ ಜಾತ್ರೆಗಳಲ್ಲಿ ಜೀವಂತವಿರುವ 'ಹೋತ ' ಒಂದನ್ನು ತಮ್ಮ ಬಾಯಿಯಿಂದಲೇ ಕಚ್ಚಿ ಕಚ್ಚಿ ಹಸಿ ಮಾಂಸವನ್ನು ತಿನ್ನುತ್ತಾರೆ. ದಾವಣಗೆರೆ ಜಿಲ್ಲೆಯೊಳಗಡೆ ಮಾನವ ಪ್ರಾಗೈತಿಹಾಸ ಕಾಲದಲ್ಲಿ ಹಸಿಮಾಂಸವನ್ನು ಆಹಾರಕ್ಕಾಗಿ ಉಪಯೋಗಿಸುತ್ತಿದ್ದನೆಂಬುವುದನ್ನು, ಈ ಆಚರಣೆಯಿಂದ ಅರ್ಥೈಸಿಕೊಳ್ಳಬಹುದು.

ಈ ಜಿಲ್ಲೆಯೊಳಗಡೆ ದೊರೆತ ಮಡಿಕೆ ಚೂರು, ಆಯುಧೋಪಕರಣಗಳು ಮತ್ತು ಇತರ ಅವಶೇಷಗಳು ಸಮೀಪದ ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಜಟ್ಟಿಂಗ ರಾಮೇಶ್ವರ ಮೊದಲಾದೆಡೆ ದೊರೆತ ಅವಶೇಷಗಳಿಗೆ ಹೆಚ್ಚು ಸಾಮಿಪ್ಯವಾಗಿವೆ. ಹಾಗೆಯೇ ನೆರೆಯ ಬಳ್ಳಾರಿ, ಶಿವಮೊಗ್ಗ, ಧಾರವಾಡ ಜಿಲ್ಲೆಯ ವಿವಿಧ ನೆಲೆಗಳಲ್ಲಿ ದೊರೆತ ಅವಶೇಷಗಳಿಗೂ ಹೋಲಿಕೆಯಾಗುತ್ತವೆ. ಆದುದರಿಂದ ದಾವಣಗೆರೆ ಜಿಲ್ಲೆ ಪ್ರಾಗೈತಿಹಾಸಿಕ ಸಂಸ್ಕೃತಿಯ ಜನರ ಆವಾಸಸ್ಥಾನವಾಗಿತ್ತು ಎಂಬುದರಲ್ಲಿ ಸಂಶಯವಿಲ್ಲ. ಮುಂದೆ ಈ ಜಿಲ್ಲೆಯೊಳಗೆ ಹೆಚ್ಚು ಅಧ್ಯಯನ ನಡೆದಲ್ಲಿ ಹೊಸ ನೆಲೆಗಳು ಬೆಳಕಿಗೆ ಬರುವ ಸಾಧ್ಯತೆಗಳು ಹೆಚ್ಚಾಗಿವೆ.

ಪ್ರಾಗೈತಿಹಾಸಿಕ ಕಾಲದ ಮಾನವನ ಜೀವನಕ್ಕೆ ಸಹಕಾರಿಯಾದ ಇಲ್ಲಿನ ಭೌಗೋಳಿಕ ಅಂಶಗಳು ಮುಂದೆ ತಮ್ಮ ರಾಜ್ಯ ವಿಸ್ತರಿಸಿದ ರಾಜರಿಗೂ ಸಹಕಾರಿಯಾದವು. ಈ ಹಿನ್ನಲೆಯಲ್ಲಿ ಐತಿಹಾಸಿಕ ಯುಗದಲ್ಲಿ ಇಲ್ಲಿನ ರಾಜರು, ಸಾಮಂತರು ಯಾವ ರೀತಿ ಅಧಿಕಾರ ನಿರ್ವಹಿಸಿದರು ? . ಅಂದಿನ ಸವಾಲುಗಳನ್ನು ಎದುರಿಸಲು ಅವರು ತೆಗೆದುಕೊಂಡ ನಿರ್ಧಾರಗಳೇನು ? ಅವರ ಸುಧಾರಣಾ ಕ್ರಮಗಳೇನು ? ಈ ಕುರಿತು ಸಂಕ್ಷಿಪ್ತವಾಗಿ ಮುಂದಿನ ಅಧ್ಯಯಗಳಲ್ಲಿ ವಿವರಿಸಲಾಗಿದೆ.

೩.೨. ಚಾರಿತ್ರಿಕ ಕಾಲ :-

ಕರ್ನಾಟಕದಲ್ಲಿ ಚಾರಿತ್ರಿಕ ಕಾಲ ಕ್ರಿ.ಪೂ. ೪-೩ನೇ ಶತಮಾನಗಳಿಂದ ಆರಂಭವಾಗುತ್ತದೆ. ದಾವಣಗೆರೆ ಜಿಲ್ಲೆಯು ಪ್ರಾಚೀನ ಕಾಲದಿಂದಲೂ ವಿವಿಧ ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟಿತ್ತೆಂಬುದನ್ನು ಅಲ್ಲಿ ದೂರತ ಶಾಸನಗಳು ಉಲ್ಲೇಖಿ ಸುತ್ತವೆ. ಅಷ್ಟೇ ಅಲ್ಲದೆ ಅಲ್ಲಿನ ಪ್ರಾದೇಶಿಕ ಸಾಮಾಂತ ರಾಜ ಮನೆತನಗಳು ಆಳ್ವಿಕೆ ಮಾಡಿದ ಬಗ್ಗೆ ಆಧಾರಗಳಿವೆ . ಪ್ರಾಚೀನ ಕಾಲದಿಂದ ಮದ್ಯಯುಗೀನ ಕಾಲದವರೆಗಿನ ರಾಜಕೀಯ ಇತಿಹಾಸ ವನ್ನು ಕುರಿತಂತೆ ಇಲ್ಲಿ ಅಧ್ಯಾಯನ ಮಾಡಲಾಗಿದೆ.

ಮೌರ್ಯರ ಆಳ್ವಿಕೆ :

ಕ್ರಿಸ್ತ ಪೂರ್ವ ನಾಲ್ಕನೆಯ ಶತಮಾನದಲ್ಲಿ ಮೌರ್ಯ ಸಾಮ್ರಾಜ್ಯವು ಸ್ಥಾಪನೆಯಾಗುವ ಮೊದಲೇ ಉತ್ತರದ ಸಾಮ್ರಾಜ್ಯ ಸ್ಥಾಪಕರು ದಕ್ಷಿಣ ಭಾರತದ ಅನೇಕ ಪ್ರದೇಶಗಳನ್ನು ಗೆದ್ದು, ತಮ್ಮ ಆಳ್ವಿಕೆಯನ್ನು ವಿಸ್ತರಿಸಿದ್ದರು. ಮೌರ್ಯರಿಗಿಂತ ಮೊದಲು ನಂದರು, ಶೈಶುನಾಗರು (ಶಿಶುನಾಗರು) ಕರ್ನಾಟಕದ ಕೆಲವು ಭಾಗಗಳನ್ನು ಆಳಿರುವುದಕ್ಕೆ ಆಧಾರಗಳಿವೆ. ನಂದರನ್ನು ಕೆಳಗುರುಳಿಸಿದ ಮೌರ್ಯರು ಅನುಕ್ರಮವಾಗಿ ದಕ್ಷಿಣ ಭಾರತವನ್ನು ಒಳಗೊಂಡ ಮಗಧ ರಾಜ್ಯದ ಒಡೆಯರಾದರೆಂದು ತಿಳಿದು ಬರುತ್ತದೆ. ಹನ್ನೆರಡನೆಯ ಶತಮಾನದ ಷಿಕಾರಿಪುರದ ಶಾಸನಗಳು ಉಲ್ಲೇಖಿಸುವಂತೆ ಆ ಪ್ರದೇಶದಲ್ಲಿ ಹಿಂದೆ ನಂದರ ಆಳ್ವಿಕೆಯಿದ್ದಿತೆಂಬುದನ್ನು ಸೂಚಿಸುತ್ತವೆ[೧೨]. ಕರ್ನಾಟಕದಲ್ಲಿ ಬ್ರಹ್ಮಗಿರಿ, ಸಿದ್ಧಾಪುರ, ಜಟ್ಟಿಂಗ ರಾಮೇಶ್ವರ (ಚಿತ್ರದುರ್ಗ ಜಿಲ್ಲೆ) ಮಸ್ಕಿ, ಕೊಪ್ಪಳ (ರಾಯಚೂರು ಜಿಲ್ಲೆ) ಉದೆಗೊಳಂ, ನಿಟ್ಟೂರು (ಬಳ್ಳಾರಿ ಜಿಲ್ಲೆ) ಹಾಗು ಸನ್ನತಿ (ಗುಲ್ಬರ್ಗಾ ಜಿಲ್ಲೆ)ಯಲ್ಲಿ ಅಶೋಕನ ಕಾಲದ ಶಾಸನಗಳು ದೊರೆತಿವೆ. ಇವುಗಳಿಂದ ಗುಲಬರ್ಗಾ, ರಾಯಚೂರು, ಬಳ್ಳಾರಿ ಮತ್ತು ಚಿತ್ರದುರ್ಗ ಪ್ರದೇಶಗಳು, ಮೌರ್ಯ ಸಾಮ್ರಾಜ್ಯದ ಅಧೀನದಲ್ಲಿದ್ದವೆಂದು ಹೇಳಬಹುದು. ಚಕ್ರವರ್ತಿ ಬಿಂದುಸಾರನು ದಕ್ಷಿಣಕ್ಕೆ ದಂಡೆತ್ತಿ ಬಂದಾಗ ತ್ರಿರಾಜ್ಯಗಳು ಅಂದರೆ ಚೋಳ, ಚೇರ, ಪಾಂಡ್ಯ ಅವನನ್ನು ತಡೆದವು. ಮೌರ್ಯ ಸಾಮ್ರಾಜ್ಯವು ದಕ್ಷಿಣದ ತುಟ್ಟತುದಿಗೆ ವ್ಯಾಪಿಸಲಿಲ್ಲ ಎಂದು ಇತಿಹಾಸಕಾರರು ತಿಳಿಸುತ್ತಾರೆ. ಒಟ್ಟಿನಲ್ಲಿ ಕುಂತಲವು ಅಶೋಕನ ಆಳ್ವಿಕೆಗೆ ಮೊದಲೇ ಮೌರ್ಯ ಸಾಮ್ರಾಜ್ಯಕ್ಕೆ ಸೇರಿದ್ದಿತೆಂಬುದು ನಿರ್ವಿವಾದವಾದ ವಿಷಯವಾಗಿದೆ[೧೩]. ಕುಂತಲ ಸೀಮೆಯು ಭೀಮ ಮತ್ತು ವೇದಾವತಿ ನದಿಗಳ ಮಧ್ಯದಲ್ಲಿದ್ದು ಪಶ್ಚಿಮ ಘಟ್ಟಗಳನ್ನು ಸರಹದ್ದನ್ನಾಗಿ ಹೊಂದಿದ್ದಿತು. ಚಿತ್ರದುರ್ಗ , ಶಿವಮೊಗ್ಗ, ಬಳ್ಳಾರಿ, ಧಾರವಾಡ, ಬಿಜಾಪುರ ಮೊದಲಾದ ಪ್ರದೇಶಗಳು ಕುಂತಲದಲ್ಲಿ ಸೇರಿದ್ದವು.

ದಾವಣಗೆರೆ ಮತ್ತು ಅದರ ಸುತ್ತಲಿನ ಪ್ರದೇಶಗಳು ಸಹ ಮೌರ್ಯರ ಅಧೀನಕ್ಕೊಳಗಾಗಿದ್ದವೆಂದು ಹೇಳಬಹುದು. ಚಿತ್ರದುರ್ಗ ಜಿಲ್ಲೆಯ ಉತ್ತರ ಭಾಗದಲ್ಲಿ ದೊರೆತಿರುವ ಅಶೋಕನ ಶಾಸನಗಳು ಮೌರ್ಯರ ಆಳ್ವಿಕೆಯನ್ನು ಅಧಿಕೃತವಾಗಿ ಸ್ಪಷ್ಟಪಡಿಸುವ ಆಧಾರಗಳಾಗಿವೆ.

[illegible]

ಅಶೋಕನ ಶಾಸನಗಳು (ಎರಡು ಮತ್ತು ಹದಿಮೂರನೆಯ) ದಕ್ಷಿಣದ ರಾಜ್ಯಗಳ ಹೆಸರುಗಳನ್ನು ತಿಳಿಸುತ್ತವೆ. ಬ್ರಹ್ಮಗಿರಿ, ಸಿದ್ಧಾಪುರ ಮತ್ತು ಜಟ್ಟಿಂಗ ರಾಮೇಶ್ವರ ಎಂಬಲ್ಲಿಯ ಮೌರ್ಯ ಚಕ್ರವರ್ತಿ ಅಶೋಕನ ಶಾಸನಗಳು ಅವನ ಸಾಮ್ರಾಜ್ಯದ ಗಡಿಗಳನ್ನು ಸೂಚಿಸುವ ಗುರುತುಗಳಾಗಿವೆ[೧೪]. ಇತ್ತೀಚೆಗೆ ನಡೆದ ಸಂಶೋಧನೆಗಳಿಂದ ಮೌರ್ಯ ಸಾಮ್ರಾಜ್ಯವು ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮುರು ತಾಲೂಕಿನ ಕೆಲವು ಭಾಗಗಳಲ್ಲದೆ, ಈಗಿನ ದಾವಣಗೆರೆ ಜಿಲ್ಲೆಯ ಕೆಲ ಭಾಗಗಳನ್ನು ಒಳಗೊಂಡಿದ್ದುದಾಗಿ ತಿಳಿದು ಬಂದಿದೆ.

ಜಗಲೂರು ತಾಲೂಕಿನ ಅಸಗೋಡು, ಹಿಂದೆ ಅಶೋಕ ಪಟ್ಟಣವೆಂದು ಕರೆಯಲ್ಪಡುತ್ತಿತ್ತು. ಇಲ್ಲಿ ಬೌದ್ಧ ಧರ್ಮವು ಇದ್ದುದರ ಸೂಚನೆಗಳು ಸಿಕ್ಕುತ್ತವೆ[೧೫]. ಈ ಪ್ರದೇಶ ಮೌರ್ಯ ಸಾಮ್ರಾಜ್ಯಕ್ಕೆ ಸೇರಿದ್ದಿತೆಂದು ಹೇಳಬಹುದು. ಬ್ರಹ್ಮಗಿರಿಯ ಸಮೀಪದಲ್ಲಿ ಇಟ್ಟಿಗೆಗಳಿಂದ ಕಟ್ಟಿದ ಚೈತ್ಯಾಲಯ ಮತ್ತು ಮೌರ್ಯರ ಕಾಲದ ಅನೇಕ ಅವಶೇಷಗಳು ದೊರಕಿದ್ದು, 'ಇಸಿಲ' ಬ್ರಹ್ಮಗಿರಿಯ ಬಳಿಯೇ ಇದ್ದ ನಗರವೆಂಬ ವಾದಕ್ಕೆ ಪುಷ್ಟಿ ದೊರೆತಿದೆ. ಈ ಪ್ರದೇಶದಲ್ಲಿ ಸಿಕ್ಕಿದ ಅವಶೇಷಗಳು ಅಶೋಕನ ಕಾಲಕ್ಕೆ ಸೇರಿದುವೆಂದು ಮಾರ್ಟಿಮರ್ ವೀಲರ್ ಮೊದಲಾದ ಪ್ರಾಕ್ತನ ಶಾಸ್ತ್ರಜ್ಞರು ಅಭಿಪ್ರಾಯಪಟ್ಟಿದ್ದಾರೆ[೧೬]. ಈ ಸ್ಥಳದಲ್ಲಿನ ಬೃಹತ್ ಶಿಲಾಯುಗದ ಸಮಾಧಿಗಳನ್ನು ಜನರು ಮೋರಿಯರ ಮನೆ ಅಥವಾ ಮೌರ್ಯರ ಮನೆ ಎಂದು ಕರೆಯುತ್ತಿರುವುದು ಅರ್ಥಪೂರ್ಣವಾಗಿದೆ.

ಸಂಗಂ ಸಾಹಿತ್ಯ ಕೃತಿಗಳಲ್ಲಿಯೂ ಮೌರ್ಯರು ದಕ್ಷಿಣ ಭಾರತದೊಂದಿಗೆ ಸಂಪರ್ಕವಿರಿಸಿಕೊಂಡಿದ್ದರ ಪ್ರಸ್ತಾಪವು ಬರುತ್ತದೆ[೧೭]. ಅಶೋಕನ ಮರಣಾನಂತರ ಮೌರ್ಯ ಸಾಮ್ರಾಜ್ಯವು ಕ್ಷೀಣವಾಗತೊಡಗಿತು. ದಕ್ಷಿಣ ಭಾರತದಲ್ಲಿ ಮೌರ್ಯ ಸಂತತಿಯ ಅರಸರು ಹಲವಾರು ಶತಮಾನಗಳ ಕಾಲ ಆಳಿದರು. ಕೊಂಕಣದ ಮೌರ್ಯರು ಕ್ರಿ.ಶ. ಏಳನೆಯ ಶತಮಾನದವರೆಗೂ ಆಳಿದರು.

ದಾವಣಗೆರೆ ಸಮೀಪದ ಶಾಮನೂರು, ಬೇತೂರು, ಅಸಗೋಡುಗಳಲ್ಲಿ ಬೌದ್ಧರಿಗೆ ಸಂಬಂಧಿಸಿದ ಕೆಲ ಅವಶೇಷಗಳು ದೊರೆತಿವೆ[೧೮]. ಈ ಜಿಲ್ಲೆಯ ಸಮೀಪದ ಸ್ಥಳಗಳಲ್ಲಿ ಮೌರ್ಯರ ಆಳ್ವಿಕೆಗೆ ಸಂಬಂಧಪಟ್ಟ ಸ್ಪಷ್ಟವಾದ ಆಧಾರಗಳು ದೊರೆತಿರುವುದರಿಂದ ದಾವಣಗೆರೆ ಮತ್ತು ಅದರ ಸುತ್ತಲಿನ ಪ್ರದೇಶಗಳು ಮೌರ್ಯ ಸಾಮ್ರಾಜ್ಯದ ಭಾಗವಾಗಿದ್ದು, ಅವರ ದಕ್ಷ ಆಡಳಿತ ಪದ್ಧತಿಯಿಂದ ಪ್ರಯೋಜನ ಹೊಂದಿದವನ್ನೆಬಹುದು. ಜೊತೆಗೆ ಅವರ ಸಾಂಸ್ಕೃತಿಕ ಪರಂಪರೆಯ ವ್ಯಾಪ್ತಿಗೆ ಒಳಗಾದವು. ಮೌರ್ಯ ಸಾಮ್ರಾಟರ ಉದಾರ ಧ್ಯೇಯಗಳು ಅದರಲ್ಲೂ ಅವರ ಧಾರ್ಮಿಕ ಸಹಿಷ್ಣುತೆ ಇಲ್ಲಿನ ಜನರ ಅನುಕರಣೆಯ ಆದರ್ಶಗಳಾದವು.

ಈ ರೀತಿಯಲ್ಲಿ ದಾವಣಗೆರೆ ಹಾಗು ಸುತ್ತಲಿನ ಪ್ರದೇಶಗಳಲ್ಲಿ ಮೌರ್ಯರ ಶಾಸನ ಮತ್ತಿತರ ಅವಶೇಷಗಳು ಹೆಚ್ಚು ದೊರೆಯದೆ ಹೋದರೂ ಸಹ ಆ ಸಾಮ್ರಾಟರ ಧಾರ್ಮಿಕ, ಸಾಂಸ್ಕೃತಿಕ ಪರಂಪರೆಯೂ ಮುಂದುವರೆಯಿತೆಂದು ಹೇಳಲು ಪಕ್ಕದ ಚಿತ್ರದುರ್ಗ ಪ್ರದೇಶದಲ್ಲಿ ಹೇರಳವಾಗಿ ಶಾಸನಗಳು, ಅವಶೇಷಗಳು ದೊರೆತಿವೆ. ಇದರಿಂದಾಗಿ ಈ ಪ್ರಾಂತ್ಯವು ಹಲವು ಶತಮಾನಗಳ ಕಾಲ ಮೌರ್ಯರ ಆಳ್ವಿಕೆಗೆ ಒಳಪಟ್ಟಿತ್ತೆಂದು ಹೇಳಬಹುದು.

ಶಾತವಾಹನರ ಆಳ್ವಿಕೆ :-

ಮೌರ್ಯ ಸಾಮ್ರಾಜ್ಯ ಪತನವಾದ ನಂತರ ಕ್ರಿ.ಪೂ. ೨೨೦-ಕ್ರಿ.ಶ.ಸು. ೨೩೦ರವರೆಗೆ ಅಂದರೆ ಸುಮಾರು ೪೫೦ ವರ್ಷಗಳ ದೀರ್ಘಕಾಲ ಶಾತವಾಹನರು ಭಾರತದಲ್ಲಿ ರಾಜ್ಯವಾಳಿದರು. ಡಾ. ಸುಕುಂಥಕರ್‌ರವರು ಶಾತವಾಹನರ ಕುಟುಂಬ ಕನ್ನಡ ಪ್ರದೇಶದಿಂದ ಬಂದಿದೆ ಎಂದು ಹೇಳಿದ್ದಾರೆ. ರಾಜಶೇಖರನ ಕಾವ್ಯ ಮೀಮಾಂಸೆಯಲ್ಲಿ , ವಾತ್ಸ್ಯಾಯನ ಕಾಮಸೂತ್ರದಲ್ಲಿ, ಪ್ರಾಕೃತ ಗಥಸಪ್ತಸತಿಯಲ್ಲಿ 'ಹಲ' ಕುಂತಲದ ರಾಜನೆಂದು ತಿಳಿಸಿದೆ. ಪುರಾಣದಲ್ಲಿ ಗೌತಮಿ ಪುತ್ರ ಶಾತಕರ್ಣಿ ಕುಂತಲ ಪ್ರದೇಶವನ್ನು ಆಳಿತ್ತಿದ್ದ ಬಗ್ಗೆ ಗೊತ್ತಾಗುತ್ತದೆ. ಕರ್ನಾಟಕದ ಬಹುಭಾಗವನ್ನಾಳಿದ ಮೊಟ್ಟಮೊದಲನೆಯ ಪ್ರಮುಖ ರಾಜವವಂಶದವರಾದ ಈ ಶಾತವಾಹನರು ತಮ್ಮನ್ನು ' ಕುಂತಳ ಸ್ವಾಮಿ 'ಗಳೆಂದೂ ಕರೆದುಕೊಂಡದ್ದುಂಟು. (ಇವರಿಗೆ ಆಂಧ್ರರು, ಆಂಧ್ರ ಭೃತ್ಯರು, ಶಾತಕರ್ಣಿಗಳು ಎಂದು ಕರೆಯಲಾಗಿದೆ). ಸುಮಾರು ಮೂವತ್ತು ಮಂದಿ ದೊರೆಗಳಿದ್ದ ಈ ಮನೆತನದ ಬಗ್ಗೆ ಇದುವರೆಗೆ ದೊರೆತಿರುವ ಶಾಸನಗಳು ಅತ್ಯಲ್ಪ.

ದಾವಣಗೆರೆ ಜಿಲ್ಲೆಯಲ್ಲಿ ಶಾತವಾಹನರ ಆಳ್ವಿಕೆ ಇತ್ತೆ? ಎಂಬುದರ ಬಗ್ಗೆ ಹೆಚ್ಚು ಶಾಸನಗಳು ದೊರೆತಿಲ್ಲ. ಆದರೆ ಬಳ್ಳಾರಿ ಜಿಲ್ಲೆಯ ಪುಲಮಾಯಿ ಶಾಸನದಿಂದ ಶಾತವಾಹನರ ಕೊನೆಯ ಅರಸರು ತಮ್ಮ ಆಳ್ವಿಕೆಯನ್ನು ಇಲ್ಲಿಯವರೆಗೆ ವಿಸ್ತರಿಸಿದ್ದರೆಂದು ಹೇಳಬಹುದು. ಪುರಾತಾತ್ವಿಕ ಆಧಾರಗಳಾದ ನಾಣ್ಯಗಳು. ಕಟ್ಟಡಗಳು , ದೇವಾಲಯಗಳು, ಅಲಂಕಾರಿಕ ವಸ್ತುಗಳು ಇತ್ಯಾದಿಗಳು ನಮಗೆ ದೊರೆತಿದ್ದರಿಂದ ಹಾಗು ಈಗಿನ ಚಿತ್ರದುರ್ಗ ಜಿಲ್ಲೆಯಲ್ಲಿ ಎರಡು ಕಡೆ ನಡೆದ ಭೂ-ಶೋಧನೆಯಿಂದ ಶಾತವಾಹನರ ಬಗೆಗೆ ಅನೇಕ ಮಹತ್ವದಾಯಕ ಅಂಶಗಳು ಹೊರಬಿದ್ದಿವೆ. ಈ ಹಿನ್ನಲೆಯಿಂದ ತುಲನಾತ್ಮಕ ಅಧ್ಯಯನ ಮಾಡಿ ಶಾತವಾಹನರ ಚರಿತ್ರೆಯನ್ನು ನಿರೂಪಿಸಬಹುದು. ಚಿತ್ರದುರ್ಗ ತಾಲೂಕಿನ ಚಿಪ್ಪನಕೆರೆಯ ಅನ್ವೇಷಣೆ ನಡೆಸಿದ ಫಲವಾಗಿ ಚಿಪ್ಪಿನಕೆರೆ ಒಂದು ಆದಿ ಇತಿಹಾಸದ ನೆಲೆಯೆಂದು ತಿಳಿಯಿತು. ಚಿಪ್ಪನಕೆರೆ ನೆಲೆಯಲ್ಲಿ ಶಾತವಾಹನರ ಕಾಲಕ್ಕೆ ಸೇರಿದ ಸೀಸದ ನಾಣ್ಯಗಳು , ಕಾರ್ಲೆನಿಯನ್, ಆಗೇಟ್‌ದಿಂದ ತಯಾರಿಸಲಾದ ಮಣಿಗಳು ಮತ್ತು ಕೆಲ ಬಿಳಿ ಬಣ್ಣದ ಮಡಿಕೆಗಳು ದೊರೆತಿವೆ. ಇದರಿಂದಾಗಿ ಚಿಪ್ಪನಕೆರೆ ಮತ್ತು ಅದರ ಸುತ್ತಲಿನ ಪ್ರದೇಶ ಶಾತವಾಹನರ ಕಾಲಕ್ಕೆ ಸೇರಿರಬಹುದೆಂದು ಊಹಿಸಿದ್ದಾರೆ[೧೭]. ಹಾಗೇ ಜಗಲೂರು ತಾಲೂಕಿನ

ಆಕನೂರು ಗ್ರಾಮದ ಬಳಿ ಇದೇ ಕಾಲದ ಬಿಳಿ ಬಣ್ಣದ ರೇಖಾ ಚಿತ್ರಗಳನ್ನೊಳಗೊಂಡ ಮಡಿಕೆಗಳು ದೊರೆತಿವೆ[೨೦]. ಈಗಿನ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನಲ್ಲಿರುವ ಬ್ರಹ್ಮಗಿರಿ ಮತ್ತು ಚಿತ್ರದುರ್ಗ ನಗರದ ಪಶ್ಚಿಮಕ್ಕಿರುವ ವಿಸ್ತಾರವಾದ ಕಲ್ಲುಗುಡ್ಡಗಳ ಸಾಲಿನಲ್ಲಿರುವ ಚಂದ್ರವಳ್ಳಿ ಉತ್ಖನನಗಳಿಂದಾಗಿ ಶಾತವಾಹನರ ಆಳ್ವಿಕೆಯ ಮೇಲೆ ಹೆಚ್ಚಿನ ಬೆಳಕು ಬೀರಿದಂತಾಗಿದೆ. ಡಾ. ಎಂ. ಎಚ್. ಕೃಷ್ಣರವರು ಚಂದ್ರವಳ್ಳಿಯಲ್ಲಿ ದೊರೆತ ಶಾತವಾಹನರ ಮತ್ತು ಅವರ ಮಾಂಡಲೀಕರ ನಾಣ್ಯಗಳನ್ನು ,ಪ್ರಾಚ್ಯವಸ್ತು ವಿಶೇಷಗಳನ್ನು ಕೂಲಂಕಷವಾಗಿ ಅಭ್ಯಾಸ ಮಾಡಿದ್ದಾರೆ. ಚಂದ್ರವಳ್ಳಿಯಲ್ಲಿ ಶಾತವಾಹನರ ನಾಣ್ಯಗಳು, ರೋಮನ್ ಚಕ್ರವರ್ತಿಗಳಾದ ಅಗಸ್ಟಸ್ (ಕ್ರಿ.ಪೂ. ೨೭-೧೪ ಕ್ರಿ.ಶ) ಮತ್ತು ಟೈಬೀರಿಯಸ್ (ಕ್ರಿ.ಶ೧೪-೩೭)ರ ನಾಣ್ಯಗಳು, ಅಚ್ಚೊತ್ತಿದ ನಾಣ್ಯಗಳು, ' ರೌಲೆಟೆಡ್ ' ಹಾಗು ಬಿಳಿಬಣ್ಣದ ಚಿತ್ರಗಳುಳ್ಳ ಮಣ್ಣಿನ ಪಾತ್ರೆಗಳು ನಂತರ ಮಾಡಿದ ಉತ್ಖನನದಲ್ಲಿ ಪುನಃ ದೊರೆತಿವೆ.

ಒಟ್ಟಿನಲ್ಲಿ ಚಿತ್ರದುರ್ಗ ಜಿಲ್ಲೆ ಶಾತವಾಹನರ ಆಳ್ವಿಕೆಗೊಳಪಟ್ಟಿದ್ದು, ಕ್ರಿ.ಶ. ಸುಮಾರು ೨೦೦ರ ತರುವಾಯ ಈ ಜಿಲ್ಲೆಯ ಚಂದ್ರವಳ್ಳಿಯನ್ನು ಅವರು ವಾಸಸ್ಥಾನವನ್ನಾಗಿ ಮಾಡಿಕೊಂಡಿರಬಹುದೆಂದು ಹೇಳಬಹುದು. ಶಾತವಾಹನರ ಸಾಂಸ್ಕೃತಿಕ ಅವಶೇಷಗಳು ದೊರೆತ ಪ್ರಮಾಣವನ್ನು ಗಮನಿಸಿದರೆ, ಚಂದ್ರವಳ್ಳಿ ಅವರ ರಾಜಧಾನಿಗಳಲ್ಲಿ ಒಂದಾಗಿತ್ತೆಂದೂ ಊಹಿಸಬಹುದು[೨೧]. ಬನವಾಸಿಯಂತೆ ಚಂದ್ರವಳ್ಳಿಯೂ ಆ ಕಾಲದ ವಾಣಿಜ್ಯ ಕೇಂದ್ರವಾಗಿದ್ದಿರಬಹುದು. ಈ ವಾಣಿಜ್ಯ ಕೇಂದ್ರವು ರೋಮ್ ಮುಂತಾದ ಹೊರ ದೇಶಗಳೊಡನೆ ವ್ಯಾಪಾರ ಸಂಪರ್ಕವನ್ನಿಟ್ಟುಕೊಂಡಿದ್ದಿತ್ತೆಂದು ಅಲ್ಲಿ ದೊರೆತಿರುವ ಕೆಲ ನಾಣ್ಯಗಳ ಆಧಾರದಿಂದ ಹೇಳಬಹುದು. ದಾವಣಗೆರೆ ಜಿಲ್ಲೆಯ ಜಗಲೂರು ತಾಲೂಕಿನ ಆಕನೂರು, ಹಾಗು ಹೊನ್ನಾಳಿ ತಾಲೂಕಿನ ಬೆಳಗುತ್ತಿಯಲ್ಲಿ ಇವರ ಕಾಲಕ್ಕೆ ಸೇರಿದ ಮಡಿಕೆ ಚೂರುಗಳು ದೊರೆತಿವೆ. ಅವುಗಳಲ್ಲಿ ಕಪ್ಪು ಕೆಂಪು ಬಣ್ಣದ ಮಡಿಕೆಗಳು ಬಿಳಿ ವರ್ಣದ ರೇಖಾಚಿತ್ರಗಳನ್ನು ಒಳಗೊಂಡಿದ್ದಾವೆ. ಹೀಗೆ ದಾವಣಗೆರೆ ಜಿಲ್ಲೆಯಲ್ಲಿ ಈ ರಾಜರ ಆಳ್ವಿಕೆಗೆ ಸಂಬಂಧಿಸಿದಂತೆ ಹೆಚ್ಚು ಸ್ಪಷ್ಟ ಆಧಾರಗಳು ದೊರೆಯದೇ ಇದ್ದರೂ ಸಹ ಸಮೀಪದ ಚಿತ್ರದುರ್ಗ ಜಿಲ್ಲೆಯಲ್ಲಿ ಹೆಚ್ಚು ಸ್ಪಷ್ಟವಾದ ಆಧಾರಗಳು ದೊರೆತಿವೆ. ಈ ಸಾಂಸ್ಕೃತಿಕ ಅವಶೇಷಗಳನ್ನು ಆಧಾರವಾಗಿಟ್ಟುಕೊಂಡು ಶಾತವಾಹನರ ಆಳ್ವಿಕೆ ಹಿಂದೆ ಈಗಿನ ದಾವಣಗೆರೆಯ ಕೆಲ ಸ್ಥಳಗಳಿಗೂ ವಿಸ್ತರಿಸಿತ್ತು ಎಂದು ಹೇಳಬಹುದಾಗಿದೆ.

ಕದಂಬರ ಆಳ್ವಿಕೆ :

ಕರ್ನಾಟಕದ ಚರಿತ್ರೆಯಲ್ಲಿ ಇತರೆ ರಾಜವಂಶಗಳಂತೆ ಕದಂಬರು ಕ್ರಿ.ಶ. ೪ ರಿಂದ ೬ನೇ ಶತಮಾನದವರೆಗೆ ಆಳ್ವಿಕೆ ನಡೆಸಿ,ತಮ್ಮದೇ ಆದ ಸ್ಥಾನವನ್ನು ಗಿಟ್ಟಿಸಿಕೊಂಡಿದ್ದಾರೆ. ಇಲ್ಲಿ ಮುಖ್ಯವಾಗಿ ಚರ್ಚೆಗೆ ಗ್ರಾಸವಾಗಬೇಕಿರುವುದು ದಾವಣಗೆರೆ ಜಿಲ್ಲೆಯವರೆಗೆ ಇವರ ಆಳ್ವಿಕೆ ವಿಸ್ತರಿಸಿತ್ತೆಂಬುದು ಇದಕ್ಕೆ ಆಧಾರವಾಗಿವೆ ಎಂಬಂತೆ ಇಲ್ಲಿ ಕೆಲ ಶಾಸನಗಳು ದೊರೆತಿವೆ. ಹಾಗೆಯೇ ಇವುಗಳಿಗೆ ಪೂರಕವೆಂಬಂತೆ ಕೆಲ ಸ್ಮಾರಕಗಳು ಸಹ ಉಳಿದುಕೊಂಡಿವೆ. ಹಾಗಾಗಿ ಲಭ್ಯ ಆಧಾರಗಳನ್ನು ಅನುಸರಿಸಿ, ಇವರ ಚರಿತ್ರೆಯನ್ನು ರಚಿಸುವುದು ಅನಿವಾರ್ಯವಾಗಿದೆ.

ಶಾತವಾಹನರ ಆಳ್ವಿಕೆ ೩ನೆಯ ಶತಮಾನದ ಹೊತ್ತಿಗೆ ಮುಕ್ತಾಯಗೊಂಡು ಅವರ ಸಾಮ್ರಾಜ್ಯ ಹರಿದು ಹಂಚಿ ಹೋಗುತ್ತಿದ್ದ ಹಾಗೆಯೇ ಈ ಸಾಮ್ರಾಜ್ಯದ ದಕ್ಷಿಣ ಮತ್ತು ಪಶ್ಚಿಮ ಭಾಗಗಳ ಒಡೆತನವು ಆಗತಾನೆ ತಲೆ ಎತ್ತಿದ ಕದಂಬರ ವಶವಾಯಿತು. ಹೀಗೆ ಕದಂಬರ ಅಧೀನಕ್ಕೊಳಪಟ್ಟ ಭಾಗಗಳಲ್ಲಿ ದಾವಣಗೆರೆ ಜಿಲ್ಲೆಯೂ ಒಂದು ಎನ್ನಬಹುದು.

ಈ ವಂಶದಲ್ಲಿ ಕೆಲ ಅರಸರು ಆರಂಭದಲ್ಲಿ ಆಳ್ವಿಕೆ ನಡೆಸಿದರೂ ಸಹ ಇವರಲ್ಲಿ ಅತ್ಯಂತ ಪರಾಕ್ರಮಿಯಾಗಿ ಅಂದು ಪ್ರಬಲರಾಗಿದ್ದ ಪಲ್ಲವರನ್ನು ಸದೆಬಡಿದು, ವಿಸ್ತಾರವಾದ ರಾಜ್ಯವನ್ನು ಕಟ್ಟಿ, ಕದಂಬ ರಾಜ್ಯ ಸಂಸ್ಥಾಪಕನೆಂದು ಕೀರ್ತಿಪಡೆದವನು ಮಯೂರಶರ್ಮ. ಇವನು ವಿದ್ಯಾಭ್ಯಾಸಕ್ಕೆ ಪಲ್ಲವ ರಾಜ್ಯಕ್ಕೆ ಹೋಗಿ ಅಲ್ಲಿ ತನಗಾದ ಅವಮಾನದ ಸೇಡು ತೀರಿಸಿಕೊಳ್ಳಲು ಪಲ್ಲವರೊಡನೆ ಹೋರಾಡಿ ಸ್ವತಂತ್ರವಾದ ರಾಜ್ಯ ಸ್ಥಾಪಿಸಿದ ವಿವರ ತಾಳಗುಂದದ ಶಾಂತಿವರ್ಮನ ಶಾಸನದಲ್ಲಿ ವರ್ಣಿತವಾಗಿದೆ. ಆದರೆ ಮಯೂರ ಶರ್ಮನ ಕಾಲದಲ್ಲಿಯೇ ಅವನು ಬರೆಯಿಸಿದ ಶಾಸನಗಳು ಬೇರೆಲ್ಲೂ ದೊರೆಯದಿದ್ದರೂ ಚಿತ್ರದುರ್ಗ ಬೆಟ್ಟದ ಪಶ್ಚಿಮ ತಪ್ಪಲಿನಲ್ಲಿನ ಚಂದ್ರವಳ್ಳಿಯ ಬಳಿ ಇರುವ ಎತ್ತರವಾದ ಬಂಡೆಯ ಮೇಲೆ ಈತನ ಶಾಸನ ದೊರಕಿದೆ. ಈ ಶಾಸನ ಚಿಕ್ಕದಾದರೂ ಕದಂಬರ ಆರಂಭದ ಇತಿಹಾಸವನ್ನು ತಿಳಿಸುವಲ್ಲಿ ಅಮೂಲ್ಯವೆನಿಸಿದೆ[೨೨]. ಕದಂಬರ ಶಾಸನಗಳು ಸಾಮಾನ್ಯವಾಗಿ ತಮ್ಮ ಮೂಲ ಪುರುಷನನ್ನು ಮಯೂರ ವರ್ಮನೆಂದೇ ಉಲ್ಲೇಖಿಸುತ್ತವೆ.

ಚಿತ್ರದುರ್ಗದಲ್ಲಿ ದೊರೆತ ಶಾಸನದಷ್ಟೇ ಪ್ರಮುಖ ಮತ್ತು ಮಹತ್ವದ ಶಾಸನಗಳು ದಾವಣಗೆರೆ ಜಿಲ್ಲೆಯೊಳಗಡೆ ದೊರೆತಿದ್ದು, ಕದಂಬರ ಆಳ್ವಿಕೆಯಲ್ಲಿ ಈ ಜಿಲ್ಲೆ ವಿಶಿಷ್ಟ ಸ್ಥಾನ ಪಡೆದುಕೊಂಡಿತ್ತೆಂದು ಹೇಳಬಹುದು. ದಾವಣಗೆರೆ ತಾಲೂಕು ಅಣಜಿಯಲ್ಲಿ ದೊರೆತಿರುವ ಶಿವನಂದವರ್ಮನ ಶಾಸನವು ಕದಂಬರ ಇತರೆ ಶಾಸನಗಳ ರಚನಾ ಶೈಲಿಯಲ್ಲಿಯೇ ರಚಿತವಾಗಿದೆ. ಈ ಶಾಸನವು ಐತಿಹಾಸಿಕವಾಗಿ ಹಾಗು ವಸ್ತು - ವಿಶೇಷತೆಯಲ್ಲಿ ವಿಶಿಷ್ಠವಾದುದಾಗಿದೆ. ನೊಣಕ್ಕಸ ಪಲ್ಲವನಿಗೂ, ಕದಂಬ ಕೃಷ್ಣವರ್ಮನಿಗೂ ತುಮುಲ ಯುದ್ಧ

ನಡೆದು ಆ ಯುದ್ಧದಲ್ಲಿ ಕೃಷ್ಣರ್ಮನ ಸೈನ್ಯವು ಸಂಪೂರ್ಣವಾಗಿ ಸೋತುಹೋದುದನ್ನು ಈ ಶಾಸನ ವರ್ಣಿಸುತ್ತದೆ. ಹಾಗೆ ಸೋಲುಂಟಾದಾಗ ಶಿವಾನಂದ ವರ್ಮನು ಭಗ್ನ ಹೃದಯನಾಗಿ, ದರ್ಭಶಯನನಾಗಿ, ಭೋಗ ವಿಶಕ್ತ ಮಾನಸನಾಗಿ ಸ್ವರ್ಗ ಪ್ರಾಪ್ತನಾದ ವಿಷಯವನ್ನು ಶಾಸನ ಹೃದಯಂಗಮವಾಗಿ ವರ್ಣಿಸುತ್ತದೆ[೨೩]. ಇಲ್ಲಿ ನೊಣಕ್ಕಸ ಪಲ್ಲವನೊಡನೆ ಯುದ್ಧವಾಡಿದ ಕದಂಬ ಕೃಷ್ಣವರ್ಮನು ತ್ರಿಪರ್ವತದಿಂದ ಆಳುತ್ತಿದ್ದು, ಈತ ಕದಂಬರ ಒಂದು ಶಾಖೆಗೆ ಸೇರಿದವನೆಂದು ತಿಳಿಯಲಾಗಿದೆ. ಈ ಸೋಲಿನ ಫಲವಾಗಿ ಮರಣ ಹೊಂದಿದ ಶಿವನಂದವರ್ಮ ಅಥವಾ ಶಿವಸ್ಕಂದವರ್ಮನು ಕೇಕೆಯ ಕುಲದವನೆಂದೂ, ಪರಮ ಮಹೇಶ್ವರನೆಂದೂ, ಸೋಮವಂಶಕ್ಕೆ ಸೇರಿದವನೆಂದೂ ಶಾಸನ ತಿಳಿಸುತ್ತದೆ. ಬಹುಶಃ ಕೇಕೆಯ ರಾಜಪುತ್ರಿಯನ್ನು ಮದುವೆಯಾಗಿದ್ದ ಕೃಷ್ಣವರ್ಮನಿಗೆ ಇವನು ಪಲ್ಲವರ ವಿರುದ್ಧ ಯುದ್ಧದಲ್ಲಿ ಸಹಾಯ ನೀಡಿ ಅಲ್ಲಿ ಉಂಟಾದ ಸೋಲಿನಿಂದ ನಿರಾಸೆಗೊಂಡು ತನ್ನ ಪ್ರಾಣಾರ್ಪಣೆ ಮಾಡಿದಂತೆ ತೋರುತ್ತದೆ. ಇವನನ್ನು 'ವೀರ್ಯ ಶೌರ್ಯ ವಿಕ್ರಮ ಪ್ರತಾಪ' ಗಳಿಂದ ಕೂಡಿದವನೆಂದು ಶಾಸನ ಶ್ಲಾಘಿಸುತ್ತದೆ. ಈ ಶಾಸನದ ಭಾಷೆ ಸಂಸ್ಕೃತವಾಗಿದ್ದರೂ ಶೈಲಿ ಸರಳವಾಗಿದೆ. ಈ ಶಾಸನದ ಕೊನೆಯಲ್ಲಿ ಬರುವ 'ಮನುಷ್ಯನ ಯಶಸ್ಸು ಎಲ್ಲಿಯವರೆಗೆ ಲೋಕದಲ್ಲಿ ಪ್ರಚಲಿತದಲ್ಲಿರುವುದೂ ಅಲ್ಲಿಯವರೆಗೆ ಅವನು ಸ್ವರ್ಗ ಸುಖವನ್ನು ಅನುಭವಿಸುತ್ತಾನೆ' ಎಂಬ ವಾಕ್ಯ ಸರ್ವಕಾಲಿಕ ಸತ್ಯವಾಗಿದೆ. ರಾಜಕೀಯ ಚರಿತ್ರೆಯ ಜೊತೆಗೆ ಸಾಮಾಜಿಕ, ಧಾರ್ಮಿಕ ನಡವಳಿಕೆಗಳು ಹೇಗಿದ್ದವು ಎಂಬುದಕ್ಕೆ ಈ ಶಾಸನ ಕೈಗನ್ನಡಿ ಎನ್ನಬಹುದು. ಅಣಜಿಯಲ್ಲಿನ ಕೋಟೆ ಮತ್ತು ಕೆಲ ಅವಶೇಷಗಳು ಇವರ ಕಾಲದ್ದೆನ್ನಬಹುದು[೨೪].

ಇದೇ ದಾವಣಗೆರೆ ತಾಲೂಕಿನ 'ಕಾಶೀಪುರ' ಎಂಬ ಗ್ರಾಮದಲ್ಲಿ ಮೂರು ಹಲಗೆಯುಳ್ಳ, ಸಿಂಹ ಲಾಂಛನವುಳ್ಳ ರವಿ ಮಹಾರಾಜನ ತಾಮ್ರ ಶಾಸನ ದೊರೆತಿದೆ. ರವಿ ಮಹಾರಾಜ ಅಥವಾ ರವಿವರ್ಮನು ಕದಂಬ ರಾಜಮನೆತನದಲ್ಲಿ ಮತ್ತೊಬ್ಬ ಪ್ರಸಿದ್ಧ ದೊರೆಯಾಗಿದ್ದಾನೆ. ಇವನ ಹಲವು ತಾಮ್ರ ಶಾಸನಗಳು, ಶಿಲಾ ಶಾಸನಗಳು ಬೇರೆಡೆ ದೊರೆತಿವೆ. ರವಿವರ್ಮನ ಕಾಲಕ್ಕೆ ಉಚ್ಚಂಗಿಯು ಬನವಾಸಿ ಕದಂಬರ ಮತ್ತೊಂದು ಮುಖ್ಯ ಪಟ್ಟಣವಾಗಿದ್ದಿತು. ರವಿವರ್ಮನ ತಾತ ಕುಮಾರವರ್ಮನು ಉಚ್ಚಂಗಿಯಿಂದ ಆಳಿದ ಮನೆತನದ ಮೂಲಪುರುಷನಾಗಿದ್ದಾನೆಂದು 'ಕದಂಬ ಕುಲ' ಬರೆದ ಮೊರೇಸ್ ಅವರ ಅಭಿಪ್ರಾಯ. ಆದರೆ ಬನವಾಸಿಯಿಂದಲೇ ಆಳಿದ ರವಿವರ್ಮನಂತೆ ಉಚ್ಚಂಗಿಯಿಂದಲೂ ಶಾಸನಗಳನ್ನು ನೀಡಿರುವುದನ್ನು ನೋಡಿದರೆ, ಉಚ್ಚಂಗಿಯು ಕದಂಬ ಪ್ರಾಂತ್ಯದ ಒಂದು ಮುಖ್ಯ ಪಟ್ಟಣವಾಗಿದ್ದು, ಮಾಂಧಾತ, ರವಿವರ್ಮ ಮೊದಲಾದವರು ಯುವರಾಜರಾಗಿದ್ದಾಗ ಆಳುತ್ತಿದ್ದಿರಬೇಕು. ಕಾಶೀಪುರದ ಶಾಸನವನ್ನು ರವಿ ಮಹಾರಾಜನು ತನ್ನ ಆಳ್ವಿಕೆಯ ಆರಂಭ ಕಾಲದಲ್ಲಿಯೇ ಬರೆಸಿರಬೇಕು. ಇದರಲ್ಲಿ ಅವನ ಬಿರುದು, ವರ್ಣನೆಗಳು ಹೆಚ್ಚಾಗಿ ಕಂಡುಬರುವುದಿಲ್ಲ. ಈ ದುರ್ಮಾಯ ಎಂಬ ಗ್ರಾಮವು ಬಹುಶಃ ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲೂಕಿನಲ್ಲಿರುವ ದುಮ್ಮಿ ಆಗಿರಬೇಕು. ಆಸಂದಿ ವಿಷಯವು ಚಿತ್ರದುರ್ಗ ಜಿಲ್ಲೆಯ ದಕ್ಷಿಣ ಭಾಗಗಳನ್ನು, ಕಡೂರು ತಾಲೂಕಿನ ಭಾಗಗಳನ್ನೊಳಗೊಂಡಿತ್ತು.

[illegible]

[illegible]

ದಾನ ಪಡೆದವನು ಪ್ರಸಿದ್ಧವಾದ ಕುಲದಲ್ಲಿ ಹುಟ್ಟಿದವನೂ, ಶುದ್ಧ ಚರಿತನು, ವೇದಗಳಲ್ಲಿ ಪಾರಂಗತನೂ, ಪ್ರಾಪಂಚಿಕ ಬಂಧನಗಳಿಂದ ವಿಮುಕ್ತನೂ ಆಗಿದ್ದ ತ್ರಿಯಂಭಕ ಸ್ವಾಮಿ[೨೫]. ಆರನೆಯ ಶತಮಾನದ ಕೊನೆಯವರೆಗೆ ಆಳಿದ ಪೂರ್ವ ಕದಂಬರು ಬಹುಶಃ ಚಾಲುಕ್ಯರಿಗೆ ಸೋತು ಹಿಮ್ಮೆಟ್ಟಿದ್ದರು. ಆದರೂ ಅವರ ಮನೆತನದ ಕೆಲವು ಸಣ್ಣಪುಟ್ಟ ಅರಸರು ಈ ಜಿಲ್ಲೆಯಲ್ಲಿ ಪ್ರಾಬಲ್ಯ ಅರಸರ ಸಾಮಂತರಾಗಿ ಆಳುತ್ತಿದ್ದ ಕುರುಹುಗಳು ಅಲ್ಲಲ್ಲಿ ಕಂಡು ಬರುತ್ತವೆ. ೧೨ನೆಯ ಶತಮಾನದಲ್ಲಿ ದಾವಣಗೆರೆ ತಾಲೂಕಿನ ಕೆಲವು ಭಾಗಗಳನ್ನು ಸೋಮನೃಪನೆಂಬ ಮತ್ತೊಬ್ಬ ಕದಂಬ ರಾಜನು ಆಳುತ್ತಿದ್ದುದು ಕಂಡು ಬರುತ್ತದೆ. ಇವನು ಕಳಚೂರಿ ಬಿಜ್ಜಳನ ಆಳ್ವಿಕೆಯಲ್ಲಿ ೧೨೦೦ ಬನವಾಸಿಯನ್ನು ಆಳುತ್ತಿದ್ದ ಕಸಪಯ್ಯನ ಅಧೀನನಾಗಿದ್ದು, ನಾಗರಖಂಡ - ೭೦ ರ ಮನ್ನೆಯಕ್ಕೆ ಅಧಿಪತಿಯಾಗಿದ್ದನು. ಹರಿಹರದಲ್ಲಿರುವ ಇವನ ಶಾಸನವೊಂದು ಕದಂಬ ವಂಶದ ಪೌರಾಣಿಕ ಹಿನ್ನಲೆಯನ್ನು ವರ್ಣಿಸುತ್ತದೆ[೨೬]. ರುದ್ರನಿಗೂ ಭೂದೇವಿಗೂ ಮಯೂರವರ್ಮನು ಕದಂಬ ವೃಕ್ಷದ ಕೆಳಗೆ ಮಗನಾಗಿ ಹುಟ್ಟಿದನು. ಅವನ ಹಣೆಯಲ್ಲಿ ಉರಿಗಣ್ಣಿದ್ದುದರಿಂದ ಅವನಿಗೆ ಮುಕ್ಕಣ್ಣ ಕದಂಬನೆಂಬ ಹೆಸರೂ ಇದ್ದಿತು. ಕದಂಬ ವೃಕ್ಷದ ಸಮುಚ್ಚಯದಲ್ಲಿ ಬೆಳೆದುದರಿಂದ ಕದಂಬ ಕುಲವೇ ಇವನ ಕುಲವಾಯಿತು. ಈ ಮುಕ್ಕಣ್ಣ ಕದಂಬ ಮಯೂರಶರ್ಮನ ವಂಶದಲ್ಲಿ ಅನೇಕರು ಆಳಿದ ಮೇಲೆ ಬರ್ಮದೇವನು ಆಳಿದನು. ಆ ಬರ್ಮದೇವ ಮತ್ತು ಕಾಳಲದೇವಿಗೆ ಬೊಪ್ಪದೇವ ಭೂಪನೂ, ಆಬೊಪ್ಪದೇವ ಮತ್ತು ಸಿರಿದೇವಿಗೆ ಸೋಯಿದೇವನೂ ಹುಟ್ಟಿದರು. ಈ ಸೋಮನೃಪನು ತತವಿತಾಗತ ವಾದ್ಯ ಶೃತಿ,ಸ್ವರ, ಗ್ರಾಮ ಮೂರ್ಛನಾ, ತಾನ ಮತ್ತು ಗಾನ ಭೇದಗಳಲ್ಲಿ ಅತಿ ಚತುರನೂ, ಭರತನಿಗೆ ಸಮಾನನೂ ಆಗಿದ್ದನೆಂದು ಶಾಸನ ವರ್ಣಿಸುತ್ತದೆ.

ಹರಪನಹಳ್ಳಿಯಿಂದ ಆಗ್ನೇಯ ದಿಕ್ಕಿಗೆ ಸುಮಾರು ೨೮ ಕಿ.ಮೀ. ದೂರದಲ್ಲಿರುವ ಉಚ್ಚಂಗಿದುರ್ಗವಿದೆ. ಒಂದು ಪರ್ವತದ ಕೋಟೆಯಾಗಿದೆ. ಅದೇ ಕದಂಬರ ರಾಜಧಾನಿಯಾಗಿರಬೇಕೆಂದು ಅಂಬೆಯ ಆಶ್ರಿತರಾದ ಕದಂಬರು ಅಂಬೆಯ ನಿವಾಸವಾದ ಹರಪನಹಳ್ಳಿ ತಾಲೂಕು ಉಚ್ಚಂಗಿದುರ್ಗದವರು ಎಂದೂ, ' ಗಿರಿನಾಥ ' ಎಂಬ ಬಿರುದು ಅವರಿಗೆ ಸಲ್ಲತಕ್ಕದ್ದೆಂದು , ಕುಂಬಾಸರವರು ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನದಲ್ಲಿ ಹೇಳಿದ್ದಾರೆ.

ಈ ದುರ್ಗವನ್ನು ಆಳಿದ ಕದಂಬರ ಶಾಸನಗಳು ಇಲ್ಲಿಯೇ ದೊರೆತಿವೆ. ಉಚ್ಚಂಗಿಯಲ್ಲಿ ಆಳುತ್ತಿದ್ದ ವಿಜಯ ಪಾಂಡ್ಯನ ಸಾಮಂತನಾದ ನಾಗತಿಯರಸ ಎಂಬ ಮತ್ತೊಬ್ಬ ಕದಂಬ ರಾಜನ ಹೆಸರು ನಂದಿಕಂಬ ಗ್ರಾಮದಲ್ಲಿ ದೊರೆತ ಶಾಸನದಲ್ಲಿ ಕಂಡು ಬರುತ್ತದೆ. ಈ ನಾಗತ್ಯರಸನು (ನಾಗತಿಯರಸ) ಕದಂಬ ಚಕ್ರವರ್ತಿ ಮಯೂರವರ್ಮನ ವಂಶದವನೆಂದೂ, ಉಚ್ಚಂಗಿ ಗಿರಿನಾಥನೆಂದೂ ವರ್ಣಿತನಾಗಿದ್ದಾನೆ. ಸಾವಿರ ನಾಡಿಗೆ ಮನ್ನೆಯನಾಗಿದ್ದನು. ಇವನ ತಂದೆ ಕೇತರಸ, ತಾಯಿ ಕನಕಬ್ಬೆಯರಸಿ. ಇವನ ಕಿರಿ ಆಯ್ಯಂದಿರು ಹಂಪರಸ ಮತ್ತು ಸತ್ತಿ ಅರಸ. ತಮ್ಮ ಹರಿಯರಸ ಮತ್ತು ಮಕ್ಕಳು ಕೇತರಸ ಮತ್ತು ಮಾಚರಸರು, ಈತನು ಶಂಕರ ನಾರಾಯಣ ಪಾದ ಪಂಕಜ ಭ್ರಮರನಾಗಿದ್ದು, ಹರಿಹರದ ಹರಿಹರೇಶ್ವರ ದೇವರಿಗೆ

ಕ್ರಿ.ಶ. ೧೧೨೧ರಲ್ಲಿ ಕೆಲವು ದತ್ತಿಗಳನ್ನು ಬಿಟ್ಟಿದ್ದಾನೆ. ಈ ಉಚ್ಚಂಗಿ ಪರ್ವತದ ಪಶ್ಚಿಮಕ್ಕೆ ಜಾಲಿಯ ಮರದಡಿಯಲ್ಲಿ ಅತ್ಯಂತ ಪ್ರಾಚೀನ ಕಾಲದ ಶಾಸನ ದೊರೆತಿದ್ದು, ಅದರ ಪ್ರಕಾರ ಕದಂಬ ರಾಜರಲ್ಲಿ ಒಂದನೇ ಕೃಷ್ಣನು ಅಶ್ವಮೇಧಯಾಗ ಮಾಡಿದ್ದು ತಿಳಿದು ಬರುತ್ತದೆ. ಕದಂಬರ ಆಳ್ವಿಕೆಯನ್ನು ನಿರ್ವಚಿಸುವಾಗ ಈ ಜಿಲ್ಲೆಯು ಅವರ ಅಧೀನಕ್ಕೊಳಪಟ್ಟಿತ್ತೆಂಬುದನ್ನು ಮನಗಾಣಬೇಕು.

ಬಾದಾಮಿ ಚಾಲುಕ್ಯರ ಆಳ್ವಿಕೆ :

ಕನ್ನಡ ನಾಡಿನ ಘನತೆವೆತ್ತ ಅರಸುಮನೆತನಗಳಲ್ಲಿ ಚಾಲುಕ್ಯಮನೆತನವು ಒಂದು. ದಕ್ಷಿಣ ಭಾರತದಲ್ಲಿ ಚಾಲುಕ್ಯ ಮನೆತನದ ಪ್ರಭಾವವು ಗಣನೀಯವಾದುದಾಗಿದೆ. ಕ್ರಿ.ಶ. ೬ನೆಯ ಶತಮಾನದಿಂದ ಕ್ರಿ.ಶ. ೮ನೆಯ ಶತಮಾನದವರೆಗೂ, ಪುನಃ ಕ್ರಿ.ಶ. ೧೦ನೆಯ ಶತಮಾನದಿಂದ ಕ್ರಿ.ಶ.೧೨ನೆಯ ಶತಮಾನದವರೆಗೂ ಇವರು ಆಳಿದರು. ಬಾದಾಮಿಯ ಚಾಲುಕ್ಯರು, ಕಲ್ಯಾಣಿ ಚಾಲುಕ್ಯರು ಮತ್ತು ವೆಂಗಿಯ ಚಾಲುಕ್ಯರು ಎಂಬ ಮೂರು ಶಾಖಾ ಮನೆತನಗಳು ಚಾಲುಕ್ಯರಲ್ಲಿ ಕಾಣಬರುತ್ತವೆ. ಅಖಂಡ ಕರ್ನಾಟಕದ ಪ್ರಪ್ರಥಮ ಚಕ್ರವರ್ತಿಗಳಾಗಿ ಬಾದಾಮಿಯ ಚಾಲುಕ್ಯರು ಇನ್ನೂರು ವರ್ಷಗಳ ಕಾಲ ಕ್ರಿ.ಶ. ೫೪೩- ಕ್ರಿ.ಶ. ೭೫೩ ವೈಭವದಿಂದ ಆಳಿದರು. ರಾಷ್ಟ್ರಕೂಟ ದೊರೆ ೨ನೆಯ ಕರ್ಕನನ್ನು ಚಾಲುಕ್ಯ ವಂಶದ ಇಮ್ಮಡಿ ತೈಲಪನು ಅಧಿಕಾರದಿಂದ ಕೆಳಗಿಳಿಸಿ, ಚಾಲುಕ್ಯ ವಂಶವನ್ನು ಪುನಃ ಸ್ಥಾಪಿಸಿದನು. ಅದರ ವೈಭವವನ್ನು ಮತ್ತೆ ಕಾಣುವಂತೆ ಮಾಡಿದನು. ಕಲ್ಯಾಣಿಯನ್ನು ರಾಜಧಾನಿಯನ್ನಾಗಿಟ್ಟುಕೊಂಡು ಆಳಿದುದರಿಂದ ಇವರನ್ನು ಕಲ್ಯಾಣಿಯ ಚಾಲುಕ್ಯರೆಂದು ಕರೆಯುತ್ತಾರೆ. ಇವರೂ ಸಹ ರಾಷ್ಟ್ರಕೂಟರಂತೆ ಎರಡು ಶತಮಾನಗಳ ಮೇಲ್ಪಟ್ಟು ರಾಜ್ಯವನ್ನಾಳಿದರು.

ಬಾದಮಿ ಚಾಲುಕ್ಯರು ತಮ್ಮ ಆಳ್ವಿಕೆಯ ಅವಧಿಯಲ್ಲಿ ದಾವಣಗೆರೆ ಜಿಲ್ಲೆಯ ಕೆಲವು ಪ್ರದೇಶಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದರೆಂಬುವುದನ್ನು ಇಲ್ಲಿನ ಶಾಸನಗಳಿಂದ ತಿಳಿಯಬಹುದು. ಜಯಸಿಂಹನು ಬಾದಾಮಿ ಚಾಲುಕ್ಯ ವಂಶದ ಮೂಲ ಪುರುಷ. ಇವನ ಬಗ್ಗೆ ಖಚಿತ ಸಂಗತಿಗಳು ನಮಗೆ ತಿಳಿದುಬಂದಿಲ್ಲ. ಇವನ ನಂತರ ಅಧಿಕಾರಕ್ಕೆ ಬಂದ ಮೊದಲನೆಯ ಪುಲಕೇಶಿಯು (ಕ್ರಿ.ಶ. ೫೪೦ ರಿಂದ ೫೬೬ರವರೆಗೆ) ಸಮರ್ಥ ದೊರೆ ಎನಿಸಿ, ಉತ್ತಮ ಕಾರ್ಯಗಳನ್ನು ಕೈಗೊಂಡನೆಂದು ಬಾದಾಮಿ ಶಾಸನದಿಂದ ತಿಳಿದುಬರುತ್ತದೆ [೨೬]. ಈತನಿಗೆ ಕೀರ್ತಿ ವರ್ಮ , ಮಂಗಳೇಶ ಎಂಬ ಇಬ್ಬರು ಮಕ್ಕಳಿದ್ದು, ತಂದೆಯ ಮರಣದ ನಂತರ ಆಳ್ವಿಕೆ ನಡೆಸಿದ್ದರೆಂದು ತಿಳಿದುಬರುತ್ತದೆ. ಇವರಾದ ಬಳಿಕ ಪಟ್ಟಕ್ಕೆ ಬಂದ ಇಮ್ಮಡಿ ಪುಲಕೇಶಿಯು ಈ ವಂಶದಲ್ಲಿಯೇ ಶ್ರೇಷ್ಠ ಚಕ್ರವರ್ತಿ [೨೭]. ತಂದೆಯ ಸಾವಿನಿಂದ ನೊಂದ ಪಲ್ಲವರ ನರಸಿಂಹ ವರ್ಮನಿಗೂ ಮತ್ತು ಇಮ್ಮಡಿ ಪುಲಕೇಶಿಗೂ ನಡೆದ ಯುದ್ಧದಲ್ಲಿ ಪುಲಕೇಶಿ ಮರಣ ಹೊಂದಿದ [೨೮].

ಇಮ್ಮಡಿ ಪುಲಕೇಶಿಯ ಮರಣದ ನಂತರ ಈತನ ಮಗ ಒಂದನೇ ವಿಕ್ರಮಾದಿತ್ಯನು (ಕ್ರಿ.ಶ. ೬೫೫ ರಿಂದ ೬೮೧) ಆಳ್ವಿಕೆ ನಡೆಸಿ, ಚಾಲುಕ್ಯ ಮನೆತನದ ಕೀರ್ತಿ ಮತ್ತು ಪ್ರತಿಷ್ಠೆಗಳನ್ನು ಪುನಃ ಉಳಿಸಿಕೊಂಡನು[೩೦]. ಇವನ ನಂತರ ವಿನಿಯಾದಿತ್ಯನು (ಕ್ರಿ.ಶ. ೬೮೧ ರಿಂದ ೬೯೬) ಅಧಿಕಾರಕ್ಕೆ ಬಂದನು . ಇವನ ಕಾಲಕ್ಕೆ ಸೇರಿದ ಶಾಸನವೊಂದು ಹರಿಹರದಲ್ಲಿ ದೊರೆತಿದೆ[೩೧]. ಈ ಶಾಸನವು ಇವರ ವಂಶದ ಮೂಲವನ್ನು ಈ ಮುಂದಿನಂತೆ ವಿವರಿಸುತ್ತದೆ. ಚಾಲುಕ್ಯರು ಮಾನವ್ಯ ಗೋತ್ರದವರು, ಹಾರತಿ ಪುತ್ರರು, ಏಳು ಲೋಕಗಳಿಗೂ ತಾಯಂದಿರಾದ ಸಪ್ತಮಾತೃಕೆಯರಿಂದ ಏಳಿಗೆಯನ್ನು ಪಡೆದವರು. ಕಾರ್ತಿಕೇಯ ನಿಂದ ಕಲ್ಯಾಣ ಪರಂಪರೆಯುಳ್ಳವರು , ಭಗವಂತನಾದ ನಾರಾಯಣನ ಅನುಗ್ರಹದಿಂದ ಪಡೆದ ವರಹ ಲಾಂಛನವನ್ನು ಶತ್ರುಗಳು ಕಂಡಾಕ್ಷಣವೇ ಸೋತ ಕಾರಣದಿಂದ ಸಮಸ್ತ ಭೂ-ಮಂಡಲವನ್ನು ಗೆದ್ದವರು . ಇಂತಹ ಚಾಲುಕ್ಯ ಕುಲದಲ್ಲಿ ಒಂದನೇ ಪುಲಕೇಶಿ ನಂತರ ಇವನ ಮಗ ಒಂದನೇ ಕೀರ್ತಿವರ್ಮ ಇವನಾದ ಮೇಲೆ ಇಮ್ಮಡಿ ಪುಲಕೇಶಿ , ಇವನ ನಂತರ ವಿಕ್ರಮಾದಿತ್ಯ, ಇವನ ನಂತರ ಇವನ ಮಗ ವಿನಿಯಾದಿತ್ಯ ಅಧಿಕಾರಕ್ಕೆ ಬಂದನು. ಈತನು ಅನೇಕ ಬಿರುದುಗಳಿಂದ ರಾಜ್ಯವಾಳುತ್ತಿರುವಾಗ ಶಖವರ್ಷ ೬೧೬ರಲ್ಲಿ (ಕ್ರಿ.ಶ. ೬೯೪) ಹರಿಹರದ ಸಮೀಪ ಕರಂಜಪತ್ರ ಗ್ರಾಮದಲ್ಲಿ ಸೈನ್ಯವನ್ನು ಬೀಡು ಬಿಟ್ಟಿರಲು , ಅಲ್ಲಿನ ಸಾಮಂತ ಅಳುಪ ದೊರೆಯ ವಿಜ್ಞಾಪನೆಯಂತೆ ಕಾರ್ತಿಕ ಮಾಸದ ಹುಣ್ಣಿಮೆಯೆಂದು ವಾತ್ಸಸ ಗೋತ್ರದ ಸೋಮಯಾಜಿ ಶ್ರೀ ವರ್ಮನ ಮೊಮ್ಮಗ , ಮಾರ ಶರ್ಮನ ಪುತ್ರ ವೇದ ವೇದಾಂಗ ಪಾರಂತನಾದ ಈ ಶಾನಶರ್ಮನಿಗೆ ಬನವಾಸಿ ಪ್ರಾಂತ್ಯದ 'ಎಡೆವೊರಿಲ್' ಭಾಗದ 'ಕಿರುಕಾಗಾಮಾಸಿ' ಎಂಬ ಗ್ರಾಮವನ್ನು ಎಲ್ಲಾ ಭಾದೆಗಳಿಂದ ಪರಿಹಾರ ಮಾಡಿ ಹರಿಹರ ದೇವಾಲಯಕ್ಕೆ ದಾನ ನೀಡಲಾಯಿತು. ಸಿರಿಗಾಳು, ಕವ್ವೆಸುರಿಗೊಳ, ಪುಲಿವುತು, ಪೆರ್ಬುತ್ತು, ಆಲ್ದೊರೆ, ನಿತ್ತಕೊಳ, ಆಲ್ಗೊಳ, ನೇರೆಲ್ಗೆರೆ, ಕುರುಪಕೆರೆ, ಅರಕಟ್ಟ ಇವು ದಾನ ನೀಡಿದ ಗ್ರಾಮದ ಮೇರೆಗಳಾಗಿವೆ. ಇದೇ ಶಾಸನದಲ್ಲಿ ಚಾಲುಕ್ಯರಾಜರ ಪರಾಕ್ರಮವನ್ನು ಹೇಳಿದೆ. ಮೊದಲನೆಯ ಪುಲಕೇಶಿ ಅಶ್ವಮೇಧವನ್ನು ಮಾಡಿದ ವಿಷಯ ಅವನ ಸಾಮರ್ಥ್ಯಕ್ಕೆ ದ್ಯೂತಕವಾಗಿದೆ. ಇಮ್ಮಡಿ ಪುಲಕೇಶಿ ಹರ್ಷನನ್ನು ಗೆದ್ದ ವಿಷಯ ಇಲ್ಲಿ ಗಂಭೀರವಾಗಿ ಉಲ್ಲೇಖಗೊಂಡಿದೆ. ಆದರೆ ಪುಲಕೇಶಿಯ ಕೊನೆಯ ದಿನಗಳು ಆತಂಕಕಾರಿಯಾಗಿದ್ದವು. ಪಲ್ಲವ ನರಸಿಂಹ ವರ್ಮನು ವಾತಾಪಿಯನ್ನು ಆಕ್ರಮಿಸಿಕೊಂಡು ಕೆಲವು ಕಾಲ ತಂಗಿದ್ದನು. ಪಲ್ಲವರಿಂದ ಚಾಲುಕ್ಯರಿಗೆ ಆದ ಅಪಮಾನವನ್ನು ಪರಿಹರಿಸಿ, ಪಲ್ಲವರಾಜನನ್ನು ಹಿಮ್ಮೆಟ್ಟಿಸಿದವನು ಪುಲಕೇಶಿಯ ಮಗ ವಿಕ್ರಮಾದಿತ್ಯ. ಇವನಿಗೆ ಬಲಭುಜನಾಗಿ ನಿಂತು ಸಹಾಯ ಮಾಡಿದವನು ಅವನ ಮಗ ವಿನಿಯಾದಿತ್ಯ. ಈ ಶಾಸನಿಂದ ವಿನಿಯಾದಿತ್ಯನ ರಾಜನೀತಿ, ಅವನ ಪರಾಕ್ರಮ, ರಾಜ ವಿಸ್ತಾರದ ಸ್ವರೂಪಗಳು ತಿಳಿದುಬರುತ್ತವೆ.

ವಿನಯಾದಿತ್ಯನ ನಂತರ ವಿಜಯಾದಿತ್ಯನು ಅಧಿಕಾರಕ್ಕೆ ಬಂದನು. ಇವನು ದಕ್ಷಿಣದ ಮೇಲೆ ವಿಜಯ ಸಾಧಿಸಿದ ನೆನಪಿಗಾಗಿ ' ಬೆ(ವೆ)ಂಗಿ ಮಂಡಲೇಶ್ವರ ' ನೆಂಬ ಬಿರುದನ್ನು ಧರಿಸಿದ್ದನೆಂಬುದು ಚನ್ನಗಿರಿ ಶಾಸನದಿಂದ ತಿಳಿದುಬರುತ್ತದೆ[೩೨]. ಇವನ ನಂತರ ಎರಡನೇ ವಿಕ್ರಮಾದಿತ್ಯನು (ಕ್ರಿ.ಶ. ೭೩೩-೭೪೪) ಅಧಿಕಾರಕ್ಕೆ ಬಂದನು.

ಎರಡನೇ ವಿಕ್ರಮಾದಿತ್ಯನ ಆಳ್ವಿಕೆ ನಂತರ ಎರಡನೆಯ ಕೀರ್ತಿ ವರ್ಮ(ಕ್ರಿ.ಶ. ೭೪೪-೭೫೨) ಅಧಿಕಾರಕ್ಕೆ ಬಂದನು. ಚಾಲುಕ್ಯ ವಂಶ ಇವನ ಕಾಲದಲ್ಲಿ ಅವನತಿಯ ಹಾದಿಯನ್ನಿಡಿಯಿತು. ದಿನೇ ದಿನೇ ರಾಜ್ಯದ ಆಡಳಿತವು ಕುಸಿಯ ತೊಡಗಿದಾಗ ಅನೇಕ ಸಾಮಂತರು ಸ್ವತಂತ್ರ ರಾಗ ತೊಡಗಿದರು. ರಾಷ್ಟ್ರಕೂಟ ಮನೆತನದ ದಂತಿದುರ್ಗನು ಕೀರ್ತಿವರ್ಮನನ್ನು ಸೋಲಿಸಿ, ತನ್ನ ಆಧಿಪತ್ಯವನ್ನು ಸ್ಥಾಪಿಸಿದನು. ಈ ಮೇಲಿನ ಶಾಸನಗಳ ಆಧಾರದಿಂದ ಬಾದಾಮಿ ಚಾಲುಕ್ಯರ ಆಳ್ವಿಕೆಯು ಈಗಿನ ದಾವಣಗೆರೆ ಜಿಲ್ಲೆಯಲ್ಲೆಯವರೆಗೆ ವಿಸ್ತರಿಸಿತ್ತು ಎಂದು ಹೇಳಬಹುದು.

ರಾಷ್ಟ್ರಕೂಟರ ಆಳ್ವಿಕೆ :

ಎಂಟನೆಯ ಶತಮಾನದ ಮಧ್ಯಭಾಗದ ವೇಳೆಗೆ ದಖ್ಖನ್ನಿನ ಆಧಿಪತ್ಯವು ಚಾಲುಕ್ಯರ ತತ್ತರಿಸುವ ಕೈಗಳಿಂದ ಜಾರಿ, ರಾಷ್ಟ್ರಕೂಟರ ಕೈಸೇರಿತು. ಅವರ ಪ್ರಾಬಲ್ಯವು ಸುಮಾರಾಗಿ ಹತ್ತನೆಯ ಶತಮಾನದ ಕೊನೆಯವರೆಗೂ ಮುಂದುವರಿದಿತ್ತು. ವಿಂಧ್ಯದ ಉತ್ತರ ಮತ್ತು ದಕ್ಷಿಣಗಳ ಅಸ್ಥಿರ ರಾಜಕೀಯದಲ್ಲಿ ಅವರು ನಿರ್ಣಾಯಕ ಪಾತ್ರವನ್ನು ನಿರ್ವಹಿಸಿದರು. ಅಂದಿನ ರಾಜಕೀಯದಲ್ಲಿ ಗುರ್ಜರರು, ಪ್ರತಿಹಾರರು, ಪಾಲರು, ಗಂಗರು, ವೆಂಗಿ ಚಾಲುಕ್ಯರು, ಪಲ್ಲವರು , ಚೋಳರು ಮತ್ತು ಇತರ ಅನೇಕಾನೇಕ ಸಣ್ಣಪುಟ್ಟ ರಾಜರುಗಳೂ ಇದ್ದರು. ವಾಸ್ತವವಾಗಿ ಈ ಶತಮಾನಗಳಲ್ಲಿ ರಾಜಮನೆತನಗಳ ಮೇಲಾಟದ ಚದುರಂಗದ ಹಾಸಿನಲ್ಲಿ ರಾಷ್ಟ್ರಕೂಟರು ಉತ್ತಮವಾದ ಸ್ಥಾನದಲ್ಲೇ ಇದ್ದಂತೆ ತೋರುತ್ತಿತ್ತು. ಉತ್ತರದಲ್ಲಿ ಅವರು ಮಾಡಿದ ಸಾಹಸಗಳು, ಪಡೆದ ಗೆಲವುಗಳು ವಿಶೇಷವಾಗಿ ಮನ್ನಣೆಗೆ ಪಾತ್ರವಾದದ್ದೇ ಅಲ್ಲದೆ, ದಕ್ಷಿಣದ ಶಕ್ತಿಯೊಂದು ಉತ್ತರದಲ್ಲಿ ಹತೋಟಿಯನ್ನು ಇಟ್ಟುಕೊಂಡ ಸಂದರ್ಭ ಅಪೂರ್ವ ನಿರ್ದೇಶನವಾಯಿತು. ಅದು ಬಹು ಅಲ್ಪಕಾಲವಾದರು ಅಪವಾದವೆನ್ನಿಸುವ ರೀತಿಯಲ್ಲಿ ತನ್ನ ಹತೋಟಿಯನ್ನು ಸ್ಥಾಪಿಸಿತ್ತು. ಅಷ್ಟೇ ಅಲ್ಲದೆ , ಕಲೆ ಮತ್ತು ಸಾಹಿತ್ಯ ಕ್ಷೇತ್ರದಲ್ಲಿಯೂ ತಮ್ಮ ಅನನ್ಯ ಕೊಡುಗೆಗಳಿಂದಾಗಿ ಅವರು ಪ್ರಶಂಸೆಗೊಳಪಟ್ಟಿದ್ದಾರೆ. ಆ ಕಾಲದಲ್ಲಿ ಕಲೆ,ಸಾಹಿತ್ಯಗಳು ಸಮೃದ್ಧವಾದುವು ಜೊತೆಗೆ ವೈವಿಧ್ಯಪೂರ್ಣವೂ ಆಗಿದ್ದವು.

ರಾಷ್ಟ್ರಕೂಟ ಮನೆತನಗಳಲ್ಲಿ ಮಳಖೇಡದ ಶಾಖೆ ಪ್ರಮುಖವಾದುದು[೩೩]. ದಾವಣಗೆರೆ ಜಿಲ್ಲೆಯಲ್ಲಿ ರಾಷ್ಟ್ರಕೂಟರ ಶಾಸನಗಳು ಬಹುಸಂಖ್ಯೆಯಲ್ಲಿ ದೊರೆಯದಿದ್ದರೂ ಈ ಭಾಗದಲ್ಲಿ ಇವರ ಆಳ್ವಿಕೆ ಸುಮಾರು ಕ್ರಿ.ಶ. ೭೯೮ ರಿಂದ ಕ್ರಿ.ಶ ೯೮೨ರವರೆಗೆ ಇದ್ದಿತೆಂದು ಈ ಜಿಲ್ಲೆಯ ವಿವಿಧ ಕಡೆ ದೊರೆತ ಶಾಸನಗಳು ದೃಢಪಡಿಸಿವೆ.

ಚಾಲುಕ್ಯ ಕುಟುಂಬದ ಎರಡನೇ ತೈಲಪನಿಂದ ರಾಷ್ಟ್ರಕೂಟರ ಅರಸ ಎರಡನೇ ಕರ್ಕನು ಯುದ್ಧದಲ್ಲಿ ಸೋತು ರಾಜ್ಯ ಕಳೆದುಕೊಂಡನು. ಕ್ರಿ.ಶ.೯೫ರ ಬಾಗಳಿ ಶ್ರೀ ಕಲ್ಲೇಶ್ವರ ದೇವಾಲಯದ ಒಂದು ಶಾಸನದ ಪ್ರಕಾರ ಚಾಲುಕ್ಯರ ಸಾಮಂತ ಅರಸ ರಾಷ್ಟ್ರಕೂಟರ ಮೂರನೇ ಕೃಷ್ಣ ಕ್ರಿ.ಶ. ೯೩೯ ರಿಂದ ೯೬೭ರವರೆಗೆ ಕೋಗಳಿ-೫೦೦ಕ್ಕೆ ಒಡೆಯನಾಗಿದ್ದನು.

ಈ ಕೋಗಳಿ ಪ್ರದೇಶ ಈಗಿನ ಹರಪನಹಳ್ಳಿ ಮತ್ತು ಬಳ್ಳಾರಿ ಜಿಲ್ಲೆಯ ಹಡಗಲಿ ತಾಲೂಕು ಪ್ರದೇಶಗಳನ್ನು ಒಳಗೊಂಡಿತ್ತು. ಇದೇ ದೇವಾಲಯದ ಕ್ರಿ.ಶ. ೯೭೨-೯೭೩ರ ಶಾಸನವು ಈ ವಂಶದ ಖೊಟ್ಟಿಗನ ವಿಚಾರವನ್ನು ತಿಳಿಸುತ್ತದೆ. ಕ್ರಿ.ಶ. ೯೭೨-೭೩ರವರೆಗೆ ಭೂತುಗದೇವನು ಖೊಟ್ಟಗನ ಸಾಮಂತನಾಗಿ ಕೋಗಳಿಗೆ ರಾಜ್ಯಪಾಲನಾಗಿದ್ದನು. ಗಂಗರ ಸಾಮಂತ ಅರಸನಾದ ಪಾಂಚಾಲ ದೇವನು ಭೂತುಗನನ್ನು ಯುದ್ಧದಲ್ಲಿ ಸೋಲಿಸಿ ಕೋಗಳಿಯಿಂದ ಹೊರದಬ್ಬಿದನು. ತರುವಾಯ ಚಾಲುಕ್ಯರ ಎರಡನೇ ತೈಲಪನು ಭೂತುಗನ ಸಹಾಯ ಪಡೆದು ಪಾಂಚಾಲ ದೇವನನ್ನು ಯುದ್ಧದಲ್ಲಿ ಸೋಲಿಸಿ ಬಳ್ಳಾರಿ ಪ್ರದೇಶವನ್ನು ಚಾಲುಕ್ಯರ ಅಧೀನಕ್ಕೆ ಒಳಪಡಿಸಿದನು. ಎರಡನೇ ತೈಲಪನಿಗೆ ಆಹಮಲ್ಲನೆಂಬ ಬಿರುದಿದ್ದಿತು. ಆಗ ಭೂತುಗ ದೇವನನ್ನು ಎರಡನೇ ತೈಲಪನು ತೋರುಗಲ್ಲಿಗೆ ರಾಜ್ಯಪಾಲನನ್ನಾಗಿ ನೇಮಿಸಿದನು. ನಂತರ ಕದಂಬರ ಆರ್ಯವರ್ಮ ಮತ್ತು ಆದಿತ್ಯ ವರ್ಮರು ಕೋಗಳಿಯ ರಾಜ್ಯಪಾಲರಾಗಿದ್ದರು.

ಅಮೋಘವರ್ಷನಿಗೆ ಮಾರಸತ್ಯನೆಂಬ ಬಿರುದಿತ್ತೆಂದು ಹೊನ್ನಾಳಿ ತಾಲೂಕಿನಲ್ಲಿ ದೊರೆತ ಕ್ರಿ.ಶ. ೮೭೦ರ ಶಾಸನವೊಂದರಿಂದ ತಿಳಿಯಬಹುದು. ಈ ಶಾಸನದಲ್ಲಿ ''... ರಸ ಮಾರಸತ್ಯ'' ಎಂದು ಉಲ್ಲೇಖಿತವಾಗಿದೆ[೩೪]. ಬನವಾಸಿಯಿಂದ ಇಂದ್ರನು ರಾಜ್ಯವಾಳಿದ ಬಗ್ಗೆ ಇದೇ ಶಾಸನದಿಂದ ಅರಿಯಬಹುದು. ಕ್ರಿ.ಶ. ೯೩೪ರವರೆಗೆ ಎರಡು ಶಾಸನಗಳಿಂದ ಈ ವಂಶದ ಗೋವಿಂದನಿಗೆ 'ಸುವರ್ಣವರ್ಷ'ನೆಂಬ ಬಿರುದಿತ್ತೆಂದು ತಿಳಿದುಬರುತ್ತದೆ[೩೫]. ಹರಪನಹಳ್ಳಿ ತಾಲೂಕು ಚಿರಸ್ತಹಳ್ಳಿ ಗ್ರಾಮದ ಶಂಕರಸ್ವಾಮಿಗುಡಿಯ ಶಾಸನದ ಪ್ರಕಾರ ಕ್ರಿ.ಶ. ೯೩೧ ರಿಂದ ೯೩೨ರಲ್ಲಿ ಯುದ್ಧಭಟನಾದ ಪಾಡಿಗನೊಳಂಬ ಎನ್ನುವವನು ಬೇರೆಯವರ ಆಕ್ರಮಣದ ವಿರುದ್ಧ ಹೋರಾಡಿ ಮಡಿದನು. ಆಗ ರಾಷ್ಟ್ರಕೂಟರ ಆಳ್ವಿಕೆಗೊಳಪಟ್ಟ ಈ ಪ್ರದೇಶದಲ್ಲಿ ಮೃತನ ಕುಟುಂಬಕ್ಕೆ ಕೆಲ ನೀರಾವರಿ ಮತ್ತು ಒಣಭೂಮಿಯನ್ನು ಅಯ್ಯಪ್ಪ ದೇವನು ಕೊಟ್ಟಿದ್ದು ತಿಳಿದುಬರುವುದು.

ನಾಡನ್ನು ಹಲವು ಗ್ರಾಮಗಳ ಘಟಕಗಳನ್ನಾಗಿ ಮಾಡಿ ರಾಷ್ಟ್ರಕೂಟರು ಆಳುತ್ತಿದ್ದರೆಂದು ತಿಳಿದುಬರುತ್ತದೆ. ಕದಂಬಳಿಗೆ-೧೦೦೦, ಮಣ್ಣಳಿ-೧೦೦೦ ಇತ್ಯಾದಿಗಳನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. ದೇವಾಲಯಗಳಿಗೆ, ಬಸದಿಗಳಿಗೆ, ದೇವರ ಪ್ರೀತ್ಯಾರ್ಥವಾಗಿ ದಾನದತ್ತಿಗಳನ್ನು ಬಿಡುತ್ತಿದ್ದರು. ಆ ದತ್ತಿಗಳನ್ನು ಪಾಠ ಹೇಳುವ ಪಂಡಿತರಿಗೆ, ಅಲ್ಲಿ ವಿದ್ಯಾಭ್ಯಾಸಕ್ಕಾಗಿ ಬರುವ ವಿದ್ಯಾರ್ಥಿಗಳಿಗೆ (ಅನುಕೂಲಕ್ಕಾಗಿ) ನೀಡುತ್ತಿದ್ದರು. ಇಸಾಮುದ್ರದ ಭೋಗೇಶ್ವರ ದೇವಾಲಯ, ಅಲ್ಲಿನ ಮಠವನ್ನು ಓದಲು ಬರುವ ವಿದ್ಯಾರ್ಥಿಗಳಿಗೆ, ಗುರುಗಳಾದ ಬಾಳಚಂದ್ರ ಭಟ್ಟಾರಕರಿಗೆ ದತ್ತಿಬಿಟ್ಟ ಸಂಗತಿ ೩ನೆಯ ಅಮೋಘವರ್ಷನ ಶಾಸನವೊಂದರಲ್ಲಿ ವಿವರಿಸಿದೆ[೩೬]. ಮಾಂಡಲೀಕರು, ಅಧಿಕಾರಿಗಳು ಜನತೆಯಿಂದ ತಾವು ಪಡೆಯುತ್ತಿದ್ದ ಸುಂಕಗಳನ್ನು ದೇವಾಲಯಗಳ ಸಹಾಯಾರ್ಥವಾಗಿ ತಮಗೆ ಒಳ್ಳೆಯದಾಗಲೆಂದೂ, ಪುಣ್ಯವುಂಟಾಗಲೆಂದು ದತ್ತಿ ಬಿಟ್ಟುಕೊಡುತ್ತಿದ್ದರು. ಈ ಸಂದರ್ಭದಲ್ಲಿ ಬಂದ 'ಗಾವುಂಡ ಸುಂಕ', 'ವಡ್ಡಾರಾವುಳದ ಪನ್ನಾಯದ ಸುಂಕ' 'ಪೆರ್ಜುಂಕ' ಎಂಬ ಮಾತುಗಳು ಆಗಿನ ಕಾಲದ ತೆರಿಗೆಗಳನ್ನು ವಿಷದಪಡಿಸುತ್ತವೆ.

ಕ್ಯಾಸಪುರದ ಶಾಸನದಲ್ಲಿ 'ಬಿವಿವೃತ್ತಿ'ಯ ಉಲ್ಲೇಖ ಬಂದಿದ್ದು, ಅಧೀನರಾಜರ ಹಾಗು ಸಾಮಂತರ ಸಂಬಂಧವನ್ನು ಅದು ಸೂಚಿಸುತ್ತದೆ[೩೭]. ಬೇವಿನಹಳ್ಳಿಯ ಶಾಸನದಲ್ಲಿ 'ಮೇಲ್ಕಾಳ್ಕೆ'ಯ ಉಲ್ಲೇಖವಿದ್ದು, ಅಂದಿನ ಆಡಳಿತದ ಬಗೆಯನ್ನು ವಿವರಿಸುತ್ತದೆ. ಅಲ್ಲಿದ್ದ 'ಕಿರುದೆರೆ'ಯ ಉಲ್ಲೇಖ ಇನ್ನೊಂದು ಬಗೆಯ ತೆರಿಗೆಯನ್ನು ಸೂಚಿಸುತ್ತದೆ. ವೇಶಾವೃತ್ತಿ ಆಗಿನ ಕಾಲದ ಪದ್ಧತಿಯಂತೆ ಶ್ರೇಷ್ಠವೆಂಬ ಒಂದು ಸಂಗತಿ ಕಾಡಜ್ಜಿಯ ಶಾಸನದಲ್ಲಿ ಬಂದಿದೆ[೩೮]. ಕೊಗ್ಗನೂರು, ಮಸಣಕೆರೆ, ಚದುರಗೊಳ, ಮಸಣಕೆರೆ, ಕೊಗಲೂರುಗಳಲ್ಲಿ ಇವರ ಶೈಲಿಯನ್ನು ಹೋಲುವ ದೇವಾಲಯಗಳು ಕಂಡು ಬಂದಿವೆ. ಇವುಗಳ ಆಧಾರದಿಂದಲೂ ರಾಷ್ಟ್ರಕೂಟರು ನೇರವಾಗಿ ಇಲ್ಲವೇ ತಮ್ಮ ಸಾಮಂತ ಅಧೀನಾಧಿಕಾರಿಗಳ ಮುಖೇನ ಈಗಿನ ದಾವಣಗೆರೆ ಜಿಲ್ಲೆಯ ಹಾಗು ಅದರ ಆಸು-ಪಾಸಿನ ಪ್ರದೇಶಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದರೆಂದು, ತಮ್ಮ ಆಳ್ವಿಕೆಗೊಳಪಟ್ಟ ಈ ಪ್ರದೇಶಗಳಲ್ಲಿ ಅನೇಕ ಪ್ರಜಾಹಿತ ಕಾರ್ಯಗಳನ್ನು ಕೈಗೊಂಡು ಜನರಿಂದ ಮೆಚ್ಚಿಗೆಗಳಿಸಿದ್ದರೆಂದು ಹೇಳಬಹುದು. ಭಾರತದಲ್ಲೇ ಯಶಸ್ವೀ ರಾಜಕೀಯ ಶಕ್ತಿಯಾಗಿ ಮೆರೆದುದು ರಾಷ್ಟ್ರಕೂಟ ಸಾಮ್ರಾಜ್ಯದ ಹಿರಿಮೆ. ಅವರ ಸಾಮ್ರಾಜ್ಯವು ಇಂದಿನ ಮಹಾರಾಷ್ಟ್ರ, ಕರ್ನಾಟಕ, ಮಧ್ಯ ಪ್ರದೇಶದ ಹಲವು ಭಾಗಗಳು ಮತ್ತು ಆಂಧ್ರಪ್ರದೇಶ, ತಮಿಳುನಾಡುಗಳ ಕೆಲವು ಭಾಗಗಳನ್ನು ಒಳಗೊಂಡಿದ್ದಿತು.

ಕಲ್ಯಾಣಿ ಚಾಲುಕ್ಯರು :-

ಕಲ್ಯಾಣಿಯನ್ನು ರಾಜಧಾನಿಯನ್ನಾಗಿಟ್ಟುಕೊಂಡು ಕ್ರಿ.ಶ. ೯೭೩ ರಿಂದ ೧೧೯೮ ರವರೆಗೆ ಆಳ್ವಿಕೆ ಮಾಡಿದ ಇವರನ್ನು ಕಲ್ಯಾಣಿ ಚಾಲುಕ್ಯರೆಂದು ಕರೆಯಲಾಗುತ್ತದೆ. ರಾಷ್ಟ್ರಕೂಟ ದೊರೆ ೨ನೇ ಕರ್ಕನನ್ನು ಚಾಲುಕ್ಯ ವಂಶದ ಇಮ್ಮಡಿ ತೈಲಪನು ಅಧಿಕಾರದಿಂದ ಕೆಳಗಿಳಿಸಿ ಈ ವಂಶವನ್ನು ಸ್ಥಾಪಿಸಿದನು. ೨ನೇ ತೈಲನ ಶಾಸನಗಳು ಈ ಜಿಲ್ಲೆಯ ಹರಪನಹಳ್ಳಿ ತಾಲೂಕಿನ ಬಾಗಳಿಯ ದೇವಾಲಯ ದೊರಕುತ್ತವೆ. ೫ನೇ ವಿಕ್ರಮಾದಿತ್ಯ ಅರಸನು ಕ್ರಿ.ಶ. ೧೦೦೮ ರಿಂದ ೧೦೧೫ರವರೆಗೆ ನೊಳಂಬವಾಡಿ ೩೨೦೦೦ವನ್ನು ಕೋಗಳಿ ೫೦೦ ಬಲಕುಂದಿ ೩೦೦ ಕುರುಗೋಡು ಮುಖ್ಯ ಪಟ್ಟಣ ಮತ್ತು ಇತರ ಪ್ರದೇಶಗಳನ್ನು 'ಯಿರಿವ ನೊಳಂಬಾಧಿರಾಜ'ನೆಂಬ ಸಾಮಂತ ಅರಸನಿಂದ ಆಳುತ್ತಿದುದ್ದು ಬಾಗಳಿಯ ಎರಡು ಶಾಸನಗಳಿಂದ ಗೊತ್ತಾಗುತ್ತದೆ. ಜಯಸಿಂಹನ ಮಗನೇ ಮೊದಲನೇ ಸೋಮೇಶ್ವರ (ಕ್ರಿ.ಶ. ೧೦೪೨ - ಕ್ರಿ.ಶ.೧೦೬೮) ತೈಲಪನ ತರುವಾಯ ಕಾಣಬರುವ ಶಕ್ತದೊರೆ ಇವನನ್ನು ತ್ರೈಲೋಕ್ಯಮಲ್ಲ, ಆಹಮಲ್ಲನೆಂಬುದಾಗಿಯೂ ಕರೆಯುತ್ತಾರೆ. ಈ ದೊರೆಯ ಶಾಸನಗಳು ಅಲ್ಲಲ್ಲಿ ಕಂಡು ಬರುತ್ತವೆ. ಇವನ ಕಾಲದಲ್ಲಿ ಚೋಳ ಚಾಲುಕ್ಯರ ನಡುವೆ ಸತತವಾಗಿ ಸಂಘರ್ಷಗಳಾದವು. ತ್ರೈಲೋಕ್ಯ ಮಲ್ಲನ ರಾಣಿ ಹೊಯ್ಸಳದೇವಿಯು ತುಂಗಭದ್ರ ತೀರದ 'ಹೊನ್ನಳ್ಳಿ' (ಈಗಿನ ಹೊನ್ನಾಳಿ) ಯ ಗೌಡನಿಗೆ ತೀರ್ಥಕ್ಷೇತ್ರ ಏರ್ಪಡಿಸುವಂತೆ ಸೂಚಿಸಿ, ದಾನ ನೀಡುತ್ತಾಳೆ[೪೦]. ನನ್ನಿನೊಳಂಬ ಪಲ್ಲವ - ಪೆರ್ಮಾಡಿ-ದೇವನು ಈ ತ್ರೈಲೋಕ್ಯ ಮಲ್ಲನ ಕೆಲವು ಪ್ರಾಂತ್ಯಗಳ ರಾಜ್ಯಪಾಲನಾಗಿದ್ದನೆಂದು ಕ್ರಿ.ಶ. ೧೦೪೮ ಮತ್ತು ೧೦೫೪ರ ಎರಡು ಶಾಸನಗಳಿಂದ ತಿಳಿದುಬರುತ್ತದೆ[೪೧].

ಪ್ರಾರಂಭದಲ್ಲಿ ಸೋಮೇಶ್ವರನು ಚೋಳರ ಮೇಲೆ ಜಯ ಪಡೆದಾಗ್ಯೂ ಕಡೆಯಲ್ಲಿ ಅವರಿಂದ ಪರಾಜಿತನಾಗಬೇಕಾಯಿತು. ಆದರೂ ಚಾಲುಕ್ಯ ರಾಜ್ಯದ ಪ್ರದೇಶಗಳು ಇವನ ಕೈಬಿಡದೆ ಭದ್ರವಾಗಿದ್ದವು. ಕ್ರಿ.ಶ. ೧೦೬೮ರಲ್ಲಿ ಪ್ರಥಮ ಸೋಮೇಶ್ವರ ಚಕ್ರವರ್ತಿ ಬಳ್ಳಾರಿ ಜಿಲ್ಲೆಯ ಹಡಗಲಿ ತಾಲೂಕಿನ ಹಿರೇ-ಕುರುವತ್ತಿ ಬಳಿ ಹರಿವ ತುಂಗಭದ್ರ ನದಿಯಲ್ಲಿ ಸ್ವ-ಪ್ರೇರಣೆಯಿಂದ ಹಾರಿ ಜಲ ಸಮಾಧಿಯನ್ನು ಹೊಂದಿದನು. ಅವನಿಗೆ ಗುಣಮುಖವಾಗದ ಖಾಯಿಲೆಯೂ ಇತ್ತೆಂದು ಹೇಳಲಾಗಿದೆ. ಕ್ರಿ.ಶ. ೧೦೭೨ರಲ್ಲಿ ಪ್ರಥಮ ಸೋಮೇಶ್ವರ ಚಕ್ರವರ್ತಿಯ ಪುತ್ರನಾದ ಜಯಸಿಂಹನು, ಕೋಗಳಿ ಬಲ್ಲಕುಂದೆ ನೊಳಂಬವಾಡಿಗಳ ಆಡಳಿತವನ್ನು ನಡೆಸಿದಂತೆ ತೋರುತ್ತದೆ. ದಾವಣಗೆರೆ ಬಳಿಯ ಹದಡಿಯಲ್ಲಿನ ಕ್ರಿ.ಶ ೧೦೪೨ರ ಶಾಸನವು[೨೨] ತ್ರೈಲೋಕ್ಯಮಲ್ಲನು ಕದಂಬಳಿಗೆಯನ್ನು ಆಳುತ್ತಿದ್ದನೆಂಬುದಾಗಿ ತಿಳಿಸುತ್ತದೆ. ಸೋಮೇಶ್ವರನ ಮಕ್ಕಳಲ್ಲೊಬ್ಬನಾದ ವಿಷ್ಣುವರ್ಧನನು ಕ್ರಿ.ಶ.೧೦೬೮ ರಿಂದ ಕ್ರಿ.ಶ.೧೦೬೬ರವರೆಗೆ ನೊಳಂಬವಾಡಿ ಪ್ರಾಂತ್ಯವನ್ನಾಳುತ್ತಿದ್ದನೆಂದು ದೊರೆತ ಶಾಸನಗಳಿಂದ ತಿಳಿದುಬರುತ್ತದೆ.

ಕಲ್ಯಾಣಿ ಚಾಲುಕ್ಯ ವಂಶದಲ್ಲಿ ಶ್ರೇಷ್ಠನಾದ ೬ನೇ ವಿಕ್ರಮಾದಿತ್ಯನು(ಕ್ರಿ.ಶ. ೧೦೭೬-೧೧೨೬) ೫೦ವರ್ಷಗಳವರಗೆ ದಕ್ಷತೆಯಿಂದ ಆಳಿದನು. ಇವನಿಗೆ ವಿಕ್ರಮಾಂಕ, ತ್ರಿಭುವನ ಮಲ್ಲ ಎಂಬ ಬಿರುದುಗಳಿದ್ದವು. ಚೋಳರೊಡನೆ ಕೈಗೊಂಡ ಯುದ್ಧಗಳಲ್ಲಿ ಸಾಮಂತ ಅರಸರಾದ ಉಚ್ಚಂಗಿಯ ಪಾಂಡ್ಯರು ಇವನಿಗೆ ಹೆಚ್ಚಿನ ಸಹಾಯ ನೀಡಿದರು. ಕ್ರಿ.ಶ. ೧೦೮೩ರಲ್ಲಿ ತ್ರಿಭುವನ ಮಲ್ಲ ಪಾಂಡ್ಯ ದೇವನು ನೊಳಂಬವಾಡಿಗೆ ಮಹಾ ಮಂಡಲೇಶ್ವರನಾಗಿದ್ದನೆಂದು ಶಿವಮೊಗ್ಗ ಜಿಲ್ಲೆಯ ಶಾಸನವೊಂದರಿಂದ ಗೊತ್ತಾಗುತ್ತದೆ. ದಾವಣಗೆರೆಗೆ ವಾಯುವ್ಯ ಭಾಗದಲ್ಲಿನ ಬೇತೂರು ಇವನ ಆಡಳಿತದ ಕೇಂದ್ರ ಸ್ಥಾನವಾಗಿತ್ತೆಂದು ಈ ಶಾಸನದಲ್ಲಿ ಉಲ್ಲೇಖಿಸಲಾಗಿದೆ.

ಆರನೇ ವಿಕ್ರಮಾದಿತ್ಯನ ನಂತರ ಸಿಂಹಾಸನಕ್ಕೆ ಬಂದ ಅವನ ಮಗ ಮುಮ್ಮಡಿ ಸೋಮೇಶ್ವರನು (ಕ್ರಿ.ಶ. ೧೧೨೬-ಕ್ರಿ.ಶ. ೧೧೩೮) ಶಾಂತರೀತಿಯಲ್ಲಿ ಆಳ್ವಿಕೆ ನಡೆಸಿದನು. ಇವನಾದ ಮೇಲೆ ಬಂದ ಎರಡನೇ ಜಗದೇಕಮಲ್ಲನ (ಕ್ರಿ.ಶ. ೧೧೩೮-ಕ್ರಿ.ಶ. ೧೧೫೧) ಬಗ್ಗೆ ಉಲ್ಲೇಖಿಸುವ ಕೆಲವು ಶಾಸನಗಳು ಈ ಜಿಲ್ಲೆಯಲ್ಲಿವೆ. ಕ್ರಿ.ಶ. ೧೧೪೩ರ ಶಾಸನವೊಂದು ಇವನು ಚೋಳರನ್ನು ರಾಜ್ಯದಿಂದೋಡಿಸಿದನೆಂದೂ, ಹೊಯ್ಸಳ ದೊರೆ ಮೊದಲನೇ ನರಸಿಂಹನ ಮೇಲೆ ದಾಳಿ ಮಾಡಿದನೆಂದೂ ಹೇಳುತ್ತದೆ.

ವಿಕ್ರಮಾದಿತ್ಯ ಮತ್ತು ಸೋಮೇಶ್ವರ ದೊರೆಗಳ ಕಾಲದಲ್ಲಿ ವೀರ ಪಾಂಡ್ಯನು ನೊಳಂಬನಾಡಿಗೆ ಮಂಡಲೇಶ್ವರನಾಗಿದ್ದನು. ಇವನ ಆಳ್ವಿಕೆಯನ್ನು ನಿಖರವಾಗಿ ಸೂಚಿಸುವ ಶಾಸನಗಳು ದೊರೆತಿವೆ. ದಾವಣಗೆರೆಯ ಶಾಸನವೊಂದು ಇವನ ಶೌರ್ಯ ಪ್ರತಾಪಗಳ ಈ ಮುಂದಿನಂತೆ ವರ್ಣಿಸುತ್ತದೆ.

ಶ್ರೀ ಮನ್ಮಹಾ ಮಂಡಳೇಶ್ವರಂ ಜಗದೇಕಮಲ್ಲ
ವೀರ ಪಾಂಡ್ಯ ದೇವರಸರು
ನೊಳಂಬವಾಡಿ ಮೂವತ್ತಿರ್ಚ್ಛಾಸಿರ ಮುಮಂ
ದುಷ್ಟ ನಿಗ್ರಹ ಶಿಷ್ಟ ಪ್ರತಿಪಾಳನೆಯಿ ನಾಳ್ದುಚ್ಚಂಗಿಯ
ನೆಲೆ ವೀಡಿನೊಳು ಸುಖ ಸಂಕಥಾ ವಿನೋದದಿಂ
ರಾಜ್ಯಂಗೆಯ್ಯುತ್ತಮಿರೆ [೪೩]

ಕ್ರಿ.ಶ. ೧೦೬೧ರ ೩ನೇ ಜಗದೇಕ ಮಲ್ಲನ ಶಾಸನದಲ್ಲಿ ಮಂಡಿಯಾನಹಟ್ಟಿ ಯನ್ನು (ಈಗಿನ ಹರಪನಹಳ್ಳಿ ತಾಲೂಕಿನ ಮಾಡಲಗೇರಿ) ಅನೇಕ ಗ್ರಾಮದ ಕನ್ನಗೌಡನು ತನ್ನ ಬಂಧು ವರ್ಗದಿಂದ ಕ್ರಯವಾಗಿ ಪಡೆದುಕೊಂಡು, ಈಶ್ವರ ದೇವರಿಗೆ ಭೂ-ದಾನ ಬಿಟ್ಟ ಬಗ್ಗೆ ಹಾಗು ಗ್ರಾಮಸ್ಥರು ಎಲ್ಲೇರಿ ದೇವೇಶ್ವರ ದೇವರನ್ನು ಪ್ರತಿಷ್ಠಾಪನೆ ಮಾಡಿ ಭೂ-ದತ್ತಿ ಬಿಡುತ್ತಾರೆ [೪೪].

ಇಮ್ಮಡಿ ಜಗದೇಕ ಮಲ್ಲನಾದ ನಂತರದ ದೊರೆ ಮುಮ್ಮಡಿ ತೈಲಪನು (ಕ್ರಿ.ಶ. ೧೧೫೧-ಕ್ರಿ.ಶ. ೧೧೬೩) ಎಲ್ಲಾ ರೀತಿಯಿಂದಲೂ ಅಸಮರ್ಥನೆನಿಸಿದ್ದನು. ಇವನ ದುರ್ಬಲತೆಯನ್ನುಪಯೋಗಿಸಿಕೊಂಡು ಅನೇಕ ಸಾಮಂತರು ಸ್ವತಂತ್ರರಾದರು. ಈ ಮಧ್ಯೆ ಕಾಕತೀಯ ವಂಶದ ಪ್ರೋಲನಿಂದ ಸೋತಿದ್ದು, ಚಾಲುಕ್ಯರ ಕೀರ್ತಿಗೆ ಧಕ್ಕೆ ತಂದಿತು.

ಕ್ರಿ.ಶ. ೧೧೫೫ ರಿಂದ ಕ್ರಿ.ಶ. ೧೧೮೫ರವರೆಗಿನ ಕಾಲಾವಧಿಯಲ್ಲಿ ವಿಜಯಪಾಂಡ್ಯನು ಮಹಾ ಮಂಡಲೇಶ್ವರನಾಗಿ ಉಚ್ಚಂಗಿಯನ್ನುರಾಜಧಾನಿಯನ್ನಾಗಿ ಮಾಡಿಕೊಂಡು ನೊಳಂಬವಾಡಿಯನ್ನಾಳುತ್ತಿದ್ದನೆಂದು ಹೇಳಲಾಗಿದೆ. ಇವನು ಅಪ್ರತಿಮನೆನಿಸಿ ಅನೇಕ ಶಾಸನಗಳನ್ನು ಈ ಜಿಲ್ಲೆಯಲ್ಲಿ ಬಿಟ್ಟುಹೋಗಿದ್ದಾನೆ. ಚಾಲುಕ್ಯ ದೊರೆಗಳಿಂದ ಪೂರ್ಣ ಸ್ವಾತಂತ್ರ ಪಡೆದುಕೊಳ್ಳಲು ನಾಲ್ವಡಿ ಸೋಮೇಶ್ವರನ ವಿರುದ್ಧ ಇವನು ದಂಗೆ ಎದ್ದನೆಂಬುದಾಗಿಯೂ ಶಾಸನಗಳಿಂದ ತಿಳಿದುಬರುತ್ತದೆ.

ದಾವಣಗೆರೆ ಶಾಸನವೊಂದರಲ್ಲಿ ವಿಕ್ರಮಾದಿತ್ಯ ತ್ರಿಭುವನ ಮಲ್ಲನು ರಾಷ್ಟ್ರಪತಿ , ವಿಷಯಪತಿ, ಗ್ರಾಮ ಕೂಟಕ, ಆಯುಕ್ತಕ, ನಿಯುಕ್ತಕ , ಅಧಿಕಾರಿಕ, ಮಹತ್ತರ ಮತ್ತಿತರಿಗೆ ಆಜ್ಞಾಪಿಸಿದುದ್ದನ್ನು ಹೇಳಲಾಗಿದೆ. ಇವರೆಲ್ಲರೂ ಕೆಳ ದರ್ಜೆಯ ಅಧಿಕಾರಿಗಳಾಗಿರಬಹುದೆಂದು ತೋರುತ್ತದೆ .

ಸಾಮಂತರಲೊಬ್ಬನಾದ ಕಳಚೂರ್ಯ ವಂಶದ ೨ನೆಯ ಬಿಜ್ಜಳನು ಕ್ರಿ.ಶ. ೧೧೫೩ರಲ್ಲಿ ಸ್ವತಂತ್ರನಾಗಿ ಚಾಲುಕ್ಯ ದೊರೆ ಮುಮ್ಮಡಿ ತೈಲಪನನ್ನು ಬಂಧಿಸಿ, ಕಲ್ಯಾಣ ನಗರದಲ್ಲಿ ಕಳಚೂರ್ಯ ವಂಶವನ್ನು ಸ್ಥಾಪಿಸಿದನು. ಕಳಚೂರ್ಯರ ಕಾಲವಧಿಯಲ್ಲಿ ಪ್ರಮುಖ ಧಾರ್ಮಿಕ ಕ್ರಾಂತಿ ಉಂಟಾಯಿತಾದರು, ಅವರಿಗೆ ಸಂಬಂದಪಟ್ಟ ಮಾಹಿತಿಗಳು ಅಷ್ಟೇನು ಗಮನಾರ್ಹವಾಗಿಲ್ಲ.

ಬೆಳಗುತ್ತಿಯ ಸಿಂದರು : -

ಹೊನ್ನಾಳಿ ತಾಲೂಕು ಕೇಂದ್ರದಿಂದ ಸು. ೧೨ಕಿ.ಮೀ. ದೂರದಲ್ಲಿರುವ ಬೆಳಗುತ್ತಿಯು ಸಿಂದ ವಂಶಸ್ಥರ ಆಳ್ವಿಕೆಗೆ ಒಳಪಟ್ಟಿತ್ತು. ಇವರ ಆಳ್ವಿಕೆಯ ಕಾಲ ಕ್ರಿ.ಶ. ಸುಮಾರು ೯೦೦ರಿಂದ ೧೨೩೯ರವರೆಗೆ. ಬೆಳಗುತ್ತಿಯ ಸಿಂದರು ತಮ್ಮ ಮೂಲ ಪುರುಷ ನಿಡುದೋಳ ಸಿಂದನಿಂದು ಒಪ್ಪಿಕೊಂಡಿದ್ದಾರೆ. ಈ ನಿಡುದೋಳ ಸಿಂದನ ನಂತರ ಕ್ರಿ.ಶ. ೧೦ನೇ ಶತಮಾನದಲ್ಲಿ ಬೆಳಗುತ್ತಿ ಮನೆತನವು ಬೆಳಕಿಗೆ ಬಂದಿತು. ಇವರು ತಮ್ಮನ್ನು 'ಕರಹಾಟ ಪುರವರಾಧೀಶ್ವರ 'ರೆಂದು ಕರೆದುಕೊಂಡಿದ್ದಾರೆ. ಬಹುಶಃ ಈ ವಂಶದವರು ಮೊದಲಿನ 'ಕರಹಾಟ' ಅಂದರೆ ಇಂದಿನ ಮಹಾರಾಷ್ಟ್ರದ ' ಕರಹಾಡ'ದಲ್ಲಿ ವಾಸಿಸುತ್ತಿದ್ದು,ಮುಂದೆ ರಾಜಕೀಯ ಸ್ಥಿತ್ಯಂತರದಿಂದಾಗಿ ಬೆಳಗುತ್ತಿ ಪ್ರದೇಶದಲ್ಲಿ ಬಂದು ನೆಲೆಸಿರಬೇಕು . ಅವರು ತಮ್ಮ ಮೂಲ ನೆಲೆಯನ್ನು ಸೂಚಿಸಲು 'ಕರಹಾಟಪುರವರಾಧೀಶ್ವರ 'ರೆಂದು ಶಾಸನಗಳಲ್ಲಿ ಹೇಳಿಕೊಂಡಿದ್ದಾರೆ. ಬೆಳಗುತ್ತಿ ಮನೆತನದ ಮೊದಲ ಐತಿಹಾಸಿಕ ವ್ಯಕ್ತಿ ಯಾರು ಎಂಬುದರ ಬಗ್ಗೆ ವಿದ್ವಾಂಸರಲ್ಲಿ ಸಾಕಷ್ಟು ಚರ್ಚೆ ನಡೆದಿದೆ. ದಿನಕರ ದೇಸಾಯಿಯವರು ಗುಂಡೇರಿ ಶಾಸನದಲ್ಲಿ ಕಾಣಿಸಿಕೊಳ್ಳುವ ' ಕೆರಸಿಗನನ್ನಿಯ ಸಿಂದನೇ (ಕ್ರಿ.ಶ. ೯೬೭) ಮೊದಲ ಅರಸನೆಂದಿದ್ದಾರೆ[೪೫]. ' ನನ್ನಿಗ' ಅಥವಾ 'ನನ್ನಯ ' ಎಂಬುದು ನಂಬಿಗಸ್ಥ ಎಂಬ ಅರ್ಥವನ್ನು ಸೂಚಿಸುತ್ತಿದ್ದು, ಇದರ ಮುಂದೆ ' ಸಿಂದ ' ಎಂಬ ಪದ ಬಳಕೆಗೊಂಡಿದ್ದರಿಂದಲೇ ಅವನನ್ನು ಸಿಂದ ವಂಶದಲ್ಲಿ ಸೇರಿಸಿರಬಹುದೇ ? ಎಂಬುದು ಡಾ. ಬಾ.ರಾ. ಗೋಪಾಲರವರ ಅಭಿಪ್ರಾಯ[೪೬]. ಕ್ರಿ.ಶ. ೯೯೨ರ ವಾಸನ ಗ್ರಾಮದ ಶಾಸನದಲ್ಲಿ ಉಲ್ಲೇಖಗೊಂಡಿರುವ ಮಹಾ ಸಾಮಂತ ಮುಳಗುಂದ ಸಿಂದ ಜಾತರಸನು ಬೆಳಗುತ್ತಿ ವಂಶಕ್ಕೆ ಸೇರಿದವನಲ್ಲ ಎಂದಿರುವುದು ಸಮಂಜಸವೆನಿಸಿದೆ[೪೭]. ಡಾ. ಬಾ.ರಾ. ಗೋಪಲ್‌ರವರು ಹರಿಹರ ಶಾಸನದಲ್ಲಿ ಕಾಣಿಸಿಕೊಳ್ಳುವ ಪಿರಿಯ ಚಟ್ಟರಸನನ್ನೇ ಬೆಳಗುತ್ತಿ ವಂಶದ ಮೊದಲ ಐತಿಹಾಸಿಕ ವ್ಯಕ್ತಿ ಎಂದಿದ್ದಾರೆ[೪೮]. ಆದರೆ ಖಂಡೆಬಾಗೂರಿನ ಕ್ರಿ.ಶ.೯೧೨೪ರ ಶಾಸನ ಸಿಂದರ ದೇವನ ಮಕ್ಕಳಾದ ವಿಕ್ರಮಾದಿತ್ಯ , ನಾಗಯ್ಯ ,ಬಂದಿಯಣ್ಣರು ಎಡವಟ್ಟೆ -೭೦ರಲ್ಲಿಯ ಬಾಗೂರಿನಲ್ಲಿ ದತ್ತಿ ಬಿಟ್ಟಿದ್ದನ್ನು ಉಲ್ಲೇಖಿಸಿದೆ[೪೯]. ಎಡವಟ್ಟಿ ನಾಡ ಬೆಳಗುತ್ತಿ ಸಿಂದರ ಆಳ್ವಿಕೆಗೆ ಒಳಪಟ್ಟಿದ್ದರಿಂದ ಇಲ್ಲಿಯ ಸಿಂದರ ದೇವನೇ ಈ ವಂಶದ ಮೊದಲ ಐತಿಹಾಸಿಕ ವ್ಯಕ್ತಿ ಎಂದು ಹೇಳಬಹುದು. ಅವನು ಕ್ರಿ.ಶ. ೯೦೦ರಲ್ಲಿ ಆಳಿರಬೇಕು . 'ನನ್ನಿಯ ಸಿಂದ'ನೆಂಬುದು ಗೋಪಾಲ್‌ರವರು ಭಾವಿಸಿರುವಂತೆ ನಂಬಿಕೆಯುಳ್ಳ ವ್ಯಕ್ತಿ ಎಂಬುದನ್ನು ಸೂಚಿಸುತ್ತದೆ. ಅದು ವ್ಯಕ್ತಿಯೊಬ್ಬನ ಅಂಕಿತನಾಮವೂ ಆಗಿದೆ. ಆದ್ದರಿಂದ 'ನನ್ನಯ ಸಿಂದನು ' ಬೆಳಗುತ್ತಿ ಸಿಂದವಂಶಕ್ಕೆ ಸೇರಿದ ಆರಸನೆಂಬುದು ಸ್ಪಷ್ಟ. ಅವನು ಬಹುಶಃ ಸಿಂದರ ದೇವನ ಮಕ್ಕಳ ನಂತರ ಅಧಿಕಾರಕ್ಕೆ ಬಂದಿರಬೇಕು. ನನ್ನಯ ಸಿಂದನ ನಂತರ ಬೆಳಗುತ್ತಿ ಸಿಂದ ಮನೆತನದಲ್ಲಿ ಸುಮಾರು ೯೦ ವರ್ಷಗಳ ದೀರ್ಘಾವಧಿಯ ಇತಿಹಾಸ ಅಸ್ಪಷ್ಟವಾಗಿದೆ. ಒಂದು ತಲೆ ಮಾರಿಗೆ ೨೫ವರ್ಷಗಳಂತೆ ಲೆಕ್ಕಾಹಾಕಿದರೆ, ಈ ಅವಧಿಯಲ್ಲಿ ಸುಮಾರು ನಾಲ್ಕು ಜನ ಅರಸರು ಆಳಿ ಹೋಗಿರಬೇಕು. ಆದರೆ ಅವರ ವಿವರಗಳು ಮಾತ್ರ ತಿಳಿದುಬರುವುದಿಲ್ಲ. ಮುಂದೆ ಕಾಣಿಸಿಕೊಳ್ಳುವ ಸಿಂದ ಅರಸರೆಂದರೆ ಪಿರಿಯ ಚಟ್ಟರಸ ಮತ್ತು ಅಯ್ಯಣ ಜೋಗರಸರು.

ಪಿರಿಯ ಚಟ್ಟರಸ ಮತ್ತು ಅಯ್ಯಣ ಜೋಗರಸ :-

ಪಿರಿಯ ಚಟ್ಟರಸನ ಆಳ್ವಿಕೆಯ ಬಗ್ಗೆ ಹೆಚ್ಚು ಶಾಸನಗಳು ದೊರೆತಿಲ್ಲ. ಪಿರಿಯ ಚಟ್ಟರಸ ಹಾಗು ಆತನ ರಾಣಿ ದೋರಬ್ಬರಸಿಯರಿಗೆ ಜೋಗರಸನು ಜನಿಸಿದನು[೫೦]. ಈತನು ಕ್ರಿ.ಶ. ೧೦೬೩ರಲ್ಲಿ ದೇವರ -೩೦, ಮಾಸೂರು-೧೨, ಕುಂಡೂರು-೧೨, ಕೊಳಗನೂರು-೭೦, ಅರಕೆರೆ-೧೨, ಬಾಡ-೫೬ ಮುಂತಾದವುಗಳನ್ನು ಆಳುತ್ತಿದ್ದನೆಂದು ಮೇಡೂರು ಶಾಸನ ಹೇಳುತ್ತದೆ[೫೧]. ಮುಂದೆ ಈತನ ಮಗ ೨ನೇ ಚಟ್ಟರಸನು ಪಟ್ಟಕ್ಕೆ ಬಂದನು.

ಎರಡನೆಯ ಚಟ್ಟರಸ :-

ಈತನು ಆರನೇ ವಿಕ್ರಮಾಧಿತ್ಯನ ಸಾಮಂತನಾಗಿ ರಾಜ್ಯಭಾರ ನಡೆಸಿದನು. ನೇಡೂರಿನ ತೃಟಿತ ಶಾಸನವೊಂದು ಎಡವಟ್ಟೆ-೭೦, ಅರಕೆರೆ -೧೨ ಮತ್ತಿತರೆ ವಿಭಾಗಗಳನ್ನು ಇವನು ಆಳುತ್ತಿದ್ದನೆಂದು ಹೇಳಿದೆ. ಇವನು ಕ್ರಿ.ಶ. ೧೧೧೩ರ ವೇಳೆಗೆ ಆಳುತ್ತಿದ್ದುದು ಶಾಸನವೊಂದರಿಂದ ತಿಳಿದುಬರುತ್ತದೆ[೫೨]. ಈತನ ಕಾಲಾವಧಿಯಲ್ಲಿಯೇ ಕ್ರಿ.ಶ. ೧೧೧೭ರಲ್ಲಿ ಅವನ ಮೊಮ್ಮಗ ಮಾಚರಸನು ನಾಡ ಆಡಳಿತದಲ್ಲಿ ತೊಡಗಿದ್ದನು. ಆದ್ದರಿಂದ ಚಟ್ಟರಸನ ನಂತರ ಅವನ ಮಗ ಈಶ್ವರ ದೇವನು ಉತ್ತರಾಧಿಕಾರಿಯಾಗದೇ ಮಾಚರಸನೇ ಪಟ್ಟಕ್ಕೆ ಬಂದಿರಬೇಕು. ಬಹುಶಃ ಈಶ್ವರ ದೇವನು ಅಕಾಲ ಮರಣಕ್ಕೆ ತುತ್ತಾಗಿರಬೇಕು.

ಮಾಚರಸ :-

ಈಶ್ವರ ದೇವನ ಹಿರಿಯ ಮಗನಾದ ಮಾಚರಸನು ಕ್ರಿ.ಶ. ೧೧೨೫ರಲ್ಲಿ ಪಟ್ಟಕ್ಕೆ ಬಂದನು. ಕ್ರಿ.ಶ. ೧೧೨೮ರಲ್ಲಿ ಅವನು ಎಡವಟ್ಟೆ -೧೨ , ಅರಕೆರೆ-೧೨ ಮತ್ತು ಬಾಡ- ೫೬ ಗಳನ್ನು ಆಳುತ್ತಿದ್ದನೆಂದು ನಾಗವಂದೆ ಶಾಸನ ಹೇಳಿದೆ. ಬೆಳಗುತ್ತಿ ಮತ್ತು ಹಿರೇಕಬ್ಬೂರು ಗ್ರಾಮಗಳು ಈಶ್ವರ ದೇವನಿಗೆ ಮಾಚರಸ ಮಲ್ಲಿ ದೇವನ ಮತ್ತು ಐಹರಸರೆಂಬ ಮೂವರು ಮಕ್ಕಳಿದ್ದುದನ್ನು ಸ್ಪಷ್ಟಪಡಿಸಿದೆ. ಈ ಐಹರಸನಿಗೆ ರಾಯರಸನೆಂಬ ಮಗ ಜನಿಸಿದನು. ಈತನ ಮಗನೇ ಎರಡನೇ ಈಶ್ವರದೇವ . ಮಾಚರಸನು ಕ್ರಿ.ಶ. ಸುಮಾರು ೧೧೪೦ರವರೆಗೆ ಅಧಿಕಾರದಲ್ಲಿದ್ದು, ಮುಂದೆ ಕ್ರಿ.ಶ. ೧೧೪೦-೧೧೫೫ರವರೆಗೆ ಮಲ್ಲಿದೇವನು ಆಳ್ವಿಕೆ ನಡೆಸಿದನು. ಆದರೆ ಇವರಿಬ್ಬರಿಗೆ ಮಕ್ಕಳಿಲ್ಲದ ಕಾರಣ ಎರಡನೆಯ ಈಶ್ವರದೇವನು ಅಧಿಕಾರಕ್ಕೆ ಬಂದನು. ಆದರೆ ಐಹರಸನಾಗಲಿ ಆತನಮಗ ರಾಯರಸನಾಗಲಿ ಆಳ್ವಿಕೆ ನಡೆಸಿರುವುದನ್ನು ಶಾಸನಗಳು ಉಲ್ಲೇಖಿಸುವುದಿಲ್ಲ. ಆದ್ದರಿಂದ ಇವರು ಆಳ್ವಿಕೆ ಮಾಡಿರಲಿಲ್ಲವೆಂದು ತಿಳಿದುಬರುತ್ತದೆ .

ಎರಡನೆಯ ಈಶ್ವರದೇವ :-

ಬೆಳಗುತ್ತಿ ಸಿಂದರಲ್ಲಿಯೇ ಎರಡನೇ ಈಶ್ವರದೇವನು ಪ್ರಸಿದ್ಧಿ ಪಡೆದಿದ್ದಾನೆ. ಪಟ್ಟಕ್ಕೆ ಬಂದ ಹೊಸತರಲ್ಲಿ ಕೇವಲ ಎಡವಟ್ಟೆ-೭೦, ಬಳ್ಳಾವೆ -೭೦, ನರಿಯಳಿಗೆ -೪೦ ಮತ್ತು ಸಾಂತಳಿಗೆ -೧೦೦೦ ನಾಡಿನಲ್ಲಿಯ ಮಾಲೆ-೭೦, ಮುದುವರೆ-೩೦ ಹಾಗು ಆಸಂದಿ ನಾಡಿನಲ್ಲಿಯ ಮನುಜಮೊಳಲು-೧೨, ಕೊಳಗ-೭೦, ಅರಕೆರೆ-೧೨, ಬ್ರಾಂತಿ-೩೦, ಕುಂದೂರು-೩೦, ಬಾಡ-೫೬, ಅತ್ತಿಗೆರೆ-೧೨, ಪಾಂಡುಗಲು-೧೨, ಆರಬಲ-೭೦, ಹಟ್ಟಿನಾಡು-೧೨ ಮತ್ತು ಮಂಡಲೀನಾಡಿನ ಹೊಳಲಕೆರೆಗಳನ್ನು ' ಹಳ್ಳವೂರು ' (ಹಿರೇಕೆರೂರು ತಾಲೂಕಿನ ಹಳ್ಳೂರು) ರಾಜಧಾನಿಯಿಂದ ಆಳತೊಡಗಿದನು[೫೩].

ಈಶ್ವರದೇವನ ಆಳ್ವಿಕೆಯ ಸಮಯದಲ್ಲಿ ಕರ್ನಾಟಕವು ಅನೇಕ ಬದಲಾವಣೆಗಳಿಗೆ ಒಳಗಾಗಿತ್ತು. ಕಳಚೂರಿಗಳು ಚಾಲುಕ್ಯರಿಂದ ಸಾಮ್ರಾಜ್ಯವನ್ನು ಕಿತ್ತುಕೊಂಡು ಆಳಲು ಪ್ರಾರಂಭಿಸಿದ್ದರು. ಇದೇ ಸಮಯದಲ್ಲಿ ಹೊಯ್ಸಳರು ಕಳಚೂರಿಗಳ ಹಿಡಿತದಲ್ಲಿದ್ದ ಅನೇಕ ಪ್ರಾಂತ್ಯಗಳನ್ನು ವಶಪಡಿಸಿಕೊಳ್ಳಲು ನಿರಂತರ ಹೋರಾಟವನ್ನು ನಡೆಸಿದ್ದರು. ಈಶ್ವರ ದೇವನು ಕ್ರಿ.ಶ. ೧೧೬೪ರಲ್ಲಿ ಬಿಜ್ಜಳನ ಸಾಮಂತನಾಗಿ ಆಳುತ್ತಿದ್ದು, ನಂತರ ಕ್ರಿ.ಶ. ೧೧೭೫ರಲ್ಲಿ ಹೊಯ್ಸಳರ ಎರಡನೇ ಬಲ್ಲಾಳನ ದಂಡನಾಯಕನ ಕೆಳಗೆ 'ಮನ್ನೆಯ'ನಾಗಿ ಮುಂದೆ ಕ್ರಿ.ಶ. ೧೧೭೯ರಲ್ಲಿ ಮಹಾಮಂಡಲೇಶ್ವರನಾದನು. ತದನಂತರ ಕಲಚೂರಿ ಸಂಕಮನ ಸಾಮಂತನಾಗಿ ಅಳ್ಳೂರು ರಾಜಧಾನಿಯಿಂದ ಆಳತೊಡಗಿದನು. ಕ್ರಿ.ಶ. ೧೧೮೦ರಲ್ಲಿ ಈಶ್ವರ ದೇವನು ತನ್ನ ಮಕ್ಕಳಾದ ಪಾಂಡ್ಯದೇವ ಮತ್ತು ಮಲ್ಲಿದೇವರ ಸಹಾಯದಿಂದ ಆಡಳಿತ ನೋಡಿಕೊಳ್ಳುತ್ತಿದ್ದುದನ್ನು ಬೆಳಗುತ್ತಿ ಶಾಸನ ಉಲ್ಲೇಖಿಸಿದೆ[೫೪]. ಇವರು ಅನುವಂಶದಿಂದ ಬಂದ ಅನೇಕ ನಾಡುಗಳನ್ನು ಬೆಳಗವತ್ತಿ (ಇಂದಿನ ಬೆಳಗುತ್ತಿ) ರಾಜಧಾನಿಯಿಂದ ಆಳುತ್ತಿದ್ದರು.

ಈಶ್ವರದೇವನಿಗೆ ಪಾಂಡ್ಯದೇವ , ಮಲ್ಲಿದೇವ , ರಾಯ ಮತ್ತು ವಿಜಯನೃಪಾಲರೆಂಬ ನಾಲ್ಕು ಜನ ಮಕ್ಕಳಿದ್ದರು. ಇವರಲ್ಲಿ ಪಾಂಡ್ಯದೇವನು ಹೊಯ್ಸಳರಿಗೆ ಮತ್ತು ಕಳಚೂರಿಗಳಿಗೆ ನಡೆದ ಯುದ್ಧದಲ್ಲಿ ಭಾಗವಹಿಸಿ ಮಡಿದಿರಬೇಕು. ಹೀಗಾಗಿ ಎರಡನೇ ಮಗ ಮಲ್ಲಿದೇವನೇ ತಂದೆಯ ಉತ್ತರಾಧಿಕಾರಿಯಾದನು.

ಎರಡನೇ ಮಲ್ಲಿದೇವ :-

ಮಲ್ಲಿದೇವನು ಕ್ರಿ.ಶ. ೧೧೮೯ರಲ್ಲಿ ಚಾಲುಕ್ಯರ ನಾಲ್ಕನೇ ಸೋಮೇಶ್ವರನ ಮಾಂಡಲೀಕನಾಗಿ ಬೆಳಗುತ್ತಿ ರಾಜಧಾನಿಯಿಂದ ರಾಜ್ಯಭಾರ ಮಾಡುತ್ತಿದ್ದನು. ಮತ್ತೊಂದು ಶಾಸನವು ಅವನು ಹಳ್ಳಾಪುರ ರಾಜಧಾನಿಯಿಂದ ಆಳುತ್ತಿದ್ದುದನ್ನು ಉಲ್ಲೇಖಿಸಿದೆ. ಆದರೆ ಕ್ರಿ.ಶ. ೧೧೯೫ರ ಶಾಸನ ಚಕ್ರವರ್ತಿಗಳನ್ನು ಉಲ್ಲೇಖಿಸದೇ ಕೇವಲ ಮಲ್ಲಿದೇವನ ಆಳ್ವಿಕೆಯನ್ನು ಹೇಳಿದೆ. ಬಹುಶಃ ಚಾಲುಕ್ಯರ ನಾಲ್ಕನೆಯ ಸೋಮೇಶ್ವರನ ಮರಣದ ನಂತರ ಮಲ್ಲಿದೇವನು ಸ್ವತಂತ್ರನೆಂದು ಘೋಷಿಸಿಕೊಂಡಿರಬೇಕು . ಆದರೆ ಕೆಲವೇ ವರ್ಷಗಳಲ್ಲಿ ಮಲ್ಲಿದೇವನ ಮಂತ್ರಿ ಕಲ್ಲೆಯ ನಾಯಕನು ರಟ್ಟಹಳ್ಳಿಯಲ್ಲಿ ವೈರಿಗಳಿಂದ ಹತನಾದನು.

[illegible]

ಈ ವೈರಿಗಳು ಯಾರೆಂಬುದು ತಿಳಿಯದಿದ್ದರೂ, ಅಲ್ಲಿದೊರೆತ ಅನೇಕ ವೀರಗಲ್ಲುಗಳು ಹೊಯ್ಸಳರಿಂದ ಹತರಾದವರ ಸ್ಮಾರಕಗಳಾಗಿವೆ[೫೫]. ಎರಡನೇ ಬಲ್ಲಾಳನ ರಾಣಿ ಉಮಾದೇವಿ ಬೆಳಗುತ್ತಿಗೆ ಮುತ್ತಿಗೆ ಹಾಕಿದಾಗ ಅದನ್ನು ತಡೆಯಲು ಮಲ್ಲಿದೇವನ ಅಧಿಕಾರಿಗಳಾದ ಹಟ್ಟಿಯನಾಯಕ, ಮೈಲ ನಾಯಕರು ಪ್ರಯತ್ನಿಸಿ ವಿಫಲರಾಗಿ ಓಡಿ ಹೋದರು. ಉಳಿದ ಕೆಲವರು ಮಡಿದರು. ಕೊನೆಗೆ ಕ್ರಿ.ಶ. ೧೧೯೮ರಲ್ಲಿ ಮಲ್ಲಿದೇವನು ಸೋಲನ್ನು ಒಪ್ಪಿಕೊಂಡನು.

ಮೂರನೇ ಈಶ್ವರ ದೇವ :-

ಮಲ್ಲಿದೇವನ ನಂತರ ಆತನ ಮಗ ಈಶ್ವರದೇವನು ಕ್ರಿ.ಶ. ೧೨೦೫ರಲ್ಲಿ ಪಟ್ಟಕ್ಕೆ ಬಂದನು. ತನ್ನ ತಂದೆಗಾದ ಅವಮಾನವನ್ನು ತೀರಿಸಿಕೊಳ್ಳಲು ಈಶ್ವರದೇವನು ಸೇವುಣ ಎರಡನೆಯ ಸಿಂಘಣನ ಗೆಳೆತನ ಬೆಳೆಸಿದನು. ಕ್ರಿ.ಶ. ೧೨೧೫ರ ಶಾಸನ ಅವನು ಸಿಂಘಣನ ಸಾಮಂತನಾಗಿ ಆಳುತ್ತಿದ್ದನು . ಆದರೆ ಸಿಂದರಸರ ಚಲನವಲನಗಳನ್ನು ಸೂಕ್ಷ್ಮವಾಗಿ ಗಮನಿಸಿದ ಹೊಯ್ಸಳರು ಕ್ರಿ.ಶ. ೧೨೧೬ ಮತ್ತು ಕ್ರಿ.ಶ. ೧೨೧೭ರಲ್ಲಿ ಸಿಂದರ ಪ್ರಾಂತಗಳ ಮೇಲೆ ಧಾಳಿ ನಡೆಸಿದರು. ಕ್ರಿ.ಶ. ೧೨೧೬ರಲ್ಲಿ ಮಾದನಬಾವಿಯಲ್ಲಿ ನಡೆದ ಯುದ್ಧದಲ್ಲಿ ಚೆಣ್ಣಯ್ಯನೆಂಬುವನು ಈಶ್ವರದೇವನ ಪರವಾಗಿ ಹೋರಡಿ ಮಡಿದನು.

ಈಶ್ವರದೇವ ಮತ್ತು ಸಿಂಘಣರು ಹಾನಗಲ್ಲ ಕದಂಬರೊಂದಿಗೆ ಹಾಗು ಹೊಯ್ಸಳರೊಂದಿಗೆ ನಿರಂತರ ಸೆಣಸುತ್ತಲೇ ನಡೆದರು. ವೀರಬಲ್ಲಾಳನಿಗೆ ತುಂಬ ವಯಸ್ಸಾಗಿದ್ದರಿಂದ ಸಿಂದರೊಂದಿಗೆ ಹೋರಾಡಲು ಅಸಮರ್ಥನಾದನು. ಆತನ ಮರಣದ ನಂತರ ಉಚ್ಚಂಗಿನಾಡು ಮೊದಲಾದವುಗಳನ್ನು ಸಿಂದರು ವಶಪಡಿಸಿಕೊಂಡರು. ಈಶ್ವರದೇವನಿಗೆ ಕಟ್ಟಲೆ ಮತ್ತು ದೇವ ಎಂಬ ಇಬ್ಬರು ರಾಣಿಯರಿದ್ದು, ಅವರಿಗೆ ಕ್ರಮವಾಗಿ ಕೇಶವ ಮತ್ತು ಸೋವಲೆ, ಕಳಲೆಯರೆಂಬ ಮಕ್ಕಳು ಜನಿಸಿದರು.

ಈಶ್ವರದೇವನ ಮರಣದ ನಂತರ ಕ್ರಿ.ಶ. ೧೨೨೭-೨೮ರ ಸುಮಾರಿಗೆ ಆತನ ಮಗ ಕೇಶವನು ಅಧಿಕಾರಕ್ಕೆ ಬಂದನು. ಸೇವುಣರ ಅಧಿಕಾರಿ ಮಾಯಿದೇವ ದಂಡನಾಯಕನು ಬನವಾಸಿ ಪ್ರಾಂತ್ಯದ ಮೇಲಾಧಿಕಾರಿಯಾಗಿದ್ದಾಗ ಸಿಂದರೊಂದಿಗಿನ ಸಂಬಂಧ ಮುಂದೆ ಹೊನ್ನಬೊಮ್ಮಿಸೆಟ್ಟಿ ಕಾಲದಲ್ಲಿ ಉಳಿಯಲಿಲ್ಲ. ಏಕಾಂಗಿಯಾಗಿಯೇ ಸೇವುಣರ ಜೊತೆ ಯುದ್ಧನಡೆಸಿ, ಕ್ರಿ.ಶ. ೧೨೩೮ರಲ್ಲಿ ಮಡಿದನು. ಹೀಗೆ ತನ್ನ ಆಳ್ವಿಕೆಯ ಕೇವಲ ೧೦ ವರ್ಷಗಳ ಅವಧಿಯಲ್ಲಿ ಕೇಶವನು ಹೆಚ್ಚಿನ ಕಾರ್ಯಕೈಗೊಳ್ಳಲಾಗಲಿಲ್ಲ. ಇವನ ನಂತರ ನಂತರ ಬೆಳಗುತ್ತಿ ಸಿಂಧ ವಂಶವು ಕಣ್ಮರೆಯಾಯಿತು. ಆದರೆ ದಿನಕರ ದೇಸಾಯಿ ಅವರು ಕೇಶವನ ಮಗ ಬೀರದೇವನು ಅಧಿಕಾರಕ್ಕೆ ಬಂದನೆಂದು ಹೇಳಿದ್ದಾರೆ. ಆದರೆ ಬೀರದೇವನು ಧರಿಸಿದ ಬಿರುದುಗಳು ಅವನು ಸಿಂದ ಅರಸನೆಂಬುದನ್ನು ಸ್ಪಷ್ಟಪಡಿಸುವುದಿಲ್ಲ. ಆದ್ದರಿಂದ ಬೀರದೇವನನ್ನು ಸಿಂದ ದೊರೆಯೆಂದು ಒಪ್ಪಲಾಗದು. ಬಹುಶಃ ಆತನು ಪ್ರಾಂತೀಯ ನಾಯಕನಾಗಿರಬೇಕು.

ಒಟ್ಟಿನಲ್ಲಿ ಬೆಳಗುತ್ತಿ ಸಿಂದ ವಂಶವು ಹತ್ತನೆಯ ಶತಮಾನದ ಆರಂಭದಿಂದ ಹದಿಮೂರನೆಯ ಶತಮಾನದ ಮಧ್ಯಭಾಗದವರೆಗೆ ಆಳ್ವಿಕೆ ನಡೆಸಿ, ಅಂದಿನ ರಾಜಕೀಯ ಸ್ಥಿರತೆಗೆ ತಮ್ಮದೇ ಆದ ವಿಶಿಷ್ಟ ಕೊಡುಗೆ ಸಲ್ಲಿಸಿದೆ. ಈ ವಂಶದವರು ಪ್ರಬಲಶಕ್ತಿಗಳಾದ ಹೊಯ್ಸಳ, ಚಾಲುಕ್ಯ, ಕಳಚೂರಿ, ಹಾನಗಲ್ಲ, ಕದಂಬ ಮನೆತನಗಳೊಂದಿಗೆ ಹೋರಾಡುತ್ತ, ಆ ಕಾರಣವಾಗಿ ತನ್ನ ಕಾರ್ಯಕ್ಷೇತ್ರವನ್ನು ವೃದ್ಧಿಸುತ್ತ ಇಲ್ಲವೇ ಕುಗ್ಗಿಸುತ್ತ ಮುನ್ನಡೆಯಿತು. ಪ್ರಮುಖವಾಗಿ ಅದು ಇಂದಿನ ಶಿವಮೊಗ್ಗ, ಧಾರವಾಡ, ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳ ಕೆಲವು ಪ್ರದೇಶಗಳ ಆಡಳಿತವನ್ನು ಹಿಡಿದುಕೊಂಡಿತ್ತು.

ಬೆಳಗುತ್ತಿ ಸಿಂಧರ ವಂಶಾವಳಿ :-

ಸಿಂದರದೇವ (ಸುಮಾರು೯೦೦)

⇓

⇓ ವಿಕ್ರಮಾದಿತ್ಯ (೯೨೪) | ⇓ ನಾಗಯ್ಯ | ⇓ ಬಂದಿಯಣ್ಣ

ವಿಕ್ರಮಾದಿತ್ಯ (೯೨೪)

⇓

ನನ್ನಿಯ ಸಿಂದ (೬೬೭)

⇓

೧ (?)

⇓

೨ (?)

⇓

೩ (?)

⇓

೪ (?)

⇓

ಪಿರಿಯ ಚಟ್ಟರಸ

⇓

ಅಯ್ಯಣ ಜೋಗರಸ (೧೦೬೦-೧೦೯೦)

⇓

ಎರಡನೆಯ ಚಟ್ಟರಸ (೧೦೯೦-೧೧೨೦)

⇓

ಒಂದನೆಯ ಈಶ್ವರದೇವ

⇓

⇓ ಮಾಚರಸ (೧೧೨೦-೧೧೪೦) | ⇓ ಮಲ್ಲಿದೇವ (೧೧೪೦-೧೧೫೫) | ⇓ ಐಹರಸ

ಐಹರಸ

⇓

ಎರಡನೆಯ ಈಶ್ವರದೇವ (೧೧೫೫-೧೧೮೫)

⇓

⇓ ಪಾಂಡ್ಯದೇವ | ⇓ ಎರಡನೆಯ ಮಲ್ಲಿದೇವ | ⇓ ರಾಯರಸ (೧೧೮೫-೧೨೦೫) | ⇓ ವಿಜಯ

ಎರಡನೆಯ ಮಲ್ಲಿದೇವ

⇓

ಮೂರನೆಯ ಈಶ್ವರದೇವ (೧೨೦೫-೧೨೨೯)

⇓

ಕೇಶವದೇವ (೧೨೨೯-೧೨೩೯

ಉಚ್ಚಂಗಿ ಪಾಂಡ್ಯರು :

ಕರ್ನಾಟಕದ ಮುಖ್ಯವಾದ ಮಾಂಡಲೀಕ ರಾಜರಲ್ಲಿ ಉಚ್ಚಂಗಿ ಪಾಂಡ್ಯರು ಒಬ್ಬರಾಗಿದ್ದಾರೆ. ಇವರು ತಮ್ಮನ್ನು ಚಂದ್ರವಂಶೀಯರೆಂದು ಹೇಳಿಕೊಂಡಿದ್ದಾರೆ. ಇವರು ಸಪ್ತಕೊಂಕಣಗಳಲ್ಲಿ ಒಂದಾದ ಹೈವೆಯ ಅರಸರೂ ಹೌದು. ಇವರ ರಾಜಧಾನಿ ಸಿಸುಗುಳಿ. ಕ್ರಿ.ಶ. ೧೧೧೩ರ ಪಾಂಡ್ಯರಾಜ ಗೋಕರ್ಣಪುರದ ಅರಸನೆಂದೂ, ಕೊಂಕಣ ರಕ್ಷಕನೆಂದೂ ಹೇಳಿಕೊಂಡಿದ್ದಾನೆ. ಪಶ್ಚಿಮ ಚಾಲುಕ್ಯ ರಾಜನಾದ ಜಯಸಿಂಹನು ಸಪ್ತ ಕೊಂಕಣಗಳನ್ನು ಜಯಸಿದ ಮೇಲೆ, ಪಾಂಡ್ಯರು (ಹಿಂದಿನ ಮೈಸೂರು ಸಂಸ್ಥಾನದ ಬಡಗಣ ಗಡಿಯ) ಬಳ್ಳಾರಿ ಜಿಲ್ಲೆಯ ಈಶಾನ್ಯಕ್ಕಿರುವ ಗಿರಿದುರ್ಗವಾದ ಉಚ್ಚಂಗಿಗೆ ತೆರಳಿದನು. ಈ ಪಾಂಡ್ಯರು ನೊಳಂಬವಾಡಿ ಮೂವತ್ತೆರಡು ಸಾವಿರದ ನಾಡಿನ ಅರಸರಾಗಿದ್ದರು. ಮಂಗಯ್ಯ ಇಲ್ಲವೆ ಆದಿತ್ಯದೇವ ಎಂಬುವನು ಪಾಂಡ್ಯ ಕುಲದ ಸ್ಥಾಪಕ. ಅವನ ಮಗ ಚೇದಿರಾಜ, ಚೇದಿರಾಜನ ಮಗ ಪಾಂಡ್ಯ ಈ ಪಾಂಡ್ಯನು ಚೇದಿಕುಲದ ಅರಸರನ್ನು ಸದೆಬಡಿದವನೆಂಬ ಪ್ರತೀತಿ ಇದೆ. ಪಾಂಡ್ಯನು ಚೇದಿ ದೇಶದ ಅರಸರನ್ನು ಸದೆಬಡಿದನೆಂಬ ಪ್ರತೀತಿ ಇದೆ. ಪಾಂಡ್ಯನು ಚೇದಿದೇಶದ ಅಭಿಮಾನಿಯಾದುದರಿಂದ ಇವನಿಗೆ ಪಾಂಡ್ಯನೆಂಬ ಹೆಸರು ಬಂದಿರಬಹುದು. ತ್ರಿಭುವನ ಮಲ್ಲ ಪಾಂಡ್ಯನು ಚಾಲುಕ್ಯ ತ್ರಿಭುವನ ಮಲ್ಲನ ಮಾಂಡಲೀಕನಾಗಿ ಕ್ರಿ.ಶ. ೧೦೮೩ರಲ್ಲಿ ನೊಳಂಬವಾಡಿಯನ್ನು ಆಳುತ್ತಿದ್ದನು[೫೬]. ಕ್ರಿ.ಶ. ೧೧೦೧ರಲ್ಲಿ ಬಲ್ಲಕುಂದೆ ೩೦೦ ನಾಡಿಗೂ ಮಾಡಂಲೀಕನಾಗಿದ್ದನು. ದಾವಣಗೆರೆ ಸಮೀಪದಲ್ಲಿರುವ ಬೆಳ್ಳೂರು ಅವರ ರಾಜಧಾನಿಯಾಗಿರಬೇಕು. ನಂತರ ಬಂದ ರಾಯಪಾಂಡ್ಯನಿಗೂ ಇದು ರಾಜಧಾನಿಯಾಗಿದ್ದು ನೊಳಂಬವಾಡಿಯನ್ನು ಶಾಂತಲಿಗೆಯನ್ನೂ ಆಳಿದನು. ರಾಯಪಾಂಡ್ಯನಿಗೆ ಪಂಡಿತ ಪಾಂಡ್ಯ, ವೀರ ಪಾಂಡ್ಯ, ವಿಜಯ ಪಾಂಡ್ಯ ಇಲ್ಲವೇ ರಾಮದೇವ ಎಂಬ ಮೂವರು ಮಕ್ಕಳಿದ್ದರು[೫೭]. ವೀರಪಾಂಡ್ಯನು ಉಚ್ಚಂಗಿಯನ್ನು ರಾಜಧಾನಿಯಾಗಿ ಮಾಡಿಕೊಂಡನು[೫೭]. ಇವನು ನೊಯ್ಯೇಶ್ವರ ದೇವರನ್ನು ಪ್ರತಿಷ್ಠಾಪಿಸಿ, ದಾನದತ್ತಿಗಳನ್ನು ನೀಡಿದನು[೫೮]. ಮುಂದಿನ ಅರಸನಾದ ವಿಜಯ ಪಾಂಡ್ಯನಿಗೆ ಇವನಿಗೆ ಉಚ್ಚಂಗಿಯೇ ಪ್ರಮುಖ ಕೇಂದ್ರವಾಗಿತ್ತು[೫೯]. ಇವನು ಕ್ರಿ.ಶ. ೧೧೪೮ ರಿಂದ ಕ್ರಿ.ಶ. ೧೧೮೭ರವರೆಗೆ ನೊಳಂಬವಾಡಿ ಪ್ರಾಂತ್ಯದಿಂದ ಉಚ್ಚಂಗಿದುರ್ಗವನ್ನು ಆಳಿದನು[೬೦].

ಕಲ್ಯಾಣದ ಚಾಲುಕ್ಯರು ಆಳ್ವಿಕೆ ಮಾಡುವಾಗ ನೊಳಂಬವಾಡಿ ಮುವತ್ತೆರಡು ಸಾವಿರವು ಆಡಳಿತದ ಒಂದು ಘಟಕವಾಗಿತ್ತು. ಇದರಲ್ಲಿ ಕದಂಬಳಿಗೆ ಸಾವಿರ, ಸಿಂದವಾಡಿ ಸಾವಿರ, ಕೋಗಳಿ ಐದುನೂರು ಇತ್ಯಾದಿ ಉಪ ಆಡಳಿತ ವಿಭಾಗಗಳಿದ್ದವು. ತ್ರಿಭುವನ ಮಲ್ಲ ರಾಯ ಪಾಂಡ್ಯನು ನೊಳಂಬವಾಡಿ, ಶಾಂತಲಿಗಿ ಪ್ರಾಂತ್ಯಗಳನ್ನು ಆಳಿದನೆಂದು ಕ್ರಿ.ಶ. ೧೧೨೫ರ ಶಾಸನವೊಂದರಿಂದ ತಿಳಿದುಬರುತ್ತದೆ[೬೧]. ನೊಳಂಬವಾಡಿ ಮುವತ್ತೆರಡು ಸಾವಿರಕ್ಕೆ ಉಚ್ಚಂಗಿ ದುರ್ಗವನ್ನು ಕೇಂದ್ರವನ್ನಾಗಿ ಮಾಡಿಕೊಂಡು ಪಾಂಡ್ಯರು ಆಳ್ವಿಕೆ ಮಾಡಿದಂತೆ ಶಾಸನಗಳಿಂದ ತಿಳಿದುಬರುತ್ತದೆ. ತ್ರಿಭುವನಮಲ್ಲ ಪಾಂಡ್ಯ[೬೨]. ರಾಯಪಾಂಡ್ಯ[೬೩]. ವೀರಪಾಂಡ್ಯ[೬೪] ಮತ್ತು ವಿಜಯಪಾಂಡ್ಯರು[೬೫] ಉಚ್ಚಂಗಿಯನ್ನು ಕೇಂದ್ರವನ್ನಾಗಿ ಮಾಡಿಕೊಂಡು, ನೊಳಂಬವಾಡಿ

ಮೂವತ್ತೆರಡು ಸಾವಿರದಲ್ಲಿ ಆಳ್ವಿಕೆ ನಡೆಸಿದರು. ನೊಳಂಬವಾಡಿಯನ್ನು ತ್ರಿಭುವನ ಮಲ್ಲ ರಾಯ ಪಾಂಡ್ಯನು ಆಳುತ್ತಿರುವಾಗ ಆತನಿಗೆ ' ಪರಿಚ್ಛೇದ ಗಂಡ 'ನೆಂಬ ಬಿರುದಿತ್ತೆಂದು ಕ್ರಿ.ಶ. ೧೦೮೩ ಮತ್ತು ೧೧೧೨ರ ಶಾಸನಗಳಿಂದ ತಿಳಿದುಬರುತ್ತದೆ[೬೬]. ವಿಜಯ ಪಾಂಡ್ಯನು ಉಚ್ಚಂಗಿಯ ಪಾಂಡ್ಯರಲ್ಲಿಯೇ ಪ್ರಮುಖನೆಂದು ಇದರಿಂದ ಊಹಿಸಬಹುದಾಗಿದೆ. ಇವನು ಸಪ್ತ ಕೊಂಕಣಗಳನ್ನು ಬಳಸಿ ಕನಕ ಪರ್ವದಲ್ಲಿ ಮತ್ಸ್ಯ ಲಾಂಛನದ ಜಯಸ್ತಂಭವನ್ನು ನೆಡೆಸಿದ್ದನೆಂಬ ಉಲ್ಲೇಖವು ಬಡಗಿ ಮಟ್ಟಿ ಶಾಸನವೊಂದರಲ್ಲಿ ತಿಳಿದುಬರುತ್ತದೆ. ಇದೇ ಶಾಸನದಲ್ಲಿ ಅವನ ಬಿರುದುಗಳು ಉಲ್ಲೇಖವಾಗಿವೆ.

ಚಾಲುಕ್ಯ ರಾಜನಾದ ನಾಲ್ಕನೆಯ ಸೋಮೇಶ್ವರನ ವಿರುದ್ಧ ಕ್ರಾಂತಿ ಕಹಳೆ ಊದಿ ,ಸ್ವತಂತ್ರ ಅರಸನಾಗಲು ವಿಜಯ ಪಾಂಡ್ಯ ಯತ್ನಿಸಿದ. ಆನೆಗಳಂತೆ ಇದ್ದ ಪಾಂಡ್ಯರಿಗೆ ಸಿಂಹವಾಗಿದ್ದ (ದಿ ಲಯನ್ ಟು ದಿ ಎಲೆಫೆಂಟ್ ಪಾಂಡ್ಯ)[೬೭] ಎಂಬ ಬಿರುದನ್ನು ಧರಿಸಿದ್ದ ನಾಲ್ಕನೇ ಸೋಮೇಶ್ವರನಂಥ ಪ್ರಬಲ ಅರಸನ ವಿರುದ್ಧ ತಿರುಗಿ ಬಿದ್ದ, ವಿಜಯ ಪಾಂಡ್ಯನ ಸಾಹಸ ಶ್ಲಾಘನೀಯ.

ಉಚ್ಚಂಗಿಯ ಪಾಂಡ್ಯರಲ್ಲಿ ಖ್ಯಾತನಾದ ವಿಜಯಪಾಂಡ್ಯನು ಆಳ್ವಿಕೆ ನಡೆಸುತ್ತಿರುವಾಗ ಕ್ರಿ.ಶ. ೧೧೭೭ ರಲ್ಲಿ ಹೊಯ್ಸಳರ ೩ನೇ ಬಲ್ಲಾಳನು ತುಂಬಾ ಪರಿಶ್ರಮದಿಂದ ಆಕ್ರಮಣ ಮಾಡಿ, ಕೊನೆಗೆ ವಿಜಯ ಪಾಂಡ್ಯನನ್ನು ಸೋಲಿಸಿ, ಉಚ್ಚಂಗಿ ದುರ್ಗವನ್ನು ವಶಪಡಿಸಿಕೊಂಡನು. ಮುಂದೆ ಕಾಲಾಂತರದಲ್ಲಿ ಉಚ್ಚಂಗಿ ದುರ್ಗವು ಹೊಯ್ಸಳರಲ್ಲೇ ಉಳಿಯಿತು .

ಉಚ್ಚಂಗಿಯ ಪಾಂಡ್ಯರೆಂದೇ ಕರೆಸಿಕೊಂಡ ಇವರು ಸುಮಾರು ೧೩೭ ವರ್ಷಗಳ ಕಾಲ ಉಚ್ಚಂಗಿ ನೆಲೆವೀಡಿನಿಂದ ನೊಳಂಬವಾಡಿ ೩೨೦೦೦ದಲ್ಲಿ ಆಳ್ವಿಕೆಯನ್ನು ಮಾಡಿದರು. ಚಾಲುಕ್ಯರ ನಂತರ ಈ ನಾಡು ಹೊಯ್ಸಳರಿಗೆ ಹಸ್ತಾಂತರವಾಯಿತು. ಇದರಿಂದಾಗಿ ಒಂದು ಪ್ರಬಲವಾದ ಕರ್ನಾಟಕದ ರಾಜ ಸಂತತಿಯಾದ ಚಾಲುಕ್ಯರ ಪತನದ ಹಾದಿ ಮತ್ತು ಅವರ ರಾಜ್ಯದಲ್ಲಿ ಹೊಯ್ಸಳರ ಪ್ರವೇಶವು ಪ್ರಮುಖ ಘಟ್ಟವೊಂದು ರೂಪು ಪಡೆಯಿತು.

[illegible]

[illegible]

[illegible]

[illegible]

ಉಚ್ಚಂಗಿ ಪಾಂಡ್ಯರ ವಂಶ ವೃಕ್ಷ

ವಿಷ್ಣು
⇓
ಬ್ರಹ್ಮ
⇓
ಅತ್ರಿ
⇓
ಸೋಮ
⇓
ಯಮರಾಜ
⇓

- ಬಲರಾಮ
- ಕೃಷ್ಣ
  ⇓
  ಅನೇಕ ತಲೆಮಾರುಗಳ ನಂತರ
  ಮಂಗಯ್ಯ ಅಥವಾ ಆದಿತ್ಯದೇವ
  ⇓
  ಪಾಂಡ್ಯ
  ⇓
  - ಚೇದಿರಾಜ
    ⇓
    ಪಲಮಾಂದ ಪಾಂಡ್ಯ ೧
    ⇓
    ಇರುಕವೇಳ ೨
    ⇓
    ರಾಯಪಾಂಡ್ಯ-ರಾಣಿ ಸೋವಳದೇವಿ ೩
    ⇓
    - ೪ಪಂಡಿತ ಪಾಂಡ್ಯ
      ⇓
      ತ್ರೈಲಪ
    - ೫ ವೀರಪಾಂಡ್ಯ
      ⇓
      ೧. ಗಂಗಾದೇವಿ
      ↕ → ರಾಣಿಯರು
      ೨. ವಿಜಯದೇವಿ
    - ೪ ಪಲಮಾಂಡದೇವ
    - ವಿಜಯಪಾಂಡ್ಯ ಅಥವಾ ಕಾಮದೇವ
  - ಇರುಕಪಾಲ

ನೊಳಂಬರ ಆಳ್ವಿಕೆ :-

ಗಂಗ, ಚಾಲುಕ್ಯ, ಚೋಳ ಮತ್ತು ಹೊಯ್ಸಳರ ಮಹಾ ಸಾಮಂತರಾಗಿ ಆಳಿದ ನೊಳಂಬರು ಖ್ಯಾತಿವೆತ್ತ ಸಾಮಂತ ಕುಲದವವರಾಗಿದ್ದು, ಇವರು ಆಳುತ್ತಿದ್ದ ಒಟ್ಟು ಪ್ರದೇಶವನ್ನು ನೊಳಂಬವಾಡಿ ಅಥವಾ ನೊಳಂಬವಾಡಿ ೩.೨೦೦ ನಾಡು ಎಂದು ಕರೆಯುತ್ತಿದ್ದರು. ನೊಳಂಬರು ತಾವು ಪಲ್ಲವರೆಂದು ಹೇಳಿಕೊಂಡಿದ್ದಾರೆ. ಆದರೆ ನೊಳಂಬರಿಗೂ, ಪಲ್ಲವರಿಗೂ ಇದ್ದ ನಿರ್ದಿಷ್ಟ ಸಂಬಂಧವೇನೆಂಬುದು ಖಚಿತವಾಗಿ ತಿಳಿದುಬಂದಿಲ್ಲ. ನೊಳಂಬ ಮನೆತನದ ಅರಸರಿಗೆ ನೊಳಂಬ ಪಲ್ಲವರೆಂದು ಹೆಸರು. ಇದರಿಂದ ಇವರದು ಪಲ್ಲವ ಭಿನ್ನಶಾಖೆಯೆಂಬುದು ವ್ಯಕ್ತವಾಗುವುದು. ಹೇಮಾವತಿ ಅಥವಾ ಹೆಂಜೇರುವಿನ ಸ್ತಂಭ ಶಾಸನದಲ್ಲಿ ಇವರ ವಂಶವೃಕ್ಷವಿದೆ. ಇವರು ಈಶ್ವರಿ ವಂಶದವರೆಂದೂ, ಕೆಂಚಿಯ ಪಲ್ಲವ ರಾಜ ತ್ರಿಣಯನು ಇವರ ಮೂಲ ಪುರುಷನೆಂದು ಐತಿಹ್ಯವಿದೆ. ನೊಳಂಬರೂ ಸಹ ಇತರೆ ರಾಜವಂಶಗಳಂತೆ ತಾವು ಪಲ್ಲವ ವಂಶದಿಂದ ಬಂದವರೆಂದು ಹೇಳಿಕೊಂಡಿರುವರು. ಅವರ ಶಾಸನಗಳಲ್ಲಿ ಕಾಂಚಿಪುರ ಪಲ್ಲವ ವಂಶದ ರಾಜ 'ಪಲ್ಲವಾಭರಣ' 'ಪಲ್ಲವ ಕುಲಾನ್ವಯ' ಮುಂತಾಗಿ ಹೆಮ್ಮೆಯಿಂದ ಹೇಳಿಕೊಂಡಿರುವರು. ಚಿತ್ರದುರ್ಗ ಮತ್ತು ಇತರ ಭಾಗಗಳಲ್ಲಿ ಕಂಡುಬರುವ ನೊಳಂಬರು, ಈ ಸಂತತಿಯ ರಾಜ ಕುಲದ ಪೀಳಿಗೆಯವರೆಂಬುದಾಗಿ ಭಾವಿಸಲಾಗಿದೆ.

ನೊಳಂಬರಿಗೆ ಸಂಬಂಧಿಸಿದ ಅತ್ಯಂತ ಪ್ರಾಚೀನ ಶಿಲಾ ಶಾಸನವು ಅಣಜಿಯ ದಾವಣಗೆರೆ-೧೬೧ ಗುಡ್ಡಪ್ಪನ ಹೊಲದಲ್ಲಿ ದೊರೆತಿದೆ[೬೮]. ಇದರ ಕಾಲ ಕ್ರಿ.ಶ. ೪೫೦ ಆಗಿದ್ದು, ಇದರಲ್ಲಿ ಪಲ್ಲವ ನನಕ್ಕಸರಾಜನು ಕೃಷ್ಣವರ್ಮ ರಾಜನ ಸೈನ್ಯವನ್ನು ಪರಾಭವಗೊಳಿಸಿದನೆಂದು ಉಲ್ಲೇಖಿತವಾಗಿದೆ. ಕೃಷ್ಣವರ್ಮ ರಾಜ ಕದಂಬ ಶಾಂತಿವರ್ಮನ ತಮ್ಮನಾಗಿದ್ದು, ಕದಂಬ ಸಾಮ್ರಾಜ್ಯದ ಒಂದು ಪ್ರಾಂತ್ಯದಲ್ಲಿ ಸಾಮಂತನಾಗಿ ಆಳುತ್ತಿದ್ದನು. ಪಲ್ಲವ ನನಕ್ಕಸರಾಜನ ಹೆಸರು ಮತ್ತ್ಯಾವ ಶಾಸನದಲ್ಲಿಯೂ ಕಾಣಬರುವುದಿಲ್ಲ. ಈತನು ಬೇರೆಯ ಹೆಸರಿನಿಂದ ನಮಗೆ ತಿಳಿದು ಬರುವ ಪಲ್ಲವ ನೊಳಂಬ. ಪಲ್ಲವರ ಆಳ್ವಿಕೆಯ ಆರಂಭದ ಕಾಲ ಕ್ರಿ.ಶ. ೭೪೦ ಎಂದು ವ್ಯಕ್ತವಾಗುವುದು. ಕ್ರಿ.ಶ. ೪೫೦-ಕ್ರಿ.ಶ. ೮೧೫ರ ಕಾಲಕ್ಕೆ ಸಂಬಂಧಿಸಿದ ಚಿಕ್ಕ ಮಧುರೆ ಮಲ್ಲೇಶ್ವರ ದೇವಾಲಯದಲ್ಲಿರುವ ಸ್ತಂಭ ಶಾಸನಗಳು ಸಿಂಹಪೋತನ ಮಗ ಪರಮೇಶ್ವರ ಪಲ್ಲವಾಧಿರಾಜ ಮತ್ತು ಅವನ ಮಗ ಪಲ್ಲವಮಲ್ಲ ಇವರು ರಾಷ್ಟ್ರಕೂಟರ ಸಾಮಂತರಾಗಿ ಕೆಲವು ನಾಡುಗಳ ಆಡಳಿತ ನಡೆಸುತ್ತಿದ್ದರೆಂದು ತಿಳಿಸುವವು[೬೯]. ತಲಕಾಡಿನ ಗಂಗರು ರಾಷ್ಟ್ರಕೂಟರಿಂದ ಪರಾಭವಗೊಂಡ ನಂತರ ಗಂಗವಾಡಿಯು ರಾಷ್ಟ್ರಕೂಟ ಸಾಮ್ರಾಜ್ಯದಲ್ಲಿ ವಿಲೀನಗೊಂಡಿತು. ಇದರಿಂದ ನೊಳಂಬರು ರಾಷ್ಟ್ರಕೂಟರ ಆಶ್ರಯ ಪಡೆದು ಅವರ ಸಾಮಂತರಾಗಬೇಕಾಯಿತು.

ಮೊದಲನೆಯ ಶಾಸನವು ಜಗತ್ತುಂಗ ಪ್ರಭು ವರ್ಷ ಪ್ರತಾಪವಲೋಕ ಶ್ರೀವಲ್ಲಹ ತನ್ನ ಚಕ್ರಾಧಿಪತ್ಯವನ್ನಾಳುತ್ತಿರಲು, ಪರಮೇಶ್ವರ ಪಲ್ಲವಾಧಿ ನೊಳಂಬಾಳಿಗೆ ೧೦೦೦ ಮತ್ತು ನೀರ್ಗುಂದ ೩೦೦ ನಾಡುಗಳನ್ನು ಸಾಮಂತನಾಗಿ ಆಳುತ್ತಿದ್ದು, ಪರಮೇಶ್ವರನ ರಾಣಿ ಗಾವಗನಬ್ಬೆ ಸಂಕ್ರಾಂತಿಯಂದು ವಿಷ್ಣುವನ್ನು ಭಜಿಸಿದುದನ್ನು ಮತ್ತು ನಾಗಮಾರಬ್ಬೆ (ಪ್ರಾಯಶಃ ಪರಮೇಶ್ವರನ ಮತ್ತೊಬ್ಬ ರಾಣಿ) ಶಿವಾಲಯಕ್ಕೆ ನೀಡಿದ ಭೂ ದತ್ತಿಯನ್ನು ತಿಳಿಸುವುದು. ಇದೇ ಶಾಸನದಿಂದ ಸಿಂಹಪೋತನ ಓರ್ವ ಮಗಳು ಪರಮೇಶ್ವರ ಪಲ್ಲವರಾಜನ ಸೋದರಿ ಗಂಗ ಪೆರ್ಮಾಡಿಯ ರಾಣಿಯಾಗಿದ್ದಳೆಂದು ತಿಳಿದು ಬರುವುದು. ಗಂಗ ಮತ್ತು ನೊಳಂಬ ಮನೆತನದವರಲ್ಲಿ ಒಂದೆರೆಡು ಬಾರಿ ವೈವಾಹಿಕ ಸಂಬಂಧಗಳು ನಡೆದವೆಂಬುದು ಇದರಿಂದ ತಿಳಿದುಬರುವುದು. ಸಮಸ್ತ ಲೋಕ ಪ್ರಸಿದ್ಧ ಪಲ್ಲವಾಧಿರಾಜ ರಾಷ್ಟ್ರಕೂಟ ಮಹಾ ಸಾಮಂತನಾಗಿ ಅನೇಕ ನಾಡುಗಳನ್ನು ಆಳುತ್ತಿರಲು ಆತನ ರಾಣಿ ಗಾವಗನಬ್ಬೆಯು ಮದರಿಕಲ್ಲಿನ ಗಾವಗನೇಶ್ವರ ದೇವಾಲಯ ಕಟ್ಟಿಸಿ ಉದಾರವಾಗಿ ಭೂಮಿಯನ್ನು ದತ್ತಿ ನೀಡಿದಳೆಂದು ಶಾಸನವೊಂದು ತಿಳಿಸುತ್ತದೆ.

ಜಗಲೂರು ತಾಲೂಕು ಮುಷ್ಟೂರಿನ ಕಲ್ಲೇಶ್ವರ ದೇವಾಲಯದ ಕ್ರಿ.ಶ. ೯೨೦ರ ಶಾಸನವು[೨೦] ನೊಳಂಬಾಧಿರಾಜ ಅಯ್ಯಪ್ಪದೇವ ನೊಳಂಬವಾಡಿ ಮತ್ತಿತರ ನಾಡುಗಳನ್ನು ಆಳುತ್ತಿದ್ದನೆಂದಿದೆ. ಎರಡನೆಯ ಶಾಸನವು ಜವಯ್ಯನ ಮಗ ನಾಥವರ್ಮನು ಮುಷ್ಟೂರಿನ ಕಲ್ಲೇಶ್ವರ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದನೆಂದಿದೆ.

ನೊಳಂಬ ರಾಜರುಗಳು ತಮ್ಮ ವಿಶಾಲ ರಾಜ್ಯವನ್ನು ಹಲವು ಆಡಳಿತ ಘಟಕಗಳನ್ನಾಗಿ ವಿಭಾಗಿಸಿ, ಆ ಘಟಕಗಳಿಗೆ ಮಂತ್ರಿಗಳನ್ನು ಸಾಮಂತ ಅಧಿಕಾರಿಗಳನ್ನು ಆಡಳಿತ ನಿರ್ವಹಣೆಗೆ ನೇಮಿಸುತ್ತಿದ್ದರು. ಕೆಲವು ವೇಳೆ ಅವಿಧೇಯನಾಗಿ ನಡೆದುಕೊಂಡ ಸಾಮಂತನನ್ನು ಶಿಕ್ಷಿಸುವಂತೆ ಮತ್ತೊಬ್ಬ ಸಾಮಂತನಿಗೂ, ಮಂತ್ರಿಗೂ ಆಜ್ಞೆ ನೀಡುತ್ತಿದ್ದರು.

ನಿಟ್ಟೂರು ಕಲ್ಲೇಶ್ವರ ದೇವಾಲಯದ ಕ್ರಿ.ಶ. ೧೦೩೫ ರ ಶಾಸನವು[೨೧] ಪಲ್ಲವ ಕುಲಾಭರಣ ಉದಯಾದಿತ್ಯ ದೇವ ನೊಳಂಬ ಪಲ್ಲವ ಪೆರ್ಮಾಡಿ ದೇವ ಚಾಲುಕ್ಯ ಜಯಸಿಂಹ ದೇವನ ಸಾಮಂತನಾಗಿ ಆಳುತ್ತಿದ್ದನೆಂದು ಉಲ್ಲೇಖಿಸುತ್ತದೆ. ಇದೇ ಶಾಸನದಿಂದ ಕಂಪ್ಲಿಯು ಈತನ ರಾಜಧಾನಿಯಾಗಿತ್ತೆಂದು ತಿಳಿದು ಬರುತ್ತದೆ. ಮುದಹದಡಿ ಈಶ್ವರ ದೇವಾಲಯದ ಕ್ರಿ.ಶ. ೧೦೩೩ರ ಶಾಸನ ಮತ್ತು ಅವರೆಗೆರೆಯ ಕ್ರಿ.ಶ. ೧೦೪೨ರ ಶಾಸನ[೨೨] ಜಗದೇಕ ಮಲ್ಲ ಇಮ್ಮಡಿ ನೊಳಂಬ ಪಲ್ಲವ ಪೆರ್ಮಾಡಿಯು ಹಲವು ಪ್ರಾಂತ್ಯಗಳನ್ನು ಅಪಾರ ಸಂಪತ್ತಿನೊಂದಿಗೆ ವಿವೇಕದಿಂದ ಶಾಂತಚಿತ್ತನಾಗಿ ಸಶಕ್ತ ಸೈನ್ಯದ ನೆರವಿನಿಂದ ಚಾಲುಕ್ಯ ಜಗದೇಕಮಲ್ಲ ದೇವನ ಮಹಾ ಸಾಮಂತನಾಗಿ ಆಳುತ್ತಿದ್ದ ಉಲ್ಲೇಖವಿದೆ. ಜಗದೇಕಮಲ್ಲನು ಇಮ್ಮಡಿ ನೊಳಂಬ ಪೆರ್ಮಾಡಿಯ ಪ್ರಧಾನಿಯಾಗಿದ್ದನು ಎಂದು ತಿಳಿದು ಬರುತ್ತದೆ. ತ್ರೈಲೋಕ್ಯಮಲ್ಲ ನನ್ನಿ ನೊಳಂಬ ಪಲ್ಲವ-ಪೆರ್ಮಾಡಿಯು ಚಾಲುಕ್ಯರ ಸಾಮಂತಾಧಿಕಾರಿಯಾಗಿ ಆಳುತ್ತಿದ್ದನೆಂದು ಶಾಸನವೊಂದರಿಂದ ತಿಳಿದು ಬರುವುದು . ಇವನು ಚೋಳರ ಮೇಲೆ ನಡೆದ ಯುದ್ಧದಲ್ಲಿ ವಿಜಯ ಸಾಧಿಸಿ, ಬಮ್ಮಕೂರನ್ನು ಪಡೆದುಕೊಂಡ ಬಗ್ಗೆ ಚನ್ನಗಿರಿ ತಾಲೂಕಿನ ಶಾಸನಗಳಿಂದ ತಿಳಿದುಬರುತ್ತದೆ[೨೩].

[illegible]

[illegible]

[illegible]

[illegible]

ದಾದಿರ್ ವಿಲೇಜ್-೧೦೦೦ ಬಲ್ಲಕುಂದೆನಾಡು-೩೦೦೦ ಮತ್ತು ಕೂಂನ್ದಾಯೂರ್‌ಗಳನ್ನು ಈತ ಆಳುತ್ತಿರುವಾಗ ಅಧೀನ ಅಧಿಕಾರಿಗಳಿಂದ, ಮಂತ್ರಿಗಳಿಂದ ಪ್ರಶಂಸೆಗೊಳಗಾಗಿದ್ದನೆಂದು ಶಾಸನವೊಂದರಿಂದ ತಿಳಿದುಬರುತ್ತದೆ[೭೪]. ಕ್ರಿ.ಶ.೧೦೪೨ರ ಹದಡಿ ಈಶ್ವರ ದೇವಾಲಯದ ಮತ್ತು ಕ್ರಿ.ಶ.೧೦೪೫ರ ವಡ್ಡನಹಳ್ಳಿಯ ಶಾಸನಗಳು[೭೫] ತ್ರೈಲೋಕ್ಯಮಲ್ಲ ನನ್ನಿ ನೊಳಂಬ ಪಲ್ಲವನು ಹಲವು ಪ್ರಾಂತ್ಯಗಳನ್ನು ವೈಭವದಿಂದ ಆಳುತ್ತಿದ್ದನೆಂದು ಉಲ್ಲೇಖಿಸುತ್ತವೆ. ಮೊದಲನೆಯ ಶಾಸನವು ಪ್ರಧಾನಿ ಪಲ್ಲವ ಕುಲಾಭರಣ ಬ್ರಹ್ಮಾಧಿರಾಜನಿಂದ ರಚಿತವಾದುದೆಂದು ಅದೇ ಶಾಸನದಿಂದ ತಿಳಿದು ಬರುವುದು. ಎರಡನೆಯ ಶಾಸನದಲ್ಲಿ ನೊಳಂಬ ತ್ರೈಲೋಕ್ಯಮಲ್ಲನ ಸಾಮಂತನಾಗಿ ಬೆಳುವನೂರಿನಲ್ಲಿ ಆಳುತ್ತಿದ್ದ ನಾಗಯ್ಯ ನಾಯಕ ಶೌರ್ಯ ಸದ್ಗುಣಗಳ ಗಣಿಯಾಗಿದ್ದನು. ಉದಾರವಾಗಿ ಸತ್ಪಾತ್ರರಿಗೆ ದಾನ ಮಾಡುತ್ತಿದ್ದನೆಂದು ಉಲ್ಲೇಖಿತವಾಗಿದೆ. ಕ್ರಿ.ಶ. ೧೦೫೪ರ ಅಸಗೋಡು ಶಂಭುಲಿಂಗ ದೇವಾಲಯದ[೭೬] ಶಾಸನದಲ್ಲಿ, ಪಲ್ಲವ ಕುಲ ವೈಭವ ನರಸಿಂಗದೇವನು ಚಾಲುಕ್ಯ ತ್ರೈಲೋಕ್ಯ ದೇವನ ಪಾದ ಕಮಲಗಳಲ್ಲಿ ಆಶ್ರಯ ಪಡೆದು ಅನೇಕ ಪ್ರಾಂತ್ಯಗಳನ್ನು ವೈಭವದಿಂದ ಆಳುತ್ತಿದ್ದನೆಂದು ತಿಳಿದು ಬಂದಿದೆ. ಇದೇ ಶಾಸನದಿಂದ ನೊಳಂಬ ನರಸಿಂಗದೇವನ ಮಗ ಕುಮಾರ ಬೋರಯ್ಯನು ಉಚ್ಚಂಗಿಯಲ್ಲಿ ತನ್ನ ತಂದೆಯ ಸಾಮಂತನಾಗಿ ಆಳುತ್ತಿದ್ದನು ಎಂದು ತಿಳಿದು ಬರುವುದು. ನೊಳಂಬ ನರಸಿಂಗ ದೇವನ ಸಾಮಂತನಾಗಿ ಕದಂಬಳಿಗೆ ನಾಡನ್ನು ಆಳುತ್ತಿದ್ದ ಮಣ್ಣಿಯ ನಾಗತಿಯರಸ ಅಸಗೋಡಿನ ಸ್ವಯಾಂಭು ದೇವಾಲಯಕ್ಕೆ ಮತ್ತು ಕಾಳಾ ಮುಖಸ್ಥಾನ ಕರ್ತಾರ ಮಠಕ್ಕೆ ನೀಡಿದ ದತ್ತಿ, ಈ ದೇವಾಲಯ ನಿರ್ಮಾಣದ ಮೇಲ್ವಿಚಾರಣೆ ನಡೆಸಿದ ಅಬ್ಬೋಜನಿಗೆ ನೀಡಿದ ಸಂಭಾವನೆಯ ವಿಷಯಗಳೂ ಇದೇ ಶಾಸನದಲ್ಲಿ ನಿರೂಪಿಸಲ್ಪಟ್ಟಿವೆ. ಕ್ರಿ.ಶ.೧೧೬೦ರ ವಾಸನದ ಕೇದಾರೇಶ್ವರ ದೇವಾಲಯದ[೭೭] ಶಾಸನವು ಭಾಗಶಃ ನಾಶವಾಗಿದ್ದು, ಅದು ಓರ್ವ ನೊಳಂಬ ರಾಜನು ಆಳುತ್ತಿದ್ದನೆಂದು ತಿಳಿಸುತ್ತಿದೆ. ನೊಳಂಬರಾಜನ ಸಾಮಂತನಾಗಿ ವಾಸನದಲ್ಲಿ ಆಳುತ್ತಿದ್ದ ಇರುಗಯ್ಯನು ರಾಮೇಶ್ವರ ದೇವಾಲಯಕ್ಕೆ ನೀಡಿದ ದತ್ತಿ ಮತ್ತು ಅಲ್ಲಿ ನಡೆದ ಒಂದು ಘಟನೆಯಲ್ಲಿ ನೊಳಂಬರಾಜನು ಅಲ್ಲಿದ್ದನೆಂಬುದನ್ನು ಈ ಶಾಸನವು ನಿರೂಪಿಸುತ್ತದೆ.

ಚನ್ನಗಿರಿ ಮತ್ತು ಹೊನ್ನಾಳಿ ಭಾಗದಲ್ಲಿ ಕ್ರಿ.ಶ.೧೦೪೮ರಿಂದ ೧೦೫೪ರವರೆಗಿನ ಆಳ್ವಿಕೆಯನ್ನು ನೊಳಂಬರು ನಡೆಸಿದರೆಂದು ಇಲ್ಲಿನ ಶಾಸನಗಳಿಂದ ವ್ಯಕ್ತವಾಗುತ್ತದೆ. ನೊಳಂಬವಾಡಿ ೩೨೦೦೦ರಲ್ಲಿ ಉಚ್ಚಂಗಿದುರ್ಗ ಒಂದು ಮುಖ್ಯ ಪಟ್ಟಣವಾಗಿತ್ತು. ಈಗಿನ ಬಳ್ಳಾರಿ ಜಿಲ್ಲೆಯ ಹಡಗಲಿ ತಾಲೂಕಿನ ಕೋಗಳಿ ಮತ್ತು ಕಣೇಕಲ್ಲುಗಳು ನೊಳಂಬವಾಡಿಯ ಎರಡು ವಿಭಾಗಗಳಾಗಿದ್ದವು.

ರಾಷ್ಟ್ರಕೂಟರ ಅರಸ ಮೂರನೇ ಕೃಷ್ಣನು ನನ್ನಿಗನ ಪುತ್ರ ಅನ್ನಿಗನನ್ನು ಯುದ್ಧದಲ್ಲಿ ಸೋಲಿಸಿ ಚೋಳರ ವಿರುದ್ಧ ಯುದ್ಧ ಮಾಡಲು ನೇಮಿಸುದುದಾಗಿ ತಿಳಿದುಬರುತ್ತದೆ. ತರುವಾಯ ನೊಳಂಬರು ಕಲ್ಯಾಣಿ ಚಾಲುಕ್ಯರ ಸಾಮಂತ ಅರಸರಾಗಿ ಕಂಪಲಿ ಮುಖ್ಯ ಪಟ್ಟಣದಿಂದ ರಾಜ್ಯವಾಳಿದ್ದು ಗೊತ್ತಾಗುತ್ತದೆ.

[illegible]

[illegible]

[illegible]

[illegible]

ನೊಳಂಬರು ಚೋಳರ ಸಾರ್ವಭೌಮತ್ವವನ್ನು ಅಂಗೀಕರಿಸಿ, ಹೊಯ್ಸಳರು ಬಂದ ನಂತರ ಅವರ ಸಾಮಂತರಾಗಿ ಪ್ರಭುತ್ವ ನಡೆಸಿದರು. ಇಮ್ಮಡಿ ಬಲ್ಲಾಳ ಚಕ್ರವರ್ತಿಯ ಮಹಾಸಾಮಂತ ಹಾಗು ರಕ್ತ ಸಂಬಂಧಿ ನರಸಿಂಗದೇವನ ಸಾಮಂತನಾಗಿ ಮಾಚಿ ದೇವನು ಪ್ರಭುತ್ವ ನಡೆಸಿದ ಬಗ್ಗೆ ಉಲ್ಲೇಖವಿದೆ. ಮಾಚಿದೇವನ ನಂತರ ನೊಳಂಬ ಮನೆತನದ ಅರಸರುಗಳು ಈ ಜಿಲ್ಲೆಯ ಯಾವ ಭಾಗದಲ್ಲೂ ಆಳ್ವಿಕೆ ನಡೆಸಿದಂತೆ ಕಂಡು ಬರುವುದಿಲ್ಲ.

ದಾವಣಗೆರೆ ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿದ ನೊಳಂಬರು ಕರ್ನಾಟಕ ಸಾಮಂತ ರಾಜ ಮನೆತನಗಳಲ್ಲೇ ವಿಶಿಷ್ಟ ಸ್ಥಾನ ಪಡೆದಿದ್ದಾರೆ. ತಮ್ಮ ಸಾಮಂತಿಕೆಯ ಅವಧಿಯೊಳಗೆ ತಮ್ಮ ಪ್ರಭುಗಳ ಸಾರ್ವಭೌಮತ್ವದ ಬಿರುದುಗಳನ್ನು ಧರಿಸಿಕೊಂಡು ಮೆರೆದರು.

ಸೇವುಣರ ಆಳ್ವಿಕೆ:

ಕ್ರಿ.ಶ. ಸುಮಾರು ೮೩೫-೧೩೧೩_ರವರೆಗೆ ಆಳಿದ ಕರ್ನಾಟಕದ ಸೇವುಣರು ವಿಶೇಷವಾಗಿ ದೇವಗಿರಿಯ ಯಾದವರೆಂದೇ ಭಾರತದ ಇತಿಹಾಸದಲ್ಲಿ ಪ್ರಸಿದ್ಧರಾಗಿದ್ದಾರೆ. ಮಹಮ್ಮದೀಯ ಚರಿತ್ರೆಕಾರರಾದ ಅಮೀರ್ ಖುಸ್ರು, ಫರಿಸ್ತ, ಬರನಿ ಮುಂತಾದವರು ಅವರನ್ನು ಯಾದವರೆಂದೇ ಕರೆದಿದ್ದಾರೆ. ಇದನ್ನೇ ಅನುಸರಿಸಿದ ಫ್ಲೀಟ್‌ರವರು ತಮ್ಮ 'ಡೈನಾಸ್ಟಿಕ್ ಆಫ್ ಕೆನಾರಿಸ್ ಡಿಸ್ಟ್ರಿಕ್ಟ್ ಆಫ್ ಬಾಂಬೆ ಪ್ರೆಸಿಡೆನ್ಸಿ' ಎಂಬ ಗ್ರಂಥದಲ್ಲಿ ಸೇವುಣರನ್ನು ದೇವಗಿರಿಯ ಯಾದವರೆಂದೇ ಕರೆದಿದ್ದಾರೆ. ತದನಂತರದ ಚರಿತ್ರೆಕಾರರು ಇದನ್ನೇ ಅನುಸರಿಸುತ್ತಾ ಬಂದಿದ್ದಾರೆ.

ಹೇಮಾದ್ರಿಯ 'ರಾಜಪ್ರಶಸ್ತಿ'ಯು ಈ ರಾಜ ವಂಶದ ಎರಡನೆಯ ದೊರೆ ಸೇವುಣ ಚಂದ್ರನಿಂದ ಈ ವಂಶಕ್ಕೆ ಸೇವುಣವಂಶವೆಂದು ಹೆಸರು ಬಂದಿತೆಂದು ತಿಳಿಸುತ್ತದೆ. ಹೊಯ್ಸಳರು, ಚಾಲುಕ್ಯರು, ಕಾಕತೀಯರು ಅವರನ್ನು ಸೇವುಣರೆಂದೇ ಕರೆದಿದ್ದಾರೆ. ಅಂದರೆ ಸಮಕಾಲೀನ ರಾಜರುಗಳು ಇವರನ್ನು ಸೇವುಣರೆಂಬ ಹೆಸರಿನಿಂದ ಕರೆಯುತ್ತಿದ್ದರು[೭೭].

ದೇವಗಿರಿಯ ಸೇವುಣರನ್ನು ಕುರಿತ ಶಾಸನಗಳು ಮತ್ತು ಅವರು ಕಟ್ಟಿಸಿದ ದೇವಾಲಯಗಳು ಕರ್ನಾಟಕದ ಹಲವಾರು ಪ್ರದೇಶಗಳಲ್ಲಿ ದೊರೆತಿವೆ. ದಾವಣಗೆರೆ ಜಿಲ್ಲೆಗೆ ಸಂಬಂಧಿಸಿದಂತೆ ಹರಿಹರ, ಜಗಲೂರು, ಹರಪನಹಳ್ಳಿ, ಚನ್ನಗಿರಿ, ಹೊನ್ನಾಳಿ ತಾಲೂಕುಗಳಲ್ಲಿ ಇವರ ಶಾಸನಗಳು ದೊರೆತಿರುವುದರಿಂದ ಈ ಜಿಲ್ಲೆಯ ಕೆಲವು ಭಾಗಗಳು ಅವರ ಅಧೀನಕ್ಕೊಳಪಟ್ಟಿದ್ದವೆಂಬುದು ಸ್ಪಷ್ಟವಾಗುತ್ತದೆ. ಸೇವುಣ ರಾಜ್ಯವು ಚಿತ್ರದುರ್ಗ, ಶಿವಮೊಗ್ಗ, ಹಾಸನ, ಧಾರವಾಡ, ಬಿಜಾಪುರ, ರಾಯಚೂರು, ಬೀದರ ಮತ್ತು ಬಳ್ಳಾರಿ ಜಿಲ್ಲೆಗಳ ಪ್ರದೇಶಗಳನ್ನೊಳಗೊಂಡಿತ್ತು[೭೮].

ಸೇವುಣ ಸಿಂಘಣ (ಕ್ರಿ.ಶ. ೧೨೧೦-ಕ್ರಿ.ಶ. ೧೨೪೭) ಈ ಮನೆತನದ ಪ್ರಸಿದ್ಧ ಹಾಗು ಸಮರ್ಥ ದೊರೆಗಳಲ್ಲೊಬ್ಬ. ಆತನ ಕಾಲದಲ್ಲಿ ಮಧ್ಯ ಕರ್ನಾಟಕದ ಹೆಚ್ಚಿನ ಭಾಗಗಳು ಹೊಯ್ಸಳ-ಸೇವುಣರ ಹೋರಾಟದ ಕಣಗಳಾದವು. ಹೊಯ್ಸಳರೊಂದಿಗೆ ಸತತ ಹೋರಾಟದಲ್ಲಿ ತೊಡಗಿದ್ದ ಈ ಮನೆತನದವರು ಹೊಯ್ಸಳಾಧಿಪತಿ ಇಮ್ಮಡಿ ಬಲ್ಲಾಳನ (ಕ್ರಿ.ಶ. ೧೧೭೩-೧೨೨೦) ಆಳ್ವಿಕೆಯಲ್ಲಿ ಅವನತಿಯ ಪಥವನ್ನು ಹಿಡಿಯಬೇಕಾಯಿತು. ಕೃಷ್ಣಾ ನದಿಯಿಂದಾಚೆಯವರೆಗೂ ಇವರು ಹೊಯ್ಸಳರಿಂದ ದೂಡಲ್ಪಟ್ಟರು. ಆದರೂ ಕ್ರಮೇಣ ಬಲಗೊಂಡ ಸೇವುಣರು ಹೊಯ್ಸಳರನ್ನು ತುಂಗಭದ್ರ ನದಿಯವರೆಗೂ ಹಿಮ್ಮೆಟ್ಟಿಸಿ , ತಮ್ಮ ವಿಜಯಪತಾಕೆಯನ್ನು ಹಾರಿಸಿದರು. ಬಹುಶ: ಇಮ್ಮಡಿ ಬಲ್ಲಾಳನ ಮರಣಾನಂತರ ಹೊಯ್ಸಳ ಸೋಮೇಶ್ವರನ ಕಾಲಕ್ಕೆ (ಕ್ರಿ.ಶ. ೧೨೩೫-೧೨೫೬) ಸೇವುಣ ಸಿಂಘಣನು ದಕ್ಷಿಣ ಭಾರತದಲ್ಲಿ ತನ್ನ ರಾಜ್ಯವನ್ನು ವಿಸ್ತರಿಸಿದನೆಂದು ತಿಳಿದುಬರುತ್ತದೆ[೭೯].

ಈ ಜಿಲ್ಲೆಯೊಳಗಡೆ ದೊರೆತ ಶಾಸನಗಳೆಲ್ಲ ಸಿಂಘಣನ ಅನಂತರ ಕಾಲದವುಗಳಾಗಿದ್ದು, ಅವು ಕನ್ನರ, ಮಹಾದೇವ ಹಾಗು ರಾಮಚಂದ್ರ ಇವರ ಆಳ್ವಿಕೆಯ ಕಾಲಕ್ಕೆ ಸೇರಿದ ಶಾಸನಗಳಾಗಿವೆ. ಲಭ್ಯವಿರುವ ಶಾಸನಗಳ ಆಧಾರವಾಗಿಟ್ಟುಕೊಂಡು ಸೇವುಣರಸರ ಚರಿತ್ರೆಯನ್ನು ವಿಶ್ಲೇಷಿಸಲಾಗಿದೆ.

ಹೊನ್ನಾಳಿ ತಾಲೂಕು ಬೆಳಗುತ್ತಿಯಲ್ಲಿ ದೊರೆತ ಶಾಸನ ಸಿಂಘಣನ ಕಾಲದ್ದಾಗಿದ್ದು, ಅವನ ಮಹಾ ಮಂಡಳೇಶ್ವರನಾದ ಈಶ್ವರ ದೇವರಸನು ಶಕ ವರುಷದ ೧೧೩೮ನೆಯ ಧಾತು ಸಂವತ್ಸರದ ವೈಶಾಖ ಶುದ್ಧ ೫ರಂದು ಅಲ್ಲಿನ ಈಶ್ವರ ದೇವರಿಗೆ ಭೂಮಿಯನ್ನು ದತ್ತಿಬಿಟ್ಟ ಬಗ್ಗೆ ಉಲ್ಲೇಖಿಸುತ್ತದೆ. ಇದೇ ತಾಲೂಕಿನ ಶಾಸನವೊಂದು ಇವರ ವಂಶದ ಮೂಲ ಹಾಗು ಆಳ್ವಿಕೆ ಮಾಡಿದ ಅರಸರನ್ನು ಕುರಿತು ತಿಳಿಸಿದೆ. ಇದೇ ಶಾಸನದಲ್ಲಿ ರಾಮಚಂದ್ರ ಅರಸನು ಚಾಲುಕ್ಯರ ಬಿರುದುಗಳೆಲ್ಲವನ್ನು ಧರಿಸಿದ್ದನೆಂದು ವಿವರಿಸುತ್ತದೆ.

ಚನ್ನಗಿರಿ ತಾಲೂಕಿನ ಕೋಗಲೂರಿನ ಶಾಸನವು ಸೇವುಣರ ವಂಶಾವಳಿಯನ್ನು ಹೇಳುತ್ತ, ಈ ವಂಶದ ಸಾಮಂತ ಚಾವುಂಡರಸನು ಕ್ರಿ.ಶ. ೧೨೬೮ರಲ್ಲಿ ನೊಳಂಬವಾಡಿ ಪ್ರಾಂತ್ಯದಲ್ಲಿನ ಬೇತೂರಿನಲ್ಲಿ ರಾಜ್ಯಪಾಲನಾಗಿದ್ದು, ಇಬ್ಬರು ಮಂತ್ರಿಗಳಿಂದ ಆಳಲ್ಪಡುತ್ತಿದ್ದನೆಂದು ತಿಳಿದುಬರುತ್ತದೆ. ಈತನು ದಕ್ಷಿಣ ಭಾಸ್ಕರಪುರ ಅಥವಾ ದಕ್ಷಿಣಾಧಿತ್ಯ ನಗರವೆಂದು ಖ್ಯಾತಿ ಪಡೆದ ಕೋಗಲೂರಿನ ಬಿಲ್ಲೇಶ್ವರ ದೇವರ ಅಗ್ರಹಾರಕ್ಕೆ ದತ್ತಿಬಿಟ್ಟನೆಂಬ ವಿಷಯ ಹಾಗು ಈ ಅಗ್ರಹಾರವು ಗುಡ್ಡಗಾಡು ಜನರಿಂದ,ಆನೆಗಳಿಂದ ತುಂಬಿತ್ತು ಎಂದು ಅದೇ ಶಾಸನದಿಂದ ತಿಳಿದು ಬರುತ್ತದೆ[೮೦]. ರಾಯ-ದಂಡನಾಥ, ಪೆಸಾನಿ ಹನುಮನೆಂಬ ಬಿರುದುಗಳನ್ನು ಪಡೆದ ಚಾವುಂಡರಸನು ಮುಮ್ಮಡಿ ಸಿಂಘೇ ನಾಯಕನೊಡನೆ ಕುರುಗೋಡುನಾಡಿನ ದೂರೆವಡೆ ಎಂಬಲ್ಲಿ ನಡೆದ ಯುದ್ಧದಲ್ಲಿ ಹೋರಾಡಿ ಕ್ರಿ.ಶ. ೧೨೮೦ರಲ್ಲಿ ವೀರಮರಣ ಹೊಂದಿದನೆಂದು, ಆತನ ಶವವನ್ನು ಲಿಂಗಾಯತ ಧರ್ಮದ ವಿಧಿಯಂತೆ ಸಂಸ್ಕಾರ ಮಾಡಲಾಯಿತೆಂದು ಚನ್ನಗಿರಿಯ -೨೪ನೇ ಶಾಸನ ವಿವರಿಸುತ್ತದೆ.

[illegible]

[illegible]

[illegible]

[illegible]

[illegible]

ಹರಿಹರ ಹಾಗು ಭಾನುವಳ್ಳಿಯ ಶಾಸನಗಳಲ್ಲಿ ಸೇವುಣ ವಂಶದ ಪೀಳಿಗೆಯನ್ನು ನೀಡಿದೆ. ಇದರ ಪ್ರಕಾರ ಭಿಲ್ಲಮ ಈ ವಂಶದ ಮೊದಲ ಅರಸ. ಅವನ ಮಗ ಜೈತುಗಿ. ಜೈತುಗಿಯ ಮಗನೇ ಸಿಂಘಣ. ಈತ ಎರಡನೆಯ ಸಿಂಘಣನೆಂದೇ ಪರಿಚಿತ. ಈತನನ್ನು ' ಬಲ್ಲಿದನುಂನ ತೋದಯನುದಾರ ಪರಾಕ್ರಮ ಸತ್ಯುದುರ್ಗ್ಗದಿಂದೆಲ್ಲರಿಗಗ್ರಗಣ್ಯ ನೆನಲೊಪ್ಪಿದ ಕೀರ್ತ್ತಿಗಧೀಶ ಸಿಂಘಣಂ ' ಎಂಬುದಾಗಿ ಹರಿಹರನ ಶಾಸನ ವರ್ಣಿಸಲಾಗಿದೆ[೮೮].

ಭಾನುವಳ್ಳಿಯ ಶಾಸನ ಈತನನ್ನು ಕುರಿತು : '' ದೇವಗಿರಿಯಲ್ಲಿ ಸಿಂಗಣ ದೇವ ನಿಳಾನಾಥನಾಗಿ ರಾಜ್ಯಂಗೆಯ್ದಂ ಕಾವನವನ ತರನಾಂತಡೆ ಜೀವಮನ ಪಹರಿಸುತಿಪ್ಪನರೆ ನರದವರಾ '' ಎಂದು ಸಾರುತ್ತದೆ. ಸಿಂಘಣನ ಮಗ ಜೈತುಗಿ ತಂದೆಗಿಂತ ಮೊದಲೇ ಮರಣ ಹೊಂದಿರಬೇಕು !. ಸಿಂಘಣನ ಮೊಮ್ಮಗ ಹಾಗು ಜೈತುಗಿಯ ಮಗ ಕೃಷ್ಣ ಅಥವಾ ಕಂಧರನ ಕಾಲದ ಶಾಸನಗಳು ಈ ಜಿಲ್ಲೆಯಲ್ಲಿ ದೊರೆತಿದ್ದು, ಆತನ ಬಗ್ಗೆ ಮಾಹಿತಿ ಒದಗಿಸುತ್ತವೆ. ಇವನ ಕಾಲದ ಅತೀ ಪ್ರಾಚೀನವಾದ ಶಾಸನವೆಂದರೆ ಕ್ರಿ.ಶ. ೧೨೫೦ರ ಗಂಗನರಸಿ ಗ್ರಾಮದ ಶಾಸನ ಪ್ರಸ್ತುತ ಶಾಸನವು ಸವೆದು ಹೋಗಿರುವುದರಿಂದ ಹೆಚ್ಚಿನ ಅಂಶಗಳು ನಮಗೆ ತಿಳಿದು ಬರುವುದಿಲ್ಲ. ಚಿಕ್ಕ ಬಿದರೆ ಗ್ರಾಮದ ಕಲ್ಲೇಶ್ವರ ದೇವಾಲಯದ ಬಳಿ ಇರುವ ಶಾಸನವೂ ಈತನ ಕಾಲದ್ದಾಗಿದೆ. ಇದರಲ್ಲಿ ಅರಸನನ್ನು ದ್ವಾರವತೀಪುರವರಾಧೀಶ್ವರ, ಸುವರ್ಣಗರುಡ ಧ್ವಜ, ಜಗಝುಂಪ ಮಾಳವ, ರಾಯ ಮದನ ತ್ರಿನೇತ್ರ, ಗೊರ್ಜ್ಜರರಾಯ ಭಯಂಕರ ತೆಲುಂಗರಾಯ ಸ್ಥಾಪನಾಚಾರ್ಯ ಇತ್ಯಾದಿ ಬಿರುದುಗಳಿಂದ ವರ್ಣಿಸಿದೆ. ನೊಳಂಬವಾಡಿ ೩೨೦೦೦ ಪ್ರದೇಶದ ಬಿಕ್ಕಿಗ-೭೦ರಲ್ಲಿ ತುಂಗಭದ್ರಾ ನದಿಯ ಪೂರ್ವತೀರದ ಬಿದರೆ ಗ್ರಾಮದಲ್ಲಿ ಕನ್ನೇಶ್ವರ ದೇವಾಲಯವನ್ನು ಬಿಲ್ಲಾಳದ ಅಂಮೆಯ ನಾಯಕನೆಂಬ ಸೇನಾನಿಯು ಕಟ್ಟಿಸಿ ದೇವರಿಗೆ ಅನೇಕ ದತ್ತಿಗಳನ್ನು ನೀಡಿದ ವಿಷಯ ಶಾಸನದಲ್ಲಿ ಉಕ್ತವಾಗಿದೆ. ಇಲ್ಲಿ ಕನ್ನೇಶ್ವರ ಎಂಬ ಹೆಸರನ್ನು ಗಮನಿಸಬೇಕು. ಈ ಸೇನಾನಿ ತನ್ನ ಪ್ರಭುವಿನ ಹೆಸರಿನಲ್ಲಿ ದೇವಾಲಯವನ್ನು ನಿರ್ಮಿಸಿದನು. ಪ್ರಸ್ತುತ ಶಾಸನದ ಕಾಲ ಕ್ರಿ.ಶ.೧೨೫೮.

ಈ ಕನ್ನರದೇವನ ತಮ್ಮ ಮಹಾದೇವ ಪಾಂಡವಾದ್ಯನನ್ನು ಶಾಸನದಲ್ಲಿ ಯುಧಿಷ್ಠಿರನಿಗೆ ಹೋಲಿಸಿ ಈತನ ಪರಾಕ್ರಮವನ್ನು ಹೀಗೆ ಸಾರುತ್ತದೆ. ಈ ದೊರೆ ಕೇರಳ, ಹಮ್ಮೀರ, ಕೊಂಕಣ ಹಾಗು ಚೋಳರಿಗೆ ಬಂದು ಶರಣಾಗಲು ಅಪ್ಪಣೆ ಮಾಡಿದನಂತೆ! ಗೌಳ, ಉತ್ಕಲ, ಮಾಳವ ಹಾಗು ಲಾಳ ದೇಶಗಳ ಅರಸರು ಶರಣಾಗಿ ಕಪ್ಪವನ್ನೊಪ್ಪಿಸಿದರು. ಉಳಿದ ಅರಸರು ಕಾಲಾನುಕ್ರಮದಲ್ಲಿ ಅವನ ಸೇವಕರಾದರೆಂದೂ ಮೇಲಿನ ಪದ್ಯಗಳು ಉತ್ಪ್ರೇಕ್ಷವಾಗಿ ಉಲ್ಲೇಖಿಸಿವೆ. ಹಾಗೆಯೇ ತೆಲುಗರ ಮೂರು ನಗರಗಳನ್ನು ವಶಪಡಿಸಿಕೊಂಡ ವಿಷಯವನ್ನು ತಿಳಿಸುತ್ತವೆ. ಈತನ ಆಳ್ವಿಕೆಯ ಕಾಲದಲ್ಲಿ ಕ್ರಿ.ಶ. ೧೨೬೪ರಲ್ಲಿ ಬೆಯಿದೇವನೆಂಬ ಅಶ್ವಾಧಿಪತಿಯೊಬ್ಬ ಕದನವೊಂದರಲ್ಲಿ ಹೋರಾಡಿ ಮರಣ ಹೊಂದಿದ ಸಂಗತಿಯನ್ನು ಗಂಗನರಸಿ ಗ್ರಾಮದ ಶಾಸನವೊಂದರಲ್ಲಿ ಉಲ್ಲೇಖವಾಗಿದೆ. ಬೇತೂರು ಗ್ರಾಮದ ಕಲ್ಲೇಶ್ವರ ದೇವಾಲಯದ ಬಳಿ ಇರುವ ಶಾಸನವೊಂದು ಗಮನಾರ್ಹವಾಗಿದೆ. ಮಹಾದೇವನ ರಾಜ್ಯಶ್ರೀಗೆ ' ಕೋಮಳಸರಸಿಜ'ರೆನಿಸಿದ ಚಟ್ಟರಾಜ

[illegible]

[illegible]

[illegible]

ಹಾಗು ಕೂಚರಸರ ತಂಗಿ ಮೈಳುಬಾಯಿ, ಆಕೆ ಹಾಗು ದಾಯ್ಯ ಎಂಬುವರಿಗೆ ಸೇನ ಜನಿಸಿದ. ಹಾಗೆಯೇ ಚಿಕ್ಕ ಬಿದರೆಯ ಶಾಸನವೊಂದು ಕುತೂಹಲಕರವಾಗಿದೆ. ಬಿಲ್ಲಾಳು ಆಂಮೆಯ ನಾಯಕ ತನ್ನ ತಾಯಿಯನ್ನು 'ಸಾಂಗಲಿಕಗೆಪುರದ ಗುಡ್ಡಕೆ ಕಳಿಹುವಲ್ಲಿ ಮಲ್ಲಪುಹಾರಿಯು ತಡೆಯಲು ಕಾದಿ ಲೇಸು ಮಾಡಿ ಬಿದ್ದನು'. ಎಂಬ ಶಾಸನದ ಅರ್ಥ ಅಸ್ಪಷ್ಟವಾಗಿದೆ, ಹೆಮ್ಮನ ಬೇತೂರು ಡಿಂಗರ ಮಲ್ಲಯ ದೇವರಿಗೆ ಕಲ್ಲ ಗುರುಗಳ ಕಾಲ್ತೊಳೆದು ಧಾರಾಪೂರ್ವಕವಾಗಿ ಛತ್ರಕ್ಕೆ ಬಿಟ್ಟ ಭೂದಾನ ವಿವರಗಳನ್ನು ತಿಳಿಸುವ ಶಾಸನ ಹೆಮ್ಮನ ಬೇತೂರಿನ ಸಿದ್ಧೇಶ್ವರ ದೇವಾಲಯದ ಬಳಿ ಇದೆ. ಇದೇ ಡಿಂಗರ ಮಲ್ಲಯ್ಯ ದೇವರಿಗೆ ' ಹಾಲುಮಂಡಗೆ'ಗೆ ಭೂಮಿ ಇತ್ತುದನ್ನೂ ಈ ಶಾಸನದಲ್ಲಿ ಹೇಳಲಾಗಿದೆ. ಈ ಹೆಮ್ಮನ ಬೇತೂರು ಗ್ರಾಮ ' ಬಹುತ ಜನಗಳ ಆರಾಧನೆಯೊಳು ' ಕಾಂಜಿಗಿಂತ ಮಿಗಿಲಾದುದೆಂದು ಶಾಸನ ವರ್ಣಿಸಿದೆ. ಈ ಶಾಸನದ ಕಾಲ ಕ್ರಿ.ಶ. ೧೨೬೬, ಕ್ರಿ.ಶ.೧೨೬೫ರ ಅಣಜಿ ಗ್ರಾಮದ ಎರಡು ಶಾಸನಗಳಲ್ಲಿ ಅರಸನನ್ನು ಗೂರ್ಜರರಾಯ ವಾರಣಾಂಕುಶ. ತೆಲುಂಗರಾಯ ಶಿರಕಮಳನಾಳೋತ್ಪಾಟನಕರ ಪ್ರತಿಜ್ಞಾಪರಸುರಾಮ, ಮಾಳವಿಯ ಮಲ್ಲ, ಭುಜಬಳ ಭೀಮ ಇತ್ಯಾದಿ ಬಿರುದುಗಳಿಂದ ಉಲ್ಲೇಖಿಸಲಾಗಿದೆ. ಹೆಮ್ಮಾಡಿ ದೇವರಸನ ಮಗ ವಿಠಲ ದೇವರಸ ಮಹಾ ಅಗ್ರಹಾರವಾದ ಅಣಜಿಯ ದೇವರಿಗೆ ದಾನ ನೀಡಿದುದನ್ನು ಈ ಶಾಸನ ತಿಳಿಸುತ್ತದೆ. ಹೆಮ್ಮನ ಬೇತೂರಿನ ಶಾಸನೋಕ್ತದಾನಿಯೂ ಈತನೇ.

ಮಹಾದೇವನ ನಂತರ ಕಂಧರನ ಮಗ ರಾಮಚಂದ್ರ ಅಧಿಕಾರಕ್ಕೆ ಬಂದ ಈತನಿಗೆ ಮಾಳವರಾಯ ಮದನ ತ್ರಿನೇತ್ರ, ಗೂರ್ಜರ ರಾಯ ವಾರಣಾಂಕುಶ. ತೆಲಂಗರಾಯ ಮದನ ತ್ರಿನೇತ್ರ, ಗೋರ್ಜರರಾಯ ವಾರಣಾಂಕುಶ. ತೆಲಂಗರಾಯ ಸ್ಥಾಪನಾಚಾರ್ಯ, ಹೊಯ್ಸಣರಾಯ ಸಾಮ್ರಾಜ್ಯ ಲಕ್ಷ್ಮಿಹರಣ ಮುಂತಾದ ಬಿರುದುಗಳನ್ನು ಈ ಜಿಲ್ಲೆಯ ಶಾಸನಗಳು ಉಲ್ಲೇಸಿದೆ. ಈತನ ಕಾಲದ ಅತೀ ಪ್ರಾಚೀನ ಶಾಸನವೆಂದರೆ ದಾವಣಗೆರೆ ತಾಲೂಕು ಬೇತೂರು ಗ್ರಾಮದ ಸಿದ್ಧೇಶ್ವರ ದೇವಾಲಯದ ಬಳಿ ಇರುವ ಶಾಸನ, ಇದು ಪಾಂಡ್ಯ ದೇಶದ ಬೇತೂರನ್ನು ವರ್ಣಿಸಿದೆ. ಈ ಬೇತೂರು ಮೇಲೆ ಗಮನಿಸಿದ ಹೆಮ್ಮನ ಬೇತೂರಿನಿಂದ ಭಿನ್ನವೆಂಬುದು ಸ್ಪಷ್ಟ. ಇಲ್ಲಿ ಉಕ್ತವಾಗಿರುವ ಪಾಂಡ್ಯ ಉಚ್ಚಂಗಿಯಿಂದಾಳುತ್ತಿದ್ದ ಸಾಮಂತ ಮನೆತನವನ್ನೇ ನಿರ್ದೇಶಿಸುತ್ತದೆ. ಈ ಪ್ರದೇಶವನ್ನು ಪಾಲಿಸುತ್ತಿದ್ದ ಕೂಚರಾಜ ತನ್ನ ಪತ್ನಿ ಮರಣಹೊಂದಲು ಆಕೆಯ ಸ್ಮರಣಾರ್ಥ ಲಕ್ಷ್ಮೀಜಿನಾಲಯವನ್ನು ಕಟ್ಟಿಸಿದನು. ಭಾನುವಳ್ಳಿ ಗ್ರಾಮದ ಶಾಸನ ಕುತೂಹಲಕರವಾಗಿದೆ. ಸಿಂಘಣನಿಂದ ರಾಮಚಂದ್ರನವರೆಗಿನ ಸೇವುಣ ವಂಶಾವಳಿಯನ್ನು ಇದರಲ್ಲಿ ನೀಡಿದೆ. ಈ ಗ್ರಾಮಕ್ಕೆ ಲಕ್ಷ್ಮಿ ನಾರಾಯಣಪುರವೆಂಬ ಹೆಸರಿತ್ತೆಂದು ನಮಗೆ ಗೊತ್ತಾಗುತ್ತದೆ . ತಿಪ್ಪರಸ ಅಥವಾ ತಿಪ್ಪಾಮಾತ್ಯ ಎಂಬ ಅಧಿಕಾರಿಯನ್ನು ಶಾಸನ ಹೆಸರಿಸುತ್ತದೆ. ಈತನಿಗೆ ದಕ್ಷಿಣದಲ್ಲಿ ರಾಯನ ಖಂಡಿಯಿಂದ ಉತ್ತರದಲ್ಲಿ ಪೆರ್ದ್ದೊರೆವರೆಗಿನ ಪ್ರದೇಶವನ್ನು ಪಾಲಿಸಲು ನೀಡಿದ ವಿಚಾರವನ್ನು ತಿಳಿಸುತ್ತದೆ. ಜಗಲೂರು ತಾಲೂಕು ಕಲ್ಲೇ ದೇವರಪುರದ ಶಾಸನವು ಕ್ರಿ.ಶ. ೧೨೭೯ರದಾಗಿದ್ದು, ಅರಸನನ್ನು ಸೈನ್ಯ ಸಮಯ ಸಂವರ್ಧನ, ಸಕಳ ಸಮಯ

[illegible]

[illegible]

ಸಮುದ್ಧರಣ. ಕ್ಷಿತಿಪತಿ ಮತ್ತು ಮಾತಂಗ, ಪೆಂಡಾರ ಲಕ್ಷ್ಮೀ ದೇವ ತ್ರಿಕುಳ, ಕುಳಕಾಂತರ ಮೂಳನವೃಪಾರ್ದ್ರವ ದಂಡ ಮುಂತಾದ ಆಕರ್ಷಕ ಹೆಸರಿನಿಂದ ಉಲ್ಲೇಖಿಸಿರುವುದು ಕಂಡುಬಂದಿದೆ. ಮಧ್ಯಯುಗೀನ ಶಾಸನ ಸಾಹಿತ್ಯದ ಗದ್ಯ ಶೈಲಿಗೆ ಇದೊಂದು ನಿದರ್ಶನವಾಗಬಲ್ಲದು. ಮೇಲೆ ಗಮನಿಸಿದ ಚಟ್ಟರಾಗ ಹಾಗು ಕೊಚ ಚಮೂಪತಿಯರು ಇವನ ಕಾಲದಲ್ಲೂ ಅಧಿಕಾರಿಗಳಾಗಿ ಮುಂದುವರೆದಿರಬೇಕು. ಇವರಿಬ್ಬರನ್ನೂ ಬೇತೂರಿನ ಶಾಸನದಲ್ಲಿ ರಾಮ ಲಕ್ಷ್ಮಣರಿಗೆ, ಭರತ ಬಾಹುಬಲಿಗಳಿಗೆ ಹೋಲಿಸಲಾಗಿದೆ. ಹರಿಹರದ ಶಾಸನ ಹಲವು ದೃಷ್ಟಿಗಳಿಂದ ಗಮನಾರ್ಹವಾದುದು. ರಾಮಚಂದ್ರನ ಕಾಲದಲ್ಲಿ ಮಹಾಮಂಡಲೇಶ್ವರ , ಕದಂಬರಾಯ ಸ್ಥಾಪನಾಚಾರ್ಯ, ಹೊಯ್ಸಳರಾಯ ದಿಸಾಪಟ್ಟ ಮುಂತಾದ ಬಿರುದಾಂಕಿತನಾದ ಸಾಳೆಯ ತಿಕ್ಕಮದೇವನು ದಕ್ಷಿಣ ದಿಗ್ವಿಜಯ ಯಾತ್ರೆ ಕೈಗೊಂಡು , ದೊರ-ಸಮುದ್ರವನ್ನಾಕ್ರಮಿಸಿ, ವಿಶೇಶವಾಗಿ ಕುದುರೆ, ಆನೆ ಸಹಿತವಾದ ಸಂಪತ್ತಿನ ಕಪ್ಪವನ್ನು ವಶಪಡಿಸಿಕೊಂಡು ಬಂದನೆಂದು ಇಲ್ಲಿ ಹೇಳಿದೆ. ಹರಿಹರರು ಒಂದೇ ರೂಪ ಹೊಂದಿ ಗುಹನನ್ನು ನಾಶ ಮಾಡಿ ಹರಿಹರಪುರದಲ್ಲಿ ನೆಲಸಿದುದನ್ನು ತಿಳಿದ ಮಹಾದೇವ ಕುರುಕ್ಷೇತ್ರ, ಕಾಶಿ, ಹಿಮಗಿರಿ, ಗಯ, ಗೋದಾವರಿಗಳನ್ನು ಪುಣ್ಯ ಕ್ಷೇತ್ರವೆಂದು ಭಾವಿಸಿ ತನ್ನ ಹೆಸರಿನಲ್ಲಿ ಮಾನ್ಯ ನೀಡಿದ ತಿಕ್ಕಮನ ವಿಜಯಯಾತ್ರೆಯ ನಂತರ ಅರಸ ಮತ್ತೊಮ್ಮೆ ಇಲ್ಲಿಗೆ ಭೇಟಿ ನೀಡಿ ಈ ಗ್ರಾಮವನ್ನು ಸರ್ವ ಮಾನ್ಯ ಅಗ್ರಹಾರವನ್ನಾಗಿ ಮಾಡಿ ದತ್ತಿ ನೀಡಿದ. ಅರಸನ ಅನುಮತಿ ಪಡೆದು ಹರಿಹರ ದೇವರ ಬಳಿ ತಿಕ್ಕಮ ಲಕ್ಷ್ಮೀ ನಾರಾಯಣ ವಿಗ್ರಹವನ್ನು ಪ್ರತಿಷ್ಠಾಪಿಸಿ, ದತ್ತಿ ನೀಡಿದ. ಹರಿಹರದ ಬ್ರಾಹ್ಮಣರು, ಉಚ್ಚಂಗಿಯ ಮತ್ತು ಬೇತೂರಿನ ನಾಗರಿಕರು ಮತ್ತಿತರರು ಹರಿಹರದಲ್ಲಿ ಮಹಾಸಭೆ ಸೇರಿ ದೇವರಿಗೆ ವಜ್ರದ 'ಬಯಸಣಿಗೆ' ಯನ್ನು ಅರ್ಪಿಸಿದರು[೮೨].

ಹೀಗೆ ಸೇವುಣರಸರು ತಮ್ಮ ಆಳ್ವಿಕಾವಧಿಯಲ್ಲಿ ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದ್ದರೆಂದು , ಅವರ ಶಾಸನಗಳು ಉಲ್ಲೇಖಿಸುತ್ತವೆ. ಒಟ್ಟಾರೆಯಾಗಿ ಸೇವುಣ ಅರಸರು ಈ ಜಿಲ್ಲೆಯೊಳಗಡೆ ಆಳ್ವಿಕೆ ನಡೆಸಿ ಹಲವು ಪ್ರಜಾಹಿತ ಕಾರ್ಯಗಳನ್ನು ಕೈಗೊಂಡಿದ್ದರೆಂಬುದನನ್ನು ಮರೆಯುವಂತಿಲ್ಲ.

[illegible]

[illegible]

ಹೊಯ್ಸಳರ ಆಳ್ವಿಕೆ:-

ಕರ್ನಾಟಕ ರಾಜ ಮನೆತನಗಳಲ್ಲಿ ಕ್ರಿ.ಶ. ೧೦೦೦-೧೩೪೬ ರವರೆಗೆ ಆಳ್ವಿಕೆ ಮಾಡಿದ ಹೊಯ್ಸಳರ ಸ್ಥಾನ ಮಹತ್ವವಾದುದ್ದು. ಇವರು ತಮ್ಮ ಸಮಕಾಲೀನ ರಾಜಮನೆತನ ಹಾಗು ಸಾಮಂತ ಕುಲಗಳಿಗಿಂತಲೂ ಹೆಚ್ಚು ಪ್ರಸಿದ್ಧರಾಗಿದ್ದು, ಕ್ರಿ.ಶ. ೧೧ನೇ ಶತಮಾನದಿಂದ ೧೪ನೇ ಶತಮಾನದ ಮಧ್ಯಕಾಲದವರೆಗೆ ಕರ್ನಾಟಕ ಮಾತ್ರವಲ್ಲದೇ, ದಕ್ಷಿಣ ಭಾರತದಲ್ಲಿ ಆಳ್ವಿಕೆ ನಡೆಸಿದರು. ರಾಜಕೀಯ , ಸಾಮಾಜಿಕ, ಸಾಂಸ್ಕೃತಿಕ , ಧಾರ್ಮಿಕ, ಸಾಹಿತ್ಯಿಕ ಮತ್ತು ಶಿಲ್ಪ ಕಲೆಗಳ ದೃಷ್ಟಿಯಿಂದ ಹೊಯ್ಸಳರ ಆಳ್ವಿಕೆಯ ಅವಧಿ ಅತ್ಯಂತ ಪ್ರಭಾವಯುತವಾದುದು. ಶಿಲ್ಪಕಲಾ ಶೈಲಿ ಇವರ ಕಾಲದಲ್ಲಿ ತನ್ನದೇ ಆದ ರೂಪ ಹೊಂದಿ ಜಾಗತಿಕ ಕಲಾ ಕ್ಷೇತ್ರಕ್ಕೆ ವಿಶಿಷ್ಟವಾದ ಕೊಡುಗೆಯನ್ನಿತ್ತಿತು. ಚಾಲುಕ್ಯರ ನಂತರ ಹಿಂದೂ ಸಾಮ್ರಾಜ್ಯವನ್ನು ಬೆಳಸಿ, ಪೋಷಿಸಿಕೊಂಡು ಬಂದವರು ಹೊಯ್ಸಳರು. ಅದೇ ಹಾದಿಯಲ್ಲಿ ಮುಂದುವರಿಯುವಂತೆ ತಮ್ಮ ನಂತರ ಸ್ಥಾಪಿತಗೊಂಡ ವಿಜಯನಗರ ಸಾಮ್ರಾಜ್ಯಕ್ಕೆ ಇವರೇ ಪ್ರೇರಕ ಶಕ್ತಿಯಾದರು.

ಹೊಯ್ಸಳರು ಚಾಲುಕ್ಯರ ಸಾಮಂತರಾಗಿದ್ದಾಗಲೇ ನೊಳಂಬವಾಡಿಯು , ಅಂದರೆ ಚಿತ್ರದುರ್ಗ, ದಾವಣಗೆರೆ ಪ್ರದೇಶಗಳು ಗಮನ ಸೆಳೆದಿದ್ದವು. ಕ್ರಿ.ಶ. ೧೦೬೩ರಿಂದ ಆಳಿದ ಎರೆಯಂಗನು ಪಾಂಡ್ಯರಾಜ ಇರುಕ್ಕವೇಲನ ಮಗಳನ್ನು ಮದುವೆಯಾಗಿದ್ದನು. ಅನಂತರ ಅವನ ಮಗ ಒಂದನೆಯ ಬಲ್ಲಾಳನು ತನ್ನ ಸಹೋದರ ಬಿಟ್ಟಿ ದೇವನೊಡನೆ ಉಚ್ಚಂಗಿ ಪಾಂಡ್ಯರ ಮೇಲೆ ಯುದ್ಧಮಾಡಿ ಅವರ ಸಮಸ್ತ ಸಂಪತ್ತನ್ನು ಸೂರೆ ಮಾಡಿದನಂತೆ . ಮುಂದೆ ವಿಷ್ಣುವರ್ಧನನೆಂದು ಪ್ರಸಿದ್ಧನಾದ ಬಿಟ್ಟಿದೇವನು ಈ ಜಿಲ್ಲೆಯ ಅನೇಕ ಭಾಗಗಳನ್ನು ಗೆದ್ದುಕೊಂಡನು. ಅವನು ದುಮ್ಮಿಯ ಬಳಿ ನಡೆದ ಯುದ್ಧದಲ್ಲಿ ಉಚ್ಚಂಗಿ ಪಾಂಡ್ಯರನ್ನು ಸೋಲಿಸಿ 'ನೊಳಂಬವಾಡಿಗೊಂಡ' ಎಂಬ ಬಿರುದಿಗೆ ಪಾತ್ರನಾದನು.

ಪ್ರಸ್ತುತ ದಾವಣಗೆರೆ ಜಿಲ್ಲೆಯಲ್ಲಿ ಹೊಯ್ಸಳರ ಆಳ್ವಿಕೆಯನ್ನು ಗುರುತಿಸಲು ಇಲ್ಲಿನ ಶಾಸನಗಳು ಸಹಾಯಕವಾಗಿವೆ. ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಂಡ ಕೆರೆ-ಕಾಲುವೆ, ದೇವಾಲಯಗಳು, ಅಗ್ರಹಾರ, ಇತ್ಯಾದಿಗಳ ಕುರಿತು ಈ ಪ್ರದೇಶದಲ್ಲಿ ಸಿಕ್ಕ ಶಾಸನಗಳು ಸಾರುತ್ತವೆ. ಕೇವಲ ರಾಜಕೀಯವಲ್ಲದೇ, ಈ ಜಿಲ್ಲೆಯ ಸಾಮಾಜಿಕ ಹಾಗು ಸಾಂಸ್ಕೃತಿಕ ಕ್ಷೇತ್ರಗಳಿಗೆ ಹೊಯ್ಸಳರ ಕೊಡುಗೆಯೂ ಮಹತ್ವವಾದುದೆಂಬುದು ಈ ಶಾಸನಗಳಿಂದ ವ್ಯಕ್ತವಾಗುತ್ತದೆ. ಹೊಯ್ಸಳ ಸಾಮ್ರಾಜ್ಯದ ನಾಡ ಪ್ರಭು ಅಣ್ಣಮರಸನು ಹೊಳಲ್ಕೆರೆ ನಾಡನ್ನು ಪಾಲಿಸುತ್ತಿದ್ದು, ಸ್ವಯಂಭು ಕಲಿ ದೇವಾಲಯಕ್ಕೆ ಕೋಡಿಹಳ್ಳಿಯನ್ನು ದತ್ತಿಬಿಟ್ಟದ್ದನ್ನು ತಿಳಿಸುವುದು. ಇವನು ಹೊನ್ನಾಳಿ ತಾಲೂಕಿನ ಕುರುವದಗಡ್ಡೆ ರಾಮೇಶ್ವರನಿಗಾಗಿ ನದಿ ತೀರದ ಭೂಮಿಯನ್ನು ಹಾಗು ದಾನದತ್ತಿಗಳನ್ನು ಮುಂದುವರಿಸಿದ ಬಗ್ಗೆ ಅಲ್ಲಿನ ಶಾಸನವೊಂದು ವಿವರಿಸುತ್ತದೆ. 'ತೊಡಪಿಲ್ಲೆ' ದಣ್ಣಾಯಕನನ್ನು ಬೆಳಗವರ್ತಿ (ಈಗಿನ ಬೆಳಗುತ್ತಿ) ನಾಡಿನ ರಾಜ್ಯಪಾಲನನ್ನಾಗಿ ನೇಮಿಸಿದನೆಂದು ಅಲ್ಲಿನ ಶಾಸನದಿಂದ ತಿಳಿಯಬಹುದು[೮].

[illegible]

ಕ್ರಿ.ಶ. ೧೨೧೮ರ ಕುಂದವಾಡ ಗ್ರಾಮದ ಶಾಸನವು ಹೊಯ್ಸಳರ ಕಾಲದ ಈ ಭಾಗದ ಆರ್ಥಿಕ ಜೀವನಕ್ಕೆ ಹಿಡಿದ ಕೈಗನ್ನಡಿಯಂತಿದೆ. ಈತನ ರಾಣಿಯಾದ ಅಭಿನವ ಕೇತಲ ದೇವಿಯು ಈ ಕುಂದವಾಡದಲ್ಲಿ ಪ್ರತಿ ಬುಧವಾರ ಸಂತೆ ನಡೆಯುವಂತೆ ಅಲ್ಲಿನ ಗೌಡರಿಗೆ ಆದೇಶಿಸಿ, ಅದರಿಂದ ಬರುವ ಆದಾಯವನ್ನು ಸೋಮನಾಥ ದೇವರಿಗೆ ದತ್ತಿ ಬಿಟ್ಟಿದ್ದನ್ನು ತಿಳಿಸುತ್ತದೆ[೮೪].

ಇಮ್ಮಡಿ ಬಲ್ಲಾಳನ ತರುವಾಯ ಅವನ ಮಗ ಇಮ್ಮಡಿ ನರಸಿಂಹನು (ಕ್ರಿ.ಶ. ೧೨೨೦-೧೨೩೫) ಸಿಂಹಾಸನಕ್ಕೆ ಬಂದನು. ಇವನ ಆಡಳಿತಾವಧಿಯ ಕೆಲ ಶಾಸನಗಳು ಈ ಭಾಗದಲ್ಲಿ ದೊರೆತಿದ್ದು, ಈಗಿನ ದಾವಣಗೆರೆ ,ಹರಿಹರ,ಹೊನ್ನಾಳಿ ತಾಲೂಕುಗಳು ಇವನ ಆಡಳಿತಕ್ಕೊಳಪಟ್ಟಿದ್ದವೆಂದು ವ್ಯಕ್ತವಾಗುತ್ತದೆ. ಇವನ ಆಳ್ವಿಕೆಯ ವೇಳೆಗೆ ಗುಳಿಯಕಲ್ಲು , ಆದಂಗಿಬೆಟ್ಟ, ಯಕ್ಕೆದೋಣಿ , ತಲ್ಯೆ ಕಟ್ಟೆ, ಬಿದರಹಳ್ಳಿಗಳು (ಹೀಗಿನ ಹೊನ್ನಾಳಿ ತಾಲೂಕಿನ ಹಳ್ಳಿಗಳು) ಗಂಗಾವಡಿ ಪ್ರಾಂತ್ಯದ ಮೇರೆಗಳಾಗಿದ್ದವೆಂದು ಶಾಸನವೊಂದರಿಂದ ತಿಳಿದುಬರುತ್ತದೆ[೮೫].

ಹರಿಹರದ ಹರಿಹರೇಶ್ವರ ದೇವಾಲಯದಲ್ಲಿರುವ ಶಾಸನವು[೮೬] ಅತ್ಯಂತ ದೀರ್ಘವಾದದ್ದೂ, ಹಾಗು ಮುಖ್ಯವಾದುದೂ ಆಗಿದೆ. ಹರಿಹರ ದೇವಾಲಯ ನಿರ್ಮಾಣಗೊಂಡ ವೃತ್ತಾಂತ ಈ ಶಾಸನದಲ್ಲಿದೆ. ಹರಿ, ಹರ ಇವರೀರ್ವರ ನಡುವೆ ಯಾವುದೇ ಭೇದವಿಲ್ಲವೆನ್ನುವುದನ್ನು ತೋರಿಸಲು ಹರಿಹರನು ಒಂದಾಗಿ ರೂಪು ತಳೆದುದನ್ನು ಕುರಿತ ವಿವರಣೆಯು ಶಾಸನದ ಪ್ರಾರಂಭದಲ್ಲಿ ಬಂದಿದೆ. ಅನಂತರ ಇತರ ಶಾಸನಗಳಲ್ಲಿರುವಂತೆಯೇ ಹೊಯ್ಸಳರ ಮೂಲ ಮತ್ತು ವಂಶಾವಳಿಯು ಉಕ್ತಗೊಂಡಿದೆ. ಈ ಭಾಗದಲ್ಲಿ ಹೊಯ್ಸಳ ಬಿಟ್ಟಿಗ (ವಿಷ್ಣುವರ್ಧನ) ಮತ್ತು ಇಮ್ಮಡಿ ಬಲ್ಲಾಳರ ಪರಾಕ್ರಮಗಳನ್ನು ವರ್ಣಿಸಲಾಗಿದೆ. ಇಮ್ಮಡಿ ನರಸಿಂಹನನ್ನು ಕುರಿತು, ಅವನು ಅಸಾಮಾನ್ಯ ಶೂರನೆಂತಲೂ, ಸೇವುಣರನ್ನು ಮತ್ತು ಪಾಂಡ್ಯರನ್ನು ಸೆದೆ ಬಡಿದ ವೀರನೆಂತಲೂ, ಚೋಳರಾಜ್ಯ ಪ್ರತಿಷ್ಠಾಪನಾಚಾರ್ಯನೆಂತಲೂ ವರ್ಣಿಸಿದೆ. ಇವನ ಪ್ರಧಾನಿ ಚೋಳರಾಜ್ಯ ಪೋಲಾಳ ದೇವನನ್ನು ಕುರಿತ ವರ್ಣನೆ ಸುಂದರವಾಗಿ ಮೂಡಿದೆ. ಪೋಲಾಳ್ವ ದೇವನಿಗೆ 'ತೂಲಗದ ಕಂಬ' ಎಂಬ ಬಿರುದು ಇದ್ದು, ಹೊಯ್ಸಳ ಆಸ್ಥಾನದಲ್ಲಿ ಅತ್ಯಂತ ಪ್ರಭಾವಿತ ವ್ಯಕ್ತಿಯಾಗಿದ್ದನೆಂದು ಈ ಶಾಸನದಿಂದಲೇ ವ್ಯಕ್ತಪಡುತ್ತದೆ. ಇವನು ಹರಿಹರೇಶ್ವರ ದೇವಾಲಯವನ್ನು ಪೂರ್ಣಗೊಳಿಸಿ ದೇವಾಲಯದ ಮೇಲೆ ೧೧೫ ಸುವರ್ಣ ಕಳಸಗಳನ್ನು ಇಡಿಸಿದನು. (ಚೋಳ ಪ್ರತಿಷ್ಠಾಪನಾ ಚಾರ್ಯ್ಯ ಶ್ರೀ ವೀರ ನರಸಿಂಹ ದೇವರ ಮಹಾ ಪ್ರಧಾನಂ ಪೋಲಾಳ್ವ ದಂಡನಾಥಂ ೧೧೫ ಹೊಂನ ಕಳಸದಿಂ ಮೆರೆವಂತಾಗಿ ' ಹರಿಹರ ದೇವರ್ಗ್ಗೆ ದೇವತಾಲಯಮಮ ಮಾಡಿಸಿದನು) ದೇವಾಲಯವನ್ನು ಪೂರ್ಣಗೊಳಿಸಿದ ನಂತರ ೧೦೪ ಬ್ರಾಹ್ಮಣರನ್ನೊಳಗೊಂಡ ಅಗ್ರಹಾರವೊಂದಕ್ಕೆ 'ಭಾನುವಳಿ' ಗ್ರಾಮವನ್ನು ದತ್ತಿ ಬಿಟ್ಟು ಲಕ್ಷ್ಮೀ ನಾರಾಯಣ ದೇವಾಲಯವನ್ನು ಅಲ್ಲಿ ಕಟ್ಟಿಸಿದನು.

ಪೋಲಾಳ್ವ ದಂಡಾಧೀಪನು ಶೂರನೂ, ಅಪಾರ ದೈವ ಭಕ್ತನೂ ಆಗಿದ್ದಂತೆಯೇ 'ಹರಿ ಚರಿತ'ವನ್ನು ಷಟ್ಪದಿಯಲ್ಲಿ ರಚಿಸಿದ ಗ್ರಂಥ ಕರ್ತೃವೂ ಆಗಿದ್ದನೆಂದು ಶಾಸನವು ವರ್ಣಿಸುತ್ತದೆ. ಹೊಯ್ಸಳ ಪ್ರಭುಗಳಂತೆಯೇ ಅವರ ಮಂತ್ರಿಗಳು ಮತ್ತು ದಂಡಾಧಿಪತಿಗಳು ವಿದ್ಯಾ-ವಿನಯ ಶೀಲರೂ, ದೈವಭಕ್ತಿ ಸಂಪನ್ನರೂ ಆಗಿರುತ್ತಿದ್ದರೆಂಬುದಕ್ಕೆ ಈ ಶಾಸನ ಉತ್ತಮ ಉದಾಹರಣೆಯೆನ್ನಬಹುದು.

ಇಮ್ಮಡಿ ನರಸಿಂಹನು ಕ್ರಿ.ಶ. ೧೨೩೪ರಲ್ಲಿ ಮೃತನಾಗಲು ಅವನ ಮಗ, ಸೋಮೇಶ್ವರನು (ಕ್ರಿ.ಶ.೧೨೩೪-೧೨೫೬) ಪಟ್ಟಕ್ಕೆ ಬಂದನು. ಜಗಲೂರು ತಾಲೂಕು ಕಲ್ಲೇದೇವರಪುರದ ಕಲ್ಲೇಶ್ವರ ದೇವಾಲಯಕ್ಕೆ ಸಮೀಪದಲ್ಲಿರುವ ಶಾಸನವೇ ಈ ಜಿಲ್ಲೆಯಲ್ಲಿ ದೊರೆತ ಸೋಮೇಶ್ವರನಿಗೆ ಸಂಬಂಧಿಸಿದ ಮೊದಲನೆಯ ಶಾಸನ[೮೭]. ಅವನು ಪಟ್ಟಕ್ಕೆ ಬಂದ ವರುಷದಲ್ಲೇ ಈ ಶಾಸನ ಬರೆಸಲಾಗಿದೆ. ಸೋಮೇಶ್ವರನೂ ಸಹ ಗಂಗವಾಡಿ ೯೬೦೦೦ ಮತ್ತು ನೊಳಂಬವಾಡಿ ೩೨೦೦೦ ನಾಡುಗಳನ್ನು ಆಳುತ್ತಿದ್ದು, ಸಾಮಾನ್ಯವಾಗಿ ಹೊಯ್ಸಳ ಅರಸರೆಲ್ಲರೂ ಧರಿಸಿದ್ದ ಬಿರುದುಗಳನ್ನು ಈ ಶಾಸನದಲ್ಲಿ ಕಾಣಬಹುದು. ಈ ಶಾಸನವು ಸಾಕಷ್ಟು ಅಳಿಸಿ ಹೋಗಿರುವುದರಿಂದ ಸಿಕ್ಕುವ ವಿವರಗಳು ಅಲ್ಪ. ನಾರಸಿಂಗಯ್ಯ ನಾಯಕ ಮತ್ತು ಮಲ್ಲಯ್ಯ ನಾಯಕರು ಬೆಮ್ಮತ್ತನೂರು (ಚಿತ್ರದುರ್ಗ) ಸೀಮೆಯನ್ನು ಆಳುತ್ತಿದ್ದು, ಬೆಮ್ಮತ್ತನೂರು ದುರ್ಗದ ಸ್ವಯಂಭುವನೇಶ್ವರ ದೇವಿಗೆ ದತ್ತಿಕೊಟ್ಟುದುದನ್ನು ಅದು ತಿಳುಸುತ್ತದೆ. ದಾವಣಗೆರೆ ತಾಲೂಕು ಲೋಕಿಕೆರೆ ಗ್ರಾಮದ ಈಶ್ವರ ದೇವಾಲಯದ ಕಂಭವೊಂದರ ಮೇಲೆ ಇರುವ ಕ್ರಿ.ಶ.೧೨೩೬ರ ಶಾಸನವೂ ಸೋಮೇಶ್ವರನು ಧರಿಸಿದ್ದ ಬಿರುದುಗಳನ್ನು ತಿಳಿಸಿ, ಅಂದಿನ ಆರ್ಥಿಕ ಸ್ಥಿತಿಯನ್ನು ಕುರಿತು ಸ್ವಲ್ಪ ಮಾಹಿತಿ ನೀಡುತ್ತದೆ. ಕೇತೇಶ್ವರ ದೇವರಿಗೆ ನಂದಾದೀವಿಗೆಗೋಸ್ಕರ ಸುಂಕ ಸರ್ವಾಧಿಕಾರಿಗಳು ಅಡಿಕೆ- ಎಲೆ ಸುಂಕ ಮತ್ತು ಗದ್ಯಾಣಗಳನ್ನು ಸಲ್ಲಿಸಲು ಏರ್ಪಟು ಮಾಡಿದ್ದನ್ನು ಶಾಸನ ಹೇಳುತ್ತದೆ[೮೮]. ಈ ಎಲ್ಲಾ ಶಾಸನಗಳಿಂದ ಸೋಮೇಶ್ವರನು ಜಗಲೂರು, ದಾವಣಗೆರೆ ನಾಡುಗಳನ್ನು ತನ್ನ ಅಧೀನ ಮಾಡಿಕೊಂಡು ಆಳ್ವಿಕೆ ನಡೆಸಲು ವ್ಯವಸ್ಥೆ ಮಾಡಿದ್ದ-ನೆಂದು ತಿಳಿದುಬರುತ್ತದೆ.

ಸೋಮೇಶ್ವರನು ಕ್ರಿ.ಶ. ೧೨೫೬ರಲ್ಲಿ ಮರಣ ಹೊಂದುವ ಮೊದಲೇ ಕ್ರಿ.ಶ. ೧೨೫೪ರಲ್ಲಿ ಅವನ ಮಗ ಮುಮ್ಮಡಿ ನರಸಿಂಹನು ಯುವರಾಜನಾಗಿ ಪಟ್ಟಾಭಿಷಿಕ್ತನಾಗಿ, ಕ್ರಿ.ಶ. ೧೨೫೬ರಲ್ಲಿ ಆಡಳಿತದ ಹೊಣೆಯನ್ನು ಹೊತ್ತುಕೊಂಡನು. ಇವನ ಆಳ್ವಿಕೆಗೆ ದಾವಣಗೆರೆ, ಹೊಳಲ್ಕೆರೆ, ಹಿರಿಯೂರು ಮತ್ತು ಚಿತ್ರದುರ್ಗ ಪ್ರಾಂತ್ಯಗಳು ಸೇರಿಕೊಂಡಿದ್ದು, ಈ ಪ್ರದೇಶಗಳಲ್ಲಿ ಸುಮಾರು ಒಂಭತ್ತು ಶಾಸನಗಳು ದೊರೆತಿವೆ. ದಾವಣಗೆರೆ ಮತ್ತು ಹೊಳಲ್ಕೆರೆ ತಾಲೂಕುಗಳಲ್ಲಿ ದೊರಕಿರುವ ಕ್ರಿ.ಶ. ೧೨೬೮ರ ಎರಡು ಶಾಸನಗಳೇ ಈ ಜಿಲ್ಲೆಯಲ್ಲಿ ದೊರೆತ ಇವನ ಕಾಲದ ಮೊಟ್ಟಮೊದಲ ಶಾಸನಗಳು.

[illegible]

[illegible]

[illegible]

[illegible]

ಹರಿಹರ ದೇವಾಲಯದ ಮಹಾದ್ವಾರದ ಬಳಿ ಇರುವ ಶಾಸನವು ವಿಸ್ತಾರವಾಗಿದ್ದು, ಅದನ್ನು ಮುಮ್ಮಡಿ ನರಸಿಂಹನ ಸೋದರ ಸಂಬಂಧಿ ಸೋಮೇಯ ದಣ್ಣಾಯಕನು ಬರೆಸಿದನು. ಇವನಿಗೆ ಗಾಯಿಗೋಪಾಲ, ಗಂಡಪೆಂಡರ, ಮಂಡಳೀಕ ಇವೇ ಮೊದಲಾದ ಬಿರುದುಗಳಿದ್ದವು. ಇವನು ಹರಿಹರ ದೇವಾಲಯದ ಪೂರ್ವ ದಿಕ್ಕಿನಲ್ಲಿರವ ಐದು ಅಂತಸ್ತುಗಳುಳ್ಳ ದ್ವಾರ ಮಂಟಪವನ್ನು ನಿರ್ಮಿಸಿ, ಗೋಪುರದ ಮೇಲೆ ಐದು ಕಳಶಗಳನ್ನು ಪ್ರತಿಷ್ಠಾಪಿಸಿದನೆಂದು ಹಾಗು 'ಪ್ರಸನ್ನ ಸೋಮನಾಥಪುರ'ವೆಂಬ ಅಗ್ರಹಾರವನ್ನು ಸ್ಥಾಪಿಸಿ, ಅಲ್ಲಿ ಶಿವ ಮತ್ತು ವಿಷ್ಣು ದೇವಾಲಯಗಳನ್ನು ಕಟ್ಟಿಸಿದನೆಂದು ಈ ಮೇಲಿನ ಶಾಸನದಿಂದ ತಿಳಿದುಬರುತ್ತದೆ. ಇಮ್ಮಡಿ ನರಸಿಂಹನ ಮಂತ್ರಿ ಪೋಲಾಳ್ವನಂತೆಯೇ ಈ ಸೋಮ ದೇವನು ಹರಿಹರ ದೇವರಿಗೆ ಸೇವೆ ಸಲ್ಲಿಸಿದ್ದನ್ನು , ವಿದ್ಯೆಗೆ ಪ್ರೋತ್ಸಾಹ ನೀಡಿದ್ದನ್ನು ಇದೇ ಶಾಸನವು ಉಲ್ಲೇಖಿಸುತ್ತದೆ.

ಹರಿಹರ ದೇವಾಲಯಕ್ಕೆ ಉತ್ತರ ಭಾಗದಲ್ಲಿರುವ ವೀರಗಲ್ಲು[೮] ಈ ಜಿಲ್ಲೆಯಲ್ಲಿ ದೊರೆತ ಮುಮ್ಮಡಿ ನರಸಿಂಹನ ಕಾಲದ ಹೊಯ್ಸಳ ಶಾಸನಗಳಲ್ಲಿ ಕೊನೆಯದು. ಈ ವೀರಗಲ್ಲು ಐತಿಹಾಸಿಕ ದೃಷ್ಟಿಯಿಂದ ಮಹತ್ವದ್ದಾಗಿದೆ. ಏಕೆಂದರೆ ಈ ಹಿಂದೆಯೇ ಹೇಳಿದಂತೆ ಹರಿಹರ ದೇವಾಲಯದ ಪೂರ್ವ ದಿಕ್ಕಿಗಿರುವ ಐದು ಅಂತಸ್ತಿನ ದ್ವಾರ ಮಂಟಪವನ್ನು ಕಟ್ಟಿಸಿ, ಪ್ರಸನ್ನ ಸೋಮನಾಥಪುರ ಅಗ್ರಹಾರವನ್ನು ಸ್ಥಾಪಿಸಿದನು. ಮುಮ್ಮಡಿ ನರಸಿಂಹನ ಮಂತ್ರಿಗಳಲ್ಲಿ ಒಬ್ಬನಾದ ಸೋಮ ದಣ್ಣಾಯಕನು ಮಂಟಪದ ಗೋಪುರದ ಮೇಲೆ ಪಂಚ ಕಳಶಗಳನ್ನು ಇರಿಸಿ, ಅಲ್ಲಿಂದ ಬರುತ್ತಿರುವಾಗ ಕಂಚಿಕೆರೆಯ ಬಳಿ ಬೇಡರು ಅವನನ್ನು ಮುತ್ತಿದರು. ಅವರಲ್ಲಿ ಕೆಲವರನ್ನು ಇವನು ಕೊಂದುಹಾಕಿದನು. ಆದರೂ ಕೊನೆಗೆ ಬೇಡರ ಪಡೆಯಿಂದ ಮರಣಹೊಂದಿದನು. ಆತನ ಸ್ಮಾರಕವಾಗಿ ಈ ಮೇಲಿನ ವೀರಗಲ್ಲನ್ನು ಸ್ಥಾಪಿಸಿದರು.

ಈಗಿನ ಹರಪನಹಳ್ಳಿ ತಾಲೂಕಿಗೆ ಸೇರಿದ ಉಚ್ಚಂಗಿ ದುರ್ಗವು ಆಗಿನ ಕಾಲದಲ್ಲಿ ಪ್ರಮುಖ ಗಿರಿದುರ್ಗವಾಗಿತ್ತು. ವೀರಬಲ್ಲಾಳನ ಜೀವನದಲ್ಲಿ ಈ ಕೋಟೆಯನ್ನು ವಶಪಡಿಸಿಕೊಂಡಿದ್ದು, ಒಂದು ಮಹತ್ತರ ಘಟನೆಯಾಗಿತ್ತೆಂಬುದನ್ನು ಅವನ ಕಾಲದ ಶಾಸನಗಳಿಂದ ತಿಳಿಯಬಹುದು. ಈ ಕೋಟೆಯನ್ನು ಪುನಃ ಪಾಂಡ್ಯ ಅರಸ ಕಾಮದೇವನಿಗೆ ಕೊಟ್ಟು ಅವನನ್ನು ತನ್ನ ಸಾಮಂತ ಅರಸನನ್ನಾಗಿ ನೇಮಿಸಿದನು. ಇನ್ನೊಂದು ಶಾಸನದ ಪ್ರಕಾರ ವೀರಬಲ್ಲಾಳನು ಉಚ್ಚಂಗಿಯನ್ನು ತನ್ನ ರಾಜ್ಯದ ಪ್ರಾಂತ್ಯವೊಂದರ ಮುಖ್ಯ ಪಟ್ಟಣವಾಗಿ ಮಾಡಿಕೊಂಡು ರಾಜ್ಯವಾಳಿದ್ದುದಾಗಿ ತಿಳಿದುಬರುತ್ತದೆ. ಇವನ ಕಾಲದ ಶಾಸನಗಳು ಬಾಗಳಿ ಮತ್ತಿತರ ಕಡೆ ದೊರೆತಿರುವುದರಿಂದ ಇವನ ಆಳ್ವಿಕೆಯು ಇಲ್ಲಿಯವರೆಗೆ ವಿಸ್ತರಿಸಿತ್ತೆಂದು ಹೇಳಬಹುದು. ಎರಡನೆಯ ವಿನಯಾದಿತ್ಯನ ಮರಣಾನಂತರ ಅವನ ಮೊಮ್ಮಗನಾದ ಒಂದನೇ ಬಲ್ಲಾಳನು ಪಟ್ಟಕ್ಕೆ ಬಂದನು. ಇವನು ಕ್ರಿ.ಶ. ೧೧೦೦ ರಿಂದ ೧೧೦೮ರವರೆಗೆ ರಾಜ್ಯವಾಳಿದನು. ಇವನೂ ಕೂಡ ಚಾಲುಕ್ಯರ ಚಕ್ರವರ್ತಿ

[illegible]

ಆರನೇ ವಿಕ್ರಮಾದಿತ್ಯನ ಸಾಮಂತನಾಗಿದ್ದನು. ಬಲ್ಲಾಳನು ತನ್ನ ತಮ್ಮ ಬಿಟ್ಟಿದೇವನೊಂದಿಗೆ ಉಚ್ಚಂಗಿಯ ಪಾಂಡ್ಯರ ಮೇಲೆ ದಂಡೆತ್ತಿ ಹೋಗಿ ಆ ರಾಜ್ಯದ ಅಪಾರ ಐಶ್ವರ್ಯವನ್ನು ಸೂರೆಗೊಂಡನು . ತಲಕಾಡಿನ ವಿಜಯದಿಂದ ಸ್ಫೂರ್ತಿಗೊಂಡ ವಿಷ್ಣುವರ್ಧನನು ಚಾಲುಕ್ಯರ ಅಧೀನದಿಂದ ಸ್ವತಂತ್ರನಾಗಲಿಚ್ಛಿಸಿದನು. ಕ್ರಿ.ಶ. ೧೧೧೭ರಲ್ಲಿ ಚಾಲುಕ್ಯರ ಸಾಮಂತರಾಗಿದ್ದ ಉಚ್ಚಂಗಿಯ ಪಾಂಡ್ಯರನ್ನು ಚಿತ್ರದುರ್ಗ ಜಿಲ್ಲೆಯ ದುಮ್ಮೆ ಎಂಬ (ಹೊಳಲ್ಕೆರೆ ತಾಲೂಕು) ಸ್ಥಳದಲ್ಲಿ ಸೋಲಿಸಿದನು. ತನ್ನ ಉತ್ತರಾಧಿಕಾರಿಯಾಗಲಿದ್ದ ಮಗುವು ಜನಿಸಿದ್ದರಿಂದ ಹರ್ಷ ಚಿತ್ತನಾದ ವಿಷ್ಣುವರ್ಧನನು ಮತ್ತೊಮ್ಮೆ ತನ್ನ ದಂಡಯಾತ್ರೆ ಕೈಗೊಂಡನು. ತನ್ನ ಸೈನ್ಯವನ್ನು ರಾಜ್ಯದ ಉತ್ತರ ಗಡಿಯಾಚೆಗೆ ನಡೆಸಿ, ಉಚ್ಚಂಗಿಯ ಪಾಂಡ್ಯರನ್ನು ಬನವಾಸಿಯ ಕದಂಬರನ್ನು ಪುನಃ ಸೋಲಿಸಿದನು.

ಬಲ್ಲಾಳನು ಚೆಂಗಾಳ್ವರಿಗಿಂಗತಲೂ ಹೆಚ್ಚಿನ ತೊಂದರೆಯನ್ನು ಉಚ್ಚಂಗಿಯ ಪಾಂಡ್ಯರಿಂದ ಎದುರಿಸಬೇಕಾಯಿತು. ಉಚ್ಚಂಗಿ ಕೋಟೆಯನ್ನು ವಶಪಡಿಸಿಕೊಳ್ಳಲು ಬಲ್ಲಾಳನು ನಿರ್ಧರಿಸಿ, ಅಪಾರ ಸೈನ್ಯದೊಂದಿಗೆ ಹೋಗಿ, ಪಾಂಡ್ಯರ ರಾಜ ಕಾಮದೇವನನ್ನು ಸೋಲಿಸಿ ದುರ್ಗವನ್ನು ವಶಪಡಿಸಿಕೊಂಡನು. ಸೋತ ಕಾಮದೇವನು ಬಲ್ಲಾಳನಲ್ಲಿ ಕ್ಷಮಾದಾನ ಕೇಳಲು, ಅವನ ರಾಜ್ಯವನ್ನು ಅವನಿಗೆ ಹಿಂತಿರುಗಿ ಕೊಟ್ಟನು. ಈ ವಿಜಯದಿಂದ ಬಲ್ಲಾಳನು ಅನೇಕ ಬಿರುದುಗಳನ್ನು ಧರಿಸಿದನು. ಶ್ರೀ ಪೃಥ್ವಿ ವಲ್ಲಭ ಮಹಾರಾಜಾಧಿರಾಜ, ರಾಜ ಪರಮೇಶ್ವರ, ಯಾದವ ಕುಳಂಬರ ದ್ಯುಮಣಿ, ಸರ್ವಜ್ಞ ಚೊಡಾಮಣಿ, ಮಲೆರಾಜ, ರಾಜ ಮಲಪರೊಳು ಗಂಡ,ಗಂಡು ಬೇರುಂಡ, ಕದನ ಪ್ರಚಂಡ, ಶೂರ, ಏಕಾಂಗಿ ವೀರ, ಶನಿವಾರ ಸಿದ್ಧಿ, ಗಿರಿದುರ್ಗಮಲ್ಲ, ಚಲಂದಕರಾಮ ಎಂದಿದ್ದವು. ಉಚ್ಚಂಗಿದುರ್ಗ ಗೆದ್ದಿದ್ದರಿಂದ ಹೊಯ್ಸಳರಿಗೆ ಶನಿವಾರ ಸಿದ್ಧಿ,ಗಿರಿದುರ್ಗ ಮಲ್ಲ ಎಂಬ ಬಿರುದು ಬಂದವೆಂದು ಅಭಿಪ್ರಾಯಪಟ್ಟಿರುತ್ತಾರೆ. ಆದರೆ ಹೊಯ್ಸಳರಿಗಿಂತ ಮೊದಲೇ ಈ ಬಿರುದು ಬಂದಿದೆ ಎಂಬುದನ್ನು ಕೆಲ ಶಾಸನಗಳು ಉಲ್ಲೇಖಿಸುತ್ತವೆ[೯೦].

ಶನಿವಾರ ಸಿದ್ಧಿಯ ಮೂಲವನ್ನು ಹುಡುಕುವಾಗ ಶಿಲಾಹಾರ ರಾಜನಾದ ಅಪರಾಜಿತ ದೇವನ ಬಿರುದುಗಳಲ್ಲಿ ಶನಿವಾರ ವಿಜಯ ಎಂಬುದು ಸುಮಾರು ಕ್ರಿ.ಶ. ೯೯೭ರ ಶಾಸನದಲ್ಲಿ ಮೂಡಿಬಂದಿದೆ . ಇಲ್ಲಿ ಚಾಲುಕ್ಯರನ್ನು ಹತ್ತಿಕ್ಕಿ ತಾನೇ ಚಕ್ರವರ್ತಿ ಎಂದು ಘೋಷಿಸಿಕೊಂಡು ತನ್ನ ತಂದೆ ತಳೆದಿದ್ದ ಶನಿವಾರ ಸಿದ್ಧಿ, ಗಿರಿದುರ್ಗ ಮಲ್ಲ, ಬಿರುದುಗಳನ್ನು ಇವನು ಪಡೆದಿದ್ದುದಲ್ಲದೆ ಅವನ ಮಗ ಸೋಯಿ ದೇವನು ಸಹ ಅದೇ ಬಿರುದುಗಳನ್ನು ಹೊಂದಿದ್ದನು. ಮುಂದೆ ಕ್ರಮವಾಗಿ ಹೊಯ್ಸಳ ಅರಸರೂ ಈ ಬಿರುದುಗಳನ್ನು ಧರಿಸಿರುವುದನ್ನು ಕಾಣಬಹುದು. ಶಾಸನಗಳನ್ನು ಗಮನಿಸಿದಾಗ ಶನಿವಾರ ಸಿದ್ಧಿ ಎಂಬ ಬಿರುದು ಕಾಲಾನುಕ್ರಮದಲ್ಲಿ ಕಲ್ಯಾಣ ಚಾಲುಕ್ಯರು ಕಳಚೂರಿಗಳು ಹಾಗು ಹೊಯ್ಸಳರಲ್ಲಿ ವಂಶಪಾರಂಪರ್ಯವಾಗಿ ಮುಂದುವರೆದುದ್ದನ್ನು ಗುರುತಿಸಬಹುದು.

ಶನಿವಾರ ನಮ್ಮ ಸಂಪ್ರದಾಯದಲ್ಲಿ ಅ ಶುಭ ದಿನ. ಆ ದಿನ ಯಾವ ಶುಭ ಕೆಲಸವನ್ನು ಮಾಡಬಾರದು, ಮಾಡಿದರೂ ಅದು ಶ್ರೇಯಸ್ಕರವಲ್ಲ ಎಂಬ ನಂಬಿಕೆ ಇದೆ. ಅಂತಹ ಅ ಶುಭ ದಿನದಲ್ಲಿಯೂ ಗಿರಿದುರ್ಗದ ಮೇಲೆ ವಿಜಯಗಳಿಸಿದ್ದುದಕ್ಕಾಗಿ ಇಲ್ಲವೇ ಶನಿವಾರ ಸಿದ್ಧಿ ಎಂಬುದು ಒಂದು ಗ್ರಾಮವಾಗಿರಬಹುದು. ಹೊಯ್ಸಳರ ದೊರೆಗಳಾದ ವಿಷ್ಣುವರ್ಧನ ಕ್ರಿ.ಶ. ೧೧೩೧ರಲ್ಲಿ ಮತ್ತು ಕ್ರಿ.ಶ.೧೧೭೭ರಲ್ಲಿ ೩ನೇ ಬಲ್ಲಾಳನೂ ಗೆದ್ದ ಘಟನೆಯ ಮಹತ್ವವಾಗಿದ್ದು, ಅದು ಹಲವು ಶಾಸನಗಳಲ್ಲಿ ಉಲ್ಲೇಖವಾಗಿದೆ. ಅಲ್ಲದೆ ಅಸಗೋಡು ಪಲ್ಲವರ ಕಾಲದಲ್ಲಿ ಉಚ್ಚಂಗಿ ಮೂವತ್ತರಲ್ಲಿ ಹೊಯ್ಸಳ ದೊರೆ ವೀರ ನರಸಿಂಹನು ಕಲಿದೇವರಿಗೆ ಭೂಮಿಯನ್ನು ದಾನ ಕೊಟ್ಟ ವಿವರ ಶಾಸನದಲ್ಲಿದೆ. ಉಚ್ಚಂಗಿದುರ್ಗದ ವೀರಭದ್ರ ದೇವಾಲಯ ಗರ್ಭ ಗೃಹದಲ್ಲಿರುವ ಮೂರ್ತಿಯ ಹಿಂದೆ ಶಾಸನವಿದೆ. ಇದು ಹೊಯ್ಸಳರ ಕಾಲದ್ದಾಗಿದ್ದು, ನಂತರದ ದಿನಗಳಲ್ಲಿ ಇದರ ಮೇಲ್ಭಾಗದಲ್ಲಿ ವಿಗ್ರಹ ಕೆತ್ತಿರುವುದರಿಂದ ಶಾಸನದ ಸಾಲುಗಳು ಕತ್ತರಿಸಿ ಹೋಗಿವೆ. ಉಚ್ಚಂಗಿ ದುರ್ಗವನ್ನು ಪಾಂಡ್ಯರಿಂದ ಗೆದ್ದ ಹೊಯ್ಸಳರು ವಿಜಯನಗರ ಸ್ಥಾಪನೆಯವರೆಗೆ ತಮ್ಮ ಅಧೀನದಲ್ಲಿಟ್ಟುಕೊಂಡಿದ್ದರು. ಜಿಲ್ಲೆಯ ವಿವಿಧ ಕಡೆ ಇವರ ಕಾಲದ ದೇವಾಲಯಗಳು ಕಂಡುಬಂದಿವೆ. ಇದರಿಂದಾಗಿ ದಾವಣಗೆರೆ ಜಿಲ್ಲೆಯವರೆಗೆ ಇವರ ಆಳ್ವಿಕೆ ವಿಸ್ತರಿಸಿತ್ತೆಂದು ಹೇಳಬಹುದು. ಈ ಜಿಲ್ಲೆಯ ಒಳಗಡೆ ಹೊಯ್ಸಳ ರಾಜರು ತಮ್ಮ ನಿರ್ಧಿಷ್ಟ ಕಾಲಾವಧಿಯಲ್ಲಿ ಅನೇಕ ಪ್ರಜಾ ಹಿತ ಕಾರ್ಯಗಳನ್ನು ಕೈಗೊಂಡು ಮೆಚ್ಚುಗೆ ಗಳಿಸಿಕೊಂಡಿದ್ದಾರೆ.

ವಿಜಯನಗರ ಅರಸರ ಆಳ್ವಿಕೆ :

ಹೊಯ್ಸಳ ಸಾಮ್ರಾಜ್ಯವು ಪತನ ಹೊಂದಿದ ತರುವಾಯ ಹಿಂದೂ ಧರ್ಮ ರಕ್ಷಣೆಗೆಂದು ವಿಜಯನಗರ ಸಾಮ್ರಾಜ್ಯವು ಅಸ್ತಿತ್ವಕ್ಕೆ ಬಂದಿತು. ಇದನ್ನು ಮರೆತುಹೋದ ಹಾಗು ಎಂದೆಂದೂ ಮರೆಯಲಾಗದ ಮಹಾ ಸಾಮ್ರಾಜ್ಯವೆಂದು ವಿದ್ವಾಂಸರು ಬಣ್ಣಿಸಿದ್ದಾರೆ[೯೧] ಅಷ್ಟೇ ಅಲ್ಲದೇ ವಿದೇಶಿ ಲೇಖಕರು ,ಪ್ರವಾಸಿಗರು , ಇತಿಹಾಸಕಾರರು, ವರ್ತಕರು ವಿಜಯನಗರದ ಭವ್ಯತೆಯನ್ನು ಮನಸಾರೆ ಕೊಂಡಾಡಿದ್ದಾರೆ. ಕ್ರಿ.ಶ. ೧೩೩೬ ರಿಂದ ಕ್ರಿ.ಶ. ೧೫೬೫ರವರೆಗೆ ಆಳ್ವಿಕೆ ನಡೆಸಿದ ವಿಜಯನಗರದ ಅರಸರು ನೇರವಾಗಿ ಇಲ್ಲವೇ ಅವರ ಸಾಮಂತರು ಇಂದಿನ ದಾವಣಗೆರೆ ಜಿಲ್ಲೆಯ ಕೆಲವು ಭಾಗಗಳನ್ನು ತಮ್ಮ ಅಧೀನದಲ್ಲಿಟ್ಟುಕೊಂಡು ಆಳ್ವಿಕೆ ನಡೆಸಿದರು. ಕ್ರಿ.ಶ. ೧೩೫೪ರಿಂದ ಸದಾಶಿವರಾಯನ ಕಾಲದವರೆಗಿನ ಶಾಸನಗಳು ಈ ಜಿಲ್ಲೆಯಲ್ಲಿ ದೊರೆತಿವೆ. ಅವುಗಳು ಇವರ ಚರಿತ್ರೆಯನ್ನು ರಚಿಸಲು ಸಹಾಯಕವಾಗಿವೆ.

[illegible]

[illegible]

ದಾವಣಗೆರೆ ಜಿಲ್ಲೆಯಲ್ಲಿ ವಿಜಯನಗರದರಸರು ನೇರವಾಗಿ ಇಲ್ಲವೇ ಪರೋಕ್ಷವಾಗಿ ತಮ್ಮ ಅಧಿಕಾರವನ್ನು ಸ್ಥಾಪಿಸಿದ್ದರು. 'ಬೆಮ್ಮತ್ತನಕಲ್ಲುನ್ನು' ಕೇಂದ್ರವನ್ನಾಗಿ ಮಾಡಿಕೊಂಡು ವಿಜಯನಗರದ ಪ್ರತಿನಿಧಿ 'ಮಲ್ಲಿನಾಥ ಒಡೆಯ'ನೆಂಬುವನು ಆಡಳಿತ ನಡೆಸುತ್ತಿದ್ದನೆಂದು ತಿಳಿದುಬರುತ್ತದೆ[೯೨]. ಮಲ್ಲಿನಾಥ ಒಡೆಯನು ಅಳಿಯ ಸಾಯಿನಾಯಕನ ಮಗನೆಂದು, ಸಾಯಿನಾಯಕನು ರಾಜನಾಗಿದ್ದ ಮೊದಲನೆಯ ಬುಕ್ಕನ ಮಗನೆಂದು ಅದೇ ಶಾಸನ ವಿವರಿಸುತ್ತದೆ. ಇದರಿಂದ ಈ ಜಿಲ್ಲೆ ಮೊದಲಿನಿಂದಲೂ ಈ ರಾಜಮನೆತನದ ಸಮೀಪ ಸಂಬಂಧಿಗಳ ಕೈಯಲ್ಲಿದ್ದಿತ್ತೆಂದು ಅರಿಯಬಹುದು.

೨ನೇ ಹರಿಹರ ರಾಯನು ವಿಷ್ಣು ಭಕ್ತನಾಗಿದ್ದು, ನಗರದಲ್ಲಿನ ವಿಷ್ಣು ದೇವಾಲಯಕ್ಕೆ ದತ್ತಿಬಿಟ್ಟ ಬಗ್ಗೆ ಶಾಸನ ವಿವರಿಸುತ್ತದೆ[೯೩]. ಹರಿಹರ ರಾಯನ ಮಗ ಚಿಕ್ಕ ಒಡೆಯರ್, ಕಂಪಣ -೩೬ ರಲ್ಲಿನ ಅರಗ ಮಲೆರಾಜ್ಯ (Araga male-rajya) ವನ್ನು ೧೩೪೯ ರಲ್ಲಿ ಆಳಿದನೆಂದು ತಿಳಿದು ಬರುತ್ತದೆ[೯೪]. ಇದೇ ವರ್ಷದಲ್ಲಿ ಕುರವದಲ್ಲಿನ ರಾಮೇಶ್ವರ ದೇವರಿಗೆ ದಾನ ಬಿಟ್ಟನೆಂದು ಹಾಗು ರಾಮಪುರ ಗ್ರಾಮ ಸ್ಥಾಪಿಸಿದನೆಂದು ಹೊನ್ನಾಳಿ ತಾಲೂಕಿನ ಶಾಸನ ವೊಂದರಿಂದ ತಿಳಿದು ಬರುತ್ತದೆ[೯೫].

ದಾವಣಗೆರೆ ತಾಲೂಕಿನಲ್ಲಿ ದೊರೆತಿರುವ ಶಾಸನವೊಂದು ಎರಡನೆ ಹರಿಹರನು ಶಂಕರಪುರವೆಂಬ ಗ್ರಾಮವನ್ನು ದಾನಕೊಟ್ಟನು . ಈ ಗ್ರಾಮವು ಹರಿಹರ ಸೀಮೆ, ಉಚ್ಚಂಗಿ ವೆಂತೆ, ಕೊಟ್ಟೂರು ಚಾವಡಿಗೆ ಸೇರಿತ್ತೆಂದು ಶಾಸನ ತಿಳಿಸುತ್ತದೆ.[೯೬] ವೇದ ಮತ್ತು ಶಾಸ್ತ್ರಗಳನ್ನು ಸತತವಾಗಿ ಅಭ್ಯಾಸ ಮಾಡುವುದಕ್ಕಾಗಿ ಎರಡನೇ ಹರಿಹರನು ಶಂಕರಾಪುರವೆಂಬ ಗ್ರಾಮವನ್ನು ಬ್ರಾಹ್ಮಣರಿಗೆ ದಾನ ಮಾಡಿದ. ಇದೇ ಅರಸನ ಮಂತ್ರಿಯಾಗಿದ್ದ ಮುದ್ದ ದಂಡನಾಯಕನು ಮೂವತ್ತಾರು ವೃತ್ತಿಗಳುಳ್ಳ ಅಗ್ರಹಾರವೊಂದನ್ನು ರಚಿಸಿ, ಬ್ರಾಹ್ಮಣರಿಗೂ, ದೇವಾಲಯಕ್ಕೂ ದತ್ತಿಕೊಟ್ಟನು . ವಿಜಯ ನಗರ ಸಾಮ್ರಾಜ್ಯದ ' ಕೊಟ್ಟೂರು ಚಾವಡಿ 'ಗೆ ಇಂದಿನ ದಾವಣಗೆರೆ ಮತ್ತು ಹರಿಹರ ತಾಲೂಕುಗಳೂ ಸೇರಿದ್ದವೆಂಬ ಅಭಿಪ್ರಾಯವೂ ಇದೆ[೯೭], ಮೊದಲನೆಯ ದೇವರಾಯನ ಮಂತ್ರಿಯಾಗಿದ್ದ ಜಗನ್ನಾಥನ ಮಗ ಬುಳ್ಳಪ್ಪನು ಹರಿದ್ರಾ ನದಿಗೆ ಕೃಷಿಯ ಅಭಿವೃದ್ಧಿಗಾಗಿ ಅಣೆಕಟ್ಟನ್ನು ಕಟ್ಟಿಸಿದನೆಂದು ದಾವಣಗೆರೆ ತಾಲೂಕಿನ ಶಾಸನವೊಂದರಿಂದ ತಿಳಿದುಬರುತ್ತದೆ. ಕಾಲಕ್ರಮೇಣ ಈ ಅಣೆಕಟ್ಟು ಒಡೆದು ,ಪ್ರಜೆಗಳು ಕಷ್ಟ-ನಷ್ಟಗಳನ್ನು ಅನುಭವಿಸುತ್ತಿದ್ದಾಗ ದಂಡನಾಯಕನಾದ ಚಾಮನೃಪನು ಅದನ್ನು ಸರಿಪಡಿಸಿ ಮತ್ತೆ ಜನಗಳಿಗೆ ಅನುಕೂಲ ಮಾಡಿಕೊಟ್ಟನು[೯೮]

ಕೃಷ್ಣದೇವರಾಯನ ಕಾಲದಲ್ಲಿ ಈ ಜಿಲ್ಲೆಯ ಒಂದು ಭಾಗದ ಜನ ತೆರಿಗೆಗಳ ಭಾರದಿಂದ ಬಳಲುತ್ತಿದ್ದಾಗ ಅವನ ಅಧಿನಾಧಿಕಾರಿ ಕಾಣಿಕೆ, ಮೇಲುಪಣ ಮತ್ತು ಕಬ್ಬಿನ ಮೇಲಿನ ಸುಂಕವನ್ನು ರದ್ದುಪಡಿಸಿದ. ಅದೇ ರೀತಿ ಅಚ್ಯುತರಾಯನ ಆಜ್ಞೆಯ ಮೇರೆಗೆ ಬೇಗೂರು ಸೀಮೆಯಲ್ಲಿ ಮದುವೆ ತೆರಿಗೆಯನ್ನು ರದ್ದುಪಡಿಸಲಾಯಿತು[೯೯]. ಸದಾಶಿವರಾಯನ ಪ್ರತಿನಿಧಿ ರಾಮರಾಜ ಒಡೆಯರ್ ಸ್ಥಳೀಯ ಕ್ಷೌರಿಕರಿಂದ ವಸೂಲಿ ಮಾಡಿದ 'ಕೊ' ಎನ್ನುವ ತೆರಿಗೆ ಹಣವನ್ನು ಕುರುವದ ರಾಮೇಶ್ವರ ದೇವರಿಗೆ ದತ್ತಿ ಬಿಟ್ಟನೆಂದು ಶಾಸನದಲ್ಲಿ ವಿವರವಿದೆ[೧೦೦]. ಕ್ರಿ.ಶ. ೧೫೫೭ರ ನವೆಂಬರ್ ೨ನೇ ಮಂಗಳವಾರದಂದು ಸದಾಶಿವ ಮಹಾರಾಜನು ವಿದ್ಯಾನಗರಿಯನ್ನು ಆಳುವಾಗ ಮಹಾ ನಾಯಕಾಚಾರ್ಯನ ಅನುಯಾಯಿ ಕೃಷ್ಣಪ್ಪ ನಾಯಕ ಕುರಿ ತೆರಿಗೆಯನ್ನು ಇಂತಿಷ್ಟು ಕೊಡಬೇಕೆಂದು ನಿರ್ಧರಿಸಿದ ವಿಷಯವನ್ನು ಹರಪನಹಳ್ಳಿ ತಾಲೂಕಿನ ಮೂವತ್ತರ ಮತ್ತಿಗೆ ಗ್ರಾಮದ ಶಾಸನದಿಂದ ತಿಳಿದುಬರುತ್ತದೆ[೧೦೧]. ಸದಾಶಿವರಾಯನು ಹೊನ್ನಾಳಿ ಸೀಮೆಯ ತುಂಗಭದ್ರಾ ನದಿಯ ಮಧ್ಯದಲ್ಲಿನ ಕುರುವದ ರಾಮೇಶ್ವರ ದೇವರ ಅಭಿಷೇಕ, ಪೂಜೆ, ನೈವೇದ್ಯಕ್ಕಾಗಿ ಮತ್ತು ನಂದಾ ದೀಪಕ್ಕಾಗಿ ಕೊಟ್ಟ ಭೂ ದಾನದ ವಿಚಾರವನ್ನು ಅದೇ ದೇವಾಲಯದ ಮುಂದಿರುವ ಶಾಸನವು ತಿಳಿಸುತ್ತದೆ[೧೦೨].

ಕ್ರಿ.ಶ. ೧೩೩೭ರಿಂದ ೧೪೪೬ರವರೆಗೆ ಆಳ್ವಿಕೆ ಮಾಡಿದ ಇಮ್ಮಡಿ ಹರಿಹರನ ಅರ್ಧ ವರಹ (ಹೊನ್ನು)ಗಳು ಜಗಲೂರು ತಾಲೂಕಿನ ಬಿಳಚೋಡಿನಲ್ಲಿ ದೊರೆತಿವೆ. ಈ ನಾಣ್ಯದ ಮೇಲ್ಮುಖದಲ್ಲಿ ಶಿವ ಪಾರ್ವತಿಯರ ಚಿತ್ರ, ಹಿಂಭಾಗದಲ್ಲಿ ' ಶ್ರೀ ಪ್ರತಾಪ ಹರಿಹರ ' ಎಂಬ ಮೂರು ಸಾಲಿನ ನಾಗರಿ ಲಿಪಿ ಇದೆ[೧೦೩]. ಇದೇ ರೀತಿಯ ತಾಮ್ರದ ಎಂಟು ನಾಣ್ಯಗಳು ಚನ್ನಗಿರಿ ತಾಲೂಕಿನ ಕೆರೆಬಿಳಚಿಯಲ್ಲಿ ದೊರೆತಿದ್ದು, ಅವುಗಳ ಮೇಲ್ಮುಖದಲ್ಲಿ ಉಮಾ ಮಹೇಶ್ವರ, ನಂದಿ , ನಿಂತ ಗರುಡ, ಹಾರುತ್ತಿರುವ ಗರುಡ ಚಿತ್ರಗಳಿವೆ. ಹಿಮ್ಮುಖದಲ್ಲಿದ್ದ ಬರಹಗಳು ಕೆಲ ನಾಣ್ಯಗಳಲ್ಲಿ ನಶಿಸಿದ್ದು, ಒಂದು ನಾಣ್ಯದ ಹಿಂಭಾಗದಲ್ಲಿ ' ಶ್ರೀ....ಕ್ರಿಷ್ಣ....ರಾಯ ' ಎಂಬ ನಾಗರಿ ಲಿಪಿಯ ಅಕ್ಷರಗಳಿವೆ[೧೦೪]. ಅಲ್ಲದೇ ಈ ಜಿಲ್ಲೆಯ ನೀರ್ಥಡಿ , ಮಾಯಿಕೊಂಡ, ಕೊಣಚಗಲ್ಲು, ಕೊಡದಗುಡ್ಡ ಮೊದಲಾದೆಡೆ ಇವರ ಕಾಲದ ದೇವಾಲಯಗಳ ಕಂಡುಬಂದಿವೆ. ಇವುಗಳಿಂದ ವಿಜಯನಗರದ ಆಳ್ವಿಕೆಯು ಈಗಿನ ದಾವಣಗೆರೆ ಜಿಲ್ಲೆಯವರೆಗೂ ಅಂದು ವಿಸ್ತರಿಸಿತ್ತೆಂದು ಸ್ಪಷ್ಟವಾಗುತ್ತದೆ.

ವಿಜಯನಗರದ ಕಾಲದಲ್ಲಿ ಸ್ಥಳೀಯ ಸಂಸ್ಥೆಗಳು ಜೀವಂತವಾಗಿದ್ದವು. ' ಅಗ್ರಹಾರ ಮತ್ತು ಮಹಾನಾಡು ' ಎಂಬ ಸ್ಥಳೀಯ ಸಂಸ್ಥೆಗಳು ಈ ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿದ್ದವೆಂಬುದಕ್ಕೆ ಶಾಸನಗಳ ಆಧಾರವಿದೆ. ಅಗ್ರಹಾರದ ಜನರು ತಮ್ಮ ಸ್ಥಳೀಯ ಸಮಸ್ಯೆಗಳನ್ನು ತಾವೇ ಬಗೆಹರಿಸಿಕೊಳ್ಳುತ್ತಿದ್ದರು. ವ್ಯವಸಾಯದ ಅಭಿವೃದ್ಧಿಗೆ ಗಮನಕೊಡುತ್ತಿದ್ದರು. ಕೃಷಿ ಉತ್ಪನ್ನದ ಪಾಲಿನ ಭಾಗವನ್ನು ನಿರ್ಧರಿಸುತ್ತಿದ್ದರು. ಮಹಾನಾಡು ಅನೇಕ ಗ್ರಾಮಗಳನ್ನೊಳಗೊಂಡ ಸ್ಥಳೀಯ ಸಂಸ್ಥೆಗಳು ಈ ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿದ್ದವೆಂಬುದಕ್ಕೆ ಶಾಸನಗಳ ಆಧಾರವಿದೆ.

ಅಗ್ರಹಾರದ ಜನರು ತಮ್ಮ ಸ್ಥಳೀಯ ಸಮಸ್ಯೆಗಳನ್ನು ತಾವೇ ಬಗೆಹರಿಸಿಕೊಳ್ಳುತ್ತಿದ್ದರು. ವ್ಯವಸಾಯದ ಅಭಿವೃದ್ಧಿಗೆ ಗಮನಕೊಡುತ್ತಿದ್ದರು. ಕೃಷಿ ಉತ್ಪನ್ನದ ಪಾಲಿನ ಭಾಗವನ್ನು ತಾವೇ ನಿರ್ಧರಿಸುತ್ತಿದ್ದರು. ಮಹಾನಾಡು ಅನೇಕ ಗ್ರಾಮಗಳನ್ನೊಳಗೊಂಡ ಸ್ಥಳೀಯ ಸಂಸ್ಥೆಯಾಗಿತ್ತು.

ಈ ಜಿಲ್ಲೆಯಲ್ಲಿ ೧೫ನೆಯ ಶತಮಾನದ ಆರಂಭದಲ್ಲಿ ಪಾಳೆಗಾರರು ತಲೆ ಎತ್ತಿದ ಮೇಲೆ ವಿಜಯನಗರದ ಪರೋಕ್ಷ ಆಡಳಿತವು ಆರಂಭವಾಯಿತೆನ್ನಬಹುದು. ಅಂತಹ ಪಾಳೇಗಾರರಲ್ಲಿ ಚಿತ್ರದುರ್ಗ, ಹರತಿ, ರಾಯದುರ್ಗ, ಬೇಲೂರು, ಸಂತೇ, ಬೆನ್ನೂರು, ಹರಪನಹಳ್ಳಿ, ಬಸವಪಟ್ಟಣ ಇತ್ಯಾದಿ. ಇವುಗಳಲ್ಲಿ ಕೆಲವು ಪಾಳೇಗಾರರು ಜಿಲ್ಲೆಯ ಹೊರಗಿದ್ದರು. ವಿಜಯನಗರದ ಅರಸರೇ ಇಂತಹ ಪಾಳೆಯಗಾರರನ್ನು ಸೃಷ್ಟಿಸಿದರು. ಈ ಪಾಳೇಗಾರಿಕೆಯನ್ನು ಅಮರ ನಾಯಕರಿಗೆ ಕೊಡಲಾಗಿದ್ದಿತು. ಇದಕ್ಕೆ ಬದಲಾಗಿ ಅಮರ ನಾಯಕರು ವಿಜಯನಗರ ಸಾಮ್ರಾಜ್ಯಕ್ಕೆ ಸೈನಿಕ ಸೇವೆ ಸಲ್ಲಿಸಬೇಕಾಗಿದ್ದಿತು. ದಂಡೆಯಾತ್ರೆಯ ಸಮಯದಲ್ಲಿ ವಿಜಯನಗರ ರಾಜನಿಗೆ ನೆರವು ನೀಡಬೇಕಾಗಿದ್ದಿತು. ಸಾಮಂತರ ಮೂಲ ಸಾಮ್ರಾಜ್ಯದ ಇಂತಹ ಆಡಳಿತ ಪದ್ಧತಿಗೆ ನಾಯಕರ ಪದ್ಧತಿ ಎಂದು ಹೆಸರಾಯಿತು. ಅದರ ಪ್ರಕಾರ ಸಾಮ್ರಾಟನು ಭೂಮಿಗೆಲ್ಲಾ ಒಡೆಯ. ವಿಜಯನಗರ ಸಾಮ್ರಾಜ್ಯವು ಅಚ್ಯುತರಾಯನ ಕಾಲದಲ್ಲಿ ಎರಡು ನೂರಕ್ಕಿಂತ ಹೆಚ್ಚು ನಾಯಕರಿಗೆ ಭಾಗಮಾಡಲ್ಪಟ್ಟಿದ್ದಿತೆಂದು ತಿಳಿಯುವುದು. ಅಲ್ಲದೆ ಭೂಮಿಯೆಲ್ಲಾ ರಾಜನಿಗೆ ಸೇರಿದ್ದಿತ್ತೆಂದು ಮತ್ತು ರಾಜನಿಂದ ನಾಯಕರು ಭೂಮಿಯನ್ನು ಪಡೆಯುತ್ತಿದ್ದರೆಂದೂ ತಿಳಿಯುತ್ತದೆ.

ಹೀಗೆ ಈ ಜಿಲ್ಲೆಯೂ ವಿಜಯನಗರ ಕಾಲದಲ್ಲಿ ಆ ಸಾಮ್ರಾಜ್ಯದ ಒಂದು ಭಾಗವಾಗಿದ್ದು, ಅದರ ಆಸೆ, ಆಕಾಂಕ್ಷೆಗಳನ್ನು ಪೂರೈಸುವ ಬಹುಮುಖ್ಯವಾದ ಘಟಕವಾಗಿತ್ತು. ವಿಜಯನಗರ ಅರಸರು ಪರಂಪರೆಯಿಂದ ಬಂದಿದ್ದ ಆಡಳಿತದ ಸಂಪ್ರದಾಯಕ್ಕೆ ತಮ್ಮದೇ ಆದ ಮೆರುಗನ್ನು ಕೊಟ್ಟರು. ಪ್ರಜಾ ಕ್ಷೇಮ ಮತ್ತು ಹಿಂದೂ ಧರ್ಮದ ರಕ್ಷಣೆ ವಿಜಯನಗರ ಆಡಳಿತದ ಪ್ರಮುಖ ಧ್ಯೇಯಗಳಾಗಿದ್ದು, ಅವು ಈ ಜಿಲ್ಲೆಯಲ್ಲೂ ಅನುಷ್ಠಾನಕ್ಕೆ ಬಂದುವು. ಚಿತ್ರದುರ್ಗದ ಪಾಳೆಗಾರರಂತೆ ಇತರೆ ಪಾಳೇಗಾರರು ಸಹ ವಿಜಯನಗರ ಸಾಮ್ರಾಜ್ಯದ ಶಕ್ತಿಗೆ ಬೆಂಬಲವಾಗಿ ನಿಂತಿದ್ದರು. ಅವರ ಪರಂಪರೆಯಲ್ಲೇ ಸಾಗಿ ವಿಜಯನಗರ ಪ್ರಬಲವಾಗಿರುವಷ್ಟು ಕಾಲ ಅವರ ಸಾರ್ವಭೌಮಾಧಿಕಾರಕ್ಕೆ ಈ ಜಿಲ್ಲೆಯ ನಾಯಕರು ತಲೆಬಾಗಿ ನಡೆದರು. ೧೫೬೫ರಲ್ಲಿ ಅದು ನಾಶವಾದಾಗ ಅವರೆಲ್ಲಾ ಸ್ವತಂತ್ರ ನಾಯಕರಾಗಿ ತಮ್ಮ ಹಿತವನ್ನು ಕಾಪಾಡಿಕೊಳ್ಳಲು ಮುಂದಾದರು.

:: ಅಡಿ ಟಿಪ್ಪಣಿಗಳು ::

೧. ಡಾ: ಪಪ್ಪು. ಆರ್. ಎಸ್., ' ಪ್ರಾಚೀನತಮ ಮಾನವ ಸಂಸ್ಕೃತಿಗಳು, ವಿಕಸನದ ಹಂತಗಳು ', **ಕರ್ನಾಟಕ ಚರಿತ್ರೆ**, ಸಂಪುಟ೧, ೧೯೯೭, ಪು.೫೫

೨. - ಅದೇ -

೩. - ಅದೇ -

೪. ಶೇಷಾದ್ರಿ, ಎಂ. **ದಿ ಸ್ಟೋನ್ ಯೂಸಿಂಗ್ ಕಲ್ಚರ್ಸ್ ಆಫ್ ಪ್ರೀ ಹಿಸ್ಟಾರಿಕ್ ಆಂಡ್ ಪ್ರೋಟೋ ಹಿಸ್ಟಾರಿಕ್**, ಮೈಸೂರು - ೧೯೫೬ , ಪು. ೨೧

೫. ನಾಗರಾಜರಾವ್, ಎಂ. ಎಸ್. **ಪ್ರೋಟೋ ಹಿಸ್ಟಾರಿಕ್ ಕಲ್ಚರ್ ಆಫ್ ದಿ ತುಂಗಭದ್ರಾ ವ್ಯಾಲಿ** ೧೯೭೧ , ಪು.ಪು. ೧೪-೧೫

೬. ಅನ್ಸಾರಿ ಝುಡ್, ಎ. ' ಪೆಬಲ್ ಟೂಲ್ಸ್ ಫ್ರಂ ನಿಟ್ಟೂರ್ '(ಮೈಸೂರ್ ಸ್ಟೇಟ್) **ಇಂಡಿಯನ್ ಆಂಟಿಕ್ವೇರಿ ,** (ಹೊಸ ಮಾಲಿಕೆ) ಸಂ. ೪- ೧೯೭೪, ಪು. ೧-೭

೭. ಸಂಕಾಲಿಯಾ,ಎಚ್.ಡಿ.,**ಮೆಸೋಲಿಥಿಕ್ ಆ್ಯಂಡ್ ಪ್ರೀ ಮೆಸೋಲಿಥಿಕ್ ಕಲ್ಚರ್ಸ್ ಇನ್ ಸಂಗನಕಲ್**, ೧೯೭೯, ಪು. ೧೬

೮. ಕೊಟ್ರೇಶ್. ಎಂ. **ಉಚ್ಚಂಗಿದುರ್ಗ** (ಐತಿಹಾಸಿಕ ಹಾಗು ಸಾಂಸ್ಕೃತಿ ಅಧ್ಯಯನ) ಅಪ್ರಕಟಿತ ಎಂ.ಫಿಲ್. ಪ್ರಬಂಧ

೯. ಜೈದೇವಪ್ಪ, ಜೈನಕೇರಿ '' ಶಿವಮೊಗ್ಗ ಪರಿಸರದಲ್ಲಿಯ ಬೃಹತ್ ಶಿಲಾ ಸಂಸ್ಕೃತಿಯ ಗೀರು ಬಂಡೆ ಚಿತ್ರಗಳು ಒಂದು ಹೊಸ ಶೋಧನೆ '' **ಇತಿಹಾಸ ದರ್ಶನ** ಸಂ.೧೪ ೧೯೯೯, ಪು. ೮ .

೧೦. **ಕನ್ನಡ ಪ್ರಭ** ದಿನಪತ್ರಿಕ ದಿನಾಂಕ: ೦೫-೦೪-೧೯೯೭

೧೧. ಶೇಷಾದ್ರಿ, ಎಂ. ಪೂರ್ವೋಕ್ತ, ೧೯೫೬.

೧೨. **ಏಪಿಗ್ರಾಫಿಯಾ ಕರ್ನಾಟಿಕಾ** ,ಸಂ. ೭, ಶಿಕಾರಪುರ ಶಾ.ಸಂ. ೨೨೫

೧೩. ಡಾ: ಶ್ರೀನಿವಾಸ್ ಎಂ.ವಿ. ' ಚಿತ್ರದುರ್ಗ ಜಿಲ್ಲೆಯಲ್ಲಿ ಮೌರ್ಯರ ಆಳ್ವಿಕೆ ', **ಚಂದ್ರವಳ್ಳಿ**, ೧೯೭೬, ಪು.೨.

೧೪. ಸತ್ಯನ, ಬಿ. ಎನ್.(ಸಂ)., **ಚಿತ್ರದುರ್ಗ ಡಿಸ್ಟ್ರಿಕ್ ಗ್ಯಾಜಿಟಿಯರ್** ,೧೯೭೫, ಪು. ೨೨

೧೫. ನೋಡಿ. ಗಿರೀಜ, ಟಿ. **ಚಿತ್ರದುರ್ಗ ಜಿಲ್ಲಾ ದರ್ಶಿನಿ,** ೧೯೯೧, ಪು. ೨೮೭

೧೬. **ಕರ್ನಾಟಕ ಪರಂಪರೆ** ಭಾಗ-೧, (ಚಾರಿತ್ರಿಕ ಯುಗ), ಪು. ೧೧೭

೧೭. ಪಿಳ್ಳೆ, ಕೆ.ಕೆ. ದಕ್ಷಿಣ ಭಾರತದ ಇತಿಹಾಸ, ಪು. ೪೭

೧೮. ನೋಡಿ. ಗಿರೀಜ, ಟಿ. ಪೂರ್ವೋಕ್ತ, ಪು. ೫೬೨, ೫೭೨, ೫೭೩.

೧೯. ಲಕ್ಷ್ಮಣ್ ತೆಲಗಾವಿಯವರ ಚಿಪ್ಪನಕೆರೆಯಲ್ಲಿ ಮರು ಶೋಧನೆ ಕೈಗೊಂಡು ಆ ರೀತಿ ಅಭಿಪ್ರಾಯಪಟ್ಟಿದ್ದಾರೆ.

೨೦. ಸೋಮಶೇಖರ್, ಎಸ್. ವೈ. 'ಆಕನೂರು ಗ್ರಾಮದ ಬಳಿ ಆದಿ ಇತಿಹಾಸ ಕುರುಹುಗಳು'. '**ಇತಿಹಾಸ ದರ್ಶನ**' ನಾಗರಾಜ ಎಂ.ಜಿ., ಪಿ.ವಿ. ಕೃಷ್ಣಮೂರ್ತಿ (ಸಂಪಾದಕರು) ೧೯೯೭, ಸಂ.-೧೨, ಪು. ೧೨-೧೩

೨೧. ರಘುನಾಥ್‌ಭಟ್ ಎಚ್. ಆರ್. ' ಚಿತ್ರದುರ್ಗ ಜಿಲ್ಲೆಯಲ್ಲಿ ಶಾತವಾಹನರ ಆಳ್ವಿಕೆ ' **ಚಂದ್ರವಳ್ಳಿ**, ಶ್ರೀನಿವಾಸ್, ಎಂ. ಲಕ್ಷ್ಮಣ್ ತೆಲಗಾವಿ (ಸಂಪಾಕರು) , ೧೯೭೬, ಪು. ೧೦

೨೨. ಎಂ. ಎ. ಆರ್. , ೧೯೨೯, ಪು. ೫೦

೨೩. **ಎಪಿಗ್ರಾಫಿಯಾ ಕರ್ನಾಟಿಕಾ** ಸಂ. ೬, ಶಾ.ಸಂ. :

೨೪. ಗಿರೀಜ, ಟಿ. **ಚಿತ್ರದುರ್ಗ ಜಿಲ್ಲಾ ದರ್ಶಿನಿ,** ೧೯೯೧, ಪು. ೭೫

೨೫. ಉಷಾ, ಎಂ. ಎಚ್. , ' ಚಿತ್ರದುರ್ಗ ಜಿಲ್ಲೆಯಲ್ಲಿ ಕದಂಬರ ಆಳ್ವಿಕೆ ' , ಶ್ರೀನಿವಾಸ ಮತ್ತು ಲಕ್ಷಣ್ ತೆಲಗಾವಿ, **ಚಂದ್ರವಳ್ಳಿ**, ೧೯೭೬, ಪು. ೧೫.

೨೬. ಶಂಕರ ನಾರಾಯಣರಾವ್, **ಶ್ರೀ ಹರಿಹರ ದೇವಾಲಯ**, ೧೯೮೨, ಪು. ೧೯

೨೭. ದಿವಾಕರ್, ಆರ್. ಆರ್. **ಕರ್ನಾಟಕ ಥ್ರೂ ದ ಏಥ್ರೂಜೆಸ್**, ಪು. ೧೯೮.

೨೮. ಅದೇ

೨೯. ಷೇಕ್ ಆಲಿ, ರಿ, ಅ . ಸುಂದರ (ಸಂ), **ಕರ್ನಾಟಕ ಚರಿತ್ರೆ**, ಸಂ.-೧, ೧೯೯೭, ಪು. ೪೩೭.

೩೦. ಅದೇ , ಪು. ೪೪೪

೩೧. **ಎಪಿಗ್ರಾಫಿಯಾ ಕರ್ನಾಟಿಕಾ**, ಸಂ. ೧೧, ಶಾ.ಸಂ. ೬೬

೩೨. ಅದೇ ಸಂ. ೭, ಭಾಗ ೧, ಶಾ.ಸಂ.-೧೮

೩೩. ಬಿ. ಸುರೇಂದ್ರರಾವ್, 'ರಾಷ್ಟ್ರಕೂಟರ ರಾಜಕೀಯ ಚರಿತ್ರೆ', ಷೇಕ್ ಆಲಿ ಮತ್ತು ಸುಂದರ, ಅ(ಸಂ) **ಕರ್ನಾಟಕ ಚರಿತ್ರೆ** , ಸಂ.- ೨, ೧೯೯೭, ಪು. ೩೫.

೩೪. **ಏಪಿಗ್ರಾಫಿಯಾ ಕರ್ನಾಟಿಕ**, ಸಂ.-೭, ಹೊನ್ನಾಳಿ ಶಾ.ಸಂ. ೧೩

೩೫. ಅದೇ ಶಾ.ಸಂ. ೨೧-೨೩

೩೬. ಅದೇ - ೧೧, ಶಾ. ಸಂ. ೬೮

೩೭. ರಮೇಶ್ , ಕೆ.ವಿ. ಪೂರ್ವೋಕ್ತ, ೧೯೯೨, ಸಂ.-೧೭, ಪು. ೩೯-೫೧.

೩೮. **ಏಪಿಗ್ರಾಫಿಯಾ ಕರ್ನಾಟಿಕ,** ಸಂ. ೧೧, ದಾವಣಗೆರೆ ಶಾ.ಸಂ. ೨೩

೩೯. **ಕರ್ನಾಟಕ ಚರಿತ್ರೆ** ಸಂ.-೩, ೧೯೯೭, ಪು. ೫೫-೫೬

೪೦. **ಏಪಿಗ್ರಾಫಿಯಾ ಕರ್ನಾಟಿಕ**, ೭, ಹೊನ್ನಾಳಿ, ಸಂ. ೧, ಶಾ.ಸಂ. ೧೦೭-೧೧೯.

೪೧. **ಏಪಿಗ್ರಾಫಿಯಾ ಕರ್ನಾಟಿಕ,** ೧೧, ದಾವಣಗೆರೆ, ಶಾ.ಸಂ. ೧೨೪.

೪೨. **ಏಪಿಗ್ರಾಫಿಯಾ ಕರ್ನಾಟಿಕ,** ೧೧, ಶಾ.ಸಂ. ೧೬೮

೪೪. ವಾಸುದೇವ ಬಡಿಗೇರ, 'ಬಳ್ಳಾರಿ-ಕೊಪ್ಪಳ ಜಿಲ್ಲಾಗಳ ಕೆಲವು ಪುರಾತತ್ವ ಅವಶೇಷಗಳು' ಎಂ.ಜಿ.ನಾಗರಾಜ್, ಪಿ.ವಿ. ಕೃಷ್ಣಮೂರ್ತಿ.**ಇತಿಹಾಸ ದರ್ಶನ** ಸಂ. ೧೩, ೧೯೯೮, ಪು. ೧೮

೪೫. **ಏಪಿಗ್ರಾಫಿಯಾ ಕರ್ನಾಟಿಕ,** ೧೧, ಹೊಳಲಕೆರೆ, ಶಾ. ಸಂ. ೨೩.

೪೬. ಗೋಪಾಲ, ಬಾ.ರಾ. , 'ಬೆಳಗುತ್ತಿ ಸಿಂದರು', **ಉಪಾನಯ**, ಪು. ೮೭-೭೩

೪೭. ಅದೇ

೪೮. ಗೋಪಾಲ, ಬಾ.ರಾ. **ಮೈನರ್ ಡೈನಾಸ್ಟಿಕ್ಸ್ ಇನ್ ಕರ್ನಾಟಕ,**೧೯೮೧, ಪು. ೯೭.

೪೯. ಕ. ಇ., vi, ೪, ೯೨೪, ಡಿಸೆಂಬರ್ ೨೦

೫೦. ಕ. ಇ. vi , II

೫೧. ಗೋಪಾಲ, ಬಾ.ರಾ. ಪೂರ್ವೋಕ್ತ, ೧೯೮೧, ಪು. ೯೭-೯೮.

೫೨. **ಎಪಿಗ್ರಾಫಿಯಾ ಕರ್ನಾಟಿಕ,** ಸಂ. ೧೧, ಹೊಳಲಕೆರೆ, ಶಾ.ಸಂ. ೪೧.

೫೩. ಅದೇ ದಾವಣಗೆರೆ , ಶಾ. ಸಂ. ೪೩

೫೪. ಅದೇ ಹೊಳಲಕೆರೆ, ಶಾ.ಸಂ. ೪೫

೫೫. ಅದೇ ಸಂ. ೭, ಶಿಕಾರಿಪುರ, ಶಾ.ಸಂ. ೩೧೫

೫೬. **ಕರ್ನಾಟಕ ಇತಿಹಾಸ ದರ್ಶನ,** ಅಧೀನ ರಾಜಕುಲಗಳು, ಪು. ೨೧೩.

೫೭. ಅದೇ

೫೮. ಚಟ್ನಿಹಳ್ಳಿಯ ಶಾಸನದಲ್ಲಿದೆ (ಅಪ್ರಕಟಿತ)

೫೯. **ಸೌಥ್ ಇಂಡಿಯನ್ ಇನ್ಸ್‌ಕ್ರಿಪ್‌ಷನ್**, ಸಂ. ೬, ಸಂ. ೫೭೨

೬೦. **ಚಿತ್ರದುರ್ಗ ಜಿಲ್ಲಾ ಗೆಜೆಟಿಯರ್** (ವಿಜಯ ಪಾಂಡ್ಯ), ಪು. ೪೧

೬೧. **ಏಪಿಗ್ರಾಫಿಯಾ ಕರ್ನಾಟಿಕ** , ಸಂ. ೨, ಚನ್ನಗಿರಿ, ಶಾ.ಸಂ. ೬೧

೬೨. ಉಚ್ಚಂಗಿದುರ್ಗದ ಹಾಲಮ್ಮಗುಡಿಯ ಮುಂದಿನ ಶಾಸನ.

೬೩. **ಸೌಥ್ ಇಂಡಿಯನ್ ಇನ್ಸ್‌ಕ್ರಿಪ್‌ಷನ್** , ಸಂ. ೯, ಭಾಗ ೩, ಶಾ.ಸಂ. ೨೦೬

೬೪. ಚಟ್ನಿಹಳ್ಳಿಯ ಶಾಸನದಲ್ಲಿದೆ (ಅಪ್ರಕಟಿತ)

೬೫. **ಸೌಥ್ ಇಂಡಿಯನ್ ಇನ್ಸ್‌ಕ್ರಿಪ್‌ಷನ್**, ಸಂ. ೬, ಶಾ. ಸಂ. ೫೭೨

೬೬. **ಎಪಿಗ್ರಾಫಿಯಾ ಕರ್ನಾಟಿಕ** , ಸಂ. ೨, ಚನ್ನಗಿರಿ ಶಾ.ಸಂ. ೩೮-೩೯

೬೭. **ಚಿತ್ರದುರ್ಗ ಜಿಲ್ಲಾ ಗೆಜೆಟಿಯರ್** (ವಿಜಯ ಪಾಂಡ್ಯ) ಪು. ೪೧
೬೮. **ಎಪಿಗ್ರಾಫಿಯಾ ಕರ್ನಾಟಿಕಾ**, ಸಂ. ೧೧, ದಾವಣಗೆರೆ, ಶಾ.ಸಂ. ೧೬೧
೬೯. ಅದೇ, ಚಳ್ಳಕೆರೆ, ಶಾ.ಸಂ. ೩೩-೩೪
೭೦. ಅದೇ, ಜಗಲೂರು ಶಾ.ಸಂ. ೨೯
೭೧. ಅದೇ, ದಾವಣಗೆರೆ, ಶಾ.ಸಂ. ೭೧
೭೨. ಅದೇ, ದಾವಣಗೆರೆ, ಶಾ.ಸಂ. ೧೨೬ ಮತ್ತು ೧೯
೭೩. ಅದೇ, ಸಂ. ೭, ಚನ್ನಗಿರಿ, ಶಾ.ಸಂ. ೮,೯
೭೪. ಅದೇ, ಹೊನ್ನಾಳಿ, ಶಾ.ಸಂ. ೧೧೯
೭೫. ಅದೇ, ಸಂ. ೧೧, ಶಾ.ಸಂ.೧೨೪ ಮತ್ತು ೩೦
೭೬. ಅದೇ, ಜಗಳೂರು, ಶಾ.ಸಂ. ೧೦
೭೭. ನರಸಿಂಹಮೂರ್ತಿ, ಎ.ವಿ. **ಸೇವುಣರ ಇತಿಹಾಸ**, ಪು. ೬-೭
೭೮. **ಕರ್ನಾಟಕ ಚರಿತ್ರೆ** ಸಂ. ೩, ೧೯೯೭, ಪು.
೭೯. **ಎಪಿಗ್ರಾಫಿಯಾ ಕರ್ನಾಟಿಕಾ**, ಸಂ. ೨, ಶಾ.ಸಂ. ೪೩
೮೦. **ಎಪಿಗ್ರಾಫಿಯಾ ಕರ್ನಾಟಿಕಾ**, ಚನ್ನಗಿರಿ, ಶಾ.ಸಂ.. ೨೧
೮೧. ಶಂಕರ ನಾರಾಯಣರಾವ್, **ಹರಿಹರ ದೇವಾಲಯ**, ೧೯೮೨, ಪು. ೮೯
೮೨. ಅದೇ, ಪು. ೯೧
೮೩. **ಎಪಿಗ್ರಾಫಿಯಾ ಕರ್ನಾಟಿಕಾ**, ಸಂ. ೭, ಹೊನ್ನಾಳಿ ೭ , ಶಾ.ಸಂ. ೪೫
೮೪. **ಎಪಿಗ್ರಾಫಿಯಾ ಕರ್ನಾಟಿಕಾ**, ಸಂ. ೧೧, ದಾವಣಗೆರೆ, ಶಾ.ಸಂ. ೧೦೫
೮೫. **ಎಪಿಗ್ರಾಫಿಯಾ ಕರ್ನಾಟಿಕಾ**, ಸಂ. ೭, ಚನ್ನಗಿರಿ, ಶಾ.ಸಂ. ೭೨
೮೬. **ಎಪಿಗ್ರಾಫಿಯಾ ಕರ್ನಾಟಿಕಾ**, ಸಂ. ೧೧, ದಾವಣಗೆರೆ, ಶಾ.ಸಂ.೨೫
೮೭. ಅದೇ, ಜಗಲೂರು, ಶಾ.ಸಂ. ೩೩
೮೮. ಅದೇ, ದಾವಣಗೆರೆ , ಶಾ.ಸಂ. ೧೨೯
೮೯. ಅದೇ, ದಾವಣಗೆರೆ, ಶಾ.ಸಂ. ೨೮
೯೦. **ಎಪಿಗ್ರಾಫಿಯಾ ಕರ್ನಾಟಿಕಾ**, ಸಂ. ೧೧, ದಾವಣಗೆರೆ, ಶಾ.ಸಂ. ೪೨
೯೧. ಬಾಲಸುಬ್ರಮಣ್ಯ (ಅನು.) **ಮರೆಯಲಾಗದ ಮಹಾ ಸಾಮ್ರಾಜ್ಯ**, ೧೯೯೯, ಪು.೧
೯೨. **ಎಪಿಗ್ರಾಫಿಯಾ ಕರ್ನಾಟಿಕಾ**, ಸಂ. ಇ.ಸಿ. ೧೧, ಚಿತ್ರದುರ್ಗ, ಶಾ.ಸಂ. ೪೩
೯೩. **ಎಪಿಗ್ರಾಫಿಯಾ ಕರ್ನಾಟಿಕಾ**, ಸಂ. ೭, ಹೊನ್ನಾಳಿ, ಶಾ.ಸಂ. ೪೮
೯೪. - ಅದೇ -

೯೬. **ಎಪಿಗ್ರಾಫಿಯಾ ಕರ್ನಾಟಿಕಾ**, ಸಂ. ೧೧, ಶಾ.ಸಂ. ೬೮

೯೭. ರಮೇಶ್, ಕೆ.ವಿ. ಪೂರ್ವೋಕ್ತ,೧೯೯೨, ಪು. ೩೯-೫೧.

೯೮. **ಎಪಿಗ್ರಾಫಿಯಾ ಕರ್ನಾಟಿಕಾ**, ಸಂ. ೧೧, ದಾವಣಗೆರೆ, ಶಾ.ಸಂ.೨೯

೯೯. ಅದೇ, ಹೊಳಲ್ಕೆರೆ, ಶಾ.ಸಂ. ೩

೧೦೦. ಅದೇ, ಸಂ. ೭, ಚನ್ನಗಿರಿ ೭೬, ಹೊನ್ನಾಳಿ, ಶಾ.ಸಂ. ೯

೧೦೧. ಕುಂಬಾಸ್ **ಬಳ್ಳಾರಿ ಜಿಲ್ಲಾ ಸಂಸ್ಕೃತಿಕ ದರ್ಶನ** ೧೯೯೪, ಪು. ೧೨೯

೧೦೨. **ಎಪಿಗ್ರಾಫಿಯಾ ಕರ್ನಾಟಿಕಾ**, ಸಂ. ೭, ಹೊನ್ನಾಳಿ, ಶಾ.ಸಂ. ೯.

೧೦೩. ಗಿರೀಜ, ಟಿ. ಪೂರ್ವೋಕ್ತ, ೧೯೯೧, ಪು. ೩೧೯.

೧೦೪. ಎಂ. ಎ. ಆರ್. ೧೯೩೭, ಪು. ೫೯

೪. ವಾಸ್ತುಕಲೆ :-

' ವಾಸ್ತು ರಚನೆಯೊಂದು ಒಳಗೊಂಡಿರುವ ವಿವಿಧ ವಾಸ್ತು ಭಾಗಗಳು ಹಾಗು ಅವುಗಳ ಮೇಲಿನ ಅಲಂಕರಣೆ ಮತ್ತು ಶಿಲ್ಪಗಳನ್ನು ಸ್ಥೂಲವಾಗಿ ವಾಸ್ತುಕಲೆ ಎಂದು ಕರೆಯಬಹುದು '. ಭಾರತೀಯ ವಾಸ್ತುಕಲೆಯು ಇತರ ಕಲೆಗಳಂತೆಯೇ ಆಯಾಕಾಲದ ಮತ್ತು ಆಯಾ ಜನಾಂಗದ ಆಂತರಿಕ ಆಕಾಂಕ್ಷೆ ಅನುಭವಗಳಿಗೆ ಕನ್ನಡಿಯನ್ನು ಹಿಡಿಯಬಲ್ಲದು[೧]. ವಾಸ್ತುಕಲೆಯು ನಾಗರೀಕತೆಯನ್ನು ರೂಪಿಸುವ ಮಾತೃಕೆ[೨]. ನಾಗರಿಕತೆಯ ಶಿಶುವನ್ನು ತನ್ನ ಗರ್ಭದಲ್ಲಿಟ್ಟುಕೊಂಡು ಇದು ಬೆಳೆಸುತ್ತದೆ. ಮಾನವ ಜನಾಂಗದ ವಿಕಾಸವನ್ನು ಗುರುತಿಸುವ ವಿವಿಧ ಹಂತಗಳನ್ನು ವಾಸ್ತುಕಲೆಯ ಬೆಳವಣಿಗೆಯಲ್ಲಿ ನಾವು ಕಂಡುಕೊಳ್ಳಬಹುದು.

ವಾಸ್ತುವೆಂದರೆ ವಿಶಾಲಾರ್ಥದಲ್ಲಿ ಮರ, ಕಲ್ಲು ಅಥವ ಮಣ್ಣು ಇತ್ಯಾದಿಗಳೆಲ್ಲವೂ ಆಗಬಹುದು. ಮಯಮತ ಗ್ರಂಥವು ವಾಸ್ತು ಶಬ್ದವನ್ನು ಎರಡು ಹಂತಗಳಲ್ಲಿ ವಿವರಿಸಿದೆ[೩]. ಮರ್ತ್ಯರು ಮತ್ತು ಅಮರ್ತ್ಯರು ವಾಸಿಸುವ ಸ್ಥಳಕ್ಕೆ ವಸ್ತು ಎಂದು ಹೆಸರು. ವಸ್ತುವನ್ನು ಆಶ್ರಯಿಸಿದ್ದು ವಾಸ್ತು ಎಂದು ಗುರುತಿಸಲ್ಪಡುತ್ತದೆ.

ಅವಾಸ ವಾಸ ವೇಶ್ವಾದೌಪುರೇ ಗ್ರಾಮೇವಣಿಕ್ಷಥೇ
ಪ್ರಸಾದಾರಾಮ ದುರ್ಗೇಷು ದೇವಾಲಯ ಮಠೇಷು ಚ.

ಗರುಡ ಪುರಾಣದ ಈ ಶ್ಲೋಕವು ಗ್ರಾಮಗಳು ನಗರಗಳು, ಕೋಟೆಗಳು, ಪಟ್ಟಣಗಳು, ಮಠಗಳು, ಸಹ ವಾಸ್ತುಗಳೆಂದು ಹೇಳುತ್ತದೆ[೪]. ಆಲಯಗಳನ್ನು ಕಟ್ಟಲು ಬಳಸಿದ ಇಟ್ಟಿಗೆ, ಕಲ್ಲು, ಮರ ಹಾಗು ಕಬ್ಬಿಣಗಳನ್ನು ಸಹ ವಿಶ್ವಕರ್ಮನ ವಾಸ್ತುಶಾಸ್ತ್ರದಲ್ಲಿ ವಾಸ್ತುಗಳೆಂದೇ ಕರೆದಿದೆ[೫]. ಪ್ರಾಸಾದ, ಹರ್ಮ್ಯ, ಸೌಧ ಇತ್ಯಾದಿಗಳು ವಸ್ತುವನ್ನು ಆಶ್ರಯಿಸಿದ್ದರಿಂದ, 'ವಾಸ್ತು' ಎಂದೆನಿಸುತ್ತವೆ. ಆದ್ದರಿಂದ ' ವಾಸ್ತು ' ಎಂದಲ್ಲಿ ವಸತಿಯೋಗ್ಯ ಭೂಮಿ ಮತ್ತು ಆ ಭೂಮಿಯ ಮೇಲೆ ನಿಂತ ಕಟ್ಟಡ ಎರಡನ್ನೂ ಒಳಗೊಳ್ಳುತ್ತದೆ.

ದೇವಾಲಯ, ಅರಮನೆ ಅಥವಾ ರಾಜಗೃಹ ರಚನೆ, ದೇವತಾ ಮೂರ್ತಿಗಳ ರಚನೆ, ಸರ್ವಜನೋಪಯೋಗಿ ಗೃಹಗಳು, ಬಾವಿ, ಪುಷ್ಕರಿಣಿ ಮುಂತಾದವುಗಳನ್ನು ಶುಕ್ರನೀತಿ ಗ್ರಂಥವು ಶಿಲ್ಪಶಾಸ್ತ್ರದಡಿಯಲ್ಲಿ ಗುರುತಿಸುತ್ತದೆ[೬].

[illegible]

[illegible]

[illegible]

[illegible]

[illegible]

[illegible]

ವಾಸ್ತುಶಾಸ್ತ್ರಕ್ಕೆ ಸಂಬಂಧಿಸಿದ ಶಬ್ದಕೋಶದ ಮುನ್ನುಡಿಯಲ್ಲಿ ವಿದ್ವಾಂಸ ಪಿ.ಕೆ. ಆಚಾರ್ಯರವರು ವಾಸ್ತುಶಾಸ್ತ್ರ ಮತ್ತು ಶಿಲ್ಪಶಾಸ್ತ್ರ ಪದಗಳನ್ನು ಪರ್ಯಾಯ ಪದಗಳೆಂಬಂತೆ ಬಳಸಿದ್ದಾರೆ. ಭಾರತೀಯ ವಾಸ್ತು, ಮೂರ್ತಿ, ಚಿತ್ರಕಲೆಗಳ ಅಧ್ಯಯನಕ್ಕೆ ಸಂಬಂಧಿಸಿದ ಪ್ರಾಚೀನ ಗ್ರಂಥಗಳನ್ನು ಶಿಲ್ಪಶಾಸ್ತ್ರಗಳೆಂದೇ ಗುರುತಿಸುವುದುಂಟು. ಕೆಲವೊಮ್ಮೆ ಶಿಲ್ಪಶಾಸ್ತ್ರವೆಂದಲ್ಲಿ ಮೂರ್ತಿ ಅಥವಾ ಪ್ರತಿಮಾ ರಚನೆ, ಅವುಗಳ ಲಕ್ಷಣಗಳು, ತಾಳಮಾನ ಇತ್ಯಾದಿಗಳನ್ನು ಹೆಸರಿಸುವುದುಂಟು. ಪ್ರೊ.ಫಣೀಂದ್ರನಾಥ ಬೋಸ್‌ರವರು 'ಭಾರತೀಯ ಶಿಲ್ಪಶಾಸ್ತ್ರದ ಮೂಲತತ್ವಗಳನ್ನು ಗುರುತಿಸುವಾಗ ಶಿಲ್ಪಶಾಸ್ತ್ರವೆಂಬ ಪದವನ್ನು ವಾಸ್ತು ಹಾಗು ಪ್ರತಿಮಾ ಶಾಸ್ತ್ರ ಎರಡನ್ನೂ ಒಳಗೊಂಡಂತೆ ವಿವರಿಸಿದ್ದಾರೆ[೭].

' ಶಿಲ್ಪ ' ಎನ್ನುವ ಪದವು ಮೂರ್ತಿ ಶಿಲ್ಪವೆಂಬ ಅರ್ಥದಲ್ಲಿ ರೂಢಿಗತವಾಗಿದ್ದರೂ, ಅದಕ್ಕೆ ತನ್ನದೇ ಆದ ಖಚಿತಾರ್ಥವಿದೆ. '' ಶಿಲ್ಪಂ ಕರ್ಮ ಕಲಾಧಿಕಂ ''[೮] ಇದು ಅಮರಸಿಂಹನ ಅಮರಕೋಶದ ವಿವರಣೆ. ಕರ್ತೃವಿನ ಅಧಿಕ ಕೌಶಲ್ಯಗಳನ್ನೊಳಗೊಂಡ ಕರ್ಮ ಅಥವಾ ಕ್ರಿಯೆಗೆ ಶಿಲ್ಪವೆಂದು ಹೆಸರು. ಇದು ತಾಂತ್ರಿಕ ಪರಿಣತಿಯನ್ನು ಅಪೇಕ್ಷಿಸುತ್ತದೆ.

''ಶಿಲ್ಪ ಶಬ್ದಸ್ತಯ ಪುನಃ ಶೀಲ ಸಮಾಧೌ ಇತಿಧಾತೋರ್ಮನಸಃ ಸಮಾಧಾನಕಾರಕಂ ವಸ್ತು ಜಾತಮಿತಿ ಉತ್ಪದ್ಯತೇ ''. ಶಿಲ್ಪ ಶಬ್ದವು ಮನಸ್ಸಿಗೆ ಸಮಾಧಾನವನ್ನು ಉಂಟು ಮಾಡುವ ಕ್ರಿಯೆಯಾಗಿದ್ದು, ಕಲೆಯ ದೃಷ್ಟಿಯನ್ನು ಪ್ರತಿಬಿಂಬಿಸುತ್ತದೆ. ಈಗ ವಾಸ್ತುಶಾಸ್ತ್ರ ಮತ್ತು ವಾಸ್ತು ಶಿಲ್ಪ ಪದಗಳನ್ನು ಸುಲಭವಾಗಿ ಅರ್ಥೈಸಿಕೊಳ್ಳಬಹುದು. ವಾಸ್ತುವಿಗೆ ಸಂಬಂದಿಸಿದ ಮೂಲ ಸಿದ್ಧಾಂತಗಳನ್ನು ಗುರುತಿಸುವುದೇ ವಾಸ್ತು ಶಾಸ್ತ್ರ.ವಾಸ್ತುಶಿಲ್ಪವೆಂದಲ್ಲಿ ತಾಂತ್ರಿಕ ಪರಿಣಿತಿಯನ್ನು ಹೊಂದಿದ, ಭಾವ ಸಂಬಂಧವೂ ಬೆಸೆಯಲ್ಪಟ್ಟ, ಸಾಂಸ್ಕೃತಿಕ ವಾಸ್ತು ರಚನೆಗಳು ಹಾಗು ವಿವರಗಳು ಪ್ರಧಾನವೆನಿಸುತ್ತವೆ. ಒಟ್ಟಿನಲ್ಲಿ ದೇವಾಲಯ ವಾಸ್ತುವನ್ನು, ಸಾಂಸ್ಕೃತಿಕ ವಾಸ್ತು ಎಂದು ಹೆಸರಿಸಬಹುದು. ದೇವಾಲಯದಲ್ಲಿನ ಪ್ರತಿಮಾ ರಚನೆ ಹಾಗು ಲಕ್ಷಣಗಳು, ಚಿತ್ರ ರಚನೆ ಇತ್ಯಾದಿಗಳಿಗೆ ಸಂಬಂಧಿಸಿದ್ದನ್ನು ಶಿಲ್ಪಶಾಸ್ತ್ರವೆನ್ನಬಹುದು.

ವಾಸ್ತುವಿನ ಜೊತೆಜೊತೆಗೆ ಶಿಲ್ಪವು ಶಿಲ್ಪಿಯ ಅಭಿರುಚಿಗೆ ಅನುಗುಣವಾಗಿ ವಾಸ್ತುವಿನ ವಿವಿಧ ಭಾಗಗಳಲ್ಲಿ ವ್ಯಕ್ತವಾಗಿರುವುದನ್ನು ನಾವು ಕಾಣುತ್ತೇವೆ. ವಾಸ್ತು ಮತ್ತು ಶಿಲ್ಪಗಳೆರೆಡೂ ಕಲಾ ಸೌಂದರ್ಯದ ಪ್ರತೀಕವಾಗಿವೆ. ಇವು ಆರಂಭದಿಂದಲೂ ಜೊತೆಯಾಗಿಯೇ ಬೆಳೆದುಬಂದಿರುವುದು ಗಮನೀಯ ಅಂಶ. ದಾವಣಗೆರೆ ಜಿಲ್ಲೆಯ ದೇವಾಲಯಗಳ ಭಿತ್ತಿ, ಪ್ರಸ್ತರ, ಹಾಗು ಕಂಭಗಳ ವಿಭಿನ್ನ ಭಾಗಗಳಲ್ಲಿ ಬಗೆಬಗೆಯ ಶಿಲ್ಪಗಳನ್ನು ಕಾಣಬಹುದು. ಇನ್ನೂ ಕೆಲವು ದೇವಾಲಯಗಳಲ್ಲಿ ಶಿಲ್ಪಗಳಿರದೆ, ಕೇವಲ ವಾಸ್ತುಭಾಗವನ್ನು ಮಾತ್ರ ಒಳಗೊಂಡಿವೆ.

ಒಟ್ಟಿನಲ್ಲಿ ವಾಸ್ತುವೊಂದನ್ನು ನಿರ್ಮಿಸುವುದು ಪ್ರಾಚೀನ ಕಾಲದಿಂದಲೂ ಕಲೆಯೋಪಾದಿಯಲ್ಲಿ ಬೆಳೆದುಬಂದಿದೆ. ಈ ಹಿನ್ನಲೆಯಲ್ಲಿ ವಾಸ್ತುಕಲೆ ಎನ್ನುವ ಪದ ಪ್ರಯೋಗವನ್ನು ಇಲ್ಲಿ ಮಾಡಲಾಗಿದೆ. ಭಾರತೀಯ ವಾಸ್ತು ಕಲೆಯಲ್ಲಿ ನಾವು ಆಧ್ಯಾತ್ಮಿಕ ಮನೋಧರ್ಮವನ್ನು ಕಾಣುತ್ತೇವೆ[೯]. ಇದೇ ಧಾರ್ಮಿಕ ಭಾವನೆಯನ್ನು ಮೈಗೂಡಿಸಿಕೊಂಡು ಈ ಜಿಲ್ಲೆಯಲ್ಲಿ ಆಳ್ವಿಕೆ ಮಾಡಿದ ರಾಜರು, ಸಾಮಂತರು, ಅನೇಕ ದೇವಾಲಯಗಳನ್ನು ಕಟ್ಟಿಸಿದ್ದಾರೆ. ಜೊತೆಗೆ ಅಲ್ಲಲ್ಲಿ ಕೋಟೆಗಳನ್ನು, ಲೌಕಿಕ ಕಟ್ಟಡಗಳನ್ನು ನಿರ್ಮಿಸಿದ್ದಾರೆ[೧೦].

ದಾವಣಗೆರೆ ಜಿಲ್ಲೆಯಲ್ಲಿ ಕಂಡುಬರುವ ಒಟ್ಟು ವಾಸ್ತುಕಲೆಯ ಸ್ಮಾರಕಗಳನ್ನು ಈ ರೀತಿ ವಿಭಾಗಿಸಬಹುದು.

1) ಧಾರ್ಮಿಕ ವಾಸ್ತುಕಲೆ
2) ಲೌಕಿಕ ವಾಸ್ತುಕಲೆ
3) ಸೈನಿಕ (ಮಿಲಿಟರಿ) ವಾಸ್ತುಕಲೆ

ಇಲ್ಲಿ ಆಳ್ವಿಕೆ ಮಾಡಿದ ರಾಜರು ಇತರೆ ಶೈಲಿಯ ಲಕ್ಷಣಗಳನ್ನು ಅಳವಡಿಸಿಕೊಂಡು ಅದರ ಜೊತೆ ಜೊತೆಗೆ ಪ್ರಾದೇಶಿಕ ಶೈಲಿಗಳ ಹೊಸ ಅಂಶಗಳನ್ನು ಅಳವಡಿಸಿಕೊಂಡು ನಿರ್ಮಿಸಿದ ಸುಮಾರು ನೂರಾ ಇಪ್ಪತ್ತಕ್ಕಿಂತಲೂ ಹೆಚ್ಚಿನ ದೇವಾಲಯಗಳ ಪ್ರಸ್ತುತ ದಾವಣಗೆರೆ ಜಿಲ್ಲೆಯಲ್ಲಿ ಕಂಡುಬರುತ್ತವೆ. ಇವುಗಳಲ್ಲಿ ಕೆಲವು ಕೇಂದ್ರ, ರಾಜ್ಯ ಪುರಾತತ್ವ ಇಲಾಖೆಯ ಅಧೀನದಲ್ಲಿದ್ದರೆ, ಉಳಿದ ದೇವಾಲಯಗಳಲ್ಲಿ ಕೆಲವು ಮುಜರಾಯಿ ಇಲಾಖೆಯ ಅಧೀನದಲ್ಲಿವೆ. ಇನ್ನು ಕೆಲವು ಗ್ರಾಮಸ್ಥರ ಸುಪರ್ದಿನಲ್ಲಿವೆ. ಇಲ್ಲಿ ಶೈವ ದೇವಾಲಯಗಳು ಪ್ರಧಾನವಾಗಿ ಕಂಡು ಬಂದರೂ ಸಹ ವೈಷ್ಣವ, ಶಾಕ್ತ ಹಾಗು ಮತ್ತಿತರೆ ದೇವಾಲಯಗಳೂ (ಜೈನ ಬಸದಿ, ಬ್ರಹ್ಮಾಲಯಗಳು) ಈ ಪ್ರದೇಶದಲ್ಲಿರುವುದು ವಿಶೇಷವಾಗಿದೆ. ದೇವಾಲಯಗಳ ವಾಸ್ತು ಕಲೆಯ ಲಕ್ಷಣಗಳು ಮತ್ತು ಶಾಸನಗಳ ಆಧಾರದ ಮೇಲೆ ಇಲ್ಲಿನ ದೇವಾಲಯಗಳನ್ನು ಗುರುತಿಸಬಹುದು.

ಅಲೆಕ್ಸಾಂಡರ್ ರೇ ಅವರು ಈ ಪ್ರದೇಶದ ಕೆಲವು ದೇವಾಲಯಗಳ ಲಕ್ಷಣಗಳನ್ನು ಕುರಿತು ಅಧ್ಯಯನ ಮಾಡಿದ್ದಾರೆ[೧೧]. ಇಲ್ಲಿ ಪ್ರಧಾನವಾಗಿ ಕಲ್ಯಾಣಿ ಚಾಲುಕ್ಯ, ಹೊಯ್ಸಳ ಮತ್ತು ವಿಜಯನಗರ ಕಾಲದ ದೇವಾಲಯಗಳು ಕಂಡುಬರುತ್ತವೆ.

ದಾವಣಗೆರೆ ಜಿಲ್ಲೆಯಲ್ಲಿ ಹೆಚ್ಚಿನ ಉತ್ಖನನ ನಡೆದಿಲ್ಲ. ಆದುದರಿಂದ ಪ್ರಾಚೀನ ಮತ್ತು ಮಧ್ಯಯುಗೀನ ಕಾಲದ ಪೌರ (ಲೌಕಿಕ) ಕಟ್ಟಡಗಳು. ಇನ್ನೂ ಬೆಳಕಿಗೆ ಬಂದಿರುವುದಿಲ್ಲ. ಕೇಂದ್ರ ಪುರಾತತ್ವ ಇಲಾಖೆಯವರು ಹರಪನಹಳ್ಳಿ ತಾಲೂಕಿನ ಉಚ್ಚಂಗಿದುರ್ಗದಲ್ಲಿ ಸಣ್ಣಪ್ರಮಾಣದ ಉತ್ಖನನ ಕೈಗೊಂಡಿದ್ದರಿಂದಾಗಿ ಅಲ್ಲಿ ಕೆಲವೊಂದು ಲೌಕಿಕ ಕಟ್ಟಡಗಳ ಅವಶೇಷಗಳು ಕಂಡುಬಂದಿವೆ[೧೨].

[illegible]

[illegible]

[illegible]

[illegible]

[illegible]

[illegible]

ಮಧ್ಯಯುಗದ ಅಂತ್ಯಕಾಲದವು ಎಂದು ಹೇಳಬಹುದಾದ ಕೂಣಚಗಲ್‌ನ ದಳವಾಯಿ ಮುದ್ದಣ್ಣನ ಹೊಂಡ, ಸಂತೇಬೆನ್ನೂರಿನ ಪುಷ್ಕರಣಿ[೧೩] ಇವುಗಳು ಈ ಲೌಕಿಕ ವಾಸ್ತುಶಿಲ್ಪಕ್ಕೆ ಹೆಸರಿಸಬಹುದಾದ ಮತ್ತೆರಡು ಉದಾಹರಣೆಗಳು.

ಸೈನಿಕ ವಾಸ್ತುಶಿಲ್ಪಕ್ಕೆ ಸಾಕಷ್ಟು ಉದಾಹರಣೆಗಳು ಈ ಜಿಲ್ಲೆಯಲ್ಲಿ ದೊರೆಯುತ್ತವೆ. ಪ್ರಾಚೀನ ಮತ್ತು ಮಧ್ಯಯುಗೀನ ಕಾಲದಲ್ಲಿ ಕಟ್ಟಿಸಲ್ಪಟ್ಟ ಕೋಟೆ-ಕೊತ್ತಲ, ಬತೇರಿಗಳು, ಈ ಜಿಲ್ಲೆಯ ಅಣಜಿ, ಉಚ್ಚಂಗಿದುರ್ಗ, ಬಸವನಕೋಟೆ, ಹೊಸದುರ್ಗ(ಉಚ್ಚಂಗಿದುರ್ಗ) ಕಣಕುಪ್ಪೆ, ಹೊನ್ನಾಳಿ, ಚನ್ನಗಿರಿ ಮೊದಲಾದೆಡೆ ಇವೆ. ದಾವಣಗೆರೆ ತಾಲೂಕಿನ ಆನೆಕೊಂಡವು ಉಚ್ಚಂಗಿ ಪಾಂಡ್ಯರ ಕಾಲದಲ್ಲಿ ಆನೆಗಳನ್ನು ಕಟ್ಟುತ್ತಿದ್ದ ಸ್ಥಳವಾಗಿತ್ತು ಎಂಬ ಪ್ರತೀತಿಯೊಂದು ಇಂದಿಗೂ ಇದೆ[೧೪]. ಆದರ ಯಾವ ಸ್ಪಷ್ಟ ಕುರುಹುಗಳು ನಮಗೆ ದೊರೆಯದೆ ಹೋದರೂ ಸಹ ಪ್ರಚಲಿತದಲ್ಲಿರುವ ಹೇಳಿಕೆಯ ಸತ್ಯಾಸತ್ಯತೆಯನ್ನು ಹುಡುಕಲು ಹೊರಟರೆ ಹಿಂದೆ ಆನೆಗಳನ್ನು ಕಟ್ಟುತ್ತಿದ್ದ ಸ್ಥಳವೆಂದು ಸ್ಥಳೀಯರಿಂದ ಕರೆಯಲ್ಪಡುವ ಬಯಲು ಜಾಗವೊಂದು ಆನೆಕೊಂಡದಲ್ಲಿದೆ. ಅಲ್ಲಿ ಆನೆಗಳನ್ನು ಕಟ್ಟಲು ಉಪಯೋಗಿಸಿರಬಹುದಾದ ಕಲ್ಲಿನ ಗೂಟಗಳು ಇಂದಿಗೂ ಕಾಣಬರುತ್ತವೆ. ಇವುಗಳೆಲ್ಲವೂ ಸೈನಿಕ ವಾಸ್ತುಶಿಲ್ಪಕ್ಕೆ ಉದಾಹರಣೆ ಆಗಬಲ್ಲವು. ಧಾರ್ಮಿಕ ವಾಸ್ತುಕಲೆಯ ಪ್ರತೀಕಗಳಾದ ಹಿಂದೂ ದೇವಾಲಯಗಳನ್ನು ಹಾಗು ಜೈನ ಬಸದಿಗಳನ್ನು ವಿಶ್ಲೇಷಿಸುವುದು ನನ್ನ ಪ್ರಬಂಧದ ಮುಖ್ಯ ಉದ್ದೇಶವಾಗಿರುವುದರಿಂದ ಪೌರ (ಲೌಕಿಕ) ಮತ್ತು ಸೈನಿಕ ವಾಸ್ತುಕಲೆಯ ವಿಶ್ಲೇಷಣೆಗೆ ಗಮನಕೊಡದೆ, ಧಾರ್ಮಿಕ ವಾಸ್ತುಕಲೆಗೆ ಇಲ್ಲಿ ಹೆಚ್ಚಿನ ಒತ್ತುಕೊಡಲಾಗಿದೆ. ಈ ಜಿಲ್ಲೆಯಲ್ಲಿನ ವಿಭಿನ್ನ ಪಂಥೀಯ ದೇವಾಲಯಗಳು, ಯಾವ ಕಾಲಘಟ್ಟದಲ್ಲಿ ಯಾವ ರೀತಿಯ ಶೈಲಿಗಳನ್ನು ಅಳವಡಿಸಿಕೊಂಡು ಬೆಳವಣಿಗೆ ಆದವು ಎಂಬುದನ್ನು ಹಾಗು ಇವುಗಳ ವಾಸ್ತು ವೈಶಿಷ್ಟತೆಯು ಈ ಮುಂದಿನ ಅಧ್ಯಾಯಗಳಲ್ಲಿದೆ.

[illegible]

೪.೧ ಜಿಲ್ಲೆಯ ಧಾರ್ಮಿಕ ವಾಸ್ತು ಕಲೆ:-

ಅಲೆಮಾರಿಯಾಗಿದ್ದ ಮಾನವ ಒಂದು ಕಡೆ ನೆಲೆಯಾಗಿ ನಿಲ್ಲಬೇಕೆಂದೂ, ಒಂದು ಸುರಕ್ಷಿತ ಗೂಡಿನಲ್ಲಿ ವಾಸಿಸಬೇಕೆಂದೂ ಎಂದಿನಿಂದ ಬಯಸಿದನೋ, ಅಂದಿನಿಂದ ತನಗಾಗಿ ಮನೆಯನ್ನು ಕಟ್ಟಿಕೊಳ್ಳಲು ಪ್ರಾರಂಭಿಸಿದ. ಇದು ವಾಸ್ತು ಶಿಲ್ಪದ ಪ್ರಥಮ ಹೆಜ್ಜೆಯಾಯಿತು. ಸುತ್ತುಲಿರುವ ಪ್ರಕೃತಿಯ ಬಗ್ಗೆ ಮಾನವನಿಗೆ ಭಯ, ಗೌರವ, ಭಕ್ತಿಗಳು ಮೂಡಿದವು. ಈ ದೃಷ್ಟಿಯಿಂದ ಪ್ರಕೃತಿಯ ಎಲ್ಲಾ ವಸ್ತುಗಳು ಪೂಜಾರ್ಹವಾದವು. ಈ ಕಾರಣದಿಂದಲೇ ಗಿಡ, ಮರ, ನದಿ, ಇತ್ಯಾದಿಗಳು ಅವನಿಗೆ ಪೂಜ್ಯ ಸ್ಥಾನಗಳೂ ಆದವು. ಇನ್ನೂ ಮುಂದುವರೆದು ಈ ಎಲ್ಲಾ ಸೃಷ್ಟಿಯ ಹಿನ್ನಲೆಯಾಗಿ ನಿಂತು ತನ್ನನ್ನು ನಡೆಸುತ್ತಿರುವ ಯಾವುದೋ ಒಂದು ಅನಂತ ಶಕ್ತಿ ಇದೆ ಎಂಬ ಅರಿವು ಉಂಟಾದಾಗ, ಆ ಶಕ್ತಿಗೆ ಒಂದು ರೂಪ ಕೊಡಲು ಯತ್ನಿಸಿದ. ಹೀಗೆ ನೀಡಿದ ಒಂದು ರೂಪಕ್ಕೆ ಅಥವಾ ಸಂಕೇತಕ್ಕೆ ರಕ್ಷಣಾರ್ಥವಾಗಿ ಪ್ರತ್ಯೇಕ ಆಲಯವನ್ನು ಕಟ್ಟಲು ಆರಂಭಿಸಿದ. ಇದು ದೇವಾಲಯ ರಚನೆಗೆ ನಾಂದಿಯಾಯಿತು.

ತನಗಾಗಿ ಕಟ್ಟಿಕೊಂಡ ಮನೆ 'ಗೃಹವಾಸ್ತು ಶಿಲ್ಪ' ಎನಿಸಿದರೆ, ತನ್ನ ದೇವರಿಗಾಗಿ ಕಟ್ಟಿದ್ದು 'ಧಾರ್ಮಿಕ ವಾಸ್ತು ಶಿಲ್ಪ' ಅಥವಾ ' ದೇವಾಲಯ ವಾಸ್ತು ಶಿಲ್ಪ ' ಎನಿಸಿತು. ಅಲ್ಲದೆ ಗೃಹ ವಾಸ್ತುವಿನ ರಚನೆಯು ದೇವಾಲಯ ವಾಸ್ತು ಶಿಲ್ಪ ರಚನೆಯ ಮೇಲೆ ಪ್ರಭಾವ ಬೀರುತ್ತಾ ಹೋಯಿತು. ನೈಸರ್ಗಿಕ ಗುಹೆಗಳನ್ನೇ ಈ ಉದ್ದೇಶಕ್ಕಾಗಿ ಬಳಸಿಕೊಂಡರೂ, ನಂತರ ಅದಕ್ಕಾಗಿಯೇ ಮುಂಭಾಗದಲ್ಲಿ ನೆರೆದ ಜನರಿಗೆ ಕಾಣುವಂತೆ ವೇದಿಕೆಯನ್ನೋ, ಕ್ರಮೇಣ ರಕ್ಷಣೆಗೋಸ್ಕರ ಆಲಯವನ್ನು ಕಟ್ಟುವ ಪರಿಪಾಠ ಆರಂಭವಾಯಿತು. ಮೊದಲಿಗೆ ಮೂರ್ತಿ(ಪ್ರತಿಮೆ)ಯನ್ನು ಇಡಲು ಒಂದು ಸಣ್ಣ ಮಂಟಪವಷ್ಟೇ ಇದ್ದು, ಇದು ದೇವಾಲಯದ ಸೀಮಿತ ಉದ್ದೇಶವನ್ನು ಪೂರೈಸುತ್ತಿದ್ದಿತು. ಕಾಲ ಕಳೆದಂತೆ ಪೂಜಾ ವಿಧಿಗಳು ನಿಧಿಷ್ಟಗೊಂಡು ಆಚರಣೆಗಳು ಹೆಚ್ಚಿದಂತೆ ಅದಕ್ಕೆ ತಕ್ಕಂತೆ ದೇವಾಲಯವೂ ವಿಸ್ತೃತಗೊಳ್ಳಲಾರಂಭಿಸಿತು. ಅವನ ಸುಸಂಸ್ಕೃತ ವಿಚಾರಗಳು ಬೆಳೆದಂತೆಲ್ಲ ದೇವಾಲಯವೂ ಬೆಳವಣಿಗೆಯನ್ನು ಪಡೆಯಿತಲ್ಲದೆ, ಅದು ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗವೆನಿಸಿತು. ಅವು ಸಾರ್ವಜನಿಕ ಪೂಜಾ ಮಂದಿರಗಳಾಗುವುದರೊಂದಿಗೆ ಸಮಾಜದ ವಿವಿಧ ಕ್ಷೇತ್ರಗಳಲ್ಲೂ ಮಹತ್ತರ ಪಾತ್ರವಹಿಸಿದವು. ಹಾಗೇ ಪ್ರಮುಖ ವಿದ್ಯಾ ಕೇಂದ್ರಗಳಾಗಿ ಮೆರೆಯುವುದರೊಂದಿಗೆ ಸಂಗೀತ, ನೃತ್ಯ ಮುಂತಾದ ಕಲೆಗಳಿಗೂ ಆಸರೆಯಾದವು. ಹೀಗೆ ಸಮಾಜದ ವಿವಿಧ ಉದ್ಧೇಶಗಳಿಗೆ ನೆರವಾಗಿನಿಂತು ಒಂದಲ್ಲಾ ಒಂದು ರೀತಿಯಲ್ಲಿ ಸಮಾಜದ ಎಲ್ಲಾಸ್ತರದ ಮನ್ನಣೆಯನ್ನು ಪಡೆದುದರಿಂದ ಅವು ಅವರ ಜೀವನದೊಂದಿಗೆ ಹಾಸುಹೊಕ್ಕಾಗಿ ಬೆಳೆದು ಸಮಾಜದ ಕೇಂದ್ರ ಸ್ಥಾನವೆನಿಸಿವೆ. ಅಂತೆಯೇ ದೇವಾಲಯ ನಿರ್ಮಾಣವು ಇಡೀ ಸಮಾಜದ ಧಾರ್ಮಿಕ ಶ್ರದ್ಧೆಯ ಭಕ್ತಿಯ ಪ್ರತೀಕವೆನಿಸಿತು. ಆಯಾಯಾ ಧಾರ್ಮಿಕ ಮತಗಳಿಗೆ ಅನುಗುಣವಾಗಿ ಈ ಪೂಜಾ ಸ್ಥಾನಗಳು ಬೇರೆ ಬೇರೆ ಹೆಸರಿನಿಂದ ಕರೆಯಲ್ಪಡುತ್ತವೆ. ಅಂದರೆ, ಹಿಂದುಗಳು 'ದೇವಾಲಯ ' ಎಂದು ಕರೆದರೆ, ಜೈನರು 'ಬಸದಿ ' ಎಂದು, ಬೌದ್ಧರು 'ಚೈತ್ಯ'ವೆಂದು ಕರೆದರು.

[illegible]

[illegible]

ಧಾರ್ಮಿಕ ಶ್ರದ್ಧೆಯು ಜೀವನದ ಪ್ರಮುಖ ಅಂಶ ಎನಿಸಿರುವ ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ದೇವಾಲಯಗಳು ನಿರ್ಮಾಣವಾಗಿರುವುದನ್ನು ಕಾಣುತ್ತೇವೆ. ಕ್ರಿ.ಪೂ. ೩ನೇ ಶತಮಾನದಲ್ಲಿ ಭೌದ್ಧ ಧರ್ಮದ ಸ್ತೂಪ ನಿರ್ಮಾಣವನ್ನು ಕಾಣಬಹುದು. ಬರ್‌ಬರಾ ಪರ್ವತ ಶ್ರೇಣಿಯ (ಬಿಹಾರ ಪ್ರಾಂತ್ಯ) , ಸಾಂಚಿ, ಅಮರಾವತಿ, ಮಥುರಾ, ಸಾರಾನಾಥ್, ಬುದ್ಧಗಯಾ ಮುಂತಾದೆಡೆಗಳಲ್ಲಿ ಈ ಧಾರ್ಮಿಕ ನಿರ್ಮಿತಿಗಳ ಭಗ್ನಾವಶೇಷಗಳಿವೆ. ಸುಮಾರು ಕ್ರಿ.ಶ. ೧-೨ನೇ ಶತಮಾನದಿಂದ ಭಾರತದ ವಿವಿಧ ಭಾಗಗಳಲ್ಲಿ ಇತರ ಧರ್ಮಗಳಿಗೆ ಸೇರಿದ ಕಟ್ಟಡಗಳು ಜೈನ ಮತಕ್ಕೆ ಸಂಬಂಧಪಟ್ಟಂತೆ ಈ ಕಾಲದ ಇಂಥ ಕೆಲವೇ ಸ್ಥಳಗಳು ಬೆಳಕಿಗೆ ಬಂದಿವೆ. ಉದಾ: ಮಥುರಾ , ಕೋನಕೊಂಡ್ಲ, ವಡ್ಡಮಾನು ಇತ್ಯಾದಿಗಳನ್ನು ಹೇಳಬಹುದು. ವೈದಿಕ ಮತದ ನಿರ್ಮಿತಿಗಳು ಮಥುರಾ ಭೂಪಾಲ್ ಬಳಿಯ ಬೆಸ್ ನಗರ, ನಾಗಾರ್ಜುನ ಕೊಂಡ ಮತ್ತು ಸ್ವಲ್ಪ ನಂತರ ಕಾಲದ , ಅಂದರೆ ಗುಪ್ತ -ಕದಂಬ ಕಾಲದ ದೇವಾಲಯಗಳಿರುವ ದೇವಘಡ , ಭೂಮಾರ , ಸಾಂಚಿ ಹಾಗು ಪಟ್ಟದಕಲ್ಲು , ಐಹೊಳೆ, ಬನವಾಸಿ ಮುಂತಾದ ಸ್ಥಳಗಳಲ್ಲಿ ಶೋಧವಾಗಿವೆ. ಇದು ಮೊದಲನೇ ಹಂತವಾಗಿದೆ.

ಸುಮಾರು ಕ್ರಿ.ಶ. ೬ನೇ ಶತಮಾನದಿಂದ ಈ ನಿರ್ಮಿತಿಗಳಲ್ಲಿ ಒಂದು ಕ್ರಮ ಮತ್ತು ಸ್ವರೂಪವನ್ನು ತರಲು ಪ್ರಯತ್ನ ಮಾಡಿದಂತೆ ತೋರುತ್ತದೆ. ತತ್ಪರಿಣಾಮವಾಗಿ ಸುಮಾರು ಕ್ರಿ.ಶ. ೭-೮ನೇ ಶತಮಾನಗಳ ಹೊತ್ತಿಗೆ ದೇವಾಲಯಗಳ ರಚನಾ ಕ್ರಮದಲ್ಲಿ ಸ್ಪಷ್ಟತೆ ಮೂಡಲಾರಂಭಿಸಿತು. ಅಷ್ಟೇ ಅಲ್ಲದೆ, ಉತ್ತರ ಮತ್ತು ದಕ್ಷಿಣ ಭಾರತದ ದೇವಾಲಯಗಳು ತಮ್ಮ ರಚನೆಯಲ್ಲಿ ವಿಭಿನ್ನ ರೂಪಗಳನ್ನು ಸ್ಪಷ್ಟವಾಗಿ ಪ್ರಕಟಿಸಲಾರಂಭಿಸಿದವು. ಇದನ್ನು ನಾವು ಪ್ರಬುದ್ಧ ಹಂತವೆಂದು ಕರೆಯಬಹುದು. ದಾವಣಗೆರೆ ಜಿಲ್ಲೆಯಲ್ಲಿರುವ ಅಸಂಖ್ಯಾತ ದೇವಾಲಯಗಳ ಶೈಲಿ ಹಾಗು ವಿವಿಧ ವಾಸ್ತು ಭಾಗಗಳು ಕರ್ನಾಟಕದ ಇತರೆ ಪ್ರದೇಶಗಳಲ್ಲಿ ಕಾಣಬರುವ ದೇವಾಲಯಗಳಿಗೆ ಹೆಚ್ಚು ಹೋಲಿಕೆಯಾಗುತ್ತವೆ. ಆದುದರಿಂದ ಕರ್ನಾಟಕದಲ್ಲಿ ದೇವಾಲಯಗಳು ಬೆಳೆದುಬಂದ ರೀತಿಯನ್ನು ಸ್ಥೂಲವಾಗಿ ವಿವರಿಸುವುದು ಅವಶ್ಯಕವಿನಿಸುತ್ತದೆ.

ಕರ್ನಾಟಕದಲ್ಲಿ ದೇವಾಲಯ ವಾಸ್ತುಕಲೆ ಬೆಳೆದು ಬಂದ ದಾರಿಯನ್ನು ಗುರುತಿಸಲು ಯತ್ನಿಸಿದರೆ, ಮೊದಲಿಗೆ ಶಾತವಾಹನರ ಕಾಲದ ಬೌದ್ಧ ಧರ್ಮದ ಚೈತ್ಯ, ಸ್ತೂಪ, ವಿಹಾರಗಳು ಕಂಡುಬರುತ್ತವೆ. ಬ್ರಹ್ಮಗಿರಿ, ಬನವಾಸಿ, ಸನ್ನತಿ ಮುಂತಾದೆಡೆಗಳಲ್ಲಿದ್ದ ಪ್ರಾಚೀನ ವಾಸ್ತು ರಚನೆಗಳನ್ನಿಲ್ಲಿ ನೆನೆಯಬಹುದು. ಶಾತವಾಹನರ ಕಾಲದಲ್ಲಿ ಬೌದ್ಧ ಸ್ತೂಪ, ಚೈತ್ಯಗಳೊಂದಿಗೆ ವೈದಿಕ ಧರ್ಮದ ರಚನೆಗಳಿದ್ದವೆಂಬುದು ಶಾಸನಗಳಿಂದ ಸ್ಪಷ್ಟವಾಗುತ್ತದೆ[೧೫]. ಶಿಕಾರಿಪುರ ತಾಲೂಕಿನ ಮಳ್ಳಪಳ್ಳಿಯ ದೇವಾಲಯ ಅದೇರೀತಿ ತಾಳಗುಂದದ ಮಹಾದೇವ ಈ ದೇವರುಗಳನ್ನು ಶಾತವಾಹನರು ಪೂಜಿಸುತ್ತಿದ್ದರೆಂದು ಶಾಸನಗಳಲ್ಲಿ ಹೇಳಲಾಗಿದೆಯಾದರೂ, ಈ ದೇವಾಲಯಗಳು ಸ್ಪಷ್ಟವಾಗಿ ಕಾಣುವುದಿಲ್ಲ. (ಪ್ರಾಯಶಃ ಈ ನಿವೇಶನಗಳಲ್ಲಿ

ಉತ್ಖನನ ಮಾಡಿದಲ್ಲಿ ಇವುಗಳ ಭಗ್ನಾವಶೇಷಗಳು ಬೆಳಕಿಗೆ ಬರಬಹುದು). ಬಾದಾಮಿ-ಐಹೊಳೆ-ಪಟ್ಟದಕಲ್ಲುಗಳಲ್ಲಿ ಹಿಂದೆ ಇದ್ದ ಇಟ್ಟಿಗೆಯಿಂದ ನಿರ್ಮಿಸಲಾದ ಕಟ್ಟಡದ ಭಾಗಗಳು ದೊರೆತಿದ್ದು, ಅವು ಕರ್ನಾಟಕ ವಾಸ್ತುಶಿಲ್ಪದ ಪ್ರಾಚೀನ ನಿರ್ಮಿತಿಗಳಿಗೆ ಉದಾಹರಣೆಯಾಗಿವೆ. ಕದಂಬ, ಗಂಗರ ಕಾಲದ ಆರಂಭದ ಕಟ್ಟಡಗಳು ಹೆಚ್ಚಾಗಿ ಇಟ್ಟಿಗೆಯಿಂದ ನಿರ್ಮಿಸಲ್ಪಟ್ಟಿದ್ದು, ಅವು ಹೆಚ್ಚಾಗಿ ಉಳಿದುಬಂದಿಲ್ಲ.

ಬಾದಾಮಿ ಚಾಲುಕ್ಯರ ಕಾಲದಿಂದ ಕರ್ನಾಟಕದಲ್ಲಿ ದೇವಾಲಯಗಳ ನಿರ್ಮಾಣವು ಹೆಚ್ಚು ಭರದಿಂದ ಸಾಗಿತೆನ್ನಬಹುದು. ಇವುಗಳನ್ನು ಕಲ್ಲಿನಿಂದ ಕಟ್ಟಲಾಗಿದ್ದು, ಮಹಾಕೂಟ-ಬಾದಾಮಿ-ಐಹೊಳೆ-ಪಟ್ಟದಕಲ್ಲುಗಳಲ್ಲಿ ಈ ಪ್ರಾಚೀನ ನಿರ್ಮಿತಿಗಳನ್ನು ಕಾಣಬಹುದಾಗಿದೆ[೧೬]. ಬಾದಾಮಿಯ ಗುಹಾದೇವಾಲಯಗಳು ಶಿಲೆಯಲ್ಲಿ ಕೊರೆದು ಮಾಡಿದ ದೇವಾಲಯಗಳಿಗೆ ಹೆಸರಾಗಿದ್ದು, ಇವುಗಳಲ್ಲಿ ಶೈವ-ಜೈನ-ವೈಷ್ಣವ ಈ ಎಲ್ಲ ಧರ್ಮದ ನಿರ್ಮಾಣಗಳೂ ಇವೆ. ಐಹೊಳೆಯನ್ನು 'ದೇವಾಲಯಗಳ ಪ್ರಯೋಗಶಾಲೆ' ಎಂದು ಕರೆಯಲಾಗಿದೆ. ಹಳೇ ಮಹಾಕೂಟದಲ್ಲಿಯೂ ಪ್ರಾಚೀನ ದೇವಾಲಯಗಳು ಉಳಿದುಬಂದಿವೆ. ಪಟ್ಟದಕಲ್ಲಿನ ದೇವಾಲಯಗಳು ಈ ದೃಷ್ಟಿಯಿಂದ ರಚನಾಕ್ರಮದಲ್ಲಿ ಪ್ರಬುದ್ಧ ಸ್ಥಿತಿಯನ್ನು ಹೊಂದಿವೆ. ದೇವಾಲಯದ ಮುಖ್ಯಭಾಗ - ಅಂಗಗಳು ಆಗಲೇ ಅವತರಿಸಿದ್ದು, ಗರ್ಭಗುಡಿಯ ಮೇಲೆ ವಿವಿಧ ರೀತಿಯ ಶಿಖರ ಅಥವ ಮೇಲ್ಕಟ್ಟಡಗಳು ರೂಪುಗೊಂಡಿರುವುದು; ಇದನ್ನು ಸ್ಪಷ್ಟಪಡಿಸುತ್ತದೆ. ಇವು 'ಷಡ್ವರ್ಗ ದೇವಾಲಯಗಳೆನಿಸಿದ್ದು, ಈ ಮಾದರಿಯನ್ನು ರಾಷ್ಟ್ರಕೂಟ, ಗಂಗ, ನೊಳಂಬ, ವಿಜಯನಗರದರಸರ ಕಾಲದ ದೇವಾಲಯಗಳಲ್ಲೂ ಕಾಣಬಹುದಾಗಿದೆ. ಆದರೆ ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯಗಳಲ್ಲಿ ಈ ದೃಷ್ಟಿಯಿಂದ ಕೆಲಮಟ್ಟಿಗೆ ಭಿನ್ನತೆಯು ಕಾಣಬರುತ್ತಿದ್ದು, ಹೊಯ್ಸಳರ ದೇವಾಲಯಗಳು ಆ ಹೊಸ ಜಾಡನ್ನು ಮುಂದುವರಿಸಿ, ಪರಾಕಾಷ್ಠತೆಯನ್ನು ತಲುಪಿದ್ದನ್ನು ಗುರುತಿಸಬಹುದಾಗಿದೆ. ಅವು ಬೇರೆ ಪ್ರದೇಶಗಳಲ್ಲಿ ಬಳಕೆಯಲ್ಲಿದ್ದ ವಿವಿಧ ಮಾದರಿಯ ರಚನೆಗಳನ್ನು ಅನುಸರಿಸಿ ರಚಿಸಲ್ಪಟ್ಟಿದ್ದು, ದೇವಾಲಯ ವಾಸ್ತುಶಿಲ್ಪಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದವೆಂದು ಹೇಳಬಹುದು. ಇದರಿಂದಾಗಿ, ಕರ್ನಾಟಕದಲ್ಲಿ ವೈವಿಧ್ಯಮಯ ದೇವಾಲಯ ರಚನೆಗಳು ಸಾಧ್ಯವಾಗಿವೆ.

ಮುಂದೆ ಕರ್ನಾಟಕದ ಹಲವು ಪ್ರದೇಶಗಳಲ್ಲಿ ಅಪರಿಮಿತ ಸಂಖ್ಯೆಯ ದೇವಾಲಯಗಳು ನಿರ್ಮಾಣಗೊಂಡವು. ಒಂದೊಂದು ಪ್ರಮುಖ ರಾಜವಂಶದ ದೇವಾಲಯಗಳು ಒಂದೊಂದು ಪ್ರದೇಶದಲ್ಲಿ ಕೇಂದ್ರೀಕೃತಗೊಂಡಂತೆಯೇ ಇತರ ಪ್ರದೇಶಗಳಲ್ಲಿ ಬಿಡಿ ಬಿಡಿಯಾಗಿಯೂ ನಿರ್ಮಿಸಲ್ಪಟ್ಟವು. ಅಂದರೆ ಬಾದಾಮಿ ಚಾಲುಕ್ಯರ ಕಾಲದ ದೇವಾಲಯಗಳು ಐಹೊಳೆ, ಬಾದಾಮಿ, ಪಟ್ಟದಕಲ್ಲುಗಳಲ್ಲಿ ಕೇಂದ್ರೀಕೃತಗೊಂಡರೆ, ರಾಷ್ಟ್ರಕೂಟರ ಕಾಲದ ದೇವಾಲಯಗಳು ವಿಶೇಷವಾಗಿ ಎಲ್ಲೋರದಲ್ಲಿಯೂ, ಅಲ್ಲಲ್ಲಿ ಚದುರಿದಂತೆ ಅಂದರೆ; ಕುಕ್ಕನೂರು, ರೋಣ, ಮುಳಗುಂದ, ಸಿರಿವಾಳ ಮುಂತಾದ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ[೧೭]. ಕುರುವತ್ತಿ, ಗದಗ, ಲಕ್ಕುಂಡಿಯಲ್ಲಿ ಕಲ್ಯಾಣ ಚಾಲುಕ್ಯರ ದೇವಾಲಯಗಳು ಪ್ರಮುಖವಾಗಿ

ಕಂಡುಬಂದರೆ [೧೮], ಉತ್ತರ ಕರ್ನಾಟಕದ ಇತರೆಡೆಗಳಲ್ಲೂ ಅವರ ಕಾಲದ ದೇವಾಲಯಗಳಿವೆ. ಹೊಯ್ಸಳರ ಕಾಲದ ದೇವಾಲಯಗಳಿಗೆ ಬೇಲೂರು, ಹಳೇಬೀಡು, ಸೋಮನಾಥಪುರಗಳು ಪ್ರಸಿದ್ಧವಾಗಿದ್ದರೆ, ಹಾಸನ ಜಿಲ್ಲೆ, ತುಮಕೂರು ಜಿಲ್ಲೆಗಳಲ್ಲಿಯೂ ಅವರ ಕಾಲದ ಅನೇಕ ದೇವಾಲಯಗಳಿವೆ [೧೯]. ಗಂಗರ ಕಾಲದ ದೇವಾಲಯಗಳನ್ನು ಆವನಿ, ಹೇಮಾವತಿಯಲ್ಲೂ [೨೦], ವಿಜಯನಗರ ಕಾಲದ ದೇವಾಲಯಗಳನ್ನು ಹಂಪೆಯಲ್ಲೂ ಮುಖ್ಯವಾಗಿ ಕಾಣಬಹುದಾಗಿದೆ [೨೧]. ಹೀಗೆ ಒಂದು ಕಾಲದ, ರಾಜವಂಶದ ದೇವಾಲಯಗಳು ಒಂದು ಕೇಂದ್ರೀಕೃತ ಪ್ರದೇಶದಲ್ಲಿ ಮಾತ್ರವಲ್ಲದೇ, ಬೇರೆಡೆಯೂ ನಿರ್ಮಾಣವಾಗಿದ್ದರೂ, ಒಂದು ಕಾಲದ ದೇವಾಲಯ ರಚಾನ ಶೈಲಿಯು ಆಯಾ ರಾಜವಂಶದ ರಾಜಧಾನಿ ಮತ್ತು ಆ ಸುತ್ತಲಿನ ಪ್ರದೇಶಗಳ ಪ್ರಮುಖ ದೇವಾಲಯಗಳಲ್ಲಿ ನಿಖರವಾಗಿ, ಸ್ಪಷ್ಟವಾಗಿ ಮತ್ತು ಪೂರ್ಣವಾಗಿ ಪ್ರಕಟವಾಗಿರುತ್ತದೆ. ಆದ್ದರಿಂದ ಒಂದು ಕಾಲದ ದೇವಾಲಯ ಶೈಲಿಯನ್ನರಿಯುವಲ್ಲಿ ಆ ಕೇಂದ್ರಸ್ಥಾನಗಳು ಪ್ರಮುಖಪಾತ್ರವಹಿಸುತ್ತವೆ.

ಪ್ರಾಚೀನ ಕಾಲದಿಂದಲೇ ದೇವಾಲಯದ ರಚನೆಯು ಕರ್ನಾಟಕದಲ್ಲಿ ಆರಂಭವಾಗಿದ್ದು, ಕಾಲದಿಂದ ಕಾಲಕ್ಕೆ ರಚನಾತ್ಮಕವಾಗಿ ನಿರ್ಧಿಷ್ಟಗೊಳ್ಳುತ್ತಾ, ತನ್ನದೇ ಆದ ಶೈಲಿ-ಪ್ರಭೇದಗಳನ್ನು ಪ್ರಕಟಗೊಳಿಸುತ್ತಾ ನಡೆದು, ಪ್ರತಿಯೊಂದು ಪ್ರದೇಶದ ದೇವಾಲಯಗಳೂ ಕರ್ನಾಟಕ ವಾಸ್ತು ಶಿಲ್ಪಕ್ಕೆ ವೈಶಿಷ್ಟ್ಯಪೂರ್ಣ ಕೊಡುಗೆ ಎನಿಸಿದೆ. ಒಂದೊಂದು ಕಾಲದಲ್ಲಿ ಒಂದೊಂದು ರಚನೆಯಲ್ಲಿ ವೈಶಿಷ್ಟ್ಯತೆಯಿದೆ. ಕಾಲದಿಂದ ಕಾಲಕ್ಕೆ ಈ ವೈಶಿಷ್ಟ್ಯತೆಯಲ್ಲದ ಮಾರ್ಪಾಟನ್ನರಿಯುವಲ್ಲಿ ದೇವಾಲಯದ ರೂಪುರೇಷೆ ರಚನಾ ಕ್ರಮ ದೇವಾಲಯದ ಒಂದೊಂದು ಭಾಗದ ಅಂಗಗಳು, ಅವುಗಳ ಅಲಂಕಾರ, ಪ್ರಕಾರಗಳು ಇವುಗಳನ್ನು ಗಮನಿಸಬೇಕಾಗುತ್ತದೆ. ಇವು ದೇವಾಲಯದ ಶೈಲಿಯನ್ನು ನಿರ್ಧರಿಸಲು ಸಹಾಯಕವಾಗುವುದರೊಂದಿಗೆ ಆ ಅಂಗಭಾಗಗಳು ಬೆಳೆದುಬಂದ ರೀತಿಯನ್ನು ಸೂಚಿಸುತ್ತವೆ.

ದಾವಣಗೆರೆ ಜಿಲ್ಲೆಯಲ್ಲಿ ಕ್ಷೇತ್ರ ಕಾರ್ಯವನ್ನು ಕೈಗೊಂಡಾಗ ಧಾರ್ಮಿಕ ವಾಸ್ತು ಕಲೆಗಳ ಪ್ರತೀಕಗಳಾದ ಅಸಂಖ್ಯಾತ ದೇವಾಲಯಗಳು ಕಂಡುಬಂದಿವೆ. ಇವುಗಳನ್ನು ಹೆಚ್ಚಾಗಿ ಶಿಲೆಯಿಂದಲೇ ನಿರ್ಮಿಸಲಾಗಿದೆ. ಹಾಗೆಯೇ ಕೆಲವು ದೇವಾಲಯಗಳ ಗೋಪುರ ಮತ್ತು ಶಿಖರಗಳಿಗೆ ಇಟ್ಟಿಗೆ ಮತ್ತು ಗಾರೆಯನ್ನು ಬಳಸಲಾಗಿದೆ. ಒಟ್ಟಿನಲ್ಲಿ ಈ ಜಿಲ್ಲೆಯಲ್ಲಿ ಕಂಡುಬಂದಿರುವ ದೇವಾಲಯಗಳಲ್ಲಿ ಕೆಲವು ಮಾತ್ರ ಮೂಲ ರೂಪದಲ್ಲಿವೆ. ಕೆಲವು ಜೀರ್ಣೋದ್ದಾರಗೊಂಡಿದ್ದು,ಇನ್ನೂ ಕೆಲವು ಅವಸಾನದ ಅಂಚಿನಲ್ಲಿವೆ. ದಾವಣಗೆರೆ ಜಿಲ್ಲೆಯ ವಾಸ್ತು ಕಲೆಯ ವೈಶಿಷ್ಟತೆ ಮತ್ತು ಅವುಗಳ ಕಾಲವನ್ನು ಗುರುತಿಸಲು ಈ ಎಲ್ಲಾ ದೇವಾಲಯಗಳು ಸಹಾಯಕವಾಗಿದ್ದು, ಅವುಗಳು ಈ ಕೆಳಕಂಡಂತಿವೆ.

ಆನೆಕೊಂಡ, ಬೇತೂರು, ನಿರ್ಥಡಿ, ಕಡ್ಲೆಬಾಳು, ಕಂದಗಲ್ಲು, ಕಕ್ಕರಗೊಳ್ಳ , ಕೋಲುಕುಂಟೆ, ಅಗಸನಕಟ್ಟೆ,ತುರುಚಘಟ್ಟ, ಗುಮ್ಮನೂರು, ನೇರ್ಲಿಗೆ, ಜರೆಕಟ್ಟೆ, ಬಳ್ಳೂರು, ಬೆಳವನೂರು, ಬೂದಾಳು, ಹದಡಿ,

[illegible]

[illegible]

[illegible]

[illegible]

ಹಾಲುವರ್ತಿ, ಹೊನ್ನೂರು, ಅವರಗೊಳ್ಳ, ನಲ್ಕುಂದ, ಶಂಕರನಹಳ್ಳಿ, ಲೋಕಿಕೆರೆ, ಮಾಯಕೊಂಡ, ಕೊಗ್ಗನೂರು, ಮಳಲಕೆರೆ, ಅಣಜಿ (ದಾವಣಗೆರೆ ತಾಲೂಕು), ಬಿಳಚೋಡು, ಉದ್ಗಟ್ಟ, ಕಣ್ಣಕುಪ್ಪೆ, ಮುದಕದಹಳ್ಳಿ, ಚದುರಗೊಳ, ಅರಿಷಿಣಗುಂಡಿ, ಬಸವನಕೋಟೆ, ಮಾಗಡಿ, ಮಡ್ರಹಳ್ಳಿ, ಸೊಕ್ಕೆ, ಅಳದುಂಡಿ, ಗುತ್ತಿದುರ್ಗ, ಕೊಣಚಗಲ್, ಕೊಡದಗುಡ್ಡ, ಕಲ್ಲೇದೇವರಪುರ, ಆಸಗೋಡು, ಮುಷ್ಠೂರು, (ಜಗಲೂರು ತಾಲೂಕು), ಸಾರಥಿ, ಕುಮಾರನಹಳ್ಳಿ, ಹಲವಾಣ, ಜಿಗಳಿ, ನಂದಿತಾವರೆ, ಗಂಗನರಸಿ, ಎಲವೆಟ್ಟಿ, ಯಳೆಹೊಳೆ, ನಂದಿಗಾವಿ, ಬನ್ನಿಕೋಡು, ಭಾನುವಳ್ಳಿ, ಚಿಕ್ಕಬಿದಿರೆ, ಬೆಳ್ಳೊಡಿ, ಮಲೆಬೆನ್ನೂರು, ನಂದಿಗುಡಿ, ಹರಿಹರ, ಕೊಕ್ಕನೂರು, ವಾಸನ, ದೇವರಬೆಳಕೆರೆ, ನಿಟ್ಟೂರು (ಹರಿಹರ ತಾಲೂಕು) ಕಮ್ಮಾರಗಟ್ಟೆ, ಬಳ್ಳೇಶ್ವರ, ಕುರವದಗಡ್ಡೆ, ಕುಂಕವ, ಹಿರೇ ಕಲ್ಮಠ, ಕುಂದೂರು, ಕುಂಬಳೂರು, ಸೋಗಿಲು, ತೀರ್ಥರಾಮೇಶ್ವರ, ಬೆಳಗುತ್ತಿ, ಗೋಪಗೊಂಡನಹಳ್ಳಿ (ಹೊನ್ನಾಳಿ ತಾಲೂಕು), ದಾಗಿನಕಟ್ಟೆ, ಕಾಲ್ಕರೆ, ಕೆರೆಬಿಳಚಿ, ಜೋಳದಾಳು, ಉಂಬ್ರಾಣಿ, ನಲ್ಲೂರು, ತಾವರಕೆರೆ, ಗಂಗಗೊಂಡನಹಳ್ಳಿ, ದೇವರಹಳ್ಳಿ, ಚನ್ನಗಿರಿ, ಹಿರೇಕೊಗಲೂರು, ಚಿಕ್ಕಕೂಗಲೂರು, ಬಸವಾಪಟ್ಟಣ, ಸೂಳೆಕೆರೆ (ಶಾಂತಿಸಾಗರ) ಹಲಕನಾಳು, ಮರವಂಜಿ, ಮಸಣಕೆರೆ (ಚನ್ನಗಿರಿ ತಾಲೂಕು). ಅರಸಿಕೆರೆ, ಗುಡಿಹಳ್ಳಿ, ಚಿಗಟೇರಿ, ಬೆಣ್ಣೆಹಳ್ಳಿ, ದೇವರ ತಿಮ್ಮಲಾಪುರ, ಉಚ್ಚಂಗಿದುರ್ಗ, ಕುಂಚೂರು, ನೀಲಗುಂದ, ಬಾಗಳಿ (ಹರಪನಹಳ್ಳಿ ತಾಲೂಕು)ಗಳಲ್ಲಿ ಪ್ರಾಚೀನ ಮತ್ತು ಮಧ್ಯಯುಗೀನ ಕಾಲದ ದೇವಾಲಯಗಳು ಕಂಡುಬರುತ್ತವೆ.

೪.೨ ಮಹತ್ವದ ದೇವಾಲಯಗಳ ವಾಸ್ತುಕಲೆ:-

ಅಧ್ಯಯನದ ಅನುಕೂಲಕ್ಕಾಗಿ ಈ ಜಿಲ್ಲೆಯಲ್ಲಿ ಕಾಣಬರುವ ದೇವಾಲಯಗಳನ್ನು ಈ ಕೆಳಕಂಡಂತೆ ವಿಭಾಗಿಸಿಕೊಳ್ಳಬಹುದು.

೧) ಶೈವ ದೇವಾಲಯಗಳು
೨) ವೈಷ್ಣವ ದೇವಾಲಯಗಳು
೩) ಶಾಕ್ತ ದೇವಾಲಯಗಳು
೪) ಜಿನ ಬಸದಿಗಳು
೫) ಇತರೆ ದೇವಾಲಯಗಳು

ಆಯಾ ಧಾರ್ಮಿಕ ಪಂಥಕ್ಕೆ ಸೇರಿದ ದೇವಾಲಯಗಳನ್ನು ಆಯಾ ವಿಭಾಗದಲ್ಲಿ ವಿವರಿಸಲಾಗುತ್ತದೆ. ಇತರೆ ಪಂಥೀಯ ದೇವಾಲಯಗಳಲ್ಲಿ ನಿರ್ಧಿಷ್ಟ ಪಂಥಕ್ಕೆ ಸೇರದೇ ಇರುವ ಮಿಶ್ರ ಪಂಥ ಇಲ್ಲವೇ ಪ್ರತ್ಯೇಕವೆನ್ನಬಹುದಾದ ಹರಿಹರ, ಬ್ರಹ್ಮ, ಮೊದಲಾದ ಮಿಶ್ರ ಇಲ್ಲವೇ ಪ್ರತ್ಯೇಕವೆನ್ನಬಹುದಾದ ದೇವಾಲಯಗಳನ್ನು ಇಲ್ಲಿ ವಿಶ್ಲೇಷಿಸಲಾಗುತ್ತದೆ. ಈ ಎಲ್ಲಾ ದೇವಾಲಯಗಳನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡುವ ಮುನ್ನ ಈ ಜಿಲ್ಲೆಯ ದೇವಾಲಯಗಳ ಅಂಗ ಭಾಗಗಳನ್ನು (ವಾಸ್ತು ಲಕ್ಷಣಗಳನ್ನು) ಸ್ಥೂಲವಾಗಿ ಈ ಕೆಳಗಿನಂತೆ ವಿಶ್ಲೇಷಿಸುವುದು ಅವಶ್ಯಕವೆನಿಸಿದೆ.

[illegible]

[illegible]

[illegible]

ದಾವಣಗೆರೆ ಜಿಲ್ಲೆಯಲ್ಲಿನ ದೇವಾಲಯಗಳ ರಚನಾಕ್ರಮವನ್ನು 'ಊರ್ಧ್ವಮುಖ ಕ್ರಮ' ಮತ್ತು 'ತಿರ್ಯಙ್ಮುಖಕ್ರಮ ಎಂದು ಎರಡು ರೀತಿಯಲ್ಲಿ ವಿಭಾಗಿಸಬಹುದು. ದೇವಾಲಯದ ಹೊರಭಾಗದಲ್ಲಿ ಕೆಳಗಿನಿಂದ ಮೇಲಕ್ಕೆ ಒಂದಾದ ಮೇಲೊಂದು ಭಾಗವನ್ನು ನಿಶ್ಚಿತ ರೀತಿಯಲ್ಲಿ ರಚಿಸುವ ಕ್ರಮವನ್ನು ಊರ್ಧ್ವಮುಖ ಕ್ರಮ ಎಂದು ಹೇಳಬಹುದು. ಅದೇರೀತಿ ಒಳಭಾಗದಲ್ಲಿ ಗರ್ಭಗೃಹ ಸೇರಿದಂತೆ ಅದರ ಮುಂದಿರುವ ಎಲ್ಲಾ ಮಂಟಪ ಇತ್ಯಾದಿಗಳ ರಚನಾ ಕ್ರಮವನ್ನ ತಿರ್ಯಙ್ಮುಖಕ್ರಮ ಎಂದು ಕರೆಯಬಹುದು.

ದೇವಾಲಯಗಳು ಊರ್ಧ್ವಮುಖ ಕ್ರಮದಲ್ಲಿ (ಅಂದರೆ ಕೆಳಗಿನಿಂದ ಮೇಲಕ್ಕೆ) ಪ್ರಧಾನವಾಗಿ ಆರು ಭಾಗ(ಷಡ್ವರ್ಗ)ಗಳಿಂದ ಕೂಡಿರುತ್ತವೆ. ಅವುಗಳೆಂದರೆ, ಅಧಿಷ್ಠಾನ-ಭಿತ್ತಿ-ಪ್ರಸ್ತರ-ಗ್ರೀವ-ಶಿಖರ-ಸ್ತೂಪಿ. ಹೀಗೆ ಆರು ಭಾಗಗಳಿಂದ ಕೂಡಿದ ದೇವಾಲಯಗಳಿಗೆ 'ಷಡ್ವರ್ಗ ದೇವಾಲಯ' ಎಂದು ಹೆಸರು. ಷಡ್ವರ್ಗ ಕ್ರಮದ ದೇವಾಲಯಗಳಲ್ಲಿ ಅಧಿಷ್ಠಾನವೇ ಮೊದಲ ಭಾಗ.

ಅಧಿಷ್ಠಾನ: ಈ ಜಿಲ್ಲೆಯ ದೇವಾಲಯಗಳ ಅಧಿಷ್ಠಾನಗಳಲ್ಲಿ ಪ್ರಮುಖವಾಗಿ ಉಪಾನ, ಪದ್ಮ, ಕರ್ಣೀಕಾ,ಕುಮುದ, ಕಪೋತ, ವೇದಿ ಅಂಗಗಳು ಕಂಡುಬರುತ್ತವೆ. ನೀಲಗುಂದ, ಬಳ್ಳೇಶ್ವರ , ಆನೆಕೊಂಡ, ನಿರ್ಥಡಿಯಲ್ಲಿನ ಅಧಿಷ್ಠಾನ ಭಾಗದಲ್ಲಿ ಕೆಲವು ಲೌಕಿಕ ಮತ್ತು ಪೌರಾಣಿಕ ಶಿಲ್ಪಗಳನ್ನು ಕೆತ್ತಲಾಗಿದೆ. ಅಧಿಷ್ಠಾನದಲ್ಲಿ ಅನೇಕ ಪ್ರಕಾರಗಳೂ ಇವೆ. ಮಂಚಕ, ಪಾದಬಂಧ, ಪ್ರತಿಬಂಧ ಎಂಬು ಮುಖ್ಯ ಪ್ರಭೇದವೂ, ಪಾದಬಂಧ, ಪ್ರತಿಬಂಧ, ಪದ್ಮ ಬಂಧ, ಮಂಚಬಂಧ-ಮುಂತಾದ ಉಪ ಪ್ರಕಾರಗಳೂ ಇವೆ.

ಭಿತ್ತಿ :- ಅಧಿಷ್ಠಾನದ ಮೇಲಿನ ಭಾಗವೇ 'ಭಿತ್ತಿ' (ಗೋಡೆ). ಇದು ಷಡ್ವರ್ಗ ಕ್ರಮದ ಎರಡನೇ ಭಾಗ. ದೇವಾಲಯದ ಭಾರ ಹೊರಲೆಂದು ಭಿತ್ತಿಯಲ್ಲಿ ನಿಶ್ಚಿತ ಅಂತರದಲ್ಲಿ ಕುಡ್ಯಸ್ತಂಭಗಳು ಇರುವುದಲ್ಲದೆ, ಅವುಗಳ ನಡುವೆ ದೇವಕೋಷ್ಠ, ಜಾಲಂಧ್ರ (ವಾತಾಯನ), ತೋರಣ, ಕುಂಬಲತಾ ಇತ್ಯಾದಿಗಳಿರುತ್ತವೆ. ಜಿಲ್ಲೆಯ ನೀಲಗುಂದ , ನಂದಿತಾವರೆ, ಆನೆಕೊಂಡ , ಹರಿಹರ, ಬಳ್ಳೇಶ್ವರ, ಚದುರಗೋಳ ಮೊದಲಾದಡೆ ಭಿತ್ತಿಯ ಹೊರಭಾಗದಲ್ಲಿ ಅರೆಗಂಭಗಳು, ಜೋಡಿ ಅರೆಗಂಭಗಳಷ್ಟನ್ನೇ ಕೆತ್ತಿದ್ದರೆ, ಇನ್ನೂ ಕೆಲವು ಕಡೆ ಶಿಖರದ ಮಾದರಿಗಳನ್ನು ಬಿಡಿಸಲಾಗಿದೆ. ಹರಿಹರ, ಬಳ್ಳೇಶ್ವರ, ನಂದೀತಾವರೆ, ನೀಲಗುಂದ, ಬಾಗಳಿಗಳ ದೇವಾಲಯಗಳ ಗರ್ಭಗುಡಿಗಳ ಹೊರಭಾಗದ ಮಧ್ಯೆ ಭಿತ್ತಿಯಲ್ಲಿ ದೇವಕೋಷ್ಠಗಳಿದ್ದು, ಕೆಲವು ದೇವಕೋಷ್ಠಗಳಲ್ಲಿ ಮೂರ್ತಿಗಳಿವೆ. ಈ ದೇವಕೋಷ್ಟಗಳನ್ನು ಉತ್ತಮ ರೀತಿಯಲ್ಲಿ ಅಲಂಕರಿಸಲಾಗಿರುತ್ತದೆ. ಹಲವಾಗಲು, ಬಳ್ಳೇಶ್ವರಗಳ ಪೂರ್ವ ಭಾಗದಲ್ಲಿ ಪುಷ್ಪ ಜಾಲಂಧ್ರ(ಜಾಲಕ)ಗಳಿವೆ. ನೀಲಗುಂದದ ಭೀಮೇಶ್ವರ ದೇವಾಲಯದ ಪೂರ್ವ ಭಾಗದ ಭಿತ್ತಿಯಲ್ಲಿ ಕೇವಲ ಪುಷ್ಪಗಳ ಅಲಂಕಾರವಿದ್ದು, ಅಲ್ಲಿ ಜಾಲಂಧ್ರಗಳಿಲ್ಲ.

ಪ್ರಸ್ತರ :- ಭಿತ್ತಿಯ ಮೇಲೆ ಇರುವ 'ಪ್ರಸ್ತರ'ವು ಷಡ್ವರ್ಗ ಕ್ರಮದಲ್ಲಿ ಮೂರನೇ ಭಾಗವಾಗಿದೆ. ಇದು ಭಿತ್ತಿಯ ಸ್ತಂಭಗಳ ತುದಿಯಿಂದ ಆರಂಭವಾಗಿದ್ದು, ಉತ್ತರ, ವಾಜನ, ವಲಭೀ, ಕಪೋತ, ಆಲಿಂಗ, ಅಂತರಿಕ, ಪ್ರತೀ, ವಾಜನ ಈ ಅಂಗಗಳನ್ನು ಹೊಂದಿರುತ್ತದೆ. ಈ ರಚನೆಯು ಮಳೆಯಿಂದ ದೇವಾಲಯವನ್ನು ರಕ್ಷಿಸುತ್ತದೆ. ಚನ್ನಗಿರಿ , ಬಾಗಳಿ, ನೀಲಗುಂದ, ಹರಿಹರ, ಬೆಳಗುತ್ತಿ, ಕಲ್ಕೆರೆ, ಮೊದಲಾದೆಡೆ ಪ್ರಸ್ತರದಲ್ಲಿನ ಈ ವಿವಿಧ ಭಾಗಗಳನ್ನು ಕಾಣಬಹುದು. ಈ ಭಾಗವನ್ನು ಕೆಲವು ದೇವಾಲಯಗಳಲ್ಲಿ ಕೀರ್ತಿಮುಖಗಳಿಂದ, ಪುಷ್ಪಗಳಿಂದ ಅಲಂಕರಿಸಲಾಗಿದೆ. ಹಾಗೆಯೇ ಜಿಲ್ಲೆಯ ಬಹುತೇಕ ದೇವಾಲಯಗಳಲ್ಲಿನ ಕಪೋತ ಭಾಗವು ಸುತ್ತಲೂ ಹೊರಬಾಗಿದ್ದು, ಮುಂದೆ ಚಾಚಿದಂತಿರುತ್ತದೆ. (ಅಂಗ್ಲ ವರ್ಣಮಾಲೆ ' ಎಸ್ ' ಆಕಾರದಂತಿರುವ ಕಪೋತ ಭಾಗವು ನಿರ್ಥಡಿ, ಮಾಯಕೊಂಡ, ಕೊಣಚಗಲ್ಲು, ಕೊಡದಗುಡ್ಡದ ದೇವಾಲಯದಲ್ಲಿ ಕಂಡುಬರುತ್ತದೆ).

ಮೇಲ್ಕಟ್ಟಡ :- ಪ್ರಸ್ತರದ ಮೇಲೆ ಇರುವುದೇ ' ಮೇಲ್ಕಟ್ಟಡ ' ಇಲ್ಲಿ ಷಡ್ವರ್ಗ ಕ್ರಮದ ನಾಲ್ಕು - ಐದು - ಆರನೇ ಭಾಗಗಳಾದ ಗ್ರೀವ, ಶಿಖರ ಮತ್ತು ಸ್ತೂಪಿ- ಈ ಭಾಗಗಳಿರುತ್ತವೆ. ಗ್ರೀವದಲ್ಲೂ ಕೋಷ್ಠಗಳಿದ್ದು, ಅದರಲ್ಲಿ ದೇವತಾ ಶಿಲ್ಪಗಳಿರುತ್ತವೆ. ಇದರ ಮೇಲಿನ ಶಿಖರವು ಐದನೇ ಭಾಗವಾಗಿದೆ. ಶಿಖರವು ಬೇರೆ ಬೇರೆ ಆಕಾರದಲ್ಲಿ ರಚಿಸಲ್ಪಡುವುದರಿಂದ, ಆಕಾರಕ್ಕೆ ತಕ್ಕಂತೆ ಅವು ವಿಷ್ಣುಛಂದ, ಬ್ರಹ್ಮ ಛಂದ, ರುದ್ರ ಛಂದ, ಶಾಲಾಕಾರ, ಗಜಪೃಷ್ಠಾಕಾರ ಎಂದು ವಿವಿಧ ಹೆಸರುಗಳನ್ನು ಪಡೆಯುತ್ತವೆ. ಇವು ಪ್ರಧಾನವಾಗಿ ' ನಾಸಿ ' ಗಳಿಂದ ಅಲಂಕರಿಸಲ್ಪಟ್ಟಿರುತ್ತವೆ. ಮೇಲ್ಕಟ್ಟಡದ ಒಂದು ಭಾಗವಾದ ಶಿಖರವು ಈ ಜಿಲ್ಲೆಯ ಬಹುತೇಕ ದೇವಾಲಯಗಳಲ್ಲಿ ನಾಶವಾಗಿದೆ. ಉಳಿದ ಕೆಲವು ದೇವಾಲಯಗಳ ಶಿಖರಗಳಲ್ಲಿ ಪ್ರಧಾನವಾಗಿ ಕದಂಬ ನಾಗರ (ಫಾಂಸಾನ) , ದ್ರಾವಿಡ, ವೇಸರ ಶೈಲಿಯ ಶಿಖರಗಳು ಕಂಡುಬರುತ್ತವೆ. ಬೆಳಗುತ್ತಿ, ಅವರಗೊಳ್ಳ, ಕಂದಗಲ್ಲು, ಚಿಕ್ಕಬಿದರೆ, ಕಲ್ಲೇದೇವರಪುರಗಳಲ್ಲಿ ಕದಂಬ ನಾಗರ ಶೈಲಿಯ ಶಿಖರಗಳಿವೆ. ನೀಲಗುಂದದ ಮುಕ್ತಿ ರಾಮೇಶ್ವರ, ಕಲ್ಕೆರೆಯ ಬಳ್ಳೇಶ್ವರ ದೇವಾಲಯಗಳ ಮೇಲಿನ ಶಿಖರಗಳು ಕದಂಬ ನಾಗರ ಶೈಲಿಯಲ್ಲಿದ್ದವೆಂದು ಹೇಳಲು ಈಗ ಅಲ್ಲಿ ಉಳಿದಿರುವ ತಳಗಳೇ ಸಾಕ್ಷಿಯಾಗಿವೆ. ನಿರ್ಥಡಿ, ಮಾಯಕೊಂಡ, ಗೋಪಗೊಂಡನಹಳ್ಳಿಗಳಲ್ಲಿ ದ್ರಾವಿಡ ಮಾದರಿಯ ಶಿಖರಗಳಿದ್ದರೆ, ನೀಲಗುಂದದ ಭೀಮೇಶ್ವರ ದೇವಾಲಯದ ಮೇಲಿನ ಶಿಖರವು ವೇಸರ ಶೈಲಿಯದ್ದೆನಿಸುತ್ತದೆ.

ಊರ್ಧ್ವಕ್ರಮದಲ್ಲಿ ಕೊನೆಯದಾದ ಮತ್ತು ಮುಖ್ಯವಾದ ಭಾಗವೇ ಸ್ತೂಪಿ (ಕಲಶ) ಇದರಲ್ಲೂ ಘಟ, ಗಲ ಮತ್ತು ಮುಕುಲಗಳೆಂಬ ಮುಖ್ಯ ಅಂಗಗಳಿರುತ್ತವೆ. ಕಲಶ ಸ್ಥಾಪನೆಯಿಂದಲೇ ದೇವಾಲಯದ ಪೂಜಾ ವಿಧಿಗಳ ಆರಂಭವಾಗುವುದರಿಂದ ಧಾರ್ಮಿಕ ದೃಷ್ಟಿಯಿಂದ ಇದು ಮುಖ್ಯ ಅಂಗವಾಗಿದೆ. ಬೆಳಗುತ್ತಿ, ಚಿಕ್ಕಬಿದರೆ ದೇವಾಲಯಗಳಲ್ಲಿನ ಶಿಖರಗಳ ಮೇಲಿನ ಕಲಶ ಭಾಗವು ಶಿಲೆಯದಾಗಿರುವುದು ವಿಶೇಷ. ಕೆಲವು ಎತ್ತರದ ದೇವಾಲಯಗಳಲ್ಲಿ ಮೇಲ್ಕಟ್ಟಡದಲ್ಲಿ, ಗ್ರೀವದ ಕೆಳಗೆ ಚೌಕೋನಕಾರದ ಕೂಟ, ಆಯತಾಕಾರದ

ಶಾಲಾ, ಗಜಪೃಷ್ಠಾಕಾರದ ಪಂಜರ, ನಾಸಿ, ನಾಸಿಕೋಷ್ಠ, ವೃತ್ತಸ್ಫುಟಿಕಗಳಿಂದ ಕೂಡಿದ ತಲ,ಹಾರಗಳು ಇರುತ್ತವೆ. ಈ ಅಲಂಕಾರವನ್ನು ನಿಲಗುಂದದ ಭೀಮೇಶ್ವರ ದೇವಾಲಯದಲ್ಲಿ ಕಾಣಬಹುದು. ಕಲ್ಲೇದೇವರಪುರದ ಕಲ್ಲೇಶ್ವರ , ನೀಲಗುಂದದ ಭೀಮೇಶ್ವರ , ಬೆಳಗುತ್ತಿ ಕೇಶವ ದೇವಾಲಯಗಳಲ್ಲಿ ಶುಖನಾಸಿ ಭಾಗವು ಕಂಡುಬರುತ್ತದೆ.

ಗರ್ಭಗೃಹ :- ಇಲ್ಲಿ ಮೂಲ ದೇವರ ಪ್ರತಿಷ್ಠಾಪನೆಯಾಗಿರುತ್ತದೆ. ಕೆಲವೊಮ್ಮೆ ಗರ್ಭಗೃಹದ ಸುತ್ತ ದೇವಾಲಯ ಒಳಭಾಗದಲ್ಲಿ 'ಪ್ರದಕ್ಷಿಣಾಪಥ' ಇರುತ್ತದೆ. ಕೆಲವೊಮ್ಮೆ ಗರ್ಭಗೃಹದಿಂದ ಹೊರಚಾಚಿರುವ ವಿವಿಧಾಕಾರದ ಜಲಪ್ರಣಾಳಿಯೂ ಇರುವುದು. ಗರ್ಭಗೃಹದ ಸುತ್ತ ಪ್ರದಕ್ಷಿಣಾ ಪಥ ಇರುವ ದೇವಾಲಯಗಳನ್ನು ' ಸಂದಾರ ' ದೇವಾಲಯಗಳೆಂದು ಆ ರೀತಿ ಇರದೇ ಇರುವ ದೇವಾಲಯಗಳನ್ನು 'ನಿರಂಧಾರ ' ದೇವಾಲಯಗಳೆಂದು ಕರೆಯಲಾಗುತ್ತದೆ. ಈ ಜಿಲ್ಲೆಯ ಯಾವ ದೇವಾಲಯಗಳ ಗರ್ಭಗುಡಿಗಳ ಸುತ್ತ (ಒಳಭಾಗದಲ್ಲಿ) ಪ್ರದಕ್ಷಿಣಾ ಪಥ ಕಂಡುಬರುವುದಿಲ್ಲ. ಆದುದರಿಂದ ಈ ಜಿಲ್ಲೆಯ ದೇವಾಲಯಗಳನ್ನು ನಿರಂಧಾರ ದೇವಾಲಯಗಳ ಗುಂಪಿಗೆ ಸೇರಿಸಬಹುದು. ಈ ದೇವಾಲಯಗಳಲ್ಲಿನ ಗರ್ಭಗುಡಿಗಳು ಹೆಚ್ಚಾಗಿ ಚೌಕಾಕಾರವಾಗಿದ್ದರೂ ಸಹ ಕೆಲವು ದೇವಾಲಯಗಳು ಆಯತಾಕಾರವಾಗಿರುವುದನ್ನು ಕಾಣಬಹುದು. (ನೀಲಗುಂದದ ಅನಂತಶಯನ ದೇವಾಲಯ) ಈ ಗರ್ಭಗುಡಿಯಿಂದ ಹೊರಚಾಚಿರುವ ಜಲ ಪ್ರಣಾಳಿಯು ಆಸಗೋಡಿನ ಶಂಭು ಲಿಂಗೇಶ್ವರ ದೇವಾಲಯದಲ್ಲಿ ಹಸುವಿನ ಬಾಯಿಂದ ಹೊರ ಬಂದಂತಿದ್ದರೆ (ಗೋಮುಖ ಪ್ರಣಾಳ) ನೀಲಗುಂದ, ಆನೆಕೊಂಡ, ಬೇತೂರು, ಕಲ್ಕೆರೆಗಳಲ್ಲಿ ಸಿಂಹದ ಬಾಯಿಯಿಂದ ಹೊರಬಂದತಿದೆ (ಸಿಂಹ ವಕ್ತ್ರ ಪ್ರಣಾಳ). ಹರಪನಹಳ್ಳಿಯ ಜಿನಬಸದಿ, ನಿರ್ಥಡಿಯ ರಂಗನಾಥಸ್ವಾಮಿ, ಚನ್ನಗಿರಿಯ ಕಲ್ಲೇಶ್ವರಗಳ ಜಲ ಪ್ರಣಾಳಿಯು ಸಾಧಾರಣವಾಗಿ ಹೊರಬಂದಂತೆ ಇದ್ದರೂ ಸಹ ಅದು ಕಮಲದ ಮೊಗ್ಗಿನಿಂದ ಇಳಿ ಬಿದ್ದ ರೀತಿಯಲ್ಲಿದೆ. ಗುಡಿಹಳ್ಳಿಯ ಕಲ್ಲೇಶ್ವರ , ಅರಸಿಕೆರೆಯ ಹರಿಹರೇಶ್ವರ ದೇವಾಲಯಗಳ ಜಲ ಪ್ರಣಾಳಿಯು ಆನೆ ಸೊಂಡಿಲಿನಿಂದ ಹೊರಬಂದ ರೀತಿಯಲ್ಲಿದೆ(ಗಜವಕ್ತ್ರ ಪ್ರಣಾಳ). ಚಿಗಟೇರಿಯ ರಾಮಲಿಂಗೇಶ್ವರ, ಚದರುಗೋಳದ ಕಲ್ಲೇಶ್ವರ , ಬೆಳಗುತ್ತಿಯ ಸಿದ್ಧಲಿಂಗೇಶ್ವರ ಜಲ ಪ್ರಣಾಳವು ಮಕರದ ಬಾಯಿಯಿಂದ ಹೊರಬಂದ ರೀತಿಯಲ್ಲಿದೆ(ಮಕರ ವಕ್ತ್ರ ಪ್ರಣಾಳ).

ಅಂತರಾಳ :- ಮುಖ್ಯ ಗರ್ಭಗೃಹಗಳ ಮುಂದೆ ಸಾಮಾನ್ಯವಾಗಿ ಅಂತಾಳವಿರುತ್ತದೆ. ಒಂದಕ್ಕಿಂತ ಹೆಚ್ಚಿನ ಗರ್ಭಗುಡಿಗಳಿದ್ದಾಗ ಅವುಗಳ ಮುಂದೆಯೂ ಅಂತರಾಳಗಳಿರುವುದನ್ನು ಈ ಜಿಲ್ಲೆಯ ಬಳ್ಳೇಶ್ವರ, ಬೆಳಗುತ್ತಿ, ಕಲ್ಕೆರೆ, ಚಿಗಟೇರಿ, ನೀಲಗುಂದ, ಹಲವಾಗಲು, ಚನ್ನಗಿರಿ, ದೇವರಬೆಳಕೆರೆಯ ದೇವಾಲಯಗಳಲ್ಲಿ ಕಾಣಬಹುದು. ಇವುಗಳು ತೆರೆದ ಇಲ್ಲವೇ, ಮುಚ್ಚಿದ ರೀತಿಯಲ್ಲಿವೆ.

ನವರಂಗ :- ಅಂತರಾಳಗಳ ಮುಂದೆ ನವರಂಗವಿರುತ್ತದೆ. ನವರಂಗವು ವಿಶಾಲವಾದ ರಚನೆಯನ್ನು ಹೊಂದಿದ್ದು, ಹೆಚ್ಚು ಅಲಂಕೃತಗೊಂಡಿರುತ್ತದೆ. ಈ ಜಿಲ್ಲೆಯ ನವರಂಗದಲ್ಲಿ (ಅಂತರಾಳಗಳ ಮುಂಭಾಗದಲ್ಲಿ ಹಾಗು ಪ್ರವೇಶದ್ವಾರದ ಒಳಭಾಗದ ಭಿತ್ತಿಯ ಎರಡೂ ಕಡೆ) ಕೋಷ್ಠಗುಡಿಗಳಿರುದನ್ನು ಕಾಣಬಹುದು. ಇವುಗಳಲ್ಲಿ ದೇವತಾಮೂರ್ತಿಗಳನ್ನು ಇಡಲಾಗಿರುತ್ತದೆ. ಚಿಕ್ಕಬಿದರೆಯ ಕಲ್ಲೇಶ್ವರ, ನಂದೀತಾವರೆಯ ಅಮೃತಲಿಂಗ ಮಾಣಿಕೇಶ್ವರ , ಬಾಗಳಿಯ ಇಷ್ಟ ಲಿಂಗೇಶ್ವರ , ಕಲ್ಲೇದೇವರ ಪುರದ ತ್ರಿಕೂಟ ಲಿಂಗೇಶ್ವರ, ಬಳ್ಳೇಶ್ವರ ಹಾಗು ಮುಂತಾದ ದೇವಾಲಯಗಳಲ್ಲಿ ಕೋಷ್ಠಗುಡಿಗಳನ್ನು ಕಾಣಬಹುದು. ನಂದಿಗುಡಿ, ಕಲ್ಲೇದೇವರ ಪುರ, ಚಿಕ್ಕಬಿದರೆ, ಗುಡಿಹಳ್ಳಿಯ ದೇವಾಲಯಗಳ ನವರಂಗದಲ್ಲಿನ ಮಧ್ಯ ಭಾಗದ ವೇದಿಕೆಯಲ್ಲಿ ನಂದಿಗಳಿವೆ.

ಮುಖಮಂಟಪ :- ನವರಂಗದ ನಂತರ ಇರುವುದೇ 'ಮುಖಮಂಟಪ'. ಇದು ದೇವಾಲಯದ 'ಪ್ರವೇಶ'ದಲ್ಲೇ ಇರುವುದು. ಇದರಲ್ಲಿ ಕಕ್ಷಾಸನವೂ ಇರುತ್ತದೆ. ಆನೆಕೊಂಡ , ಗಂಗಗೊಂಡನಹಳ್ಳಿ ನೀಲಗುಂದ, ಕಲ್ಕೆರೆ, ಹರಿಹರ, ಎಲೆಬೇತೂರು, ನೀರ್ಥಡಿ, ಮಾಯಕೊಂಡ ಮುಂತಾದೆಡೆಯ ದೇವಾಲಯಗಳಲ್ಲಿ ಮುಖ ಮಂಟಪಗಳನ್ನು ಕಾಣಬಹುದು. ಆನೆಕೊಂಡ ಬಳ್ಳೇಶ್ವರ, ಗಂಗಗೊಂಡನಹಳ್ಳಿ, ಕಲ್ಕೆರೆ ದೇವಾಲಯಗಳ ಮುಖ ಮಂಟಪಗಳಲ್ಲಿ ಕಕ್ಷಾಸನಗಳಿವೆ.

ನಂದಿ ಮಂಟಪ :- ಈ ಜಿಲ್ಲೆಯ ದೇವಾಲಯಗಳಲ್ಲಿ ಹೊಂದಿಕೊಂಡಂತೆ ಇಲ್ಲವೇ ಪ್ರತ್ಯೇಕವಾಗಿರುವ ನಂದಿ ಮಂಟಪಗಳನ್ನು ನಂದಿತಾವರೆ, ನೀಲಗುಂದ, ಆನೆಕೊಂಡಗಳಲ್ಲಿ ಕಾಣಬಹುದು. ನಂದಿ ಮಂಟಪದಂತೆಯೇ ಇರಬೇಕಾದ ಕಲ್ಯಾಣ ಮಂಟಪ, ರಂಗ ಮಂಟಪಗಳಾಗಲಿ ಈ ಜಿಲ್ಲೆಯ ಯಾವ ದೇವಾಲಯಗಳಲ್ಲೂ ಕಾಣಬರುವುದಿಲ್ಲ.

ಈ ಮೇಲಿನ ಮಂಟಪಗಳು ಅಲಂಕೃತ ಸ್ತಂಭಗಳು, ವಿತಾನ (ಒಳ ಛಾವಣಿ), ದ್ವಾರ, ತೋರಣ ಮತ್ತು ಸೋಪಾನಗಳಿಂದ ಕೂಡಿರುತ್ತವೆ.

ಕಂಭ (ಸ್ತಂಭ):- ಕಂಭದಲ್ಲಿ ಪೀಠ, ಪಾದ, ದಂಡ, ದಂಡಾಗ್ರ, (ಕಲಶ, ತಾಟಿಕಾ, ಘಟ, ಮಂಡಿ, ಫಲಕ), ವೀರಕಂಠ, ಬೋದಿಗೆ- ಈ ಭಾಗಗಳಿದ್ದು, ಇವುಗಳಲ್ಲೂ ಉಪವಿಧಗಳಿವೆ. ಅಲ್ಲದೆ, ರುಚಕ ಕಂಭ, ಪಾಲಿಕಾ ಕಂಭ, ಶ್ರೀಕಾರ ಕಂಭ, ಸಂಯೋಗಸ್ತಂಭ, ಕೋಷ್ಠಸ್ತಂಭ, ಮಿಶ್ರಕ ಸ್ತಂಭ, ಚಿತ್ರಖಂಡ ಸ್ತಂಭ, ಪದ್ಮಕಾಂತ ಸ್ತಂಭ- ಇತ್ಯಾದಿ ಕಂಭ ಪ್ರಕಾರಗಳು ಇವೆ. ದಾವಣಗೆರೆಯ ದೇವಾಲಯಗಳ ಕಂಭಗಳಲ್ಲಿ ಆಯತಾ, ಚತುರಶ್ರ, ನಕ್ಷತ್ರಾಕಾರದ, ವೃತ್ತಾಕಾರದ ಕಂಭಗಳನ್ನು ಕಾಣಬಹುದು, ದಾವಣಗೆರೆ ಜಿಲ್ಲೆಯ ಬಹುತೇಕ ದೇವಾಲಯಗಳಲ್ಲಿ ಮಿಶ್ರಕ ಕಂಭ, ಶ್ರೀಕಾರ ಕಂಭ ,ಚಿತ್ರಖಂಡ ಹಾಗು ಪದ್ಮಕಾಂತ ಕಂಭಗಳಿವೆ.

ನೀಲಗುಂದ ,ಬಾಗಳಿ , ಹರಿಹರ ಮೊದಲಾದದೆಡೆಯ ಕಲ್ಯಾಣಿ ಚಾಲುಕ್ಯ ಮತ್ತು ಹೊಯ್ಸಳ ಕಾಲದ ದೇವಾಲಯಗಳಲ್ಲಿ ಹೆಚ್ಚಾಗಿ ಶ್ರೀಕಾರ ಕಂಭ (ತಿರುಗುಣಿ ಯಂತ್ರದಿಂದ ತಿರುಗಿಸಲ್ಪಟ್ಟ ಕಂಭಗಳು) ಕಂಡುಬಂದರೆ, ವಿಜಯನಗರ ಕಾಲದ ನಿರ್ಥಡಿ , ಮಾಯಕೊಂಡ, ಕೊಣಚಗಲ್ಲಿನ ದೇವಾಲಯಗಳಲ್ಲಿ ಚಿತ್ರಖಂಡ ಹಾಗು ಪದ್ಮ ಕಾಂತ ಸ್ತಂಭಗಳನ್ನು ಕಾಣಬಹುದು.

ಮುಚ್ಚಿಗೆ (ವಿತಾನ) :- ಮುಚ್ಚಿಗೆಯು ಬೇರೆ ಬೇರೆ ಆಕಾರಗಳಿದ್ದು, ಇದರಲ್ಲಿ ಅಷ್ಟದಿಕ್ಪಾಲಕರು, ಮತ್ತಿತರ ಶಿಲ್ಪಗಳು, ಪದ್ಮ ಮಂಡಲ- ಮುಂತಾದವುಗಳನ್ನು ಕೆತ್ತಲಾಗಿರುತ್ತದೆ. ಗರ್ಭಗುಡಿ, ಅಂತರಾಳ, ನವರಂಗದ ಮೇಲ್ಕಟ್ಟಿಗೆಗೆ ಎ.ಎಂ. ಅಣ್ಣಿಗೇರಿಯವರು 'ಛತ್ತು' ಎಂದು ಕರೆದಿರುತ್ತಾರೆ. ಕೆಲವು ಲಾಕ್ಷಣಿಕರು ಈ ಭಾಗವನ್ನು 'ವಿತಾನ'ವೆಂದು ಕರೆದಿರುತ್ತಾರೆ. ನಾನು ಇದೇ ಭಾಗವನ್ನು 'ಮುಚ್ಚಿಗೆ' ಎಂದು ಕರೆದಿರುತ್ತೇನೆ. ದಾವಣಗೆರೆ ಜಿಲ್ಲೆಯ ದೇವಾಲಯಗಳ ಗರ್ಭಗುಡಿ, ಅಂತರಾಳ,ನವರಂಗ, ಮುಖಮಂಟಪದಲ್ಲಿನ ಮುಚ್ಚಿಗೆಯನ್ನು ಅರಳಿದ ತಾವರೆಯಿಂದ ಆಲಂಕರಿಸಿರುವುದನ್ನು ಬಾಗಳಿ, ನೀಲಗುಂದ, ಹಲವಾಗಲು, ಕೊಣಚಗಲ್ಲು, ಕೊಡದಗುಡ್ಡ ಇನ್ನೂ ಮೊದಲಾದ ದೇವಾಲಯಗಳಲ್ಲಿ ಕಾಣಬಹುದು. ಹಾಗು ಅರಳಿದ ತಾವರೆಯಿಂದ ಇಳಿಬಿದ್ದ ಮೊಗ್ಗಿನ ರೀತಿಯ ಅಲಂಕಾರವನ್ನು (ಪದ್ಮ ಶಿಲಾ) ಹರಿಹರದ ಲಕ್ಷ್ಮಿ ದೇವಾಲಯದ ಮುಖ ಮಂಟಪದ ಮುಚ್ಚಿಗೆಯಲ್ಲಿ ನಾವೀಗ ಕಾಣಬಹುದು. ಇದಕ್ಕೆ ಭಿನ್ನವಾಗಿ ನಿರ್ಥಡಿ, ಆನೆಕೊಂಡ, ಬೇತೂರು, ಮಸಣಕೆರೆ, ಕಲ್ಕೆರೆಯ ನವರಂಗಗಳ ಮುಚ್ಚಿಗೆಗಳಲ್ಲಿ ವಾಹನ ಸಮೇತ ದಿಕ್ಪಾಲಕರನ್ನು ಇಲ್ಲವೇ ಕೇವಲ ಅಷ್ಟ ದಿಕ್ಪಾಲಕರನ್ನಷ್ಟೇ ಸ್ಥಾನಿಕರಾಗಿರುವಂತೆ ಕೆತ್ತಿ, ಅವರ ಮಧ್ಯದಲ್ಲಿ ತಾಂಡವೇಶ್ವರ ಇಲ್ಲವೇ ಗಜಸಂಹಾರ ಮೂರ್ತಿಯನ್ನು ಕೆತ್ತಿರುವುದನ್ನು ನೋಡಬಹುದು.

ದ್ವಾರ :- ದ್ವಾರವು ಲಲಾಟ, ಉತ್ತರಾಂಗ, ದ್ವಾರಶಾಖಾ, ಪೇದ್ಯಾಪಿಂಡ, ಉದುಂಬರ ಮತ್ತು ಚಂದ್ರಶಿಲಾಗಳಿಂದ ಕೂಡಿದ್ದು, ದ್ವಾರಶಾಖೆಯಲ್ಲಿ ವಿವಿಧ ಅಲಂಕರಣಗಳಿರುತ್ತವೆ. ಅಂತೇ, ತೋರಣದಲ್ಲೂ ಪತ್ರ, ಮಕರ, ಚಿತ್ರ- ಎಂಬ ವಿವಿಧಾಲಂಕರಣ ರೀತಿಗಳನ್ನು ಗುರುತಿಸಬಹುದು.

ದೇವಾಲಯದ ಅವಶ್ಯಕಾಂಗಗಳಲ್ಲಿ ' ದ್ವಾರ ' (ಬಾಗಿಲು)ವು ಒಂದಾಗಿದ್ದು, ಗರ್ಭಗೃಹ , ನವರಂಗ ಇತ್ಯಾದಿಗಳು ದ್ವಾರಯುಕ್ತವಾಗಿರುತ್ತವೆ. ದ್ವಾರದ ಹೊಸ್ತಲಿಗೆ ' ಉದುಂಬರ ' ಎನ್ನಲಾಗಿದೆ. ಈ ಭಾಗದಲ್ಲಿ ಸಾಮಾನ್ಯವಾಗಿ ಪದ್ಮಾಲಂಕಾರವಾಗಿರುತ್ತದೆ. ದ್ವಾರದ ಹೊಸ್ತಲಿಗೂ ಅಂದರೆ ಕೆಳಗೆ ಅಂದರೆ ನೆಲದ ಮೇಲೆ ಎದ್ದು ಕಾಣುವಂತಹ ಚಂದ್ರಾಕಾರದಂತಹ ರಚನೆಯನ್ನು 'ಚಂದ್ರಶಿಲಾ' ಎಂದು ಕರೆಯಲಾಗುತ್ತದೆ. ಹರಿಹರದ ಹರಿಹರೇಶ್ವರ , ಮಸಣಕೆರೆಯ ಈಶ್ವರ , ಹಲವಾಗಲು ಕಲ್ಲೇಶ್ವರ , ಬಾಗಳಿಯ ಕಲ್ಲೇಶ್ವರ ದೇವಾಲಯ, ಬಿಳಿಚೋಡಿನ ಈಶ್ವರ ದೇವಾಲಯಗಳಲ್ಲಿ ಚಂದ್ರಶಿಲಾವು ಅಗಲವಾಗಿಯೂ ಸುಂದರವಾಗಿಯೂ ಇದೆ. ಇದು ಪ್ರಾಚೀನ ಕಾಲದ ದೇಗುಲಗಳಲ್ಲಿ ಕಂಡುಬಂದರೆ, ಮಧ್ಯಯುಗೀನ ಕಾಲದ ದೇವಾಲಯಗಳಲ್ಲಿ ಉದುಂಬರವೇ ಹೆಚ್ಚಾಗಿ ಕಂಡುಬರುತ್ತದೆ.

ದ್ವಾರದ ಕೆಳಭಾಗದಲ್ಲಿ ದ್ವಾರ ಪಾಲಕರಿರುವುದು ಸಾಮಾನ್ಯ. ಇದನ್ನು ನಾನು 'ಪೇದ್ಯಾ' ಭಾಗವೆಂದು ಕರೆದಿದ್ದೇನೆ. ಈ ಜಿಲ್ಲೆಯ ದೇವಾಲಯಗಳ ಪೇದ್ಯಾ ಭಾಗದಲ್ಲಿ ದ್ವಾರಪಾಲಕ ಶಿಲ್ಪಗಳು ಆಯಾ ಪಂಥಗಳಿಗನುಗುಣವಾಗಿ ಕಂಡುಬರುತ್ತವೆ. ಆದರೆ ಅರಸಿಕೆರೆಯ ಹರಿಹರೇಶ್ವರ ಮತ್ತು ಹರಿಹರದ ಹರಿಹರೇಶ್ವರ ದೇವಾಲಯಗಳ ದ್ವಾರದ ಬಲಬದಿಯಲ್ಲಿ ಶೈವದ್ವಾರ ಪಾಲಕರು, ಎಡಬದಿಯಲ್ಲಿ ವೈಷ್ಣವ ದ್ವಾರಪಾಲಕರಿದ್ದಾರೆ/ ಈ ದ್ವಾರಪಾಲಕರ ಜೊತೆಯಲ್ಲಿ ಗಂಗೆ, ಯಮುನೆಯರ ಶಿಲ್ಪಗಳನ್ನು ಕೆತ್ತಿರುವುದನ್ನು ಬಾಗಳಿಯ ಕಲ್ಲೇಶ್ವರ ದೇವಾಲಯಗಳಲ್ಲಿ ನೋಡಬಹುದು. ಕುಂಚೂರು ಕಲ್ಲೇಶ್ವರ ಮತ್ತು ಚಿಕ್ಕಬಿದರೆಯ ಕಲ್ಲೇಶ್ವರ ದೇವಾಲಯಗಳಲ್ಲಿ ಶಂಖ ಹಾಗು ಪದ್ಮ ನಿಧಿಗಳ ಅಲಂಕಾರವಿದೆ. ಜಿಗಳಿಯ ರಂಗನಾಥ ದೇವಾಲಯದ ಪೇದ್ಯಾಭಾಗದಲ್ಲಿ ಪುಷ್ಪ, ಫಲಗಳನ್ನು ಹಿಡಿದು ನಿಂತಿರುವ ಚಾಮರಧಾರಿಣಿಯರಿದ್ದಾರೆ. ಪೇದ್ಯಾಭಾಗವು ಅಲಂಕೃತವಾಗಿಲ್ಲದಿದ್ದಾಗ ಅದನ್ನು ' ಪೇದ್ಯಾಪಿಂಡ 'ವೆಂದು ಕರೆಯಲಾಗುತ್ತದೆ.

ಪೇದ್ಯಾ ಭಾಗದ ಮೇಲಿನ ದ್ವಾರವು ವಿವಿಧ ಶಾಖೆಗಳಿಂದ ಕೂಡಿದ್ದು, ಅಲಂಕೃತವಾಗಿರುತ್ತದೆ. ಅವುಗಳಲ್ಲಿ ರತ್ನ, ಪುಷ್ಪ, ವಲ್ಲಿ, ಸ್ತಂಭ, ನಾಗ, ವಿದ್ಯಾಧರ ,ಮಿಥುನ, ವ್ಯಾಳ, ಶಾಖೆಗಳಿಂದ ಕೂಡಿರುತ್ತದೆ. ಬಾಗಳಿಯ ಕಲ್ಲೇಶ್ವರ ದೇವಾಲಯದ ನವರಂಗದ ಪ್ರವೇಶ ದ್ವಾರವು ಏಳು ಶಾಖೆಗಳಿಂದ ಕೂಡಿದ್ದರೆ, ಅದೇ ದೇವಾಲಯದ ಪೂರ್ವದ್ವಾರವು ಒಂಭತ್ತು ಶಾಖೆಗಳಿಂದ ಕೂಡಿದೆ. ಈ ಜಿಲ್ಲೆಯ ಉಳಿದ ದೇವಾಲಯಗಳಲ್ಲಿ ಮೂರರಿಂದ ಐದು ಶಾಖೆಗಳು ಹೆಚ್ಚಾಗಿ ಕಂಡುಬರುತ್ತವೆ. ಈ ಶಾಖೆಗಳ ಎರಡೂ ಬದಿಗೆ ಜಾಲಂಧ್ರಗಳನ್ನು ಅಳವಡಿಸಿರುವುದನ್ನು ನಂದಿಗುಡಿಯ ಈಶ್ವರ ದೇವಾಲಯದ ಅಂತರಾಳ ದ್ವಾರದ ಎರಡೂ ಬದಿಗೂ ಕಾಣಬಹುದು.

ದ್ವಾರ ಬಂಧದ ಮೇಲ್ಭಾಗದಲ್ಲಿ ಪಟ್ಟಿಕೆಯಂತೆ ಅಡ್ಡಲಾಗಿರುವ ಭಾಗವನ್ನು 'ಲಲಾಟ' ಎಂದು ಕರೆಯುತ್ತಾರೆ. ಈ ಭಾಗದಲ್ಲಿ ಗಜಲಕ್ಷ್ಮಿ ಶಿಲ್ಪವಿರುವುದನ್ನು ಈ ಜಿಲ್ಲೆಯ ದೇವಾಲಯಗಳಲ್ಲಿ ಕಾಣಬಹುದು. ಆದರೆ, ಚಿಕ್ಕಬಿದರೆಯ ಗರ್ಭಗುಡಿಯ ಲಲಾಟದಲ್ಲಿ ಪದ್ಮಾಸನದಲ್ಲಿ ಕುಳಿತ ಲಕ್ಷ್ಮಿ ಶಿಲ್ಪವಿದ್ದು, ಆ ಶಿಲ್ಪದ ಎರಡೂ ಬದಿಗೂ ಚಾಮರಧಾರಿಣಿಯರನ್ನು ಕೆತ್ತಲಾಗಿದೆ. ಕಲ್ಲೇದೇವರ ಪುರದ ಕಲ್ಲೇಶ್ವರ ದೇವಾಲಯದ ಲಲಾಟದಲ್ಲಿ ಗಣಪತಿಯ ಶಿಲ್ಪವನ್ನು ಕೆತ್ತಲಾಗಿದೆ.

ಲಲಾಟದ ಮೇಲಿನ ಭಾಗಕ್ಕೆ 'ಉತ್ತರಾಂಗ'ವೆಂದು ಕರೆಯಲಾಗುತ್ತದೆ. ನೀಲಗುಂದ ಭೀಮೇಶ್ವರ ದೇವಾಲಯದ ಅಂತರಾಳದ ಮೇಲಿನ ಉತ್ತರಾಂಗ ಭಾಗದಲ್ಲಿ ಮಕರ ತೋರಣದ ಕೆಳಗೆ ಪತ್ನಿ ಮತ್ತು ವಾಹನ ಸಮೇತರಾಗಿರುವ ತ್ರಿಮೂರ್ತಿಗಳನ್ನು ಕೆತ್ತಲಾಗಿದೆ. ನಂದಿಗುಡಿಯ ಅಂತರಾಳ ದ್ವಾರದ ಉತ್ತರಾಂಗ ಭಾಗದ ಮುಕರ ತೋರಣ ಮಧ್ಯದಲ್ಲಿ ನಾಟ್ಯ ಶಿವನಿದ್ದು, ಶಿವನ ಎರಡೂ ಬದಿಗೂ ಬ್ರಹ್ಮ , ವಿಷ್ಣುವಿದ್ದಾರೆ. ಇದೇ ರೀತಿ ಅಲಂಕಾರವನ್ನು ಬಳ್ಳೇಶ್ವರದ ಬಳ್ಳೇಶ್ವರ ದೇವಾಲಯ , ಆನೆಕೊಂಡದ ಈಶ್ವರ ದೇವಾಲಯ, ಬಿಳಚೋಡಿನ ಈಶ್ವರ ದೇವಾಲಯ, ನಂದಿ ತಾವರೆಯ ಅಮೃತಲಿಂಗ ಮಾಣಿಕೇಶ್ವರ ದೇವಾಲಯಗಳ ಅಂತರಾಳ ಇಲ್ಲವೇ ನವರಂಗದ ದ್ವಾರಗಳಲ್ಲಿ ಕಂಡುಬರುತ್ತವೆ.

ಸೋಪಾನ :- ಎತ್ತರವಾದ ದೇವಾಲಯಗಳನ್ನು ಹತ್ತಿ ಹೋಗಲು ಇರುವ ಮೆಟ್ಟಿಲುಗಳನ್ನು ಸೋಪಾನಗಳೆಂದು ಕರೆಯಲಾಗುತ್ತದೆ. 'ಸೋಪಾನ'ಗಳೂ ವಾಸ್ತುದೃಷ್ಟಿಯಿಂದ ಗಮನಾರ್ಹವಾಗಿದ್ದು, ಇವುಗಳಲ್ಲಿ ಅಶ್ವಪಾದ, ಫಲಕ, ಹಸ್ತಿಹಸ್ತ, ಪಕ್ಷಶಿಲಾ- ಮುಂತಾದ ಅಂಗಗಳೂ, ವಲ್ಲೀ ಮಂಡಲ, ಶಂಖ ಮಂಡಲ, ತ್ರಿಖಂಡಾಕಾರ- ಮುಂತಾದ ವಿಧಗಳೂ ಇವೆ. ಈ ಎಲ್ಲ ಭಾಗಗಳೂ ಶಿಲ್ಪಿಯ ಕೈಚಳಕದಿಂದ ದೇವಾಲಯದಲ್ಲಿ ಆಕರ್ಷಣೀಯ ಭಾಗವಾಗಿ ಪರಿಣಮಿಸುತ್ತದೆ ಎಂದು ಹೇಳಬಹುದು. ಬಳ್ಳೇಶ್ವರದ ಬಳ್ಳೇಶ್ವರ, ನೀಲಗುಂದದ ಭೀಮೇಶ್ವರ, ಕಲ್ಕೆರೆಯ ಬಳ್ಳೇಶ್ವರ, ಬಿಳಚೋಡಿನ ಈಶ್ವರ, ಕೊಣಚಗಲ್ಲಿನ ರಂಗನಾಥ ಸ್ವಾಮಿ ದೇವಾಲಯಗಳ ಮುಖಮಂಟದ ಮುಂಭಾಗದಲ್ಲಿ ಸೋಪಾನಗಳಿವೆ. ಈ ಸೋಪಾನಗಳ ಎರಡೂ ಬದಿಗೂ ಆನೆಯ ಸೊಂಡಿಲಿನಂತೆ ಚಾಚಿರುವ ' ಹಸ್ತಿ ಹಸ್ತ'ಗಳಿವೆ. ಇವುಗಳಲ್ಲಿ ಪದ್ಮದ ಅಲಂಕರಣವನ್ನು ಮಾಡಲಾಗಿದೆ. ಈ ಜಿಲ್ಲೆಯ ದೇವಾಲಯಗಳಲ್ಲಿ ಶಂಖ ಮಂಡಲ ಸೋಪಾನಗಳೇ ಅಧಿಕವಾಗಿವೆ.

ದೀಪಸ್ತಂಭ, ಮಾನಸ್ತಂಭ, ಗರುಡಗಂಭ :- ದೇವಾಲಯದ ಮುಂಭಾಗದಲ್ಲಿ ಹೊರಗಡೆ ಸಾಮಾನ್ಯವಾಗಿ ಬಲಪೀಠ, ದೀಪಸ್ತಂಭ, ಗರುಡಸ್ತಂಭ, ಧ್ವಜಸ್ತಂಭ, ಮಾನಸ್ತಂಭ ಮುಂತಾದ ಸ್ತಂಭಗಳೂ ಇರುತ್ತವೆ. ಆದರೆ ದಾವಣಗೆರೆ ಜಿಲ್ಲೆಯ ದೇವಾಲಯಗಳ ಹಾಗು ಬಸದಿಗಳ ಮುಂಭಾಗದಲ್ಲಿ ದೀಪಸ್ತಂಭ,ಗರುಡಗಂಭ, ಮಾನಸ್ತಂಭಗಳು ಕಂಡುಬರುತ್ತವೆ. ಹರಿಹರದ ಹರಿಹರೇಶ್ವರ ದೇವಾಲಯದ ಮುಂಭಾಗದಲ್ಲಿ ದೀಪಸ್ತಂಭವಿದ್ದರೆ, ಕೊಣಚಗಲ್ಲು ರಂಗನಾಥ ಸ್ವಾಮಿ, ನಿರ್ಥಡಿ ರಂಗನಾಥ ಸ್ವಾಮಿ, ಮಾಯಕೊಂಡದ ಓಬಳ ನರಸಿಂಹ, ಶಂಕರನಹಳ್ಳಿ ರಂಗನಾಥ ಸ್ವಾಮಿ ದೇವಾಲಯಗಳ ಮುಂಭಾಗದಲ್ಲಿ ದೀಪಸ್ತಂಭ, ಗರುಡ ಸ್ತಂಭಗಳಿವೆ. ಹರಪನಹಳ್ಳಿಯ ಜಿನ ಬಸದಿಯ ಮುಂದೆ ಮಾನ ಸ್ತಂಭವಿದೆ.

ಪರಿವಾರಾಲಯ, ಪ್ರಾಕಾರ,ಮಹಾದ್ವಾರ :- ದೇವಾಲಯಗಳ ಸುತ್ತ ಪರಿವಾರಾಲಯಗಳಿದ್ದು, ಇವುಗಳನ್ನು ಒಳಗೊಂಡಂತೆ ಸುತ್ತಲೂ ಪ್ರಾಕಾರವು ಇರುತ್ತದೆ. ಪ್ರಾಕಾರದ ಒಳಭಾಗದಲ್ಲಿ ಸುತ್ತ ' ಆವೃತ್ತ ಮಂಟಪ' ವೂ, ಮುಂಭಾಗದಲ್ಲಿ 'ಪ್ರತೋಲಿ 'ಯೂ ಇರುತ್ತದೆ. ಪ್ರಾಕಾರದ ಮಧ್ಯೆ ದ್ವಾರವಿದ್ದು (ಮಹಾದ್ವಾರ), ಅದರ ಮೇಲೆ ಗೋಪುರವಿರುತ್ತದೆ. ಗುಡಿಹಳ್ಳಿಯ ಕಲ್ಲೇಶ್ವರ ದೇವಾಲಯದ ದಕ್ಷಿಣ ದಿಕ್ಕಿನಲ್ಲಿ ಕಾಳಿಕಾ ದೇವಾಲಯವಿದೆ. ಹಾಗೇ ಅದೇ ದೇವಾಲಯದ ಉತ್ತರ ದಿಕ್ಕಿನಲ್ಲಿ ಮತ್ತೊಂದು ದೇವಾಲಯವಿದೆ. ಇವೆಲ್ಲವುಗಳನ್ನು ಒಳಗೊಂಡಂತೆ ದೇವಾಲಯದ ಸುತ್ತಲೂ ಪ್ರಾಕಾರ ಗೋಡೆ ಇದ್ದು, ಪೂರ್ವಕ್ಕೆ ಪ್ರವೇಶ ದ್ವಾರವಿದೆ. ಹರಿಹರದ ಹರಿಹರೇಶ್ವರ ದೇವಾಲಯದ ಸುತ್ತಲೂ ಪ್ರಾಕಾರ ಗೋಡೆ ಇದ್ದು, ದಕ್ಷಿಣ ಮತ್ತು ಪೂರ್ವದಲ್ಲಿ ಮಹಾದ್ವಾರಗಳಿವೆ. ಈ ದ್ವಾರಗಳ ಮೇಲಿನ ಮೂಲ ಗೋಪುರಗಳು ಈಗ ನಾಶವಾಗಿವೆ. ನೀರ್ಥಡಿಯ ರಂಗನಾಥ ಸ್ವಾಮಿಯ ದೇವಾಲಯದ ಸುತ್ತಲೂ ಪ್ರಾಕಾರ ಗೋಡೆಯಿದ್ದು, ಮಹಾದ್ವಾರವು ಪೂರ್ವದಿಕ್ಕಿನ ಕಡೆ ಇದೆ. ಪ್ರಾಕಾರ-ಗೋಪುರಗಳು ಸ್ಥಾನಕ್ಕೆ ತಕ್ಕಂತೆ ಬೇರೆ ಬೇರೆ ಹೆಸರಿನಿಂದ ಕರೆಯಲ್ಪಟ್ಟಿವೆಯಲ್ಲದೆ, ಗೋಪುರಗಳು ಮೇಲ್ಕಟ್ಟಡದಂತೆ ವಿವಿಧ ತಲಗಳು ಮತ್ತಿತರ ಅಲಂಕರಣಗಳಿಂದ ಕೂಡಿರುತ್ತವೆ.

[illegible]

[illegible]

[illegible]

[illegible]

ದೇವಾಲಯಗಳ ಈ ಎಲ್ಲಾ ಅಂಗಗಳು ಕಾಲ ಕ್ರಮೇಣ ನಿರ್ಮಾಣವಾಗಿರುವ ಭಾಗಗಳಾಗಿರುವುದಲ್ಲದೇ, ನಿರ್ಮಾಪಕನ ಶಕ್ತಿ ಮತ್ತು ಅವಶ್ಯಕತೆಗೆ ತಕ್ಕಂತೆ ನಿರ್ಮಿತವಾಗಿರುತ್ತದೆ. ದೇವಾಲಯದಲ್ಲಿ ಅವಶ್ಯಕತೆಗಾಗಿ ಇರುವ ಬಹುಪಾಲು ಅಂಗಗಳು ಅಲಂಕಾರದ ಭಾಗಗಳಾಗಿ ಪರಿಣಮಿಸಿದುದರಿಂದ ವೈವಿಧ್ಯಮಯ ರಚನೆಗಳುಂಟಾಗಲು ಕಾರಣವಾಯಿತು. ದಾವಣಗೆರೆ ಜಿಲ್ಲೆಯ ಕೆಲವು ದೇವಾಲಯಗಳಲ್ಲಿ ಗರ್ಭಗುಡಿ ಹಾಗು ಕೆಲವು ಪ್ರಮುಖ ಭಾಗಗಳು ಮಾತ್ರ ಕಾಣಬರುತ್ತವೆ. ದಾವಣಗೆರೆ ಜಿಲ್ಲೆಯ ದೇವಾಲಯಗಳ ವಾಸ್ತು ಕಲೆಯ ಅಧ್ಯಯನವನ್ನು ಈ ಮುಂದಿನಂತೆ ಮಾಡಲಾಗಿದೆ.

೪.೨.೧. *ಶೈವ ದೇವಾಲಯಗಳು :*

ಈ ಜಿಲ್ಲೆಯ ವಿವಿಧ ಕಡೆ ಶೈವ , ವೈಷ್ಣವ , ಶಾಕ್ತ ದೇವಾಲಯಗಳು ಜಿನ ಬಸದಿಗಳು ಹಾಗು ಇತರೆ ದೇವಾಲಯಗಳು ಕಂಡುಬರುತ್ತವೆ. ಆದರೆ ಜಿಲ್ಲೆಯ ಅನೇಕ ಕಡೆ ಶೈವ ದೇವಾಲಯಗಳು ಪ್ರಧಾನವಾಗಿ ಕಂಡು ಬರುತ್ತವೆ. ಅವುಗಳಲ್ಲಿ ಮಹತ್ವದ ದೇವಾಲಯಗಳ ವಾಸ್ತು ಕಲೆಯು ಈ ಕೆಳಕಂಡಂತಿದೆ.

೧.	ಊರು	:	ಕೊಡದ ಗುಡ್ಡ
೨.	ತಾಲೂಕು	:	ಜಗಲೂರು
೩.	ಹೆಸರು	:	ಈಶ್ವರ
೪.	ಸ್ಥಳ	:	ಗ್ರಾಮದ ಕೆರೆಯ ಬಳಿ
೫.	ಅಭಿಮುಖ	:	ಪೂರ್ವಾಭಿಮುಖ
೬.	ಕಾಲ	:	ಕ್ರಿ.ಶ. ೮ನೇ ಶತಮಾನದ ಕೊನೆಯ ಭಾಗ
೭.	ಶಿಖರ ಶೈಲಿ	:	ಶಿಖರವಿಲ್ಲ
೮.	ಬಳಸಿದ ಶಿಲೆ	:	ಬಳಪದಕಲ್ಲು ಮತ್ತು ಗ್ರಾನೈಟ್

ಈ ದೇವಾಲಯವು ಗರ್ಭಗುಡಿ, ಅಂತರಾಳ, ನವರಂಗವನ್ನು ಹೊಂದಿದೆ.

ಈ ದೇವಾಲಯದ ಹೊರಭಾಗದ ಅಧಿಷ್ಠಾನವು ಭೂಮಿಯಲ್ಲಿಹೂತಿರುವುದರಿಂದ, ಅದರ ಭಾಗಗಳು ಗೋಚರಿಸುವುದಿಲ್ಲ. ದೇವಾಲಯದ ಭಿತ್ತಿಯನ್ನು ಗ್ರಾನೈಟ್ ಶಿಲೆಯನ್ನು ಬಳಸಿ ಕಟ್ಟಲಾಗಿದೆ. ಭಿತ್ತಿ ಭಾಗದಲ್ಲಿ ಯಾವುದೇ ಶಿಲ್ಪಗಳಿಲ್ಲ. ಪ್ರಸ್ತರದಲ್ಲಿನ ಕಪೋತ ಭಾಗವು ಸರಳವಾಗಿದ್ದು, ಗರ್ಭಗುಡಿಯ ಮೇಲೆ ಶಿಖರವಿಲ್ಲ.

ಚೌಕಾಕಾರದ ಗರ್ಭಗುಡಿಯಿದ್ದು ಅದರಲ್ಲಿ ಲಿಂಗವಿದೆ, ದ್ವಾರವು ಸರಳವಾಗಿದೆ ಅಂತರಾಳವು ಆಯತಕಾರವಾಗಿದ್ದು ,ಇದರಲ್ಲಿ ಮಹಿಷಾಸುರಮರ್ದಿನಿ ನಾಗ-ನಾಗಣಿ ಮೊದಲಾದ ಶಿಲ್ಪಗಳಿವೆ. ದ್ವಾರವು ಸ್ತಂಭ

ಶಾಖೆಯಿಂದ ಕೂಡಿದೆ ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಇದರ ಮುಂದಿನ ನವರಂಗದಲ್ಲಿ ಚೌಕ ಮತ್ತು ಅಷ್ಟ ಕೋನ ಹಾಗು ವೃತ್ತಾಕಾರದ ನಾಲ್ಕು ಕಂಭಗಳಿದ್ದು ಅವು ಸರಳವಾಗಿವೆ ಇಲ್ಲಿನ ಕಂಭವೊಂದರ ಚೌಕಾಕಾರದ ಭಾಗದಲ್ಲಿ ಕಲಶದ ರೀತಿಯ ಅಲಂಕಾರವಿದ್ದು, ಅದೇ ಕಂಭದ ದಂಡಾಗ್ರ ಭಾಗದಲ್ಲಿ ಮಾತ್ರ ಆಭರಣಗಳ ಆಲಂಕಾರವಿದೆ ಈ ಕಂಭಗಳು ರಾಷ್ಟ್ರಕೂಟರ ಕಾಲದವುಗಳೆಂದು ಕಂಭಗಳ ಲಕ್ಷಣಗಳಿಂದ ಹೇಳಬಹುದು. ನವರಂಗದ ಮಧ್ಯಭಾಗದಲ್ಲಿ ಗರ್ಭಗುಡಿಗೆ ಎದುರಾಗಿ ಚಿಕ್ಕ ನಂದಿಯೊಂದಿದೆ ,ಇಲ್ಲಿ ಗಣೇಶ, ಸಪ್ತ ಮಾತೃಕೆಯರ ಮೂರ್ತಿಗಳಿವೆ. ಮುಚ್ಚಿಗೆಯಲ್ಲಿ ಅರಳಿದ ಪದ್ಮವಿದೆ. ನವರಂಗದ ಒಳ ಭಿತ್ತಿಯನ್ನು ನಂತರ ಕಾಲದಲ್ಲಿ ಮಣ್ಣಿನಿಂದ ಗಾರೆ ರೀತಿಯಲ್ಲಿ ಹಾಕಿದ್ದಾರೆ.

ಈ ದೇವಾಲಯದ ಮುಂಭಾಗದಲ್ಲಿನ ಕೆರೆ ಕೋಡಿ (ತೊಬು) ಮೇಲೆ ಮಕರ ತೋರಣಯುಕ್ತ ಗಜಲಕ್ಷ್ಮಿ ಪಟ್ಟಿಕೆ ಇದೆ . ಇದರಲ್ಲಿ ಪದ್ಮ ಹಿಡಿದು, ಮಧ್ಯದಲ್ಲಿ ಗಜಲಕ್ಷ್ಮಿ ಕುಳಿತಿದಿದ್ದು, ಈಕೆಯ ಎಡಬಲದಲ್ಲಿ ಆನೆಗಳಿವೆ. ಇದೇ ಪಟ್ಟಿಕೆಯಲ್ಲಿ ಎರಡು ಪಕ್ಷಿಗಳು ಆಮೆಯನ್ನು ಹೊತ್ತೊಯ್ಯುವ ದೃಶ್ಯ, ಅದರ ಕೆಳಭಾಗದಲ್ಲಿ ನಾಯಿ ಇದೆ, ಇದರ ಮತ್ತೊಂದು ಭಾಗದಲ್ಲಿ ನಾಯಿಯ ಮೇಲೆ ಕುಳಿತ ಕಪಿ ಧ್ವಜವನ್ನು ಹಿಡಿಯುಲು ಯತ್ನಿಸುತಿರುವಂತೆ ಹಾಗೂ ಮೊಸಳೆಗಳನ್ನು ಈ ಪಟ್ಟಿಕೆಯಲ್ಲಿ ಕೆತ್ತಲಾಗಿದೆ.ಈ ಪಟ್ಟಿಕೆಯಲ್ಲಿನ ಚಿತ್ರಗಳು ಪಂಚತಂತ್ರ ಕಥೆಗಳನ್ನು ನೆನಪಿಗೆ ತರುತ್ತವೆ.

ಈ ದೇವಾಲಯದ ಗರ್ಭಗುಡಿಯ ದ್ವಾರ ಸರಳವಾಗಿರುವುದು, ಕಂಭಗಳ ಮೇಲಿನ ಕಲಶದಂತಹ ಅಲಂಕರಣೆ ಹಾಗು ದೇವಾಲಯದ ಮುಂದಿನ ಮಕರ ತೋರಣಯುಕ್ತ ಗಜಲಕ್ಷ್ಮಿ ಪಟ್ಟಿಕೆ ಇವುಗಳು ರಾಷ್ಟ್ರಕೂಟರ ದೇವಾಲಯಗಳಲ್ಲಿ ಕಂಡುಬರುವ ಪ್ರಮುಖ ಲಕ್ಷಣಗಳಿಗೆ ಹೋಲಿಕೆಯಾಗುತ್ತವೆ. ಆದುದರಿಂದ ಇದನ್ನು ರಾಷ್ಟ್ರಕೂಟರ ಕಾಲದ ದೇವಾಲಯ ಎಂದು ಹೇಳಬಹುದಾಗಿದೆ.

೧. ಊರು : ಮಸಣಕೆರೆ

೨. ತಾಲೂಕು : ಚನ್ನಗಿರಿ

೩. ಹೆಸರು : ಈಶ್ವರ

೪. ಸ್ಥಳ : ಗ್ರಾಮ ಮಧ್ಯದಲ್ಲಿ

೫. ಅಭಿಮುಖ : ಮುಖ್ಯಗರ್ಭಗುಡಿ ಪೂರ್ವಾಭಿಮುಖವಾಗಿದ್ದು, ಪ್ರವೇಶದ್ವಾರ ದಕ್ಷಿಣ ದಿಕ್ಕಿಗಿದೆ.

೬. ಕಾಲ : ಕ್ರಿ.ಶ. ೯ನೇ ಶತಮಾನ

೭. ಶಿಖರ ಶೈಲಿ : ಶಿಖರವಿಲ್ಲಾ

೮. ಬಳಸಿದ ಶಿಲೆ : ಬಳಪದ ಶಿಲೆ

ಈ ದೇವಾಲಯ ಗರ್ಭಗುಡಿ ಅಂತರಾಳ, ನವರಂಗ , ಆ ನವರಂಗಕ್ಕೆ ಹೊಂದಿಕೊಂಡಂತೆ ಉತ್ತರ ಮತ್ತು ಪೂರ್ವಭಾಗದಲ್ಲಿ ಒಂದೊಂದು ಗರ್ಭಗುಡಿಗಳನ್ನು ಹೊಂದಿದೆ.

ದೇವಾಲಯದ ಹೊರಭಾಗದ ಅಧಿಷ್ಠಾನ ಹಾಗು ಭಿತ್ತಿಯು ಸರಳವಾಗಿದೆ. ಭಿತ್ತಿಯ ಮೇಲ್ಭಾಗವನ್ನು ಇತ್ತೀಚೆಗೆ ನವೀಕರಿಸಿದ್ದಾರೆ ಹಾಗೂ ದೇವಾಲಯದ ಸುತ್ತಲೂ ಪ್ರಾಕಾರ ಗೋಡೆಯೊಂದನ್ನು ಈಚಿಗೆ ನಿರ್ಮಿಸಿದ್ದಾರೆ.

ಪಶ್ಚಿಮ ಭಾಗದ ಗರ್ಭಗುಡಿಯು ಚೌಕಾಕಾರವಾಗಿದ್ದು ಅದರಲ್ಲಿ ಶಿವಲಿಂಗವಿದೆ. ಇದರ ದ್ವಾರವು ಸರಳವಾಗಿದ್ದು ಲಲಾಟಬಿಂಬದಲ್ಲಿ ಯಾವುದೇ ಶಿಲ್ಪಗಳಿಲ್ಲ. ನವರಂಗದ ಉತ್ತರಭಾಗಕ್ಕೊಂದು ಗರ್ಭಗುಡಿ ಇದ್ದು, ಅದರಲ್ಲಿ ಕೇಶವನ ಮೂರ್ತಿ ಇದೆ. ಈ ಮೂರ್ತಿಯ ಸಮೀಪವೇ ನಾಗ ಶಿಲ್ಪಗಳಿವೆ. ಈ ಗರ್ಭಗುಡಿಯ ದ್ವಾರವು ಅಲಂಕೃತವಾಗಿರದೆ ಸರಳವಾಗಿದೆ. ಹಾಗೂ ನವರಂಗದ ಪೂರ್ವ ಭಾಗಕ್ಕೊಂದು ಗರ್ಭಗುಡಿ ಇದ್ದು ಇದಕ್ಕೆ ದ್ವಾರವಿಲ್ಲ ,ನವರಂಗದಲ್ಲಿ ನಾಲ್ಕು ಚೌಕ ,ಆಯತಾ ಮತ್ತು ವೃತ್ತಾಕಾರದ ಕಂಭಗಳಿವೆ . ಈ ಕಂಭಗಳು ಸಾಧಾರಣವಾಗಿವೆ. ನಾಲ್ಕು ಕಂಭಗಳ ಮಧ್ಯಭಾಗದಲ್ಲಿ ನಂದಿ ಇದೆ ,ಈ ಕಂಭಗಳ ಮೇಲಿನ ಮುಚ್ಚಿಗೆಯ(ವಿತಾನದ) ಚೌಕಾಕಾರದ ಪಟ್ಟಿಕೆಯಲ್ಲಿ ಅಷ್ಟದಿಕ್ಪಾಲಕರನ್ನು ವಾಹನ ಸಮೇತರಾಗಿ ಕೆತ್ತಲಾಗಿದೆ. ಈ ಅಷ್ಟದಿಕ್ಪಾಲಕರ ಮಧ್ಯದಲ್ಲಿ ತಾಂಡವೇಶ್ವರ (ಶಿವ) ನನ್ನು ಕೆತ್ತಲಾಗಿದೆ . ಅದರ ಮೇಲಿನ ಪಟ್ಟಿಕೆಯ ಉತ್ತರ ಭಾಗದಲ್ಲಿ ಸುರ, ಅಸುರರು ಸಮುದ್ರಮಥನ ಗೈಯುತ್ತಿರುವಂತೆ ಮತ್ತು ದಕ್ಷಿಣ ಭಾಗದಲ್ಲಿ ವಿಷ್ಣು ಕಾಳಿಂಗ ಮರ್ಧನ ಮಾಡುತ್ತಿರುವಂತೆ ಹಾಗೂ ಪಶ್ಚಿಮ ಭಾಗದಲ್ಲಿ ವಾದ್ಯಹಿಡಿದವರನ್ನು ಸುಂದರವಾಗಿ, ಕೆತ್ತಿರುವುದು ಇಲ್ಲಿನ ವಿಶೇಷವಾಗಿದೆ. ಈ ಶಿಲ್ಪಗಳ ಮೇಲಿನ ಎಂಟು ಕೋನಗಳಲ್ಲಿ ಕೀರ್ತಿಮುಖ ಹಾಗು ಅಲ್ಲಲ್ಲಿ ಪುಷ್ಪಗಳನ್ನು ಕೆತ್ತಿರುವುದು ಆಕರ್ಷಣೀಯವಾಗಿದೆ.

ಪ್ರವೇಶದ್ವಾರವು ದಕ್ಷಿಣ ದಿಕ್ಕಿಗಿದ್ದು, ಇಲ್ಲಿ ಶೈವ ದ್ವಾರಪಾಲಕರು ತ್ರಿಶೂಲ, ಡಮರುಗ, ಗದೆ ಹಿಡಿದು ನಿಂತಿದ್ದಾರೆ. ದ್ವಾರವು ರತ್ನ, ಪುಷ್ಪ, ಸ್ತಂಭ, ಲತಾಶಾಖೆಗಳಿಂದ ಕೂಡಿದ್ದು, ಮೊದಲಿನ ಎರಡು ಶಾಖೆಗಳು ಲಲಾಟಬಿಂಬದ ವರೆಗೂ ಮುಂದು ವರಿದಿವೆ, ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಈ ದೇವಾಲಯದ ವಾಸ್ತು ಭಾಗಗಳು ಹಾಗು ಲಿಂಗ, ನಂದಿ ಮೂರ್ತಿಗಳು ರಾಷ್ಟ್ರಕೂಟರ ಕಾಲಕ್ಕೆ ಹೊಲಿಕೆ ಯಾಗುತ್ತವೆ. ಹಾಗೇಯೆ ನವರಂಗದ ಮುಚ್ಚಿಗೆಯಲ್ಲಿ ಅಷ್ಟದಿಕ್ಪಾಲಕ ಶಿಲ್ಪಗಳನ್ನು ನಂತರದ ಅರಸರು ಜೋಡಿಸಿರಬೇಕೆನಿಸುತ್ತದೆ .

೧. ಊರು : ನಂದಿಗುಡಿ

೨. ತಾಲೂಕು : ಹರಿಹರ

೩. ಹೆಸರು : ಈಶ್ವರ

೪. ಸ್ಥಳ : ಗ್ರಾಮದ ದಕ್ಷಿಣ ಭಾಗದಲ್ಲಿ

೫. ಅಭಿಮುಖ : ದಕ್ಷಿಣಕ್ಕೆ ಪ್ರವೇಶ ದ್ವಾರವಿದ್ದು, ಮೂಲ ಗರ್ಭಗುಡಿ ಪೂರ್ವಾಭಿಮುಖವಾಗಿದೆ

೬. ಕಾಲ : ಕ್ರಿ.ಶ. ೧೦ನೇ ಶತಮಾನ

೭. ಶಿಖರ ಶೈಲಿ : ಮೇಲಿನ ಶಿಖರ ಉಳಿದಿಲ್ಲ

೮. ಬಳಸಿದ ಶಿಲೆ : ಗ್ರಾನೈಟ್, ಚಪ್ಪಡಿ ,ನೀಲಿ ಛಾಯೆಯ ಬಳಪದ ಶಿಲೆ

ಈ ದೇವಾಲಯವು ಚೌಕಾಕಾರದ ಗರ್ಭಗೃಹ ಅಂತರಾಳ ಮತ್ತು ನವರಂಗಗಳನ್ನೊಳಗೊಂಡಿದೆ[೨೩]. ಮೂಲತಃ ಇದು ಮೂರು ಗರ್ಭಗುಡಿಗಳಿದ್ದ ತ್ರಿಕೂಟಾಚಲ ದೇವಾಲಯವೆಂದು ಇಲ್ಲಿನ ವಾಸ್ತು ಅವಶೇಷಗಳಿಂದ ಗುರುತಿಸಬಹುದು[೨೪]. ಹೊರಭಾಗದ ಅಧಿಷ್ಠಾನವು ಸರಳವಾಗಿದ್ದು, ಭಿತ್ತಿಯು ಹಿಟ್ಟುಕಲ್ಲುಗಳಿಂದ ಮತ್ತು ಗ್ರಾನೈಟ್‌ಕಲ್ಲುಗಳಿಂದ ನಿರ್ಮಿಸಲ್ಪಟ್ಟಿದೆ. ಅಲ್ಲಲ್ಲಿ ಮೂಲ ಗೋಡೆಯನ್ನು ರಕ್ಷಿಸಲು ಇತ್ತೀಚೆಗೆ ನಿರ್ಮಿಸಿದ ರಕ್ಷಣಾ ಗೋಡೆಗಳು ಇವೆ. ಗರ್ಭಗುಡಿ ಮೇಲಿನ ಶಿಖರವು ಚಿಕ್ಕದಾಗಿದ್ದು, ಅದನ್ನು ಈಚೆಗೆ ನಿರ್ಮಿಸಿದ್ದಾರೆ.

ಪಶ್ಚಿಮ ಗರ್ಭಗುಡಿಯು ಚೌಕಾಕಾರವಾಗಿದ್ದು, ಅದರಲ್ಲಿ ಒಂದು ಚಿಕ್ಕ ಲಿಂಗವಿದೆ. ಇದರ ಮುಚ್ಚಿಗೆಯಲ್ಲಿ ಪದ್ಮವಿದೆ. ಗರ್ಭಗುಡಿಯ ಬಾಗಿಲು ವಾಡದಲ್ಲಿ ಗಜಲಕ್ಷ್ಮಿ ಇದ್ದು, ಉಳಿದಂತೆ ದ್ವಾರವು ಸಾದಾರೀತಿಯಲ್ಲಿದೆ.

ಅಂತರಾಳವು ಆಯತಾಕಾರವಾಗಿದ್ದು, ಅದರಲ್ಲಿ ಒಂದು ಚಿಕ್ಕ ನಂದಿ ಇದೆ. ಇದರ ದ್ವಾರದ ಕೆಳಭಾಗ(ಪೇದ್ಯಾ)ದಲ್ಲಿ ಶೈವದ್ವಾರಪಾಲಕರಿದ್ದಾರೆ. ಆ ದ್ವಾರಪಾಲಕರ ಮೇಲೆ ಸ್ತಂಭ ಶಾಖೆ ಇದ್ದು, ನಂತರ ಲತಾ, ಪದ್ಮ, ಶಾಖೆಗಳಿವೆ. ಪದ್ಮ ಶಾಖೆಯ ನಂತರ ಸುಂದರವಾಗಿ ವೃತ್ತಾಕಾರದ ಸುರುಳಿಯೊಳಗೆ ಜಾಲಂಧ್ರಗಳನ್ನು ಕೊರೆದು ಮಾಡಲಾಗಿದೆ. ಬಲಭಾಗದ ಅಥವ ದಕ್ಷಿಣ ಭಾಗದ ಶಾಖೆಯಲ್ಲಿ ಹಾರುತ್ತಿರುವ ನಾಲ್ಕುಜನ ವಿದ್ಯಾಧರರಿದ್ದು[೨೫], ಅವರಲ್ಲಿ ಇಬ್ಬರು ತುತ್ತೂರಿ ಹಿಡಿದು ಊದುತ್ತಿದ್ದಾರೆ. ಇಲ್ಲಿನ ಉಳಿದ ಸ್ತ್ರೀ ಮತ್ತು ಪುರುಷರು ಪುಷ್ಪವನ್ನು ಹಿಡಿದಿದ್ದಾರೆ. ಉತ್ತರ ಭಾಗದ ಅಥವಾ ಎಡಭಾಗದ ದ್ವಾರದ ಜಾಲಂಧ್ರ ಸುರುಳಿಯಲ್ಲಿ ಎಡಗೈ ಮೇಲೆತ್ತಿ ನರ್ತಿಸುತ್ತಿರುವ ಮಹಿಳೆ (?) ಮತ್ತು ಆಕೆಯ ಜೊತೆಯಲ್ಲಿ ಕೊಳಲಿನವರು ವಾದ್ಯದವರು ಇದ್ದಾರೆ. ಅದರ ಕೆಳಭಾಗದಲ್ಲಿ ಕುಳಿತಿರುವ ಮನುಷ್ಯ/ಬಲಗೈ ಮೇಲೆತ್ತಿ ಮೇಲಕ್ಕೇಳುತ್ತಿದ್ದಾನೆ. ಅಲ್ಲಿಯೇ ವಾದ್ಯ ನುಡಿಸುತ್ತಿರುವ ಮನುಷ್ಯನೊಬ್ಬನಿದ್ದಾನೆ[೨೬]. ಇಲ್ಲಿನ ಲಲಾಟದ ಮೇಲಿನ ಉತ್ತರಾಂಗ ಭಾಗವನ್ನು ಏಳು ಅಡಿ ಉದ್ದದಲ್ಲಿ ಅಲಂಕಾರಯುಕ್ತವಾಗಿ ಚಿತ್ರಿಸಲಾಗಿದೆ. ಮಧ್ಯಭಾಗದಲ್ಲಿ ಶಿವನಿದ್ದು, ಆತ ಒಂದು ತಲೆ ಆರು ಕೈಗಳನ್ನು ಹೊಂದಿ, ನಾಟ್ಯವಾಡುತ್ತಿದ್ದಾನೆ[೨೭]. ಬಲಭಾಗದಲ್ಲಿ ಬ್ರಹ್ಮನು ದೇವಿಯೊಡನೆ ಮತ್ತು ಎಡಭಾಗದಲ್ಲಿ ವಿಷ್ಣು ತನ್ನ ದೇವಿಯೊಡನೆ ಶಿವನಿಗೆ ಬೆಂಬಲ ಸೂಚಕವಾಗಿ ನಿಂತಿರುವ ರೀತಿಯಲ್ಲಿ ಶಿಲ್ಪಕೆತ್ತಿದ್ದಾನೆ. ಈ ಶಿಲ್ಪದ ಮೇಲ್ಭಾಗದಲ್ಲಿ ಸರ್ಪಾಲಂಕೃತ ತೋರಣವಿದ್ದು, ಆ ತೋರಣದ ಎರಡೂ ಬದಿಗೂ ಮಾವಿನಹಣ್ಣುಗಳು ತೂಗುಹಾಕಿದ ರೀತಿಯಲ್ಲಿವೆ[೨೮]. ಈ ಮೂರ್ತಿಯ ಎಡಬಲದಲ್ಲಿ ನಾಲ್ಕು ಪಾದವುಳ್ಳ ಮಕರಗಳಿವೆ. ಆ ಮಕರಗಳ ಮೇಲೆ ಯಕ್ಷರು ಆಸೀನರಾಗಿದ್ದಾರೆ. ಮೇಲಿನ ಮಕರದ ಬಾಯಿಯಿಂದ ಆನೆಯ ಸೊಂಡಿಲು ಹೊರಬಂದಿರುವಂತೆ ಕೆತ್ತಿರುವುದು ಇಲ್ಲಿನ ಸೂಕ್ಷ್ಮತೆಗೆ ಸಾಕ್ಷಿಯಾಗಿದೆ. ಉತ್ತರ ಭಾಗದಲ್ಲಿ ಸಿಂಹದೇಹವಿರುವ ಮನುಷ್ಯ ದಕ್ಷಿಣದಲ್ಲಿ ಸಿಂಹದೇಹ, ಮನುಷ್ಯ ತಲೆ (ಸ್ತ್ರೀ ?) ಇರುವ

[illegible]

[illegible]

[illegible]

ಶಿಲ್ಪಗಳು ಇಲ್ಲಿಯೇ ಇವೆ[೭೮]. ಈ ದ್ವಾರದ ಎಡ ಬಲದಲ್ಲಿ ಸುಂದರವೂ ಭವ್ಯವೂ ಆದ ಶೈವದ್ವಾರಪಾಲ ಮೂರ್ತಿಗಳಿವೆ. ಉತ್ತರ ಭಾಗದಲ್ಲಿ ಗರ್ಭಗುಡಿ ರೀತಿಯ ಕೆಲವು ಕುರುಹುಗಳಿವೆ. ಪೂರ್ವಭಾಗದಲ್ಲಿ ನವರಂಗದಲ್ಲಿನ ನಂದಿಯ ಹಿಂಭಾಗಕ್ಕೆ ಗರ್ಭಗುಡಿಯಿದ್ದು, ಆ ಗರ್ಭಗುಡಿಯಲ್ಲಿ ಸ್ಥಾನಿಕ ಸೂರ್ಯನಿದ್ದಾನೆ. ವಿತಾನದಲ್ಲಿ ಪದ್ಮವಿದೆ. ಸೂರ್ಯ ಮೂರ್ತಿಯ ಬಳಿ ಚಿಕ್ಕ ನಂದಿ ಮತ್ತು ಶಿವಲಿಂಗಗಳಿವೆ. ಇದರ ದ್ವಾರವು ಅಲಂಕೃತವಾಗಿರದೆ ಸರಳ ಶೈಲಿಯಲ್ಲಿದೆ.

ನವರಂಗದಲ್ಲಿ ಚಾಲುಕ್ಯ ಶೈಲಿಯ ನಾಲ್ಕು ಅಲಂಕೃತ ದುಂಡನೆಯ ಕಂಬಗಳಿವೆ. ಇವುಗಳನ್ನು ಕಪ್ಪುಕಲ್ಲಿನಿಂದ ಮಾಡಲಾಗಿದ್ದು, ಗಂಟೆಯಾಕಾರದಲ್ಲಿ ದುಂಡನೆಯ ಬಳೆಗಳಿಂದ ಅಲಂಕರಿಸಿದ ರೀತಿಯಲ್ಲಿವೆ. ಇಲ್ಲಿನ ಬೋದಿಗೆ ಮತ್ತು ತೊಲೆಗಳನ್ನು ಅಷ್ಟೇನು ಅಲಂಕರಿಸಿಲ್ಲ. ವಿತಾನದಲ್ಲಿ (ಮುಚ್ಚಿಗೆ)ಪದ್ಮವಿದೆ. ನವರಂಗದ ಮಧ್ಯದಲ್ಲಿ ಸುಂದರ ನಂದಿ ಮೂರ್ತಿ ಇದೆ. ಹಾಗೆ ಸಪ್ತ ಮಾತೃಕೆಯರು, ಗಣೇಶ, ಮಹಿಷಾಸುರಮರ್ಧಿನಿ, ಶಿಲ್ಪಗಳು ನವರಂಗದ ಪಶ್ಚಿಮದಲ್ಲಿ ಕಾಣಬರುತ್ತವೆ. ಉತ್ತರಕ್ಕೆ ಅಭಿಮುಖವಾಗಿರುವ ಈ ದೇವಾಲಯದ ಪ್ರವೇಶದ್ವಾರವು ಸಹ ಅಲಂಕಾರವಾಗಿಲ್ಲ.

ಪ್ರಾಚೀನ ಕಾಲಕ್ಕೆ ಸೇರಿದ ಈ ದೇವಾಲಯ ಕಾಲಾಂತರದಲ್ಲಿ ವಾಸ್ತು ವೈಶಿಷ್ಟತೆಯನ್ನು ಕಳೆದುಕೊಂಡಿದೆ. ಈ ದೇವಾಲಯ ಪ್ರಾಚೀನವಾಗಿದ್ದರೂ ಸಹ (ಕ್ರಿ.ಶ. ೧೦ನೇ ಶತಮಾನ) ಅದರಲ್ಲಿನ ಮೂರ್ತಿಗಳು ತದನಂತರದ ಕಾಲದವೆಂದು ಆ ಮೂರ್ತಿಗಳ ಲಕ್ಷಣದಿಂದ ಹೇಳಬಹುದು. (ಕ್ರಿ.ಶ. ೧೧ನೇ ಶತಮಾನದ ಅಂತ್ಯಭಾಗ).

೧. ಊರು : ಎಲೆ ಬೇತೂರು
೨. ತಾಲೂಕು : ದಾವಣಗೆರೆ
೩. ಹೆಸರು : ಕಲ್ಲೇಶ್ವರ
೪. ಸ್ಥಳ : ಗ್ರಾಮದ ಉತ್ತರ ದಿಕ್ಕಿಗೆ
೫. ಅಭಿಮುಖ : ಪೂರ್ವಾಭಿಮುಖ
೬. ಕಾಲ : ಕ್ರಿ.ಶ. ೧೧೯೦[೭೯]
೭. ಶಿಖರ ಶೈಲಿ : ಮೂಲ ಶಿಖರ ಉಳಿದಿಲ್ಲ
೮. ಬಳಸಿದ ಶಿಲೆ : ಬಳಪದ ಕಲ್ಲು

ಗರ್ಭಗುಡಿ, ತೆರೆದ ಅಂತರಾಳ, ನವರಂಗ ಹಾಗು ತೆರೆದ ಮುಖಮಂಟಪವನ್ನು ಈ ದೇವಾಲಯ ಹೊಂದಿದೆ[80].

ಹೊರಭಾಗದ ಅಧಿಷ್ಠಾನವು ಉಪಾನ, ಪದ್ಮ, ಕಪೋತಗಳಿಂದ ಕೂಡಿದ್ದು, ಸರಳವಾಗಿದೆ. ಗರ್ಭಗುಡಿ ಅಂತರಾಳದ ಭಿತ್ತಿಯಲ್ಲಿ ಅರೆಗಂಬಗಳ ವಿನ್ಯಾಸವನ್ನು ಮಾಡಲಾಗಿದೆ. ನವರಂಗದ ಬಾಹ್ಯ ಭಿತ್ತಿಯ ಭಾಗದಲ್ಲಿ ಯಾವುದೇ ರೀತಿಯ ಶಿಲ್ಪ ಅಥವಾ ಇನ್ನಾವುದೇ ಅಲಂಕರಣೆಗಳಿಲ್ಲ. ಗರ್ಭಗುಡಿ, ಅಂತರಾಳ ಭಾಗದಲ್ಲಿ ಮಾತ್ರ ಪ್ರಸ್ತರದಲ್ಲಿನ ಕಪೋತ ಭಾಗವು ಕಂಡುಬರುತ್ತಿದ್ದು, ಅದು ಸ್ವಲ್ಪ ಮುಂದೆ ಬಾಗಿದ್ದು, ಹೊರ ಚಾಚಿದ ರೀತಿಯಲ್ಲಿದೆ. ಗರ್ಭಗುಡಿ ಮೇಲೆ ಇತ್ತೀಚೆಗೆ ನಿರ್ಮಿಸಿದ ಶಿಖರೋಪಾದಿಯ ಮೇಲ್ಕಟ್ಟಡವಿದೆ. ಇದನ್ನು ನಿರ್ದಿಷ್ಟವಾಗಿ ಯಾವ ಶಿಖರ ಮಾದರಿಗೂ ಸೇರಿಸುವುದು ಕಷ್ಟ.

ಚೌಕಾಕಾರದ ಗರ್ಭಗುಡಿಯಲ್ಲಿ ಲಿಂಗವಿದೆ. ಮುಚ್ಚಿಗೆಯಲ್ಲಿ ಪದ್ಮವಿದೆ. ಗರ್ಭಗುಡಿ ದ್ವಾರವು ಸರಳವಾಗಿದೆ. ತೆರೆದ ಅಂತರಾಳವಿದ್ದು, ಅದು ಆಯತಾಕಾರವಾಗಿದೆ. ಇದರ ದ್ವಾರವು ಸಾಧಾರಣವಾಗಿದೆ. ಅಂತರಾಳದ ಮುಂದಿನ ನವರಂಗದಲ್ಲಿ ನಾಲ್ಕು ಕಣ್ಮನ ಸೆಳೆಯುವ ಕಂಬಗಳಿವೆ. ಇವು ಆಯತ, ಇಲ್ಲವೇ ಅಷ್ಟಕೋನ ಹಾಗು ಚೌಕಾಕಾರದಲ್ಲಿವೆ. ಈ ಕಂಭಗಳು ಪುಷ್ಪ ಬೋಧಿಗೆಗಳನ್ನು ಹೊಂದಿವೆ. ತೊಲೆಗೆ ಆಧಾರವನ್ನೊದಗಿಸಿವೆ. ಅಷ್ಠದಿಕ್ಪಾಲಕರಾದ ಕುಬೇರ, ಈಶಾನ್ಯ, ಇಂದ್ರ, ಅಗ್ನಿ, ಯಮ, ನಿಋತಿ , ವರುಣ, ವಾಯುಗಳನ್ನು ಪತ್ನಿ ಹಾಗು ವಾಹನ ಸಮೇತರಾಗಿ ನವರಂಗದ ಮುಚ್ಚಿಗೆಯಲ್ಲಿ ತುಂಬಾ ಸುಂದರವಾಗಿ ಕೆತ್ತಲಾಗಿದೆ. ಈ ದಿಕ್ಪಾಲಕರ ಮಧ್ಯದಲ್ಲಿ ನಾಟ್ಯ ಶಿವ (ನಟರಾಜ)ನನ್ನು ಸಹ ಬಿಡಿಸಲಾಗಿದೆ[81]. ನವರಂಗದ ಅಲ್ಲಲ್ಲಿ ಸರಸ್ವತಿ, ಕಾರ್ತಿಕೇಯ, ವಿಷ್ಣು, ನಾಗ-ನಾಗಿಣಿ ಮೂರ್ತಿಗಳನ್ನು ಹೊರಗಿನಿಂದ ತಂದು ಇರಿಸಲಾಗಿದೆ. ಇದರ ದ್ವಾರದ ಪೇದ್ಯಾಭಾಗದಲ್ಲಿ ಗಂಗೆ-ಯಮುನೆಯರು ಹಾಗು ಶೈವದ್ವಾರಪಾಲಕ ಹಾಗು ಚಾಮರಧಾರಿಣಿ ಶಿಲ್ಪಗಳಿವೆ. ದ್ವಾರವು ರತ್ನ, ಲತಾ, ಸ್ತಂಭ, ಲತಾ, ಪುಷ್ಪ , ಶಾಖಾಗಳಿಂದ ಕೂಡಿದೆ. ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ.

ತೆರೆದ ಮುಖಮಂಟಪದಲ್ಲಿ ಆಯತಾ , ಅಷ್ಟಕೋನಾ, ಚೌಕಾಕಾರದ ಹದಿನಾರು ಕಂಭಗಳಿದ್ದು, ಇವುಗಳ ಫಲಕದ ಭಾಗವು ಪುಷ್ಪಗಳ ಅಲಂಕರಣೆಯಿಂದ ಕೂಡಿದೆ. ಉಳಿದಂತೆ ಯಾವ ಶಿಲ್ಪಗಳು ಈ ಕಂಭಗಳಲ್ಲಿಲ್ಲ. ಇಲ್ಲಿನ ಬೋದಿಗೆಗಳಲ್ಲಿ ಪುಷ್ಪಗಳ ಅಲಂಕರಣೆ ಇದೆ. ಈ ದೇವಾಲಯದಲ್ಲಿನ ಕಂಭಗಳ ವಿನ್ಯಾಸ ಹಾಗು ಅಲಂಕರಣೆ ಇವುಗಳು ಪ್ರಾದೇಶಿಕ ವೈಭಿನ್ನತೆಯನ್ನು ಎತ್ತಿ ತೋರಿಸುತ್ತವೆ. ದೇವಾಲಯದ ಉಳಿದ ವಾಸ್ತು ಲಕ್ಷಣಗಳ ಆಧಾರದ ಮೇಲೆ ಉಚ್ಚಂಗಿ ಪಾಂಡ್ಯರ ಕಾಲಾವಧಿಯಲ್ಲಿ ಕಲ್ಯಾಣಿ ಚಾಲುಕ್ಯರ ಶೈಲಿಯಲ್ಲಿ ಈ ದೇವಾಲಯ ನಿರ್ಮಿತವಾಗಿದೆ ಎಂದು ಹೇಳಬಹುದು.

[illegible]

[illegible]

[illegible]

೧. ಊರು : ಅವರಗೊಳ್ಳ
೨. ತಾಲೂಕು : ದಾವಣಗೆರೆ
೩. ಹೆಸರು : ಈಶ್ವರ
೪. ಸ್ಥಳ : ಗ್ರಾಮದ ಮಧ್ಯದಲ್ಲಿದೆ
೫. ಅಭಿಮುಖ : ದಕ್ಷಿಣಾಭಿಮುಖ
೬. ಕಾಲ : ಕ್ರಿ.ಶ. ಸುಮಾರು ೧೦ನೇ ಶತಮಾನ
೭. ಶಿಖರ ಶೈಲಿ : ಕದಂಬ ನಾಗರ
೮. ಬಳಸಿದ ಶಿಲೆ : ಬಳಪದ ಕಲ್ಲು ಹಾಗು ಗ್ರಾನೈಟ್

ಗರ್ಭಗುಡಿ, ಅಂತರಾಳ, ತೆರೆದಮುಖ ಮಂಟಪವನ್ನು ಈ ದೇವಾಲಯ ಹೊಂದಿದೆ.

ದೇವಾಲಯದ ಹೊರಭಾಗದ ಅಧಿಷ್ಠಾನವು ಉಪಾನ, ಪದ್ಮ ಕುಮುದ, ಕಪೋತ, ವೇದಿಗಳಿಂದ ಕೂಡಿದೆ. ಅದರ ಮೇಲಿನ ಭಿತ್ತಿಯಲ್ಲಿ ಯಾವುದೇ ಶಿಲ್ಪಗಳಿಲ್ಲ. ಗರ್ಭಗುಡಿ ಭಿತ್ತಿಯ ಪೂರ್ವ, ಪಶ್ಚಿಮ ಹಾಗು ಉತ್ತರದ ಮಧ್ಯ ಭಾಗದಲ್ಲಿ ಕೂಷ್ಠಗುಡಿಗಳಿವೆಯಾದರೂ ಅಲ್ಲಿ ಯಾವ ಮೂರ್ತಿಗಳಿಲ್ಲ. ಪ್ರಸ್ತರದಲ್ಲಿನ ಕಪೋತ ಭಾಗವು ಸ್ವಲ್ಪ ಮುಂಚಾಚಿದೆ. ಗರ್ಭಗುಡಿ ಮೇಲೆ ಎಂಟು ತಳಗಳನ್ನೊಂದಿದ ಕದಂಬ ನಾಗರ ಶೈಲಿಯ ಶಿಖರವಿದೆ. ಶಿಖರದ ಮೇಲಿನ ಕಳಶ ಇಲ್ಲಿ ಕಾಣಬರುತ್ತಿಲ್ಲ.

ಗರ್ಭಗುಡಿಯಲ್ಲಿ ಸುಮಾರು ಮೂರುವರೆ ಅಡಿ ಎತ್ತರವಾದ ಲಿಂಗವಿದ್ದು, ಇಡೀ ಜಿಲ್ಲೆಯಲ್ಲೇ ಎತ್ತರವಾದ ಲಿಂಗವೆನಿಸಿದೆ. ಈ ಲಿಂಗವು ಬಲಹರಿಯನ್ನು ಹೊಂದಿದೆ. ಗರ್ಭಗುಡಿಯ ಮುಚ್ಚಿಗೆಯಲ್ಲಿ ಪದ್ಮವಿದೆ. ಗರ್ಭಗುಡಿ ದ್ವಾರವು ಸರಳವಾಗಿದೆ. ಅಂತರಾಳದಲ್ಲಿ ವೀರಭದ್ರ, ಗಣೇಶನ ಮೂರ್ತಿಗಳನ್ನು ಇಡಲಾಗಿದೆ. ಇದರ ದ್ವಾರವು ಸಹ ಸಾಧಾರಣವಾಗಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ತೆರದ ಮುಖಮಂಟಪದಲ್ಲಿ ಎಂಟು ಕಪ್ಪು ಕಲ್ಲಿನ ಕಂಭಗಳು ಹಾಗು ಹನ್ನೆರಡು ಅರೆಗಂಭಗಳಿವೆ. ಇಲ್ಲಿನ ಕಂಭಗಳು ಚೌಕ ಮತ್ತು ಅಷ್ಟಕೋನಾಕಾರವಾಗಿದ್ದು ಸರಳವಾಗಿವೆ. ಬೋದಿಗೆಗಳ ಕೆಲವು ಭಾಗದಲ್ಲಿ ಚಿಕ್ಕ ಪುಷ್ಪಗಳನ್ನು ಕೆತ್ತಲಾಗಿದೆ. ಮುಖಮಂಟಪದ ಸುತ್ತಲಿನ ಭಿತ್ತಿಗೋಡೆಯನ್ನು ಇತ್ತೀಚೆಗೆ ನವೀಕರಿಸಲಾಗಿದೆ. ಈ ದೇವಾಲಯದಲ್ಲಿ ಕಂಭಗಳ ವಿನ್ಯಾಸ ಮತ್ತು ಭಿತ್ತಿಯಲ್ಲಿನ ಅಲಂಕರಣೆ, ಇವುಗಳು ಕಲ್ಯಾಣಿ ಚಾಲುಕ್ಯರ ಶೈಲಿಯ ಮುಂದುವರಿಕೆಯಾದರೂ ಪ್ರಾದೇಶಿಕ ವೈಭಿನ್ನತೆಯನ್ನು ಎತ್ತಿ ತೋರುತ್ತವೆ. ದೇವಾಲಯದ ಉಳಿದ ವಾಸ್ತುಲಕ್ಷಣಗಳ ಹಾಗು ಶಾಸನಗಳ ಆಧಾರದ ಮೇಲೆ ಈ ದೇವಾಲಯ ಸೇವುಣರ ಕಾಲದಲ್ಲಿ ನಿರ್ಮಿತವಾಗಿದೆ ಎಂದು ಹೇಳಬಹುದು.

ಕ್ರಿ.ಶ. ೧೨೭೯ರಲ್ಲಿ ಸೇವುಣರ ಮಹಾದೇವ ಕೂಚರಸನು (ಕೂಜರಾಜ) ಉಚ್ಚಂಗಿ-ಬೇತೂರು ಪ್ರದೇಶವನ್ನು ಆಳುತ್ತಿರುವಾಗ ಈತನ ಮಗ ಕೂಚಚಮೂಪತಿ ಈ ಕನ್ನೇಶ್ವರ ದೇವಾಲಯಕ್ಕೆ ದತ್ತಿಬಿಟ್ಟ ಬಗ್ಗೆ ವಿವರಣೆ ಇದೆ[೩೨].

೧. ಊರು : ಬಾಗಳಿ

೨. ತಾಲೂಕು : ಹರಪನಹಳ್ಳಿ

೩. ಹೆಸರು : ಕಲ್ಲೇಶ್ವರ[೩೩]

೪. ಸ್ಥಳ : ಗ್ರಾಮದ ಈಶಾನ್ಯ ಭಾಗದ ಕೆರೆಯ ಬಳಿ

೫. ಅಭಿಮುಖ : ಪೂರ್ವಾಭಿಮುಖ

೬. ಕಾಲ : ಮುಖ್ಯ ದೇವಾಲಯ ಕ್ರಿ.ಶ. ೧೦ನೇ ಶತಮಾನ ಸೂರ್ಯ ಗುಡಿ ಕ್ರಿ.ಶ. ೯೮೭ ಮಹಾ ಮಂಟಪ ಹಾಗು ನರಸಿಂಹ ಗುಡಿ ಕ್ರಿ.ಶ. ೧೧ನೇ ಶತಮಾನದ ಮೊದಲ ಭಾಗ[೩೪]

೭. ಶಿಖರ ಶೈಲಿ : ಮೂಲ ಶಿಖರವೀಗ ಉಳಿದಿಲ್ಲ

೮. ಬಳಸಿದ ಶಿಲೆ : ಬಳಪದ ಶಿಲೆ

ಈ ದೇವಾಲಯ ಗರ್ಭಗೃಹ, ಅಂತರಾಳ, ನವರಂಗ, (ಇದು ರಾಷ್ಟ್ರಕೂಟರ ಕಾಲಕ್ಕೆ ಸೇರಿದ್ದು) ಹಾಗೂ ಮಹಾ ಮಂಟಪವನ್ನು ಹೊಂದಿದೆ. (ನಂತರದ ಅರಸರು ನಿರ್ಮಿಸಿದ್ದು), ಮಹಾಮಂಟಪದ ಉತ್ತರ ದಿಕ್ಕಿಗೆ ನರಸಿಂಹ, ಪೂರ್ವದಿಕ್ಕಿಗೆ ಸೂರ್ಯರ ದೇವಾಲಯಗಳಿವೆ[೩೫].

ದೇವಾಲಯದ ಆಧಿಷ್ಠಾನವು ಉಪಾನ, ಪದ್ಮ, ಕುಮುದ, ಕಪೋತಗಳಿಂದ ಕೂಡಿದೆ, ಭಿತ್ತಿಯ ಭಾಗದಲ್ಲಿ ಅರೆಗಂಬಗಳನ್ನು ಕೆತ್ತಲಾಗಿದೆ. ಗರ್ಭಗುಡಿ ಮೇಲಿನ ಪ್ರಸ್ತರದ ಭಾಗದಲ್ಲಿ ಮಿಥುನಶಿಲ್ಪಗಳನ್ನು ಬಿಡಸಲಾಗಿದೆ. ಸುತ್ತಲೂ ಕಪೋತವಿದೆ. ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಿತವಾದ ಮೇಲ್ಕಟ್ಟಡವು ಅನೇಕ ಮಾರ್ಪಾಡುಗಳನ್ನು ಹೊಂದಿದೆ[೩೬]. ಗರ್ಭಗುಡಿಯ ಮೇಲೆ ನಂತರ ಕಾಲದಲ್ಲಿ ನಿರ್ಮಿಸಿದ ಶಿಖರವಿದೆ. ದೇವಾಲಯದ ಹೊರಭಾಗದಲ್ಲಿ ಅಲ್ಲಲ್ಲಿ ಚಿಕ್ಕ ಗುಡಿಗಳಿದ್ದು, ಪೂರ್ವ ದಿಕ್ಕಿನಲ್ಲಿ ದೀಪಸ್ತಂಭವಿದೆ.

ಗರ್ಭಗುಡಿಯು ಚೌಕಾಕಾರವಾಗಿದ್ದು, ಅದರಲ್ಲಿ ಲಿಂಗವಿದೆ. ಇದರ ದ್ವಾರವು ಲತಾ ,ಸ್ತಂಭ, ನೃತ್ಯ ಶಾಖೆಗಳಿಂದ ಕೂಡಿದೆ. ಆಯತಾಕಾರದ ಅಂತರಾಳದಲ್ಲಿ ಯಾವುದೇ ಮೂರ್ತಿಗಳಿಲ್ಲ. ಇದರ ವಿತಾನ (ಮುಚ್ಚಿಗೆ)ದಲ್ಲಿ ಪದ್ಮವಿದೆ. ದ್ವಾರದ ಕೆಳಭಾಗದಲ್ಲಿ (ಪೇದ್ಯಾ) ಶೈವ ದ್ವಾರಪಾಲಕರಿದ್ದಾರೆ. ದ್ವಾರವು ರತ್ನ ಶಾಖೆ, ವಿದ್ಯಾಧರ ಹಾಗೂ ಜಾಲಂಧ್ರಗಳಿಂಗ ಅಲಂಕೃತಗೊಂಡಿದೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಹಾಗು ಉತ್ತರಾಂಗದಲ್ಲಿ ತ್ರಿಮೂರ್ತಿಗಳಿದ್ದಾರೆ. ಸ್ತಂಭದ ಮೇಲಿನ ಮಕರ ತೋರಣದೊಳಗೆ ಶಿವ ತಾಂಡವ ನೃತ್ಯದ ಮೂರು ರೂಪಗಳನ್ನು ಮಧ್ಯದಲ್ಲಿ ಕೆತ್ತಲಾಗಿದೆ. ಅದರ ಬಲ ಬದಿಗೆ ಚತುರ್ಮುಖ ಬ್ರಹ್ಮ, ಎಡಭಾಗಕ್ಕೆ ವಿಷ್ಣು,ಪದ್ಮಾಸನದಲ್ಲಿ ಅಂಜಲಿ ಮುದ್ರೆಯಲ್ಲಿ ಕುಳಿತಿರುವಂತೆ ಕೆತ್ತಲಾಗಿದೆ.

ನವರಂಗವು ನಾಲ್ಕು ಕಂಭಗಳಿಂದ ಕೂಡಿದೆ. ಇಲ್ಲಿನ ಕಂಭಗಳು ಚೌಕ, ವೃತ್ತಾಕಾರದಲ್ಲಿವೆ. ವೃತ್ತಾಕಾರದ ಭಾಗದಲ್ಲಿ ಮಾಲಾಲಂಕಾರವಿದೆ. ಈ ಕಂಭಗಳ ಮೇಲಿನ ಬೋದಿಗೆಯು ಪುಷ್ಪ ದಳಗಳಿಂದ ಅಲಂಕೃತವಾಗಿದೆ. ಇದರ ಮೇಲಿನ ಮುಚ್ಚಿಗೆಯು ಸಾಧಾರಣವಾಗಿದೆ. ನವರಂಗದದ್ವಾರದ 'ಪೇದ್ಯಾ' ಭಾಗದಲ್ಲಿ ರತಿ-ಮನ್ಮಥರು ಮತ್ತು ಶೈವ ದ್ವಾರ ಪಾಲಕರು ಎಡಬಲದಲ್ಲಿ ಇದ್ದಾರೆ. ದ್ವಾರವು ರತ್ನ ಶಾಖೆ, ನಾಗಶಾಖೆ,, ವಿದ್ಯಾಧರಶಾಳೆ ಕಂಭಶಾಖೆ, ವಲ್ಲಿಶಾಖೆ, ಹಾಗೂ ಪುಷ್ಪ ಶಾಖೆಗಳಿಂದ ಆಲಂಕೃತಗೊಂಡಿದ್ದು, ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಉತ್ತರಾಂಗದಲ್ಲಿ ಗಣಾಧಿಪರು ಧ್ಯಾನಾಸಕ್ತರಾಗಿರುವಂತೆ ಮತ್ತು ಶಿವನ ರೂಪಗಳನ್ನು ಬಿಡಿಸಲಾಗಿದೆ.

ತೆರೆದ ಮಹಾಮಂಟಪದ ಒಳಭಾಗದಲ್ಲಿ ಸುತ್ತಲೂ ಕಕ್ಷಾಸನವಿದೆ. ಕಕ್ಷಾಸನದ ಮೇಲೆ ಹಾಗೂ ಮಹಾಮಂಟಪದಲ್ಲಿ ಒಟ್ಟು ಅರವತ್ನಾಲ್ಕು ಕಂಭಗಳಿದ್ದರೂ ಸಹ ಐವತ್ತೊಂಬತ್ತು ಕಂಭಗಳು ಹೆಚ್ಚು ಅಲಂಕೃತವಾಗಿವೆ [೩೭]. ಇಲ್ಲಿನ ಕಂಭಗಳಲ್ಲಿ ಒಂಭತ್ತು ಮಾದರಿಯ ಕಂಭಗಳಿದ್ದು[೩೮], ಅವುಗಳು ಚೌಕ , ಅಷ್ಟಮುಖ, ನಕ್ಷತ್ರಾಕಾರ, ಗಂಟೆಯಾಕಾರವಾಗಿವೆ. ಇವುಗಳಲ್ಲಿ ವರ್ತುಲಾಕಾರಾದ ಕಂಭಗಳು ಪ್ರಮುಖವಾಗಿವೆ. ಮಧ್ಯದಲ್ಲಿನ ನಾಲ್ಕು ಕಂಭಗಳ ದಂಡಭಾಗದಲ್ಲಿ ಎರಡು ಅರೆ ಕಂಭಗಳ ಮೇಲೆ ಮಕರ ತೋರಣ ಇರುವಂತೆ ಮಾಡಿ ಇದರ ಮಧ್ಯದಲ್ಲಿ ದಾರ್ಮಿಕ ಹಾಗೂ ಲೌಕಿಕ ಶಿಲ್ಪಗಳನ್ನು ಬಿಡಿಸಲಾಗಿದೆ. ಅವುಗಳಲ್ಲಿ ನೃತ್ಯ ಶಿವ, ನೃತ್ಯಗಣೇಶ, ಹಿರಣ್ಯಕಶ್ಯಪನನ್ನು ಕೊಲ್ಲುತ್ತಿರುವ ನರಸಿಂಹ, ರತಿ ಮನ್ಮಥ, ಭೈರವಿ, ಸರಸ್ವತಿ, ನೃತ್ಯದಲ್ಲಿ ತೊಡಗಿರುವ ಸ್ತ್ರೀ, ದರ್ಪಣ ಸುಂದರಿ, ಚೇಳನ್ನು ಕೈಯಲ್ಲಿ ಹಿಡಿದಿರುವ ಸ್ತ್ರೀ ಹಾಗು ಕೋತಿಯೊಂದಿಗಿನ ಸ್ತ್ರೀ ಪ್ರಮುಖವಾಗಿವೆ. ಮಧ್ಯದಲ್ಲಿನ ಮುಚ್ಚಿಗೆ (ವಿತಾನ) ನಾಲ್ಕು ಹಂತಗಳಲ್ಲಿದ್ದು, ಅದರಲ್ಲಿ ರೇಖಾಕೃತಿಗಳ, ಪುಷ್ಪಗಳ ಅಲಂಕರಣೆಮಾಡಲಾಗಿದೆ. ಕೆಳಗಿನ ಹಂತದಲ್ಲಿ ಎಂಟು ಕೀರ್ತಿ ಮುಖಗಳನ್ನು ಹಾಗೂ ಅವುಗಳ ಬದಿಗೆ ಲಂಬವಾಗಿ ವಾಹನ ಸಮೇತ ಅಷ್ಟದಿಕ್ಪಾಲಕರನ್ನು ಕೆತ್ತಲಾಗಿದೆ. ಇದರ ಮೇಲೆ ಲಂಬವಾಗಿ ಆಗ್ನೇಯ ,ನೈರುತ್ಯ ಭಾಗದಲ್ಲಿ ಕೋತಿಯೊಂದಿಗೆ ಸ್ತ್ರೀ ಹಾಗೂ ಈಶಾನ್ಯ ಭಾಗಕ್ಕೆ ಕೋತಿಯೊಂದನ್ನು ಚಿತ್ರಿಸಲಾಗಿದೆ. ಮಧ್ಯಭಾಗದಲ್ಲಿ ತೂಗಾಡುತ್ತಿರುವಂತಿದ್ದ ಪದ್ಮವೀಗ ಕಾಣಬರುತ್ತಿಲ್ಲ. ವೃತ್ತಾಕಾರದ ಈ ಮುಚ್ಚಿಗೆಯ ಮೇಲ್ಭಾಗದಲ್ಲಿ ಜನಾರ್ಧನ ಹಾಗೂ ಕಮಲ, ಪುಷ್ಪಗಳ ಅಲಂಕರಣೆ ಇದೆ.

ಮಹಾಮಂಟಪದ ಉತ್ತರಭಾಗಕ್ಕೆ ಉಗ್ರ ನರಸಿಂಹ ಗುಡಿ ಇದೆ. ಗರ್ಭಗುಡಿ, ಅಂತರಾಳ, ಚಿಕ್ಕ ಮುಖಮಂಟಪವನ್ನು ಇದು ಹೊಂದಿದೆ. ಗರ್ಭಗೃಹದಲ್ಲಿ ಉಗ್ರನರಸಿಂಹನ ಸುಂದರ ಮೂರ್ತಿ ಇದೆ. ಇಲ್ಲಿನ ಪೇದ್ಯಾ ಮತ್ತು ದ್ವಾರ ಭಾಗವು ಸರಳ ರೀತಿಯಲ್ಲಿದೆ. ಆದರೆ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದ್ದು, ಈ ಶಿಲ್ಪದ ಎಡಬಲದಲ್ಲಿ ತಲಾ ಎರಡೆರಡು ಅಂದರೆ, ಒಟ್ಟು ನಾಲ್ಕು ಆನೆಗಳಿರುವುದು ವಿಶೇಷವಾಗಿದೆ [೩೯]. ಅಂತರಾಳದ ದ್ವಾರವು ಎರಡು ಸಾಧಾರಣ ಶಾಖೆಗಳಿಂದ ಕೂಡಿದೆ. ನಂತರ ಅರೆಗಂಭದ ಅಲಂಕಾರವಿದ್ದು, ಈ ಅರೆಗಂಭ ಅಲಂಕಾರದ ಬಳಿಯೇ ಲಂಬವಾಗಿರುವ ಮೂರು ಸಾಲಿನ ವೃತ್ತಕಾರದ ಪುಷ್ಪದಲ್ಲಿ ಕೊರೆದ ಜಾಲಂಧ್ರಗಳಿವೆ.

ಮಹಾಮಂಟಪಕ್ಕೆ ಹೊಂದಿಕೊಂಡಂತೆ ಅದರ ಪೂರ್ವ ಭಾಗಕ್ಕೆ ಸೂರ್ಯನ ಗುಡಿ ಇದೆ. ಗರ್ಭಗುಡಿ , ಅಂತರಾಳವಿರುವ ಈ ಗುಡಿಯ ಅನೇಕ ಭಾಗಗಳು ನಶಿಸಿರುವ ಸಾಧ್ಯತೆಗಳಿವೆ. ಗರ್ಭಗೃಹದಲ್ಲಿ ಸೂರ್ಯನ ಮೂರ್ತಿ ಇದೆ. ಗರ್ಭಗೃಹದ ದ್ವಾರವು ನಾಲ್ಕು ಸಾಧಾರಣ ಶಾಖೆದಿಂದ ಕೂಡಿದೆ. ಹಾಗೂ ಅಂತರಾಳವು ಮೂರು ಸಾಧಾರಣ ಶಾಖೆಯಿಂದ ಕೂಡಿದ್ದು ಇವರೆಡರ ಲಲಾಟವು ಖಾಲಿ ಇದೆ.

ಪ್ರವೇಶದ್ವಾರವು ನವರಂಗದ ದಕ್ಷಿಣಕ್ಕಿದ್ದು ಇದರ ದ್ವಾರವು ರತ್ನಶಾಖೆ, ನಾಗಶಾಖೆ, ಜೊತೆಯಲ್ಲಿ ವಿದ್ಯಾಧರ ಶಾಖೆ, ಮೇಲ್ಭಾಗದಲ್ಲಿ ಪೂರ್ಣಕುಂಭದ ಆಕಾರವನ್ನು ಕೆಳಭಾಗದಲ್ಲಿ ದುಂಡಾಕಾರವನ್ನು ಪಡೆದು ಕೊಂಡು ಕಂಭಶಾಖೆ, ನೃತ್ಯ ಹಾಗೂ ವಾದ್ಯದಲ್ಲಿ ತೊಡಗಿದ ಯಕ್ಷಶಾಖೆ ಮೊದಲಾದ ಏಳು ಶಾಖೆಗಳಿವೆ. ಮೊದಲ ಮೂರು ಶಾಖೆಗಳು ಲಲಾಟದವರೆಗೂ ಮುಂದುವರಿದಿವೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಗಜಲಕ್ಷ್ಮೀಯ ಮೇಲ್ಭಾಗದಲ್ಲಿನ ಉತ್ತರಾಂಗದ ಮಧ್ಯದಲ್ಲಿ ಅನಂತ ಪದ್ಮನಾಭನಿದ್ದು, ಈತನ ಪಕ್ಕದಲ್ಲಿ ವಾದ್ಯದವರು, ನೃತ್ಯದವರು ಇದ್ದಾರೆ. ಇದರ ಮೇಲ್ಭಾಗದ ಕಪೋತದ ಕೆಳಭಾಗ ಕೂಡ್ಯವು ಪುಷ್ಪಗಳಿಂದ ಅಲಂಕೃತಗೊಂಡಿದೆ. ಸ್ತಂಭಗಳಿಂದ ಹೊರಹೊಮ್ಮಿದ ಸಿಂಹ ತೋರಣವಿದ್ದು, ಇದರ ಮಧ್ಯದಲ್ಲಿ ನಾಟ್ಯ ಶಿವನಿದ್ದಾನೆ. ಪುರುಷ ವಾದ್ಯದವರು , ಸ್ತ್ರೀ ನರ್ತಕಿಯರು ಆತನ ಪಕ್ಕದಲ್ಲಿದ್ದಾರೆ ಎಡಭಾಗದಲ್ಲಿ ನಿಂತ ಗಣೇಶ, ಬಲಭಾಗದ ಲಿಂಗವೊಂದರ ಬಳಿ ಇಬ್ಬರು ಪುರುಷರಿದ್ದಾರೆ. ಹಾಗು ಚಾಮರ ಹಿಡಿದ ಸ್ತ್ರೀ ಅಂಜಲಿ ಮುದ್ರೆಯಲ್ಲಿರುವ ಪುರುಷ ಮತ್ತು ಖತ್ತಿ ,ಗುರಾಣಿ ಹಿಡಿದ ಪುರಷನೊಬ್ಬನ ಶಿಲ್ಪ ಇದೇ ಭಾಗದಲ್ಲಿದೆ . ಚಾಲುಕ್ಯ ವಾಸ್ತು ಶೈಲಿಗೆ ಈ ದೇವಾಲಯ ಉತ್ತಮ ನಿದರ್ಶನವಾಗಿದೆ.

ಚಾಲುಕ್ಯರ ರಾಜನಾದ ಅಹಾಮಲ್ಲನು ಕ್ರಿ.ಶ. ೯೮೭ರಲ್ಲಿ ಉತ್ತರ ಭಾಗದ ದೇವಾಲಯವನ್ನು ಕಟ್ಟಿಸಿದ ನೆನಪಿಗಾಗಿ ಆದಿತ್ಯ ದೇವರ ಹೆಸರಿಗೆ ಉಂಬಳಿ ಬಿಟ್ಟಬಗ್ಗೆ ಶಾಸನ ಉಲ್ಲೇಖಿಸುತ್ತದೆ[೪೦]. ದುಗ್ಗಮಯ್ಯ ನೆಂಬುವನು ಉತ್ತರ ಭಾಗದ ದೇವಾಲಯವನ್ನು ಕಟ್ಟಿದನೆಂದು ಹೇಳುತ್ತದೆ. ಇಲ್ಲಿನ ಕಲಿದೇವರಿಗೆ ಮತ್ತು ನರಸಿಂಹದೇವರಿಗೆ ದಾನ ಕೊಟ್ಟ ಬಗ್ಗೆ ಹಲವು ಶಾಸನಗಳು ಉಲ್ಲೇಖಿಸುತ್ತವೆ[೪೧].

೧. ಊರು : ಕುರವದ ಗಡ್ಡೆ
೨. ತಾಲೂಕು : ಹೊನ್ನಾಳಿ
೩. ಹೆಸರು : ರಾಮೇಶ್ವರ
೪. ಸ್ಥಳ : ತುಂಗಭದ್ರಾನದಿಯ ಮಧ್ಯಭಾಗದ ದಿಬ್ಬದಲ್ಲಿದೆ
೫. ಅಭಿಮುಖ : ಮುಖ್ಯ ಗರ್ಭಗುಡಿ ಪೂರ್ವಾಭಿಮುಖವಾಗಿದ್ದು, ಪ್ರವೇಶದ್ವಾರ ದಕ್ಷಿಣ ದಿಕ್ಕಿಗಿದೆ.
೬. ಕಾಲ : ಕ್ರಿ.ಶ. ೧೧೪೨
೭. ಶಿಖರ ಶೈಲಿ : ಮೂಲ ಶಿಖರ ಉಳಿದಿಲ್ಲ
೮. ಬಳಸಿದ ಶಿಲೆ : ಬಳಪದ ಶಿಲೆ

ಗರ್ಭಗುಡಿ,ಅಂತರಾಳ, ನವರಂಗಗಳಿದ್ದು,ದಕ್ಷಿಣದಲ್ಲಿ ಪ್ರವೇಶದ್ವಾರವಿದೆ.

ಅಧಿಷ್ಠಾನವು ಪದ್ಮ, ಕಪೋತಗಳನ್ನೊಳಗೊಂಡಿದೆ. ಭಿತ್ತಿಯು ಸರಳವಾಗಿದೆ. ಪ್ರಸ್ತರದಲ್ಲಿ ಉತ್ತರ, ವಾಜನ, ಕಪೋತ ಭಾಗಗಳು ಇದ್ದು, ಆ ಭಾಗಗಳು ಅಲ್ಲಲ್ಲಿ ಬಿದ್ದು ಹೋಗಿವೆ. ಗರ್ಭಗುಡಿಯ ಮೇಲಿನ ಮೂಲ ಶಿಖರವೀಗ ಉಳಿದಿಲ್ಲ.

ಚೌಕಕಾರದ ಗರ್ಭಗುಡಿಯಲ್ಲಿ ಲಿಂಗವಿದೆ ಇದರ ಮುಚ್ಚಿಗೆಯಲ್ಲಿ ಪದ್ಮವಿದ್ದು, ದ್ವಾರವು ಪುಷ್ಪ, ಸ್ತಂಭ, ಲತಾಶಾಖೆಯಿಂದ ಕಂಗೊಳಿಸುತ್ತದೆ. ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವನ್ನು ಕೆತ್ತಲಾಗಿದೆ. ಅಂತರಾಳವು ಆಯತಕಾರದಲ್ಲಿದೆ. ದ್ವಾರದಲ್ಲಿ ತ್ರಿಶೂಲ, ಡಮರುಗಳನ್ನು ಹಿಡಿದಿರುವ ಶೈವ ದ್ವಾರಪಾಲಕರಿದ್ದಾರೆ. ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದ್ದು,ದ್ವಾರದ ಎರಡೂ ಬದಿಗೂ ಸುರಳಿಯಕಾರದ ಜಾಲಂಧ್ರಗಳಿವೆ.

ನವರಂಗದಲ್ಲಿ ಅಷ್ಟಕೋನಾಕಾರದ ಹಾಗು ವೃತ್ತಕಾರದ ನಾಲ್ಕು ಕಂಭಗಳಿವೆ. ವೃತ್ತಕಾರದ ಭಾಗದಲ್ಲಿ ಉತ್ತಮ ಮಾಲಾಂಕಾರವಿದೆ. ಬೋದಿಗೆಗಳು ಸರಳವಾಗಿವೆ. ಈ ನಾಲ್ಕು ಕಂಭಗಳ ಮಧ್ಯದ ಮುಚ್ಚಿಗೆಯಲ್ಲಿ ಪದ್ಮವಿದೆ. ಈ ಕಂಭಗಳ ಮಧ್ಯದ ವೇದಿಕೆಯಲ್ಲಿ ಸುಂದರ ಚಾಲುಕ್ಯ ಶೈಲಿಯ ನಂದಿ ಇದೆ. ಇದೇ ನವರಂಗದಲ್ಲಿ ನಾಗ ಶಿಲ್ಪಗಳು, ಶೈವ ಯತಿ, ಸೂರ್ಯ,ವೀರಭದ್ರ, ಗಣೇಶ, ದುರ್ಗೆ, ಮಹಿಷ ಮರ್ಧಿನಿ,ನಂದಿ ಮೂರ್ತಿಗಳು ಇವೆ[೪೨]. ಪ್ರವೇಶದ್ವಾರವು ದಕ್ಷಿಣ ದಿಕ್ಕಿಗಿದೆ. ದ್ವಾರದ ಪೇದ್ಯಾ ಭಾಗದಲ್ಲಿ ಶೈವ ದ್ವಾರಪಾಲಕರಿದ್ದಾರೆ. ಲಾಲಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ದ್ವಾರದ ಎಡ ಬಲದಲ್ಲಿ ಸುರಳಿಯಾಕಾರದ ಜಾಲಂಧ್ರಗಳಿವೆ. ಪ್ರವೇಶದ್ವಾರದ ಎದುರಿಗೆ ಬೃಹತ್ ದೀಪ ಸ್ತಂಭವೊಂದಿದೆ. ಈ ದೇವಾಲಯದ ಕಂಭಗಳ ವಿನ್ಯಾಸ, ಚಂದ್ರಶಿಲೆ, ಲಲಾಟಬಿಂಬದಲ್ಲಿನ ಗಜಲಕ್ಷ್ಮಿ ಶಿಲ್ಪ, ಜಾಲಂಧ್ರ ವಿನ್ಯಾಸ, ಮುಚ್ಚಿಗೆಯಲ್ಲಿನ ಅಲಂಕಾರ ಇವುಗಳನ್ನು ಆಧಾರವಾಗಿಟ್ಟುಕೊಂಡು ಇದು ಕಲ್ಯಾಣಿ ಚಾಲುಕ್ಯರ ಕಾಲಾವಧಿಯಲ್ಲಿ ನಿರ್ಮಿತವಾಗಿದೆ ಎಂದು ಹೇಳಬಹುದು.

ಈ ದೇವಾಲಯಕ್ಕೆ ಹೊಯ್ಸಳರು, ಯಾದವರು, ವಿಜಯನಗರದ ಅರಸರು ದತ್ತಿ ಬಿಟ್ಟ ಉಲ್ಲೇಖಗಳಿವೆ[೪೩].

೧. ಊರು : ಚನ್ನಗಿರಿ

೨. ತಾಲೂಕು : ಚನ್ನಗಿರಿ

೩. ಹೆಸರು : ಈಶ್ವರ

೪. ಸ್ಥಳ : ಬಸ್ ನಿಲ್ದಾಣದಿಂದ ಪೂರ್ವಭಾಗಕ್ಕೆ (ಚಿತ್ರದುರ್ಗಕ್ಕೆ ಹೋಗುವ ರಸ್ತೆ ಬದಿಯಲ್ಲಿ)

೫. ಅಭಿಮುಖ : ಮುಖ್ಯ ಗರ್ಭಗುಡಿ ಪೂರ್ವಾಭಿಮುಖವಾಗಿದ್ದು,ಪ್ರವೇಶದ್ವಾರ ದಕ್ಷಿಣ ಇದೆ.

೬. ಕಾಲ : ಕ್ರಿ.ಶ. ೧೧೪೨[೪೪]

೭. ಶಿಖರ ಶೈಲಿ : ಶಿಖರ ಉಳಿದಿಲ್ಲ

೮. ಬಳಸಿದ ಶಿಲೆ : ಬಳಪದ ಶಿಲ

ಸ್ಥಳೀಯರಿಂದ ಬಸವಣ್ಣ ಮತ್ತು ಕಲ್ಲೇಶ್ವರ ಎಂದು ಕರೆಯಲ್ಪಡುವ ಈ ದೇವಾಲಯ ಮೂರು ಗರ್ಭಗುಡಿಗಳು (ಪಶ್ಚಿಮ , ಉತ್ತರ, ಪೂರ್ವದಿಕ್ಕಿನಲ್ಲಿ) ತೆರೆದ ಅಂತರಾಳ ಹಾಗು ನವರಂಗವನ್ನು ಹೊಂದಿದೆ.

ಅಧಿಷ್ಠಾನವು ಉಪಾನ, ಪದ್ಮ, ಕಪೋತಗಳಿಂದ ಕೂಡಿದೆ. ದೇವಾಲಯದ ಹೊರಭಾಗದ ಭಿತ್ತಿಯಲ್ಲಿ ಅರೆಗಂಭಗಳನ್ನು ಮಾತ್ರ ಕೆತ್ತಲಾಗಿದೆ. ದೇವಾಲಯದ ಪಶ್ಚಿಮ ಗರ್ಭಗುಡಿಯ ಹಿಂಭಾಗ ಹಾಗು ಅಂತರಾಳದ ಎರಡೂ ಕಡೆ ಮಣ್ಣು ಮುಚ್ಚಿರುವುದರಿಂದ , ಆ ಭಾಗದ ಭಿತ್ತಿಯ ಅಲಂಕಾರವನ್ನು ಗುರುತಿಸುವುದು ಕಷ್ಟ. ಭಿತ್ತಿಯ ಮೇಲಿನ ಪ್ರಸ್ತರದಲ್ಲಿ ಉತ್ತರ, ವಾಜನ ,ಕಪೋತ ಭಾಗಗಳಿದ್ದು, ಉತ್ತರ, ವಾಜನ ಭಾಗದಲ್ಲಿ ಹೂ ಬಳ್ಳಿಗಳ ಅಲಂಕರಣೆ ಮಾಡಲಾಗಿದೆ. ಗರ್ಭಗುಡಿಗಳ ಮೇಲಿನ ಶಿಖರಗಳು ನಶಿಸಿದ್ದು, ಈಗ ಕಂಡುಬರುತ್ತಿಲ್ಲ.

ಪಶ್ಚಿಮದ ಗರ್ಭಗುಡಿಯು ಚೌಕಕಾರವಾಗಿದ್ದು, ಅದರಲ್ಲಿ ಶಿವಲಿಂಗವಿದೆ. ಆ ಶಿವಲಿಂಗಕ್ಕೆದುರಾಗಿ ಅಲ್ಲಿ ನಂದಿಯೊಂದಿದೆ. ಈ ಗರ್ಭಗುಡಿಯ ಮುಚ್ಚಿಗೆಯಲ್ಲಿ ಪದ್ಮವಿದೆ. ಇದರ ದ್ವಾರದ ಪೇದ್ಯಾ ಭಾಗದಲ್ಲಿ ಶೈವದ್ವಾರಪಾಲಕರಿದ್ದಾರೆ. ದ್ವಾರವು ಪುಷ್ಪ, ಸ್ತಂಭಶಾಖೆಗಳಿಂದ ಅಲಂಕೃತಗೊಂಡಿದೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಈ ಗರ್ಭಗುಡಿಯ ಮುಂದೆ ತೆರೆದ ಅಂತರಾಳವಿದ್ದು, ಅದರಲ್ಲಿ ಯಾವ ಮೂರ್ತಿಗಳಿಲ್ಲ. ಅಂತರಾಳದ ಮುಂಭಾಗದಲ್ಲಿ ನಾಲ್ಕು ಸುಂದರ ಬಳಪದ ಕಲ್ಲಿನ ಕಂಭಗಳಿವೆ. ಈ ಕಂಭಗಳು ಚೌಕ ಹಾಗು ವೃತ್ತಕಾರವಾಗಿವೆ. ಇವುಗಳ ವೃತ್ತಕಾರ ಭಾಗವು ಗಂಟೆಯಾಕಾರ ಪಡೆದುಕೊಂಡಿದ್ದು, ಅವುಗಳ ಮೇಲ್ಭಾಗದಲ್ಲಿ ಮಾಲಾ ಅಲಂಕಾರವಿದೆ . ಇಲ್ಲಿನ ಬೋದಿಗೆಗಳ ನಾಲ್ಕು ದಿಕ್ಕಿನಲ್ಲೂ ಪುಷ್ಪ ಹಾಗೂ ಎಲೆ ಬಳ್ಳಿಗಳ ಅಲಂಕಾರ ಮಾಡಲಾಗಿದೆ. ಉತ್ತರದ ಗರ್ಭಗುಡಿಯು ಚೌಕಕಾರವಾಗಿದ್ದು, ಇದರ ಮುಚ್ಚಿಗೆಯಲ್ಲಿ ಪದ್ಮವಿದೆ. ಇದರಲ್ಲಿ ಯಾವ ಮೂರ್ತಿ ಇಲ್ಲ . ಇದರ ದ್ವಾರ ಸಾಧಾರಣವಾಗಿದೆ . ಪೂರ್ವದ ಗರ್ಭಗುಡಿಯಲ್ಲೂ ಯಾವ ಮೂರ್ತಿ ಇಲ್ಲ ಹಾಗು ಇಲ್ಲಿನ ದ್ವಾರವು ಸಾಧಾರಣವಾಗಿದೆ.ದಕ್ಷಿಣ ದಿಕ್ಕಿನಲ್ಲಿ ಪ್ರವೇಶದ್ವಾರವಿದ್ದು ಈ ದ್ವಾರದಲ್ಲಿ ದ್ವಾರ ಪಾಲಕರಿಲ್ಲ ದ್ವಾರವು ಸ್ತಂಭ ಶಾಖೆಯೊಂದನ್ನು ಮಾತ್ರ ಒಳಗೊಂಡಿದ್ದು ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಕಲ್ಯಾಣಿ ಚಾಲುಕ್ಯರ ಶೈಲಿಯಲ್ಲಿ ನಿರ್ಮಿತವಾಗಿರುವ ಈ ದೇವಾಲಯವು ಅವರ ಕಾಲದ್ದೆಂದು ಹೇಳಬಹುದು. ಇದೇ ವಾಸ್ತು ಲಕ್ಷಣಗಳನ್ನೊಳಗೊಂಡ ದೇವಾಲಯವೊಂದು ಚನ್ನಗಿರಿಯ ಬಸ್ ನಿಲ್ದಾಣದಿಂದ ಪಶ್ಚಿಮ ದಿಕ್ಕಿನಲ್ಲಿದ್ದು, ಆ ದೇವಾಲಯವನ್ನು ಕಲ್ಲೇಶ್ವರ (ಕೇತೇಶ್ವರ) ದೇವಾಲಯ ವೆಂದು ಕರೆಯಲಾಗುತ್ತದೆ.

೧. ಊರು : ಬಿಳಚೋಡು

೨. ತಾಲೂಕು : ಜಗಲೂರು

೩. ಹೆಸರು : ಈಶ್ವರ

೪. ಸ್ಥಳ : ಗ್ರಾಮದ ಮಧ್ಯದಲ್ಲಿ ಬಸ್‌ಸ್ಟಾಂಡ್‌ನ ಪಶ್ಚಿಮಕ್ಕಿದೆ.

೫. ಅಭಿಮುಖ : ದಕ್ಷಿಣಾಭಿಮುಖ

೬. ಕಾಲ : ಕ್ರಿ.ಶ. ೧೧ನೇ ಶತಮಾನದ ಮಧ್ಯಭಾಗ.

೭. ಶಿಖರ ಶೈಲಿ : ಶಿಖರವಿಲ್ಲ

೮. ಬಳಸಿದ ಶಿಲೆ : ಬಳಪದ ಶಿಲೆ ಮತ್ತು ಕಗ್ಗಲ್ಲು

ಗರ್ಭಗುಡಿ, ಅಂತರಾಳ ,ನವರಂಗ ,ತೆರದ ಮುಖ ಮಂಟಪವನ್ನು ಹೊಂದಿರುವ ಈ ದೇವಾಲಯ ದಕ್ಷಿಣಾಭಿಮುಖವಾಗಿದೆ. ಹೊರಗಿನಿಂದ ಈ ದೇವಾಲಯವನ್ನು ವೀಕ್ಷಣೆ ಮಾಡಿದರೆ, ಬುರುಜು ರೀತಿ ಕಂಡು ಬಂದರೂ ಸಹ ಒಳಭಾಗದಲ್ಲಿ ಸುಂದರ ದೇವಾಲಯವಿದೆ.

ಅಧಿಷ್ಠಾನ ಹಾಗು ಹೊರಭಾಗದ ಭಿತ್ತಿ ಭಾಗವನ್ನು ಸಂಪೂರ್ಣವಾಗಿ ಕಗ್ಗಲ್ಲನ್ನು ಉಪಯೋಗಿಸಿ ಬುರುಜು ರೀತಿಯಲ್ಲಿ ನಂತರದ ಕಾಲದಲ್ಲಿ ಕಟ್ಟಲಾಗಿದೆ. ಆದುದರಿಂದ ಅಧಿಷ್ಠಾನದಲ್ಲಿನ ವಿವಿಧ ಭಾಗಗಳಾಗಲಿ, ಭಿತ್ತಿಯ ಮೇಲಿನ ಅಲಂಕಾರವಾಗಲಿ ಕಂಡುಬರುವುದಿಲ್ಲ. ವಾಸ್ತವವಾಗಿ ಮೂಲ ದೇವಾಲಯವನ್ನು ವಿರೋಧಿಗಳಿಂದ ರಕ್ಷಿಸಲು ನಂತರ ಕಾಲದಲ್ಲಿ ಈ ರೀತಿ ಕಟ್ಟಿರಬೇಕೆನಿಸುತ್ತದೆ.

ಚೌಕಕಾರದ ಗರ್ಭಗುಡಿಯಲ್ಲಿ ಲಿಂಗವಿದ್ದು, ಇದರ ಮುಚ್ಚಿಗೆಯಲ್ಲಿ ಪದ್ಮವಿದೆ. ಅಂತರಾಳದಲ್ಲಿ ಯಾವುದೇ ಶಿಲ್ಪಗಳಿಲ್ಲ. ನವರಂಗದ ಮಧ್ಯದಲ್ಲಿ ನಾಲ್ಕು ಕಂಭಗಳಿದ್ದು, ಇವು ಚೌಕ, ಅಷ್ಟಕೋನಾ ಹಾಗು ವೃತ್ತಾಕಾರದಲ್ಲಿವೆ. ಈ ಕಂಭಗಳ ಮೇಲೆ ಹೇಳಿಕೊಳ್ಳುವಂತಹ ಅಲಂಕರಣೆ ಕಂಡು ಬರುವುದಿಲ್ಲ. ಬೋದಿಗೆಗಳು ಸರಳವಾಗಿವೆ. ನವರಂಗದ ಮುಚ್ಚಿಗೆಯಲ್ಲಿ ಅರಳಿದ ತಾವರೆ ಇದೆ. ಇದೇ ನವರಂಗದಲ್ಲಿ ಲಕ್ಷ್ಮೀ ನಾರಾಯಣ, ವಿಷ್ಣು, ಸೂರ್ಯ ಮೊದಲಾದ ಮೂರ್ತಿಗಳಿವೆ. ಪ್ರವೇಶದ್ವಾರವು ದಕ್ಷಿಣಾಭಿಮುಖವಾಗಿದ್ದು, ಲತಾ, ಸ್ತಂಭ, ವ್ಯಾಳಿ ಶಾಖೆಗಳಿಂದ ಕೂಡಿದೆ. ಮೊದಲ ಲತಾ ಶಾಖೆ ಲಲಾಟದವರೆಗೂ ಮುಂದುವರೆದಿದೆ. ದ್ವಾರದ ಕೆಳ ಭಾಗದಲ್ಲಿ ಶೈವ ದ್ವಾರಪಾಲಕರಿದ್ದು, ಅವರು ತ್ರಿಶೂಲ, ಡಮರುಗಳನ್ನು ಹಿಡಿದು ಸ್ಥಾನಿಕರಾಗಿದ್ದಾರೆ. ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಲಲಾಟದ ಮೇಲಿನ ಉತ್ತರಾಂಗ ಭಾಗದ ಮಧ್ಯದಲ್ಲಿ ಶಿವನು ಆಸೀನನಾಗಿದ್ದಾನೆ. ಆತನ ಬಳಿ ನಂದಿ ಇದೆ. ಈತನ ಎಡ ಮತ್ತು ಬಲದಲ್ಲಿ ಧ್ಯಾನಾಸಕ್ತ ಶಿಲ್ಪಗಳನ್ನು ಕೆತ್ತಲಾಗಿದೆ. ಇದು ಈ ದೇವಾಲಯದ ವಿಶೇಷವಾಗಿದೆ.

ಮುಖ ಮಂಟಪವು ತೆರೆದ ರೀತಿಯಲ್ಲಿದ್ದು, ಒಳಭಾಗದಲ್ಲಿ ಕಕ್ಷಾಸನಗಳಿವೆ. ಎರಡು ಕಂಭಗಳಿಂದ ಕೂಡಿದ ಈ ಮಂಟಪವನ್ನು ಪ್ರವೇಶಿಸಲು ' ಹಸ್ತಿ ಹಸ್ತ ' ಫಲಕದೊಡನೆ ಇರುವ ಸೋಪಾನಗಳಿವೆ. ಈ ದೇವಾಲಯದ ಒಳಭಾಗದ ವಾಸ್ತು ಲಕ್ಷಣಗಳು, ಹರಪನಹಳ್ಳಿ ತಾಲೂಕಿನ ಹಲವಾಗಲು ಕಲ್ಲೇಶ್ವರ ದೇವಾಲಯಕ್ಕೆ ಹೋಲಿಕೆಯಾಗುವುದು ಗಮನೀಯ ಅಂಶ. ಆದುದರಿಂದ ಈ ದೇವಾಲಯ ಕಲ್ಯಾಣಿ ಚಾಲುಕ್ಯರ ಕಾಲಾವಧಿಯಲ್ಲಿ ನಿರ್ಮಿತವಾಗಿದೆ ಎಂದು ಹೇಳಬಹುದು.

೧. ಊರು : ಬೆಳಗುತ್ತಿ

೨. ತಾಲೂಕು : ಹೊನ್ನಾಳಿ

೩. ಹೆಸರು : ಸಿದ್ದಲಿಂಗೇಶ್ವರ/ಸಿದ್ದೇಶ್ವರ

೪. ಸ್ಥಳ : ಗ್ರಾಮದ ಬಸ್ ನಿಲ್ದಾಣದಿಂದ ಪೂರ್ವಭಾಗಕ್ಕೆ

೫. ಅಭಿಮುಖ : ಮುಖ್ಯಗರ್ಭಗುಡಿ ಪೂರ್ವಾಭಿಮುಖವಾಗಿದ್ದು, ಪ್ರವೇಶ ದ್ವಾರ ದಕ್ಷಿಣ ದಿಕ್ಕಿಗಿದೆ.

೬. ಕಾಲ : ಕ್ರಿ.ಶ. ೧೧ ನೇ ಶತಮಾನದ ಮಧ್ಯಭಾಗ[೪೫]

೭. ಶಿಖರ ಶೈಲಿ : ಶಿಖರ ಉಳಿದಿಲ್ಲ

೮. ಬಳಸಿದ ಶಿಲೆ : ಬಳಪದ ಶಿಲೆ

ಈ ದೇವಾಲಯ ಗರ್ಭಗುಡಿ, ಅಂತರಾಳ, ನವರಂಗ, ಮುಖ ಮಂಟಪಗಳನ್ನೊಳಗೊಂಡಿದೆ.

ಅಧಿಷ್ಠಾನವು ಉಪಾನ, ಪದ್ಮ, ಕುಮುದ, ಕಪೋತಗಳನ್ನೊಳಗೊಂಡಿದೆ. ಭಿತ್ತಿಯ ಮಧ್ಯದಲ್ಲೊಂದು ಉಬ್ಬು ಪಟ್ಟಿಯಿದ್ದು , ಅದರಲ್ಲಿ ಪುಷ್ಪಗಳನ್ನು ಬಿಡಿಸಲಾಗಿದೆ. ಉಳಿದಂತೆ ಭಿತ್ತಿ ಸರಳವಾಗಿದ್ದು, ಪೂರ್ವ ಭಾಗದ ಭಿತ್ತಿಯು ಬಿದ್ದು ಹೋಗಿದೆ. ಭಿತ್ತಿ ಮೇಲೆ ಕಪೋತವಿದ್ದು, ದೇವಾಲಯದ ಸುತ್ತಲೂ ಸ್ವಲ್ಪ ಹೊರ ಚಾಚಿದ ರೀತಿಯಲ್ಲಿದೆ. ಗರ್ಭಗುಡಿಯ ಮೇಲಿನ ಶಿಖರವು ನಾಶವಾಗಿದೆ.

ಚೌಕಕಾರದ ಗರ್ಭಗುಡಿಯಲ್ಲಿ ಶಿವಲಿಂಗವಿದೆ. ಗರ್ಭಗುಡಿಯ ಒಳಭಾಗದ ಮಧ್ಯಭಿತ್ತಿಯು ಸುತ್ತಲೂ ಮುಂದೆ ಚಾಚಿರುವುದರಿಂದ ಪೂಜಾ ಸಾಮಗ್ರಿಗಳನ್ನು ಇಡಲು ಸಹಾಯಕವಾಗಿದೆ. ಗರ್ಭಗುಡಿಯ ಮುಚ್ಚಿಗೆಯಲ್ಲಿ ಅರಳಿದ ಪದ್ಮವಿದೆ . ದ್ವಾರದ ಕೆಳ ಭಾಗದಲ್ಲಿ ಶೈವ ದ್ವಾರ ಪಾಲಕರಿದ್ದಾರೆ. ಇವರ ಬಳಿ ಚಾಮರ ಹಿಡಿದ ಸೇವಕಿಯರಿದ್ದಾರೆ. ಪುಷ್ಪ, ವಿದ್ಯಾಧರ ,ಸ್ತಂಭ ಶಾಖೆಯಿಂದ ಕೂಡಿದ ದ್ವಾರವು ಸುಂದರವಾಗಿದೆ. ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ.ಅಂತರಾಳವು ಆಯತಾಕಾರವಾಗಿದ್ದು, ಇದರ ಮುಚ್ಚಿಗೆಯಲ್ಲಿ ತಾವರೆಯಿದೆ. ಇಲ್ಲಿನ ದ್ವಾರದ ಕೆಳಭಾಗದಲ್ಲಿ ಶೈವ ದ್ವಾರಪಾಲಕರಿದ್ದು, ಅವರ ಬಳಿ ಚಾಮರಧಾರೆಯರು ಇಲ್ಲಿಯೂ ಇದ್ದಾರೆ. ದ್ವಾರವು ರತ್ನ ,ಕಂಭ ,ಲತಾ, ಶಾಖೆಗಳಿಂದ ಅಲಂಕಾರವಾಗಿದೆ.

ನವರಂಗದ ಪಶ್ಚಿಮ ಭಾಗದ ಭಿತ್ತಿಯಲ್ಲಿ (ಅಂತರಾಳದ ಮಂದಿನ ಎಡ ಮತ್ತು ಬಲಭಾಗದಲ್ಲಿ) ಎರಡು ಕೂಷ್ಠ ಗುಡಿಗಳಿದ್ದು , ಎಡಭಾಗದ ಕೂಷ್ಠಗುಡಿಯಲ್ಲಿ ಗಣೇಶನ ಮೂರ್ತಿ ಇದೆ. ಮತ್ತೊಂದರಲ್ಲಿ ಯಾವ ಮೂರ್ತಿಯೂ ಇಲ್ಲ.ನವರಂಗದ ಉತ್ತರ ಭಾಗದಲ್ಲೊಂದು ಗರ್ಭಗುಡಿ ಇದೆ. ಈ ಗುಡಿಯಲ್ಲಿ ಮೂಲತಃ ಇದ್ದ ಮೂರ್ತಿ ಈಗ ಕಾಣಬರುತ್ತಿಲ್ಲ. ಇದರ ಮುಚ್ಚಿಗೆಯಲ್ಲಿ ಪದ್ಮವಿದೆ. ದ್ವಾರದಲ್ಲಿ ಸ್ತಂಭಶಾಖೆಯನ್ನು ಹೊರತುಪಡಿಸಿ ಉಳಿದ ಶಾಖೆಗಳನ್ನು ಅಲಂಕರಿಸಿಲ್ಲ.

[illegible]

ನವರಂಗದ ಮಧ್ಯದಲ್ಲಿ ನಾಲ್ಕು ಬಳಪದ ಕಲ್ಲಿನ ಕಂಭಗಳಿದ್ದು ,ಅವು ಚೌಕ ಮತ್ತು ವೃತ್ತಾಕಾರವಾಗಿವೆ. ವೃತ್ತಾಕಾರದ ಕೆಳಭಾಗವು ಬಳೆಯ ಅಲಂಕಾರ ಪಡೆದಿದ್ದರೆ, ಅದರ ಮೇಲಿನ ಭಾಗವು ಗಂಟೆಯಾಕಾರದಲ್ಲಿದ್ದು, ಅದರ ಮೇಲೆ ಮಾಲಾಲಂಕಾರವಿದೆ. ಇದೇ ಕಂಭಗಳ ಕಂಠ ಹಾಗು ಫಲಕದ ಭಾಗಗಳನ್ನು ಉತ್ತಮವಾಗಿ ಅಲಂಕರಿಸಿರುವುದು ಶಿಲ್ಪಿಯ ಉತ್ತಮ ಕೌಶಲ್ಯಕ್ಕೆ ಸಾಕ್ಷಿಯಾಗಿದೆ. ಇಲ್ಲಿ ಬೋದಿಗೆಗಳು ಪುಷ್ಪಗಳಿಂದ ಅಲಂಕೃತವಾಗಿದ್ದು, ಬೋದಿಗೆಗಳ ನಾಲ್ಕು ದಿಕ್ಕಿನಲ್ಲಿ ಕಮಲದ ಮೊಗ್ಗುಗಳು ಇಳಿ ಬಿದ್ದ ರೀತಿಯ ಅಲಂಕಾರವಿದೆ. ಈ ನಾಲ್ಕು ಕಂಭಗಳ ಮಧ್ಯದ ಮುಚ್ಚಿಗೆಯಲ್ಲಿ ಅರಳಿದ ಪದ್ಮವೊಂದು ಮಧ್ಯದಲ್ಲಿದ್ದು, ಅದರ ನಾಲ್ಕು ಮೂಲೆಯಲ್ಲೂ ಒಂದೊಂದು ಚಿಕ್ಕ ಪುಷ್ಪಗಳನ್ನು ಕೆತ್ತಲಾಗಿದೆ.

ಪ್ರವೇಶದ್ವಾರವು ದಕ್ಷಿಣ ದಿಕ್ಕಿಗಿದ್ದು ಸರಳ ರೀತಿಯಲ್ಲಿದೆ. ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಪ್ರವೇಶದ್ವಾರದ ಮುಂದೆ ಮುಖ ಮಂಟಪವಿತ್ತೆಂದು ಈಗ ಅಲ್ಲಿ ಉಳಿದಿರುವ ಕುರುಹುಗಳಿಂದ ಹೇಳಬಹುದು. ಈ ಮಂಟಪಕ್ಕೆ ಸೋಪಾನಗಳಿವೆ. ಪ್ರವೇಶ ದ್ವಾರದ ಮುಂಭಾಗದಲ್ಲಿ ವೀರಗಲ್ಲುಗಳಿವೆ. ಈ ದೇವಾಲಯದಲ್ಲಿನ ಕಂಭಗಳ ವಿನ್ಯಾಸ ಹಾಗು ಭಿತ್ತಿಯ ಅಲಂಕರಣೆ ಇವುಗಳು ಕಲ್ಯಾಣಿ ಚಾಲುಕ್ಯ ಶೈಲಿಯಲ್ಲಿವೆ ಎಂದು ಮೇಲ್ನೋಟಕ್ಕೆ ಕಂಡುಬಂದರೂ ಸಹ ಭಿತ್ತಿಯ ಮೇಲಿನ ವಾಸ್ತು ಲಕ್ಷಣದ ಆಧಾರದ ಮೇಲೆ ಇದು ಕಲ್ಯಾಣಿ ಚಾಲುಕ್ಯರ ವಾಸ್ತುಶೈಲಿಯ ಮಾದರಿಯಲ್ಲಿಯೇ ಬೆಳಗುತ್ತಿ ಸಿಂಧರ ಕಾಲದಲ್ಲಿ ನಿರ್ಮಾಣವಾಗಿದೆ ಎಂದು ಹೇಳಬಹುದು.

೧. ಊರು : ಹಲವಾಗಲು

೨. ತಾಲೂಕು : ಹರಪನಹಳ್ಳಿ

೩. ಹೆಸರು : ಕಲ್ಲೇಶ್ವರ[೪೬]

೪. ಸ್ಥಳ : ಗ್ರಾಮದ ಮಧ್ಯದಲ್ಲಿ

೫. ಅಭಿಮುಖ : ಗರ್ಭಗುಡಿ ಪೂರ್ವಕ್ಕೆ ಮುಖಮಾಡಿದ್ದು ದಕ್ಷಿಣಕ್ಕೆ ಪ್ರವೇಶ ದ್ವಾರವಿದೆ.

೬. ಕಾಲ : ಕ್ರಿ.ಶ. ೧೧ನೇ ಶತಮಾನದ ಮಧ್ಯಭಾಗ[೪೭]

೭. ಶಿಖರ ಶೈಲಿ : ಶಿಖರ ನಾಶವಾಗಿದೆ

೮. ಬಳಸಿದ ಶಿಲೆ : ಹಸಿರು ಬಳಪದ ಶಿಲೆ ಮತ್ತು ಗ್ರಾನೈಟ್

ಈ ದೇವಾಲಯವು ಮೂರು ಗರ್ಭಗುಡಿ, ತೆರದ ಅಂತರಾಳ, ಹಾಗು ನವರಂಗವನ್ನು ಹೊಂದಿದ್ದು, ದಕ್ಷಿಣದಲ್ಲಿ ಪ್ರವೇಶದ್ವಾರವಿದೆ.

[illegible]

[illegible]

[illegible]

[illegible]

ಅಧಿಷ್ಠಾನವು ಉಪಾನ, ಪದ್ಮಗಳಿಂದ ಕೂಡಿದೆ. ಭಿತ್ತಿಯಲ್ಲಿ ಯಾವುದೇ ಶಿಲ್ಪಗಳಿಲ್ಲ. ಭಿತ್ತಿಯ ಬಹುತೇಕ ಭಾಗವನ್ನು ಇತ್ತೀಚಿಗೆ ಗ್ರಾನೈಟ್ ಶಿಲೆಯಿಂದ ನವೀಕರಣ ಮಾಡಲಾಗಿದೆ. ಪ್ರಸ್ತರದಲ್ಲಿನ ಕಪೋತ ಭಾಗ ಹಾಗು ಶಿಖರಗಳು ಈಗ ದೇವಾಲಯದಲ್ಲಿ ಉಳಿದಿಲ್ಲ.

ಚೌಕಾಕಾರವಾಗಿರುವ ಪಶ್ಚಿಮದ ಗರ್ಭಗುಡಿಯಲ್ಲಿ ಲಿಂಗವಿದೆ. ಅದರ ಎದುರಿಗೆ ಚಿಕ್ಕ ನಂದಿ ಇದೆ. ದ್ವಾರದಲ್ಲಿ ಸರಳ ರೀತಿಯ ಐದು ಶಾಖೆಗಳಿವೆ. ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಈ ಗರ್ಭಗುಡಿಯ ಮುಂದೆ ತೆರೆದ ಅಂತರಾಳವಿದ್ದು ಅದು ಆಯತಾಕಾರವಾಗಿದೆ [೪೮]. ನವರಂಗದ ಉತ್ತರ ಭಾಗದಲ್ಲಿ ಆಯತಾಕಾರವಾಗಿರುವ ಗರ್ಭಗುಡಿಯೊಂದಿದೆ. ಅದರಲ್ಲಿ ವಿಷ್ಣುವಿನ ಮೂರ್ತಿಯಿದೆ. ಹಾಗೆಯೇ ನವರಂಗದ ಪೂರ್ವಭಾಗದಲ್ಲೂ ಆಯತಾಕಾರದ ಗರ್ಭ ಗುಡಿ ಇದ್ದು, ಅದು ತೆರೆದ ರೀತಿಯಲ್ಲಿದೆ. ಅದರಲ್ಲಿ ಎರಡು ನಂದಿ ವಿಗ್ರಹಗಳು ಹಾಗೂ ಕೆಲವು ನಾಗ ಶಿಲ್ಪಗಳಿವೆ. ಇದರ ಮುಂಭಾಗದಲ್ಲಿ ಚೌಕಾಕಾರದ ನಾಲ್ಕು ಸುಂದರ ಕಂಭಗಳಿರುವ ನವರಂಗವಿದೆ. ಕಂಭಗಳ ಚೌಕಾಕರದ ಭಾಗವು ಮಣಿಸರಗಳಿಂದ ಅಲಂಕೃತವಾಗಿದೆ. ಈ ಕಂಭಗಳ ಮೇಲಿನ ಬೋದಿಗೆಯು ಸಾಧಾರಣವಾಗಿದೆ. ಇದರ ಮುಚ್ಚಿಗೆಯಲ್ಲಿ ಪದ್ಮವಿದೆ. ಪೂರ್ವಭಾಗದ ಭಿತ್ತಿಯಲ್ಲಿ ಚೌಕಾಕಾರದ ಜಾಲಂಧ್ರಗಳಿವೆ.

ಗರ್ಭಗುಡಿಯ ದ್ವಾರದಂತೆ ದಕ್ಷಿಣ ಭಾಗದ ಪ್ರವೇಶದ್ವಾರವು ಐದು ಶಾಖೆಗಳಿಂದ (ಅಲಂಕಾರವಿಲ್ಲದೆ) ಕೂಡಿದ್ದು ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಇಲ್ಲಿ ಲಕ್ಷ್ಮಿಯ ಎರಡೂ ಬದಿಯಲ್ಲಿಯೂ ಆನೆಗಳು ಹಿಂಗಾಲಿನಿಂದ ನಿಂತು ಮುಂಗಾಲನ್ನೂ ಮೇಲಕ್ಕೆತ್ತಿ ಸೊಂಡಲಿಗಳನ್ನು ಸೇರಿಸಿಕೊಂಡು ನಿಂತಿರುವುದು ವಿಶೇಷವೆನ್ನಬಹುದು. ದೇವಾಲಯದ ಹೊರಭಾಗದಲ್ಲಿ ಕುದುರೆಯನ್ನೇರಿ ಹೊರಾಡುತ್ತಿರುವ ವೀರಗಲ್ಲುಗಳಿವೆ [೪೯]. ಕಲ್ಯಾಣಿ ಚಾಲುಕ್ಯರ ಕಾಲಾವಧಿಯಲ್ಲಿ ಈ ದೇವಾಲಯ ನಿರ್ಮಾಣವಾಗಿದೆ ಎಂದು ವಾಸ್ತುಲಕ್ಷಣಗಳ ಆಧಾರದಿಂದ ಹೇಳಬಹುದು.

ಯಾದವ ರಾಜನಾದ ರಾಮಚಂದ್ರನು ಕ್ರಿ.ಶ. ೧೨೮೨ರಲ್ಲಿ ಈ ದೇವಾಲಯಕ್ಕೆ ಶಿಲೆಯೊಂದನ್ನು ಸೇರಿಸಿ ಇಲ್ಲಿನ 'ಕಲಿನಾಥ 'ಹೆಸರಿಗೆ ಭೂಮಿಯನ್ನು ದಾನಕೊಟ್ಟ ವಿವರವನ್ನು ಇಲ್ಲಿನ ಶಾಸನವು ತಿಳಿಸುತ್ತದೆ [೫೦]. ಇನ್ನೊಂದು ಶಾಸನವು ಸಭಾಮಂಟಪದಲ್ಲಿ ಕಂಭವೊಂದನ್ನು ಜೋಡಿಸಿ ದೇವಾಲಯಕ್ಕೆ ಉಂಬಳಿಬಿಟ್ಟ ಬಗ್ಗೆ ವಿವರಿಸುತ್ತದೆ [೫೧].

೧. ಊರು : ಬಾಗಳಿ

೨. ತಾಲೂಕು : ಹರಪನಹಳ್ಳಿ

೩. ಹೆಸರು : ಚನ್ನಬಸವ ದೇವಾಲಯ

೪. ಸ್ಥಳ : ಗ್ರಾಮದ ಉತ್ತರ ಭಾಗದಲ್ಲಿನ ಕೆರೆಯ ಸಮೀಪ

೫. ಅಭಿಮುಖ : ಪೂರ್ವಾಭಿಮುಖ

೬. ಕಾಲ : ಕ್ರಿ.ಶ. ೧೧ನೇ ಶತಮಾನದ ಮಧ್ಯಭಾಗ

೭. ಶಿಖರ ಶೈಲಿ : ಮೇಲಿನ ಶಿಖರವಿಲ್ಲ

೮. ಬಳಸಿದ ಶಿಲೆ : ಬಳಪದ ಶಿಲೆ, ಗ್ರಾನೈಟ್

ಈ ದೇವಾಲಯ ಗರ್ಭಗೃಹ ಮತ್ತು ತೆರದ ಮುಖಮಂಟಪವನ್ನು ಹೊಂದಿದೆ.

ಹೊರಭಾಗದಲ್ಲಿನ ಅಧಿಷ್ಠಾನವು ಸರಳವಾಗಿದ್ದು , ಉಪಾನ ಮತ್ತು ಪದ್ಮದಿಂದ ಕೂಡಿದೆ . ಭಿತ್ತಯು ಸರಳವಾಗಿದೆ ತೆರೆದ ಸಭಾ ಮಂಟಪವು ಇಳಿಜಾರದ ಮೇಲ್ಚಾವಣಿಯನ್ನು ಹೊಂದಿದೆ. ಈ ರೀತಿಯ ಮೇಲ್ಚಾವಣಿಯನ್ನು ಹೂವಿನಹಡಗಲಿಯ ಕೇಶವ ಸ್ವಾಮಿ ದೇವಾಲಯದಲ್ಲಿಯೂ ಕಾಣಬಹುದು[೫೨] .

ಗರ್ಭಗೃಹವು ಆಯತಾಕಾರವಾಗಿದೆ. ಅದರಲ್ಲಿ ಎರಡು ಚೌಕಾಕಾರದ ಕಂಭಗಳಿವೆ. ಇದರಲ್ಲಿ ನಂದಿ ಮತ್ತು ಲಿಂಗಗಳಿವೆ. ದ್ವಾರದ ಪೇದ್ಯಾ ಭಾಗದಲ್ಲಿ ಸ್ತ್ರೀ ದ್ವಾರಪಾಲಕಿಯರಿದ್ದಾರೆ [೫೩]. ದ್ವಾರ ಬಂಧವು ಪುಷ್ಪ, ವೃತ್ತಾಕಾರದ ಸುರಳಿಯೊಳಗೆ ಚಿತ್ರಿಸಿದ ವಿಧ್ಯಾಧರ ಶಾಖೆ, ಕಂಭಶಾಖೆ ಹಾಗೂ ಮಿಥುನ ಶಾಖೆಯಿಂದ ಕೂಡಿದೆ. ಲಲಾಟ ಬಿಂಬದಲ್ಲಿ ಸ್ತ್ರೀ ಶಿಲ್ಪವೊಂದಿದೆ. ಆಕೆ ಬಲಗೈನಲ್ಲಿ ಖಡ್ಗ , ಎಡಗೈನಲ್ಲಿ ಪಾತ್ರೆ ಯಜ್ಞೋಪವೀತ ಧರಿಸಿ, ಸುಖಾಸನದಲ್ಲಿ ಕುಳಿತಿದ್ದಾಳೆ. ಪಕ್ಕದಲ್ಲಿ ಚಾಮರ ಹಿಡಿದ ಇಬ್ಬರು ಸ್ತ್ರೀಯರಿದ್ದಾರೆ ಕಪೋತದ ಮೇಲ್ಭಾಗ ಕೂಡ್ಯ ಮತ್ತು ಕೀರ್ತಿ ಮುಖಗಳಿಂದ ಅಲಂಕೃತವಾಗಿದೆ. ದ್ವಾರಪಾಲಕಿಯರ ಶಿಲ್ಪ ಮತ್ತು ಲಲಾಟ ಬಿಂಬದಲ್ಲಿನ 'ಸ್ತ್ರೀ' ಶಿಲ್ಪಗಳನ್ನು ಗಮನದಲ್ಲಟ್ಟುಕೊಂಡು ಮೂಲತಃ ಈ ದೇವಾಲಯ ಶಾಕ್ತ ಪರಂಪರೆಗೆ ಸೇರಿದ್ದೆಂದು ಹೇಳಬಹುದು. ತೆರೆದ ಮುಖಮಂಟಪವು ಚೌಕಾಕಾರವಾಗಿದ್ದು, ತುಂಬ ಅಲಂಕೃತವಾಗಿರುವ ನಾಲ್ಕು ಕಂಭಗಳಿವೆ. ಅದರ ಕೆಳಭಾಗವು ಚೌಕಾಕಾರವಾಗಿದ್ದು, ಮಧ್ಯದಲ್ಲಿ ಎಂಟರಿಂದ ಹದಿನಾರು ಮುಖಗಳನ್ನು ಹೊಂದಿರುವ ಈ ಕಂಭಗಳ ಮೇಲ್ಭಾಗ ಪುನಃ ಚೌಕಾಕಾರವಾಗಿವೆ. ಇನ್ನುಳಿದ ಕಂಭಗಳ ಮಧ್ಯಬಾಗ ಅಷ್ಟಕೋನಾಕೃತಿಯಲ್ಲಿದ್ದು, ಕೆಳಭಾಗ ಹಾಗು ಮೇಲ್ಭಾಗ ಚೌಕಾಕಾರವಾಗಿವೆ. ಈ ದೇವಾಲಯದ ವಾಸ್ತು ಲಕ್ಷಣಗಳ ಆಧಾರದ ಮೇಲೆ ಇದು ಕಲ್ಯಾಣಿ ಚಾಲುಕ್ಯರ ಕಾಲಾವಧಿಯಲ್ಲಿ ನಿರ್ಮಿತವಾಗಿದ್ದೆಂದು ಹೇಳಬಹುದಾಗಿದೆ.

೧. ಊರು : ಚದುರಗೋಳ

೨. ತಾಲೂಕು : ಜಗಳೂರು

೩. ಹೆಸರು : ಕಲ್ಲೇಶ್ವರ

೪. ಸ್ಥಳ : ಗ್ರಾಮದ ಈಶಾನ್ಯ ಭಾಗಕ್ಕೆ, ಕೆರೆಯ ಹಿಂಭಾಗದಲ್ಲಿ

೫. ಅಭಿಮುಖ : ಪೂರ್ವಾಭಿಮುಖ

೬. ಕಾಲ : ಕ್ರಿ.ಶ. ಸು. ೧೧ನೇ ಶತಮಾನ

೭. ಶಿಖರ ಶೈಲಿ : ಶಿಖರವಿಲ್ಲ.

೮. ಬಳಸಿದ ಶಿಲೆ : ಬಳಪದ ಕಲ್ಲು

ಗರ್ಭಗುಡಿ ಮತ್ತು ಅಂತರಾಳಗಳು ಮಾತ್ರ ಈ ದೇವಾಲಯದಲ್ಲೀಗ ಕಾಣಬರುತ್ತವೆ. ಅದರ ಮುಂದಿನ ಭಾಗವೆಲ್ಲ ನಶಸಿಹೋಗಿದೆ.

ದೇವಾಲಯದ ಹೊರಭಾಗದ ಅಧಿಷ್ಠಾನವು ಉಪಾನ, ಪದ್ಮ, ಕಪೋತ, ವೇದಿಗಳಿಂದ ಕೂಡಿದೆ. ಭಿತ್ತಿಯು ಅರೆಗಂಭಗಳ ಅಲಂಕಾರದಿಂದ ಕೂಡಿದೆ. ಹಾಗು ಕೋಷ್ಠ ಪಂಜರುಗಳ ಮೇಲೆ ವೇಸರ ಮತ್ತು ನಾಗರ ಶೈಲಿಯ ಶಿಖರಗಳನ್ನು, ಪಂಜರಗಳ ಮಧ್ಯೆ ಪದ್ಮಗಳನ್ನು ಕೆತ್ತಲಾಗಿದೆ. ಪ್ರಸ್ತರದಲ್ಲಿನ ಕಪೋತ ಭಾಗವು ಸರಳವಾಗಿದ್ದು, ಅಲ್ಲಲ್ಲಿ ಬಿದ್ದು ಹೋಗಿದೆ, ಮೇಲ್ಭಾಗದಲ್ಲಿ ಶಿಖರವಿಲ್ಲ.

ಗರ್ಭಗುಡಿಯಲ್ಲಿ ಮೂಲತಃ ಪಾಣಿಪೀಠದ ಜೊತೆಗೆ ಇದ್ದ ಲಿಂಗವನ್ನು ಕಿತ್ತು ಅಲ್ಲಿಯೇ ಇಡಲಾಗಿದೆ. ಗರ್ಭಗುಡಿಯ ಮುಚ್ಚಿಗೆಯಲ್ಲಿ ಅರಳಿದ ಪದ್ಮವಿದ್ದು, ಇದರ ದ್ವಾರವು ಸಾಧಾರಣವಾಗಿದೆ. ಇಲ್ಲಿ ದ್ವಾರಪಾಲಕರಾಗಲಿ,ಅಥವಾ ಲಲಾಟ ಬಿಂಬವಾಗಲಿ ಕಾಣಬರುವುದಿಲ್ಲ.ಅಂತರಾಳದಲ್ಲಿ ಯಾವುದೇ ಮೂರ್ತಿಗಳಿಲ್ಲ, ಇದರ ಮುಚ್ಚಿಗೆಯಲ್ಲಿ ಅರಳಿದ ಪದ್ಮವಿದೆ. ಇದರ ದ್ವಾರವು ಸಾಮಾನ್ಯವಾಗಿದೆ. ಅಂತರಾಳದ ಮುಂದಿನ ಭಾಗ ನಾಶವಾಗಿ ಹೋಗಿದ್ದು, ಅಲ್ಲಿನ ಕುರುಹುಗಳಿಂದ ನವರಂಗವಿತ್ತೆಂದು ಹೇಳಬಹುದು. ದೇವಾಲಯದ ವಾಸ್ತು ಲಕ್ಷಣಗಳನ್ನು ಆಧಾರವಾಗಿಟ್ಟುಕೊಂಡು ಈ ದೇವಾಲಯ ಕಲ್ಯಾಣಿಚಾಲುಕ್ಯರ ಕಾಲದ್ದೆಂದು ಹೇಳಬಹುದು. ಇಲ್ಲಿ ಕ್ರಿ.ಶ. ೧೦೮೨ಹಾಗು ೧೦೮೭ರ ಕಾಲದ ಎರಡು ಶಾಸನಗಳಿವೆ. ಕ್ರಿ. ಶ. ೧೦೮೨ರ ಶಾಸನದಲ್ಲಿ ಭರ್ಮದೇವನಾಯಕನು ಶ್ರೀ ತೇಜೋನಿಧಿ ಪಂಡಿತ ದೇವರ ಮಗ ಸರ್ವೇಶ ಪಂಡಿತರಿಗೆ ಕಲ್ಲೇಶ್ವರ ಸ್ವಾಮಿಯ ಅಮೃತಪಡಿಗೆ ಅರಕೆರೆಯ ಹೊಲಗಳನ್ನು ದಾನಬಿಟ್ಟ ಬಗ್ಗೆ ಉಲ್ಲೇಖವಿದೆ [೫೪].

೧. ಊರು : ಕಲ್ಲೇದೇವರ ಪುರ
೨. ತಾಲೂಕು : ಜಗಲೂರು
೩. ಹೆಸರು : ತ್ರಿಕೂಟ ಲಿಂಗೇಶ್ವರ (ತ್ರಿಕೂಟೇಶ್ವರ)
೪. ಸ್ಥಳ : ಗ್ರಾಮದ ಕಲ್ಲೇಶ್ವರ ದೇವಾಲಯದ ದಕ್ಷಿಣ ಭಾಗಕ್ಕೆ
೫. ಅಭಿಮುಖ : ಉತ್ತರಾಭಿಮುಖ
೬. ಕಾಲ : ಕಿ. ಶ. ೧೧ ನೇ ಶತಮಾನ
೭. ಶಿಖರ ಶೈಲಿ : ಮೂಲ ಶಿಖರವಿಲ್ಲ
೮. ಬಳಸಿದ ಶಿಲೆ : ಬಳಪದ ಶಿಲೆ

ಈ ದೇವಾಲಯ ದಕ್ಷಿಣ, ಪೂರ್ವ ಮತ್ತು ಪಶ್ಚಿಮ ದಿಕ್ಕಿನಲ್ಲಿ ಮೂರು ಗರ್ಭಗುಡಿಗಳನ್ನು ಹೊಂದಿದ್ದು, ಇವುಗಳ ಮುಂಭಾಗದಲ್ಲಿ ನವರಂಗವಿದೆ.

ಹೊರಭಾಗದ ಅಧಿಷ್ಠಾನವು ಭೂಮಿಯಲ್ಲಿ ಹೂತಿದ್ದು, ಭಿತ್ತಿಯು ಸರಳವಾಗಿದೆ. ಗರ್ಭಗುಡಿಯ ಮೇಲೆ ಶಿಖರವಿಲ್ಲ. ದೇವಾಲಯದ ಭಿತ್ತಿಯನ್ನು ಇತ್ತೀಚಿಗೆ ಅಲ್ಲಲ್ಲಿ ನವೀಕರಿಸಲಾಗಿದೆ.

ಇಲ್ಲಿನ ಮೂರು ಗರ್ಭಗುಡಿಗಳು ಚೌಕಾಕಾರವಾಗಿದ್ದು , ಅವು ಪೂರ್ವ ,ಪಶ್ಚಿಮ, ದಕ್ಷಿಣ ಭಾಗದಲ್ಲಿವೆ. ಈ ಮೂರು ಗರ್ಭಗುಡಿಗಳಲ್ಲೂ ಲಿಂಗಗಳಿದ್ದು, ಪಶ್ಚಿಮ ಭಾಗದ (ದೇವಾಲಯದ ಎಡಭಾಗಕ್ಕೆ) ಗರ್ಭಗುಡಿಯಲ್ಲಿ ಲಿಂಗದೆದುರು ನಂದಿ ಇದೆ. ಇವುಗಳನ್ನು ಕ್ರಮವಾಗಿ ಬ್ರಹ್ಮ, ಮತ್ತು ವಿಷ್ಣು ಲಿಂಗಗಳೆಂದು ಸ್ಥಳೀಯರು ಕರೆಯುತ್ತಾರೆ. ಇದಲ್ಲದೆ ಇಲ್ಲಿನ ಲಿಂಗಗಳನ್ನು ಕ್ರಮವಾಗಿ ಕಲ್ಲಿನಾಥ, ಮಲ್ಲಿನಾಥ, ಅಲ್ಲಣ ದೇವರೆಂದು ಸ್ಥಳೀಯರು ಕರೆಯುತ್ತಾರೆ[೫೫]. ಇಲ್ಲಿನ ಮೂರು ಗರ್ಭ ಗುಡಿಗಳ ದ್ವಾರಗಳಲ್ಲಿ ಸ್ತಂಭ ಶಾಖೆ ಮಾತ್ರ ಇದ್ದು, ಉಳಿದಂತೆ ಸರಳವಾಗಿದೆ. ಲಲಾಟಬಿಂಬದಲ್ಲಿ ಯಾವುದೇ ಶಿಲ್ಪಗಳಿಲ್ಲ. ಪ್ರವೇಶದ್ವಾರಕ್ಕೆ ಎದುರಾಗಿರುವ (ದಕ್ಷಿಣದ) ಗರ್ಭಗುಡಿಯ ಲಲಾಟಬಿಂಬದ ಮೇಲಿನ ಉತ್ತರಾಂಗ ಭಾಗದಲ್ಲಿ ಶಿಖರದ ವಿವಿಧ ಮಾದರಿಗಳನ್ನು ಕೆತ್ತಲಾಗಿದೆ.

ನವರಂಗದಲ್ಲಿ ಒಟ್ಟು ಎಂಟು ಕೋಷ್ಠ ಗುಡಿಗಳಿವೆ. (ಗರ್ಭಗುಡಿಗಳ ಮುಂಭಾಗದಲ್ಲಿ ಹಾಗು ನವರಂಗದ ಉತ್ತರ ಭಾಗಕ್ಕೆ) ದಕ್ಷಿಣದ ಗರ್ಭಗುಡಿಯ ಎಡಭಾಗದ ಕೋಷ್ಠ ಗುಡಿಯಲ್ಲಿ ಸಪ್ತ ಮಾತೃಕೆಯರ ವಿಗ್ರಹವಿದೆ. ಉಳಿದ ಕೋಷ್ಠ ಗುಡಿಗಳಲ್ಲಿ ಮೂರ್ತಿಗಳಿಲ್ಲ. ನವರಂಗದಲ್ಲಿ ನಾಲ್ಕು ಕಪ್ಪು ಕಲ್ಲಿನ ಕಂಭಗಳಿದ್ದು, ಪೀಠದ ಮೇಲೆ ನಿಂತಿರುವ ಈ ಕಂಭಗಳು ಚೌಕ ಹಾಗು ವೃತ್ತಾಕಾರವಾಗಿವೆ. ಕಂಭದ ಚೌಕಾಕಾರದ ಮೇಲಿನ ಭಾಗದಲ್ಲಿ ಬಳೆಗಳ ಅಲಂಕಾರವಿದ್ದು, ಅದರ ಮೇಲೆ ಕೆಳಬಾಗಿದ ಗಂಟೆಯಾಕಾರವಿದೆ. ಇದರ ಮೇಲೆ ಮಾಲಾಲಂಕಾರ ಹಾಗು ಲತಾಲಂಕಾರವನ್ನು ಮಾಡಲಾಗಿದೆ. ಇಲ್ಲಿನ ಫಲಕ ಭಾಗವು ಸಹ ವೃತ್ತಾಕಾರವಾಗಿದ್ದು, ಪದ್ಮಲಂಕಾರವನ್ನು ಪಡೆದುಕೊಂಡಿದೆ. ಇಲ್ಲಿನ ಬೋದಿಗೆಗಳೂ ಸರಳ ವಾಗಿವೆ. ನವರಂಗದ ಮುಚ್ಚಿಗೆಯಲ್ಲಿ ಪದ್ಮವಿದೆ.

ಪ್ರವೇಶದ್ವಾರವು ಉತ್ತರಕಿದ್ದು, ಪೇದ್ಯಾ ಭಾಗದಲ್ಲಿ ದ್ವಾರ ಪಾಲಕರಿದ್ದಾರೆ. ದ್ವಾರವು ರತ್ನ, ಲತಾ, ಸ್ತಂಭ, ವ್ಯಾಳಿ ಶಾಖೆಗಳಿಂದ ಅಲಂಕೃತವಾಗಿದ್ದು, ಮೊದಲಿನ ಎರಡು ಶಾಖೆಗಳು ಲಲಾಟಬಿಂಬದವರೆಗೂ ಮುಂದುವರಿದಿವೆ. ಲಲಾಟ ಬಿಂಬದಲ್ಲಿ ಯಾವುದೇ ಶಿಲ್ಪಗಳಿರದೆ ಸರಳವಾಗಿದೆ. ಲಲಾಟದ ಎಡಬಲದಲ್ಲಿ ಇಳಿಬಿದ್ದ ತಾವರೆಯ ಮೊಗ್ಗಿನ ಅಲಂಕಾರವಿದೆ. ಪ್ರವೇಶದ್ವಾರದ ಮೇಲೆ ಈತ್ತೀಚೆಗೆ ನಿರ್ಮಿಸಿದ ಕಮಾನು ಗೂಡಿನಲ್ಲಿ ಕಾರ್ತಿಕೇಯನ ಮೂರ್ತಿ ಇದೆ.

ಈ ದೇವಾಲಯ ಕಂಬ, ದ್ವಾರ, ಮತ್ತಿತರೆ ವಾಸ್ತು ಲಕ್ಷಣಗಳನ್ನು ಆಧಾರವಾಗಿಟ್ಟುಕೊಂಡು, ಇದು ಕಲ್ಯಾಣಿ ಚಾಲುಕ್ಯರ ಕಾಲದ್ದೆಂದು ಹೇಳಬಹುದು. ಈ ದೇವಾಲಯವನ್ನು ಅಂತ್ಯಚಾಲುಕ್ಯರ ಕಾಲದ್ದೆಂದು ಕೆಲವರು ಹೇಳಿದ್ದಾರೆ[೫೧].

೧.	ಊರು	:	ಸಾರಥಿ
೨.	ತಾಲೂಕು	:	ಹರಿಹರ
೩.	ಹೆಸರು	:	ಬಸವೇಶ್ವರ
೪.	ಸ್ಥಳ	:	ಗ್ರಾಮದ ಬಸ್‌ನಿಲ್ದಾಣದ ಪೂರ್ವ ಭಾಗದಲ್ಲಿ
೫.	ಅಭಿಮುಖ	:	ಗರ್ಭಗುಡಿ ಪೂರ್ವಕ್ಕೆ ಮುಖ ಮಾಡಿದ್ದು ದಕ್ಷಿಣದಲ್ಲಿ ಪ್ರವೇಶದ್ವಾರವಿದೆ
೬.	ಕಾಲ	:	ಕ್ರಿ. ಶ. ೧೧ ನೇ ಶತಮಾನ[೫೨]
೭.	ಶಿಖರ ಶೈಲಿ	:	ಶಿಖರ ಉಳಿದಿಲ್ಲ
೮.	ಬಳಸಿದ ಶಿಲೆ	:	ಹಸಿರು ಬಳಪದ ಶಿಲೆ

ಈ ದೇವಾಲಯವು ಪಶ್ಚಿಮ, ಪೂರ್ವ ಮತ್ತು ಉತ್ತರ ದಿಕ್ಕಿನಲ್ಲಿ ಮೂರು ಗರ್ಭಗುಡಿಗಳನ್ನು ಒಳಗೊಂಡಿದ್ದು, ಅಂತರಾಳ ಮತ್ತು ನವರಂಗಗಳಿವೆ.

ಅಧಿಷ್ಠಾನವು ಉಪಾನ ,ಪದ್ಮ, ಕುಮುದ, ಕಪೋತ, ಭಾಗಗಳನ್ನು ಒಳಗೊಂಡಿದೆ. ಭಿತ್ತಿಯಲ್ಲಿ ಅರೆಗಂಭಗಳ ಅಲಂಕರಣೆ ಬಿಟ್ಟರೆ ಯಾವುದೇ ರೀತಿಯ ಶಿಲ್ಪಗಳು ಇಲ್ಲ. ಪ್ರಸ್ತರದ ಕೊನೆಯ ಭಾಗ ಮಾತ್ರ ಉಳಿದಿದ್ದು, ಅದರ ಮೇಲಿನ ಯಾವ ಭಾಗವು ಈಗ ಕಾಣಬರುತ್ತಿಲ್ಲ. ಹಾಗೆಯೇ ದೇವಾಲಯದ ಮೇಲಿನ ಶಿಖರವು ನಾಶವಾಗಿದೆ.

ಪಶ್ಚಿಮ ಗರ್ಭಗುಡಿಯಲ್ಲಿ ಲಿಂಗವಿದ್ದು, ಮುಚ್ಚಿಗೆಯಲ್ಲಿ ಪದ್ಮವಿದೆ. ಅದರ ದ್ವಾರದ ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದ್ದು, ದ್ವಾರದಲ್ಲಿ ಸ್ತಂಭದ ಅಲಂಕಾರವಿದೆ. ಅಂತರಾಳವು ಸರಳವಾಗಿದ್ದು, ಇದರ ಮುಚ್ಚಿಗೆ

(ವಿತಾನ)ಯಲ್ಲಿ ಪದ್ಮವಿದೆ. ಇಲ್ಲಿನ ದ್ವಾರವು ಸಾಧಾರಣವಾಗಿದೆ. ನವರಂಗದ ಉತ್ತರದಲ್ಲಿ ಗರ್ಭಗುಡಿಯೊಂದಿದ್ದು, ಆದರಲ್ಲಿ ಕೇಶವನ ಮೂರ್ತಿ ಇದೆ. ಈ ಗರ್ಭಗುಡಿಯ ದ್ವಾರವು ಅಲಂಕಾರವಾಗಿಲ್ಲ. ನವರಂಗದ ಪೂರ್ವಭಾಗಕ್ಕೊಂದು ಗರ್ಭಗುಡಿಯಿದ್ದು ,ಅದರಲ್ಲಿ ಸೂರ್ಯನ ಮೂರ್ತಿ ಇದೆ. ಇದರ ದ್ವಾರವು ಸಹಾ ಸಾಧಾರಣವಾಗಿದೆ. ನವರಂಗದಲ್ಲಿ ನಾಲ್ಕು ವೃತ್ತ ಮತ್ತು ಚೌಕಾಕಾರದ ಕಂಭಗಳಿವೆ. ನವರಂಗದ ಮಧ್ಯದ ವೇದಿಕೆಯಲ್ಲಿ ನಂದಿ ಇದೆ. ಇಲ್ಲಿನ ವೃತ್ತಕಾರದ ಕಂಭಗಳ ದಂಡ ಭಾಗವು ದುಂಡಾಕಾರದ ಬಳೆಯ ಅಲಂಕಾರವನ್ನು ಹೊಂದಿದ್ದು, ಅದರ ಮೇಲಿನ ದಂಡಾಗ್ರ ಭಾಗವು ಆಭರಣಗಳಿಂದ ಹಾಗು ಪುಷ್ಪಗಳಿಂದ ಅಲಂಕರಿಸಿದ ರೀತಿ ಇದೆ. ಈ ಕಂಭಗಳ ಮೇಲಿನ ಮುಚ್ಚಿಗೆಯಲ್ಲಿ ಪದ್ಮಗಳ ಅಲಂಕರಣೆ ಇದೆ. ನವರಂಗದ ಪಶ್ಚಿಮ ಭಾಗದಲ್ಲಿ ಎರಡು ಕೋಷ್ಠ ಗುಡಿಗಳಿವೆ. (ಅಂತರಾಳ ದ್ವಾರದ ಎಡ ಬಲದಲ್ಲಿ) ಬಲ ಕೋಷ್ಠ ಗುಡಿಯಲ್ಲಿ ಗಣಪತಿ ,ಎಡ ಕೋಷ್ಠ ಗುಡಿಯಲ್ಲಿ ಮಹಿಷ ಮರ್ಧಿನಿ ಮೂರ್ತಿಗಳಿವೆ. ಉತ್ತರದ ಗರ್ಭ ಗುಡಿಯ ಬಲಭಾಗದಲ್ಲಿ ಕೋಷ್ಠಗುಡಿಯೊಂದಿದ್ದು, ಆದರಲ್ಲಿ ಆಸೀನ ಭೈರವ ಮೂರ್ತಿ ಇರುವುದು ಈ ಜಿಲ್ಲೆಯಲ್ಲೇ ವಿಶೇಷವಾಗಿದೆ. ನವರಂಗದ ಮುಚ್ಚಿಗೆಯಲ್ಲಿ ಯಾವುದೇ ಅಲಂಕಾರವಿಲ್ಲ. ನವರಂಗದ ದಕ್ಷಿಣ ಭಾಗದಲ್ಲಿ ಪ್ರವೇಶದ್ವಾರವಿದೆ . ದ್ವಾರವು ಲತಾ, ಕಂಭ, ಲತಾ, ಪುಷ್ಪ, ಶಾಖೆಗಳಿಂದ ಅಲಂಕೃತವಾಗಿದೆ. ಲಲಾಟ ಮತ್ತು ದ್ವಾರ ಬಂಧದಲ್ಲಿ ಯಾವುದೇ ಶಿಲ್ಪಗಳಿಲ್ಲ. ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಈ ದೇವಾಲಯ ನಿರ್ಮಿತವಾಗಿದೆಯೆಂದು ಈ ಮೇಲಿನ ವಾಸ್ತು ಲಕ್ಷಣಗಳ ಆಧಾರದಿಂದ ಹೇಳಬಹುದಾಗಿದೆ.

೧. ಊರು : ದೇವರ ಬೆಳಕೆರೆ

೨. ತಾಲೂಕು : ಹರಿಹರ

೩. ಹೆಸರು : ಕಲ್ಲೇಶ್ವರ

೪. ಸ್ಥಳ : ಗ್ರಾಮದ ದಿಟೂರು ಸಿದ್ದಪ್ಪನ ಜಮೀನಿನಲ್ಲಿ

೫. ಅಭಿಮುಖ : ಪೂರ್ವಕ್ಕೆ

೬. ಕಾಲ : ಕ್ರಿ.ಶ.ಸು. ೧೧ನೇ ಶತಮಾನ

೭. ಶಿಖರ ಶೈಲಿ : ಮೇಲಿನ ಶಿಖರವಿಲ್ಲ

೮. ಬಳಸಿದ ಶಿಲೆ : ಬಳಪದ ಕಲ್ಲು , ಗ್ರಾನೈಟ್

ಗ್ರಾಮದ ಪಶ್ಚಿಮ ದಿಕ್ಕಿನ ಹಳ್ಳದ ಬದಿಯಲ್ಲಿನ ಜಮೀನಿನಲ್ಲಿ ಈ ದೇವಾಲಯವಿದೆ. ಈ ದೇವಾಲಯದಲ್ಲಿ ಮೂರು ಗರ್ಭಗುಡಿ, ಅಂತರಾಳ ಹಾಗು ನವರಂಗಗಳಿವೆ.

ದೇವಾಲಯದ ಹೊರಭಾಗದ ಅಧಿಷ್ಠಾನವು ಭೂಮಿಯಲ್ಲಿ ಮುಚ್ಚಿರುವುದರಿಂದ ಅಲ್ಲಿನ ಭಾಗಗಳನ್ನು ಗುರುತಿಸುವುದು ಕಠಿಣ .ಭಿತ್ತಿಯನ್ನು ಹಸಿರು ಬಳಪದ ಶಿಲೆಯನ್ನು ಉಪಯೋಗಿಸಿ ಕಟ್ಟಲಾಗಿದೆ. ಉತ್ತರ ಹೊರಭಾಗದ ಭಿತ್ತಿಯು ಅಲ್ಲಲ್ಲಿ ಬಿದ್ದು ಹೋಗಿದ್ದು, ಇತ್ತೀಚಿನ ದಿನಗಳಲ್ಲಿ ಮೇಲ್ಭಾಗಕ್ಕೆ ಗಾರೆಹಾಕಿ ನೀರು ಸೋರದಂತೆ ಮಾಡಲಾಗಿದೆ.

ಪಶ್ಚಿಮದ ಗರ್ಭಗುಡಿಯಲ್ಲಿ ಲಿಂಗವಿದ್ದು, ಅದರ ಜೊತೆಯಲ್ಲಿ ನಂದಿ ವಿಗ್ರಹವೊಂದನ್ನು ಇಡಲಾಗಿದೆ. ಮುಚ್ಚಿಗೆಯಲ್ಲಿ ಪದ್ಮವಿದೆ. ಗರ್ಭಗುಡಿಯ ದ್ವಾರದ ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪ ಇದ್ದು, ಕಂಭ ಶಾಖೆಯೊಂದನ್ನು ಹೊರತು ಪಡಿಸಿ ಉಳಿದ ನಾಲ್ಕು ಶಾಖೆಗಳನ್ನು ಅಲಂಕರಿಸಿಲ್ಲ. ಪಶ್ಚಿಮ ಗರ್ಭಗುಡಿ ಮುಂದಿನ ಅಂತಾರಾಳವು ಆಯತಾಕಾರವಾಗಿದ್ದು, ಅದರ ಮುಚ್ಚಿಗೆಯಲ್ಲಿ ಪದ್ಮವಿದೆ. ಅದರ ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದ್ದು, ಅದರ ಎರಡೂ ಬದಿಗೂ ಇಳಿಬಿದ್ದ ತಾವರೆಯ ಮೊಗ್ಗಿನಾಕೃತಿಯ ಅಲಂಕರಣವಿದೆ. ದ್ವಾರದಲ್ಲಿ ಅಲಂಕಾರವಿಲ್ಲದ ಐದು ಶಾಖೆಗಳಿದ್ದು, ಈ ಶಾಖೆಗಳ ಎರಡು ಬದಿಗೂ ಪುಷ್ಪಾಲಂಕೃತ ಜಾಲಂಧ್ರಗಳಿವೆ. ನವರಂಗದ ಉತ್ತರ ಭಾಗದಲ್ಲಿನ ಗರ್ಭಗುಡಿಯಲ್ಲಿ ಯಾವುದೇ ಮೂರ್ತಿ ಇರದೇ, ದ್ವಾರವು ಸಾದಾ ರೀತಿಯಲ್ಲಿದೆ . ಈ ಗರ್ಭಗುಡಿಯ ಹೊರಭಾಗ ಭಿತ್ತಿ ಬಿದ್ದು ಹೋಗಿದೆ. ನವರಂಗದ ದಕ್ಷಿಣ ಭಾಗದಲ್ಲೊಂದು ಚೌಕಾಕಾರದ ಗರ್ಭಗುಡಿ ಇದ್ದು, ಅದರಲ್ಲಿ ಯಾವುದೇ ಮೂರ್ತಿ ಇರದೇ,ಅದರ ದ್ವಾರವು ಅಲಂಕರಣವಿರದೆ ಸಾಧಾರಣವಾಗಿದೆ. ಇದರ ಮುಂಭಾಗದಲ್ಲಿ ಭೈರವನ ಮೂರ್ತಿ ಇದೆ.

ನವರಂಗದಲ್ಲಿ ನಾಲ್ಕು ಬಳಪದ ಕಲ್ಲಿನ ಆಯತಾಕಾರದ ಕಂಭಗಳಿವೆ. ಈ ಕಂಭಗಳ ಮೇಲೆ ಯಾವುದೇ ಶಿಲ್ಪಗಳಿಲ್ಲ. ನವರಂಗದ ಪಶ್ಚಿಮ ಭಾಗದ ಗೋಡೆಯಲ್ಲಿ (ಅಂತರಾಳದ ಮುಂಭಾಗ) ಎರಡು ದೇವ ಕೋಷ್ಠಗಳಿವೆ. ಉತ್ತರ ಗರ್ಭಗುಡಿಯ ಹತ್ತಿರದಲ್ಲಿರುವ ಪಶ್ಚಿಮ ಮತ್ತು ಪೂರ್ವದ ಕೋಷ್ಠ ಗುಡಿಗಳಲ್ಲಿ ಕ್ರಮವಾಗಿ ಸಪ್ತ ಮಾತೃಕೆಯರು ಮತ್ತು ಗಣೇಶ ಮೂರ್ತಿ ಶಿಲ್ಪಗಳಿವೆ. ನವರಂಗದ ಆಗ್ನೇಯ ಭಾಗದಲ್ಲಿ ವಿಷ್ಣು ಮೂರ್ತಿಯಿದೆ. ನವರಂಗದ ಮುಚ್ಚಿಗೆಯಲ್ಲಿ ಅರಳಿದ ಪದ್ಮವಿದೆ. ಪೂರ್ವ ಪ್ರವೇಶದ್ವಾರದ ದ್ವಾರ ಶಾಖೆಯನ್ನು ಪಂಚ ಶಾಖೆಗಳನ್ನಾಗಿ ವಿಭಾಗಿಸಲಾಗಿದ್ದು, ಅದರಲ್ಲಿನ ಮಧ್ಯದ ಕಂಭ ಶಾಖೆಯನ್ನು ಮಾತ್ರ ಅಲಂಕರಿಸಿ, ಉಳಿದ ಶಾಖೆಗಳನ್ನು ಅಲಂಕರಿಸಿಲ್ಲ. ಇಲ್ಲಿನ ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದ್ದು, ಈ ಶಿಲ್ಪದ ಎಡ ಬಲದಲ್ಲಿ ಇಳಿಬಿದ್ದ ಕಮಲದ ಮೊಗ್ಗಿನಾಕಾರದ ಅಲಂಕಾರವಿದೆ. ಕಲ್ಯಾಣ ಚಾಲುಕ್ಯರ ಸಮಕಾಲಿನ ದೇವಾಲಯ ಎಂದು ಇದರ ವಾಸ್ತು ಲಕ್ಷಣಗಳಾದ ದ್ವಾರಬಂಧ, ಕಂಭ, ಜಾಲಂಧ್ರ, ಆಧರಿಸಿ ಹೇಳಬಹುದು.

೧. ಊರು : ಚಿಕ್ಕಬಿದರೆ
೨. ತಾಲೂಕು : ಹರಿಹರ
೩. ಹೆಸರು : ಕಲ್ಲೇಶ್ವರ
೪. ಸ್ಥಳ : ಗ್ರಾಮದ ವಾಯುವ್ಯ ಭಾಗಕ್ಕೆ
೫. ಅಭಿಮುಖ : ಪೂರ್ವಕ್ಕೆ
೬. ಕಾಲ : ಕ್ರಿ.ಶ. ಸು. ೧೧ನೇ ಶತಮಾನ
೭. ಶಿಖರ ಶೈಲಿ : ಕದಂಬ ನಾಗರ
೮. ಬಳಸಿದ ಶಿಲೆ : ಬಳಪದ ಶಿಲೆ

ಚೌಕಾಕಾರದ ತಳ ವಿನ್ಯಾಸವನ್ನು ಹೊಂದಿದ ಈ ದೇವಾಲಯ ಗರ್ಭಗುಡಿ, ಅಂತರಾಳ, ನವರಂಗಗಳನ್ನು ಹೊಂದಿದೆ.

ಹೊರಭಾಗದ ಅಧಿಷ್ಠಾನವು ಪದ್ಮ, ಉಪಾನ, ಕಪೋತಗಳಿಂದ ಕೂಡಿದೆ. (ಇದರ ಬಹುತೇಕ ಭಾಗ ಮಣ್ಣಿನಲ್ಲಿ ಮುಚ್ಚಿದೆ.) ,ದೇವಾಲಯದ ಹೊರಭಾಗದ ಅಂತರಾಳ ಮತ್ತು ನವರಂಗದಲ್ಲಿನ ಭಿತ್ತಿಯ ಕೆಲವು ಭಾಗವನ್ನು ಹೊರತು ಪಡಿಸಿ, ದೇವಾಲಯದ ಹೊರಭಾಗದ ಬಹುತೇಕ ಭಿತ್ತಿಯು ನಶಿಸಿ ಹೋಗಿದೆ. ಉಳಿದ ಭಿತ್ತಿಯು ಯಾವುದೇ ಅಲಂಕರಣೆ ಇಲ್ಲದೆ ಸರಳವಾಗಿದೆ. ಅದರ ಮೇಲಿನ ಕಪೋತ ಭಾಗವು ದೇವಾಲಯದ ಸುತ್ತಲೂ ಹೊರ ಚಾಚಿದ ರೀತಿಯಲ್ಲಿದ್ದು, ಅಲ್ಲಲ್ಲಿ ಮುರಿದು ಕೆಳಗೆ ಬಿದ್ದಿದೆ. ಶಿಖರವು ಕದಂಬ ನಾಗರ ಶೈಲಿಯಲ್ಲಿದ್ದು, ಈಗ ಕೇವಲ ಎಂಟು ತಳಗಳು ಮಾತ್ರ ಶಿಖರದಲ್ಲಿ ಉಳಿದಿವೆ. ಅದರ ಮೇಲಿನ ಕಲಶ ಭಾಗ ನಾಶವಾಗಿದೆ.

ಗರ್ಭಗುಡಿಯು ಚೌಕಾಕಾರವಾಗಿದ್ದು, ಅದರಲ್ಲಿ ಲಿಂಗವಿದೆ. ಗರ್ಭಗುಡಿಯ ಮುಚ್ಚಿಗೆಯಲ್ಲಿ ಪದ್ಮ ವಿದೆ. ದ್ವಾರವು ಅಲಂಕಾರವಿಲ್ಲದೆ ಸರಳವಾಗಿದೆ. ಲಲಾಟ ಬಿಂಬದಲ್ಲಿ ಪದ್ಮಾಸಾನದಲ್ಲಿ ಕುಳಿತ ಲಕ್ಷ್ಮಿ ಶಿಲ್ಪವಿದ್ದು, ಅದರ ಎಡಬಲದಲ್ಲಿ ಚಾಮರ ಹಿಡಿದ ಸ್ತ್ರೀಯರ ಶಿಲ್ಪವಿದೆ. ಆಯತಾಕಾರದ ಅಂತರಾಳದಲ್ಲಿ ನಂದಿವಿಗ್ರಹವಿದೆ, ಇಲ್ಲಿನ ಲಲಾಟ ಬಿಂಬದಲ್ಲಿ ಗಣೇಶನಿದ್ದಾನೆ. ದ್ವಾರ ಸಾದಾರಣವಾಗಿದ್ದು, ದ್ವಾರದ ಪಕ್ಕದಲ್ಲಿ ಆಯತಾಕಾರದ ಜಾಲಂಧ್ರಗಳನ್ನು (ದ್ವಾರದ ಎಡಬಲದಲ್ಲಿ) ಕೆತ್ತಲಾಗಿದೆ.

ನವರಂಗದಲ್ಲಿ ನಾಲ್ಕು ಕಂಭಗಳಿದ್ದು, ಅವುಗಳು ಆಯತ ಹಾಗು ವೃತ್ತಾಕಾರವಾಗಿವೆ. ವೃತ್ತಾಕಾರ ಭಾಗದ ಕಂಭಗಳಲ್ಲಿ ಬಳೆಯ ಅಲಂಕಾರವನ್ನು ಕಾಣಬಹುದು. ಈ ನವರಂಗದ ಪಶ್ಚಿಮ ದಿಕ್ಕಿನಲ್ಲಿ ಎರಡು, ಉತ್ತರ, ಪೂರ್ವದಲ್ಲಿ ತಲಾ ಒಂದೊಂದು ಕೋಷ್ಠ ಗುಡಿಗಳಿವೆ. ನವರಂಗದ ಪಶ್ಚಿಮ ಭಾಗದ (ಎಡ) ದೇವ ಕೂಷ್ಠದಲ್ಲಿ ಗಣೇಶನ ಮೂರ್ತಿ ಇದ್ದು, ಉಳಿದ ಕೂಷ್ಠಗಳಲ್ಲಿ ಯಾವುದೇ ಮೂರ್ತಿಗಳಿಲ್ಲ. ನವರಂಗದ ಮುಚ್ಚಿಗೆ ಆಯತಾಕಾರವಾಗಿದ್ದು, ಅದರಲ್ಲಿ ತಾವರೆಯನ್ನು ಕೆತ್ತಲಾಗಿದೆ. ನವರಂಗದ ಪೂರ್ವ ದ್ವಾರದಲ್ಲಿ ಕಂಭಶಾಖೆ ಮಾತ್ರವಿದ್ದು ಉಳಿದಂತೆ ಯಾವ ಅಲಂಕಾರ ಕಾಣಬರುವುದಿಲ್ಲ. ಲಲಾಟ ಬಿಂಬ ಖಾಲಿ ಇದ್ದು, ಅದರ ಎಡಬಲದಲ್ಲಿ ಇಳಿಬಿದ್ದ ತಾವರೆಯ ಮೊಗ್ಗಿನಾಕೃತಿಯ ಅಲಂಕರಣವಿದೆ.

ಕಲ್ಯಾಣ ಚಾಲ್ಯುಕರ ದೇವಾಲಯಗಳಲ್ಲಿ ಕಾಣಬರುವ ಲಕ್ಷಣಗಳು ಈ ದೇವಾಲಯದಲ್ಲಿ ಕಾಣಬರುತ್ತವೆ[೫೮]. ಆದುದರಿಂದ ಈ ದೇವಾಲಯ ಅದೇ ಕಾಲವಧಿಯಲ್ಲಿ ನಿರ್ಮಿತವಾಗಿರಬೇಕೆನಿಸುತ್ತದೆ. ದೇವಾಲಯದ ಹೊರಭಾಗದಲ್ಲಿ ಅನೇಕ ವೀರಗಲ್ಲು, ಮಾಸ್ತಿಗಲ್ಲುಗಳು, ನಾಗ, ನಾಗಿನಿ, ಮತ್ತಿತರ ಶಿಲ್ಪಗಳಿವೆ.

೧. ಊರು : ಉಚ್ಚಂಗಿ ದುರ್ಗ
೨. ತಾಲೂಕು : ಹರಪನಹಳ್ಳಿ
೩. ಹೆಸರು : ತವಕ್ಲೇಶ್ವರ
೪. ಸ್ಥಳ : ಗ್ರಾಮದ ಆಗ್ನೇಯ ದಿಕ್ಕಿನಲ್ಲಿ.
೫. ಅಭಿಮುಖ : ಪೂರ್ವಾಭಿಮುಖ
೬. ಕಾಲ : ಕ್ರಿ.ಶ. ಸು. ೧೧ನೇ ಶತಮಾನದ ಅಂತ್ಯಭಾಗ
೭. ಶಿಖರ ಶೈಲಿ : ಶಿಖರ ಭಾಗ ಉಳಿದಿಲ್ಲ
೮. ಬಳಸಿದ ಶಿಲೆ : ಬಳಪದ ಶಿಲೆ

ಗರ್ಭಗುಡಿ, ಅಂತರಾಳ ಹಾಗು ನವರಂಗವನ್ನು ಈ ದೇವಾಲಯ ಹೊಂದಿದೆ.

ಹೊರಭಾಗದ ಅಧಿಷ್ಠಾನವು ಉಪಾನ ಮತ್ತು ಪದ್ಮಗಳನ್ನು ಒಳಗೊಂಡಿದೆ. ಭಿತ್ತಿಯಲ್ಲಿ ಅಲ್ಲಲ್ಲಿ ಅರೆಗಂಬಗಳನ್ನು ಕೆತ್ತಲಾಗಿದೆ. ಉಳಿದಂತೆ ಭಿತ್ತಿಯಕೆಲವು ಭಾಗ , ಪ್ರಸ್ತರ ಮತ್ತು ಅದರ ಮೇಲಿನ ಭಾಗ ನಾಶವಾಗಿದೆ.

ಚೌಕಾಕಾರದ ಗರ್ಭಗುಡಿಯಲ್ಲಿ ಕಪ್ಪು ಶಿಲೆಯಿಂದ ನಿರ್ಮಿತವಾದ ಲಿಂಗವಿದೆ. ಗರ್ಭಗೃಹದ ಮುಚ್ಚಿಗೆಯಲ್ಲಿ ಪದ್ಮವನ್ನು ಬಿಡಿಸಲಾಗಿದೆ. ಶೈವದ್ವಾರ ದ್ವಾರಪಾಲಕರಿರುವ ಈ ದೇವಾಲಯದ ದ್ವಾರವು ಸರಳವಾದ ಶಾಖೆಗಳನ್ನೊಳಗೊಂಡಿದೆ. ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಅಂತರಾಳವು ಆಯತಾಕಾರವಾಗಿದೆ. ಇದರ ಮುಚ್ಚಿಗೆಯಲ್ಲಿ ಕಮಲಾಕೃತಿಯ ಅಲಂಕಾರವಿದೆ. ದ್ವಾರದ ಎರಡು ಬದಿಗೂ ಶೈವ ದ್ವಾರಪಾಲಕರಿದ್ದಾರೆ. ದ್ವಾರವು ಸರಳ ಶಾಖೆಗಳಿಂದ ಕೂಡಿದ್ದು, ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ.

ನವರಂಗದಲ್ಲಿ ಇಪ್ಪತ್ತು ಬಳಪದ ಕಲ್ಲಿನ ಕಂಭಗಳಿವೆ. ಮಧ್ಯದ ನಾಲ್ಕು ಕಂಬಗಳು ಚೌಕ, ಅಷ್ಟಾಶ್ರ ಹಾಗು ವೃತ್ತಾಕಾರವಾಗಿವೆ. ವೃತ್ತಾಕಾರದ ಕಂಭಗಳಲ್ಲಿ ಗಂಟೆ ಹಾಗು ಮಾಲಾ ಅಲಂಕಾರವನ್ನು ಕಾಣಬಹುದು. ಉಳಿದ ಕಂಬಗಳು ಸರಳ ರೀತಿಯ ಕಂಭಗಳಾಗಿವೆ. ಕಂಭಗಳ ಮೇಲಿನ ಬೋದಿಗೆಗಳು ಸಹ ಸರಳವಾಗಿವೆ. ಛತ್ತಿನಲ್ಲಿ ನವರಂಗದ ಪೂರ್ಣಭಾಗಕ್ಕೆ ಸರಿಹೊಂದುವಂತೆ ಒಂದೇ ಕಲ್ಲಿನ ಚಪ್ಪಡಿಯನ್ನು ಹಾಸಲಾಗಿದೆ.

ಈ ದೇವಾಲಯದ ಬಲಬದಿಯಲ್ಲಿರುವ ಶಾಸನ ಇದನ್ನು 'ಗಳಗೇಶ್ವರ ದೇವಾಲಯ' ಎಂದು ಕರೆದಿದೆ[೫೯]. ಶಾಸನದಲ್ಲಿ ಉಲ್ಲೇಖಿಸಿದಂತೆ ತವಕ್ಲೇಶ್ವರ ದೇವಾಲಯದ ಮೊದಲ ಹೆಸರು 'ಗಳಗೇಶ್ವರ ದೇವಾಲಯ'ವೆಂದಿರಬಹುದೇ ? ಕಲ್ಯಾಣ ಚಾಲುಕ್ಯರ ವಾಸ್ತು ಲಕ್ಷಣಗಳಿಗೆ ಈ ದೇವಾಲಯದ ವಾಸ್ತು ಲಕ್ಷಣಗಳು ಹೋಲಿಕೆಯಾಗುತ್ತವೆ. ಹಾಗು ಮೇಲೆ ಹೇಳಿದ ಶಾಸನವು ಕಲ್ಯಾಣ ಚಾಲುಕ್ಯರ ಕಾಲದ್ದಾಗಿರುವುದರಿಂದ ಈ ದೇವಾಲಯ ಕಲ್ಯಾಣ ಚಾಲುಕ್ಯರ ಕಾಲದ್ದೆಂದು ಹೇಳಬಹುದು.

[illegible]

[illegible]

[illegible]

[illegible]

[illegible]

[illegible]

೧. ಊರು : ನೀಲಗುಂದ

೨. ತಾಲೂಕು : ಹರಪನಹಳ್ಳಿ

೩. ಹೆಸರು : ಭೀಮೇಶ್ವರ[೬೦]

೪. ಸ್ಥಳ : ಗ್ರಾಮದ ಉತ್ತರ ಭಾಗಕ್ಕೆ(½ ಕಿ.ಲೋ.ಮೀಟರ್ ದೂರದಲ್ಲಿದೆ)

೫. ಅಭಿಮುಖ : ಪೂರ್ವಾಭಿಮುಖ

೬. ಕಾಲ : ೧೧ನೇ ಶತಮಾನದ ಕೊನೆಯ ಭಾಗ[೬೧]

೭. ಶಿಖರ ಶೈಲಿ : ವೇಸರ

೮. ಬಳಸಿದ ಶಿಲೆ : ಹಸಿರು ಛಾಯೆಯ ಬಳಪದ ಕಲ್ಲು

ಈ ದೇವಾಲಯ ಮೂರು ಗರ್ಭಗೃಹಗಳನ್ನು ಹೊಂದಿದ್ದು, ತ್ರಿಕೂಟಚಲ ದೇವಾಲಯವೆಂದೆನಿಸಿದೆ[೬೨].

ಮುಖ್ಯ ಗರ್ಭಗೃಹದ ಮುಂದೆ ಮುಚ್ಚಿದ ಅಂತರಾಳವಿದ್ದರೆ, ಉತ್ತರ-ದಕ್ಷಿಣಾಭಿಮುಖವಾಗಿರುವ ಗರ್ಭಗೃಹಗಳ ಮುಂದೆ ತೆರೆದ ಅಂತರಾಳಗಳಿವೆ. ಇವೆಲ್ಲಕ್ಕೂ ಹೊಂದಿಕೊಂಡಂತೆ. ಒಂಭತ್ತು ಅಂಕಣಗಳ ಒಂದೇ ನವರಂಗವಿದೆ. ಈ ನವರಂಗದ ಮುಂದೆ ಮುಖ ಮಂಟಪವಿದ್ದು, ಅದನ್ನು ಎರಡೂ ಬದಿಗಳಿಂದ (ಉತ್ತರ-ದಕ್ಷಿಣ) ಪ್ರವೇಶಿಸಬಹುದು. ಈ ಮಂಟಪವನ್ನು ಪಶ್ಚಿಮಾಭಿಮುಖವಾಗಿರುವ ನಾಲ್ಕನೆಯ ನಂದಿ ಮಂಟಪ ಕ್ಕೆಜೋಡಿಸಲಾಗಿದೆ[೬೩].

ಹೊರ ಭಾಗದ ಅಧಿಷ್ಠಾನವು ಉಪಾನ, ಪದ್ಮ, ಕುಮುದ, ಕಂಠಗಳಿಂದ ಕೂಡಿದೆ. ಅಧಿಷ್ಠಾನದ ಈ ಭಾಗದಲ್ಲಿ ಮಕರಗಳು, ಮುಂಗಾಲು ಎತ್ತಿ ನಿಂತಿರುವ ಸಿಂಹಗಳು ಮತ್ತು ಚಿಕ್ಕ ಆಕಾರದ ಮೂರ್ತಿಶಿಲ್ಪಗಳನ್ನು ಕೆತ್ತಲಾಗಿದೆ[೬೪]. ಇವುಗಳಲ್ಲಿ ಸರಸ್ವತಿ, ರತಿ ಮನ್ಮಥ, ಯಕ್ಷ, ರಾಮ ಲಕ್ಷ್ಮಣ, ಸೀತ, ಹನುಮಂತ, ವಾದ್ಯದವರು, ನರ್ತನಗೈಯುತ್ತಿರುವವರು ಮತ್ತು ಕೀರ್ತಿ ಮುಖಗಳಿಂದ ಅಲಂಕರಿಸಲಾಗಿದೆ (ಮುಖಮಂಟಪದ ಭಾಗದಲ್ಲಿ ಈ ಅಲಂಕರಣೆ ಬದಲಾವಣೆ ಆಗಿದೆ).

ಭಿತ್ತಿ ಭಾಗವು ಏಕ, ಜೋಡಿ ಅರೆಗಂಭಗಳಿಂದ ಅಲಂಕೃತಗೊಂಡಿದೆ. ಇಲ್ಲಿನ ದೊಡ್ಡ ಜೋಡಿ ಅರೆಗಂಭಗಳ ಮೇಲೆ ವೇಸರ ಮಾದರಿಯ ಶಿಖರಗಳಿವೆ. ಹಾಗೆಯೇ ಏಕ ಅರೆಗಂಭಗಳ ಮೇಲೆ ದ್ರಾವಿಡ ಶೈಲಿಯ ಶಿಖರ ಮಾದರಿಗಳನ್ನು ಕೆತ್ತಲಾಗಿದೆ. ಅಲ್ಲಲ್ಲಿ ಕಿರು ಗಾತ್ರದ ಅರೆಕಂಭಗಳು ಹಾಗು ಕ್ರಮಬದ್ಧ ಅಂತರದಲ್ಲಿ ಎದ್ದು ಕಾಣುವ ಕಚ್ಚುಗಳುಳ್ಳ ಅರೆಕಂಭಗಳಿವೆ. ಇಂತಹ ಅರೆಕಂಭಗಳ ನಡುವೆ ಅನೇಕ ಚಿಕ್ಕ ಚಿಕ್ಕ (ಕಡಿಮೆ ಅಗಲದ) ಅರೆಕಂಭಗಳನ್ನು ಕೊರೆಯಲಾಗಿದೆ[೬೫]. ಇಲ್ಲಿನ ಪಂಜರಗಳಲ್ಲಿ ಮೂರ್ತಿಗಳಿಲ್ಲ.

[illegible]

ಪಶ್ಚಿಮ ಭಾಗದ ಗರ್ಭಗುಡಿಯ ದಕ್ಷಿಣ, ಉತ್ತರ ಮತ್ತು ಪಶ್ಚಿಮ ದಿಕ್ಕಿನಲ್ಲಿ (ದೇವಾಲಯದ ಹಿಂಭಾಗ) ಮೂರು ದೇವಕೋಷ್ಠಗಳಿವೆ. ಇವುಗಳ ದ್ವಾರವು ಸರಳ ಶಾಖೆಗಳಿಂದ ಕೂಡಿದ್ದು, ಮೇಲಿನ ಭಾಗ ಶಿಖರದ ಮಾದರಿಯನ್ನು ಹೋಲುತ್ತದೆ. ಈ ಮೇಲಿನ ದೇವಕೋಷ್ಠಗಳಲ್ಲಿ ಕ್ರಮವಾಗಿ ಸರಸ್ವತಿ, ಉಗ್ರ ನರಸಿಂಹ(ಅಲ್ಲಲ್ಲಿ ತ್ರುಟಿತವಾಗಿವೆ)ಮತ್ತು ನಾಟ್ಯ ಶಿವನ ಮೂರ್ತಿಗಳಿವೆ. ನವರಂಗದ ಪೂರ್ವ ಭಾಗದ ಭಿತ್ತಿಯಲ್ಲಿ ಚೌಕಾಕಾರದೊಳಗೆ ಪುಷ್ಪ ಅಲಂಕರಣವನ್ನು ಮಾಡಲಾಗಿದೆ. ಇದೇ ಅಲಂಕರಣೆ ಪಟ್ಟಿಯಲ್ಲಿ ಪ್ರತ್ಯೇಕವಾಗಿ ಚೌಕಾಕಾರದ ಎಂಟು ಜಾಲಂಧ್ರಗಳನ್ನು ಅಳವಡಿಸಿರುವುದು ವಿಶೇಷವೆನಿಸಿದೆ.

ಭಿತ್ತಿಯ ಮೇಲಿನ ಪ್ರಸ್ತರದಲ್ಲಿ ಕಪೋತ ಭಾಗವಿದ್ದು , ಅದು ದೇವಾಲಯದ ಸುತ್ತಲೂ ಹೊರಚಾಚಿದ ರೀತಿಯಲ್ಲಿದೆ. ಪ್ರಸ್ತರದ ಈ ಭಾಗವನ್ನು ಕೋಷ್ಠ, ಪಂಜರಗಳಿಂದ ಅಲಂಕರಿಸಲಾಗಿದೆ. ಪಶ್ಚಿಮ ಗರ್ಭಗುಡಿಯ ಮೇಲೆ ಮಾತ್ರ ಶಿಖರ ಉಳಿದಿದೆ. ಈ ಶಿಖರವು ಮೂರು ತಲಗಳಿಂದ ಕೂಡಿದೆ. ಮೊದಲ ತಲದಲ್ಲಿನ ಶಿಖರದ ಮುಂಭಾಗದಲ್ಲಿ ಶುಕನಾಸಿಯಿದ್ದು, ಅದರಲ್ಲಿ ನಟರಾಜನ ಮೂರ್ತಿ ಇದೆ. ಉಳಿದಂತೆ ಶಿಖರವು ಕೂಟ ,ಶಾಲಾ ಪಂಜರಗಳಿಂದ ಕೂಡಿದ್ದು, ಅಲ್ಲಲ್ಲಿ ವಿವಿಧ ಚಿತ್ರಗಳನ್ನು ಕೆತ್ತಲಾಗಿದೆ. ಶಿಖರದ ಮೇಲೆ ಸ್ತೂಪಿ ಇದೆ.

ಪಶ್ಚಿಮ ಭಾಗದ ಮುಖ್ಯಗರ್ಭಗುಡಿಯು ಚೌಕಾಕಾರವಾಗಿದ್ದು, ಅದರಲ್ಲಿ ಲಿಂಗವಿದೆ. ದ್ವಾರದ ಎರಡೂ ಕಡೆ ಶೈವ ದ್ವಾರಪಾಲಕರಿದ್ದು, ಅವರ ಬಳಿ ಚಾಮರಧಾರಿ ಸ್ತ್ರೀಯರಿದ್ದಾರೆ. ದ್ವಾರವು ಚೌಕಾಕಾರದ ಪುಷ್ಪ ಶಾಖೆ, ಲತೆಗಳನ್ನೊಳಗೊಂಡ ಸುರುಳಿಯಾಕಾರದ ಸ್ತಂಭ ಶಾಖೆ, ಲತಾ ಮತ್ತು ಪುಷ್ಪದಳಗಳಿಂದ ಕೂಡಿದ ಪತ್ರ ಶಾಖೆಗಳನ್ನೊಳಗೊಂಡಿದೆ. ಚೌಕಾಕಾರದ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಇದರ ಮೇಲಿನ ಉತ್ತರಾಂಗ ಭಾಗದಲ್ಲಿ ಐದು ರೀತಿಯ ಶಿಖರ ಮಾದರಿಗಳನ್ನು ಕೆತ್ತಲಾಗಿದೆ.

ಇದರ ಮುಂದಿನ ಅಂತರಾಳವು ಚೌಕಾಕಾರವಾಗಿದೆ. ದ್ವಾರದ ಬಲಭಾಗದ ಶೈವದ್ವಾರಪಾಲನು ಚತುರ್ಭುಜಧಾರಿಯಾಗಿದ್ದು, ತ್ರಿಭಂಗದಲ್ಲಿ ನಿಂತಿದ್ದಾನೆ. ತ್ರಿಶೂಲ, ಡಮರುಗಳನ್ನು ಮೇಲಿನ ಕೈಗಳಲ್ಲಿ ಹಿಡಿದು, ಕೆಳಗಿನ ಎಡಗೈ ಅಭಯ ಮುದ್ರೆಯಲ್ಲಿದ್ದು, ಕೆಳ ಬಲಗೈಯಲ್ಲಿ ಗದೆಯನ್ನು ಹಿಡಿದಿದ್ದಾನೆ. ಈ ದ್ವಾರಪಾಲನ ಎಡಬದಿಗೆ ಪದ್ಮ ಫಲಗಳನ್ನು ಹಿಡಿದ ಸ್ತ್ರೀಯೊಬ್ಬಳು ತ್ರಿಭಂಗದಲ್ಲಿ ನಿಂತಿದ್ದಾಳೆ. ಹಾಗು ಈ ದ್ವಾರಪಾಲನ ಬಲಬದಿಗೆ ಪುರುಷನೊಬ್ಬನನ್ನು ಕೆತ್ತಲಾಗಿದೆ. ಎಡಭಾಗದಲ್ಲಿನ ಶೈವ ದ್ವಾರಪಾಲಕನೂ ತ್ರಿಭಂಗದಲ್ಲಿ ನಿಂತಿದ್ದು, ಈತ ಖಟ್ವಾಂಗ, ಡಮರುಗಳನ್ನು ಮೇಲಿನ ಕೈಗಳಲ್ಲಿ ಹಿಡಿದು ಗದೆಯನ್ನು ಕೆಳ ಎಡಗೈಯಲ್ಲಿ ಹಿಡಿದಿದು, ಬಲಗೈ ಅಭಯ ಮುದ್ರೆಯಲ್ಲಿರುವಂತಿದೆ. ಈ ದ್ವಾರಪಾಲಕನ ಬಲಬದಿಗೆ ಪುಷ್ಪ, ಫಲಗಳನ್ನು ಹಿಡಿದ ' ಸ್ತ್ರೀ ' ಇದ್ದಾಳೆ. ಹಾಗು ದ್ವಾರದ ಬಾಗಿಲನ್ನು ಪುರುಷನೊಬ್ಬ ಹಿಡಿದು ನಿಂತಿರುವ ರೀತಿಯಲ್ಲಿ ಕೆತ್ತಲಾಗಿದೆ. ದ್ವಾರವು ರತ್ನ ಶಾಖೆ, ಸುರುಳಿಯಾಕಾರದ ಲತಾ ಶಾಖೆ, ಚೌಕಾಕಾರದ ಸ್ತಂಭ ಶಾಖೆ ಹಾಗು ಲತಾ ಮತ್ತು ಪುಷ್ಪ ಶಾಖೆಗಳಿಂದ ಕೂಡಿದೆ.

ಈ ಶಾಖೆಗಳಿಗೆ ಹೊಂದಿಕೊಂಡಂತೆ ಮೂರು ಸಾಲಿನ ಸುರುಳಿಯಾಕಾರದ ಜಾಲಂಧ್ರಗಳಿದ್ದು,(ಜಲ-ವತಾಯನ) ಇಲ್ಲಿನ ಪ್ರತಿಯೊಂದು ಸುರುಳಿಯುಕ್ತ ಜಾಲಂಧ್ರಗಳನ್ನು ಪ್ರಾಣಿ, ಪಕ್ಷಿಗಳ ಅಲಂಕಾರ ನಾಟ್ಯದವರ, ವಾದ್ಯದವರ, ಇಲ್ಲವೇ ಯಕ್ಷ ಶಿಲ್ಪಗಳಿಂದ ಅಲಂಕರಿಸಲಾಗಿದೆ. ದ್ವಾರದ ಮೊದಲಿನ ಎರಡು ಶಾಖೆಗಳು ಬಾಗಿಲು ವಾಡದವರೆಗೂ ಮುಂದುವರಿದಿವೆ. ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವನ್ನು ಚೌಕಾಕಾರದಲ್ಲಿ ಕೆತ್ತಲಾಗಿದೆ. ಇದರ ಮೇಲಿನ ಉತ್ತರಾಂಗ ಭಾಗದಲ್ಲಿ (ಮೂಲತಃ ಇದ್ದ ಮಕರ ತೋರಣವೀಗ ಕಾಣಬರುತ್ತಿಲ್ಲ) ಎಡ ಬಲದಲ್ಲಿ ಸ್ತಂಭಗಳ ಮೇಲಿನ ಬೋದಿಗೆಗಳ ಎರಡೂ ಬದಿ ಮಕರಗಳಿದ್ದು, ಅವುಗಳನ್ನು ಸವಾರಿ ಮಾಡುವಂತೆ ಇಬ್ಬರು ಯಕ್ಷರನ್ನು ಕೆತ್ತಲಾಗಿದೆ. ಈ ಮಕರಗಳ ಮಧ್ಯದಲ್ಲಿ ತ್ರಿಮೂರ್ತಿಗಳನ್ನು ಪತ್ನಿ ಸಮೇತರಾಗಿ ಕೆತ್ತಿರುವುದು ವಿಶೇಷವಾಗಿದೆ. ಇವುಗಳಲ್ಲಿ ಶಿವನ ತೊಡೆಯ ಮೇಲೆ ಉಮೆ ಕುಳಿತರೀತಿಯ ಶಿಲ್ಪವು ಆಕರ್ಷಕವಾಗಿದೆ. ಈ ಶಿಲ್ಪದ ಕೆಳಭಾಗದಲ್ಲಿ ಅವರ ವಾಹನಗಳಾದ ನಂದಿ ಮತ್ತು ಮುಂಗಲಿಗಳನ್ನು ಚಿಕ್ಕದಾಗಿ ಬಿಡಿಸಲಾಗಿದೆ[೬೬]. ಬದಿಯಲ್ಲಿ ಗಣೇಶ ಮತ್ತು ನವಿಲಿನ ಮೇಲೆ ಕುಳಿತಿರುವ ಕಾರ್ತಿಕೇಯರಿದ್ದಾರೆ. ಉಮಾ ಮಹೇಶ್ವರನ ಬಲಬದಿಗೆ ಚರ್ತುಮುಖ ಬ್ರಹ್ಮ, ಅವನ ತೊಡೆಯ ಮೇಲೆ ಸರಸ್ವತಿ ಕುಳಿತಿರುವ ಶಿಲ್ಪವಿದೆ. ಎಡಬದಿಗೆ ಲಕ್ಷ್ಮಿ ಸಮೇತ ವಿಷ್ಣು ಆಸೀನನಾಗಿದ್ದಾನೆ. ಈ ತ್ರಿಮೂರ್ತಿಗಳ ಬಳಿ ಚಾಮರ ಹಿಡಿದ ಸ್ತ್ರೀಯರ ಶಿಲ್ಪಗಳನ್ನು ಕೆತ್ತಲಾಗಿದೆ.

ನವರಂಗದ ಉತ್ತರ, ದಕ್ಷಿಣದಲ್ಲಿ ಗರ್ಭಗುಡಿಗಳಿವೆ. ಉತ್ತರದ ಗರ್ಭಗುಡಿಯು ಚೌಕಾಕಾರವಾಗಿದ್ದು, ಅದರಲ್ಲಿ ಕೇವಲ ಪೀಠ ಮಾತ್ರ ಉಳಿದಿದೆ. ಇದರ ದ್ವಾರವು ರತ್ನ, ಲತಾ, ಸ್ತಂಭ ಮೊದಲಾದ ಎಂಟು ಶಾಖೆಯನ್ನು ಹೊಂದಿದೆ. ಈ ಎಂಟು ಶಾಖೆಗಳು ದ್ವಾರದ 'ಪೇದ್ಯಾ' (ದ್ವಾರಪಾಲಕರಿರುವ ಭಾಗ) ಭಾಗಕ್ಕೂ ಮುಂದುವರಿದಿವೆ. ಇಲ್ಲಿನ ರತ್ನ, ಲತಾ (ಆರಂಭದ ಶಾಖೆಗಳು) ಶಾಖೆಗಳು ಲಲಾಟ ಬಿಂಬದವರೆಗೂ ಮುಂದುವರಿದಿವೆ. ಲಲಾಟ ಬಿಂಬದಲ್ಲಿ ಚಿಕ್ಕ ' ಗಜಲಕ್ಷ್ಮಿ ' ಶಿಲ್ಪವಿದೆ. ಈ ಗರ್ಭ ಗುಡಿಯ ಮುಂದೆ ತೆರದ ಅಂತರಾಳವಿದ್ದು, ಅದು ಆಯತಾಕಾರವಾಗಿದೆ. ಅಂತರಾಳದ ಎರಡೂ ಬದಿಯಲ್ಲಿ ಅತ್ಯಂತ ನಾಜೂಕಾಗಿ ಕೆತ್ತಿದ ನಕ್ಷತ್ರಾಕಾರದ ಅರ್ಧ ಕಂಭಗಳಿವೆ. ಈ ಕಂಭಗಳ ಪೀಠ ಭಾಗವು ವೃತ್ತಾಕಾರವಾಗಿದ್ದು, ಅದರಲ್ಲಿ ಮೂಲತಃ ಕೆತ್ತಿದ್ದ ಶಿಲ್ಪಗಳು ಈಗ ಕಣ್ಮರೆಯಾಗಿವೆ.

ದಕ್ಷಿಣದ ಗರ್ಭಗೃಹವೂ ಚೌಕಾಕಾರವಾಗಿದ್ದು, ಇಲ್ಲಿ ಮೂರ್ತಿಯಿಲ್ಲ. ದ್ವಾರದಲ್ಲಿ ಅಪೂರ್ಣವಾಗಿರುವ ಐದು ಶಾಖೆಗಳಿದ್ದು, ಇವುಗಳು ಲಲಾಟದವರೆಗೂ ಮುಂದುವರಿದಿವೆ. ಲಲಾಟ ಬಿಂಬದಲ್ಲಿ ಚೌಕಾಕಾರದ ಪಟ್ಟಿಯಿರದಿದ್ದರೂ ಅಲ್ಲಿ ಗಜಲಕ್ಷ್ಮಿಯ ಚಿಕ್ಕಶಿಲ್ಪವೊಂದನ್ನು ಕೆತ್ತಲಾಗಿದೆ. ಈ ಗರ್ಭಗೃಹದ ಮುಂದಿನ ತೆರೆದ ಅಂತರಾಳವು ಆಯತಾಕಾರವಾಗಿದೆ. ಇದರ ಎರಡೂ ಬದಿಗೆ ನಕ್ಷತ್ರಾಕಾರದ ಅರೆಗಂಬಗಳಿದ್ದು, ಅವುಗಳ ಒಂದರ ಪೀಠದಲ್ಲಿ ಆನೆಗಳನ್ನು ಚಿತ್ರಿಸಲಾಗಿದೆ.

ನವರಂಗದಲ್ಲಿ ನಾಲ್ಕು ಕೋಷ್ಠಗುಡಿಗಳಿವೆ. ಅವುಗಳಲ್ಲಿ ಪಶ್ಚಿಮ ಭಾಗದ ಗೋಡೆಯಲ್ಲಿ(ಅಂತರಾಳ ದ್ವಾರದ ಎರಡು ಬದಿಗೆ) ಎರಡು ಹಾಗು ಉತ್ತರ ಮತ್ತು ದಕ್ಷಿಣದ ಗೋಡೆಗಳಲ್ಲಿ ತಲಾ ಒಂದೊಂದು ಕೋಷ್ಠಗುಡಿಗಳಿವೆ. ಇವುಗಳ ದ್ವಾರದಲ್ಲಿ ಸ್ತಂಭ ಶಾಖೆಯನ್ನು ಬಿಡಿಸಲಾಗಿದೆ. ಈ ಕೋಷ್ಠಗುಡಿಗಳ ಮೇಲ್ಭಾಗದ ಮಧ್ಯದಲ್ಲಿ ದ್ರಾವಿಡ ಶೈಲಿಯ ಶಿಖರವನ್ನು, ಅದರ ಎರಡೂ ಬದಿಗೂ ನಾಗರ ಶೈಲಿಯ ಶಿಖರಗಳನ್ನು ಕೆತ್ತಲಾಗಿದೆ. ಉತ್ತರದ ಕೋಷ್ಠಗುಡಿಯಲ್ಲಿ ಮಹಿಷಾಸುರ ಮರ್ಧಿನಿ ಮೂರ್ತಿ ಇದ್ದರೆ, ದಕ್ಷಿಣ ಕೋಷ್ಠದಲ್ಲಿ ಗಣೇಶ ಮೂರ್ತಿ ಇದೆ. ಪಶ್ಚಿಮ ಭಾಗದ ದೇವ ಕೋಷ್ಠ ಸಪ್ತಮಾತೃಕೆಯರ ಮೂರ್ತಿ ಹಾಗು ಕುಳಿತ ಯಕ್ಷನಿದ್ದಾನೆ[೬೭].

ನವರಂಗದಲ್ಲಿ ನಾಲ್ಕು ಕಂಭಗಳಿವೆ, ಅವುಗಳ ಕೆಳಭಾಗವು ಚೌಕಾಕಾರವಾಗಿದ್ದು, ಅದರ ಮೇಲ್ಭಾಗ ವೃತ್ತಾಕಾರವಾಗಿದ್ದು, ಇದರಲ್ಲಿ ಗಂಟೆಯಾಕಾರ ಹಾಗು ಕುಂಭದ ಅಲಂಕಾರವನ್ನು ಕಾಣಬಹುದು. ಅದರ ಮೇಲಿನ ಬೋದಿಗೆಗಳು ಪುಷ್ಪದಳಗಳಿಂದ ಅಲಂಕೃತವಾಗಿದ್ದು, ಸುಂದರವಾಗಿವೆ. ಈಶಾನ್ಯ ಭಾಗದ ಕಂಭವೊಂದರಲ್ಲಿ ಮಾತ್ರ ದಕ್ಷಿಣ ಮತ್ತು ಪಶ್ಚಿಮ ಭಾಗದಲ್ಲಿ ಶಿಲ್ಪಗಳನ್ನು ಕೊರೆಯಲಾಗಿದೆ. ಈ ಕಂಭದ ದಕ್ಷಿಣ ಮುಖದಲ್ಲಿ ಶಿವನನ್ನು ತ್ರಿಶೂಲ, ಡಮರು, ಕಪಾಲ ಮತ್ತು ಖತ್ತಿ ಹಿಡಿದಿರುವಂತೆ ಕೆತ್ತಲಾಗಿದ್ದು, ಅಲ್ಲಿ ಇಬ್ಬರು ಸೇವಕರಿದ್ದು, ಶೈವ ದ್ವಾರಪಾಲಕರಂತೆ ಇದ್ದಾರೆ. ಮೇಲಿನ ತೋರಣ ಮುರಿದಿದ್ದು, ಎರಡೂ ಕಡೆ ಅರ್ಧಗಂಬಗಳ ಮೇಲೆ ದ್ರಾವಿಡ ಶೈಲಿಯಲ್ಲಿ ಕೆತ್ತಿದ ಗೋಪುರಗಳಿವೆ.

ನವರಂಗದ ಮುಚ್ಚಿಗೆ (ಭುವನೇಶ್ವರಿ : ವಿತಾನ)ಯಲ್ಲಿ ಅರಳಿದ ಕಮಲವನ್ನು ಕೆತ್ತಲಾಗಿದೆ. ಹಾಗು ವೃತ್ತಾಕಾರದ ಸುರಳಿಯೊಳಗೆ ಅಲ್ಲಲ್ಲಿ ಕೀರ್ತಿಮುಖಗಳನ್ನು ಕೆತ್ತಲಾಗಿದೆ. ಕೆಳಗಿನ ಹಂತದಲ್ಲಿ ನಾಲ್ಕು ಹಾಗು ಮೇಲಿನ ಹಂತದಲ್ಲಿ ನಾಲ್ಕು ಜನ ದಿಕ್ಪಾಲಕರನ್ನು ಕೆತ್ತಲಾಗಿದೆ. ಭುವನೇಶ್ವರಿಯ ಉಳಿದ ಭಾಗದಲ್ಲಿ ಅಲ್ಲಲ್ಲಿ ಚಿಕ್ಕ ಪದ್ಮಗಳನ್ನು ಕೆತ್ತಲಾಗಿದೆ.

ಮುಖ ಮಂಟಪವು ನಾಲ್ಕು ಚೌಕ ಅಷ್ಟಾಕಾರದ ಕಂಬಗಳಿಂದ ಕೂಡಿದ್ದು, ಉತ್ತರ ಮತ್ತು ದಕ್ಷಿಣದಿಂದ ಈ ಮಂಟಪವನ್ನು ಪ್ರವೇಶಿಸಲು ಪ್ರವೇಶದ್ವಾರ ಹಾಗು ಸೋಪಾನಗಳಿವೆ. ಮುಖ ಮಂಟಪಕ್ಕೆ ಹೊಂದಿಕೊಂಡಂತಿರುವ ಪೂರ್ವದ ಗರ್ಭಗೃಹದಲ್ಲಿ ಚಿಕ್ಕ ನಂದಿ ಇದೆ. ಇದರ ದ್ವಾರವು ಪಂಚ ಶಾಖೆಗಳಿಂದ ಕೂಡಿದ್ದು, ಅವು ಅಲಂಕಾರ ರಹಿತವಾಗಿವೆ. ಬಳಪದ ಶಿಲೆಯಿಂದ ದೇವಾಲಯದ ನಿರ್ಮಾಣ, ದ್ವಾರ, ಲಲಾಟ, ಉತ್ತರಾಂಗ ಭಾಗ ಇವುಗಳನ್ನು ಸುಂದರವಾಗಿ ಅಲಂಕರಿಸಿರುವುದು, ಚಂದ್ರಶಿಲೆ, ಕಕ್ಷಾಸನ, ಭಿತ್ತಿಯಲ್ಲಿನ ದೇವಕೋಷ್ಠಗಳು ಮತ್ತು ಅಲಂಕಾರ ಇವುಗಳು ಕಲ್ಯಾಣಿ ಚಾಲುಕ್ಯ ಶೈಲಿಯ ಲಕ್ಷಣಗಳಾಗಿವೆ. ಈ ಲಕ್ಷಣಗಳ ಆಧಾರದ ಮೇಲೆ ಈ ದೇವಾಲಯ ಕಲ್ಯಾಣಿ ಚಾಲುಕ್ಯರ ಕಾಲಾವಧಿಯಲ್ಲಿ ನಿರ್ಮಾಣವಾಗಿದೆ ಎಂದು ಹೇಳಬಹುದು.

[illegible]

[illegible]

[illegible]

[illegible]

ಕಲ್ಯಾಣಿ ಚಾಲುಕ್ಯರು, ಕಲಚೂರಿಗಳು, ಹೊಯ್ಸಳ ರಾಜರುಗಳು ಈ ದೇವಾಲಯಕ್ಕೆ ದತ್ತಿಬಿಟ್ಟ ಬಗ್ಗೆ ಶಾಸನಗಳು ಉಲ್ಲೇಖಿಸುತ್ತವೆ[೮]. ಹೊಯ್ಸಳ ದೊರೆ ವೀರಬಲ್ಲಾಳನು ನವರಂಗದಲ್ಲಿನ ತೊಲೆಯೊಂದನ್ನು ದುರಸ್ಥಿ ಮಾಡಿಸಿದನೆಂದು ಹಾಗು ಇಲ್ಲಿನ ಹಿರೇಕೆರೆಯ ತೂಬನ್ನು ಸಹಾ ಇದೇ ಸಂದರ್ಭದಲ್ಲಿ ದುರಸ್ಥಿಗೊಳಿಸಿದನೆಂಬ ಉಲ್ಲೇಖವಿದೆ.

೧. ಊರು : ಉಚ್ಚಂಗಿ ದುರ್ಗ
೨. ತಾಲೂಕು : ಹರಪನಹಳ್ಳಿ
೩. ಹೆಸರು : ನೊಣ್ಣೇಶ್ವರ
೪. ಸ್ಥಳ : ಗ್ರಾಮದ ದಕ್ಷಿಣ ಭಾಗದ ಚಿಕ್ಕ ಹೊಂಡದ ಪೂರ್ವ ಭಾಗಕ್ಕೆ
೫. ಅಭಿಮುಖ : ಪಶ್ಚಿಮಾಭಿಮುಖ
೬. ಕಾಲ : ಕ್ರಿ.ಶ. ಸುಮಾರು ೧೧ನೇ ಶತಮಾನದ ಕೊನೆಯ ಭಾಗ
೭. ಶಿಖರ ಶೈಲಿ : ಮೇಲ್ಕಟ್ಟಡ ಉಳಿದಿಲ್ಲ
೮. ಬಳಸಿದ ಶಿಲೆ : ಬಳಪದಕಲ್ಲು

ಗರ್ಭಗುಡಿ, ಅಂತರಾಳ ಮಾತ್ರ ಈಗ ಈ ದೇವಾಲಯದಲ್ಲಿ ಉಳಿದಿದೆ.

ಗರ್ಭಗುಡಿಯ ಹೊರಭಾಗದ ಅಧಿಷ್ಠಾನವು ಉಪಾನ, ಪದ್ಮ, ಕರ್ಣಿಕಾ, ಕಪೋತ, ವೇದಿಗಳಿಂದ ಕೂಡಿದೆ. ಈ ದೇವಾಲಯದ ಹೊರಭಾಗದ ಭಿತ್ತಿಯು ಅನೇಕ ಅರೆಕಂಭ, ಶಿಖರ ಮಾದರಿಗಳಿಂದ ಅಲಂಕೃತವಾಗಿದ್ದು, ಶಾಲ, ಕೂಟ ಪಂಜರಗಳಿಂದ ಹಾಗು ಚಿಕ್ಕ ಅರೆಗಂಬಗಳ ಅಲಂಕರಣವಿದೆ. ಈ ಅಲಂಕರಣವು ಎರಡು ಪಂಜರಗಳ ನಡುವೆ ಇದೆ. ಗರ್ಭಗುಡಿಯ ಹೊರಗೆ ಉತ್ತರ, ಪೂರ್ವ ಹಾಗು ದಕ್ಷಿಣಕ್ಕೆ ಮೂರು ದೇವ ಕೋಷ್ಠಗಳಿವೆ. ಉತ್ತರದ ದೇವ ಕೋಷ್ಠದಲ್ಲಿ ಯಾವ ದೇವತಾ ಮೂರ್ತಿಯಿಲ್ಲ. ಅದರ ದ್ವಾರದಲ್ಲಿ ತ್ರಿಶೂಲ, ಡಮರುಗ ಹಿಡಿದು ತ್ರಿಭಂಗಿಯಲ್ಲಿ ನಿಂತಿರುವ ದ್ವಾರಪಾಲಕರಿದ್ದಾರೆ. ಪೂರ್ವದ ದೇವಕೂಷ್ಠದಲ್ಲಿಯೂ ಮೂರ್ತಿ ಇಲ್ಲ. ಇಲ್ಲಿಯೂ ಅಲಂಕೃತ ದ್ವಾರಪಾಲಕರಿದ್ದಾರೆ. ದಕ್ಷಿಣದ ದೇವ ಕೂಷ್ಠದಲ್ಲಿಯೂ ಮೂರ್ತಿ ಇಲ್ಲ. ಈ ದೇವ ಕೋಷ್ಠದ ದ್ವಾರದಲ್ಲಿ ಇಬ್ಬರು ಸ್ತ್ರೀ ದ್ವಾರಪಾಲಕಿಯರಿದ್ದು, ಅವರು ತ್ರಿಶೂಲ, ಡಮರುಗಳನ್ನು ಕೈಯಲ್ಲಿ ಹಿಡಿದು ತ್ರಿಭಂಗದಲ್ಲಿ ನಿಂತಿದ್ದಾರೆ. ಭಿತ್ತಿಯ ಮೇಲ್ಭಾಗದಲ್ಲಿ ಪ್ರಸ್ತರವಿದ್ದು, ಅದರಲ್ಲಿನ ಕಪೋತ ಭಾಗದಲ್ಲಿ ಪುಷ್ಪಗಳನ್ನು ಬಿಡಿಸಲಾಗಿದೆ. ಗರ್ಭಗುಡಿಯ ಮೇಲ್ಭಾಗದಲ್ಲಿ ಶಿಖರವಿಲ್ಲ.

ಚೌಕಾಕಾರದ ಗರ್ಭಗುಡಿಯಲ್ಲಿ ಲಿಂಗವಿದ್ದು, ಲಿಂಗದ ಜಲಹರಿಯು ಉತ್ತರ ಭಾಗಕ್ಕಿದೆ. ಇಲ್ಲಿಯೇ ಗಣೇಶ, ರತಿ ಮನ್ಮಥ ಮೂರ್ತಿಗಳಿವೆ. ಇದರ ಮುಚ್ಚಿಗೆಯಲ್ಲಿ ಕಮಲದ ಕೆತ್ತನೆ ಮಾಡಿದ್ದಾರೆ. ದ್ವಾರದಲ್ಲಿ ಸ್ತಂಭ ಶಾಖೆ ಮಾತ್ರ ಇದ್ದು, ಇಲ್ಲಿನ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಅದರ ಎರಡು ಬದಿಗೂ ಇಳಿಬಿದ್ದ ಕಮಲದ ಮೊಗ್ಗಿನ ಅಲಂಕಾರವಿದೆ.

ಅಂತರಾಳವು ಆಯತಾಕಾರವಾಗಿದ್ದು, ಇಲ್ಲಿ ಯಾವ ಮೂರ್ತಿಗಳಿಲ್ಲ. ಇದರ ದ್ವಾರವು ವಿವಿಧ ಶಾಖೆಗಳಿಂದ ಕೂಡಿದ್ದು, ಅದರಲ್ಲಿನ ಸ್ತಂಭ ಶಾಖೆಯ ಎರಡೂ ಬದಿಗೂ ಪುಷ್ಪ ಜಾಲಂಧ್ರಗಳನ್ನು ಬಿಡಿಸಲಾಗಿದೆ. ಲಲಾಟಬಿಂಬದಲ್ಲಿ ಯಾವ ಶಿಲ್ಪಗಳಿಲ್ಲ. ಆದರ ಎರಡೂ ಬದಿಗೂ ಇಳಿಬಿದ್ದ ಕಮಲದ ಮೊಗ್ಗಿನ ಅಲಂಕಾರವಿದೆ. ಬಾಗಿಲುವಾಡದ ಮೇಲಿನ ಉತ್ತರಾಂಗದಲ್ಲಿ ಸ್ತಂಭಯುಕ್ತ ಮಕರತೋರಣವಿದ್ದು, ಅದನ್ನು ವಲ್ಲಿ, ಪುಷ್ಪಗಳಿಂದ ಅಲಂಕರಿಸಲಾಗಿದೆ. ಈ ಮಕರ ತೋರಣದ ಮಧ್ಯದಲ್ಲಿ ಅಷ್ಟಭುಜಧಾರಿ ನಾಟ್ಯ ಶಿವನಿದ್ದು, ಈತನ ಬಲಭಾಗದಲ್ಲಿ ಚರ್ತುಮುಖ ಬ್ರಹ್ಮ , ಎಡಭಾಗದಲ್ಲಿ ವಿಷ್ಣುವಿದ್ದು, ಅವರುಗಳು ವಿವಿಧ ನಮೂನೆಯ ಆಯುಧಗಳನ್ನು ಹಿಡಿದು ಸ್ಥಾನಿಕರಾಗಿದ್ದಾರೆ. ಈ ತ್ರಿಮೂರ್ತಿಗಳ ಸುತ್ತಲೂ ಕೀರ್ತಿಮುಖದ ಪ್ರಭಾವಳಿಯಿದೆ. ಒಳಭಾಗದ ಗೋಡೆಗೆ ಇತ್ತೀಚೆಗೆ ಗಾರೆ ಹಾಕಿದ್ದಾರೆ.

ಇದರ ವಾಸ್ತು ಲಕ್ಷಣಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ ನೋಡಿದರೆ, ಇದೇ ತಾಲೂಕಿನ ನೀಲಗುಂದದ ಭೀಮಲಿಂಗೇಶ್ವರ ದೇವಾಲಯದ ವಾಸ್ತು ಲಕ್ಷಣಗಳಿಗೆ ಹೋಲಿಕೆಯಾಗುತ್ತವೆ. ಆದರೆ ಗಾತ್ರದಲ್ಲಿ ಚಿಕ್ಕದಾಗಿದೆ. ಕೆಲವರು ಈ ದೇವಾಲಯವನ್ನು ಹೊಯ್ಸಳರ ಕಾಲಕ್ಕೆ ಸೇರಿದ್ದೆಂದು ತಪ್ಪಾಗಿ ಗ್ರಹಿಸಿದ್ದಾರೆ[೬೯].

೧. ಊರು : ನೀಲಗುಂದ
೨. ತಾಲೂಕು : ಹರಪನಹಳ್ಳಿ
೩. ಹೆಸರು : ಮುಕ್ತಿ ರಾಮೇಶ್ವರ
೪. ಸ್ಥಳ : ಗ್ರಾಮದ ಉತ್ತರ ದಿಕ್ಕಿಗೆ ಅಥವಾ ಭೀಮೇಶ್ವರ ದೇವಾಲಯದ ಪಶ್ಚಿಮ ದಿಕ್ಕಿಗೆ
೫. ಅಭಿಮುಖ : ಪೂರ್ವಾಭಿಮುಖ
೬. ಕಾಲ : ಕ್ರಿ.ಶ. ೧೧ನೇ ಶತಮಾನದ ಅಂತ್ಯಕಾಲ
೭. ಶಿಖರ ಶೈಲಿ : ಮೇಲ್ಕಟ್ಟಡ ಉಳಿದಿಲ್ಲ
೮. ಬಳಸಿದ ಶಿಲೆ : ಬಳಪದ ಕಲ್ಲು

ಸ್ಥಳೀಯರಿಂದ ಸಂಜೀವ ಮೂರ್ತಿ ದೇವಾಲಯವೆಂದು ಕರೆಯಲ್ಪಡುವ ಈ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗವನ್ನು ಹೊಂದಿದೆ.

ಹೊರಭಾಗದ ಅಧಿಷ್ಠಾನವು ಪದ್ಮ, ಉಪಾನ,ಕಪೋತ ಗಳಿಂದ ಕೂಡಿದೆ. (ಇದರ ಬಹುತೇಕ ಭಾಗ ಮಣ್ಣಿನಲ್ಲಿ ಮುಚ್ಚಿದೆ.)ಭಿತ್ತಿಯು ಸರಳವಾಗಿದೆ. ಭಿತ್ತಿ ಮೇಲಿನ ಕಪೋತ ಭಾಗ ಅಲ್ಲಲ್ಲಿ ಮುರಿದು ಕೆಳಗೆ ಬಿದ್ದಿದೆ. ಶಿಖರವು ಕದಂಬ ನಾಗರ ಶೈಲಿಯಲ್ಲಿದ್ದು, ಈಗ ಎಂಟು ತಳಗಳು ಮಾತ್ರ ಶಿಖರದಲ್ಲಿ ಮಾತ್ರ ಉಳಿದಿವೆ. ಆದರ ಮೇಲಿನ ಕಲಶ ಭಾಗ ನಾಶವಾಗಿದೆ. ಈ ಶಿಖರಕ್ಕೂ ಕೂಡ ಇದೇ ರೀತಿಯ ಹಸಿರು ಶಿಲೆಯನ್ನು ಬಳಸಲಾಗಿದೆ.

ಚೌಕಾಕಾರದ ಗರ್ಭ ಗೃಹದಲ್ಲಿ ಚೌಕಾಕಾರದ ಪೀಠದ ಮೇಲೆ ಲಿಂಗವಿದೆ. ಇದರ ಮುಚ್ಚಿಗೆಯಲ್ಲಿ ಪದ್ಮ ವಿದೆ. ಗರ್ಭಗೃಹದ ದ್ವಾರವು ಅಲಂಕರಿಸದೆ ಇರುವ ಆರು ಶಾಖೆಗಳಿಂದ ಕೂಡಿದೆ. ಚೌಕಾಕಾರದ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿಯನ್ನು ಕೆತ್ತಲಾಗಿದೆ. ಆಯತಾಕಾರದ ಅಂತರಾಳವಿದ್ದು, ಅದರಲ್ಲಿ ನಂದಿಯ ಮೂರ್ತಿಯಿದೆ. ಅಂತರಾಳದ ದ್ವಾರ ಶಾಖೆಯಲ್ಲಿ ಸ್ತಂಭ ಶಾಖೆಯನ್ನು ಮಾತ್ರ ಅಲಂಕರಿಸಿ ಉಳಿದೆರಡು ಶಾಖೆಗಳನ್ನು ಹಾಗೇ ಬಿಡಲಾಗಿದೆ. ಚೌಕಾಕಾರದ ಜಾಲಂಧ್ರಗಳು ಇದರ ಎರಡೂ ಕಡೆಗಳಲ್ಲಿವೆ. ಇಲ್ಲಿನ ಲಾಲಟ ಬಿಂಬ ಭಾಗವನ್ನು ಅಲಂಕರಿಸದೆ ಹಾಗೇ ಬಿಡಲಾಗಿದೆ.

ನವರಂಗದಲ್ಲಿ ನಾಲ್ಕು ಚೌಕ ಮತ್ತು ವೃತ್ತಾಕಾರದ ಚಾಲುಕ್ಯ ಶೈಲಿಯ ಕಂಭಗಳಿವೆ. ಕಂಭಗಳಲ್ಲಿ ಯಾವುದೇ ಶಿಲ್ಪಗಳನ್ನು ಕೆತ್ತಿಲ್ಲ. ಆದರೆ ವೃತ್ತಾಕಾರದಲ್ಲಿ ಮಾಲೆಗಳ ಅಲಂಕರಣೆ ಮಾಡಲಾಗಿದೆ. ಇಲ್ಲಿನ ಬೋದಿಗೆಗಳು ಸರಳವಾಗಿದ್ದು, ಮೇಲಿನ ತೊಲೆಗಳಿಗೆ ಆಧಾರವನ್ನು ಒದಗಿಸಿವೆ. ಇಲ್ಲಿ ಒಂದು ಗಣೇಶಮೂರ್ತಿ ಇದೆ. ನವರಂಗದ ಪ್ರವೇಶದ್ವಾರವು ನಾಶವಾಗಿ ಹೋಗಿದೆ.

ಕ್ರಿ.ಶ. ೧೦೭೯ರಲ್ಲಿ ಚಾಲುಕ್ಯ ರಾಜನಾದ ೬ನೇ ವಿಕ್ರಮಾದಿತ್ಯನು ದೇವಾಲಯದ ಒಳಭಾಗದಲ್ಲಿ ಶಿಲೆಯೊಂದನ್ನು ಜೋಡಿಸಿ 'ಸ್ವಯಂಭುರಾಮೇಶ್ವರ' ದೇವರಿಗೆ ದತ್ತಿಬಿಟ್ಟ ಬಗ್ಗೆ ಶಾಸನವಿದೆ.

೧. ಊರು : ಕುಂಚೂರು

೨. ತಾಲೂಕು : ಹರಪನಹಳ್ಳಿ

೩. ಹೆಸರು : ಕಲ್ಲೇಶ್ವರ[೨೦]

೪. ಸ್ಥಳ : ನೇಗಿಗೌಡ್ರ, ಶಿವಬಸಪ್ಪನ ಹೊಲದಲ್ಲಿ

೫. ಅಭಿಮುಖ : ಪೂರ್ವಕ್ಕೆ

೬. ಕಾಲ : ಕ್ರಿ.ಶ. ೧೨ ನೇ ಶತಮಾನದ ಮೊದಲ ಭಾಗ

೭. ಶಿಖರ ಶೈಲಿ : ಶಿಖರ ಉಳಿದಿಲ್ಲ

೮. ಬಳಸಿದ ಶಿಲೆ : ಹಸಿರು ಬಳಪದ ಕಲ್ಲು ಮತ್ತು ಗ್ರಾನೈಟ್

ಈ ದೇವಾಲಯದ ಚೌಕಕಾರದ ತಳವಿನ್ಯಾಸವನ್ನು ಹೊಂದಿದ್ದು ಗರ್ಭಗುಡಿ, ಅಂತರಾಳ ಮಾತ್ರ ಈಗ ಉಳಿದಿದೆ.

ಈ ದೇವಾಲಯದ ಅಧಿಷ್ಠಾನವು ಯಾವುದೇ ರೀತಿಯ ಅಲಂಕರಣವಿರದ ಉಪಾನ, ಪದ್ಮ, ಕಪೋತ ಭಾಗಗಳನ್ನು ಒಳಗೊಂಡಿದೆ. ಹೊರಭಾಗದ ಭಿತ್ತಿಯನ್ನು ಇತ್ತೀಚಿಗೆ ಗ್ರಾನೈಟ್‌ಕಲ್ಲಿನಿಂದ ನವೀಕರಿಸಲಾಗಿದೆ. ಭಿತ್ತಿಯ ಮೇಲಿನ ಪ್ರಸ್ತರ ಭಾಗವು ಸರಳ ರೀತಿಯಲ್ಲಿದೆ. ಗರ್ಭಗುಡಿಯ ಮೇಲಿನ ಶಿಖರವೀಗ ನಾಶವಾಗಿದೆ.

ಪೂರ್ವಕ್ಕೆ ಮುಖ ಮಾಡಿರುವ ಈ ದೇವಾಲಯದ ಗರ್ಭಗುಡಿಯು ಚೌಕಾಕಾರವಾಗಿದ್ದು, ಅದರಲ್ಲಿ ಲಿಂಗವಿದೆ. ಅದರ ಮುಚ್ಚಿಗೆಯು ಅರಳಿದ ಪದ್ಮದಿಂದ ಅಲಂಕೃತವಾಗಿದ್ದು, ಇದರ ದ್ವಾರವು ಅಲಂಕರಿಸದೇ ಇರುವ ದ್ವಾರ ಶಾಖೆಗಳಿಂದ ಕೂಡಿದೆ. ಅಂತರಾಳವು ಆಯತಾಕಾರವಾಗಿದ್ದು, ಅದರಲ್ಲಿ ಯಾವುದೇ ಮೂರ್ತಿಗಳಿಲ್ಲ. ಅದರ ಮುಚ್ಚಿಗೆಯಲ್ಲಿ ಅರಳಿದ ತಾವರೆ ಇದೆ. ಇದರ ದ್ವಾರವು ಅಲಂಕರಿಸದೇ ಇರುವ ಶಾಖೆಗಳಿಂದ ಕೂಡಿದ್ದು, ಆ ಶಾಖೆಗಳ ಎರಡೂ ಬದಿಗೂ ಚೌಕಾಕಾರದ ಜಾಲಂಧ್ರಗಳಿವೆ.

ಚಾಲುಕ್ಯ ಅರಸ ತ್ರಿಭುವನ ಮಲ್ಲದೇವನ ಸಾಮಂತ ಅರಸ ತ್ರಿಭುವನ ಪಾಂಡ್ಯ ದೇವನು ನೊಳಂಬವಾಡಿ ೩೨೦೦೦ವನ್ನು ಆಳುತ್ತಿದ್ದಾಗ, ಮಹಾನಾಡ ಪ್ರಭು ಕೊಂಚಾಪುರದ ಯರಿಂಗರಸ ಊರ ಒಡೆಯನಾಗಿದ್ದಾನೆ. ಆಗ ಕುಂಚೂರಿಗೆ ಸೇರಿದ ''ಮತ್ತೂರು'' ಎನ್ನುವ ಚಿಕ್ಕ ಗ್ರಾಮವೊಂದನ್ನು ಶ್ರೀ ಮಲ್ಲಿಕಾರ್ಜುನ ಮತ್ತು ಕಲ್ಲಿದೇವರ ಸೇವಾಕಾರ್ಯಕ್ಕೆ ಶೋತ್ರಿಯ ಗ್ರಾಮವಾಗಿ ದತ್ತಿ ಬಿಟ್ಟ ಬಗ್ಗೆ ಈ ದೇವಾಲಯದ ಮುಂದಿನ ಶಾಸನವೊಂದು ತಿಳಿಸುತ್ತದೆ[೭೧].

ಇದೇ ಗ್ರಾಮದ ಈಶಾನ್ಯ ಭಾಗದ ಕೆರೆಯ ಬಳಿ ಇದೇ ಕಾಲಮಾನ ಹಾಗು ಶೈಲಿಗೆ ಸಮೀಪ್ಯ ಹೊಂದಿದ ಮತ್ತೊಂದು ಚಿಕ್ಕ ಕಲ್ಲೇಶ್ವರ ದೇವಾಲಯವಿದೆ[೭೨] ಗರ್ಭಗುಡಿ, ಮುಖಮಂಟಪ ಮಾತ್ರ ಈ ದೇವಾಲಯದಲ್ಲಿ ಈಗ ಉಳಿದಿವೆ. ಗರ್ಭಗುಡಿಯಲ್ಲಿ ಈಚಿಗೆ ತಂದು ಸೇರಿಸಿದ ಆಂಜನೇಯನ ವಿಗ್ರಹವಿದೆ[೭೩]. ಮುಖ ಮಂಟಪದಲ್ಲಿ ನಾಲ್ಕು ಚಾಲುಕ್ಯಶೈಲಿಯ ಕಂಬಗಳಿದ್ದು, ಅವುಗಳ ದಂಡಾಗ್ರ ಭಾಗವು ಮಣಿಸರಗಳಿಂದ ಅಲಂಕೃತವಾಗಿದೆ. ಗರ್ಭಗುಡಿ, ಮತ್ತು ಮುಖಮಂಟಪದ ದ್ವಾರಗಳು ಸಾಧಾರಣವಾಗಿವೆ.

ಯಾದವ ಅರಸ ರಾಮಚಂದ್ರದೇವನ ೧೦ ನೇ ವರ್ಷದಲ್ಲಿ ಪ್ರಮೋದೂತ ಸಂವತ್ಸರ ಆಷಾಢ ಮಾಸ ೧೦ ಸೋಮವಾರ ಕ್ರಿ.ಶ. ೧೨೭೮ ಜುಲೈ ೫ರಂದು ಮಹಾ ಮಂಡಳೇಶ್ವರ ನವ ಖಂಡೆಯ ಚಕ್ರವರ್ತಿ ಖೇಯಿ ದೇವರಾಣಿಯ ಜಗದ್ದಳ ನಾಚಿದೇವರಸ, ಹಲವಾಗಿಲು ಮನ್ನೆಯನಾಗಿದ್ದಾಗ ಈ ಊರಿನ ಒಡೆಯ ಮಲ್ಲಿಯ ಸಮಸ್ತ ಪ್ರಜೆಗಳ ಮಾನ್ಯಕಾರರು ಶ್ರೋತ್ತಿಯ ಭೂಮಿಯನ್ನು ಸ್ವಯಂಭು ಕಲ್ಲಿನಾಥದೇವರಿಗೆ ಸೇವಾಕಾರ್ಯಕ್ಕೆ ದತ್ತಿಕೊಟ್ಟರೆಂದು ಈ ದೇವಾಲಯದ ಕಂಭ ಶಾಸನ ವಿವರಿಸುತ್ತದೆ[೭೪].

ಈ ದೇವಾಲಯದ ಬಳಿಯೇ ಇದ್ದ ಮಲ್ಲಕಾರ್ಜುನ ದೇವಾಲಯವೊಂದು ಈಗ ಹಾಳಾಗಿದೆ. ಈ ದೇವಾಲಯದ ವಾಸ್ತು ಲಕ್ಷಣದ ಆಧಾರದ ಮೇಲೆ ಕಲ್ಯಾಣಿ ಚಾಲುಕ್ಯರ ಕಾಲಾವಧಿಯಲ್ಲಿ ನಿರ್ಮಿತವಾಗಿದೆ ಎಂದು ಹೇಳಬಹುದು.

೧. ಊರು : ಬಾಗಳಿ

೨. ತಾಲೂಕು : ಹರಪನಹಳ್ಳಿ

೩. ಹೆಸರು : ಇಷ್ಟ ಲಿಂಗೇಶ್ವರ

೪. ಸ್ಥಳ : ಬಸ್ ನಿಲ್ದಾಣದ ಹತ್ತಿರ

೫. ಅಭಿಮುಖ : ಪೂರ್ವಾಭಿಮುಖ

೬. ಕಾಲ : ಕ್ರಿ.ಶ.ಸು. ೧೨ನೇಶತಮಾನದ ಮೊದಲ ಭಾಗ [೬೫]

೭. ಶಿಖರ ಶೈಲಿ : ಶಿಖರ ಉಳಿದಿಲ್ಲ

೮. ಬಳಸಿದ ಶಿಲೆ : ಬಳಪದ ಕಲ್ಲು

ಚೌಕಾಕಾರದ ತಳ ವಿನ್ಯಾಸವನ್ನು ಹೊಂದಿದ ಈ ದೇವಾಲಯದ ಗರ್ಭಗುಡಿ, ಅಂತರಾಳಗಳನ್ನು ಮಾತ್ರ ನಾವೀಗ ನೋಡಬಹುದಾಗಿದೆ. ಇದರ ಮುಂದಿನ ಭಾಗ ನಶಿಸಿಹೋಗಿದ್ದು, ಆದರ ಕೆಲವು ಅವಶೇಷಗಳು ಮಾತ್ರ ಕಂಡು ಬರುತ್ತವೆ.

ಹೊರಭಾಗದ ಅಧಿಷ್ಠಾನವು ಉಪಾನ,ಪದ್ಮ,ಕಪೋತ,ಭಾಗಗಳಿಂದ ಕೂಡಿದ್ದು, ಭಿತ್ತಿಯಲ್ಲಿ ಯಾವುದೇ ರೀತಿಯ ಅಲಂಕಾರವಿಲ್ಲ. ಪ್ರಸ್ತರ ಭಾಗದಲ್ಲಿನ ಕಪೋತ ಭಾಗವು ಸ್ವಲ್ಪ ಕೆಳಭಾಗಿದ್ದು, ಸಾಧಾರಣವಾಗಿದೆ. ದೇವಾಲಯದ ಮೇಲ್ಭಾಗದಲ್ಲಿ ಶಿಖರವಿಲ್ಲ.

ಗರ್ಭಗುಡಿಯು ಚೌಕಾಕಾರವಾಗಿದ್ದು, ಅದರಲ್ಲಿ ಶಿವಲಿಂಗವಿದೆ. ವಿತಾನದಲ್ಲಿ ಪದ್ಮವಿದೆ. ದ್ವಾರದ ಪೇದ್ಯಾಭಾಗದಲ್ಲಿ ದ್ವಾರಪಾಲಕರಿಲ್ಲ. ದ್ವಾರವು ರತ್ನ, ಪುಷ್ಪ, ಕಂಭ, ವಲ್ಲಿ, ಪುಷ್ಪ ಶಾಖೆಗಳಿಂದ ಅಲಂಕೃತಗೊಂಡಿದೆ. ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ.

ಆಯತಾಕಾರದ ಅಂತರಾಳವಿದ್ದು, ಇಲ್ಲಿ ಯಾವುದೇ ಮೂರ್ತಿಗಳಿಲ್ಲ. ದ್ವಾರದ ಪೇದ್ಯಾಭಾಗದಲ್ಲಿ ಶೈವದ್ವಾರಪಾಲಕರಿದ್ದಾರೆ. ದ್ವಾರವು ನಾಲ್ಕು ಶಾಖೆಗಳಿಂದ ಕೂಡಿದ್ದು, ರತ್ನ ಶಾಖೆ ವೃತ್ತಾಕಾರದ ಸುರುಳಿಯೊಳಗೆ ಜಾಲಂಧ್ರದಿಂದ ಕೂಡಿದ ವಲ್ಲಿ ಶಾಖೆ, ನಂತರ ಪುಷ್ಪ ಜಾಲಂಧ್ರ ಶಾಖೆ ಹಾಗು ನಾಗಶಾಖೆಗಳಿಂದ ಕೂಡಿದ್ದು, ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಉತ್ತಾರಾಂಗದಲ್ಲಿ ತ್ರಿಮೂರ್ತಿಗಳಿದ್ದು ಎಡಭಾಗದ ಕೊನೆಯಲ್ಲಿ ಗಣೇಶ, ಬಲಭಾಗದಲ್ಲಿ ಕಾರ್ತಿಕೇಯರಿದ್ದಾರೆ. ದ್ವಾರದಿಂದ ಬಂದ ವಲ್ಲಿ ,ಶಾಖೆ ,ಪುಷ್ಪ ಜಾಲಂಧ್ರ ಶಾಖೆ ಈ ಭಾಗದವರೆಗೂ ಮುಂದುವರಿದಿದೆ. ದ್ವಾರದ ಎರಡೂ ಬದಿ ಎರಡು ಅರೆಗಂಭಗಳು ಮಾತ್ರ ಉಳಿದಿದ್ದು, ಇನ್ನುಳಿದ ಯಾವುದೇ ವಾಸ್ತುಭಾಗ ಗೋಚರಿಸುವುದಿಲ್ಲ. ದೇವಾಲಯದ ವಾಸ್ತು ಲಕ್ಷಣದ ಆಧಾರದ ಮೇಲೆ ಈ ದೇವಾಲಯ ಕಲ್ಯಾಣಿ ಚಾಲುಕ್ಯರ ಕಾಲಾವಧಿಯಲ್ಲಿ ನಿರ್ಮಿತವಾಗಿದೆ ಎಂದು ಹೇಳಬಹುದು.

[illegible]

[illegible]

[illegible]

[illegible]

[illegible]

[illegible]

೧. ಊರು : ಬಾಗಳಿ

೨. ತಾಲೂಕು : ಹರಪನಹಳ್ಳಿ

೩. ಹೆಸರು : ಸಂಗನಬಸವೇಶ್ವರ(ಪ್ಪ)

೪. ಸ್ಥಳ : ಗ್ರಾಮ ಮಧ್ಯದಲ್ಲಿ

೫. ಅಭಿಮುಖ : ಮೂಲಗರ್ಭಗುಡಿ ಪೂರ್ವಾಭಿಮುಖವಾಗಿದ್ದು, ದಕ್ಷಿಣಕ್ಕೆ ಪ್ರವೇಶ ದ್ವಾರವಿದೆ.

೬. ಕಾಲ : ಕ್ರಿ.ಶ. ಸುಮಾರು ೧೨ನೇ ಶತಮಾನದ ಮೊದಲಭಾಗ

೭. ಶಿಖರ ಶೈಲಿ : ಶಿಖರ ಉಳಿದಿಲ್ಲ

೮. ಬಳಸಿದ ಶಿಲೆ : ಬಳಪದ ಕಲ್ಲು ಮತ್ತು ಗ್ರಾನೈಟ್

ಮೂರು ಗರ್ಭಗುಡಿಗಳು ಅಂತರಾಳ, ನವರಂಗ ಹಾಗು ಮುಖಮಂಟಪವನ್ನು ಈ ದೇವಾಲಯ ಹೊಂದಿದೆ.

ಅಧಿಷ್ಠಾನವು ಉಪಾನ, ಪದ್ಮ ಭಾಗಗಳನ್ನು ಒಳಗೊಂಡಿದ್ದು, ಅವು ಸರಳವಾಗಿವೆ. ಮೂಲ ಭಿತ್ತಿಯ ಹೊರಭಾಗದ ಶಿಲೆಗಳು ನಾಶವಾಗಿರುವುದರಿಂದ ಆ ಭಾಗದ ಅಲಂಕಾರವು ಸಾಧಾರಣವಾಗಿದೆ. ಪ್ರಸ್ತರ ಹಾಗು ಅದರ ಮೇಲ್ಭಾಗವು ನಾಶವಾಗಿದೆ. ಭಿತ್ತಿಯ ಮೇಲ್ಭಾಗವನ್ನು ಇತ್ತೀಚೆಗೆ ಗ್ರಾನೈಟ್ ಕಲ್ಲಿನಿಂದ ಕಟ್ಟಿದ್ದಾರೆ.

ಚೌಕಾಕಾರದ ಪಶ್ಚಿಮದ ಗರ್ಭಗುಡಿಯಲ್ಲಿ ಲಿಂಗವಿದ್ದು, ಅದರಲ್ಲಿ ನಾಲ್ಕು ಅರೆಕಂಭಗಳು ಹಾಗು ವಿತಾನದಲ್ಲಿ ಪದ್ಮವಿದೆ. ದ್ವಾರದ ಪೇದ್ಯಾ ಭಾಗದಲ್ಲಿ ದ್ವಾರಪಾಲಕರಿರದೇ, ದ್ವಾರಬಂಧವು ಐದು ಶಾಖೆಗಳಿಂದ ಕೂಡಿದೆ. ಆದರೆ ಸ್ತಂಭ ಶಾಖೆಯೊಂದನ್ನು ಹೊರತುಪಡಿಸಿ, ಉಳಿದ ಯಾವ ಶಾಖೆಗಳು ಅಲಂಕಾರಿಕವಾಗಿಲ್ಲ. ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಇದರ ಮುಂದಿನ ಅಂತರಾಳ ಆಯತಾಕಾರವಾಗಿದ್ದು, ಇಲ್ಲಿ ಯಾವ ಮೂರ್ತಿಗಳು ಕಾಣಬರುತ್ತಿಲ್ಲ. ದ್ವಾರದಲ್ಲಿ ಶೈವ ದ್ವಾರಪಾಲಕರಿದ್ದು, ದ್ವಾರದಲ್ಲಿ ವಿದ್ಯಾಧರ ಶಾಖೆ, ಪುಷ್ಪ ಜಾಲಂಧ್ರ ಶಾಖೆ, ವಲ್ಲಿ ಶಾಖೆ ಇದೆ. ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದ್ದು, ಉತ್ತರಾಂಗದಲ್ಲಿ ವಿವಿಧ ನಮೂನೆಯ ಶಿಖರ ಮಾದರಿಗಳನ್ನು (ದ್ರಾವಿಡ, ಕದಂಬ, ನಾಗರ ಶೈಲಿಯ ಶಿಖರಗಳು) ಕೆತ್ತಲಾಗಿದೆ. ನವರಂಗದ ಉತ್ತರ ಭಾಗಕ್ಕೆ ಒಂದು ಗರ್ಭಗುಡಿಯಿದ್ದು, ಅದರಲ್ಲಿ ವಿಷ್ಣುವಿನ ಮೂರ್ತಿ ಇದೆ. ಈ ಗರ್ಭಗುಡಿಯ ಪೇದ್ಯಾ ಭಾಗದಲ್ಲಿ ದ್ವಾರಪಾಲಕರಿದ್ದು, ದ್ವಾರಬಂಧವು ಪುಷ್ಪ ಜಾಲಂಧ್ರಗಳಿಂದ ಅಲಂಕೃತವಾಗಿದೆ. ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ನವರಂಗದ ಪೂರ್ವಭಾಗಕ್ಕೆ ಮತ್ತೊಂದು ಗರ್ಭಗುಡಿಯಿದ್ದು, ಅದರಲ್ಲಿ ಸೂರ್ಯನ ಮೂರ್ತಿ ಇದೆ. ಇದರ ದ್ವಾರವು ಸ್ವಸ್ತಿಕ್ ಮಾದರಿಯ ಜಾಲಂಧ್ರಗಳಿಂದ ಅಲಂಕೃತವಾಗಿದ್ದು, ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ನವರಂಗದ ಮುಚ್ಚಿಗೆಯಲ್ಲಿ ಪದ್ಮವಿದೆ. ನಾಲ್ಕು ಕಂಭಗಳ ಮಧ್ಯೆ ನಂದಿಮೂರ್ತಿಯೊಂದಿದೆ. ಪ್ರವೇಶ ದ್ವಾರವು ದಕ್ಷಿಣ ಭಾಗಕ್ಕಿದೆ. ದ್ವಾರವು ಲತಾ, ಪುಷ್ಪ, ಸ್ತಂಭ ಮೊದಲಾದ ಶಾಖೆಗಳನ್ನೊಳಗೊಂಡಿದೆ. ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ.

ನವರಂಗದಲ್ಲಿ ನಾಲ್ಕು ಕಂಭಗಳಿದ್ದು, ಇವುಗಳ ಕೆಳ ಭಾಗವು ಚೌಕಾಕಾರವಾಗಿ, ಅದರ ಮೇಲಿನಭಾಗವು ವೃತ್ತಾಕಾರದ ಬಳೆಯ ಅಲಂಕರಣ ಪಡೆದುಕೊಂಡಿವೆ. ನವರಂಗದಲ್ಲಿಯೇ ಕೆಲವು ಅರೆಗಂಬಗಳಿದ್ದು, ಅವು ಅಷ್ಟಮುಖಗಳನ್ನು ಹೊಂದಿ ನಕ್ಷತ್ರಾಕಾರದಲ್ಲಿವೆ. ಪ್ರವೇಶ ದ್ವಾರಕ್ಕೆ ಹೊಂದಿಕೊಂಡಂತೆ, ಅದರ ಮುಂಭಾಗದಲ್ಲಿ ಚೌಕಾಕಾರದ ಮುಖ ಮಂಟಪವನ್ನು ಹೊಂದಿದೆ. ಅಲ್ಲಿ ಎರಡು ವೃತ್ತಾಕಾರದ ಕಂಭಗಳಿವೆ. ಇದರ ವಿತಾನದಲ್ಲಿ ಪದ್ಮವಿದೆ. ಹಾಗು ಒಳಭಾಗಕ್ಕೆ ಕಕ್ಷಾಸನಗಳಿವೆ. ಈ ದೇವಾಲಯದ ಲಕ್ಷಣದ ಆಧಾರದ ಮೇಲೆ ಕಲ್ಯಾಣಿ ಚಾಲುಕ್ಯರ ಅಂತ್ಯಕಾಲದಲ್ಲಿ ಈ ದೇವಾಲಯ ನಿರ್ಮಿತವಾಗಿದೆ ಎಂದು ಹೇಳಬಹುದು.

೧. ಊರು : ಚಿಗಟೇರಿ

೨. ತಾಲೂಕು : ಹರಪನಹಳ್ಳಿ

೩. ಹೆಸರು : ರಾಮಲಿಂಗೇಶ್ವರ

೪. ಸ್ಥಳ : ಗ್ರಾಮದಿಂದ ½ ಕಿ.ಮೀ. ದೂರದಲ್ಲಿನ ಈಶಾನ್ಯ ಭಾಗಕ್ಕಿದೆ.

೫. ಅಭಿಮುಖ : ಪೂರ್ವಾಭಿಮುಖ

೬. ಕಾಲ : ಕ್ರಿ.ಶ. ಸು. ೧೨ನೇ ಶತಮಾನದ ಮೊದಲ ಭಾಗ

೭. ಶಿಖರ ಶೈಲಿ : ಶಿಖರ ಉಳಿದಿಲ್ಲ.

೮. ಬಳಸಿದ ಶಿಲೆ : ಬಳಪದ ಮತ್ತು ಗ್ರಾನೈಟ್ ಶಿಲೆ

ಗರ್ಭಗುಡಿ, ಅಂತರಾಳ ಮಾತ್ರ ಈಗ ಕಾಣಬರುತ್ತದೆ. ಅದರ ಮುಂದಿನ ಭಾಗವಿತ್ತೆಂಬುದನ್ನು ಅಂತರಾಳದ ಮುಂದಿರುವ ಅಧಿಷ್ಠಾನದ ಕುರುಹುಗಳಿಂದ ಅರಿಯಬಹುದಾಗಿದೆ.

ಹೊರಭಾಗದ ಅಧಿಷ್ಠಾನವು ಉಪಾನ, ಪದ್ಮ, ಕಂಠಗಳಿಂದ ಕೂಡಿದೆ. ಅದರ ಮೇಲಿನ ಭಿತ್ತಿಯು ಸರಳವಾಗಿದೆ. ಅಂತರಾಳದ ಬಾಹ್ಯ ಭಿತ್ತಿ ಅಲ್ಲಲ್ಲಿ ಬಿದ್ದು ಹೋಗಿದೆ. ಭಿತ್ತಿ ಮೇಲಿನ ಪ್ರಸ್ತರಭಾಗ ಸಾಧಾರಣವಾಗಿದ್ದು, ಈ ಭಾಗದಲ್ಲಿ ಅಲ್ಲಲ್ಲಿ ಗ್ರಾನೈಟ್ ಕಲ್ಲನ್ನು ಉಪಯೋಗಿಸಿ ಪ್ರಸ್ತರದ ಭಾಗವನ್ನು ಈಚೆಗೆ ನಿರ್ಮಿಸಿದ್ದಾರೆ. ಶಿಖರವೀಗ ಉಳಿದಿಲ್ಲ.

ಚೌಕಾಕಾರದ ಗರ್ಭಗುಡಿಯಲ್ಲಿ ಪೀಠದ ಮೇಲೆ ಲಿಂಗವಿದೆ. ಇಲ್ಲಿ ನಾಲ್ಕು ಅರೆಗಂಬಗಳಿದ್ದು, ಪಶ್ಚಿಮ ಭಿತ್ತಿಯಲ್ಲಿ ಅಡ್ಡಪಟ್ಟಿಯೊಂದಿದೆ. ಇದರಿಂದಾಗಿ ಪೂಜೆಯ ಸಲಕರಣೆಗಳನ್ನು ಆ ಪಟ್ಟಿಯ ಮೇಲೆ ಇಡಲು ಸಹಾಯಕವಾಗಿದೆ. ಈ ಗರ್ಭಗುಡಿಯ ಮುಚ್ಚಿಗೆಯಲ್ಲಿ ಪದ್ಮವಿದೆ. ಇದರ ದ್ವಾರದಲ್ಲಿ ತ್ರಿಶೂಲ, ಡಮರುಗ, ಗದೆ ಹಿಡಿದು ಅಭಯ ಮುದ್ರೆಯಲ್ಲಿರುವ ಶೈವದ್ವಾರಪಾಲಕರಿದ್ದಾರೆ. ದ್ವಾರಬಂಧವು ವಿವಿಧ ಸರಳ ಶಾಖೆಯಿಂದ ಕೂಡಿದ್ದು, ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವನ್ನು ಚೌಕಾಕಾರದ ಪಟ್ಟಿಕೆಯಲ್ಲಿ ಕೆತ್ತಲಾಗಿದೆ.

ಅಂತರಾಳವು ಆಯತಾಕಾರವಾಗಿದೆ. ಇಲ್ಲಿ ಯಾವ ಮೂರ್ತಿಗಳು ಇಲ್ಲ. ಮೇಲ್ಭಾಗದ ಮುಚ್ಚಿಗೆಯಲ್ಲಿ ಪದ್ಮವಿದೆ. ತ್ರಿಶೂಲ, ಡಮರುಗ, ಗದೆ ಹಿಡಿದು, ಅಭಯ ಮುದ್ರೆಯಲ್ಲಿರುವ ಶೈವದ್ವಾರಪಾಲಕರು ಅಂತರಾಳದ ದ್ವಾರದ ಪೇದ್ಯಾ ಭಾಗದ ಎರಡು ಬದಿಗೂ ಇದ್ದಾರೆ. ಇದರ ದ್ವಾರವನ್ನು ಪುಷ್ಪ, ಲತಾ, ಸ್ತಂಭ , ಶಾಖೆ ಹಾಗು ಪುಷ್ಪಜಾಲಂಧ್ರ ಶಾಖೆಯಿಂದ ಅಲಂಕರಿಸಲಾಗಿದೆ. ಆರಂಭದ ಎರಡು ಶಾಖೆ (ಅಂತರ್ ಶಾಖೆ)ಗಳು ಲಲಾಟದವರೆಗೂ ಮುಂದುವರಿದಿವೆ. ಚೌಕಾಕಾರದ ಪಟ್ಟಿಕೆಯಲ್ಲಿ ಗಜಲಕ್ಷ್ಮಿಯನ್ನು ಕೆತ್ತಲಾಗಿದೆ. ಈ ಶಿಲ್ಪ ಪಟ್ಟಿಕೆಯ ಎರಡೂ ಬದಿಗೂ ಇಳಿಬಿದ್ದ ಕಮಲದ ಮೊಗ್ಗುಗಳನ್ನು ಬಿಡಿಸಲಾಗಿದೆ. ಉತ್ತರಾಂಗ ಭಾಗದಲ್ಲಿ ಕದಂಬನಾಗರ (ಪಾಂಸಾನ) ಹಾಗು ವೇಸರ ಶೈಲಿಯ ಐದು ಶಿಖರದ ಮಾದರಿಗಳನ್ನು ಕೆತ್ತಿ ದೇವಾಲಯದ ಅಲಂಕಾರವನ್ನು ಹೆಚ್ಚಿಸಲಾಗಿದೆ.

ಅಂತರಾಳದ ಮುಂದಿನ ಭಾಗ ಈಗ ಉಳಿದಿಲ್ಲ. ಇಲ್ಲಿ ಸಪ್ತ ಮಾತೃಕೆಯರು, ಗಣೇಶ, ರತಿಮನ್ಮಥ, ವಿಷ್ಣುವಿನ ಮೂರ್ತಿಗಳು ಅಲ್ಲಲ್ಲಿ ಇವೆ. ಗರ್ಭಗುಡಿಗೆ ಎದುರಾಗಿ ಲಿಂಗದ ಬಳಿ ಒಂದು ನಂದಿ ಇದೆ. ಕ್ರಿ.ಶ. ೧೨೧೦ರಲ್ಲಿ ಹೊಯ್ಸಳ ಅರಸ ವೀರಬಲ್ಲಾಳನು ಉಚ್ಚಂಗಿ, ಬಾಗಳಿಗಳನ್ನು ಆಳುತ್ತಿದ್ದಾಗ, ಚಿಕ್ಕಟೇರಿ (ಈಗಿನ ಚಿಗಟೇರಿ) ಗ್ರಾಮವು ಚಂದೂರು ಆಯಿತು ಎಂದು ದೇವಾಲಯದ ಬಳಿಯ ಶಾಸನವೊಂದು ವಿವರಿಸುತ್ತದೆ. ಕಲ್ಯಾಣಿ ಚಾಲುಕ್ಯರ ಕಾಲಾವಧಿಯಲ್ಲಿ ಈ ದೇವಾಲಯ ನಿರ್ಮಿತವಾಗಿದೆ ಎಂದು ವಾಸ್ತುಲಕ್ಷಣಗಳ ಆಧಾರದ ಮೇಲೆ ಹೇಳಬಹುದು.

ಇದೇ ಗ್ರಾಮದಲ್ಲಿರುವ ವೈಷ್ಣವ ಪಂಥಕ್ಕೆ ಸೇರಿದ ಮತ್ತೊಂದು ಪ್ರಾಚೀನ ದೇವಾಲಯವಾದ ನಾರಪ್ಪ (ನಾರಾಯಣ) ದೇವಾಲಯವು ಈಗ ಸಂಪೂರ್ಣವಾಗಿ ನವೀಕೃತಗೊಳ್ಳುತ್ತಿದೆ.

೧. ಊರು : ಆನೆಕೊಂಡ
೨. ತಾಲೂಕು : ದಾವಣಗೆರೆ
೩. ಹೆಸರು : ಈಶ್ವರ[೭೬]
೪. ಸ್ಥಳ : ಗ್ರಾಮದ ಮಧ್ಯ ಭಾಗದಲ್ಲಿದೆ
೫. ಅಭಿಮುಖ : ಪೂರ್ವಾಭಿಮುಖ
೬. ಕಾಲ : ಕ್ರಿ.ಶ. ೧೨ನೇ ಶತಮಾನದ ಮೊದಲ ಭಾಗ[೭೭]
೭. ಶಿಖರ ಶೈಲಿ : ಶಿಖರವಿಲ್ಲ
೮. ಬಳಸಿದ ಶಿಲೆ : ಬಳಪದ ಕಲ್ಲು

ಮೂಲತಃ ಮೂರು ಗರ್ಭಗುಡಿಗಳಿದ್ದು, ಈ ದೇವಾಲಯದಲ್ಲಿ ಈಗ ಪೂರ್ವ ಹಾಗು ಉತ್ತರದಲ್ಲಿ ತಲಾ ಒಂದೊಂದು ಗರ್ಭಗುಡಿ[೭೮] ಅಂತರಾಳ, ನವರಂಗ ಮತ್ತು ಮುಖಮಂಟಪವಿದೆ. ಅಲ್ಲದೇ ದೇವಾಲಯದ ಎದುರು ಭಾಗಕ್ಕೆ ನಂದಿ ಮಂಟಪವಿದೆ.

[illegible]

[illegible]

[illegible]

[illegible]

ಹೊರ ಭಾಗದ ಅಧಿಷ್ಠಾನವು ಉಪಾನ, ಪದ್ಮ,ಕರ್ಣಿಕ, ಕಪೋತ, ವೇದಿಗಳಿಂದ ಕೂಡಿದೆ. ಭಿತ್ತಿಯು ಅಲ್ಲಲ್ಲಿ ನವೀಕೃತಗೊಂಡಿದೆ. ಉಳಿದ ಭಿತ್ತಿ ಭಾಗದಲ್ಲಿ ಅರೆಗಂಭಗಳನ್ನು ಹಾಗು ಕೋಷ್ಠ ಪಂಜರಗಳನ್ನು, ಅವುಗಳ ಮೇಲೆ ಶಿಖರದ ಮಾದರಿಗಳನ್ನು ಕೆತ್ತಲಾಗಿದೆ. ಭಿತ್ತಿಯ ಮೇಲಿನ ಪ್ರಸ್ತರದಲ್ಲಿ ಕಪೋತ ಭಾಗವಿದ್ದು, ಅದು ಸರಳವಾಗಿದೆ. ಗರ್ಭಗುಡಿ ಮೇಲೆ ಶಿಖರವಿಲ್ಲ. ಮುಖ ಮಂಪಟದ ಕಕ್ಷಾಸನದ ಹೊರಭಾಗದಲ್ಲಿ ಹಲವು ಸಾಲು ಅಡ್ಡಪಟ್ಟಿಕೆಗಳಿವೆ. ದಕ್ಷಿಣಭಾಗದ ಪಟ್ಟಿಕೆಗಳಲ್ಲಿ ಜೋಡಿ ಅರೆಗಂಭಗಳ ನಡುವೆ ನೃತ್ಯ ಗಣಪತಿ, ಋಷಿಗಳು, ನರ್ತನ ಭಂಗಿಯಲ್ಲಿರುವ ಸ್ತ್ರೀಯರು ಹಾಗು ವಿದ್ಯಾಧರ ಶಿಲ್ಪಗಳಿವೆ. ಉತ್ತರ ಭಾಗದ ಪಟ್ಟಿಕೆಯಲ್ಲಿ ರತಿ ಮನ್ಮಥ, ಬೇತಾಳ, ಲಜ್ಜಾಗೌರಿ,ಹಾಗು ಬೇಟೆಗಾರರ ಶಿಲ್ಪಗಳನ್ನು ಕೆತ್ತಲಾಗಿದೆ.

ಚೌಕಾಕಾರದ ಗರ್ಭಗುಡಿಯಲ್ಲಿ ಲಿಂಗವಿದ್ದು, ಅದರ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಅಂತರಾಳವು ಆಯತಾಕಾರವಾಗಿದ್ದು, ಇಲ್ಲಿಯೂ ಸಹ ಒಂದು ಲಿಂಗವಿದೆ. ದ್ವಾರದ ಕೆಳಭಾಗದಲ್ಲಿ ಶೈವದ್ವಾರಪಾಲಕರಿದ್ದು, ಎಡಬಲದಲ್ಲಿ ಗಂಗೆ-ಯಮುನೆಯರಿದ್ದಾರೆ. ದ್ವಾರವು ರತ್ನ, ವಿದ್ಯಾಧರ, ಸ್ತಂಭ, ವಲ್ಲಿ ಶಾಖೆಗಳಿಂದ ಕೂಡಿದೆ. ಮೊದಲಿನ ಎರಡು ಶಾಖೆಗಳು ಲಲಾಟದವರೆಗೂ ಮುಂದುವರಿದಿವೆ. ಲಲಾಟ ಬಿಂಬದಲ್ಲಿ ಮಕರ ತೋರಣದ ಮಧ್ಯದಲ್ಲಿ ಶಿವನಿದ್ದು, ಶಿವನ ಎಡಭಾಗಕ್ಕೆ ವಿಷ್ಣು ಮತ್ತು ಕಾರ್ತಿಕೇಯ ಹಾಗು ಶಿವನ ಬಲಭಾಗಕ್ಕೆ ಬ್ರಹ್ಮ ಮತ್ತು ಗಣಪತಿಯ ಶಿಲ್ಪಗಳನ್ನು ಕೆತ್ತಲಾಗಿದೆ[೭೯]. ಅಂತರಾಳ ದ್ವಾರದ ಎಡಬಲದಲ್ಲಿ ಎರಡು ಕೋಷ್ಠ ಗುಡಿಗಳಿದ್ದು, ಅವುಗಳಲ್ಲಿ ಸರಸ್ವತಿ ಮತ್ತು ಮಹಿಷಾಸುರ ಮರ್ಧಿನಿ ಶಿಲ್ಪಗಳಿವೆ. ನವರಂಗದ ಉತ್ತರ ಭಾಗದಲ್ಲಿನ ಗರ್ಭಗುಡಿಯ ದ್ವಾರದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಉಳಿದಂತೆ ಅದರ ದ್ವಾರವು ಸರಳವಾಗಿದೆ. ಈ ಗರ್ಭಗುಡಿಯ ಒಳಭಾಗದಲ್ಲಿ ಯಾವ ಮೂರ್ತಿಗಳಿಲ್ಲ. ನವರಂಗದಲ್ಲಿ ನಾಲ್ಕು ಸುಂದರ ಕಂಭಗಳಿವೆ. ಅವು ಚೌಕ, ವೃತ್ತ ಹಾಗು ನಕ್ಷತ್ರಾಕಾರದಲ್ಲಿವೆ. ಕಂಭಗಳ ಕೆಳಭಾಗದ ಚೌಕಾಕಾರದ ಪಟ್ಟಿಕೆಗಳಲ್ಲಿ ತೋರಣಗಳ ಮಧ್ಯೆ, ಭೈರವ, ಮೋಹಿನಿ, ಸರಸ್ವತಿ, ಕಾಳಿ, ಬ್ರಹ್ಮ, ರತಿ ಮನ್ಮಥ, ವಿಷ್ಣು, ಮಹಿಷಮರ್ಧಿನಿ, ನರಸಿಂಹ ವಿಗ್ರಹಗಳನ್ನು ಕೆತ್ತಲಾಗಿದೆ. ಬೋಧಿಗೆಗಳಲ್ಲಿ ಅಲ್ಲಲ್ಲಿ ಪುಷ್ಪದ ಅಲಂಕರಣೆ ಮಾಡಲಾಗಿದೆ. ನವರಂಗದ ಮಧ್ಯದ ಮುಚ್ಚಿಗೆ (ವಿತಾನ)ಯು ಚೌಕಾಕಾರವಾಗಿದ್ದು, ಮಧ್ಯದಲ್ಲಿ ಗಜ ಸಂಹಾರ ಮೂರ್ತಿ ಶಿವನಿದ್ದು, ಆತನ ಎಡಬಲದಲ್ಲಿ ಬ್ರಹ್ಮ, ವಿಷ್ಣುಗಳಿದ್ದಾರೆ. ಈ ತ್ರಿಮೂರ್ತಿಗಳ ಸುತ್ತಲೂ ಅಷ್ಠದಿಕ್ಪಾಲಕರಿದ್ದಾರೆ. ಇದರ ಕೆಳಗಿನ ಪಟ್ಟಿಕೆಗಳಲ್ಲಿ ದ್ವಾದಶಾದಿತ್ಯರು, ಏಕಾದಶರುದ್ರರು, ಯೋಗ ನರಸಿಂಹ, ದಕ್ಷಿಣಾಮೂರ್ತಿ, ಮೋಹಿನಿ, ನಂದಿಕೇಶ, ರಾಮಲಕ್ಷ್ಮಣ, ಹನುಮಂತನ ಶಿಲ್ಪಗಳನ್ನು ಚಿಕ್ಕದಾಗಿ ಬಿಡಿಸಲಾಗಿದೆ[೮೦]. ತೆರೆದ ಮುಖಮಂಟಪದ ಒಳಭಾಗದಲ್ಲಿ ಕಕ್ಷಾಸನಗಳಿವೆ. ಈ ಕಕ್ಷಾಸನದ ಮೇಲೆ ಸುಂದರ ಕಂಬಗಳಿವೆ. ಈ ಮುಖಮಂಟಪದ ಮುಂಭಾಗದಲ್ಲಿನ ಮಂಟಪದಲ್ಲಿ ಸುಂದರ ನಂದಿ ಇದೆ.

[illegible]

[illegible]

ಈ ದೇವಾಲಯದ ಮೇಲಿನ ಲಕ್ಷಣಗಳ ಆಧಾರದ ಮೇಲೆ ಇದು ಕಲ್ಯಾಣಿ ಚಾಲುಕ್ಯರ ದೇವಾಲಯಗಳ ಮಾದರಿಯಲ್ಲಿಯೇ ಉಚ್ಚಂಗಿ ಪಾಂಡ್ಯರ ಕಾಲದಲ್ಲಿ ನಿರ್ಮಿತವಾಗಿದೆ ಎಂದು ಹೇಳಬಹುದು[೮೧].

೧. ಊರು : ನಂದಿತಾವರೆ

೨. ತಾಲೂಕು : ಹರಿಹರ

೩. ಹೆಸರು : ಅಮೃತಲಿಂಗ ಮಾಣೇಕೇಶ್ವರ

೪. ಸ್ಥಳ : ಗ್ರಾಮದ ಬಸ್ ನಿಲ್ದಾಣದಿಂದ ಪೂರ್ವಕ್ಕೆ

೫. ಅಭಿಮುಖ : ಪೂರ್ವಕ್ಕೆ ಮೂಲ ಗರ್ಭಗುಡಿ ಮುಖ ಮಾಡಿದ್ದು, ದಕ್ಷಿಣ - ಉತ್ತರದಲ್ಲಿ ಪ್ರವೇಶ ದ್ವಾರಗಳಿವೆ.

೬. ಕಾಲ : ಕ್ರಿ.ಶ. ೧೨೨೦

೭. ಶಿಖರ ಶೈಲಿ : ಮೂಲ ಶಿಖರವಿಲ್ಲ

೮. ಬಳಸಿದ ಶಿಲೆ : ಹಸಿರು ಬಳಪದ ಶಿಲೆ

ಈ ದೇವಾಲಯವು ಕ್ರಿ.ಶ. ೧೨೨೦ ರಲ್ಲಿ ಹೊಯ್ಸಳ ಅಧಿಕಾರಿ ಮಾಣಿಕಣ್ಣನಿಂದ ನಿರ್ಮಿಸಲ್ಪಟ್ಟಿದೆ[೮೨]. ಚೌಕಾಕಾರದ ಗರ್ಭಗುಡಿ, ಅಂತರಾಳ, ನವರಂಗ, ಉತ್ತರಭಾಗದಲ್ಲೊಂದು ಗರ್ಭಗುಡಿ ಹಾಗು ಈಚೆಗೆ ನಿರ್ಮಿಸಿದ ಮುಖಮಂಟಪವಿದೆ. ಮೂಲಗರ್ಭಗುಡಿ ಎದುರಿನಲ್ಲಿ ಪ್ರತ್ಯೇಕ ನಂದಿಮಂಟಪವಿದ್ದು, ಆ ಮಂಟಪಕ್ಕೆ ತೆರೆದ ಅಂತರಾಳವೊಂದನ್ನು ನಂತರ ಕಾಲದಲ್ಲಿ ನಿರ್ಮಿಸಿದ್ದಾರೆ[೮೩]. ಉತ್ತರ ಮತ್ತು ದಕ್ಷಿಣದಲ್ಲಿ ಪ್ರವೇಶದ್ವಾರಗಳಿವೆ[೮೪].

ದೇವಾಲಯದ ಅಧಿಷ್ಠಾನದ ಭಾಗದಲ್ಲಿ ಐದು ಚಿತ್ರ ಪಟ್ಟಿಕೆಗಳಿವೆ. ಅಧಿಷ್ಠಾನದಲ್ಲಿ ಮೊದಲ ಕೆಳಪಟ್ಟಿಯಲ್ಲಿ ಸುರಳಿಯೊಳಗೆ ಮನುಷ್ಯರನ್ನು ಕೆತ್ತಲಾಗಿದೆ. ಇಲ್ಲಿ ಅದರ ಮೇಲಿನ ಪಟ್ಟಿಯಲ್ಲಿ ಹಂಸಗಳ ಸಾಲಿದೆ(ಹಂಸಥರ) ಅದರ ಮೇಲಿನ ಪಟ್ಟಕೆಯಲ್ಲಿ ಲತಾ ಪಟ್ಟಿಕೆ ಇದೆ. ಅದರ ಮೇಲಿನ ಪಟ್ಟಿಕೆಯಲ್ಲಿ ಗಜಥರ (ಆನೆಗಳ ಸಾಲುಪಟ್ಟಿ) ಸಳ ಹುಲಿಯನ್ನು ಕೊಲ್ಲುತ್ತಿರುವಂತೆ, ಹಾಗೆ ವಿಭಿನ್ನ ಭಂಗಿಯಲ್ಲಿರುವ ಮನುಷ್ಯರನ್ನು ಈ ಪಟ್ಟಿಕೆಯಲ್ಲಿ ಬಿಡಿಸಲಾಗಿದೆ. ಅದರ ಮೇಲೆ ಮತ್ತೊಂದು ಲತಾ ಪಟ್ಟಿಕೆಯ ಸಾಲಿದೆ[೮೫]. ಎಡಭಾಗದ (ಉತ್ತರ) ಭಿತ್ತಿಯ ಅಧಿಷ್ಠಾನ ಭಾಗದಲ್ಲಿ ಮಕರದಿಂದ ಅಲಂಕೃತವಾದ ಪ್ರನಾಳವಿದೆ.

ಭಿತ್ತಿಯ ಸುತ್ತಲೂ ಅರೆಕಂಭಗಳಿವೆ. ಅದರಲ್ಲಿ ಕೋಷ್ಠಗುಡಿಗಳಿದ್ದು, ಆ ಕೋಷ್ಠ ಗುಡಿಗಳ ಮೇಲೆ ಶಿಖರದ ನಮೂನೆಗಳಿವೆ. ದೇವಾನುದೇವತೆಗಳನ್ನು ಭಿತ್ತಿಯ ಅರೆ ಗಂಭಗಳ ಬಳಿ ಚಿತ್ರಿಸಲಾಗಿದೆ. ಭಿತ್ತಿಯಲ್ಲಿ ಹಲವು ಶಿಲ್ಪಗಳಿರುವುದರಿಂದ ಈ ಭಿತ್ತಿಯನ್ನು ಈ ಕೆಳಗಿನಂತೆ ವಿಭಾಗಿಸಿಕೊಂಡು ಅಧ್ಯಯನ ಮಾಡಲಾಗಿದೆ.

ಬಲಭಾಗದ ಭಿತ್ತಿ (ದಕ್ಷಿಣ ಭಾಗ):-

ಈ ಭಿತ್ತಿಯ ಮಧ್ಯದಲ್ಲಿ ಶಿಲ್ಪಗಳಿದ್ದು, ಅನುಕ್ರಮವಾಗಿ ಅವುಗಳು ಈ ರೀತಿ ಇವೆ.

೧. ವಜ್ರ, ಗದೆ ಮತ್ತು ಫಲಗಳನ್ನೂ ಹಿಡಿದು ನಿಂತ ಇಂದ್ರ, ಈತನ ಕಾಲಿನ ಬಳಿಯ ಮೂಲೆಯಲ್ಲಿ ಆನೆಯಿದೆ.

೨. ಚರ್ತುಭುಜಧಾರಿ ನೃತ್ಯಮಾಡುತ್ತಿರುವ ಶಿವ, (ಭೈರವನೇ?) ಈತನ ಕೈಗಳಲ್ಲಿ ತ್ರಿಶೂಲ, ಡಮರುಗಗಳಿವೆ.

೩. ತ್ರಿಶೂಲ, ಡಮರುಗ ಹಿಡಿದುನಿಂತಿರುವ ಭೈರವ

೪. ಕಮಲ, ಶ್ರುಕ್ ಅಥವಾ ಶ್ರುವ್ ಹಿಡಿದು ನಿಂತಿರುವ ಬ್ರಹ್ಮ, ಆತನ ಕಾಲ ಬಳಿ ಹಂಸಗಳಿವೆ.

೫. ನೃತ್ಯ ಗಣಪತಿಯ ಕಾಲಿನ ಕೆಳಭಾಗ ತ್ರುಟಿತವಾಗಿದೆ.

೬. ಅಲಂಕೃತ ರತಿ,

೭. ಅಲಂಕೃತ ಮನ್ಮಥ.

೮. ೯. ಮಧ್ಯದಲ್ಲಿದೇವಕೋಷ್ಠವಿದ್ದು, ಇದರಲ್ಲಿ ಮೂರ್ತಿ ಇಲ್ಲ, ಈದೇವ ಕೋಷ್ಠದ ದ್ವಾರದಲ್ಲಿ ಚಾಮರ ಹಿಡಿದು ನಿಂತಿರುವ ಸ್ತ್ರೀಯರಿದ್ದಾರೆ.

೧೦. ಕೋದಂಡರಾಮ.

೧೧. ಲಕ್ಷ್ಮಣ.

೧೨. ಹನುಮ (ಕಾಲಿನ ಭಾಗ ತ್ರಟಿತವಾಗಿದೆ)

೧೩. ಖಡ್ಗ ತ್ರಿಶೂಲ, ಪದ್ಮ, ಫಲಗಳನ್ನು ಹಿಡಿದು ನಿಂತಿರುವ ದೇವತಾಮೂರ್ತಿ ಇದೆ (ಪ್ರಾಯಶ: ಹರಿಹರ)

ಪಶ್ಚಿಮ ಭಾಗದ ಗೋಡೆ (ಗರ್ಭಗುಡಿ ಹಿಂಭಾಗ) : ಇಲ್ಲಿಯ ಭಿತ್ತಿಯಲ್ಲೂ ಸಹಾ ಅರೆಗಂಭಗಳ ಮಧ್ಯೆ ಕೆಲವು ಶಿಲ್ಪಗಳು ಇವೆ. ಅವುಗಳನ್ನು ಕ್ರಮವಾಗಿ ಈ ರೀತಿ ಗುರುತಿಸಬಹುದು.

೧. ಅರ್ಧನಾರೀಶ್ವರ, ಕೈಗಳು, ತ್ರಟಿತವಾಗಿದೆ. ಕಾಲಿನ ಬಳಿನಂದಿ ಇದೆ.

೨. ಸ್ನಾನ ಮಾಡುತ್ತಿರುವ ಮೋಹಿನಿ, ಆಕೆ ಕನ್ನಡಿಯನ್ನು ಕೈಯಲ್ಲಿ ಹಿಡಿದಿದ್ದಾಳೆ.

೩. ತ್ರಿಭಂಗದಲ್ಲಿ ನಿಂತ ಮೋಹಿನಿ.

೪. ದಕ್ಷಿಣಾ ಮೂರ್ತಿ

೫.೬. ಇಲ್ಲಿಯೂ ಒಂದು ದೇವಕೋಷ್ಠ ಇದ್ದು ಅದರಲ್ಲಿ ಮೂರ್ತಿ ಇಲ್ಲ. ದ್ವಾರದಲ್ಲಿ ಚಾಮರಹಿಡಿದ ಇಬ್ಬರು ಸ್ತ್ರೀಯರಿದ್ದಾರೆ.

೭. ಮಂಗದೊಡನೆ ಇರುವ ಮೋಹಿನಿ.

೮. ಮಾವಿನ ಹಣ್ಣಿನ ಗೊಂಚಲನ್ನು ಹಿಡಿದು ನಿಂತಿರುವ ಮೋಹಿನಿ.

೯. ಗಿಳಿಯೊಂದಿಗಿರುವ ಮೋಹಿನಿ.

೧೦. ಹರಿಹರ ಮೂರ್ತಿಯು ಹಿಡಿದ ಆಯುಧಗಳಲ್ಲಿ ತ್ರಿಶೂಲ, ಚಕ್ರ, ಮಾತ್ರ ಕಾಣಬರುತ್ತಿದ್ದು, ಉಳಿದ ಆಯುಧಗಳು ಕಾಣಬರುತ್ತಿಲ್ಲ.

<u>ಉತ್ತರ ಭಾಗದ ಭಿತ್ತಿ (ಎಡ ಭಾಗ)</u> :

ಈ ಭಿತ್ತಿಯಲ್ಲಿನ ಮೂರ್ತಿಗಳು ಈ ರೀತಿ ಇವೆ.

೧. ಮೊನಚು ಕೋಲು, ಪಾಶ, ಫಲ, ಹಿಡಿದು, ನಿಂತಿರುವ ದೇವತಾಪುರಷನಿದ್ದು ಆತನ ಕಾಲಿನ ಬಳಿ ತ್ರುಟಿತ ನಾಲ್ಕು ಕಾಲಿನ ಪ್ರಾಣಿಯೊಂದಿದೆ.

೨. ತ್ರುಟಿತ ಶಿವ ನಿಂತಿದ್ದಾನೆ ಕಾಲಿನ ಬಳಿ ನಂದಿ ಇದೆ.

೩. ಅರ್ಜುನನ ಬಲಗೈನಲ್ಲಿ ಬಾಣವನ್ನು ಎಡಗೈನಲ್ಲಿ ಕಪಿಧ್ವಜವನ್ನು ಹಿಡಿದಿದ್ದಾನೆ.

೪. ನಾಟ್ಯಭೀಮಾ ದ್ವಿಭುಜಧಾರಿಯಾಗಿದ್ದು, ಕೈನಲ್ಲಿ ಹಿಡಿದ ಗದೆ ಮತ್ತು ಫಲ ತ್ರುಟಿತವಾಗಿವೆ.[೮೭]

೫.೬. ಇಲ್ಲೊಂದು ದೇವ ಕೋಷ್ಠವಿದ್ದು, ಅದರಲ್ಲಿ ಭೈರವಿಯ ಮೂರ್ತಿಯಿದ್ದು, ಆಕೆ ಅಲಂಕೃತಳಾಗಿದ್ದಾಳೆ. ಈ ದೇವ ಕೋಷ್ಠದ ದ್ವಾರದಲ್ಲಿ ಚಾಮರಹಿಡಿದ ಸ್ತ್ರೀಯರಿದ್ದಾರೆ.

೭. ಧನುರ್ಧಾರಿ ಮಹಿಳೆ[೮೮].

೮. ದಕ್ಷಿಣಾಮೂರ್ತಿ

೯. ದ್ವಿಭುಜಧಾರಿ ಮನುಷ್ಯನೊಬ್ಬನಿದ್ದು (ಪ್ರಾಯಶ:ರಾಜ?) ತೆಳುವಾದ ಅಂಗಿಯನ್ನು ಧರಿಸಿದ್ದು ಯಜ್ಞೋಪವೀತ, ಕುಂಡಲಗಳಿವೆ. ಕಾಲಿನಲ್ಲಿ ಎರಡು ಉದ್ದನೆಯ ಮರದ ಪಾದರಕ್ಷೆಗಳಿವೆ ಇದು ದೇವಾಲಯಕ್ಕೆ ದಾನ ನೀಡಿದ ಮಾಣಿ ಕಣ್ಣನ ಶಿಲ್ಪವಾಗಿದೆ.[೮೯]

೧೦. ದ್ವಿಭುಜಧಾರಿ ಪಾರ್ವತಿ.

೧೧. ನಿಂತಿರುವ ಶಿವ (ಮೊನಚುಕೋಲಿನ ಆಯುಧ ತ್ರುಟಿತವಾಗಿದೆ)

೧೨. ಖಡ್ಗ ,ತ್ರಿಶೂಲ, ಡಮರುಗ, ಪಾತ್ರೆ ಮತ್ತು ಮನುಷ್ಯನ ತಲೆಹಿಡಿದಿರುವ ದುರ್ಗೆ ನೃತ್ಯ ಮಾಡುತ್ತಿದ್ದಾಳೆ.

ಈ ಮೇಲೆ ವಿಶ್ಲೇಷಿಸಿದ ಎಲ್ಲಾ ಶಿಲ್ಪಗಳು ನಿಂತಭಂಗಿಯಲ್ಲಿದ್ದು ಕೊರಳಹಾರ ಕೈಕಡಗ, ಕಾಲ್ಕಡಗಗಳಿವೆ. ಸ್ತ್ರೀಶಿಲ್ಪಗಳು ಬಳೆಗಳಿಂದ ಅಲಂಕೃತವಾಗಿವೆ. ಕೆಲವು ಶಿಲ್ಪಗಳಿಗೆ ಯಜ್ಞೋಪವೀತಗಳಿವೆ. ಶಿಲ್ಪಗಳ ಮುಂದೆ ಎರಡೂ ಕಡೆ ಕಾಣಬರುವ ಭಿತ್ತಿಯು ಈಚೆಗೆ ನಿರ್ಮಿಸಿದ್ದಾಗಿದೆ.

ಭಿತ್ತಿಯ ಮೇಲ್ಭಾಗದ ಪ್ರಸ್ತರದಲ್ಲಿ ಕೆಲವು ಪ್ರಾಣಿಗಳನ್ನು ಚಿತ್ರಿಸಲಾಗಿದೆ. ಪ್ರಸ್ತರದ ಮೇಲೆ ನೂತನವಾಗಿ ಗೋಡೆ ನಿರ್ಮಿಸಿದ್ದಾರೆ. ಈಗ ಗರ್ಭಗುಡಿ ಮೇಲೆ ಮೂಲ ಶಿಖರವಿಲ್ಲ .

ಗರ್ಭಗುಡಿಯಲ್ಲಿ ಲಿಂಗವಿದೆ. ಇದರ ಲಲಾಟ, ದ್ವಾರವು ಸಾಧಾರಣವಾಗಿದೆ. ಅಂತರಾಳದ ದ್ವಾರವು ಸಹಾ ಸಾದಾರಣವಾಗಿದ್ದು, ಎಡಬಲದಲ್ಲಿ ಶೈವದ್ವಾರ ಪಾಲಕರಿದ್ದಾರೆ. ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ದ್ವಾರದ ಎರಡೂ ಕಡೆಗಳಲ್ಲಿ ಪುಷ್ಪಾಕೃತಿಯ ಹತ್ತರ , ಮೂರು ಸಾಲಿನ ಜಾಲಂಧ್ರಗಳು ಪ್ರತಿ ಭಾಗದಲ್ಲಿವೆ. ಲಲಾಟದ ಮೇಲೆ ಉತ್ತರಾಂಗದ ಮಧ್ಯದಲ್ಲಿ ಎಂಟು ಕೈಗಳನ್ನು ಹೊಂದಿದ ನಾಟ್ಯವಾಡುತ್ತಿರುವ ನಟರಾಜ ಶಿಲ್ಪವಿದೆ.

ಆ ಶಿಲ್ಪದ ಕಾಲಿನ ಬಳಿ ಅಂಧಕಾಸುರನ ಶವವಿದೆ. ಬಲದಲ್ಲಿ ತ್ರಿಮುಖ ಬ್ರಹ್ಮ ಎಡದಲ್ಲಿ ವಿಷ್ಣು ನಿಂತಿರುವಂತಿದೆ. ನವರಂಗದಲ್ಲಿ ವೃತ್ತಾಕಾರದ ತಿರುಗಣಿ ಯಂತ್ರದಿಂದ ತಿರುಗಿಸಿ ಮಾಡಿದ ಸುಂದರ ಕಂಭಗಳಿವೆ. ಈ ಕಂಭಗಳ ಮೇಲೆ ಮಾಲಾಲಂಕಾರವಿದೆ. ಈ ಕಂಭಗಳ ಮೇಲಿನ ಬೋದಿಗೆಯು ಪುಷ್ಪದಳಗಳಿಂದ ಅಲಂಕೃತವಾಗಿದೆ. ನವರಂಗದ ಮುಚ್ಚಿಗೆಯಲ್ಲಿ ಒಂದು ಸಾಲಿಗೆ ಮೂರು ಜನರಂತೆ ಮಧ್ಯದಲ್ಲಿ ನಟರಾಜನನ್ನೂ ಸೇರಿಸಿ, ಅಷ್ಟ ದಿಕ್ಪಾಲಕರನ್ನು ಶಿಲ್ಪಿ ಕೆತ್ತಿದ್ದಾನೆ. ಮಧ್ಯಸಾಲಿನ ಮಧ್ಯದಲ್ಲಿ ನಟರಾಜನಿದ್ದು, ಆತನು ಹತ್ತು ಕೈಗಳನ್ನು ಹೊಂದಿದ್ದಾನೆ. ಆತನ ಕೈಗಳಲ್ಲಿ ಶೂಲ, ಡಮರುಗ, ಪರಶು, ಪಾಶುಪತ ಮೊದಲಾದ ಆಯುಧಗಳನ್ನು ಹಿಡಿದಿದ್ದಾನೆ[೯೦]. ಇಲ್ಲಿ ಶಿವನಿಗೆ ಹತ್ತು ಕೈಗಳಿರುವುದು ವಿಶೇಷವಾಗಿದೆ. ಈತನ ಬಲಭಾಗದಲ್ಲಿ ಚರ್ತುಮುಖ ಬ್ರಹ್ಮ ಎಡಭಾಗದಲ್ಲಿ ವಿಷ್ಣು ಇಲ್ಲಿಯೂ ಕೂಡಾ ಸ್ಥಾನಿಕರಾಗಿದ್ದಾರೆ[೯೧].

ದಿಕ್ಪಾಲಕ	ದಿಕ್ಕು	ವಾಹನ
ಇಂದ್ರ	ಪೂರ್ವ	ಆನೆ
ಅಗ್ನಿ	ಆಗ್ನೇಯ	ಮೇಕೆ
ಯಮ	ನೈಋತ್ಯ	ಕುಮುದವೆಂಬ ಆನೆ[೯೨]
ವರುಣ	ಪಶ್ಚಿಮ	ಮೊಸಳೆ
ವಾಯು	ವಾಯುವ್ಯ	ಪುಷ್ಪದಂತವೆಂಬ ಆನೆ[೯೩]
ಕುಬೇರ (ಸೋಮ)	ಉತ್ತರ	ಕುದುರೆ[೯೪]
ಈಶಾನ್ಯ	ಈಶಾನ್ಯ	ನಂದಿ

ಹೀಗೆ ಮುಚ್ಚಿಗೆಯಲ್ಲಿ ಅಷ್ಟದಿಕ್ಪಾಲಕರು ಅವರವರ ವಾಹನ ರೂಢರಾಗಿದ್ದಾರೆ. ಇಲ್ಲಿ ಇಂದ್ರನ ವಾಹನ ರೂಢ ಆನೆಯನ್ನು ತುಂಬಾ ನಾಜೂಕಾಗಿ ಕೆತ್ತಾಲಾಗಿದೆ. ಕುಬೇರನ ವಾಹನ ಕುದುರೆ, ಇದರ ದೇಹವನ್ನು ತುಂಬಾ ಉದ್ದವಾದ ರೀತಿಯಲ್ಲಿ ಕೆತ್ತಿಲಾಗಿದೆ. ನಿಋತಿ ಗಾಳಿಯಲ್ಲಿ ಹಾರುತ್ತಿರುವ ರೀತಿಯಲ್ಲಿ ಚಿತ್ರಿಸಲಾಗಿದೆ[೯೫] ಇಲ್ಲಿಯೇ ವಿವಿಧ ಸಂಗೀತ ಉಪಕರಣಗಳನ್ನು ಹಿಡಿದಿರುವ ವ್ಯಕ್ತಿಗಳನ್ನು ಕೆತ್ತಲಾಗಿದೆ. ನವರಂಗದ ದ್ವಾರ ಮತ್ತು ಲಲಾಟ ಬಿಂಬವು ಸರಳವಾಗಿವೆ. ಇದೇ ನವರಂಗದಲ್ಲಿ ಕುಳಿತ ಸರಸ್ವತಿ, ಸಪ್ತಮಾತೃಕೆ ,ಗಣಪತಿ, ಮಹಿಷ ಮರ್ಧಿನಿ, ಷಣ್ಮುಖ, ಉಮಾಮಹೇಶ್ವರಿ ಹಾಗು ನಾಗ-ನಾಗಣಿಯರ ಮೂರ್ತಿಗಳಿವೆ. ಪೂರ್ವದ ಪ್ರತ್ಯೇಕ ನಂದಿಮಂಟಪದಲ್ಲಿ ಹೊಯ್ಸಳರ ಕಾಲಕ್ಕೆ ಸೇರಿದ ಸುಂದರ ಹಾಗೂ ಬೃಹತ್ ನಂದಿ ಇದೆ. ಈ ಮಂಟಪಕ್ಕೆ ಜಾಲಂಧ್ರಗಳು ಇವೆ. ಉತ್ತರ ಮತ್ತು ದಕ್ಷಿಣದಲ್ಲಿ ಪ್ರವೇಶದ್ವಾರಗಳಿದ್ದು, ಅವುಗಳನ್ನು ಇತ್ತೀಚೆಗೆ ನಿರ್ಮಿಸಿದ್ದಾರೆ. ದೇವಾಲಯದಲ್ಲಿನ ಕಂಭಗಳ ಅಲಂಕರಣೆ , ಜಾಲಂಧ್ರ ವಿನ್ಯಾಸ, ಮುಚ್ಚಿಗೆಯಲ್ಲಿನ ಅಲಂಕಾರ, ಕಕ್ಷಾಸನ, ಅಧಿಷ್ಠಾನದಲ್ಲಿರುವ ವಿವಿಧ ಚಿತ್ರಪಟ್ಟಿಕೆಗಳು, ಭಿತ್ತಿಯಲ್ಲಿನ ವಿವಿಧ ಶಿಲ್ಪ ಹಾಗು ದೇವಕೋಷ್ಠ ಇವುಗಳು ಹೊಯ್ಸಳರ ಕಾಲದ ದೇವಾಲಯ ಎಂಬುದನ್ನು ಸ್ಪಷ್ಟಪಡಿಸುತ್ತವೆ.

೧. ಊರು : ಕಲ್ಕೆರೆ (ಬೇಚಾರಕ್ಕೆ ಗ್ರಾಮ)

೨. ತಾಲೂಕು : ಚನ್ನಗಿರಿ

೩. ಹೆಸರು : ಬಳ್ಳೇಶ್ವರ

೪. ಸ್ಥಳ : ಚನ್ನಗಿರಿಯ ದಕ್ಷಿಣ ಭಾಗದಿಂದ ೧೧ ಕಿ.ಮೀ. ದೂರದಲ್ಲಿನ ಬೇಚಾರಕ್‌ಗ್ರಾಮದ ಬಳಿ

೫. ಅಭಿಮುಖ : ಮುಖ್ಯಗರ್ಭಗುಡಿ ಪೂರ್ವಾಭಿಮುಖವಾಗಿದ್ದು, ಮುಖ ಮಂಟಪದ ಪ್ರವೇಶದ್ವಾರ ದಕ್ಷಿಣ ದಿಕ್ಕಿಗಿದೆ.

೬. ಕಾಲ : ಕ್ರಿ.ಶ. ೧೨೨೧ ರ

೭. ಶಿಖರ ಶೈಲಿ : ಮೇಲ್ಕಟ್ಟಡ ಉಳಿದಿಲ್ಲ

ಬಳಸಿದ ಶಿಲೆ : ಹಸಿರು ಬಳಪದ ಶಿಲೆ

ಈ ದೇವಾಲಯದ ಪಶ್ಚಿಮ ಹಾಗು ಉತ್ತರ ದಿಕ್ಕಿನಲ್ಲಿ ಗರ್ಭಗುಡಿಗಳಿದ್ದು, ಅಂತರಾಳ, ನವರಂಗ ಹಾಗು ಮುಖ ಮಂಟಪಗಳನ್ನು ಹೊಂದಿದೆ.

ಹೊರಭಾಗದ ಅಧಿಷ್ಠಾನವು ಉಪಾನ, ಪದ್ಮ, ಕರ್ಣಿಕಾ, ಕಪೋತ ಭಾಗಗಳಿಂದ ಕೂಡಿದೆ. ದೇವಾಲಯದ ಭಿತ್ತಿಯ ಉತ್ತರ, ದಕ್ಷಿಣ, ಪಶ್ಚಿಮ, ಭಾಗವನ್ನು ಸುತ್ತಲೂ ಬೆಳದ ಗಿಡಗಳು ಆಕ್ರಮಿಸಿಕೊಂಡಿವೆ. ಹಾಗು ಗರ್ಭಗುಡಿಯ ಸುತ್ತಲ ಭಿತ್ತಿ ಅಲ್ಲಲ್ಲಿ ನಾಶಗೊಂಡಿದೆ. ಉಳಿದಿರುವ ಭಿತ್ತಿಯ ಯಾವ ಭಾಗದಲ್ಲೂ ಶಿಲ್ಪಗಳಿರದೆ, ಭಿತ್ತಿಯು ಸರಳವಾಗಿದೆ. ಪ್ರಸ್ತರದಲ್ಲಿನ ಕಪೋತ ಭಾಗವು ಹೆಚ್ಚು ಕೆಳಗೆ ಬಾಗಿದ್ದು, ಸ್ವಲ್ಪ ಮುಂದೆ ಚಾಚಿದ ರೀತಿಯಲ್ಲಿದೆ. ದೇವಾಲಯದ ಮೇಲಿನ ಶಿಖರವೀಗ ಕಾಣಬರುತ್ತಿಲ್ಲ.

ಚೌಕಾಕಾರದ ಗರ್ಭಗುಡಿಯಲ್ಲಿ ಶಿವಲಿಂಗವಿದೆ. ಇದರ ಮುಚ್ಚಿಗೆಯಲ್ಲಿ ಪದ್ಮವಿದ್ದು, ದ್ವಾರ ಮತ್ತು ಲಲಾಟ ಬಿಂಬ ಖಾಲಿ ಇದೆ. ಆಯತಾಕಾರದ ಅಂತರಾಳದ ಮುಚ್ಚಿಗೆಯಲ್ಲಿ ಪದ್ಮವಿದೆ. ಇದರ ದ್ವಾರವು ರತ್ನ, ಸ್ತಂಭಶಾಖೆಗಳಿಂದ ಅಲಂಕೃತವಾಗಿದ್ದು, ಲಲಾಟದಲ್ಲಿ ಯಾವ ಶಿಲ್ಪಗಳನ್ನು ಕೆತ್ತಲಾಗಿರುವುದಿಲ್ಲ. ನವರಂಗದ ಉತ್ತರ ಭಾಗದ ಗರ್ಭಗುಡಿಯಲ್ಲಿದ್ದ ಮೂಲ ಮೂರ್ತಿ ಈಗ ಕಾಣಬರುತ್ತಿಲ್ಲ. ಗರ್ಭಗುಡಿಯ ದ್ವಾರವು ಸರಳವಾಗಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ.

ನವರಂಗದ ಮಧ್ಯದಲ್ಲಿ ನಾಲ್ಕು ಸುಂದರ ಹೊಯ್ಸಳ ಶೈಲಿಯ ಚೌಕ, ವೃತ್ತಕಾರದ ಕಂಭಗಳಿವೆ. ಈ ಕಂಭಗಳಲ್ಲಿನ ವೃತ್ತಕಾರದ ಭಾಗವು ಬಳೆಯ ಅಲಂಕಾರವನ್ನು ಪಡೆದುಕೊಂಡಿದೆ. ಬೋದಿಗೆಗಳನ್ನು ಪುಷ್ಪಗಳಿಂದ ಅಲಂಕರಿಸಲಾಗಿದೆ. ಬೋದಿಗೆಗಳ ನಾಲ್ಕು ಮೂಲೆಗಳಲ್ಲಿ ಕಮಲದ ಮೊಗ್ಗು ಇಳಿಬಿದ್ದ ರೀತಿಯ ಅಲಂಕರಣವಿದೆ. ಕಣ್ಮನ ಸೆಳೆಯುವ ಈ ಕಂಭಗಳ ಮಧ್ಯೆ ಹೊಯ್ಸಳ ಕಾಲದ ಬೃಹತ್ ನಂದಿಯೊಂದಿದ್ದು, ಅದು ಸುಂದರವಾಗಿ ಅಲಂಕೃತವಾಗಿದೆ .

ನವರಂಗದ ಮಧ್ಯದಲ್ಲಿನ ಮುಚ್ಚಿಗೆಯಲ್ಲಿ ಅರಳಿದ ತಾವರೆಯನ್ನು, ಅದರ ಮಧ್ಯದಲ್ಲಿ ತಾವೆರೆ ಮೊಗ್ಗು ಇಳಿಬಿದ್ದ ರೀತಿ (ಈಗ ಮೊಗ್ಗು ನಾಶವಾಗಿದೆ) ಹಾಗು ಆ ತಾವರೆಯ ಎಂಟು ದಿಕ್ಕಿನಲ್ಲೂ ಅಷ್ಟದಿಕ್ಪಾಲಕರನ್ನು ವಾಹನ ಸಮೇತರಾಗಿ ತುಂಬಾ ಆಕರ್ಷಣೀಯವಾಗಿ ಕೆತ್ತಿರುವುದು ಈ ದೇವಾಲಯದ ವಿಶೇಷವೆನ್ನಬಹುದು.

ನವರಂಗದ ಪೇದ್ಯಾಭಾಗವು ಖಾಲಿ ಇದ್ದು, ಅದರ ಮೇಲಿನ ದ್ವಾರವು ರತ್ನ,ಸುರಳಿಯೊಳಗೆ ಲತಾ ಹಾಗು ಸ್ತಂಭ , ಲತಾ ಶಾಖೆಗಳಿವೆ. ಮೊದಲಿನ ಎರಡು ಶಾಖೆಗಳು ಲಲಾಟ ಬಿಂಬದವರೆಗೂ ಮುಂದುವರಿದಿವೆ. ಲಲಾಟಬಿಂಬದ ಮಧ್ಯದಲ್ಲಿ ಗಜಲಕ್ಷ್ಮಿ ಶಿಲ್ಪವನ್ನು ಕೆತ್ತಲಾಗಿದೆ. ಲಲಾಟಬಿಂಬದ ಮೇಲಿನ ಪಟ್ಟಿಕೆಯಲ್ಲಿ ಮಾಲೆಯ ಅಲಂಕಾರವಿದೆ . ಮುಖ ಮಂಟಪದ ಒಳಭಾಗದ ನಾಲ್ಕುದಿಕ್ಕಿನಲ್ಲಿ ಕಕ್ಷಾಸನಗಳಿದ್ದು, ಆರು ಸಾಧಾರಣ ಕಂಭಗಳಿಂದ ಕೂಡಿದೆ . ಮುಖ ಮಂಟಪವನ್ನು ಪ್ರವೇಶಿಸಲು ದಕ್ಷಿಣ ಭಾಗದಲ್ಲಿ ಸೋಪಾನ ಹಾಗೂ ಹಸ್ತಿ ಹಸ್ತಾ ಫಲಕಗಳಿವೆ. ದೇವಾಲಯದಲ್ಲಿನ ಕಂಭಗಳ ಅಲಂಕರಣೆ , ಮುಚ್ಚಿಗೆಯಲ್ಲಿನ ಅಲಂಕಾರ, ಕಕ್ಷಾಸನ, ಅಧಿಷ್ಠಾನದಲ್ಲಿರುವ ವಿವಿಧ ಪಟ್ಟಿಕೆಗಳು, ಭಿತ್ತಿಯಲ್ಲಿನ ಅಲಂಕಾರ ಇವುಗಳು ಹೊಯ್ಸಳರ ಕಾಲದ ದೇವಾಲಯ ಎಂಬುದನ್ನು ಸ್ಪಷ್ಟಪಡಿಸುತ್ತವೆ.

೧. ಊರು : ಬಳ್ಳೇಶ್ವರ
೨. ತಾಲೂಕು : ಹೊನ್ನಾಳಿ
೩. ಹೆಸರು : ಬಳ್ಳೇಶ್ವರ
೪. ಸ್ಥಳ : ಗ್ರಾಮದ ಉತ್ತರಭಾಗದ ನದಿ ದಂಡೆ ಮೇಲೆ
೫. ಅಭಿಮುಖ : ಪೂರ್ವಾಭಿಮುಖ
೬. ಕಾಲ : ಕ್ರಿ.ಶ. ೧೨೨೧[೮೫]
೭. ಶಿಖರ ಶೈಲಿ : ಮೂಲ ಶಿಖರ ಉಳಿದಿಲ್ಲ
೮. ಬಳಸಿದ ಶಿಲೆ : ಹಸಿರು ಬಳಪದ ಶಿಲೆ

ಈ ದೇವಾಲಯವು ಪಶ್ಚಿಮ , ಉತ್ತರ, ದಕ್ಷಿಣ, ಭಾಗದಲ್ಲೊಂದರಂತೆ ಗರ್ಭಗುಡಿ, ಅದರ ಮುಂಭಾಗದಲ್ಲಿ ಅಂತರಾಳ, ಇವೆಲ್ಲಕ್ಕೂ ಹೊಂದಿಕೊಂಡಂತಿರುವ ನವರಂಗ ಹಾಗು ತೆರದ ಮುಖ ಮಂಟಪಗಳನ್ನು ಹೊಂದಿದೆ.

ಹೊರಭಾಗದ ಅಧಿಷ್ಠಾನವು ಪದ್ಮ, ಕರ್ಣಿಕಾ, ಕಪೋತ, ಕಂಟಕ, ವೇದಿಗಳಿಂದ ಕೂಡಿದೆ. ಭಿತ್ತಿಯು ಪ್ರಧಾನವಾಗಿ ಅರೆಗಂಭಗಳ ಅಲಂಕಾರದಿಂದ ಕೂಡಿದೆ. ಪಶ್ಚಿಮ ಗರ್ಭಗುಡಿಯ ಉತ್ತರಭಾಗದ ಮಧ್ಯದ ಭಿತ್ತಿಯಲ್ಲಿ ವೀರಭದ್ರನ ಶಿಲ್ಪವನ್ನು ಕೆತ್ತಲಾಗಿದೆ. ಗರ್ಭಗುಡಿಯ ಹಿಂಭಾಗ (ಪಶ್ಚಿಮ)ದ ಶಿಲ್ಪಪಟ್ಟಿ ಖಾಲಿ

[illegible]

[illegible]

[illegible]

[illegible]

[illegible]

ಇದ್ದು,ಗರ್ಭಗುಡಿಭಿತ್ತಿಯ ದಕ್ಷಿಣದ ದಿಕ್ಕಿನಲ್ಲಿ ಕೆತ್ತಿದ ಶಿಲ್ಪ ನಾಶವಾಗುತ್ತಿದೆ . ಮುಖ ಮಂಟಪದ ಕಕ್ಷಾಸನದ ಹೊರಭಾಗದ ಕೆಳ ಪಟ್ಟಿಕೆಯಲ್ಲಿ ಪುಷ್ಪದ ಅಲಂಕಾರವನ್ನು ಅದರ ಮೇಲಿನ ಪಟ್ಟಿಕೆಯಲ್ಲಿ ಶಿಖರದ ವಿವಿಧ ಮಾದರಿಗಳನ್ನು ಸುಂದರವಾಗಿ ಕೆತ್ತಲಾಗಿದೆ. ಇದರ ಮೇಲಿನ ಪಟ್ಟಕೆಯಲ್ಲಿ ಮಿಥುನ ಶಿಲ್ಪ, ನಾಯಿ , ಯಾಳಿಗಳು, ಬಿಲ್ಲು ಹಿಡಿದಿರುವ ಸ್ತ್ರೀ, ಮಂಗ, ಹನುಮಂತ, ಅಶೋಕ ವನದಲ್ಲಿ ಸೀತೆ, ವಾದ್ಯ ನುಡಿಸುತ್ತಿರುವವರು ಹಾಗು ನರ್ತಿಸುತ್ತಿರುವವರು, ನವಿಲು ಹಾಗು ಹಂಸಗಳನ್ನು ಸುತ್ತಲೂ ಕೆತ್ತಲಾಗಿದೆ. ಕಕ್ಷಾಸನದ ಕೊನೆ ಪಟ್ಟಿಕೆಯಲ್ಲಿ ಲತಾ ಸುರಳಿಯೊಳಗೆ ಹಂಸಗಳ ಸಾಲನ್ನು ಸುಂದರವಾಗಿ ಕೆತ್ತಿರುವುದು ಶಿಲ್ಪಿಯ ಕಲಾ ನೈಪುಣ್ಯತೆಯ ದ್ಯೋತಕವೆನ್ನಬಹುದು. ಮುಖಮಂಟಪದ ಮೇಲಿನ ಮೇಲ್ಛಾವಣಿ ಇಳಿಜಾರಾಗಿದೆ. ದೇವಾಲಯದ ಭಿತ್ತಿ ಮೇಲಿನ ಪ್ರಸ್ತರದಲ್ಲಿ ಕಪೋತ, ಕಂಟಕ, ವೇದಿಗಳಿದ್ದು, ಅದರ ಮೇಲೆ ಪುಷ್ಪ, ಲತಾಗಳನ್ನು ಹಾಗೂ ಕೂಟ ಪಂಜರಗಳನ್ನು ಕೀರ್ತಿಮುಖದಿಂದ ಅಲಂಕರಿಸಲಾಗಿದೆ. ಈ ಕೀರ್ತಿ ಮುಖಗಳ ಮಧ್ಯದಲ್ಲಿ ವೀರಭದ್ರ, ಗಣೇಶ, ಶಿವ, ಉಮಾಮಹೇಶ್ವರ ಶಿಲ್ಪಗಳನ್ನು ಕೆತ್ತಲಾಗಿದೆ. ದೇವಾಲಯದ ಮೂರು ಗರ್ಭಗುಡಿಗಳ ಮೇಲೆ ಈಚೆಗೆ ನಿರ್ಮಿಸಿದ ಶಿಖರವಿದೆ.

ಪಶ್ಚಿಮದ ಗರ್ಭಗುಡಿಯಲ್ಲಿ ಶಿವಲಿಂಗವಿದ್ದು ಮುಚ್ಚಿಗೆಯಲ್ಲಿ ಪದ್ಮವಿದೆ. ಶೈವ ದ್ವಾರಪಾಲಕರಿರುವ ದ್ವಾರವು ಲತಾ ,ಪುಷ್ಪ,ಸ್ತಂಭ ಶಾಖೆಗಳಿಂದ ಅಲಂಕೃತಗೊಂಡಿದ್ದು, ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ .ಇದರ ಮುಂದಿನ ಅಂತರಾಳದಲ್ಲಿ ನಂದಿ ಇದ್ದು , ದ್ವಾರದ ಪೇದ್ಯ ಭಾಗದಲ್ಲಿ ಕುಂಭದ ಅಲಂಕರಣವಿದೆ. ದ್ವಾರವು ರತ್ನ, ಪುಷ್ಪ, ಸ್ತಂಭ, ಲತಾಶಾಖೆಗಳಿಂದ ಅಲಂಕೃತಗೊಂಡಿದ್ದು, ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಲಲಾಟದ ಮೇಲಿನ ಮಕರ ತೋರಣಯುಕ್ತ ಉತ್ತರಾಂಗ ಭಾಗದ ಮಧ್ಯದಲ್ಲಿ ಶಿವ ಆಸೀನಾಗಿದ್ದು , ಈತನ ಕಾಲಿನ ಬಳಿ ಚಾಮರಹಿಡಿದ ಸೇವಕಿಯರಿದ್ದಾರೆ. ಶಿವನ ಬಲ ಭಾಗಕ್ಕೆ ಬ್ರಹ್ಮ ಮತ್ತು ಗಣೇಶ, ಎಡಭಾಗಕ್ಕೆ ವಿಷ್ಣು ಹಾಗು ಷಣ್ಮುಖರಿದ್ದಾರೆ. ದಕ್ಷಿಣ ದಿಕ್ಕಿನ ಗರ್ಭಗುಡಿಯಲ್ಲಿ ಪಾರ್ವತಿ ಮೂರ್ತಿ ಇದೆ. ಇದರ ಮುಚ್ಚಿಗೆಯಲ್ಲಿ ಪದ್ಮವಿದ್ದು, ದ್ವಾರವು ವಿವಿಧ ಶಾಖೆಗಳಿಂದ ಅಲಂಕಾರವಾಗಿದೆ. ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದ್ದು, ಇದರ ಮುಂದಿನ ಅಂತರಾಳದ ಪೇದ್ಯಾಭಾಗದಲ್ಲಿ ಕುಂಭದ ಅಲಂಕಾರವಿದೆ. ಇದರ ದ್ವಾರವು ವಿವಿಧ ಶಾಖೆಗಳಿಂದ ಅಲಂಕೃತವಾಗಿದ್ದು, ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಲಲಾಟದ ಮೇಲಿನ ಉತ್ತರಾಂಗ ಭಾಗದ ಮಧ್ಯದಲ್ಲಿ ಶಿವ ಧ್ಯಾನ ಮಗ್ನನಾಗಿದ್ದು, ಆತನ ಎಡದಲ್ಲಿ ಬ್ರಹ್ಮ, ಗಣೇಶ, ಬಲಭಾಗಕ್ಕೆ ವಿಷ್ಣು, ಷಣ್ಮುಖರಿದ್ದಾರೆ. ಉತ್ತರದ ಗರ್ಭಗುಡಿಯಲ್ಲಿ ಶಿವಲಿಂಗವಿದ್ದು, ಶಿವಲಿಂಗಕ್ಕೆದುರಾಗಿ ನಂದಿಯೊಂದಿದೆ. ಇಲ್ಲಿನ ದ್ವಾರವೂ ಅಲಂಕೃತವಾಗಿದೆ. ಇದರ ಮುಂದಿನ ಅಂತರಾಳದಲ್ಲಿ ಯಾವ ಮೂರ್ತಿಗಳಿಲ್ಲವಾದರೂ, ಇದರ ದ್ವಾರವು ದಕ್ಷಿಣ ಮತ್ತು ಪಶ್ಚಿಮ ದ್ವಾರಗಳಂತೆ ಸುಂದರವಾಗಿ ಅಲಂಕೃತವಾಗಿದೆ. ಉತ್ತರಾಂಗದ ಮಧ್ಯಭಾಗದಲ್ಲಿ ಶಿವ ಸ್ಥಾನಿಕ ನಾಗಿದ್ದು, ಶಿವನ ಎಡ-ಬಲದಲ್ಲಿ ಬ್ರಹ್ಮ, ವಿಷ್ಣು ಹಾಗು ಇತರೆ ಮೂರ್ತಿಗಳಿವೆ. ಇಲ್ಲಿನ ಎಲ್ಲಾ ಅಂತರಾಳಗಳ ಉತ್ತರಾಂಗ ಭಾಗದಲ್ಲಿ ತ್ರಿಮೂರ್ತಿಗಳನ್ನು ಕೆತ್ತಿರುವುದು ಈ ದೇವಾಲಯದ ವಿಶೇಷವೆನ್ನಬಹುದು.

ನವರಂಗದ ಪಶ್ಚಿಮ, ಉತ್ತರ, ದಕ್ಷಿಣ ದಿಕ್ಕಿನ ಅಂತರಾಳಗಳ ಮುಂಭಾಗದಲ್ಲಿ ತಲಾ ಎರಡೆರಡು ಕೋಷ್ಠ ಗುಡಿಗಳಿದ್ದು, ಅದರಲ್ಲಿ ಗಣೇಶ, ವಿಷ್ಣು, ನಾಗ, ಪಾರ್ವತಿ, ಕೇಶವ ಮೂರ್ತಿಗಳಿವೆ. (ಈ ಕೋಷ್ಠ ಗುಡಿಗಳಲ್ಲಿದ್ದ ಮಹಿಷ ಮರ್ಧಿನಿ ಶಿಲ್ಪವೊಂದು ಪ್ರಸ್ತುತ ಶಿವಮೊಗ್ಗ ವಸ್ತು ಸಂಗ್ರಹಾಲಯದಲ್ಲಿದೆ). ನವರಂಗದ ಮಧ್ಯದಲ್ಲಿ ನಾಲ್ಕು ಸುಂದರ ಹೊಯ್ಸಳ ಶೈಲಿಯ ಕಂಭಗಳಿದ್ದು, ಅವುಗಳನ್ನು ತಿರುಗುಣಿ ಯಂತ್ರದ ಸಹಾಯದಿಂದ ಚೌಕ ಹಾಗೂ ವೃತ್ತಕಾರವಾಗಿ ಮಾಡಲಾಗಿದೆ. ಈ ಕಂಭಗಳ ವೃತ್ತಕಾರ ಭಾಗದಲ್ಲಿ ಬಳೆಗಳ ಹಾಗೂ ಘಂಟೆಗಳ ಅಲಂಕಾರವಿದ್ದು, ಅವುಗಳ ಮೇಲೆ ಆಭರಣಗಳ ಮತ್ತು ಮಾಲೆಯ ಅಲಂಕಾರವಿದೆ. ಇಲ್ಲಿನ ಬೋದಿಗೆಗಳು ಹೂಬಳ್ಳಿಗಳ ಹಾಗು ಆಭರಣಗಳಿಂದ ಅಲಂಕೃತವಾಗಿವೆ. ಮಧ್ಯದ ನಾಲ್ಕು ಕಂಭಗಳ ಮೇಲಿನ ಮುಚ್ಚಿಗೆಯಲ್ಲಿ ವಾಹನ ಸಮೇತ ದಿಕ್ಪಾಲಕರಿದ್ದು ,ಮಧ್ಯದಲ್ಲಿ ಅರಳಿದ ತಾವರೆ ಇದೆ. ನವರಂಗ ಮತ್ತು ಮುಖ ಮಂಟಪವನ್ನು ಬೇರ್ಪಡಿಸುವ ಮೂಲ ಭಿತ್ತಿ ಈಗ ಇರದೆ ಇರುವುದರಿಂದ ಕಬ್ಬಿಣದ ಸರಳು ಮತ್ತು ಮರವನ್ನು ಉಪಯೋಗಿಸಿ ಗೋಡೆ ರೀತಿಯಲ್ಲಿ ಕಟ್ಟಿದ್ದಾರೆ. ಪೂರ್ವಾಭಿಮುಖವಾಗಿರುವ ಮುಖ ಮಂಟಪದ ಒಳಭಾಗಕ್ಕೆ ಕಕ್ಷಾಸನಗಳಿವೆ. ಹಾಗು ಮಾಲೆಯ ಅಲಂಕಾರದಿಂದ ಕೂಡಿದ ಎರಡು ಸುಂದರ ಕಂಭಗಳಿವೆ.

ಹೊಯ್ಸಳರ ಬಲ್ಲಾಳನ ಕಾಲಾವಧಿಯಲ್ಲಿ[೯೮] ನಿರ್ಮಿತವಾಗಿರುವ ಈ ದೇವಾಲಯ ಅವರ ಕಾಲದ ಸೌಂದರ್ಯ ಪ್ರಜ್ಞೆಗೆ ಸಾಕ್ಷಿಯಾಗಿದೆ.

೧. ಊರು : ಹಿರೇಕೊಗಲೂರು

೨. ತಾಲೂಕು : ಚನ್ನಗಿರಿ

೩. ಹೆಸರು : ಈಶ್ವರ

೪. ಸ್ಥಳ : ಬಸ್ ನಿಲ್ದಾಣದ ಉತ್ತರ ಭಾಗಕ್ಕೆ

೫. ಅಭಿಮುಖ : ಪೂರ್ವಾಭಿಮುಖ

೬. ಕಾಲ : ಕ್ರಿ.ಶ.೧೨೬೮[೯೯]

೭. ಶಿಖರ ಶೈಲಿ : ಮೂಲಶಿಖರ ಉಳಿದಿಲ್ಲಾ

೮. ಬಳಸಿದ ಶಿಲೆ : ಬಳಪದ ಶಿಲೆ

ಈ ದೇವಾಲಯ ಪಶ್ಚಿಮ ಹಾಗು ನವರಂಗದ ಉತ್ತರ ಮತ್ತು ದಕ್ಷಿಣ ಭಾಗದಲ್ಲಿ ಗರ್ಭಗುಡಿಗಳಿವೆ. ಅಂತರಾಳ, ನವರಂಗವನ್ನು ಹೊಂದಿದ ದೇವಾಲಯದ ಪ್ರವೇಶದ್ವಾರವು ಉತ್ತರ ದಿಕ್ಕಿಗಿದೆ.

ಹೊರಭಾಗದ ಅಧಿಷ್ಠಾನವು ಉಪಾನ, ಪದ್ಮ, ಕುಮುದ, ಕಪೋತಗಳಿಂದ ಕೂಡಿದೆ. ಪೂರ್ವ ಗರ್ಭಗುಡಿಯ ಉತ್ತರ ಭಾಗದಲ್ಲಿ (ಎಡಕ್ಕೆ) ಹಾಗು ದಕ್ಷಿಣ ಭಾಗದ ಗರ್ಭಗುಡಿಯ ಪೂರ್ವಭಾಗಕ್ಕೆ (ಎಡಭಾಗಕ್ಕೆ) ಮತ್ತು ಪೂರ್ವ ಗರ್ಭಗುಡಿಯ ಬಲಭಾಗಕ್ಕೆ ಜಲ ಪ್ರನಾಳಗಳಿವೆ. ಭಿತ್ತಿಯ ಮಧ್ಯಭಾಗದಲ್ಲಿ ಪಟ್ಟಿಯೊಂದಿದ್ದು, ಭಿತ್ತಿಯು ಬಹುತೇಕ ಸರಳವಾಗಿದೆ. ಭಿತ್ತಿಯ ಮೇಲ್ಭಾಗದಲ್ಲಿ ಕಪೋತವಿದೆ. ಮುಖ್ಯ ಗರ್ಭಗುಡಿಯ ಮೇಲೆ ಮೂಲ ಶಿಖರವಿರದೆ, ತೆರೆದ ಮುಖ ಮಂಟಪವಿದ್ದು, ನಂತರ ಕಾಲದಲ್ಲಿ ನಿರ್ಮಿಸಿದ ಮುಸ್ಲಿಂ ಶೈಲಿಯನ್ನು ಪ್ರತಿಬಿಂಬಿಸುವ ಗುಮ್ಮಟಾಕಾರದ ಶಿಖರವಿದೆ.

ಪಶ್ಚಿಮದ ಗರ್ಭಗುಡಿ ಚೌಕಾಕಾರವಾಗಿದ್ದು, ಅದರಲ್ಲಿ ಶಿವಲಿಂಗವಿದೆ. ಮುಚ್ಚಿಗೆ ಸಾಧಾರಣವಾಗಿದ್ದು, ದ್ವಾರವು ರತ್ನ, ಲತಾ ,ಕಂಭ,ಶಾಖೆಯಿಂದ ಅಲಂಕೃತಗೊಂಡಿದೆ. ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಅಂತರಾಳವು ಆಯತಾಕಾರವಾಗಿದ್ದು, ದ್ವಾರದ ಎರಡು ಕಡೆ ಪುಷ್ಪ ಜಾಲಂಧ್ರಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿಯನ್ನು ಚೌಕಾಕಾರದ ಪಟ್ಟಿಕೆಯಲ್ಲಿಕೆತ್ತಲಾಗಿದೆ.

ನವರಂಗದ ದಕ್ಷಿಣ ಭಾಗದ ಗರ್ಭಗುಡಿಯಲ್ಲಿ ಗಣೇಶನ ಮೂರ್ತಿಯಿದ್ದು, ಇದರ ಬಳಿಯೇ ಮತ್ತೊಂದು ಗಣೇಶ ಹಾಗು ಲಿಂಗವಿದೆ. ಈ ಗುಡಿಯ ದ್ವಾರವು ಪದ್ಮ, ಸ್ತಂಭ ಶಾಖೆಯಿಂದ ಅಲಂಕೃತವಾಗಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಪೂರ್ವದ ಗರ್ಭಗುಡಿಯಲ್ಲಿ ಈಗ ಯಾವ ಮೂರ್ತಿ ಇಲ್ಲದಿದ್ದರೂ ಕೂಡಾ ದ್ವಾರ ಹಾಗು ಲಲಾಟವು ದಕ್ಷಿಣ ಗರ್ಭಗುಡಿ ದ್ವಾರದ ರೀತಿಯ ಅಲಂಕಾರವನ್ನು ಪಡೆದುಕೊಂಡಿದೆ. ನವರಂಗದ ದಕ್ಷಿಣ ಗರ್ಭಗುಡಿಯ ಮುಂಭಾಗದಲ್ಲಿ ಒಂದು ಕೋಷ್ಠ ಗುಡಿಯಿದ್ದು , ಅದರಲ್ಲೊಂದು ಸುಂದರ ಗಣೇಶ ಮೂರ್ತಿ ಇದೆ.

ನವರಂಗದ ಮಧ್ಯದಲ್ಲಿ ನಾಲ್ಕು ಬಳಪದ ಶಿಲೆಯ ಕಂಭಗಳಿವೆ. ಪೀಠದ ಮೇಲಿನ ಭಾಗವು ಚೌಕಾಕಾರವಾಗಿದ್ದು, ಅದರ ಮೇಲಿನ ಭಾಗವು ವೃತ್ತಾಕಾರವಾಗಿದೆ. ಈ ಕಂಭಗಳ ವೃತ್ತಕಾರದ ಭಾಗವು ಬಳೆಗಳ ಹಾಗು ಮಾಲಾಲಂಕಾರವನ್ನು ಪಡೆದುಕೊಂಡಿವೆ. ಇಲ್ಲಿನ ಘಟ ಭಾಗವು ಸರಳವಾಗಿದ್ದು, ವೃತ್ತಾಕಾರವಾಗಿದೆ. ಹಾಗೆಯೇ ಇಲ್ಲಿನ ಬೋದಿಗೆಗಳು ತರಂಗಗಳ ರೀತಿಯಲ್ಲಿವೆ. ಈ ನಾಲ್ಕು ಕಂಭಗಳ ಮಧ್ಯದ ಮುಚ್ಚಿಗೆ (ವಿತಾನ) ಯಲ್ಲಿ ಪದ್ಮವಿದೆ. ನಾಲ್ಕು ಕಂಭದ ಮಧ್ಯದ ವೇದಿಕೆಯಲ್ಲಿ ಸೇವುಣರ ಕಾಲಕ್ಕೆ ಸೇರಿದ ನಂದಿಯೊಂದಿದೆ. ಅದರ ಬಳಿಯೇ ಮತ್ತೊಂದು ಚಿಕ್ಕ ನಂದಿಯನ್ನು ಇಡಲಾಗಿದೆ.

ಪ್ರವೇಶದ್ವಾರವು ಉತ್ತರ ದಿಕ್ಕಿಗಿದ್ದು, ಕೆಳಭಾಗದಲ್ಲಿ ಶೈವ ದ್ವಾರಪಾಲಕರಿದ್ದಾರೆ. ಆ ಶಿಲ್ಪಗಳ ಬಳಿಯಲ್ಲಿ ಗಂಗಾ- ಯಮುನೆ ಹಾಗೂ ಚಾಮರ ಧಾರಿಣಿಯರಿದ್ದಾರೆ. ದ್ವಾರವು ರತ್ನ, ಪುಷ್ಪ, ಸ್ತಂಭ, ಲತಾ, ಶಾಖೆಗಳಿಂದ ಅಲಂಕೃತವಾಗಿದೆ.

[illegible]

[illegible]

[illegible]

[illegible]

[illegible]

ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವನ್ನು ಚೌಕಾಕಾರದ ಪಟ್ಟಿಕೆಯಲ್ಲಿ ಕೆತ್ತಲಾಗಿದೆ. ದೇವಾಲಯವನ್ನು ಪ್ರವೇಶಿಸಲು ಸೋಪಾನಗಳಿದ್ದು, ಸೋಪಾನಗಳಲ್ಲಿ ಎರಡು 'ಹಸ್ತಿಹಸ್ತಾ' ಫಲಕಗಳಿವೆ.

ಈ ಗ್ರಾಮದಲ್ಲಿಸೇವುಣರ ಕಾಲದ ಆರು ಶಾಸನಗಳು ದೊರಕಿವೆ. ಅವುಗಳಲ್ಲಿ ದೇವಾಲಯವನ್ನು ಶ್ರೀ ಬಿಲ್ಲೇಶ್ವರನೆಂದು ಉಲ್ಲೆಖಿಸಲಾಗಿದೆ. ಸೇವುಣರ ಮೂರನೇ ಮಹಾ ದೇವ ಹಾಗು ಆತನ ಮಗ ಚಾವುಂಡರಸನು ಈ ದೇವಾಲಯಕ್ಕೆ ದತ್ತಿ ಬಿಟ್ಟ ಬಗ್ಗೆ ಶಾಸನಗಳಲ್ಲಿ ವಿವರವಿದೆ[೧೦೦]. ಈ ಮೇಲಿನ ಶಾಸನ ಹಾಗು ವಾಸ್ತು ಲಕ್ಷಣಗಳ ಆಧಾರದ ಮೇಲೆ ಇದು ಸೇವುಣರ ಕಾಲದಲ್ಲಿ ನಿರ್ಮಿತವಾದ ದೇವಾಲಯವೆಂದು ಹೇಳಬಹುದು.

೧. ಊರು : ಲೋಕಿಕೆರೆ
೨. ತಾಲೂಕು : ದಾವಣಗೆರೆ
೩. ಹೆಸರು : ಈಶ್ವರ
೪. ಸ್ಥಳ : ಬಸ್‌ನಿಲ್ದಾಣದ ಪೂರ್ವ ದಿಕ್ಕಿಗೆ
೫. ಅಭಿಮುಖ : ಪೂರ್ವಾಭಿಮುಖ
೬. ಕಾಲ : ಕ್ರಿ.ಶ. ೧೨ನೇ ಶತಮಾನ
೭. ಶಿಖರ ಶೈಲಿ : ಶಿಖರ ಉಳಿದಿಲ್ಲ
೮. ಬಳಸಿದ ಶಿಲೆ : ಬಳಪದ ಕಲ್ಲು

ಈ ದೇವಾಲಯ ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನೊಳಗೊಂಡಿದೆ.

ದೇವಾಲಯದ ಹೊರಭಾಗದ ಅಧಿಷ್ಠಾನ ಮಂಚಬಂಧ ರೀತಿಯಲ್ಲಿದೆ. ಭಿತ್ತಿಯ ಭಾಗದಲ್ಲಿ ದೇವ ಕೋಷ್ಠಗಳು ಹಾಗು ಇವುಗಳ ಅಕ್ಕ ಪಕ್ಕದಲ್ಲಿ ಅರೆಗಂಬಗಳಿವೆ. ಪ್ರತಿಯೊಂದು ದೇವ ಕೋಷ್ಠದ ಮೇಲೆಯೂ ಶಿಖರಾಕೃತಿಗಳಿದ್ದು, ಅವುಗಳ ನೋಟವು ಸುಂದರವಾಗಿದೆ. ಪೂರ್ವ ಭಾಗದ ಭಿತ್ತಿಯ ಮಧ್ಯಭಾಗದಲ್ಲಿ ವಜ್ರಾಕೃತಿಯ ಜಲಾಂದ್ರಗಳಿವೆ. ಪ್ರಸ್ತರದಲ್ಲಿನ ಕಪೋತ ಭಾಗ ಚಿಕ್ಕದಾಗಿದೆ. ಇತ್ತೀಚಿಗೆ ನೂತನವಾಗಿ ಶಿಖರವನ್ನು ಗರ್ಭಗುಡಿಯ ಮೇಲೆ ನಿರ್ಮಿಸಲಾಗಿದೆ.

ಪೂರ್ವಾಭಿಮುಖವಾಗಿರುವ ಗರ್ಭಗೃಹ ಚೌಕಾಕಾರವಾಗಿದ್ದು, ಅದರಲ್ಲಿ ಲಿಂಗವಿದೆ. ಲಿಂಗಕ್ಕೆ ಎದುರಾಗಿ ನಂದಿಯೊಂದಿದೆ. ಗರ್ಭಗುಡಿ ಮೇಲಿನ ಮುಚ್ಚಿಗೆಯು ಅಗಲವಾಗಿದ್ದು, ದ್ವಾರವು ಸರಳವಾಗಿದೆ. ದ್ವಾರದ ಎರಡೂ ಪಕ್ಕದ ಭಿತ್ತಿಯಲ್ಲಿ ಜಾಲಂಧ್ರಗಳಿವೆ. ಅಂತರಾಳವು ಆಯತಕಾರವಾಗಿದ್ದು, ಅದರ ದ್ವಾರವು ಸರಳವಾಗಿದೆ. ಉತ್ತರಾಂಗ ಭಾಗದಲ್ಲಿ ಶಿಖರದ ಮಾದರಿಗಳನ್ನು ಕೆತ್ತಲಾಗಿದೆ.

ನವರಂಗದಲ್ಲಿ ಚೌಕ, ಹದಿನಾರು ಮುಖವುಳ್ಳ ಬಳಪದ ಕಲ್ಲಿನ ಕಂಭಗಳಿವೆ. ಚೌಕಾಕಾರದ ಕಂಭಗಳು ಹೂ-ಬಳ್ಳಿಗಳ (ಪುಷ್ಪ-ಲತಾ)ಹಾಗೂ ಆಭರಣಗಳ ಅಲಂಕರಣವಿದೆ . ಇಲ್ಲಿನ ಆಗ್ನೇಯ ಭಾಗದ ಕಂಬದಲ್ಲಿ ಹೊಯ್ಸಳ ಸೊಮೇಶ್ವರನ ಶಾಸನವಿದೆ. ನವರಂಗದ ಮುಚ್ಚಿಗೆ (ವಿತಾನ)ಯಲ್ಲಿ ಅಷ್ಟದಿಕ್ಪಾಲಕರನ್ನು ಕೆತ್ತಲಾಗಿದೆ. ಈ ಅಷ್ಟದಿಕ್ಪಾಲಕರ ಮಧ್ಯೆ ಶಿವನು ತಾಂಡವ ನೃತ್ಯದಲ್ಲಿ ತೊಡಗಿರುವಂತೆ ಮಧ್ಯದಲ್ಲಿ ಬಿಡಿಸಲಾಗಿದೆ. ನವರಂಗದಲ್ಲಿ ಮಹಿಷಾಷುರ ಮರ್ಧಿನಿ, ಗಣೇಶ, ನಾಗ ಮೂರ್ತಿಗಳಿವೆ. ದಕ್ಷಿಣಾಭಿಮುಖವಾಗಿರುವ ಪ್ರವೇಶದ್ವಾರವು ಸರಳವಾಗಿದೆ. ಇದೇ ಗ್ರಾಮದಲ್ಲಿದ್ದ ಕೋಡಿ ಕಲ್ಲೇಶ್ವರ, ಭೈರವ, ಈಶ್ವರ ಮೊದಲಾದ ಪ್ರಾಚೀನ ದೇಗುಲಗಳು ಈಗ ಭಗ್ನವಾಗಿವೆ. ಹೊಯ್ಸಳರ ಕಾಲಾವಧಿಯಲ್ಲಿ ಈ ದೇವಾಲಯ ನಿರ್ಮಾಣವಾಗಿರಬಹುದೆಂದು ಇಲ್ಲಿನ ವಾಸ್ತು ಲಕ್ಷಣಗಳ ಆಧಾರದ ಮೇಲೆ ಹೇಳಬಹುದಾಗಿದೆ.

೧. ಊರು : ಕಲ್ಲೇದೇವರ ಪುರ
೨. ತಾಲೂಕು : ಜಗಳೂರು.
೩. ಹೆಸರು : ಕಲ್ಲೇಶ್ವರ
೪. ಸ್ಥಳ : ಗ್ರಾಮದ ಮಧ್ಯದಲ್ಲಿ
೫. ಅಭಿಮುಖ : ಪೂರ್ವಾಭಿಮುಖ
೬. ಕಾಲ : ಕ್ರಿ.ಶ. ೧೩ನೇ ಶತಮಾನ
೭. ಶಿಖರ ಶೈಲಿ : ಕದಂಬ ನಾಗರ
೮. ಬಳಸಿದ ಶಿಲೆ : ಬಳಪದಶಿಲೆ ಗ್ರಾನೈಟ್

ಇಲ್ಲಿನ ಕಲ್ಲೇಶ್ವರ ದೇವಾಲಯದಿಂದ ಈ ಗ್ರಾಮ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಈ ದೇವಾಲಯವು ಗರ್ಭಗುಡಿ, ಅಂತರಾಳ, ನವರಂಗ, ಮುಖ ಮಂಟವನ್ನು ಒಳಗೊಂಡಿದೆ.

ಹೊರಭಾಗದ ಅಧಿಷ್ಠಾನವು ಉಪಾನ, ಪದ್ಮ, ಕಪೋತ ಭಾಗಗಳನ್ನು ಒಳಗೊಂಡಿದೆ. ಅಲ್ಲಲ್ಲಿ ನಂತರ ಕಾಲದಲ್ಲಿ ಈ ಭಾಗವನ್ನು ದುರಸ್ಥಿಗೊಳಿಸಿದ್ದಾರೆ. ಭಿತ್ತಿಭಾಗವು ಅರೆಗಂಭಗಳಿಂದ ಕೂಡಿದ್ದು, ಉಳಿದಂತೆ ಸರಳವಾಗಿದೆ. ಮುಖ ಮಂಟಪದ ಭಾಗವನ್ನು ಇತ್ತೀಚೆಗೆ ನವೀಕರಿಸಲಾಗಿದೆ. ಭಿತ್ತಿಯ ಮೇಲೆ ಪ್ರಸ್ತರ ಭಾಗವಿದ್ದು ಅದರಲ್ಲಿನ ಕಪೋತ ಭಾಗವು ಕೆಳ ಬಾಗಿದ ರೀತಿಯಲ್ಲಿದ್ದು, ಸರಳವಾಗಿದೆ. ಗರ್ಭಗುಡಿಯ ಮೇಲೆ ಕದಂಬ ನಾಗರ ಶೈಲಿಯ ಶಿಖರವಿದೆ. ಶಿಖರದ ಮೇಲೆ ಹಿತ್ತಾಳೆ ಕಲಶವಿದೆ. ಶಿಖರದ ಮುಂಭಾಗದಲ್ಲಿ (ಅಂತರಾಳದ ಮೇಲೆ) ಹೊಯ್ಸಳರ ಲಾಂಛನವಾದ ಸಳ ಹುಲಿಯೊಡನೆ ಹೋರಾಡುತ್ತಿರುವ ದೃಶ್ಯವಿರುವ ಲೌಕಿಕ ಮೂರ್ತಿಯೊಂದನ್ನು ಇಡಲಾಗಿದೆ. ಆದರೆ ಹುಲಿ ಮಾತ್ರ ಈಗ ಕಾಣಬರುತ್ತಿದ್ದು, ಉಳಿದ ಭಾಗ ತ್ರುಟಿತವಾಗಿದೆ.

[illegible]

[illegible]

[illegible]

[illegible]

ಚೌಕಾಕಾರದ ಗರ್ಭಗುಡಿಯಿದ್ದು ಅದರಲ್ಲಿ ಲಿಂಗವಿದೆ. ಇದರ ಮುಚ್ಚಿಗೆಯಲ್ಲಿ ಅರಳಿದ ಪದ್ಮವಿದ್ದು, ದ್ವಾರಕ್ಕೆ ಇತ್ತೀಚಿಗೆ ಹಿತ್ತಾಳೆಯ ತಗಡನ್ನು ಹಾಕಿದ್ದಾರೆ. ಅಂತರಾಳವು ಆಯತಾಕಾರವಾಗಿದ್ದು, ಇಲ್ಲಿನ ದ್ವಾರವು ಸರಳವಾಗಿದೆ.ನವರಂಗವನ್ನು ಪ್ರವೇಶಿಸಲು ಪೂರ್ವ ಮತ್ತು ದಕ್ಷಿಣಕ್ಕೆ ಪ್ರವೇಶದ್ವಾರಗಳಿವೆ. ನವರಂಗದ ಉತ್ತರಭಾಗಕ್ಕೆ ಸಣ್ಣ ಕೋಷ್ಠ ಗುಡಿ ಇದೆ. ಅಲ್ಲಲ್ಲಿ ವಿಷ್ಣು ,ನಂದಿ, ಗಣಪತಿ ,ವೀರಭದ್ರ ಮೊದಲಾದ ಮೂರ್ತಿಗಳಿವೆ. ಮಧ್ಯದಲ್ಲಿ ನಾಲ್ಕು ಸಂದರ ಬಳಪದ ಕಲ್ಲಿನ ಕಂಭಗಳಿದ್ದು, ಅವು ಚೌಕ, ಹಾಗು ವೃತ್ತಕಾರದಲ್ಲಿವೆ. ದಂಡಭಾಗವು ಚೌಕಾಕಾರವಾಗಿದ್ದು, ಅದರ ಮೇಲಿನ ದಂಡಾಗ್ರ ಭಾಗವು ವೃತ್ತಾಕಾರವಾಗಿ ಬಳೆಯ ಅಲಂಕಾರಗಳಿಂದ ಹಾಗೂ ಗಂಟೆಯ ಅಲಂಕಾರವನ್ನು ಪಡೆದುಕೊಂಡಿದೆ. ಗಂಟೆಯಾಕಾರದ ಭಾಗದಲ್ಲಿ ಮಣಿಸರ , ಪತ್ರ ಮತ್ತು ಪುಷ್ಪಗಳನ್ನು ಬಿಡಿಸಿರುವುದು ವಿಶೇಷವಾಗಿದೆ. ಬೋದಿಗೆಗಳನ್ನು ಸರಳವಾಗಿ ಕೆತ್ತಲಾಗಿದೆ. ನವರಂಗದ ದ್ವಾರವು ಸರಳವಾಗಿದ್ದು, ಲಲಾಟದಲ್ಲಿ ಗಣಪತಿಯ ಶಿಲ್ಪವಿದೆ. ಇದರ ಕೆಳಗಡೆ ಎರಡು ಇಲಿಗಳನ್ನು ಚಿಕ್ಕದಾಗಿ ಬಿಡಿಸಲಾಗಿದೆ. ಗಣಪತಿಯ ಎಡಬದಿಗೆ ಕುಮಾರ ಸ್ವಾಮಿಯನ್ನು ಕೆತ್ತಲಾಗಿದೆ. ಮುಖ ಮಂಟಪದಲ್ಲಿ ನಾಲ್ಕು ಗ್ರಾನೈಟ್ ಕಲ್ಲಿನ ಕಂಬಗಳಿವೆ.

ಇದೇ ಮಂಟಪದಲ್ಲಿ ನಂತರ ಕಾಲದಲ್ಲಿ ನಿರ್ಮಿಸಿದ ಗೌರಮ್ಮ, ವೀರಭದ್ರನ ಉಪ ಗುಡಿಗಳಿವೆ. ಮುಖ ಮಂಟಪದ ದ್ವಾರದಲ್ಲಿ ಶೈವದ್ವಾರಪಾಲರಿದ್ದು, ಅವರ ಎಡಬಲದಲ್ಲಿ ಚಾಮರ ಹಿಡಿದ ಸ್ತ್ರಿಯರು ಹಾಗು ಅಂಜಲಿ ಬದ್ಧ ಸ್ತ್ರೀಯರಿದ್ದಾರೆ. ಲಲಾಟಬಿಂಬದಲ್ಲಿ ಕುಂಭದ ರೀತಿಯ ಅಲಂಕಾರವಿದೆ. ದೇವಾಲಯದ ಮುಂಭಾಗದಲ್ಲಿ ನಂದಿ ಮೂರ್ತಿಗಳು ಹಾಗೂ ಉಯ್ಯಾಲೆ ಕಂಭವಿದೆ.

ದೇವಾಲಯದ ಮೇಲಿರುವ ಹೊಯ್ಸಳ ಲಾಂಛನ ಹಾಗು ವಾಸ್ತು ಲಕ್ಷಣಗಳನ್ನು ಆಧಾರವಾಗಿಟ್ಟುಕೊಂಡು ಈ ದೇವಾಲಯ ಹೊಯ್ಸಳರ ಕಾಲದ್ದೆಂದು ಹೇಳಬಹುದು ಹಾಗು ಹೊಯ್ಸಳ ರಾಜರ ಸಾಮಾಂತರು ಈ ದೇವಾಲಯಕ್ಕೆ ದಾನ ಬಿಟ್ಟ ಬಗ್ಗೆ ಇಲ್ಲಿನ ಶಾಸನಗಳಿಂದ ವಿವರಣೆ ದೊರಕುತ್ತದೆ[೧೦೦].

೧. ಊರು : ಗೋಪಗೊಂಡನಹಳ್ಳಿ
೨. ತಾಲೂಕು : ಹೊನ್ನಾಳಿ
೩. ಹೆಸರು : ಈಶ್ವರ (ಸ್ಥಳೀಯ ಬೀರೇಶ್ವರ ಎನ್ನುತ್ತಾರೆ)
೪. ಸ್ಥಳ : ಊರಿನ ಪೂರ್ವಭಾಗಕ್ಕೆ (ಬಲಮುರಿಗೆ ಹೋಗುವ ರಸ್ತೆಯ ಎಡಬದಿಯಲ್ಲಿ)
೫. ಅಭಿಮುಖ : ಪೂರ್ವಾಭಿಮುಖ
೬. ಕಾಲ : ಕ್ರಿ.ಶ. ೧೩-೧೪ನೇ ಶತಮಾನ
೭. ಶಿಖರ ಶೈಲಿ : ಮೂಲ ಶಿಖರವಿಲ್ಲ
೮. ಬಳಸಿದ ಶಿಲೆ : ಬಳಪದ ಕಲ್ಲು

ಈ ದೇವಾಲಯ ಗರ್ಭಗುಡಿ ,ನವರಂಗ ಮುಖಮಂಟಪನ್ನು ಹೊಂದಿದೆ.

ಹೊರಭಾಗದ ಅಧಿಷ್ಠಾನವು ಭೂಮಿಯಲ್ಲಿ ಮುಚ್ಚಿರುವುದರಿಂದ, ಅದರ ವಿವಿಧ ಅಂಗಭಾಗಗಳು ಗೋಚರಿಸುವುದಿಲ್ಲ. ಭಿತ್ತಿಯಲ್ಲಿ ಅರೆಗಂಭಗಳನ್ನು ಕೆತ್ತಿದ್ದು, ಅವುಗಳ ಮಧ್ಯೆ ಅಲ್ಲಲ್ಲಿ ಕೆಲ ಶಿಲ್ಪಗಳನ್ನು ಕೆತ್ತಲಾಗಿದೆ. ಗರ್ಭಗುಡಿಯ ಉತ್ತರ ಭಾಗದ ಭಿತ್ತಿಯ ಮಧ್ಯ ಪಟ್ಟಿಕೆಯಲ್ಲಿ ಲಿಂಗ, ಗರ್ಭಗುಡಿಯ ಹಿಂಭಾಗದ (ಪಶ್ಚಿಮ) ಭಿತ್ತಿಯ ಮಧ್ಯ ಪಟ್ಟಿಕೆಯಲ್ಲಿ ಲಜ್ಜಾಗೌರಿ ಶಿಲ್ಪವಿದೆ. ನವರಂಗದ ಉತ್ತರ ಭಾಗದ ಭಿತ್ತಿಯಲ್ಲಿ ನಾಗಬಂಧವಿದೆ. ನವರಂಗದ ದಕ್ಷಿಣ ಭಾಗದ ಗೋಡೆಯಲ್ಲಿ ಗದೆ ಹಿಡಿದ ಸ್ತ್ರೀ ಶಿಲ್ಪವಿದೆ. ಈ ಸ್ತ್ರೀ ಶಿಲ್ಪದ ಎರಡೂ ಕೈಗಳ ಮೇಲೆ ಎರಡು ಪಕ್ಷಿಗಳು ರೆಕ್ಕೆಯನ್ನೆತ್ತಿಕೊಂಡು ಕುಳಿತುಕೊಂಡಿವೆ. ಗರ್ಭಗುಡಿಯ ಹೊರಭಾಗದ ಭಿತ್ತಿಯ ಸುತ್ತ ನಂತರ ಕಾಲದಲ್ಲಿ ಇಟ್ಟಿಗೆ ಮತ್ತು ಗಾರೆಯಿಂದ ಮೂಲ ದೇವಾಲಯದ ಭಿತ್ತಿ ಕಾಣದಂತೆ ಮುಚ್ಚಲ್ಪಟ್ಟಿದೆ. ಆದ್ದರಿಂದ ಮೂಲ ಭಿತ್ತಿಯಲ್ಲಿನ ಶಿಲ್ಪಗಳು ಸ್ಪಷ್ಟವಾಗಿ ಕಾಣುತ್ತಿಲ್ಲ. ಪ್ರಸ್ತರದ ಮೇಲ್ಭಾಗದಲ್ಲಿ ಇಟ್ಟಿಗೆ,ಗಾರೆಗಳಿಂದ ನಿರ್ಮಿಸಿದ ಶಿಖರವಿದೆ.

ಚೌಕಾಕಾರದ ಗರ್ಭಗುಡಿಯಲ್ಲಿ ಚಿಕ್ಕ ಗಾತ್ರದ ಮೂರು ಲಿಂಗಗಳಿವೆ. ಇದರ ಮುಚ್ಚಿಗೆಯಲ್ಲಿ ಅರಳಿದ ತಾವರೆಯಿದೆ. ದ್ವಾರದ ಕೆಳಭಾಗದಲ್ಲಿ ತ್ರಿಶೂಲ ,ಡಮರುಗ ಹಿಡಿದಿರುವ ಶೈವ ದ್ವಾರಪಾಲಕರಿದ್ದಾರೆ. ದ್ವಾರವು ಲತಾ ಶಾಖೆಯಿಂದ ಕೂಡಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯನ್ನು ಕೆತ್ತಲಾಗಿದೆ. ದ್ವಾರಪಾಲಕರ ಬದಿಯ ಭಿತ್ತಿಯಲ್ಲಿ ನಾಗರಗಳಿದ್ದು, ನವರಂಗಕ್ಕೆ ದಕ್ಷಿಣ ಮತ್ತು ಪೂರ್ವದಿಂದ ಪ್ರವೇಶಿಸಲು ದ್ವಾರಗಳಿವೆ. ನವರಂಗದಲ್ಲಿ ನಾಲ್ಕು ಕಂಭಗಳಿದ್ದು, ಕೆಳಭಾಗ ಆಯತಾಕಾರವಾಗಿ , ಮೇಲ್ಭಾಗವು ದುಂಡಾಕಾರವಾಗಿಯೂ ಇವೆ. ಆಯತಾಕಾರದ ಭಾಗದಲ್ಲಿ ಸೊಂಟಕ್ಕೆ ಕಠಾರಿಯೊಂದನ್ನು ಸಿಕ್ಕಿಸಿ, ಕೈಯಲ್ಲಿ ಖಡ್ಗ, ಬಿಲ್ಲು ಹಿಡಿದ ವೀರ, ಕುದುರೆ ಏರಿದ ವೀರನ ತಲೆಯ ಮೇಲೆ ಗಡಿಗೆ (ಕೊಡ) ಹೊತ್ತೊಯ್ಯುತ್ತಿರುವ ಸ್ತ್ರೀ, ತಪಸ್ಸಿನಲ್ಲಿ ಕುಳಿತ ಯತಿ, ಯುದ್ಧದಲ್ಲಿ ತೊಡಗಿದ ವೀರರು, ಗಣೇಶ ಮೊದಲಾದ ಶಿಲ್ಪಗಳಿವೆ. ಈ ಕಂಭಗಳಿಗೆ ಹೆಚ್ಚು ಸುಣ್ಣ ಲೇಪಿಸಿರುವುದರಿಂದ ಉಳಿದಿರುವ ಶಿಲ್ಪಗಳನ್ನು ಗುರುತಿಸುವುದು ತುಂಬ ಕಷ್ಟಕರವಾಗಿದೆ. ಕಂಬಗಳ ದುಂಡಾಕಾರದ ಭಾಗದಲ್ಲಿ ಈಟಿಗಳನ್ನು ಸುತ್ತಲೂ ಕೆತ್ತಲಾಗಿದೆ. ಈ ಕಂಬಗಳ ಮೇಲಿನ ಮುಚ್ಚಿಗೆಯ ಮಧ್ಯದಲ್ಲಿ ಮೊಗ್ಗಿನಾಕಾರದ ಪದ್ಮವಿದ್ದು, ಅದರ ಸುತ್ತಲು ಪದ್ಮಗಳು ಮತ್ತು ನಾಗಬಂಧಗಳಿವೆ. ನವರಂಗದ ದಕ್ಷಿಣ ಭಾಗದ ಒಳ ಭಿತ್ತಿಯಲ್ಲಿ ಅಲಂಕೃತ ಹಂಸಗಳ ಪಟ್ಟಿಕೆ ಇದೆ. ಅದರ ಮುಂದಿನ ಅರೆ ಕಂಭದಲ್ಲಿ ಮಂಟಪದೊಳಗೆ ಇರುವ ಪುರುಷ, ಮೇಲಿನ ಪಟ್ಟಿಯಲ್ಲಿ ಆನೆ ಇದೆ. ಉತ್ತರ ಭಾಗದ ಭಿತ್ತಿಯ ಮಧ್ಯದಲ್ಲಿ ಮಲ್ಲಯುದ್ಧದಲ್ಲಿ ತೊಡಗಿದ ಇಬ್ಬರು ವೀರರ ಶಿಲ್ಪಗಳಿವೆ. ಅದರ ಮುಂದಿನ ಅರೆಗಂಬದಲ್ಲಿ ನಾಗ ಶಿಲ್ಪವಿದೆ. ಭಿತ್ತಿಯ ಒಳಭಾಗಕ್ಕೆ ಈ ರೀತಿಯ ಶಿಲ್ಪಗಳಿರುವುದು ಈ ದೇವಾಲಯದ ವಿಶೇಷವೆನ್ನಬಹುದು.

ನವರಂಗದ ಪೂರ್ವ ಪ್ರವೇಶ ದ್ವಾರದ ಕೆಳಭಾಗದಲ್ಲಿ ಶೈವ ದ್ವಾರಪಾಲಕರಿದ್ದಾರೆ. ಈ ದ್ವಾರಪಾಲಕರ ಬಳಿ ಚಾಮರ ಧಾರಿಣಿಯರಿದ್ದಾರೆ. ದ್ವಾರವು ರತ್ನ, ಕುಂಭ, ಲತಾ ಶಾಖೆಗಳಿಂದ ಅಲಂಕೃತವಾಗಿದೆ. ಲಲಾಟ ಬಿಂಬಲದಲ್ಲಿ ಗಜಲಕ್ಷ್ಮಿ ಶಿಲ್ಪವಿದ್ದು, ಇದರ ಎರಡೂ ಕಡೆ ಇಳಿಬಿದ್ದ ತಾವರೆಯ ಮೊಗ್ಗಿನಾಕೃತಿಯ ಅಲಂಕಾರವಿದೆ. ಲಲಾಟದ ಮೇಲಿನ ಉತ್ತರಾಂಗಭಾಗದಲ್ಲಿ ಹಂಸಗಳನ್ನು ಅಲಂಕಾರಯುಕ್ತವಾಗಿ ಒಂದೇ ಸಾಲಿನಲ್ಲಿ ಕೆತ್ತಲಾಗಿದೆ. ಇಲ್ಲಿನ ದ್ವಾರದ ಎಡಭಾಗಕ್ಕೆ ಸಮನಾಂತರವಾಗಿರುವ ಭಿತ್ತಿಯ ಮಧ್ಯ ಪಟ್ಟಿಯಲ್ಲಿ ಮಿಥುನ ಶಿಲ್ಪವಿದೆ. ಬಲಭಾಗದ ಭಿತ್ತಿಯಲ್ಲಿ ನಾಗಬಂಧವಿದೆ.

ನಾಲ್ಕು ಸಾಧಾರಣ ಕಂಭಗಳಿಂದ ಕೂಡಿದ ತೆರದ ಮುಖ ಮಂಟಪವಿದೆ. ಈ ಮುಖ ಮಂಟಪದಲ್ಲಿ ದೇವಾಲಯಕ್ಕೆ ಪ್ರವೇಶಿಸುವ ದ್ವಾರವಿದ್ದು, ಅದರ ಎರಡು ಕಡೆ ಕಕ್ಷಾಸನಗಳಿವೆ. ಈ ಕಕ್ಷಾಸನಗಳನ್ನು ಎರಡು ಆನೆಗಳು ಹೊತ್ತೊಯ್ಯುತ್ತಿರುವ ರೀತಿಯಲ್ಲಿವೆ. ದಕ್ಷಿಣ ದ್ವಾರದ ಪೇದ್ಯಾಭಾಗದಲ್ಲಿ ಶೈವದ್ವಾರಪಾಲರಿದ್ದು, ದ್ವಾರವು ರತ್ನ, ಸ್ತಂಭ, ಲತಾ ಶಾಖೆಯಿಂದ ಅಲಂಕೃತವಾಗಿದ್ದು, ಲಲಾಟದಲ್ಲಿ ಪುಷ್ಪವಿದೆ.

ಮೂಲ ದೇವಾಲಯದ ಭಿತ್ತಿಸುತ್ತ ಮೂಲ ವಾಸ್ತು ಭಾಗಗಳು ಗೋಚರಿಸದ ರೀತಿ ಮತ್ತೊಂದು ಭಾರಿ ಗೋಡೆಯನ್ನು ಇಟ್ಟಿಗೆ ಗಾರೆಯಿಂದ ಕಟ್ಟಲಾಗಿದೆ.ದೇವಾಲಯದ ಒಳಭಾಗದ ಉತ್ತರಾಂಗ ಭಾಗದ ಮೇಲಿನ ಪಕ್ಷಿಗಳು , ಕಂಭ ಇವುಗಳನ್ನು ಆಧಾರವಾಗಿಟ್ಟುಕೊಂಡು ಇದು ವಿಜಯನಗರಕಾಲದ ದೇವಾಲಯವೆಂದು ಹೇಳಬಹುದು.ಇದೇ ದೇವಾಲಯದ ಸಮೀಪ ಮತ್ತೆರಡು ಶೈವ ದೇವಾಲಯಗಳಿದ್ದು ಈ ದೇವಾಲಯದ ವಾಸ್ತು ಲಕ್ಷಣಗಳನ್ನು ಒಳಗೊಂಡಿವೆ.

೧. ಊರು : ಗುಡಿಹಳ್ಳಿ
೨. ತಾಲೂಕು : ಹರಪನಹಳ್ಳಿ
೩. ಹೆಸರು : ಕಲ್ಲೇಶ್ವರ
೪. ಸ್ಥಳ : ಗ್ರಾಮದ ಪಶ್ಚಿಮ ದಿಕ್ಕಿಗೆ ಇದೆ.
೫. ಅಭಿಮುಖ : ಪೂರ್ವಾಭಿಮುಖ
೬. ಕಾಲ : ಕ್ರಿ.ಶ. ಸುಮಾರು ೧೪ನೇ ಶತಮಾನ
೭. ಶಿಖರ ಶೈಲಿ : ಶಿಖರವಿಲ್ಲ
೮. ಬಳಸಿದ ಶಿಲೆ : ಬಳಪದ ಹಾಗು ಗ್ರಾನೈಟ್ ಶಿಲೆ

ಸ್ಥಳೀಯರಿಂದ ಬಸವಣ್ಣ ದೇವಾಲಯವೆಂದು ಕರೆಯಲ್ಪಡುವ ಈ ದೇವಾಲಯ ಗರ್ಭಗುಡಿ, ಅಂತರಾಳ, ಮುಖಮಂಟಪವನ್ನು ಒಳಗೊಂಡಿದೆ. ದೇವಾಲಯದ ಸುತ್ತಲೂ ಪ್ರಕಾರ ಗೋಡೆ ಇದೆ.

ಅಧಿಷ್ಠಾನವು ಉಪಾನ, ಪದ್ಮ, ಕಪೋತ, ಕಂಠ ಭಾಗದಿಂದ ಕೂಡಿದ್ದು, ಸಾಧಾರಣವಾಗಿದೆ. ಗರ್ಭಗುಡಿ ಭಾಗದ ಭಿತ್ತಿಯು ಅಲಂಕೃತವಾಗಿಲ್ಲ. ಅಂತರಾಳ, ನವರಂಗ ಹಾಗು ಮಂಟಪದ ಹೊರಭಾಗದ ಭಿತ್ತಿಯಲ್ಲಿ ಅರೆಗಂಭಗಳನ್ನು ಕೆತ್ತಲಾಗಿದೆ. ಭಿತ್ತಿಯ ಮೇಲೆ ಕಪೋತವಿದೆ. ನವರಂಗದ ಮೇಲ್ಛಾವಣಿ ಇಳಿಜಾರಾಗಿದೆ. ಗರ್ಭಗುಡಿ ಮೇಲ್ಭಾಗದಲ್ಲಿ ಶಿಖರವಿಲ್ಲ.

ದೇವಾಲಯದ ಸುತ್ತಲೂ ಪ್ರಾಕಾರ ಗೋಡೆ ಇದ್ದು, ಪೂರ್ವದಲ್ಲಿ ಮುಖ್ಯ ಪ್ರವೇಶ ದ್ವಾರವಿದೆ. (ಮೂಲ ಗೋಡೆ ಅಲ್ಲಲ್ಲಿ ಈಗ ನಾಶವಾಗಿದೆ). ಇದಕ್ಕೆ ಅಂಟಿಕೊಂಡಂತೆ ಸಾಲು ಮಂಟಪಗಳಿವೆ. ಪಶ್ಚಿಮ ಹಾಗು ಉತ್ತರ ಭಾಗದ ಕೆಲವು ಕಡೆ ಈ ಸಾಲು ಮಂಟಪಗಳಿಲ್ಲ. ದಕ್ಷಿಣ ಭಾಗದ ಪ್ರಾಕಾರ ಗೋಡೆಗೆ ಅಂಟಿಕೊಂಡಂತೆ ಶಾಕ್ತ ಪರಂಪರೆಗೆ ಸೇರಿದ ಉಪ ದೇವಾಲಯವೊಂದಿದ್ದು, (ಸ್ಥಳೀಯರು ಕಾಳಿಕ ದೇವಾಲಯವೆನ್ನುತ್ತಾರೆ) ಅದರಲ್ಲಿ ಸರಸ್ವತಿಯ ಮೂರ್ತಿ ಇದೆ. ಉತ್ತರ ಭಾಗದ ಪ್ರಾಕಾರ ಗೋಡೆಯಲ್ಲಿ ಒಂದು ಉಪ ದೇವಾಲಯವಿದ್ದು, ಅದರಲ್ಲಿ ವಿಷ್ಣು, ಸೂರ್ಯ ಮೂರ್ತಿಗಳಿವೆ.

ಚೌಕಾಕಾರದ ಗರ್ಭಗುಡಿಯಲ್ಲಿ ಲಿಂಗವಿದೆ. ವಿದ್ಯಾಧಾರ ಶಾಖೆ, ಕುಂಭ ಶಾಖೆ, ಪದ್ಮ ಶಾಖೆಗಳಿಂದ ಅಲಂಕೃತವಾಗಿರುವ ದ್ವಾರವಿದೆ. ಚೌಕಾಕಾರದ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವನ್ನು ಕೆತ್ತಲಾಗಿದೆ. ಅಂತರಾಳದ ದ್ವಾರದಲ್ಲಿ ಮೂಲತಃ ಇದ್ದ ಶಾಖೆ ಹಾಗು ಜಾಲಂಧ್ರ ಶಾಖೆಗಳು ಈಗ ಕಾಣಬರುತ್ತಿಲ್ಲ.

ಈ ಶಾಖೆಗಳ ಬದಿಯಲ್ಲಿರುವ ಸ್ತಂಭಗಳ ಮೇಲೆ ಮಕರ ಅಲಂಕೃತ ತೋರಣವಿದ್ದು, ಅದರ ಮಧ್ಯದಲ್ಲಿ ಶಿವನು ಆಸೀನನಾಗಿದ್ದಾನೆ. ಆತನ ಕಾಲಿನ ಬಳಿ ನಂದಿ ಇದ್ದು, ಶಿವನ ಎರಡು ಬದಿಗೂ ಚಾಮರಧಾರಿ ಸೇವಿಕಾ ಸ್ತ್ರೀಯರಿದ್ದಾರೆ. ಮುಖ ಮಂಟಪದಲ್ಲಿ ಹನ್ನೆರಡು ಕಂಭಗಳು ಇವೆ. ಮಧ್ಯದ ನಾಲ್ಕು ಬೃಹತ್ ಕಂಭಗಳು ಚಾಲುಕ್ಯ ಮಾದರಿಯಲ್ಲಿದ್ದು, ಸುಂದರವಾಗಿವೆ. ಕೆಳಭಾಗದಲ್ಲಿ ಚೌಕಾಕಾರ, ಮೇಲ್ಭಾಗದಲ್ಲಿ ವೃತ್ತಾಕಾರವಾಗಿರುವ ಈ ಕಂಭಗಳನ್ನು ಆಭರಣಗಳಿಂದ ಅಲಂಕರಿಸಲಾಗಿದೆ. ಕಂಭಗಳ ಭಾಗದಲ್ಲಿ ಗಣೇಶ, ಪಾರ್ವತಿ, ಸರಸ್ವತಿ, ಧ್ಯಾನಮಗ್ನನಾಗಿರುವ ಯತಿ, ಶಿವ, ಲಕ್ಷ್ಮಿ, ಸ್ಕಂದ, ವಿಷ್ಣು, ಉಗ್ರ ನರಸಿಂಹ, ಮಹಿಷಾಸುರ ಮರ್ಧಿನಿ, ಬ್ರಹ್ಮ, ಮಹೇಶ್ವರಿಯರನ್ನು ಅಲಂಕಾರಿಕವಾಗಿ ಅರೆಗಂಭಗಳ ನಡುವಿನ ತೋರಣದಲ್ಲಿ ಕೆತ್ತಲಾಗಿದೆ. ಉಳಿದ ಕಂಭಗಳು ಸಾಧಾರಣವಾಗಿದ್ದು, ಮಂಗ, ನೃತ್ಯಗಾರರು, ನವಿಲಿನ ಶಿಲ್ಪಗಳನ್ನು ಕೆತ್ತಲಾಗಿದೆ. ಬೋದಿಗೆಯು ಸರಳವಾಗಿದ್ದು, ಮೇಲಿನಿಂದ ಬಂದ ತೊಲೆಗಳಿಗೆ ಆಧಾರವಾಗಿವೆ. ಮುಖ ಮಂಟಪದ ಉತ್ತರದಲ್ಲಿ ಕೋಷ್ಠಗುಡಿ ಇದ್ದು, ಅದರಲ್ಲಿ ವಿಷ್ಣು ಮೂರ್ತಿ ಇದೆ. ಇಲ್ಲಿನ ಮುಚ್ಚಿಗೆಯಲ್ಲಿ ಪದ್ಮವಿದೆ. ಈ ಮುಖಮಂಟಪವನ್ನು ಉತ್ತರ ಮತ್ತು ದಕ್ಷಿಣ, ಪೂರ್ವದಿಂದ ಪ್ರವೇಶಿಸಲು ತೆರೆದ ದ್ವಾರಗಳಿವೆ. ಉತ್ತರ, ದಕ್ಷಿಣದ ಪ್ರವೇಶದ್ವಾರಗಳವರೆಗೆ ಮಾತ್ರ ಭಿತ್ತಿಯಿದ್ದು, ಉಳಿದ ಭಾಗ ತೆರೆದ ರೀತಿಯಲ್ಲಿದೆ. ಇದರ ಒಳ ಭಾಗದಲ್ಲಿ ಸುತ್ತಲೂ ಕಕ್ಷಾಸನಗಳಿವೆ. ಕಕ್ಷಾಸನಗಳ ಕೆಳಭಾಗದಲ್ಲಿ ಬಾಳೆಗೊನೆಯ ಅಲಂಕಾರ ಮಾಡಲಾಗಿದೆ.

ಈ ಮುಖ ಮಂಟಪದ ಮುಂದೆ ಪಶ್ಚಿಮದ ಮುಖ್ಯ ಗರ್ಭಗುಡಿಗೆ ಅಭಿಮುಖವಾಗಿ ನಂತರದ ಕಾಲದಲ್ಲಿ ನಿರ್ಮಿಸಿದ (ಗ್ರಾನೈಟ್ ಶಿಲೆ) ನಂದಿ ಮಂಟಪವಿದ್ದು, ಇದರಲ್ಲಿ ಬೃಹತ್ ಅಲಂಕೃತ ನಂದಿ ಇದೆ. ಈಚೆಗೆ ನಿರ್ಮಿಸಿದ ಶಿಖರವು ಇದರ ಮೇಲಿದೆ. ನವರಂಗ ಮಂಟಪವನ್ನು ಪೂರ್ವ, ಉತ್ತರ, ದಕ್ಷಿಣದಿಂದ ಪ್ರವೇಶಿಸಲು ಸೋಪಾನಗಳಿದ್ದು ಸೋಪಾನಗಳ ಎರಡು ಬದಿ ಹಸ್ತಿ ಹಸ್ತಾ ಫಲಕವನ್ನು (ಆನೆಯ ಸೊಂಡಿಲಾಕಾರದ) ಜೋಡಿಸಲಾಗಿದೆ.

ಈ ದೇವಾಲಯದ ಲಕ್ಷಣಗಳ ಆಧಾರದ ಮೇಲೆ ಇದು ವಿಜಯನಗರ ಕಾಲಕ್ಕೆ ಸೇರಿದ ದೇವಾಲಯವೆಂದು ಹೇಳಬಹುದು.

೧. ಊರು : ಶಾಂತಿಸಾಗರ (ಸೂಳೆಕೆರೆ)
೨. ತಾಲೂಕು : ಚನ್ನಗಿರಿ
೩. ಹೆಸರು : ಸಿದ್ದೇಶ್ವರ
೪. ಸ್ಥಳ : ಗ್ರಾಮದ ಪಶ್ಚಿಮ ಭಾಗಕ್ಕೆ
೫. ಅಭಿಮುಖ : ಪೂರ್ವಾಭಿಮುಖ
೬. ಕಾಲ : ಕ್ರಿ.ಶ. ೧೫೪೬ [೧೦೨]
೭. ಶಿಖರ ಶೈಲಿ : ಕದಂಬ ನಾಗರ
೮. ಬಳಸಿದ ಶಿಲೆ : ಬಳಪ ಮತ್ತು ಗ್ರಾನೈಟ್ ಶಿಲೆ

ಈ ದೇವಾಲಯವು ಗರ್ಭಗುಡಿ, ಅಂತರಾಳ, ನವರಂಗ ಹಾಗು ಮುಖ ಮಂಟಪಗಳನ್ನೊಳಗೊಂಡಿದೆ.

ಹೊರಭಾಗದ ಅಧಿಷ್ಠಾನವು ಉಪಾನ, ಪದ್ಮ,ಕುಮುದಗಳಿಂದ ಕೂಡಿದ್ದು, ಭಿತ್ತಿಯಲ್ಲಿ ಯಾವ ಶಿಲ್ಪಗಳಿರದೆ, ಸರಳವಾಗಿದೆ. ಗರ್ಭಗುಡಿಯ ಮೇಲೆ ಕದಂಬ ನಾಗರ ಶೈಲಿಯ ಶಿಖರವಿದ್ದು, ಶಿಖರದ ಮುಂದಿನ ಭಾಗದಲ್ಲಿ ಶುಕನಾಸಿ ಇದೆ. (ಅಂತರಾಳದ ಮೇಲ್ಬಾಗದಲ್ಲಿ) ಶಿಖರವು ಶಿಲೆಯ ಕಲಶ ಹಾಗು ಸ್ತೂಪಿಯನ್ನೊಳಗೊಂಡಿದೆ.

ಚೌಕಾಕಾರದ ಗರ್ಭಗುಡಿಯಲ್ಲಿ ಲಿಂಗವಿದ್ದು, ಈ ಗುಡಿಯ ದ್ವಾರ ಮತ್ತು ಲಲಾಟವು ಸಾಧಾರಣವಾಗಿದೆ. ಅಂತರಾಳವು ಆಯತಾಕಾರವಾಗಿದ್ದು, ಇದರ ಮುಚ್ಚಿಗೆಯಲ್ಲಿ ಪದ್ಮ ವಿದೆ. ಇದರ ದ್ವಾರದಲ್ಲಿ ಮೂರು ಶಾಖೆಗಳಿವೆಯಾದರೂ ಅವುಗಳನ್ನು ಅಲಂಕರಿಸಿಲ್ಲ.

ನವರಂಗದ ಪಶ್ಚಿಮ ಭಾಗದಲ್ಲಿ (ಅಂತರಾಳ ದ್ವಾರದ ಎಡಬಲಕ್ಕೆ) ಎರಡು ಕೋಷ್ಠ ಗುಡಿಗಳಿದ್ದು, ಅವುಗಳಲ್ಲಿ ಕುದುರೆ, ಕುದುರೆಯನ್ನೇರಿದ ಸ್ತ್ರೀ ಪುರುಷರು ಹಾಗು ಕೇಶವನ ಮೂರ್ತಿಗಳಿವೆ. ಈ ನವರಂಗಕ್ಕೆ ಪೂರ್ವ ಉತ್ತರ ಮತ್ತು ದಕ್ಷಿಣದಲ್ಲಿ ಪ್ರವೇಶದ್ವಾರಗಳಿವೆ. ಇಲ್ಲಿನ ನವರಂಗವು ಹನ್ನೆರಡು ಅಂಕಣಗಳಿಂದ ಕೂಡಿದ್ದು, ಆರು ಬಳಪದ ಶಿಲೆಯ ಕಂಭಗಳಿವೆ. ಈ ಆರುಕಂಭಗಳಲ್ಲಿ ಎರಡು ಚೌಕಾಕಾರದ ಕಂಭಗಳು ಗಂಟೆ ಮತ್ತು ಕುಂಬಾಕೃತಿಯನ್ನು ಪಡೆದುಕೊಂಡಿವೆ. ಉಳಿದ ನಾಲ್ಕು ಕಂಭಗಳು ಗಾತ್ರದಲ್ಲಿ ದೊಡ್ಡ ಕಂಭಗಳಾಗಿದ್ದು, ನೋಡಲು ಸುಂದರವಾಗಿವೆ. ದ್ರಾವಿಡ ಶೈಲಿಯಲ್ಲಿರುವ ಈ ಕಂಭಗಳ ಕೆಳಭಾಗ ಚೌಕಾಕಾರವಾಗಿ ಹಾಗು ಅದರ ಮೇಲಿನ ಭಾಗದಲ್ಲಿ ಮೂವತ್ತೆರಡು ಕೋನಗಳಿವೆ. ಈ ನಾಲ್ಕು ಕಂಭಗಳ ಚೌಕಾಕಾರದ ಭಾಗದಲ್ಲಿ ಗಣೇಶ, ಕಾರ್ತಿಕೇಯ, ಗಿಳಿಗಳು, ಧ್ಯಾನಮಗ್ನ ವರಾಹಿ , ನರ್ತನಗೈಯ್ಯುತ್ತಿರುವ ಸ್ತ್ರೀಯರು ಮುಂದಿನ ಕಾಲೆತ್ತಿ ಕುಣಿಯುತ್ತಿರುವಂತೆ ಇರುವ ಅಲಂಕೃತವಾಗಿರುವ ನಂದಿ(ಕೋಲೆ ಬಸವ) ಕೋಲಾಟದಲ್ಲಿ ಸ್ತ್ರೀಯರು, ವೀರಭಧ್ರ , ಮಹೇಶ್ವರಿ, ಧನಸ್ಸನ್ನು ಎತ್ತಿ ಹಿಡಿದ ರಾಮ, ನರ್ತನ ಗೈಯ್ಯುತ್ತಿರವು ಹಲವು ಸ್ತ್ರೀಯರ ಶಿಲ್ಪಗಳಿದ್ದು, ಅವು ನೋಡಲು ಸುಂದರವಾಗಿವೆ. ಈ ನಾಲ್ಕು ಕಂಭಗಳ ಮಧ್ಯೆ ನಂದಿ ಇದ್ದು, ಇಲ್ಲಿನ ಮುಚ್ಚಿಗೆಯಲ್ಲಿ ಅರಳಿದ ತಾವರೆಯಿದೆ.ದೊಡ್ಡಗದ್ದವಳ್ಳಿಯ ಹಾಗು ಕೆಳದಿಗಳಲ್ಲಿರುವಂತೆ ಈ ದೇವಾಲಯದ ನವರಂಗದ ಸುತ್ತಲು ಕಕ್ಷಾಸನಗಳಿವೆ[೧೦೩].

ನವರಂಗದ ಪೂರ್ವದ್ವಾರವು ಅಲಂಕರಿಸದಿರುವ ವಿವಿಧ ಶಾಖೆಗಳಿಂದ ಕೂಡಿದೆ. ಇಲ್ಲಿ ಲಲಾಟ ಬಿಂಬವಿಲ್ಲ. ಬದಲಾಗಿ ಉತ್ತರಾಂಗ ಭಾಗದ ಮಧ್ಯದಲ್ಲಿ ಗಜಲಕ್ಷ್ಮಿ ಶಿಲ್ಪವನ್ನು, ಆ ಶಿಲ್ಪದ ಎರಡು ಬದಿಗೆ ಶಿಖರದ ಮಾದರಿಗಳನ್ನು ಕೆತ್ತಿರುವುದು ವಿಶೇಷ.

ಈ ದ್ವಾರದ ಮುಂಭಾಗದ ಎಡ,ಬಲ ಬದಿಗೆ ಕಕ್ಷಾಸನವಿರುವ ಮುಖ ಮಂಟಪವಿದೆ. ಈ ಮಂಟಪದಲ್ಲಿನ ಎರಡೂ ಕಂಭಗಳ ಘಟ ಮತ್ತು ಫಲಕ ಭಾಗಗಳನ್ನು ಪುಷ್ಪದಳಗಳಿಂದ ಅಲಂಕರಿಸಲಾಗಿದೆ. ಹಾಗು ಇಲ್ಲಿನ ಬೋದಿಗೆಗಳು ಪುಷ್ಪ ದಳಗಳಿಂದ ಕೂಡಿದ್ದು , ಪುಷ್ಪ ಬೋದಿಗೆಗಳೆನಿಸಿವೆ. ಕಕ್ಷಾಸನದ ಎರಡು ಕಡೆಯ ಹೊರ ಭಾಗದ ಭಿತ್ತಿಯಲ್ಲಿ ಮಿಥುನ ಶಿಲ್ಪಗಳು, ಸಿಂಹ , ಆನೆ, ಯಾಳಿ , ಹಂಸ ಶಿಲ್ಪಗಳನ್ನು ಕೆತ್ತಲಾಗಿದೆ.

ಉತ್ತರದ ಪ್ರವೇಶ ದ್ವಾರದಲ್ಲಿ ಸ್ತಂಭ ಶಾಖೆ ಮಾತ್ರ ಅಲಂಕೃತವಾಗಿದ್ದು, ಉತ್ತರಾಂಗ ಭಾಗದಲ್ಲಿ ಶಿವ ನಾಟ್ಯವಾಡುತ್ತಿರುವಂತೆ ಹಾಗು ಆತನ ಬದಿಯಲ್ಲಿ ಭಕ್ತರು ಅಂಜಲಿ ಬದ್ಧರಾಗಿರುವ ಶಿಲ್ಪಗಳನ್ನು ಕೆತ್ತಲಾಗಿದೆ. ದಕ್ಷಿಣ ದ್ವಾರವು ಇದೇ ರೀತಿಯ ಅಲಂಕಾರವನ್ನು ಪಡೆದುಕೊಂಡಿದ್ದರೂ ಸಹ ಅಲ್ಲಿ ನಾಟ್ಯ ಶಿವ ಮತ್ತು ಆತನ ಭಕ್ತರಿರುವ ಶಿಲ್ಪಗಳಿಲ್ಲ.

[illegible]

[illegible]

[illegible]

[illegible]

ಪೂರ್ವ ಪ್ರವೇಶ ದ್ವಾರದ ಮುಂದೆ ಒಂದು ಬೃಹತ್ ಗ್ರಾನೈಟ್ ಶಿಲೆಯ ದೀಪ ಸ್ತಂಭವಿದೆ. ಅದರಲ್ಲಿ ಭಕ್ತನೋರ್ವನ ಶಿಲ್ಪವಿದೆ. ಅದರ ಬಳಿಯೇ ಚಿಕ್ಕ ಎದುರು ಮಂಟಪವೊಂದಿದ್ದು, ದೇವಾಲಯದ ಸುತ್ತಲೂ ಪ್ರಾಕಾರ ಗೋಡೆ ಇದೆ. ಪ್ರವೇಶ ದ್ವಾರವು (ಮಹಾದ್ವಾರ) ದಕ್ಷಿಣ ದಿಕ್ಕಿಗಿದೆ.

ಈ ದೇವಾಲಯ ಹೊಯ್ಸಳ ಕಾಲದ ವಾಸ್ತು ಲಕ್ಷಣಗಳ ಆಧಾರದ ಮೇಲೆ ಕೆಳದಿ ಅರಸರ ಕಾಲದ ವಾಸ್ತು ರಚನಾ ವಿಧಾನವನ್ನು ಹೊಂದಿದೆ ಎಂದು ಹಲವರು ಹೇಳಿದ್ದಾರೆ[೧೦೪]. ಆದರೆ ಇಲ್ಲಿನ ನವರಂಗದ ಮಧ್ಯದಲ್ಲಿ ನಾಲ್ಕು ದ್ರಾವಿಡ ಶೈಲಿಯ ಕಂಭಗಳು ಹಾಗು ದೀಪಸ್ತಂಭ, ಪ್ರಕಾರ ಗೋಡೆಗಳಿಗೆ ಗ್ರಾನೈಟ್ ಶಿಲೆಯ ಬಳಕೆ ಇದೆ. ಇವುಗಳು ವಿಜಯನಗರ ಕಾಲದ ವಾಸ್ತು ಲಕ್ಷಣಗಳನ್ನು ನೆನಪಿಗೆ ತರುತ್ತವೆ. ಹಾಗೆಯೇ ಇಲ್ಲಿನ ಮುಖ್ಯ ದ್ವಾರದ ಬಳಿ ಕ್ರಿ.ಶ.೧೫೪೬ರ ಶಾಸವೊಂದರಿಂದ ಈ ದೇವಾಲಕ್ಕೆ ದತ್ತಿ ಬಿಟ್ಟ ಉಲ್ಲೇಖ ದೊರಕುತ್ತದೆ[೧೦೫]. ಇವುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ದೇವಾಲಯ ವಿಜಯನಗರದ ಕಾಲದ ಅಂತ್ಯ ಭಾಗದಲ್ಲಿ ರಚಿತವಾಗಿರಬೇಕೆನಿಸುತ್ತದೆ.

೧. ಊರು : ಕೊಡದ ಗುಡ್ಡ
೨. ತಾಲೂಕು : ಜಗಲೂರು
೩. ಹೆಸರು : ವೀರಭದ್ರ[೧೦೬]
೪. ಸ್ಥಳ : ಗ್ರಾಮದ ಉತ್ತರ ಭಾಗದ ಬೆಟ್ಟದ ಮೇಲೆ
೫. ಅಭಿಮುಖ : ಪೂರ್ವಾಭಿಮುಖ
೬. ಕಾಲ : ಕ್ರಿ.ಶ. ಸು. ೧೫ನೇ ಶತಮಾನ
೭. ಶಿಖರ ಶೈಲಿ : ಶಿಖರವಿಲ್ಲ
೮. ಬಳಸಿದ ಶಿಲೆ : ಗ್ರಾನೈಟ್

ಈ ದೇವಾಲಯವು ಗರ್ಭಗುಡಿ, ತೆರದ ಅಂತರಾಳ ,ನವರಂಗ ,ತೆರದಮುಖ ಮಂಟವನ್ನು ಹೊಂದಿದೆ ಹಾಗೂ ಮುಂಭಾಗದಲ್ಲಿ ನಂದಿ ಮಂಟಪವಿದೆ .

ಹೊರಭಾಗದ ಅಧಿಷ್ಠಾನವು ಉಪಾನ, ಪದ್ಮ, ಕಪೋತಳಿಂದ ಕೂಡಿದೆ. ಈ ದೇವಾಲಯದ ಬಲಭಾಗದ (ದಕ್ಷಿಣ ಭಾಗ) ಭಿತ್ತಿಯಲ್ಲಿ ಲಜ್ಜಾಗೌರಿ, ನಾಟ್ಯದಲ್ಲಿ ತೊಡಗಿದ ಪುರಷನನ್ನು ಕೆತ್ತಲಾಗಿದೆ. ಗರ್ಭಗುಡಿ ಭಿತ್ತಿಭಾಗದಲ್ಲಿ ಯಾಳಿ, ಉತ್ತರ ಭಾಗದ ಭಿತ್ತಿಯಲ್ಲಿ (ಎಡಭಾಗ) ಶೇಷಶಯನ ವಿಷ್ಣು, ನಾಗ ಶಿಲ್ಪಗಳನ್ನು ಮನೋಹರವಾಗಿ ಕೆತ್ತಲಾಗಿದೆ. ಭಿತ್ತಿಯ ಮೇಲಿನ ಪ್ರಸ್ತರದಲ್ಲಿನ ಕಪೋತ ಭಾಗವು ಸ್ವಲ್ಪ ಕೆಳ ಬಾಗಿದ ರೀತಿಯಲ್ಲಿದ್ದು, ಸರಳವಾಗಿದೆ. ಮುಖ ಮಂಟಪದ ಸುತ್ತಲಿನ ಮೇಲ್ಛಾವಣಿ ಇಳಿಜಾರಾಗಿದೆ.

ಗರ್ಭಗುಡಿಯು ಚೌಕಾಕಾರವಾಗಿದ್ದು, ಇಲ್ಲಿ ಪಶ್ಚಿಮ ಭಾಗದ ಗೋಡೆ ಇಲ್ಲ. ಬದಲಾಗಿ ನೈಸರ್ಗಿಕವಾಗಿ ಉಳಿದು ಬಂದಿರುವ ಬಂಡೆಯೊಂದಕ್ಕೆ ಸ್ಥಾನಿಕ ವೀರಭದ್ರ ಮೂರ್ತಿಯನ್ನು ಕೆತ್ತಿ ಉಳಿದ ಗೋಡೆಗಳನ್ನು ಕಟ್ಟಲಾಗಿದೆ. ಅದರ ದ್ವಾರವನ್ನು ಈತ್ತೀಚಿಗೆ ಹಿತ್ತಾಳೆ ತಗಡಿನಿಂದ ಅಲಂಕರಿಸಿದ್ದಾರೆ. ಅಂತರಾಳವು ತೆರೆದ ರೀತಿಯಲ್ಲಿದೆ. ಇಲ್ಲಿ ಯಾವುದೇ ಮೂರ್ತಿಗಳಿಲ್ಲ. ನವರಂಗದಲ್ಲಿ ನಾಲ್ಕು ವಿಜಯನಗರ ಶೈಲಿಯ ದಪ್ಪನೆಯ ಕಂಭಗಳಿವೆ. ಈ ಕಂಭಗಳು ಚೌಕ ಮತ್ತು ಅಷ್ಟ ಕೋನಾಕಾರವಾಗಿದ್ದು, ಇದರಲ್ಲಿ ಯಾವುದೇ ಶಿಲ್ಪಗಳು ಕಾಣ ಬರುತ್ತಿಲ್ಲ. ಕಂಭಗಳ ಮೇಲಿನ ಬೋದಿಗೆಯಿಂದ ಇಳಿಬಿದ್ದ ಕಮಲ ಮೊಗ್ಗಿನ ಅಲಂಕಾರವಿದೆ. ಮುಚ್ಚಿಗೆಯಲ್ಲಿ ಪದ್ಮವಿದೆ ಈ ನವರಂಗ ವನ್ನು ಪ್ರವೇಶಿಸಲು ಮೂಲತಃ ಉತ್ತರ ದಕ್ಷಿಣ ಮತ್ತು ಪೂರ್ವದಿಕ್ಕಿನಲ್ಲಿ ಪ್ರವೇಶದ್ವಾರಗಳಿದ್ದು, ಈಗ ದಕ್ಷಿಣ ದ್ವಾರವನ್ನು ಮುಚ್ಚಲಾಗಿದೆ. ಪೂರ್ವದ ಪ್ರವೇಶದ್ವಾರದ ಪೇದ್ಯಾಭಾಗದಲ್ಲಿ ಶೈವದ್ವಾರ ಪಾಲಕರಿದ್ದಾರೆ. ದ್ವಾರವು ಸರಳವಾಗಿದ್ದು, ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಮುಖ ಮಂಟಪಕ್ಕೆ ಹೊಂದಿಕೊಂಡತಿರುವ ನವರಂಗದ ಹೊರ ಭಿತ್ತಿಯ ಎಡಭಾಗದ ಮಧ್ಯದಲ್ಲಿ ಕದನದಲ್ಲಿ ತೊಡಗಿರುವ ಆನೆಗಳನ್ನು ಹಾಗೂ ಬಲಭಾಗದಲ್ಲಿ ಒಂದೇ ದೇಹ ಮೂರು ತಲೆಯ ಸಂಯುಕ್ತ ಹಸುವೊಂದನ್ನು ಕೆತ್ತಲಾಗಿದೆ. ಒಂದು ಹಸುವು ಲಿಂಗದ ಮೇಲೆ ಹಾಲನ್ನು ಸುರಿಸುವಂತಿದೆ. ಮತ್ತೊಂದು ನೀರನ್ನು ಕುಡಿಯುತ್ತಿರುವಂತಿದ್ದರೆ, ಇನ್ನೊಂದು ತಲೆ ಎತ್ತಿ ನಿಂತಿರುವಂತೆ ಕೆತ್ತಲಾಗಿದೆ. ಈ ಹಸುವಿನ ಸಮೀಪವೇ ಒಂದು ಹಲ್ಲಿಯನ್ನು ಬಿಡಿಸಲಾಗಿದೆ. ತೆರೆದ ಮುಖ ಮಂಟಪವು ಎರಡು ಕಂಭಗಳಿಂದ ಕೂಡಿದೆ. ಇದರ ಮುಚ್ಚಿಗೆಯಲ್ಲಿ ಪದ್ಮವಿದೆ. ಈ ದೇವಾಲಯದ ಎದುರಿನಲ್ಲಿ ನಂದಿ ಮಂಟಪವಿದ್ದು, ಅದರಲ್ಲಿ ಗ್ರಾನೈಟ್ ಶಿಲೆಯಿಂದ ತಯಾರಿಸಲಾದ ನಂದಿ ಇದೆ. ನವರಂಗದ ಉತ್ತರದ ಪ್ರವೆಶದ್ವಾರದಲ್ಲಿ ಶೈವದ್ವಾರಪಾಲಕರಿದ್ದು, ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ . ಕ್ರಿ.ಶ. ೧೪೯೬ರಲ್ಲಿ ಈ ವೀರಭದ್ರ ದೇವರಿಗೆ ದಾನ ಕೊಟ್ಟ ವಿವರಣೆ ಇದೆ[೧೦೭].

ಈ ಮೇಲಿನ ವಾಸ್ತು ಲಕ್ಷಣಗಳು ವಿಜಯನಗರ ಕಾಲದಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. ಹಾಗಾಗಿ ಈ ದೇವಾಲಯ ವಿಜಯನಗರ ಕಾಲದ್ದೆಂದು ಹೇಳಬಹುದು. ಈ ದೇವಾಲಯದ ಸಮೀಪವೇ ಬಸವೇಶ್ವರ ದೇವಾಲಯ ವೊಂದಿದ್ದು ಅದರ ವಾಸ್ತು ಲಕ್ಷಣಗಳು ಸಹ ಇದೇ ದೇವಾಲಯದಂತಿವೆ.

೪.೨.೨. ವೈಷ್ಣವ ದೇವಾಲಯಗಳು :

' ದಾವಣಗೆರೆ ಜಿಲ್ಲೆಯಲ್ಲಿ ಶೈವ ದೇವಾಲಯಗಳಂತೆ ವೈಷ್ಣವ ದೇವಾಲಯಗಳು, ನೀಲಗುಂದ, ಜಿಗಳಿ, ದಾಗಿನಕಟ್ಟೆ, ದೇವರಹಳ್ಳಿ, ವಾಸನ, ಮಾಯಾಕೊಂಡ, ನೀರ್ಥಡಿ ಮೊದಲಾದೆಡೆ ಕಂಡುಬರುತ್ತವೆ. ವಾಸ್ತು ಕಲೆಯ ಕಲಾನುಕ್ರಮದ ಬೆಳವಣಿಗೆಯನ್ನು ಗುರುತಿಸಲು ವೈಷ್ಣವ ದೇವಾಲಯಗಳು ಸಹಾಯಕವಾಗಿರುವುದರಿಂದ ಆ ಕುರಿತು ಈ ಕೆಳಗಿನಂತೆ ವಿವರಿಸಲಾಗಿದೆ.

೧. ಊರು : ನೀಲಗುಂದ

೨. ತಾಲೂಕು : ಹರಪನಹಳ್ಳಿ

೩. ಹೆಸರು : ಅನಂತಶಯನ

೪. ಸ್ಥಳ : ಗ್ರಾಮದ ಪಶ್ಚಿಮ ಭಾಗದಲ್ಲಿ (ಲಕ್ಷ್ಮಿ ನಾರಾಯಣ ದೇವಾಲಯದ ಮುಂದೆ)

೫. ಅಭಿಮುಖ : ಪೂರ್ವಾಭಿಮುಖ

೬. ಕಾಲ : ಕ್ರಿ.ಶ. ೧೧ನೇ ಶತಮಾನದ ಕೊನೆಯ ಭಾಗ

೭. ಶಿಖರ ಶೈಲಿ : ಶಿಖರ ಉಳಿದಿಲ್ಲ

೮. ಬಳಸಿದ ಶಿಲೆ : ಹಸಿರು ಬಳಪದ ಶಿಲೆ

ಈ ದೇವಾಲಯ ಗರ್ಭಗುಡಿ, ಅಂತರಾಳ, ನವರಂಗ ಹಾಗು ಮುಖ ಮಂಟಪದಿಂದ ಕೂಡಿದೆ.

ಅಧಿಷ್ಠಾನವು ಉಪಾನ, ಪದ್ಮ , ಕಪೋತ ವೇದಿಗಳಿಂದ ಕೂಡಿದೆ. ಗರ್ಭಗುಡಿ ಹಿಂಭಾಗ ಮತ್ತು ಅಂತರಾಳದ ಸ್ವಲ್ಪ ಭಾಗವನ್ನು ಹೊರತುಪಡಿಸಿದರೆ ಉಳಿದ ಭಿತ್ತಿಯ ಬಹುತೇಕ ಭಾಗ ಬಿದ್ದು ಹೋಗಿರುವುದರಿಂದ ಆ ಭಾಗದ ಅಲಂಕರಣೆಗಳಾಗಲಿ, ಶಿಲ್ಪಗಳಾಗಲಿ ಗೋಚರಿಸುವುದಿಲ್ಲ. ಮೂಲಗೋಡೆ ಉಳಿದಿರುವ ಭಾಗದಲ್ಲಿ ಅರೆಗಂಭಗಳಿವೆ. ಪ್ರಸ್ತರದಲ್ಲಿನ ಕಪೋತ ಭಾಗವು ಸ್ವಲ್ಪ ಮುಂದೆ ಚಾಚಿದ ರೀತಿ ಕಾಣಬರುತ್ತದೆ. ಈ ದೇವಾಲಯದ ಮೇಲೆ ಶಿಖರವಿಲ್ಲ.

ದೇವಾಲಯದ ಗರ್ಭಗುಡಿಯು ಆಯತಾಕಾರವಾಗಿದ್ದು, ಅದರಲ್ಲಿ ಅನಂತಶಯನ (ಶೇಷಶಯನ) ಮೂರ್ತಿ ಇದೆ. ಇದರ ಮುಚ್ಚಿಗೆಯಲ್ಲಿ ಪದ್ಮವಿದ್ದು, ದ್ವಾರವು ಸರಳವಾಗಿದೆ. ಇಲ್ಲಿನ ಅಂತರಾಳದಲ್ಲಿ ಯಾವ ಮೂರ್ತಿಗಳಿರದೇ ಇದರ ದ್ವಾರ ಸಾಧಾರಣವಾಗಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ನವರಂಗದಲ್ಲಿ ನಾಲ್ಕು ಸಾಧಾರಣ ಅಲಂಕೃತ ಚೌಕ ಹಾಗು ವೃತ್ತಾಕಾರದ ಕಂಭಗಳಿವೆ. ಈ ಕಂಭಗಳ ಮೇಲಿನ ಬೋದಿಗೆಗಳು ತರಂಗದ ರೀತಿ ಮೇಲಕೆದ್ದಿದ್ದು, ತರಂಗ ಬೋದಿಗೆಗಳೆನಿಸಿವೆ. ಮೇಲಿನ ಮುಚ್ಚಿಗೆಯಲ್ಲಿ ಪದ್ಮವಿದೆ. ಇದರ ದ್ವಾರವು ಪುಷ್ಪ, ಲತಾ, ಸ್ತಂಭ ಶಾಖೆಗಳಿಂದ ಕೂಡಿದೆ. ದ್ವಾರದಲ್ಲಿ ಗಜಲಕ್ಷ್ಮಿಯನ್ನು ಚೌಕಾಕಾರದ ಪಟ್ಟಿಕೆಯಲ್ಲಿ ಕೆತ್ತಲಾಗಿದೆ. ನವರಂಗದ ಮುಂಭಾಗದ ಪೂರ್ವ ಭಾಗಕ್ಕೆ ಮುಖಮಂಟಪವಿದ್ದು, ಅದು ಅರೆಗಂಭಗಳಿಂದ ಹಾಗು ನಾಲ್ಕು ಸಾಧಾರಣ ಅಲಂಕೃತ ಕಂಭಗಳಿಂದ ಕೂಡಿದ್ದು, ಅದರ ಮುಚ್ಚಿಗೆಯಲ್ಲಿ ಪದ್ಮವಿದೆ.ಇದು ಕಲ್ಯಾಣಿ ಚಾಲುಕ್ಯರ ಕಾಲಾವಧಿಯಲ್ಲಿ ನಿರ್ಮಿತವಾಗಿರಬಹುದೆಂದು ವಾಸ್ತು ಲಕ್ಷಣಗಳನ್ನಾಧರಿಸಿ ಹೇಳಬಹುದು[೧೦೮].

೧. ಊರು : ಜಿಗಳಿ
೨. ತಾಲೂಕು : ಹರಿಹರ
೩. ಹೆಸರು : ರಂಗನಾಥ
೪. ಸ್ಥಳ : ಗ್ರಾಮದ ಪೂರ್ವಭಾಗಕ್ಕೆ
೫. ಅಭಿಮುಖ : ಮುಖ್ಯ ಗರ್ಭಗುಡಿ ಉತ್ತರಾಭಿಮುಖವಾಗಿದ್ದು, ಪೂರ್ವದಲ್ಲಿ ಮತ್ತೊಂದು ದ್ವಾರವಿದೆ.
೬. ಕಾಲ : ಕ್ರಿ.ಶ. ಸು. ೧೧ನೇ ಶತಮಾನದ ಅಂತ್ಯ ಭಾಗ
೭. ಶಿಖರ ಶೈಲಿ : ಮೂಲ ಶಿಖರವಿಲ್ಲ
೮. ಬಳಸಿದ ಶಿಲೆ : ಬಳಪದ ಶಿಲೆ ಮತು ಚಪ್ಪಡಿ ಕಲ್ಲು

ಈ ದೇವಾಲಯಕ್ಕೆ ಉತ್ತರ ಹಾಗು ಪಶ್ವಿಮ ದಿಕ್ಕಿನಲ್ಲಿ ಗರ್ಭಗುಡಿಗಳಿದ್ದು, ಅವುಗಳ ಮುಂದೆ ಅಂತರಾಳಗಳಿವೆ. ಈ ಅಂತರಾಳಗಳ ಮುಂದೆ ಒಂದೇ ನವರಂಗವಿದ್ದು, ಉತ್ತರ ಮತ್ತು ಪೂರ್ವ ದಿಕ್ಕಿನಲ್ಲಿ ಎರಡು ದ್ವಾರಗಳಿವೆ.

ಈ ದೇವಾಲಯದ ಹೊರಭಾಗದ ಅಧಿಷ್ಠಾನವು ಸರಳವಾಗಿದೆ .ಹೊರಭಾಗದ ಭಿತ್ತಿಯು ಸ್ಥಳೀಯ ಕಗ್ಗಲ್ಲುಗಳಿಂದ ನಿರ್ಮಿತವಾಗಿದ್ದು, ಭಿತ್ತಿ ಭಾಗದಲ್ಲಿ ಯಾವುದೇ ಶಿಲ್ಪಗಳಿಲ್ಲ. ಭಿತ್ತಿಯ ಮೇಲಿನ ಕಪೋತವೀಗ ಕಾಣಬರುತ್ತಿಲ್ಲ. ಉತ್ತರ ಗರ್ಭಗುಡಿ ಮೇಲೆ ಇತ್ತೀಚೆಗೆ ಇಟ್ಟಿಗೆಯಿಂದ ನಿರ್ಮಿಸಿದ ಶಿಖರೋಪಾದಿಯ ಕಟ್ಟಡವಿದೆ.

ಉತ್ತರದ ಮುಖ್ಯ ಗರ್ಭಗುಡಿ ಚೌಕಾಕಾರವಾಗಿದ್ದು ,ಅದರಲ್ಲಿ ಸ್ಥಾನಿಕ ವಿಷ್ಣುಮೂರ್ತಿ ಇದೆ . ಗರ್ಭಗುಡಿಯ ಮುಚ್ಚಿಗೆಯಲ್ಲಿ ಅರಳಿದ ಪದ್ಮವಿದೆ. ಇದರ ದ್ವಾರದ ಕೆಳಭಾಗದಲ್ಲಿ ಪುಷ್ಪ, ಫಲಗಳನ್ನು ಹಿಡಿದು ನಿಂತಿರುವ ಚಾಮರಧಾರಣಿಯರಿದ್ದಾರೆ. ಈ ಚಾಮರದಾರಣಿಯರನ್ನು ಸ್ತಂಭಗಳ ಮೇಲಿನ ಲತಾ ತೋರಣದ ಮಧ್ಯದಲ್ಲಿ ಕೆತ್ತಲಾಗಿದೆ. ದ್ವಾರವು ರತ್ನ, ಸ್ತಂಭ, ಪುಷ್ಪ ದಳಗಳ ಶಾಖೆಯಿಂದ ಕೂಡಿದ್ದು, ಮೊದಲಿನ ಶಾಖೆ ಲಲಾಟ ಬಿಂಬದವರೆಗೂ ಮುಂದುವರೆದಿದೆ. ಲಲಾಟ ಬಿಂಬದಲ್ಲಿ ಗಜಲಕ್ಷ್ಮಿಯನ್ನು ಚೌಕಾಕಾರದ ಪಟ್ಟಿಕೆಯಲ್ಲಿ ಕೆತ್ತಲಾಗಿದೆ. ಈ ಗರ್ಭಗುಡಿಯ ಮುಂದಿನ ಅಂತರಾಳವು ತೆರೆದ ರೀತಿಯಲ್ಲಿದೆ.

ಪಶ್ಚಿಮ ಭಾಗದ ಗರ್ಭಗುಡಿ ಚೌಕಾಕಾರವಾಗಿದ್ದು, ಅದರಲ್ಲಿ ಲಿಂಗವಿದೆ. ಇದರ ದ್ವಾರದ ಪೇದ್ಯಾಭಾಗದಲ್ಲಿ ಕುಂಭಗಳ ಅಲಂಕಾರವಿದೆ. ದ್ವಾರವು ಪುಷ್ಪ, ಲತೆಗಳಿಂದ ಕೂಡಿದ ಏಕ ಶಾಖೆ ಪಟ್ಟಿಯಿದೆ. ಲಲಾಟದ ಆಯತಾಕಾರದ ಪಟ್ಟಿಕೆಯಲ್ಲಿ ಗಜಲಕ್ಷ್ಮಿ ಶಿಲ್ಪವಿದ್ದು, ಗಜಲಕ್ಷ್ಮಿಯ ಎರಡೂ ಬದಿಗೂ ಅರೆಕಂಭ ಗಳನ್ನು ಕೆತ್ತಲಾಗಿದೆ. ಈ ಗರ್ಭಗುಡಿಯ ಮುಂದಿನ ಅಂತರಾಳವು ಆಯತಾಕಾರವಾಗಿದ್ದು, ಅದರಲ್ಲಿ ನಂದಿ ಇದೆ. ಅಂತರಾಳದಲ್ಲಿ ಗಣೇಶನ ಶಿಲ್ಪವಿದೆ. ಇದರ ದ್ವಾರದ ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದ್ದು, ಅದರ ಎರಡೂ ಬದಿಗೂ ಕುಂಭಗಳನ್ನು ಕೆತ್ತಲಾಗಿದೆ.

ನವರಂಗದಲ್ಲಿ ನಾಲ್ಕು ಕಂಭಗಳಿದ್ದು, ಅವು ಚೌಕ, ಅಷ್ಟ ಮತ್ತು ಚೌಕಾಕಾರವಾಗಿವೆ. ನವರಂಗದ ವಾಯುವ್ಯ ಭಾಗದಲ್ಲಿನ ಕಂಭವೊಂದರ ಚೌಕಪಟ್ಟಿಕೆಯಲ್ಲಿ ಆನೆಯ ಮೇಲೆ ಕುಳಿತಿರುವ ಸ್ತ್ರೀ ಶಿಲ್ಪ ಹಾಗು ಆನೆಯ ಮೇಲೆ ಕುಳಿತ ಮಾವುತನ ಶಿಲ್ಪವಿದೆ. ಇಲ್ಲಿನ ಬೋದಿಗೆಗಳು ಅಲಂಕಾರಯುಕ್ತವಾಗಿಲ್ಲ. ನವರಂಗದ ಮುಚ್ಚಿಗೆಯಲ್ಲಿ ಪದ್ಮ, ಏಡಿ, ನಾಗಬಂಧಗಳನ್ನು ಕೆತ್ತಲಾಗಿದೆ. ನವರಂಗದ ಉತ್ತರ ಹಾಗು ಪೂರ್ವ ಭಾಗದ ಎರಡು ದ್ವಾರಗಳೂ ಸರಳವಾಗಿವೆ. ಪೂರ್ವಭಾಗದ ದ್ವಾರದ ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪ ಕೆತ್ತಲಾಗಿದೆ. ಈ ದೇವಾಲಯದ ವಾಸ್ತುಲಕ್ಷಣಗಳ ಆಧಾರದ ಮೇಲೆ ಇದು ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿ ನಿರ್ಮಾಣವಾಗಿದೆ ಎಂದು ಹೇಳಬಹುದು.

೧. ಊರು : ಬೆಳಗುತ್ತಿ
೨. ತಾಲೂಕು : ಹೊನ್ನಾಳಿ
೩. ಹೆಸರು : ಕೇಶವ
೪. ಸ್ಥಳ : ಬಸ್ ನಿಲ್ದಾಣದ ಉತ್ತರ ಭಾಗಕ್ಕೆ, ಕೆರೆಯ ಹಿಂಬದಿಯಲ್ಲಿದೆ.
೫. ಅಭಿಮುಖ : ಪೂರ್ವಾಭಿಮುಖ
೬. ಕಾಲ : ಕ್ರಿ.ಶ. ೧೧ನೇ ಶತಮಾನದ ಕೊನೆಯ ಭಾಗ
೭. ಶಿಖರ ಶೈಲಿ : ಕದಂಬ ನಾಗರ
೮. ಬಳಸಿದ ಶಿಲೆ : ಬಳಪದ ಶಿಲೆ

ಈ ದೇವಾಲಯ ಮೂರು ಗರ್ಭಗುಡಿ ಮತ್ತು ಮೂರು ಅಂತರಾಳಗಳನ್ನು ಪಶ್ಚಿಮ, ಉತ್ತರ ಮತ್ತು ದಕ್ಷಿಣ ಭಾಗದಲ್ಲಿ ಹೊಂದಿದೆ. ಇವೆಲ್ಲಕ್ಕೂ ಹೊಂದಿಕೊಂಡಂತೆ ಒಂದೇ ನವರಂಗವಿದೆ.

ಹೊರಭಾಗದ ಅಧಿಷ್ಠಾನವು ಉಪಾನ, ಪದ್ಮ, ಕುಮುದ, ಕಪೋತಗಳಿಂದ ಕೂಡಿದೆ. ಈ ಭಾಗದಲ್ಲಿ ಯಾವುದೇ ಅಲಂಕರಣೆಗಳಿಲ್ಲ. ದೇವಾಲಯದ ಭಿತ್ತಿಯ ಮಧ್ಯ ಭಾಗದಲ್ಲಿನ ಉಬ್ಬು ಪಟ್ಟಿಯೊಂದರಲ್ಲಿ ಪುಷ್ಪಗಳ ಅಲಂಕರಣೆ ಹೊರತುಪಡಿಸಿ ಇನ್ಯಾವುದೇ ಶಿಲ್ಪಗಳು ಆ ಭಾಗದಲ್ಲಿ ಕಂಡುಬರುತ್ತಿಲ್ಲ. ಭಿತ್ತಿಯ ಮೇಲಿನ ಕಪೋತ ಭಾಗವು ದೇವಾಲಯದ ಸುತ್ತಲೂ ಹೊರಚಾಚಿ ಕೆಳಬಾಗಿದಂತಿದೆ. ಇದರಲ್ಲಿ ಪುಷ್ಪಗಳ ಅಲಂಕರಣೆ ಮಾಡಲಾಗಿದೆ. ಪಶ್ಚಿಮ ಹಾಗು ದಕ್ಷಿಣ ಗರ್ಭಗುಡಿಗಳ ಮೇಲಿನ ಶಿಖರಗಳು ಮಾತ್ರ ಈಗ ಕಾಣಬರುತ್ತಿದ್ದು, ಉತ್ತರ ಗರ್ಭಗುಡಿ ಮೇಲಿನ ಶಿಖರ ಕಾಣಬರುತ್ತಿಲ್ಲ. ಇಲ್ಲಿನ ಎರಡೂ ಶಿಖರಗಳು ಕದಂಬನಾಗರ ಶೈಲಿಯಲ್ಲಿದ್ದು, ಒಂಭತ್ತು ತಳಗಳನ್ನೊಳಗೊಂಡಿವೆ. ಶಿಖರಗಳ ಮೇಲೆ ಕಳಶ , ಸ್ತೂಪಿಗಳಿವೆ.

ಪಶ್ಚಿಮ ಗರ್ಭಗುಡಿಯು ಚೌಕಾಕಾರವಾಗಿದ್ದು, ಅದರಲ್ಲಿ ಲಿಂಗವಿದೆ. ಇದರ ಮುಚ್ಚಿಗೆಯಲ್ಲಿ ಕಮಲ ಇದೆ. ದ್ವಾರದ ಪೇದ್ಯಾ ಭಾಗದಲ್ಲಿ ಶಂಖ ಚಕ್ರಹಿಡಿದು ಅಭಯ ಹಾಗು ವರದ ಮುದ್ರೆಯಲ್ಲಿ ಸ್ಥಾನಿಕವಾಗಿರುವ ವೈಷ್ಣವ ದ್ವಾರಪಾಲಕರಿದ್ದಾರೆ. ಅವರ ಬಳಿ ಚಾಮರಧಾರಿಣಿಯರಿದ್ದಾರೆ. ಇಲ್ಲಿನ ದ್ವಾರವು

[illegible]

[illegible]

[illegible]

[illegible]

[illegible]

ಅಲಂಕರಿಸದೇ ಇರುವ ಶಾಖೆಗಳಿಂದ ಕೂಡಿದೆ. ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಈ ಗರ್ಭಗುಡಿಯ ಮುಂದಿನ ಅಂತರಾಳವು ಆಯತಾಕಾರವಾಗಿದೆ. ದ್ವಾರದ ಕೆಳಭಾಗದಲ್ಲಿ ವೈಷ್ಣವ ದ್ವಾರಪಾಲಕರಿದ್ದು, ಅವರ ಬದಿಗೆ ಚಾಮರಧಾರಿ ಸ್ತ್ರೀಯರಿದ್ದಾರೆ. ಇದರ ದ್ವಾರವು ವಿದ್ಯಾಧರ, ಪುಷ್ಪ, ಸ್ತಂಭ ಹಾಗು ಪುಷ್ಪಶಾಖೆಗಳನ್ನೊಳಗೊಂಡಿದೆ. ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವನ್ನು ಕೆತ್ತಲಾಗಿದೆ. ನವರಂಗದ ಉತ್ತರದಲ್ಲಿನ ಗರ್ಭಗುಡಿಯು ಚೌಕಾಕಾರವಾಗಿದ್ದು, ಅಲ್ಲಿ ಯಾವ ಮೂರ್ತಿಯೂ ಕಾಣಬರುತ್ತಿಲ್ಲ. ಇದರ ದ್ವಾರವು ಸ್ತಂಭ ಶಾಖವನ್ನು ಮಾತ್ರ ಹೊಂದಿದೆ. ಇದರ ಮುಂದಿನ ಅಂತರಾಳವು ತೆರೆದ ರೀತಿಯಲ್ಲಿದೆ. ನವರಂಗದ ದಕ್ಷಿಣದ ಗರ್ಭಗುಡಿಯು ಚೌಕಾಕಾರವಾಗಿದ್ದು, ಇಲ್ಲಿಯೂ ಮೂಲ ಮೂರ್ತಿ ಕಾಣಬರುತ್ತಿಲ್ಲ. ಇದರ ಮುಂದಿನ ಅಂತರಾಳವೂ ಆಯತಾಕಾರವಾಗಿದ್ದು, ತೆರೆದ ರೀತಿಯಲ್ಲಿದೆ.

ನವರಂಗದಲ್ಲಿ ನಾಲ್ಕು ಸುಂದರ ಕಂಭಗಳಿವೆ. ಈ ಕಂಭಗಳ ಕೆಳ ಭಾಗ ಚೌಕಾಕಾರವಾಗಿದ್ದು, ಅದರ ಮೇಲಿನ ಭಾಗ ವೃತ್ತಾಕಾರವಾಗಿವೆ. ವೃತ್ತಾಕಾರದ ಭಾಗದಲ್ಲಿ ಬಳೆ, ಗಂಟೆ ಹಾಗು ಕುಂಬಗಳ ರೀತಿ ಅಲಂಕರಣವಿದ್ದು, ಅವುಗಳ ಮೇಲೆ ಮಾಲಾಲಂಕರವಿದೆ. ಈ ಕಂಭಗಳ ಮೇಲಿನ ಬೋದಿಗೆಗಳು ಪುಷ್ಪಗಳಿಂದ ಅಲಂಕೃತವಾಗಿವೆ. ಈ ನಾಲ್ಕು ಕಂಭಗಳ ಮೇಲಿನ ಮುಚ್ಚಿಗೆಯು ಅಷ್ಟಕೋನಗಳಿಂದ ಕೂಡಿದ್ದು, ಈ ಅಷ್ಟಕೋನಗಳಲ್ಲಿ ಕೀರ್ತಿ ಮುಖಗಳನ್ನು ಕೆತ್ತಲಾಗಿದೆ. ಈ ಅಷ್ಟಕೋನಗಳ ಮಧ್ಯದ ಚೌಕಾಕಾರದ ಪಟ್ಟಿಕೆಯಲ್ಲಿ ಅರಳಿದ ತಾವರೆಯನ್ನು ಹಾಗು ಅಲ್ಲಲ್ಲಿ ಚಿಕ್ಕ ಚಿಕ್ಕ ಪುಷ್ಪಗಳನ್ನು ಕೆತ್ತಲಾಗಿದೆ. ನವರಂಗಕ್ಕೆ ಅಭಿಮುಖವಾಗಿರುವ ಪಶ್ಚಿಮ, ಉತ್ತರ, ದಕ್ಷಿಣ ಗರ್ಭಗುಡಿಗಳ ಮುಂದಿನ ಅಂತರಾಳಗಳ ಎರಡೂ ಬದಿಗೂ ಕೋಷ್ಠಗುಡಿಗಳಿವೆ. ಹಾಗೆಯೇ ಪೂರ್ವ ಪ್ರವೇಶ ದ್ವಾರದ ಎರಡೂ ಬದಿಗೂ ಎರಡು ಕೋಷ್ಠಗುಡಿಗಳಿವೆ. ಈ ಕೋಷ್ಠಗುಡಿಗಳ ದ್ವಾರವು ಸಾಧಾರಣವಾಗಿದೆ. ಪಶ್ಚಿಮ ಅಂತರಾಳದ ಎಡ ಕೋಷ್ಠಗುಡಿಯಲ್ಲಿ ಗಣೇಶ, ಬಲ ಕೋಷ್ಠಗುಡಿಯಲ್ಲಿ ಮಹಿಷಾಸುರ ಮರ್ಧಿನಿ ಮೂರ್ತಿಗಳಿವೆ. ಉಳಿದ ಕೋಷ್ಠಗುಡಿಗಳಲ್ಲಿ ಯಾವ ಮೂರ್ತಿಗಳಿಲ್ಲ.

ನವರಂಗದ ಪ್ರವೇಶ ದ್ವಾರವು ಪೂರ್ವಕ್ಕಿದ್ದು, ದ್ವಾರದ ಪೇದ್ಯಾ ಭಾಗದಲ್ಲಿ ಶಂಖ, ಚಕ್ರ, ಗದೆಗಳನ್ನು ಹಿಡಿದು ಅಭಯ ಮುದ್ರೆಯಲ್ಲಿರುವ ವೈಷ್ಣವ ದ್ವಾರಪಾಲಕರಿದ್ದು, ಇವರ ಬದಿಗೆ ಚಾಮರಧಾರಿಣಿಯರಿದ್ದಾರೆ. ಅದರ ದ್ವಾರವು ವಿದ್ಯಾಧರ, ವಲ್ಲಿ, ಪುಷ್ಪ, ಸ್ತಂಭ, ಪುಷ್ಪ ಶಾಖೆಗಳಿಂದ ಅಲಂಕೃತವಾಗಿವೆ. ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವನ್ನು ಚೌಕಾಕಾರದ ಪಟ್ಟಿಕೆಯಲ್ಲಿ ಕೆತ್ತಲಾಗಿದೆ. ಈ ದೇವಾಲಯದ ವಾಸ್ತು ಲಕ್ಷಣಗಳನ್ನು ಗಮನದಲ್ಲಿಟ್ಟುಕೊಂಡು ಇದು ಕಲ್ಯಾಣಿ ಚಾಲುಕ್ಯರ ಶೈಲಿಯಲ್ಲಿ ನಿರ್ಮಿತವಾಗಿದೆ ಎಂದು ಹೇಳಬಹುದು. ಇದೇ ಅಭಿಪ್ರಾಯವನ್ನು ಕೆಲವರು ವ್ಯಕ್ತಪಡಿಸಿದ್ದಾರೆ[೧೦೯].

೧. ಊರು : ನೀಲಗುಂದ

೨. ತಾಲೂಕು : ಹರಪನಹಳ್ಳಿ

೩. ಹೆಸರು : ಲಕ್ಷ್ಮಿ ನಾರಾಯಣ

೪. ಸ್ಥಳ : ಗ್ರಾಮದ ಪಶ್ಚಿಮ ಭಾಗದಲ್ಲಿ

೫. ಅಭಿಮುಖ : ಪೂರ್ವಾಭಿಮುಖ

೬. ಕಾಲ : ಕ್ರಿ.ಶ. ೧೨ನೇ ಶತಮಾನದ ಮೊದಲ ಭಾಗ[೧೧೦]

೭. ಶಿಖರ ಶೈಲಿ : ಮೂಲ ಶಿಖರ ಉಳಿದಿಲ್ಲ

೮. ಬಳಸಿದ ಶಿಲೆ : ಬಳಪದ ಶಿಲೆ

ಈ ದೇವಾಲಯ ಗರ್ಭಗುಡಿ, ಅಂತರಾಳ ಹಾಗು ನವರಂಗಗಳನ್ನೊಳಗೊಂಡಿದೆ.

ಹೊರ ಭಾಗದ ಅಧಿಷ್ಠಾನವು ಉಪಾನ ,ಪದ್ಮ , ತ್ರಿಪಟ್ಟ ಕುಮುದ , ಮುಂದೆ ಚಾಚಿದ ಕಪೋತಗಳಿಂದ ಕೂಡಿದೆ. ಅಧಿಷ್ಠಾನದ ಈ ಭಾಗವು ಮಕರಗಳ ತಲೆಯಿಂದ ಹಾಗು ಪದ್ಮಗಳಿಂದ ಅಲಂಕರಿಸಲ್ಪಟ್ಟಿದೆ. ಭಿತ್ತಿಯ ದಕ್ಷಿಣ ಹಾಗು ಪಶ್ಚಿಮ ಭಾಗದಲ್ಲಿ ಮಾತ್ರ ಮೂಲ ಭಿತ್ತಿಯು ಉಳಿದಿದ್ದು, ಅದರ ಮೇಲೆ ಅರೆಗಂಬಗಳನ್ನು ಕೆತ್ತಲಾಗಿದೆ. ಪ್ರವೇಶ ದ್ವಾರದ ಎರಡೂ ಬದಿಯ ಭಿತ್ತಿಯನ್ನು ಈಚೆಗೆ ಒರಟುಕಲ್ಲುಗಳಿಂದ ಕಟ್ಟಿದ್ದಾರೆ. ಭಿತ್ತಿಯ ಮೇಲಿನ ಪ್ರಸ್ತರ ಹಾಗು ಶಿಖರ ಭಾಗಗಳು ಈಗ ಉಳಿದಿಲ್ಲ.

ಗರ್ಭಗುಡಿಯಲ್ಲಿದ್ದ ಲಕ್ಷ್ಮಿ ನಾರಾಯಣ ಮೂರ್ತಿಯನ್ನು ಸ್ಥಳೀಯರು ಹೇಳುವಂತೆ ಇದೇ ಗ್ರಾಮದ ಭೀಮಲಿಂಗೇಶ್ವರ ದೇವಾಲಯದಲ್ಲಿ ಈಗ ಇಡಲಾಗಿದೆ. ಗರ್ಭಗೃಹದ ದ್ವಾರದ ಸ್ತಂಭ ಶಾಖೆಯೊಂದನ್ನು ಹೊರತುಪಡಿಸಿ ಉಳಿದ ಶಾಖೆಗಳನ್ನು ಅಲಂಕರಿಸಿಲ್ಲ. ಅಂತರಾಳದಲ್ಲಿ ಯಾವುದೇ ಮೂರ್ತಿಗಳಿಲ್ಲ. ಇದರ ದ್ವಾರದ ಪೇದ್ಯಾ ಭಾಗದಲ್ಲಿ ಪೂರ್ಣ ಕುಂಭಗಳನ್ನು ಕೆತ್ತಲಾಗಿದೆ. ದ್ವಾರದಲ್ಲಿ ಸ್ತಂಭ ಶಾಖೆಯೊಂದನ್ನು ಮಾತ್ರ ಅಲಂಕರಿಸಿ, ಉಳಿದ ಶಾಖೆಗಳನ್ನು ಹಾಗೇ ಬಿಡಲಾಗಿದೆ. ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ.

ನವರಂಗದಲ್ಲಿ ನಾಲ್ಕು ಸಾಲಿನ ಹದಿನಾರು ಕಂಭಗಳಿವೆ. ಮಧ್ಯದ ನಾಲ್ಕು ಕಂಭಗಳು ವೃತ್ತ-ಚೌಕ-ಅಷ್ಟಕೋನಾಕಾರದಲ್ಲಿವೆ. ಬೋದಿಗೆಗಳು ಸರಳವಾಗಿದ್ದು, ಇಲ್ಲಿನ ಮುಚ್ಚಿಗೆಯಲ್ಲಿ ಪದ್ಮವಿದೆ. ಇದರ ಪ್ರವೇಶ ದ್ವಾರವು ರತ್ನ, ಲತಾ , ಸ್ತಂಭ ಮತ್ತು ಲತಾ ಶಾಖೆಗಳಿಂದ ಅಲಂಕೃತವಾಗಿದೆ. ಈ ದೇವಾಲಯದ ವಾಸ್ತು ಲಕ್ಷಣಗಳಿಂದ ಇದು ಕಲ್ಯಾಣಿ ಚಾಲುಕ್ಯರ ಕಾಲಾವಧಿಯಲ್ಲಿ ನಿರ್ಮಿತವಾಗಿದೆ ಎಂದು ಹೇಳಬಹುದು[೧೧೧].

೧. ಊರು : ವಾಸನ
೨. ತಾಲೂಕು : ಹರಿಹರ
೩. ಹೆಸರು : ಕೇಶವ
೪. ಸ್ಥಳ : ಗ್ರಾಮದ ವಾಯುವ್ಯ ಭಾಗದ ನದಿಯ ಬಳಿ ಜಮೀನೊಂದರಲ್ಲಿದೆ.
೫. ಅಭಿಮುಖ : ಪೂರ್ವಾಭಿಮುಖ
೬. ಕಾಲ : ಕ್ರಿ.ಶ. ಸು. ೧೨ನೇ ಶತಮಾನದ ಕೊನೆಯ ಭಾಗ
೭. ಶಿಖರ ಶೈಲಿ : ಶಿಖರವಿಲ್ಲ
೮. ಬಳಸಿದ ಶಿಲೆ : ಹಸರು ಬಳಪದ ಶಿಲೆ

ಈ ದೇವಾಲಯದಲ್ಲೀಗ ಗರ್ಭಗುಡಿ ಮಾತ್ರ ಉಳಿದಿದೆ.

ಈ ದೇವಾಲಯದ ಹೊರಭಾಗದಲ್ಲಿನ ಅಧಿಷ್ಠಾನ ಭೂಮಿಯಲ್ಲಿ ಹೂತಿರುವುದರಿಂದ ಅದರಲ್ಲಿನ ವಿವಿಧ ಭಾಗಗಳು ಗೋಚರಿಸುವುದಿಲ್ಲ. ಭಿತ್ತಿಯು ಸರಳವಾಗಿದ್ದು, ಅದರಲ್ಲಿ ಯಾವುದೇ ಅಲಂಕಾರವಿಲ್ಲ. ದೇವಾಲಯದ ಮೇಲಿನ ಶಿಖರವೀಗ ಉಳಿದಿಲ್ಲ. ಚೌಕಾಕಾರವಾಗಿರುವ ಗರ್ಭಗುಡಿಯಲ್ಲಿ ಕೇಶವನಿದ್ದಾನೆ. ಈ ಮೂರ್ತಿಯ ಬಳಿಯೇ ಒಂದು ಲಿಂಗವೂ ಇದೆ. ಇದರ ಮುಚ್ಚಿಗೆ (ವಿತಾನ) ಯಲ್ಲಿ ಪದ್ಮವಿದೆ. ದ್ವಾರವು ರತ್ನ, ಪುಷ್ಪ, ಸ್ತಂಭ, ಲತಾ ಶಾಖೆಗಳಿಂದ ಅಲಂಕೃತವಾಗಿದೆ. ಈ ಎಲ್ಲಾ ಶಾಖೆಗಳು ಲಲಾಟದವರೆಗೂ ಮುಂದುವರಿದಿವೆ. ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವನ್ನು ಕೆತ್ತಲಾಗಿದೆ. ಇತ್ತೀಚೆಗೆ ಪ್ರವೇಶ ದ್ವಾರದ ಮುಂಭಾಗದ ಭಿತ್ತಿಯ ಮೇಲೆ ನಂದಿ, ಷಣ್ಮುಖ, ವಿನಾಯಕನ ಚಿಕ್ಕ ಮೂರ್ತಿಗಳನ್ನು ಇಡಲಾಗಿದೆ. ದೇವಾಲಯದ ಹೊರಭಾಗದಲ್ಲಿ ಮಹಿಷಾಸುರ ಮರ್ಧಿನಿ, ಸಪ್ತ ಮಾತೃಕೆಯರು, ನಂದಿ, ಗಣೇಶನ ಮೂರ್ತಿಗಳು , ವೀರಗಲ್ಲು ಮತ್ತು ಮಾಸ್ತಿಗಲ್ಲುಗಳಿವೆ. ವಾಸ್ತು ಲಕ್ಷಣವನ್ನು ಗಮನದಲ್ಲಿಟ್ಟುಕೊಂಡು, ಇದು ಹೊಯ್ಸಳರ ಕಾಲದಲ್ಲಿ ನಿರ್ಮಿತವಾದ ದೇವಾಲಯವೆಂದು ಹೇಳಬಹುದು.

೧. ಊರು : ಶಂಕರನ ಹಳ್ಳಿ
೨. ತಾಲೂಕು : ದಾವಣಗೆರೆ
೩. ಹೆಸರು : ರಂಗನಾಥ
೪. ಸ್ಥಳ : ಗ್ರಾಮದ ಮಧ್ಯದಲ್ಲಿದೆ.
೫. ಅಭಿಮುಖ : ಪೂರ್ವಾಭಿಮುಖ
೬. ಕಾಲ : ಕ್ರಿ.ಶ. ೧೫ನೇ ಶತಮಾನ[೧೨].
೭. ಶಿಖರ ಶೈಲಿ : ಮೂಲ ಶಿಖರವಿಲ್ಲ
೮. ಬಳಸಿದ ಶಿಲೆ : ಗ್ರಾನೈಟ್

ಈ ದೇವಾಲಯ ಗರ್ಭಗೃಹ, ಅಂತರಾಳ ಮತ್ತು ನವರಂಗಗಳನ್ನೊಳಗೊಂಡಿದೆ. ನವರಂಗದ ಪೂರ್ವ ಮತ್ತು ದಕ್ಷಿಣದಲ್ಲಿ ದ್ವಾರಗಳಿವೆ.

ಈ ದೇವಾಲಯದ ಅಧಿಷ್ಠಾನವು ಉಪಾನ, ಪದ್ಮ, ಕಪೋತಗಳನ್ನೊಳಗೊಂಡಿದೆ. ಹೊರಭಾಗದ ಭಿತ್ತಿಯ ಮುಂಬದಿಯ ಎರಡೂ ಬದಿಗೂ ಗಜದ ಚಿತ್ರಣವಿದ್ದು, ಪಶ್ಚಿಮ, ಉತ್ತರ ಮತ್ತು ದಕ್ಷಿಣ ದಿಕ್ಕಿನ ಹೊರಭಾಗದ ಭಿತ್ತಿಯ ಕೆಲವು ಭಾಗಗಳು ಬಿದ್ದು ಹೋಗಿವೆ. ಭಿತ್ತಿಯಲ್ಲಿ ಮೀನು, ಹಾವುಗಳನ್ನು ಕೆತ್ತಲಾಗಿದೆ. ಪ್ರಸ್ತರದಲ್ಲಿನ ಕಪೋತದ ಭಾಗವು ದೇವಾಲಯದ ಸುತ್ತಲೂ ಮುಂದೆ ಚಾಚಿದ್ದು ಭಾಗಿದ ರೀತಿಯದಲ್ಲಿದೆ. ಮೂಲ ಶಿಖರದ ಭಾಗ ಈಗ ಉಳಿದಿಲ್ಲ. ಪೂರ್ವದ್ವಾರದ ಎದುರಿನಲ್ಲಿ ಗ್ರಾನೈಟ್ ಶಿಲೆಯ ಧ್ವಜ ಸ್ತಂಭವಿದ್ದು, ಅದು ಸರಳವಾಗಿದೆ.

ಗರ್ಭಗೃಹ ಚೌಕಾಕಾರದಲ್ಲಿದ್ದು, ಸ್ಥಳೀಯರು ಅದರಲ್ಲಿನ ಒಂದು ಕಲ್ಲಿನ ರೂಪವನ್ನು ಶ್ರೀರಂಗನಾಥ ಎಂದು ಪೂಜಿಸುತ್ತಾರೆ. ಇದರ ಮುಚ್ಚಿಗೆಯಲ್ಲಿ ಅಲಂಕರಣವಿಲ್ಲ. ದ್ವಾರದ ಕೆಳಭಾಗದಲ್ಲಿ ವೈಷ್ಣವ ದ್ವಾರಪಾಲಕರಿದ್ದು, ದ್ವಾರವು ಅಲಂಕಾರಯುಕ್ತವಾಗಿರದೆ ಸರಳವಾಗಿದೆ. ಅಂತರಾಳವು ಆಯತಾಕಾರವಾಗಿದ್ದು, ಅದರಲ್ಲಿ ಯಾವ ಮೂರ್ತಿಗಳಿಲ್ಲ. ಇದರ ದ್ವಾರವೂ ಸಹ ಸರಳವಾಗಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯು ಪದ್ಮಾಸನದಲ್ಲಿ ಆಸೀನವಾಗಿರುವಂತೆ ಕೆತ್ತಲಾಗಿದೆ.

ನವರಂಗದಲ್ಲಿ ನಾಲ್ಕು ಗ್ರಾನೈಟ್ ಶಿಲೆಯ ಕಂಭಗಳಿದ್ದು, ಈ ಕಂಭಗಳ ಸುತ್ತಲೂ ಭಕ್ತ, ಆಂಜನೇಯ, ಆನೆ, ಹಾವಾಡಿಗ, ವೇಣುಗೋಪಾಲ, ಗಣಪತಿ, ಶಂಖಗಳ ಶಿಲ್ಪಗಳನ್ನು ಕೆತ್ತಲಾಗಿದೆ. ಈ ಕಂಭಗಳ ಮೇಲಿನ ಬೋದಿಗೆಯು ಪುಷ್ಪಗಳಿಂದ ಅಲಂಕೃತವಾಗಿದ್ದು, ಬೋದಿಗೆಯ ನಾಲ್ಕು ದಿಕ್ಕಿನಲ್ಲೂ ತಾವರೆಯ ಮೊಗ್ಗು ಇಳಿಬಿದ್ದ ರೀತಿಯ ಅಲಂಕಾರವಿದೆ. ಈ ಕಂಭಗಳ ಮಧ್ಯದ ಮುಚ್ಚಿಗೆಯಲ್ಲಿ ಕಮಲವಿದ್ದು, ಅದರ ಕೆಳ ಪಟ್ಟಿಯ ನಾಲ್ಕು ದಿಕ್ಕಿನಲ್ಲೂ ಪಕ್ಷಿಗಳ ಸಾಲಿವೆ. ನವರಂಗದ ಉತ್ತರ ಮತ್ತು ದಕ್ಷಿಣ ದಿಕ್ಕಿನ ಒಳ ಭಿತ್ತಿಯಲ್ಲಿ ನೃತ್ಯ ಮಾಡುತ್ತಿರುವ ನವಿಲಿನ ಚಿತ್ರ ಆಕರ್ಷಣೀಯವಾಗಿದೆ. ಉತ್ತರ ಮತ್ತು ದಕ್ಷಿಣ ದಿಕ್ಕಿನ ಒಳಭಾಗದ ಅರೆಗಂಬಗಳಲ್ಲಿ ನಿಂತು ನಮಸ್ಕರಿಸುತ್ತಿರುವ ಭಕ್ತ, ಆಂಜನೇಯ, ಕೋತಿಶಿಲ್ಪಗಳನ್ನು ಕೆತ್ತಲಾಗಿದೆ. ನವರಂಗ ದ್ವಾರದ ಕೆಳಭಾಗದಲ್ಲಿ ವೈಷ್ಣವ ದ್ವಾರ ಪಾಲಕರಿದ್ದು, ಈ ದ್ವಾರದ ಎರಡೂ ಬದಿಗೂ ಇತ್ತೀಚೆಗೆ ಹೂ ಬಳ್ಳಿಗಳಿಂದ ಅಲಂಕರಿಸಲ್ಪಟ್ಟ ಅರೆಗಂಬವಿದೆ. ಈ ದೇವಾಲಯದ ರಂಗನಾಥ ಸ್ವಾಮಿಯನ್ನು ತಿರುವೆಂಗಳನಾಥನೆಂದು ಕ್ರಿ.ಶ. ೧೬೮೪ರ ಶಾಸನವೊಂದು ಕರೆದಿದೆ[೧೧೩]. ವಿಜಯನಗರ ಶೈಲಿಯಲ್ಲಿರುವ ಈ ದೇವಾಲಯ ವಿಜಯನಗರ ಕಾಲಾವಧಿಯಲ್ಲಿಯೇ ನಿರ್ಮಾಣವಾಗಿದೆ ಎಂದು ಹೇಳಬಹುದು.

೧. ಊರು : ಮಾಯಕೊಂಡ

೨. ತಾಲೂಕು : ದಾವಣಗೆರೆ

೩. ಹೆಸರು : ಓಬಳ ನರಸಿಂಹ[೧೧೪].

೪. ಸ್ಥಳ : ಗ್ರಾಮದ ದಕ್ಷಿಣ ಭಾಗಕ್ಕೆ

೫. ಅಭಿಮುಖ : ಮುಖ್ಯ ಗರ್ಭಗುಡಿ ದಕ್ಷಿಣಾಭಿಮುಖವಾಗಿದ್ದು, ಪೂರ್ವದಲ್ಲಿ ಒಂದು ಪ್ರವೇಶ ದ್ವಾರವಿದೆ.

೬. ಕಾಲ : ಕ್ರಿ.ಶ. ೧೫ನೇ ಶತಮಾನ[೧೧೫]

೭. ಶಿಖರ ಶೈಲಿ : ಶಿಖರವಿಲ್ಲ

೮. ಬಳಸಿದ ಶಿಲೆ : ಗ್ರಾನೈಟ್

ಸ್ಥಳೀಯರಿಂದ ಉದ್ಭವ ನರಸಿಂಹ, ಓಬಳ ದೇವರು, ಸೋಮೇಶ್ವರ ಎಂದು ಕರೆಯಲಾಗುತ್ತಿದೆ[೧೧೬]. ಈ ದೇವಾಲಯ ಗರ್ಭಗುಡಿ, ನವರಂಗ,ತೆರದ ಮುಖ ಮಂಟಪ ಹಾಗು ನವರಂಗವನ್ನು ಹೊಂದಿದ್ದು, ಪೂರ್ವ ಮತ್ತು ದಕ್ಷಿಣ ಭಾಗದಲ್ಲಿ ಪ್ರವೇಶ ದ್ವಾರಗಳಿವೆ.

ಹೊರ ಭಾಗದ ಅಧಿಷ್ಠಾನವು ಮಣ್ಣಿನಲ್ಲಿ ಮುಚ್ಚಿರುವುದರಿಂದ ಅದರ ಭಾಗಗಳನ್ನು ಗುರುತಿಸುವುದು ಸಾಧ್ಯವಾಗುತ್ತಿಲ್ಲ. ಅಧಿಷ್ಠಾನದ ಮೇಲಿನ ಭಿತ್ತಿಯು ಸರಳ ರೀತಿಯಲ್ಲಿದೆ. ಹಾಗೇ ಪಶ್ಚಿಮ ಮತ್ತು ಉತ್ತರದಲ್ಲಿನ ಹೊರ ಭಾಗದ ಭಿತ್ತಿಯ ಗ್ರಾನೈಟ್ ಶಿಲೆಗಳು ಜಾರಿ ಹೋಗಿವೆ. ಪ್ರಸ್ತರದ ಭಾಗವು ನಾಶವಾಗಿದ್ದು, ಗರ್ಭಗುಡಿಯ ಮೇಲಿನ ಶಿಖರವೂ ಈಗ ಕಾಣಬರುತ್ತಿಲ್ಲ. ದಕ್ಷಿಣ ದ್ವಾರದ ಮುಂದೆ ಗ್ರಾನೈಟ್ ಶಿಲೆಯ ಒಂದು ದೀಪ ಸ್ತಂಭವಿದ್ದು, ಅದರಲ್ಲಿ ಗರುಡನ ಶಿಲ್ಪವಿದೆ.

ಚೌಕಾಕಾರವಾಗಿರುವ ಗರ್ಭಗುಡಿಯು ಉತ್ತರ ಭಾಗಕ್ಕಿದ್ದು, ಅದರಲ್ಲಿನ ನೈಸರ್ಗಿಕ ಶಿಲೆಯೊಂದನ್ನು ಜನರು ಓಬಳ ನರಸಿಂಹನೆಂದು ಪೂಜಿಸುತ್ತಾರೆ. ಗರ್ಭಗುಡಿಯ ಮುಚ್ಚಿಗೆಯಲ್ಲಿ ಪದ್ಮವಿದೆ. ಇದರ ದ್ವಾರದ ಕೆಳ ಭಾಗದಲ್ಲಿ ಶಂಖ, ಚಕ್ರ, ಗದೆ ಹಿಡಿದು ನಿಂತಿರುವ ವೈಷ್ಣವ ದ್ವಾರಪಾಲಕರಿದ್ದಾರೆ. ದ್ವಾರ ಹಾಗು ಲಲಾಟವು ಸಾಧಾರಣವಾಗಿದೆ.

ನವರಂಗವು ನಾಲ್ಕು ದ್ರಾವಿಡ ಶೈಲಿಯ ಕಂಭಗಳಿಂದ[೧೧೭] ಹಾಗು ಹನ್ನೆರೆಡು ಅರೆಗಂಭಗಳಿಂದ ಕೂಡಿದೆ. ಈ ಕಂಭಗಳು ಆಯತ , ಅಷ್ಟ ಹಾಗು ಚೌಕಾಕಾರವಾಗಿವೆ. ಇವುಗಳ ಆಯತಾಕಾರ ಹಾಗು ಚೌಕಾಕಾರದ ಭಾಗದಲ್ಲಿ ಗಣೇಶ, ನರ್ತಕಿಯರು, ಪರಶುರಾಮ, ದರ್ಪಣ ಸುಂದರಿ, ಹನುಮಂತ, ಭಕ್ತ, ಕಳಿಂಗ, ಲಿಂಗದ ಮೇಲೆ ಹಾಲು ಕರೆಯುತ್ತಿರುವ ಹಸು, ನರ್ತಕಿಯರು, ಬಾಲಕೃಷ್ಣ , ಮಕರ ಮುಖದ ಸಿಂಹ, ಭಕ್ತ, ಕೋತಿ, ಲಿಂಗ , ಲಕ್ಷ್ಮಿ ನಾರಾಯಣ , ವೀರಭದ್ರ, ಯೋಗನರಸಿಂಹ , ನೃತ್ಯದಲ್ಲಿ ತೊಡಗಿದ ಯತಿ, ವಿಷ್ಣು, ವೇಣುಗೋಪಾಲ , ಮೀನು ಮೊದಲಾದ ಶಿಲ್ಪಗಳನ್ನು ಸುಂದರವಾಗಿ ಕೆತ್ತಲಾಗಿದೆ. ಇಲ್ಲಿನ

ಅರೆಗಂಭಗಳಲ್ಲೂ ಗರುಡ, ಹನುಮಂತ ಮೊದಲಾದ ಶಿಲ್ಪಗಳನ್ನು ಕೆತ್ತಿರುವುದು ವಿಶೇಷವೆನ್ನಬಹುದು. ಮಧ್ಯದ ಕಂಭಗಳ ಮೇಲಿನ ಬೋದಿಗೆಗಳು ಪುಷ್ಪಾಲಂಕಾರದಿಂದ ಕೂಡಿದ್ದು, ಅವುಗಳ ನಾಲ್ಕು ಧಿಕ್ಕಿನಲ್ಲೂ ಅಲಂಕೃತ ಕಮಲದ ಮೊಗ್ಗನ್ನು ಇಳಿಬಿದ್ದ ರೀತಿಯಲ್ಲಿ ಅಲಂಕರಿಸಲಾಗಿದೆ. ಮಧ್ಯದ ನಾಲ್ಕು ಕಂಭಗಳ ಮೇಲಿನ ಮುಚ್ಚಿಗೆಯಲ್ಲಿ ಪದ್ಮವಿದ್ದು, ಆ ಪದ್ಮದ ಕೆಳ ಪಟ್ಟಿಕೆಯನ್ನು ಸುತ್ತವರಿದಂತೆ ನಾಲ್ಕು ದಿಕ್ಕಿನಲ್ಲೂ ಚಿಕ್ಕ ಚಿಕ್ಕ ಪಕ್ಷಿಗಳನ್ನು ಕೆತ್ತಲಾಗಿದೆ. ಮುಚ್ಚಿಗೆಯ ಕೊನೆಯ ಪಟ್ಟಿಕೆಯ ಎಂಟು ದಿಕ್ಕಿನಲ್ಲೂ ಅಷ್ಟ ದಿಕ್ಪಾಲಕರನ್ನು ಕೆತ್ತಲಾಗಿದೆ.

ಪೂರ್ವದ ಪ್ರವೇಶ ದ್ವಾರದಲ್ಲಿನ ಕೆಳ ಭಾಗದಲ್ಲಿ ವೈಷ್ಣವ ದ್ವಾರ ಪಾಲಕರಿದ್ದು, ಅವರ ಬದಿಗೆ ಚಾಮರಧಾರಿ ಸ್ತ್ರೀಯರಿದ್ದಾರೆ . ಇದರ ಮುಂದಿನ ತೆರೆದ ಮುಖ ಮಂಟಪವು ನಾಲ್ಕು ಸಾಧಾರಣ ಕಂಭಗಳಿಂದ ಕೂಡಿದೆ. ದಕ್ಷಿಣದ ಪ್ರವೇಶ ದ್ವಾರದ ಕೆಳ ಭಾಗದಲ್ಲೂ ವೈಷ್ಣವ ದ್ವಾರ ಪಾಲಕರಿದ್ದು, ದ್ವಾರವು ಸರಳವಾಗಿದೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವನ್ನು ಚೌಕಾಕಾರದ ಪಟ್ಟಿಕೆಯಲ್ಲಿ ಕೆತ್ತಲಾಗಿದೆ. ಗ್ರಾನೈಟ್ ಶಿಲೆಯಿಂದ ದೇವಾಲಯದ ನಿರ್ಮಾಣ, ಕಂಭಗಳು ಆ ಕಂಭಗಳ ಮೇಲಿನ ವಿವಿಧ ಶಿಲ್ಪಗಳು, ಅಧಿಷ್ಠಾನ, ಭಿತ್ತಿ, ಇವುಗಳು ವಿಜಯನಗರ ಕಾಲದ ದೇವಾಲಯಗಳ ಪ್ರಮುಖ ಲಕ್ಷಣಗಳಾಗಿವೆ. ಆದುದರಿಂದ ಈ ದೇವಾಲಯ ವಿಜಯನಗರ ಕಾಲಾವಧಿಯಲ್ಲಿ ನಿರ್ಮಾಣವಾಗಿದೆ ಎಂದು ಹೇಳಬಹುದು.

೧. ಊರು : ನೀರ್ಥಡಿ
೨. ತಾಲೂಕು : ದಾವಣಗೆರೆ
೩. ಹೆಸರು : ರಂಗನಾಥ ಸ್ವಾಮಿ
೪. ಸ್ಥಳ : ಗ್ರಾಮ ಮಧ್ಯದಲ್ಲಿ
೫. ಅಭಿಮುಖ : ಪೂರ್ವಾಭಿಮುಖ
೬. ಕಾಲ : ಕ್ರಿ.ಶ. ೧೫ನೇ ಶತಮಾನ
೭. ಶಿಖರ ಶೈಲಿ : ದ್ರಾವಿಡ ಶೈಲಿ
೮. ಬಳಸಿದ ಶಿಲೆ : ಗ್ರಾನೈಟ್ ಮತ್ತು ಬಳಪದ ಶಿಲೆ

ಈ ದೇವಾಲಯ ಗರ್ಭಗುಡಿ , ಅಂತರಾಳ, ನವರಂಗ ಹಾಗು ತರೆದ ಮುಖಮಂಟಪಗಳನ್ನು ಹೊಂದಿದೆ.

[illegible]

[illegible]

[illegible]

[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]

[illegible]

ದೇವಾಲಯದ ಹೊರಭಾಗದ ಅಧಿಷ್ಠಾನವು ಉಪಾನ, ಪದ್ಮ, ಕುಮುದಗಳನ್ನೊಳಗೊಂಡಿದ್ದು, ಅಧಿಷ್ಠಾನದ ಈ ಭಾಗದಲ್ಲಿ ಆನೆಗಳು, ಆನೆಗಳನ್ನು ಹಿಡಿದೊಯ್ಯುತ್ತಿರುವ ಪುರುಷರ ಶಿಲ್ಪಗಳನ್ನು ಅಧಿಷ್ಠಾನದ ಕೆಳ ಪಟ್ಟಿಕೆಯಲ್ಲಿ ಕೆತ್ತಲಾಗಿದೆ. ಇದರ ಮೇಲಿನ ಪಟ್ಟಿಕೆಯಲ್ಲಿ ಕುದುರೆ ಸವಾರರು, ಒಂಟೆಗಳ ಶಿಲ್ಪಗಳಿವೆ. ಇದರ ಮೇಲಿನ (ಕುಮುದದ ಕೆಳಭಾಗದಲ್ಲಿ) ಪಟ್ಟಿಕೆಯಲ್ಲಿ ಕೋಲಾಟದೊಡನೆ ನರ್ತಿಸುತ್ತಿರುವ ಸ್ತ್ರೀಯರ ಶಿಲ್ಪಗಳನ್ನು ಆಕರ್ಷಣೀಯವಾಗಿ ಕೆತ್ತಲಾಗಿದೆ. ಕುಮುದವು ವೃತ್ತಾಕಾರವಾಗಿದ್ದು, ಅದರಲ್ಲಿ ಬಳೆಗಳ ಅಲಂಕಾರವಿದೆ.

ಗರ್ಭಗುಡಿ ಸುತ್ತಲಿನ ಮಧ್ಯದ ಭಿತ್ತಿಯಲ್ಲಿ ತೊಟ್ಟಿಲು ತೂಗುತ್ತಿರುವ ತಾಯಿ, ಮಗುವನ್ನು ಎತ್ತಿಕೊಂಡಿರುವ ತಾಯಿ, ಹಾಲುಣಿಸುತ್ತಿರುವ ತಾಯಿ, ಮೊಸರು ಕಡೆಯುತ್ತಿರುವ ಸ್ತ್ರೀಯರು, ಯುದ್ಧದಲ್ಲಿ ತೊಡಗಿದ ಸ್ತ್ರೀಯರು, ಆನೆ, ಒಂಟೆಗಳನ್ನು ಹಿಡಿದು ಹೋಗುತ್ತಿರುವ ಪುರುಷರು ಹಾಗು ನರ್ತನ ಸ್ತ್ರೀಯರು, ಹನುಮಂತ, ಸೀತಾ ಹನುಮಂತ, ಕೋತಿ ಮೊದಲಾದ ಶಿಲ್ಪಗಳನ್ನು ಕೆತ್ತಲಾಗಿದೆ.

ಪ್ರಸ್ತರದಲ್ಲಿನ ಕಪೋತ ಭಾಗವು ಆಂಗ್ಲ ವರ್ಣಮಾಲೆಯ ' ಎಸ್ ' ರೀತಿಯಲ್ಲಿದ್ದು, ಅದು ಹೆಚ್ಚು ಹೊರಬಾಗಿದೆ. ಅದರೊಳಗಡೆ ಕಮಲದ ದಳಗಳನ್ನು ಹಾಗು ಮೊಗ್ಗುಗಳನ್ನು ಸುಂದರವಾಗಿ ಕೆತ್ತಲಾಗಿದೆ. ಶಿಖರದಲ್ಲಿ ಕೂಟ ಪಂಜರಗಳ ಮಧ್ಯೆ ವಿಷ್ಣು ಸ್ಥಾನಿಕನಾಗಿರುವಂತೆ ಕೆತ್ತಲಾಗಿದೆ. ಶಿಖರದ ತಳಭಾಗದಲ್ಲಿನ 'ಸುಖನಾಸಿ' ಈಗ ಕಾಣಬರುತ್ತಿಲ್ಲ.

ಶಿಖರದ ಮೇಲೆ ಕಲಶ ಮತ್ತು ಸ್ತೂಪಿ ಇದೆ. ಇಡೀ ಶಿಖರವನ್ನು ಗ್ರಾನೈಟ್ ಶಿಲೆಯಿಂದ ಮಾಡಿರುವುದು ವಿಶೇಷವೆನಿಸುತ್ತದೆ. ಪೂರ್ವದ್ವಾರದ ಮುಂದೆ ಒಂದು ದೀಪ ಸ್ತಂಭವಿದ್ದು, ಅದನ್ನು ಗ್ರಾನೈಟ್ ಶಿಲೆಯಿಂದ ತಯಾರಿಸಲಾಗಿದೆ. ದೀಪ ಸ್ತಂಭದ ಕೆಳಭಾಗದ ಜಗುಲಿಯ ಸುತ್ತ ಭಕ್ತರು ಅಂಜಲಿ ಹಸ್ತರಾಗಿ ನಿಂತಿರುವುದನ್ನು ಮನೋಜ್ಞವಾಗಿ ಕೆತ್ತಲಾಗಿದೆ. ದೇವಾಲಯದ ಸುತ್ತಲೂ ಪ್ರಾಕಾರ ಗೋಡೆಯಿದ್ದು, ಅದರಲ್ಲಿ ಹಾವು, ಮೀನುಗಳನ್ನು ಕೆತ್ತಲಾಗಿದೆ. ಪೂರ್ವದಲ್ಲಿ ಪ್ರವೇಶದ್ವಾರವಿದೆ.

ಒಳಭಾಗದ ಗರ್ಭಗುಡಿಯು ಚೌಕಾಕಾರವಾಗಿದ್ದು, ಅದರಲ್ಲಿ ಸ್ಥಳೀಯರಿಂದ ರಂಗನಾಥ ಸ್ವಾಮಿ ಎಂದು ಕರೆಯಲ್ಪಡುವ ವಿಷ್ಣುವಿನ ಮೂರ್ತಿ ಇದೆ. ಇದರ ಮುಚ್ಚಿಗೆಯಲ್ಲಿ ಪದ್ಮ ಇದೆ. ದ್ವಾರವು ಸರಳವಾಗಿದ್ದು, ಲಲಾಟದಲ್ಲಿ ಪದ್ಮವಿದೆ. ಈ ಗರ್ಭಗುಡಿಯ ಮುಂದಿನ ಅಂತರಾಳವು ಚೌಕಾಕಾರವಾಗಿದ್ದು, ಇದರ ದ್ವಾರವು ಸರಳವಾಗಿದೆ.

ನವರಂಗದ ಪಶ್ಚಿಮ ಭಾಗಕ್ಕೆ (ಅಂತರಾಳ ದ್ವಾರದ ಎರಡೂ ಬದಿಯ ಮುಂಭಾಗದಲ್ಲಿ) ಕೋಷ್ಠ ಗುಡಿಗಳಿದ್ದು, ಲಕ್ಷ್ಮಿಯ ಮೂರ್ತಿಯೊಂದು ಎಡ ಭಾಗದ ಕೋಷ್ಠ ಗುಡಿಯಲ್ಲಿದೆ. ನವರಂಗದ ಮಧ್ಯದಲ್ಲಿ

ನಾಲ್ಕು ಬಳಪದ ಕಲ್ಲಿನ ಕಂಭಗಳಿವೆ. ಈ ಕಂಭಗಳು ಚೌಕ-ಚತುರಶ್ರ ಆಕಾರದಲ್ಲಿದ್ದು, ಚೌಕಾಕಾರದ ಭಾಗದಲ್ಲಿ ಶಿಲ್ಪಗಳಿರುವುದರಿಂದ ಈ ಕಂಭಗಳನ್ನು ಚಿತ್ರ ಖಂಡ ಸ್ತಂಭಗಳೆಂದು ಕರೆಯಬಹುದು. ಇವುಗಳಲ್ಲಿ ಸಿಂಹವನ್ನು ಈಟಿಯಿಂದ ಇರಿಯುತ್ತಿರುವ ವೀರ , ಬಿಲ್ಲು ಹಿಡಿದಿರುವ ವೀರ, ನರ್ತನ ಭಂಗಿಯಲ್ಲಿರುವ ಸ್ತ್ರೀ, ಹಿಂದಕ್ಕೆ ಬಗ್ಗಿ ಹಿಮ್ಮಡಿಯನ್ನು ಮುಟ್ಟುವಂತಿರುವ ಸ್ತ್ರೀ ಶಿಲ್ಪಗಳು ಈಶಾನ್ಯ ಭಾಗದ ಕಂಭದಲ್ಲಿದ್ದರೆ, ಆಗ್ನೇಯ ಭಾಗದ ಕಂಭದಲ್ಲಿ ಬೇಟೆಗಾರ, ನಾಯಿ ಮತ್ತು ಬೇಟೆಗಾರನ ಶಿಲ್ಪಗಳು ಒಂದು ಮುಖದಲ್ಲಿದ್ದು ಮತ್ತೊಂದು ಮುಖದಲ್ಲಿ ಒಂದೇ ದೇಹ, ನಾಲ್ಕು ಕಾಲು, ಮೂರು ತಲೆಯುಳ್ಳ ಮಾನವರೂಪಿ ಶಿಲ್ಪವೊಂದಿದೆ. ನೈರುತ್ಯ ಭಾಗದ ಕಂಭದಲ್ಲಿ ಆನೆಯ ಮೇಲೆ ಕುಳಿತ ವ್ಯಕ್ತಿ, ಭಕ್ತ ದಂಪತಿಗಳು ,ಗಣಪತಿ , ಇಬ್ಬರು ಸ್ತ್ರೀಯರು ವೃತ್ತಾಕಾರವಾಗಿ ನರ್ತಿಸುವ ರೀತಿಯ ಶಿಲ್ಪಗಳು ಆಕರ್ಷಕವಾಗಿವೆ. ಹಾಗೆಯೇ ವಾಯುವ್ಯ ಭಾಗದ ಕಂಭದಲ್ಲಿ ನರಸಿಂಹ ಆನೆಯ ಮೇಲೆ ಕುಳಿತು ಶಂಖ ಊದುವ ಯುದ್ಧ ವೀರ , ಹೆಗಲ ಮೇಲೆ ನೇಗಿಲನ್ನು ಹೊತ್ತ ಬಲರಾಮನ ಶಿಲ್ಪಗಳಿವೆ. ಗೋಪಿಕಾ ಸ್ತ್ರೀ, ಮೊಸರು ಕಡಿಯುತ್ತಿರುವ ಸ್ತ್ರೀ , ಬೆಣ್ಣೆ ಕಡೆಯುತ್ತಿರುವ ಕೃಷ್ಣ, ಅರೆಬೆತ್ತಲಾಗಿರುವ ಸ್ತ್ರೀ ಮೊದಲಾದ ಶಿಲ್ಪಗಳನ್ನು ಈ ಮಧ್ಯ ಕಂಭದ ವಿವಿಧ ಭಾಗದಲ್ಲಿ ಕೆತ್ತಲಾಗಿದೆ. ಈ ನಾಲ್ಕು ಕಂಭಗಳ ಮೇಲಿನ ಬೋದಿಗೆಯು ಪುಷ್ಪ ದಳಗಳಿಂದ ಕೂಡಿದ್ದು, ಬೋದಿಗೆಯ ನಾಲ್ಕು ದಿಕ್ಕಿನಲ್ಲೂ ಕಮಲದ ಮೊಗ್ಗು ಇಳಿಬಿದ್ದ ರೀತಿಯಲ್ಲಿದೆ. ಈ ನಾಲ್ಕು ಕಂಭಗಳ ಮೇಲಿನ ಮಧ್ಯದ ಮುಚ್ಚಿಗೆಯು ಚೌಕಾಕಾರವಾಗಿದ್ದು, ಅದರ ಮಧ್ಯ ಭಾಗದಲ್ಲಿ ತಾಂಡವೇಶ್ವರನಿದ್ದು, ಆತನ ಸುತ್ತಲೂ ಅಷ್ಟದಿಕ್ಪಾಲಕರನ್ನು ಆಕರ್ಷಣೀಯವಾಗಿ ಕೆತ್ತಲಾಗಿದೆ.

ನವರಂಗದ ಉತ್ತರ, ದಕ್ಷಿಣ, ಪೂರ್ವ ದಿಕ್ಕಿನಲ್ಲಿ ಪ್ರವೇಶ ದ್ವಾರಗಳಿವೆ. ನವರಂಗದ ಉತ್ತರ ದ್ವಾರದ ಕೆಳ ಭಾಗದಲ್ಲಿ ಶಂಖ, ಚಕ್ರ ಹಿಡಿದು ನಿಂತಿರುವ ವೈಷ್ಣವ ದ್ವಾರಪಾಲರಿದ್ದು, ಅವರ ಬಳಿ ಚಾಮರಧಾರಿ ಸ್ತ್ರೀಯರಿದ್ದಾರೆ. ದ್ವಾರವು ಸರಳವಾಗಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವನ್ನು ಕೆತ್ತಲಾಗಿದೆ. ದಕ್ಷಿಣ ದ್ವಾರವು ಉತ್ತರ ದ್ವಾರದ ರೀತಿಯಲ್ಲಿಯೇ ಇದೆ. ಈ ಎರಡೂ ದ್ವಾರದ ಮುಂಬದಿಯಲ್ಲಿ ಸರಳ ರೀತಿಯ ತೆರೆದ ಮುಖ ಮಂಟಪಗಳಿವೆ. ನವರಂಗದ ಪೂರ್ವ ದ್ವಾರದ ಕೆಳಭಾಗದಲ್ಲಿ ವೈಷ್ಣವ ದ್ವಾರ ಪಾಲಕರಿದ್ದಾರೆ. ಇದರ ದ್ವಾರವು ಸರಳವಾಗಿದ್ದು, ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವನ್ನು ಚೌಕಾಕಾರದ ಪಟ್ಟಿಕೆಯಲ್ಲಿ ಕೆತ್ತಲಾಗಿದೆ. ಇದರ ಮುಂಭಾಗದ (ಪೂರ್ವ ಭಾಗದ) ಮುಖ ಮಂಟಪವು ನಾಲ್ಕು ಚೌಕಾಕಾರದ ಕಂಭಗಳಿಂದ ಹಾಗು ಕಕ್ಷಾಸನ ಕಟ್ಟೆಯಿಂದ ಕೂಡಿದೆ. ಕಕ್ಷಾಸನ ಕಟ್ಟೆಯ ಮೇಲಿನ ಕಂಭಗಳಲ್ಲಿ ನರ್ತಕಿ, ಗಣೇಶ, ಶಂಖ ಊದುವ ವೀರ, ಬಲರಾಮನ ಶಿಲ್ಪಗಳಿವೆ. ಗ್ರಾನೈಟ್ ಶಿಲೆಯಿಂದ ದೇವಾಲಯದ ನಿರ್ಮಾಣ, ಬೃಹತ್ ಗಾತ್ರದ ಕಂಭಗಳು, ಆ ಕಂಭಗಳ ಮೇಲಿನ ವಿವಿಧ ಶಿಲ್ಪಗಳು, ಅಧಿಷ್ಠಾನ, ಭಿತ್ತಿಯ ಮೇಲಿನ ಶಿಲ್ಪಗಳು, ದೇವಾಲಯದ ಮುಂಭಾಗದ ಗರುಡಗಂಭ, ದೀಪಸ್ತಂಭ, ಪ್ರಾಕಾರ ಇವುಗಳು ವಿಜಯನಗರ ಕಾಲದ ದೇವಾಲಯಗಳ ಪ್ರಮುಖ ಲಕ್ಷಣಗಳಾಗಿವೆ. ಆದುದರಿಂದ ಈ ದೇವಾಲಯ

[illegible]

[illegible]

ವಿಜಯನಗರ ಕಾಲಾವಧಿಯಲ್ಲಿ ನಿರ್ಮಾಣವಾಗಿದೆ ಎಂದು ಹೇಳಬಹುದು. ಈ ದೇವಾಲಯವು ಕ್ರಿ.ಶ. ೧೬೩೪ರಲ್ಲಿ ಮುಸ್ಲಿಂರ ಆಕ್ರಮಣಕ್ಕೆ ತುತ್ತಾಗಿ ಧ್ವಂಸವಾಯಿತು[೧೦೮]. ಮುಂದೆ ಕ್ರಿ.ಶ. ೧೬೯೮ರಲ್ಲಿ ಚಿತ್ರದುರ್ಗ ಪಾಳೇಗಾರನಾದ ಭರಮಣ್ಣ ನಾಯಕ ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿದ ವಿಷಯವನ್ನು ಅಲ್ಲಿರುವ ಶಾಸನವೊಂದರಿಂದ ತಿಳಿಯಬಹುದು[೧೦೯].

೧. ಊರು : ದೇವರಹಳ್ಳಿ
೨. ತಾಲೂಕು : ಚೆನ್ನಗಿರಿ
೩. ಹೆಸರು : ರಂಗನಾಥ ಸ್ವಾಮಿ
೪. ಸ್ಥಳ : ಗ್ರಾಮದ ಬಳಿಯ ದಕ್ಷಿಣ ದಿಕ್ಕಿನ ಬೆಟ್ಟದ ಮೇಲೆ
೫. ಅಭಿಮುಖ : ಪೂರ್ವಾಭಿಮುಖ
೬. ಕಾಲ : ಕ್ರಿ.ಶ. ೧೫ನೇ ಶತಮಾನ[೧೧೦]
೭. ಶಿಖರ ಶೈಲಿ : ಶಿಖರವಿಲ್ಲ
೮. ಬಳಸಿದ ಶಿಲೆ : ಗ್ರಾನೈಟ್

ಈ ದೇವಾಲಯವು ಗರ್ಭಗುಡಿ , ಅಂತರಾಳ, ನವರಂಗ ಹಾಗು ತೆರೆದ ಮುಖ ಮಂಟಪಗಳನ್ನೊಳಗೊಂಡಿದೆ.

ಈ ದೇವಾಲಯದ ಹೊರಭಾಗದ ಅಧಿಷ್ಠಾನವು ಯಾವುದೇ ಅಲಂಕರಣೆಯಿರದೇ ಸರಳವಾಗಿದೆ. ಅಧಿಷ್ಠಾನದ ಮೇಲಿನ ಭಿತ್ತಿಯಲ್ಲಿ ಯಾವ ಶಿಲ್ಪಗಳಿಲ್ಲ. ಭಿತ್ತಿಯ ಮೇಲಿನ ಕಪೋತ ಭಾಗವು ಸ್ವಲ್ಪ ಮುಂದೆ ಚಾಚಿದ್ದು, ಅದರಲ್ಲಿ ಯಾವುದೇ ಅಲಂಕಾರವಿಲ್ಲ. ಶಿಖರವನ್ನು ಈಗ ಹೊಸದಾಗಿ ನಿರ್ಮಿಸಿದ್ದಾರೆ. ಮುಖ ಮಂಟಪದ ಎದುರಿನಲ್ಲಿ ಗುರುಡನ ಚಿಕ್ಕ ಗುಡಿ ಹಾಗು ದೀಪ ಸ್ತಂಭಗಳಿವೆ.

ಒಳ ಭಾಗದ ಗರ್ಭಗುಡಿಯು ಚೌಕಾಕಾರವಾಗಿದ್ದು, ಇದರಲ್ಲಿ ಲೋಹದಿಂದ ಮಾಡಿದ ಕೇಶವನ ಮೂರ್ತಿ ಇದೆ. ಇದರ ಮುಚ್ಚಿಗೆಯಲ್ಲಿ ಪದ್ಮವಿದ್ದು, ದ್ವಾರವು ಸರಳವಾಗಿದೆ. ಇದರ ಮುಂದಿನ ಅಂತರಾಳವು ಆಯತಾಕಾರವಾಗಿದ್ದು, ಅದರಲ್ಲಿ ಉತ್ಸವ ಮೂರ್ತಿ ಇದೆ. ಇದರ ದ್ವಾರವು ಸರಳವಾಗಿದ್ದು, ಗರುಡನ ಶಿಲ್ಪವನ್ನು ಲಲಾಟದ ಚೌಕಾಕಾರದ ಪಟ್ಟಿಕೆಯಲ್ಲಿ ಕೆತ್ತಲಾಗಿದೆ. ನವರಂಗದಲ್ಲಿ ನಾಲ್ಕು ಗ್ರಾನೈಟ್ ಶಿಲೆಯ ಕಂಭಗಳಿವೆ. ಈ ಕಂಭಗಳು ಚೌಕ ಹಾಗು ಚತುರಾಸ್ರವಾಗಿದ್ದು, ಸರಳವಾಗಿವೆ. ಈ ನವರಂಗದ ಮುಂದೆ ತೆರೆದ ಮುಖ ಮಂಟಪವಿದ್ದು, ಅದರಲ್ಲಿ ಹತ್ತು ಚೌಕ, ಚತುರಾಸ್ರಕಾರದ ಕಂಭಗಳಿವೆ. ಈ ಕಂಭಗಳ ಚೌಕ ಭಾಗದಲ್ಲಿ ಆಂಜನೇಯ ಮತ್ತು ಕೆಲವು ಭಕ್ತರ ಶಿಲ್ಪಗಳಿವೆ. ಈ ಕಂಭಗಳ ಮೇಲಿನ ಬೋದಿಗೆಯು ಪುಷ್ಪಗಳ ಅಲಂಕರಣಗಳಿಂದ ಕೂಡಿದ್ದು, ಅವುಗಳ ನಾಲ್ಕು ದಿಕ್ಕಿನಲ್ಲೂ ಕಮಲದ ಮೊಗ್ಗು ಇಳಿಬಿದ್ದ ರೀತಿಯಲ್ಲಿದೆ. ವಿಜಯನಗರ ಶೈಲಿಯಲ್ಲಿರುವ ಈ ದೇವಾಲಯಕ್ಕೆ ವಿಜಯನಗರದ ಕೊನೆಯ ಅರಸರು ದಾನ ನೀಡಿದ ಬಗ್ಗೆ ಶಾಸನದಲ್ಲಿ ಉಲ್ಲೇಖವಿದೆ[೧೧೧].

೧. ಊರು : ಕೊಣಚಗಲ್ (ಬೇಚಾರಕ್ ಗ್ರಾಮ)
೨. ತಾಲೂಕು : ಜಗಲೂರು
೩. ಹೆಸರು : ರಂಗನಾಥ
೪. ಸ್ಥಳ : ಬೇಚಾರಕ್ ಗ್ರಾಮದ ಬೆಟ್ಟದ ಮೇಲೆ
೫. ಅಭಿಮುಖ : ಪೂರ್ವಾಭಿಮುಖ
೬. ಕಾಲ : ಕ್ರಿ.ಶ. ಸು.೧೫ನೇ ಶತಮಾನ
೭. ಶಿಖರ ಶೈಲಿ : ಶಿಖರವಿಲ್ಲ
೮. ಬಳಸಿದ ಶಿಲೆ : ಗ್ರಾನೈಟ್

ಈ ದೇವಾಲಯವು ಗರ್ಭಗುಡಿ , ಅಂತರಾಳ, ನವರಂಗ ಹಾಗು ತೆರೆದ ಮುಖ ಮಂಟಪಗಳನ್ನು ಒಳಗೊಂಡಿದೆ.

ಈ ದೇವಾಲಯದ ಹೊರಭಾಗದ ಅಧಿಷ್ಠಾನವು ಯಾವುದೇ ಅಲಂಕರಣೆಯಿರದೇ ಸರಳವಾಗಿದೆ. ಅಧಿಷ್ಠಾನದ ಮೇಲಿನ ಭಿತ್ತಿಯಲ್ಲಿ ಯಾವ ಶಿಲ್ಪಗಳೂ ಇಲ್ಲ. ಭಿತ್ತಿಯ ಮೇಲಿನ ಕಪೋತ ಭಾಗವು ದೇವಾಲಯದ ಸುತ್ತಲೂ ಸ್ವಲ್ಪ ಮುಂದೆ ಚಾಚಿ, ಕೆಳ ಬಾಗಿದ ರೀತಿಯಲ್ಲಿದ್ದು, ಅದರಲ್ಲಿ ಯಾವುದೇ ಅಲಂಕಾರವಿಲ್ಲ. ಗರ್ಭಗುಡಿಯ ಮೇಲೆ ಶಿಖರವಿಲ್ಲ. ಗರ್ಭಗುಡಿಗೆ ಎದುರಾಗಿ ದೇವಾಲಯದ ಮುಂಭಾಗಕ್ಕೆ ಒಂದು ದೀಪ ಸ್ತಂಭ ಹಾಗು ಗರುಡ ಸ್ತಂಭಗಳಿವೆ. ಈ ಗರುಡಗಂಭದ ಕೆಳಭಾಗದ ಕಟ್ಟೆ (ಜಗಲಿ)ಯಲ್ಲಿ ಅಂಜಲಿ ಹಸ್ತರಾಗಿರುವ ಸ್ತ್ರೀ ಮತ್ತು ಪುರುಷ ಶಿಲ್ಪಗಳಿವೆ.

ನವರಂಗದಲ್ಲಿ ನಾಲ್ಕು ಗ್ರಾನೈಟ್ ಶಿಲೆಯ ಬೃಹತ್ ಕಂಭಗಳಿವೆ. ಆ ಕಂಭಗಳು ಚೌಕ- ಚತುರಸ್ತ್ರ-ವಾಗಿದ್ದು, ಇಲ್ಲಿನ ಚೌಕಾಕಾರದ ಭಾಗದಲ್ಲಿ ಮತ್ಸ್ಯ, ಗರುಡ, ಹನುಮ, ಹಂಸ, ಯಾಳಿ,ಯತಿ, ಲಿಂಗದೊಡನೆ ಇರುವ ನಂದಿ, ಶಂಖ, ಮೃದಂಗ ಧಾರಿಸುವವ, ವಿಷ್ಣು, ಚಕ್ರ, ಲಕ್ಷ್ಮಿ ನರಸಿಂಹ ಮೊದಲಾದ ಶಿಲ್ಪಗಳನ್ನು ಕೆತ್ತಲಾಗಿದೆ. ಈ ಕಂಭಗಳ ಮೇಲಿನ ಬೋದಿಗೆಯು ಪುಷ್ಪಗಳ ಅಲಂಕಾರದಿಂದ ಕೂಡಿದೆ. ಈ ಕಂಭಗಳ ಮಧ್ಯದ ಮುಚ್ಚಿಗೆಯಲ್ಲಿ ಪದ್ಮವಿದೆ. ನವರಂಗದ ಪಶ್ಚಿಮ ಗೋಡೆಯ (ಅಂತರಾಳದ ಭಿತ್ತಿ)ಯಲ್ಲಿ ಗಣೇಶನ ಶಿಲ್ಪವಿದೆ. ಈ ನವರಂಗಕ್ಕೆ ಉತ್ತರ ಮತ್ತು ಪೂರ್ವದಲ್ಲಿ ದ್ವಾರಗಳಿವೆ. ಉತ್ತರ ದ್ವಾರದ ಕೆಳಭಾಗದಲ್ಲಿ ವೈಷ್ಣವ ದ್ವಾರಪಾಲಕರು ತ್ರಿಭಂಗದಲ್ಲಿ ನಿಂತಿದ್ದಾರೆ. ದ್ವಾರವು ಸರಳ ರೀತಿಯಲ್ಲಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವನ್ನು ಕೆತ್ತಲಾಗಿದೆ. ಪೂರ್ವ ದ್ವಾರಗ ಕೆಳಭಾಗದಲ್ಲಿ ವೈಷ್ಣವ ದ್ವಾರಪಾಲರಿದ್ದಾರೆ. ದ್ವಾರದಲ್ಲಿ ಪುಷ್ಪ ಶಾಖಾ ಮಾತ್ರ ಅಲಂಕೃತವಾಗಿದ್ದು, ಉಳಿದ ಶಾಖೆಗಳು ಅಲಂಕೃತವಾಗಿಲ್ಲ. ಮೊದಲಿನ ಎರಡೂ ಶಾಖೆಗಳು ಲಲಾಟದವರೆಗೂ ಮುಂದುವರಿದಿವೆ. ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ.

ಮುಖ ಮಂಟಪವು ತೆರೆದ ರೀತಿಯಲ್ಲಿದ್ದು, ಅದರಲ್ಲಿ ಎಂಟು ಬೃಹತ್ ಗಾತ್ರದ ಕಂಭಗಳಿದ್ದು, ಅವು ಚೌಕ, ಚತುರಸ್ತ್ರಾಕಾರವಾಗಿವೆ. ಚೌಕಾಕಾರದ ಭಾಗದಲ್ಲಿ ಶಿಲ್ಪಗಳನ್ನು ಕೆತ್ತಲಾಗಿದೆ. ಅವುಗಳಲ್ಲಿ ಹಣ್ಣು ತಿನ್ನುತ್ತಿರುವ ಕೋತಿ. ಹಾವನ್ನು ಹಿಡಿದಿರುವ ವೀರ. ಆಂಜನೇಯ, ನಂದಿ, ಯತಿಗಳು, ಮೂರು ತಲೆಯ ಹಸು ಲಿಂಗಕ್ಕೆ ಹಾಲನ್ನು ಸುರಿಸುತ್ತಿರುವುದು. ಕೈಯಲ್ಲಿ ಬಿಲ್ಲುಹಿಡಿದು ಹೊರಾಟ ಸ್ತ್ರೀ, ಯಾಳಿ ಮುಂತಾದ ಶಿಲ್ಪಗಳನ್ನು ಆಕರ್ಷಣೀಯವಾಗಿ ಕೆತ್ತಲಾಗಿದೆ. ಮುಖಮಂಟಪದ ಪಶ್ಚಿಮ ಭಿತ್ತಿಯಲ್ಲಿ (ನವರಂಗ ದ್ವಾರದ ಭಿತ್ತಿಯಲ್ಲಿ) ಜೋಡಿ ಮೀನು, ಕದನದಲ್ಲಿ ತೊಡಗಿದ ಆನೆಗಳು, ಎಡಭಾಗದಲ್ಲಿ ಇದ್ದರೆ ಬಲಭಾಗದ ಭಿತ್ತಿಯಲ್ಲಿ ಮಿಥುನ ಶಿಲ್ಪಗಳಿವೆ. ಈ ದೇವಾಲಯದ ವಾಸ್ತು ಲಕ್ಷಣಗಳ ಆಧಾರದ ಮೇಲೆ ಈ ದೇವಾಲಯ ವಿಜಯನಗರ ಕಾಲದಲ್ಲಿ ನಿರ್ಮಿತವಾಗಿವೆ ಎಂದು ಹೇಳಬಹುದು.

೪.೨.೩. ಶಾಕ್ತ ದೇವಾಲಯಗಳು :

ದಾವಣಗೆರೆ ಜಿಲ್ಲೆಯ ವ್ಯಾಪ್ತಿಯಲ್ಲಿ ಶೈವ, ವೈಷ್ಣವ ಪಂಥಗಳಂತೆ ಶಾಕ್ತಪಂಥೀಯ ದೇವಾಲಯಗಳೂ ಕಂಡುಬರುತ್ತವೆ. ಇವುಗಳು ಹೆಚ್ಚಾಗಿ ವಿಜಯನಗರ ಆಳ್ವಿಕೆಯ ನಂತರದ ಕಾಲದಲ್ಲಿ ನಿರ್ಮಿತವಾಗಿರುವುದರಿಂದ ಅವುಗಳನ್ನು ಅಧ್ಯಯನಕ್ಕೆ ಒಳಪಡಿಸಿಕೊಂಡಿರುವುದಿಲ್ಲ. ಪ್ರಾಚೀನ ಮತ್ತು ಮಧ್ಯಯುಗೀನ ಕಾಲಕ್ಕೆ ಸೇರಿದ ಕೆಲವೇ ಶಾಕ್ತ ದೇವಾಲಯಗಳು ಅಲ್ಲಲ್ಲಿ ಕಂಡುಬರುತ್ತವೆ. ಅವುಗಳ ವಾಸ್ತು ವಿಶೇಷತೆ ಈ ಕೆಳಕಂಡಂತಿವೆ.

೧. ಊರು : ಚದುರಗೊಳ
೨. ತಾಲೂಕು : ಜಗಲೂರು
೩. ಹೆಸರು : ಬನಶಂಕರಿ (ಬನದಮ್ಮ)
೪. ಸ್ಥಳ : ಗ್ರಾಮದ ಪೂರ್ವ ಭಾಗಕ್ಕೆ
೫. ಅಭಿಮುಖ : ಪೂರ್ವಾಭಿಮುಖ
೬. ಕಾಲ : ಕ್ರಿ.ಶ.೯ನೇ ಶತಮಾನದ ಅಂತ್ಯ ಭಾಗ
೭. ಶಿಖರ ಶೈಲಿ : ಶಿಖರವಿಲ್ಲ
೮. ಬಳಸಿದ ಶಿಲೆ : ಗ್ರಾನೈಟ್ ಮತ್ತು ಕಗ್ಗಲ್ಲು

ಈ ದೇವಾಲಯದ ಗರ್ಭಗುಡಿ ಮಾತ್ರ ಈಗ ಉಳಿದುಕೊಂಡಿದೆ. ಇದರ ಅಧಿಷ್ಠಾನ ಕಾಣುತ್ತಿಲ್ಲ. ಭಿತ್ತಿಯನ್ನು ಸ್ಥಳೀಯ ಗ್ರಾನೈಟ್ ಬಳಸಿಕೊಂಡು ನಿರ್ಮಿಸಿದ್ದಾರೆ. ಭಿತ್ತಿಯು ಸರಳವಾಗಿದೆ. ಪ್ರಸ್ತರದಲ್ಲಿನ ಮೂಲ ಕಪೋತ ಭಾಗವು ಈಗ ಕಾಣ ಬರುತ್ತಿಲ್ಲ. ಅದೇ ರೀತಿ ಶಿಖರವೀಗ ಕಂಡುಬರುತ್ತಿಲ್ಲ.

ಗರ್ಭಗುಡಿಯು ಚೌಕಾಕಾರವಾಗಿದ್ದು, ಅದರಲ್ಲಿ ಬನಶಂಕರಿ ಮೂರ್ತಿ ಇದೆ. ಗರ್ಭಗುಡಿ ಮೇಲಿನ ಮುಚ್ಚಿಗೆಯಲ್ಲಿ ಪದ್ಮವಿದೆ. ಇದರ ದ್ವಾರವು ಸರಳವಾಗಿದೆ. ಈ ದೇವಾಲಯದಲ್ಲಿ ಉಳಿದಿರುವ ಕಂಭಗಳು ಹಾಗೂ ದೇವಾಲಯದಲ್ಲಿರುವ ಮೂರ್ತಿಯು ರಾಷ್ಟ್ರಕೂಟ ಶೈಲಿಯಲ್ಲಿವೆ. ಇದರ ಆಧಾರದ ಮೇಲೆ ಈ ದೇವಾಲಯ ರಾಷ್ಟ್ರಕೂಟ ಶೈಲಿಯ ದೇವಾಲಯ ಎನ್ನಬಹುದು.

೧. ಊರು : ಉಚ್ಚಂಗಿ ದುರ್ಗ
೨. ತಾಲೂಕು : ಹರಪನಹಳ್ಳಿ
೩. ಹೆಸರು : ಬನಶಂಕರಿ ದೇವಾಲಯ
೪. ಸ್ಥಳ : ಗ್ರಾಮದ ಆಗ್ನೇಯ ದಿಕ್ಕಿನ ಅರಸನಬಾವಿ ಬಳಿ.
೫. ಅಭಿಮುಖ : ಪೂರ್ವಾಭಿಮುಖ
೬. ಕಾಲ : ಕ್ರಿ.ಶ. ೧೨ನೇ ಶತಮಾನ
೭. ಶಿಖರ ಶೈಲಿ : ಶಿಖರ ಉಳಿದಿಲ್ಲ
೮. ಬಳಸಿದ ಶಿಲೆ : ಬಳಪದ ಶಿಲೆ / ಕಗ್ಗಲ್ಲು

ಗರ್ಭಗೃಹ, ಅಂತರಾಳ, ನವರಂಗವನ್ನು ಈ ದೇವಾಲಯ ಒಳಗೊಂಡಿದೆ. ಅಧಿಷ್ಠಾನವು ಉಪಾನ, ಪದ್ಮ, ಕಪೋತಗಳಿಂದ ಕೂಡಿದ್ದು, ಆ ಭಾಗದಲ್ಲಿ ಯಾವುದೇ ಅಲಂಕಾರವಿರದೆ, ಸಾಧಾರಣವಾಗಿದೆ. ಆ ಭಾಗದಲಿ ಯಾವುದೇ ಶಿಲ್ಪಗಳಿಲ್ಲ. ಪ್ರಸ್ತರ ಭಾಗದಲ್ಲಿನ ಕಪೋತವು ಸ್ವಲ್ಪ ಮುಂದೆ ಚಾಚಿದ್ದು, ಕೆಳಗೆ ಭಾಗಿದ ರೀತಿಯಲ್ಲಿ , ಅಂದರೆ ' ಎಸ್ ' ಆಕಾರದಲ್ಲಿದ್ದು, ಸರಳವಾಗಿದೆ. ಗರ್ಭಗುಡಿ ಮೇಲೆ ಶಿಖರವಿಲ್ಲ.

ಗರ್ಭಗುಡಿಯು ಚೌಕಾಕಾರವಾಗಿದ್ದು, ಅದರಲ್ಲಿ ಬನಶಂಕರಿ ಮೂರ್ತಿ ಇದೆ. ಮುಚ್ಚಿಗೆಯಲ್ಲಿ ಪದ್ಮ ವಿದೆ. ದ್ವಾರವು ಐದು ಶಾಖೆಗಳಿಂದ ಕೂಡಿದ್ದು, ಸಾಧಾರಣವಾಗಿದೆ. ಆಯತಾಕಾರವಾಗಿರುವ ಅಂತರಾಳದ ಮುಚ್ಚಿಗೆಯಲ್ಲಿ ಅರಳಿದ ಪದ್ಮವಿದೆ. ಇದರ ದ್ವಾರವೂ ಸಾಧಾರಣವಾಗಿದೆ. ನವರಂಗದಲ್ಲಿ ಚೌಕ, ಅಷ್ಟ, ವೃತ್ತಾಕಾರದ ನಾಲ್ಕು ಬಳಪದ ಕಲ್ಲಿನ ಕಂಭಗಳಿದ್ದು, ಈ ಕಂಭಗಳ ವೃತ್ತಾಕಾರವಾಗಿ ಬಳೆಯ ರೀತಿಯ ಅಲಂಕಾರ ಹೊಂದಿವೆ. ಇವು ಹೊಯ್ಸಳ ಕಾಲದ ತಿರುಗಣಿ ಯಂತ್ರದಿಂದ ಮಾಡಿದ ಕಂಭಗಳಾಗಿವೆ. ಈ ಕಂಬಗಳ ಮೇಲಿನ ಬೋದಿಗೆಗಳು ಕಮಲದಳಗಳಿಂದ ಅಲಂಕೃತವಾಗಿವೆ. ಈ ದೇವಾಲಯದ ವಾಸ್ತು ಲಕ್ಷಣ ಹಾಗು ಮೂರ್ತಿ ಲಕ್ಷಣಗಳ ಆಧಾರದ ಮೇಲೆ ಇದು ಹೊಯ್ಸಳರ ಶೈಲಿಯಲ್ಲಿ ನಿರ್ಮಿತವಾಗಿದೆ ಎಂದು ಹೇಳಬಹುದಾಗಿದೆ.

೧. ಊರು : ಹರಿಹರ
೨. ತಾಲೂಕು : ಹರಿಹರ
೩. ಹೆಸರು : ಲಕ್ಷ್ಮಿ
೪. ಸ್ಥಳ : ಹರಿಹರೇಶ್ವರ ದೇವಾಲಯದ ಬಳಿ (ಉತ್ತರ ಭಾಗಕ್ಕೆ)
೫. ಅಭಿಮುಖ : ಪೂರ್ವಾಭಿಮುಖ
೬. ಕಾಲ : ಕ್ರಿ.ಶ. ೧೨೭೭[೨೨]
೭. ಶಿಖರ ಶೈಲಿ : ಮೂಲ ಶಿಖರವಿಲ್ಲ
೮. ಬಳಸಿದ ಶಿಲೆ : ಬಳಪದ ಶಿಲೆ

ಈ ದೇವಾಲಯವು ಗರ್ಭಗುಡಿ ಮತ್ತು ತೆರೆದ ಮುಖ ಮಂಟಪವನ್ನು ಮಾತ್ರ ಹೊಂದಿದೆ. ಅಧಿಷ್ಠಾನವು ಉಪಾನ, ಪದ್ಮ, ಕರ್ಣಿಕಾ , ಕಪೋತ ಭಾಗಗಳಿಂದ ಕೂಡಿದ್ದು, ಸರಳವಾಗಿದೆ. ಅಧಿಷ್ಠಾನದ ಮೇಲಿನ ಭಿತ್ತಿ ಭಾಗದಲ್ಲಿ ಯಾವುದೇ ಅಲಂಕರಣವಿರದೆ ಸರಳವಾಗಿದೆ. ಪ್ರಸ್ತರದಲ್ಲಿನ ಕಪೋತ ಭಾಗವು ಗರ್ಭಗುಡಿ ಸುತ್ತಲೂ ಸ್ವಲ್ಪ ಕೆಳಬಾಗಿದ ರೀತಿಯಲ್ಲಿದೆ. ಮುಖ ಮಂಟಪದ ಸುತ್ತಲೂ ಅದು ಹೆಚ್ಚು ಹೊರ ಬಾಗಿದ್ದು, ಆಂಗ್ಲ ವರ್ಣಮಾಲೆಯ 'ಎಸ್' ಆಕಾರದಲ್ಲಿದೆ. ಕಪೋತದ ಮೇಲೆ (ಮುಖ ಮಂಟಪದ ಸುತ್ತ) ಕೂಟ ಹಾಗು ಪಂಜರಗಳು ಇದ್ದರೂ ಸಹ ಅವು ಅಲಂಕಾರಯುಕ್ತವಾಗಿರದೆ ಸರಳವಾಗಿವೆ. ಗರ್ಭಗುಡಿ ಮೇಲೆ ನಂತರದ ಕಾಲದಲ್ಲಿ ನಿರ್ಮಿಸಿದ ಶಿಖರವಿದೆ.

ಮುಖಮಂಟಪದಲ್ಲಿ ಕಕ್ಷಾಸನವಿದೆ. ಇದರ ಹೊರಭಾಗದ ಮಧ್ಯೆ ಪಟ್ಟಿಕೆಯಲ್ಲಿ (ಕೈಪಿಡಿ ಗೋಡೆ) ಚಿಕ್ಕ ಒಂಟಿ ಕಂಭಗಳನ್ನು ಬಿಡಿಸಿ, ಅದರ ಮೇಲೆ ಶಿಖರದ ವಿವಿಧ ಮಾದರಿಗಳನ್ನು ಕೆತ್ತಲಾಗಿದೆ. ಹಾಗೆ ಮೇಲಿನ ಪಟ್ಟಿಕೆಯಲ್ಲಿ ಜೋಡಿ ಕಂಭಗಳನ್ನು ಹಾಗು ಪುಷ್ಪಗಳನ್ನು ಅಲಂಕಾರಯುತವಾಗಿ ಬಿಡಿಸಲಾಗಿದೆ. ಮುಖ ಮಂಟಪಕ್ಕೆ ಪೂರ್ವ, ಉತ್ತರ, ದಕ್ಷಿಣಗಳಲ್ಲಿ ದ್ವಾರಗಳಿದ್ದು, ಆ ದ್ವಾರಗಳನ್ನು ಪ್ರವೇಶಿಸಲು ಸೋಪಾನಗಳಿವೆ.

ಗರ್ಭಗುಡಿ ಚೌಕಾಕಾರವಾಗಿದ್ದು, ಅದರಲ್ಲಿ ಲಕ್ಷ್ಮಿ ವಿಗ್ರಹಕ್ಕೆ ಬದಲಾಗಿ ನಂತರ ಕಾಲದಲ್ಲಿ ಪ್ರತಿಷ್ಠಾಪಿಸಿದ ಮಹಿಷಾಸುರ ಮರ್ಧಿನಿ ಮೂರ್ತಿ ಇದೆ[೧೨೩]. ಗರ್ಭಗುಡಿ ಮುಚ್ಚಿಗೆಯಲ್ಲಿ ಪದ್ಮವಿದೆ. ದ್ವಾರವು ಸ್ತಂಭ ಶಾಖೆಯಿಂದ ಕೂಡಿದೆ. ಸ್ತಂಭ ಶಾಖೆಯ ಎರಡೂ ಬದಿಗೂ ಜಾಲಂಧ್ರಗಳಿವೆ. ಮುಖಮಂಟಪಕ್ಕೆ ತಾಗಿದಂತೆ ಗರ್ಭಗುಡಿದ್ವಾರದ ಎರಡೂ ಬದಿಗೆ ಇತ್ತೀಚಿಗೆ ನಿರ್ಮಿಸಿದ, ಕಾರ್ತಿಕೇಯ ಹಾಗು ಗಣೇಶನ ಚಿಕ್ಕಗುಡಿಗಳಿವೆ.

ಮುಖ ಮಂಟಪವು ಇಪ್ಪತ್ತು ಬಳಪದ ಕಲ್ಲಿನ ಕಂಭಗಳಿಂದ ಕೂಡಿದೆ. ಈ ಕಂಬಗಳು ಚೌಕ ಹಾಗು ವೃತ್ತಾಕಾರವಾಗಿದ್ದು, ವೃತ್ತಾಕಾರದ ಭಾಗದಲ್ಲಿ ಗಂಟೆ ಹಾಗು ಬಳೆಗಳ ಅಲಂಕಾರವಿದೆ. ಗಂಟೆಯಾಕಾರದ ಮೇಲ್ಭಾಗದಲ್ಲಿ ಮಾಲಾಲಂಕಾರವಿದೆ. ಈ ಕಂಭಗಳ ಮೇಲಿನ ಬೋದಿಗೆಗಳು ಪುಷ್ಪ ಹಾಗು ಪುಷ್ಪದಳಗಳಿಂದ ಅಲಂಕೃತವಾಗಿದ್ದು, ಇವುಗಳನ್ನು ತಿರುಗುಣಿ ಯಂತ್ರದಿಂದ ತಯಾರಿಸಲಾಗಿದೆ. ಮಧ್ಯದ ನಾಲ್ಕು ಕಂಭಗಳ ಮೇಲಿನ ಮುಚ್ಚಿಗೆ (ವಿತಾನ)ಯಲ್ಲಿ ಅರಳಿದ ಕಮಲದಳಗಳಿಂದ ಇಳಿಬಿದ್ದ ಕಮಲದ ಮೊಗ್ಗು (ಪದ್ಮ ಶಿಲಾ) ಮನಮೋಹಕವಾಗಿದೆ. ಮುಖ ಮಂಟಪದ ಒಳಭಾಗದ ಸುತ್ತಲೂ ಕಕ್ಷಾಸನಗಳಿವೆ. ಮಧ್ಯದ ನಾಲ್ಕು ಕಂಭಗಳನ್ನು ಬಿಟ್ಟು ಉಳಿದ ಕಂಭಗಳು ಈ ಕಕ್ಷಾಸನದ ಮೇಲೆ ಇವೆ. ಮೇಲ್ಭಾಗದ ಕಪೋತದಲ್ಲಿನ ಒಳಭಾಗದಲ್ಲಿ ಸುತ್ತಲೂ ಲತಾ, ಪುಷ್ಪಗಳ ಅಲಂಕರಣೆ ಮಾಡಲಾಗಿದೆ. ಮಂಟಪಕ್ಕೆ ಪ್ರವೇಶಿಸಲು ಉತ್ತರ, ದಕ್ಷಿಣ ಹಾಗು ಪೂರ್ವದಲ್ಲಿ ಪ್ರವೇಶ ದ್ವಾರಗಳಿವೆ. ಈ ದೇವಾಲಯದ ವಾಸ್ತು ಲಕ್ಷಣಗಳ ಆಧಾರದ ಮೇಲೆ ಹೊಯ್ಸಳರ ಕಾಲದಲ್ಲಿ ನಿರ್ಮಿತವಾಗಿದೆಯೆಂದು ಹೇಳಬಹುದು.

೧. ಊರು : ಶಾಂತಿಸಾಗರ(ಸೂಳೆಕೆರೆ)

೨. ತಾಲೂಕು : ಚನ್ನಗಿರಿ

೩. ಹೆಸರು : ಪಾರ್ವತಿ

೪. ಸ್ಥಳ : ಸಿದ್ಧೇಶ್ವರ ದೇವಾಲಯದ ಹಿಂಭಾಗಕ್ಕೆ.

೫. ಅಭಿಮುಖ : ಪೂರ್ವಾಭಿಮುಖ

೬. ಕಾಲ : ಕ್ರಿ.ಶ. ಸುಮಾರು ೧೪ನೇ ಶತಮಾನ

೭. ಶಿಖರ ಶೈಲಿ : ಶಿಖರವಿಲ್ಲ

೮. ಬಳಸಿದ ಶಿಲೆ : ಗ್ರಾನೈಟ್

ಸ್ಥಳೀಯರಿಂದ ಶಾಂತವ್ವನೆಂದು ಕರೆಯಲ್ಪಡುವ ಈ ದೇವಾಲಯವು ಗರ್ಭಗುಡಿ ಹಾಗು ಮುಖಮಂಟಪವನ್ನು ಹೊಂದಿದೆ.

ದೇವಾಲಯದ ಅಧಿಷ್ಠಾನವು ಉಪಾನ, ಪದ್ಮ, ಕುಮುದಗಳಿಂದ ಕೂಡಿದೆ. ಕುಮುದವು ವೃತ್ತಾಕಾರವಾಗಿದ್ದು, ಬಳೆಯಾಕಾರದ ಅಲಂಕಾರ ಪಡೆದುಕೊಂಡಿದೆ. ಭಿತ್ತಿಯು ಸಾಧಾರಣವಾಗಿದೆ. ಭಿತ್ತಿ ಮೇಲಿನ ಕಪೋತವು ಸುತ್ತಲೂ ಮುಂದೆ ಚಾಚಿ ಕೆಳಕ್ಕೆ ಬಾಗಿದ್ದು, ಸರಳವಾಗಿದೆ. ಅಂದರೆ 'ಎಸ್' ಆಕಾರದಲ್ಲಿದೆ. ಗರ್ಭಗುಡಿ ಮೇಲಿನ ಶಿಖರವೀಗ ಕಾಣಬರುತ್ತಿಲ್ಲ.

ಗರ್ಭಗುಡಿಯು ಚೌಕಾಕಾರವಾಗಿದ್ದು, ಅದರಲ್ಲಿ ಪಾರ್ವತಿಯ ಕಾಷ್ಠಮೂರ್ತಿ ಇದೆ. ಇದರ ಮುಚ್ಚಿಗೆಯಲ್ಲಿ ಪದ್ಮವಿದೆ. ಈ ಗರ್ಭಗುಡಿದ್ವಾರವು ಸರಳವಾಗಿದೆ. ಮುಖಮಂಟಪದಲ್ಲಿ ಎರಡು ಕಂಭಗಳಿದ್ದು, ಅವು ಚೌಕ ಹಾಗು ಚತುರಶ್ರವಾಗಿವೆ. ಚೌಕಾಕಾರದ ಭಾಗದಲ್ಲಿ ಹಸು, ಆನೆ, ಹಂಸ, ಗಣೇಶ , ನಂದಿ ಮೊದಲಾದ ಶಿಲ್ಪಗಳನ್ನು ಆಕರ್ಷಣೀಯವಾಗಿ ಕೆತ್ತಲಾಗಿದೆ. ಇಲ್ಲಿನ ಬೋದಿಗೆಗಳ ನಾಲ್ಕು ದಿಕ್ಕಿನಲ್ಲೂ ಕಮಲದ ಮೊಗ್ಗು ಇಳಿಬಿದ್ದ ರೀತಿಯಲ್ಲಿದೆ. ಇದರ ಮುಚ್ಚಿಗೆಯಲ್ಲಿ ಪದ್ಮಗಳನ್ನು ಕೆತ್ತಲಾಗಿದೆ.

ಈ ದೇವಾಲಯ ವಿಜಯನಗರ ಶೈಲಿಯಲ್ಲಿದೆಯೆಂದು ದೇವಾಲಯದ ವಾಸ್ತು ಲಕ್ಷಣಗಳಿಂದ ಹೇಳಬಹುದು.

೧. ಊರು : ಉಚ್ಚಂಗಿ ದುರ್ಗ

೨. ತಾಲೂಕು : ಹರಪನಹಳ್ಳಿ

೩. ಹೆಸರು : ಉತ್ಸವಾಂಬ

೪. ಸ್ಥಳ : ಊರಿನ ಬೆಟ್ಟದ ಮೇಲೆ

೫. ಅಭಿಮುಖ : ಪೂರ್ವಾಭಿಮುಖ

೬. ಕಾಲ : ಕ್ರಿ.ಶ. ಸುಮಾರು ೧೫ನೇ ಶತಮಾನದ ಮೊದಲ ಭಾಗ

೭. ಶಿಖರ ಶೈಲಿ : ಮೂಲ ಶಿಖರವಿಲ್ಲ

೮. ಬಳಸಿದ ಶಿಲೆ : ಗ್ರಾನೈಟ್

ಸ್ಥಳೀಯರಿಂದ ಉಚ್ಚಂಗೆಮ್ಮನೆಂದು ಕರೆಯಲ್ಪಡುವ ಈ ದೇವಾಲಯ ಗರ್ಭಗುಡಿ, ಅಂತರಾಳ, ನವರಂಗಗಳನ್ನೊಳಗೊಂಡಿದೆ. ಹಾಗು ಸುತ್ತಲೂ ಪ್ರಾಕಾರಗೋಡೆಯಿದೆ.

ಹೊರಭಾಗದ ಅಧಿಷ್ಠಾನವು ಉಪಾನ, ಪದ್ಮ, ಕಪೋತ, ಕುಮುದಗಳಿಂದ ಕೂಡಿದ್ದು, ಸರಳ ಶೈಲಿಯಲ್ಲಿದೆ. ಭಿತ್ತಿಯು ಬಹುತೇಕ ಭಾಗ ಜೀರ್ಣೋದ್ಧಾರಗೊಂಡಿರುವುದರಿಂದ ಭಿತ್ತಿಯು ಸಾಧಾರಣವಾಗಿದೆ. ಭಿತ್ತಿಯ ಮೇಲಿನ ಪ್ರಸ್ತರ ಭಾಗದಲ್ಲಿನ ಕಪೋತ ಭಾಗವು ದೇವಾಲಯದ ಸುತ್ತಲೂ ಸ್ವಲ್ಪ ಹೊರಚಾಚಿದ ರೀತಿಯಲ್ಲಿದೆ. ಗರ್ಭಗುಡಿಯ ಮೇಲಿನ ಮೂಲ ಶಿಖರವು ಈಗ ಕಾಣಬರುತ್ತಿಲ್ಲ. ದೇವಾಲಯದ ಸುತ್ತಲೂ ಪ್ರಕಾರ ಗೋಡೆ ಇದ್ದು, ಪೂರ್ವ ಪ್ರವೇಶದ್ವಾರದ ಬಳಿ ಪೂರ್ವಾಭಿಮುಖವಾಗಿರುವ ಮೂರು ಉಪಗುಡಿಗಳಿವೆ. ಅದರಲ್ಲಿ ಸ್ಥಳೀಯರಿಂದ ಕಣ್ಣುಕೊಟ್ಟಮ್ಮ, ಮಾರಣಮ್ಮ, ಮಾತಂಗಮ್ಮ ಎಂದು ಕರೆಯಲ್ಪ ಡುವ ಮೂರ್ತಿಗಳಿದ್ದು, ಅವು ಪಾಳೆಗಾರರ ಕಾಲಕ್ಕೆ ಸೇರಿರಬಹುದೆನಿಸುತ್ತದೆ.

ಗರ್ಭಗುಡಿಯು ಚೌಕಾಕಾರವಾಗಿದ್ದು, ಅದರಲ್ಲಿ ನಂತರ ಕಾಲದಲ್ಲಿ ನಿರ್ಮಿಸಿರುವ ಉತ್ಸವಾಂಬ ಮೂರ್ತಿ ಇದೆ. ಇದರ ಮುಚ್ಚಿಗೆಯಲ್ಲಿ ಪದ್ಮವಿದೆ. ದ್ವಾರವು ಸರಳವಾಗಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಅಂತರಾಳವು ಆಯತಾಕಾರವಾಗಿದ್ದು, ಮುಚ್ಚಿಗೆಯಲ್ಲಿ ಪದ್ಮವಿದೆ. ಅಂತರಾಳದ ದ್ವಾರವು ಸರಳವಾಗಿದ್ದು, ಇದರ ಬಹುತೇಕ ಭಾಗ ಈಚೆಗೆ ನಿರ್ಮಿತವಾಗಿದೆ. ನವರಂಗದಲ್ಲಿ ಗ್ರಾನೈಟ್ ಶಿಲೆಯ ಚೌಕ, ಅಷ್ಟಕೋನಾಕಾರದ ನಾಲ್ಕು ಕಂಭಗಳಿದ್ದು, ಅವು ಸರಳವಾಗಿವೆ. ಕಂಭಗಳ ಮೇಲಿನ ಬೋದಿಗೆಯು ಪದ್ಮದಳಗಳಿಂದ ಅಲಂಕೃತವಾಗಿದ್ದು, ಬೋದಿಗೆಯ ನಾಲ್ಕು ದಿಕ್ಕಿನಲ್ಲಿ ತಾವರೆಯ ಮೊಗ್ಗು ಇಳಿಬಿದ್ದ ರೀತಿಯ ಅಲಂಕರಣವಿದೆ. ಇದರ ಮುಚ್ಚಿಗೆಯಲ್ಲಿ ಪದ್ಮವಿದೆ. ನವರಂಗದ ಉತ್ತರ ಭಾಗದ ದ್ವಾರವು ಸರಳವಾಗಿದೆ. ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವನ್ನು ಚೌಕಾಕಾರದ ಪಟ್ಟಿಕೆಯಲ್ಲಿ ಕೆತ್ತಲಾಗಿದೆ. ಪೂರ್ವದ ಪ್ರವೇಶದ್ವಾರವು ಸಹ ಉತ್ತರದ ಪ್ರವೇಶ ದ್ವಾರದ ರೀತಿಯಲ್ಲಿದೆ. ವಾಸ್ತು ಲಕ್ಷಣಗಳ ಆಧಾರದ ಮೇಲೆ ಈ ದೇವಾಲಯ ವಿಜಯನಗರ ಶೈಲಿಯಲ್ಲಿ ನಿರ್ಮಿತವಾಗಿದೆಯೆಂದು ಹೇಳಬಹುದು. ಈ ದೇವಾಲಯಕ್ಕೆ ಕ್ರಿ.ಶ. ೧೫೩೦ರಲ್ಲಿ ವಿಜಯನಗರದ ಅರಸನಾದ ರಾಮರಾಜನು ದತ್ತಿಬಿಟ್ಟ ಬಗ್ಗೆ ಉಲ್ಲೇಖವಿದೆ.[೧೨೪] .

೪.೨.೪ : ಜಿನ ಬಸದಿಗಳು :

ಶಾಕ್ತ ದೇವಾಲಯಗಳಂತೆ ಜಿನ ಬಸದಿಗಳೂ ದಾವಣಗೆರೆ ಜಿಲ್ಲೆಯಲ್ಲಿ ಬಹು ಕಡಿಮೆ ಪ್ರಮಾಣದಲ್ಲಿ ಇವೆ. ಆದುದರಿಂದ ಕೆಲವು ಜಿನಮೂರ್ತಿಗಳಷ್ಟೇ ದೊರಕಿವೆ. (ಚನ್ನಗಿರಿ ತಾಲೂಕಿನ ಬಸವಪಟ್ಟಣ ಹಾಗು ದಾವಣಗೆರೆ ತಾಲೂಕಿನ ಬೇತೂರು). ಆಧುನಿಕ ದಿನದಲ್ಲಿ ನಿರ್ಮಿತವಾದ ಬಸದಿಗಳು ಈ ಜಿಲ್ಲೆಯಲ್ಲಿ ಹಲವಾರು ಇದ್ದರೂ ಅವುಗಳನ್ನು ಅಧ್ಯಯನ ಮಾಡಿಲ್ಲ. ವಾಸ್ತು ಕಲೆಯ ದೃಷ್ಟಿಯಿಂದ ಪ್ರಾಮುಖ್ಯತೆ ಪಡೆದಿರುವ ಬಸದಿಗಳ ವಿವರಣೆ ಈ ಕೆಳಗಿನಂತಿದೆ.

೧. ಊರು : ಬಾಗಳಿ

೨. ತಾಲೂಕು : ಹರಪನಹಳ್ಳಿ

೩. ಹೆಸರು : ಜಿನಬಸದಿ

೪. ಸ್ಥಳ : ಊರಿನ ಬಸ್‌ನಿಲ್ದಾಣದಿಂದ ಪೂರ್ವ ಭಾಗಕ್ಕೆ

೫. ಅಭಿಮುಖ : ಉತ್ತರಾಭಿಮುಖ

೬. ಕಾಲ : ಕ್ರಿ.ಶ. ಸು. ೧೨ನೇ ಶತಮಾನ

೭. ಶಿಖರ ಶೈಲಿ : ಶಿಖರವಿಲ್ಲ

೮. ಬಳಸಿದ ಶಿಲೆ : ಬಳಪದ ಶಿಲೆ ಮತ್ತು ಗ್ರಾನೈಟ್

ಈ ಬಸದಿಯು ಗರ್ಭಗುಡಿ ಮತ್ತು ಅಂತರಾಳವನ್ನು ಮಾತ್ರ ಹೊಂದಿದೆ. ಇದರ ಸುತ್ತಲೂ ಇತ್ತೀಚಿನ ದಿನಗಳಲ್ಲಿ ಮನೆಯನ್ನು ಕಟ್ಟಿದ್ದಾರೆ.

ಈ ಬಸದಿಯ ಅಧಿಷ್ಠಾನವು ಭೂಮಿಯಲ್ಲಿ ಹೂತಿರುವುದರಿಂದ ಅಧಿಷ್ಠಾನದ ಭಾಗ ಕಾಣಬರುತ್ತಿಲ್ಲ. ಭಿತ್ತಿಯು ಅಲಂಕರಣವಿದಲ್ಲದೆ ಸರಳ ಶೈಲಿಯಲ್ಲಿದೆ. ಭಿತ್ತಿಯ ಮೇಲಿನ ಕಪೋತ ಭಾಗವು ಹೊರಬಾಗಿದ್ದು, ಸರಳವಾಗಿದೆ. ಗರ್ಭಗುಡಿ ಮೇಲೆ ಶಿಖರವಿಲ್ಲ.

ಗರ್ಭಗುಡಿಯು ಚೌಕಾಕಾರವಾಗಿದ್ದು, ಇದರಲ್ಲಿದ್ದ ತೀರ್ಥಂಕರ ಮೂರ್ತಿ ಈಗ ಇಲ್ಲಿಯ ವಸ್ತು ಸಂಗ್ರಹಾಲದಲ್ಲಿದೆ. ಗರ್ಭಗುಡಿಯ ಮುಚ್ಚಿಗೆಯಲ್ಲಿ ಪದ್ಮವಿದೆ. ಗರ್ಭಗುಡಿಯ ದ್ವಾರಕ್ಕೆ ಮಾತ್ರ ಬಳಪದದ ಶಿಲೆಯನ್ನು ಬಳಸಲಾಗಿದೆ. ಈ ದ್ವಾರ ಭಾಗವು ರತ್ನ, ಲತಾ, ಸ್ತಂಭ, ಪುಷ್ಪ ಶಾಖೆಗಳಿಂದ ಕೂಡಿದೆ. ಚೌಕಾಕಾರದ ಲಲಾಟದಲ್ಲಿ ಪದ್ಮಾಸನದಲ್ಲಿ ಕುಳಿತಿರುವ ' ಜಿನ ತೀರ್ಥಂಕರನ ಶಿಲ್ಪ 'ವನ್ನು ಕೆತ್ತಲಾಗಿದೆ. ಅಂತರಾಳವು ಆಯತಾಕಾರವಾಗಿದೆ. ಇಲ್ಲಿ ಯಾವ ಮೂರ್ತಿಗಳಿಲ್ಲ. ಇದರ ಮುಚ್ಚಿಗೆಯಲ್ಲೂ ಪದ್ಮವನ್ನು ಕೆತ್ತಲಾಗಿದೆ. ಅಂತರಾಳದ ದ್ವಾರಕ್ಕೆ ಮಾತ್ರ ಬಳಪದ ಶಿಲೆಯನ್ನು ಬಳಸಿಕೊಳ್ಳಲಾಗಿದೆ. ದ್ವಾರದ ಕೆಳಭಾಗದಲ್ಲಿ ದ್ವಾರಪಾಲಕರಿದ್ದಾರೆ. ದ್ವಾರದಲ್ಲಿ ರತ್ನ, ಪುಷ್ಪ, ಸ್ತಂಭ, ಸುರಳಿಯೊಳಗೆ ಇರುವ ವಿಧ್ಯಾದರ ಶಾಖೆ ಹಾಗು ಪುಷ್ಪ ಶಾಖೆಗಳನ್ನು ಸುಂದರವಾಗಿ ಕೆತ್ತಲಾಗಿದೆ. ಹಾಗೇ

[illegible]

[illegible]

[illegible]

[illegible]

[illegible]

ದ್ವಾರದ ಎರಡು ಬದಿಗೂ ಜಾಲಂಧ್ರಗಳಿವೆ. ಲಲಾಟದಲ್ಲಿ ಧ್ಯಾನ ಮಗ್ನನಾಗಿ ಪದ್ಮಾಸನದಲ್ಲಿ ಕುಳಿತಿರುವ 'ಜಿನ ತೀರ್ಥಂಕರನ ಮೂರ್ತಿ 'ಯನ್ನು ಚೌಕಾಕಾರದ ಪಟ್ಟಿಕೆಯಲ್ಲಿ ಕೆತ್ತಲಾಗಿದೆ. ಲಲಾಟದ ಎರಡು ಬದಿಗೂ ತಾವರೆಯ ಮೊಗ್ಗು ಇಳಿಬಿದ್ದ ರೀತಿಯ ಅಲಂಕಾರವಿದೆ. ಈ ಬಸದಿಯ ವಾಸ್ತು ಲಕ್ಷಣಗಳಾದ ದ್ವಾರ, ಕಂಭಗಳು, ಮೂರ್ತಿ ಶಿಲ್ಪಗಳನ್ನು ಆಧಾರವಾಗಿಟ್ಟುಕೊಂಡು ಇದು ಕಲ್ಯಾಣ ಚಾಲುಕ್ಯ ಶೈಲಿಯಲ್ಲಿ ನಿರ್ಮಿತವಾದ ಬಸದಿ ಎಂದು ಹೇಳಬಹುದು.

೧. ಊರು : ಉಚ್ಚಂಗಿ ದುರ್ಗ
೨. ತಾಲೂಕು : ಹರಪನಹಳ್ಳಿ
೩. ಹೆಸರು : ಜೈನ ಬಸದಿ
೪. ಸ್ಥಳ : ಊರಿನ ನೈರುತ್ಯ ದಿಕ್ಕಿನ ಸಿಗೇಹೊಂಡದ ಪೂರ್ವ ಭಾಗಕ್ಕೆ.
೫. ಅಭಿಮುಖ : ಪೂರ್ವಾಭಿಮುಖ
೬. ಕಾಲ : ಕ್ರಿ.ಶ. ಸುಮಾರು ೧೪ನೇ ಶತಮಾನ
೭. ಶಿಖರ ಶೈಲಿ : ಶಿಖರವಿಲ್ಲ
೮. ಬಳಸಿದ ಶಿಲೆ : ಗ್ರಾನೈಟ್

ಈ ಬಸದಿಯು ಗರ್ಭಗುಡಿ, ತೆರೆದ ಮುಖ ಮಂಟಪವನ್ನೊಳಗೊಂಡಿದೆ. ಮುಖಮಂಟಪವು ದಕ್ಷಿಣ ಮತ್ತು ಪೂರ್ವದಲ್ಲಿ ಪ್ರವೇಶ ದ್ವಾರಗಳನ್ನು ಹೊಂದಿದೆ. ಅಧಿಷ್ಠಾನವು ಉಪಾನ, ಪದ್ಮ, ಕಪೋತಗಳಿಂದ ಕೂಡಿದ್ದು, ಸರಳ ಶೈಲಿಯಲ್ಲಿದೆ. ಭಿತ್ತಿಯ ಮೇಲೆ ಯಾವುದೇ ಶಿಲ್ಪಗಳಿಲ್ಲ. ಭಿತ್ತಿಯ ಮೇಲಿನ ಕಪೋತ ಭಾಗವು ಹೊರಚಾಚಿದ್ದು, ಬಾಗಿದ ರೀತಿಯಲ್ಲಿದೆ . ಇಲ್ಲಿಯೂ ಯಾವ ಅಲಂಕರಣೆ ಇರುವುದಿಲ್ಲ. ಗರ್ಭಗುಡಿಯ ಮೇಲೆ ಶಿಖರವಿಲ್ಲ.

ಗರ್ಭಗುಡಿಯು ಚೌಕಾಕಾರವಾಗಿದ್ದು, ಅದರಲ್ಲಿ ಜಿನ ತೀರ್ಥಂಕರ ಮೂರ್ತಿ ಇದೆ. ಗರ್ಭಗುಡಿಯ ಮುಚ್ಚಿಗೆಯಲ್ಲಿ ಪದ್ಮವಿದೆ. ಗರ್ಭಗುಡಿಯ ದ್ವಾರವು ಸಾಧಾರಣವಾಗಿದ್ದು, ಲಲಾಟ ಭಾಗದಲ್ಲಿ ಪದ್ಮವನ್ನು ಕೆತ್ತಲಾಗಿದೆ. ಗರ್ಭಗುಡಿ ಮುಂದೆ ತೆರೆದ ಮುಖ ಮಂಟಪವಿದ್ದು, ಗ್ರಾನೈಟ್ ಶಿಲೆಯ ನಾಲ್ಕು ಕಂಭಗಳಿಂದ ಕೂಡಿದೆ. ಚೌಕ, ಅಷ್ಟಾಕಾರವಾಗಿರುವ ಈ ಕಂಭಗಳ ಮೇಲಿನ ಬೋದಿಗೆಯು ಕಮಲದಳಗಳಿಂದ ಅಲಂಕೃತವಾಗಿದ್ದು, ನಾಲ್ಕು ದಿಕ್ಕಿನಲ್ಲಿ ಕಮಲದ ಮೊಗ್ಗು ಚಿಕ್ಕದಾಗಿ ಇಳಿಬಿದ್ದಿರುವ ರೀತಿ ಕೆತ್ತಲಾಗಿದೆ. ಇದರ ಮುಚ್ಚಿಗೆಯಲ್ಲಿ ಪದ್ಮವಿದೆ. ಈ ಮುಖ ಮಂಟಪದ ಭಿತ್ತಿಯ ಒಳಭಾಗಕ್ಕೆ ಈಚೆಗೆ ಗಾರೆಯನ್ನು ಹಾಕಲಾಗಿದೆ. ದಕ್ಷಿಣ ಭಾಗದಲ್ಲಿ ಒಂದು ಪ್ರವೇಶದ್ವಾರವಿದ್ದು, ದ್ವಾರವು ಸರಳವಾಗಿದೆ. ಇದರ ಲಲಾಟದಲ್ಲಿ ಪದ್ಮವನ್ನು ಕೆತ್ತಲಾಗಿದೆ. ಅಧಿಷ್ಠಾನ ಮತ್ತಿತರ ವಾಸ್ತು ಲಕ್ಷಣಗಳ ಆಧಾರದ ಮೇಲೆ ಈ ಬಸದಿಯು ವಿಜಯನಗರ ಶೈಲಿಯಲ್ಲಿ ನಿರ್ಮಿತವಾಗಿದೆಯೆಂದು ಹೇಳಬಹುದು.

೧. ಊರು : ಹರಪನಹಳ್ಳಿ

೨. ತಾಲೂಕು : ಹರಪನಹಳ್ಳಿ

೩. ಹೆಸರು : ಜೈನ ಬಸದಿ

೪. ಸ್ಥಳ : ಊರಿನ ಬಸ್‌ನಿಲ್ದಾಣದ ಪಶ್ಚಿಮಕ್ಕಿರುವ ಕೋಟೆ ಬಳಿ.

೫. ಅಭಿಮುಖ : ಪೂರ್ವಾಭಿಮುಖ

೬. ಕಾಲ : ಕ್ರಿ.ಶ. ಸುಮಾರು ೧೫ನೇ ಶತಮಾನ

೭. ಶಿಖರ ಶೈಲಿ : ಶಿಖರವಿಲ್ಲ

೮. ಬಳಸಿದ ಶಿಲೆ : ಗ್ರಾನೈಟ್

ಈ ಬಸದಿಯು ಗರ್ಭಗುಡಿ, ಅಂತರಾಳ, ನವರಂಗ ಹಾಗು ತೆರೆದ ಮುಖ ಮಂಟಪವನ್ನು ಹೊಂದಿದೆ.

ಅಧಿಷ್ಠಾನದಲ್ಲಿ ಉಪಾನ, ಪದ್ಮ ಮತ್ತಿತರ ಭಾಗಗಳಿರದೆ ಸರಳವಾಗಿದೆ. ಬಸದಿಯನ್ನು ನೇರವಾಗಿ ಪೀಠದ ಮೇಲೆ ಕಟ್ಟಲಾಗಿದೆ. ಭಿತ್ತಿಯ ಮಧ್ಯಭಾಗದಲ್ಲಿ ಅರೆಗಂಬಗಳಿವೆ. ಅರೆಗಂಬಗಳನ್ನು ಬಿಟ್ಟು, ಭಿತ್ತಿಯಲ್ಲಿ ಯಾವುದೇ ಶಿಲ್ಪಗಳಿಲ್ಲ. ಪ್ರಸ್ತರದಲ್ಲಿನ ಕಪೋತ ಭಾಗವು ಬಸದಿಯ ಸುತ್ತಲೂ ಹೊರ ಬಾಗಿ, ಸ್ವಲ್ಪ ಮುಂದೆ ಚಾಚಿದ ರೀತಿಯಲ್ಲಿದ್ದು, ಸರಳವಾಗಿದೆ. ಪ್ರಸ್ತರದ ಮೇಲೆ ಪದ್ಮಗಳನ್ನು ಇತ್ತೀಚಿಗೆ ಅಲಂಕರಿಸಿದ್ದಾರೆ. ಬಸದಿಯ ಪೂರ್ವದ್ವಾರದ ಮುಂದೆ ಮಾನಸ್ತಂಭವಿದ್ದು, ಆಸ್ತಂಭದ ಮೇಲೆ ಚಿಕ್ಕ ಜಿನ ತೀರ್ಥಂಕರ ಮೂರ್ತಿ ಇದೆ.

ಗರ್ಭಗುಡಿಯಲ್ಲಿ ಇತ್ತೀಚಿನ ತೀರ್ಥಂಕರ ಮೂರ್ತಿ ಇದೆ. ಗರ್ಭಗುಡಿಯ ಮುಚ್ಚಿಗೆಯಲ್ಲಿ ಪದ್ಮವಿದೆ. ದ್ವಾರವು ಸರಳವಾಗಿದ್ದು, ಲಲಾಟದಲ್ಲಿ ' ಜಿನ ತೀರ್ಥಂಕರ ' ಮೂರ್ತಿಯನ್ನು ಕೆತ್ತಲಾಗಿದೆ. ಅಂತರಾಳವು ಆಯತಾಕಾರವಾಗಿದ್ದು, ಅದರ ಮುಚ್ಚಿಗೆಯಲ್ಲೂ ಪದ್ಮವಿದೆ. ಇದರ ದ್ವಾರವು ಯಾವುದೇ ಅಲಂಕರಣೆಯಿಲ್ಲದೆ ಸರಳವಾಗಿದೆ. ಲಲಾಟವು ಚೌಕಾಕಾರವಾಗಿದ್ದು, ಅದರಲ್ಲಿ ಯಾವ ಶಿಲ್ಪಗಳಿಲ್ಲ. ನವರಂಗದಲ್ಲಿ ನಾಲ್ಕು ಬೃಹತ್ ಗ್ರಾನೈಟ್ ಶಿಲೆಯ ನಾಲ್ಕು ಕಂಭಗಳಿವೆ. ಇವು ಚೌಕ-ಅಷ್ಟಾಕಾರವಾಗಿದ್ದು, ಸರಳ ರೀತಿಯಲ್ಲಿವೆ. ಕಂಬಗಳ ಮೇಲಿನ ಬೋದಿಗೆಗಳು ಸರಳವಾಗಿವೆ. ಈ ಕಂಬಗಳ ಮೇಲಿನ ಮುಚ್ಚಿಗೆಯಲ್ಲಿ ಪದ್ಮವಿದೆ. ನವರಂಗದ ದ್ವಾರವು ಸರಳವಾಗಿದ್ದು, ಲಲಾಟದಲ್ಲಿ 'ಜಿನ ತೀರ್ಥಂಕರ'ನನ್ನು ಚೌಕಾಕಾರದ ಪಟ್ಟಿಕೆಯಲ್ಲಿ ಕೆತ್ತಲಾಗಿದೆ. ಮುಖಮಂಟಪದಲ್ಲಿನ ಕಂಬಗಳು ಚೌಕ-ಅಷ್ಟಾಕಾರವಾಗಿದ್ದು, ಸರಳ ರೀತಿಯಲ್ಲಿವೆ. ಇವುಗಳ ಮೇಲಿನ ಬೋದಿಗೆಗಳು ಪದ್ಮದಳಗಳಿಂದ ಕೂಡಿದ್ದು, ತಾವರೆಯ ಮೊಗ್ಗು ಇಳಿಬಿದ್ದ ರೀತಿ ಬೋದಿಗೆಗಳ ನಾಲ್ಕು ದಿಕ್ಕಿನಲ್ಲೂ ಇವೆ. ಈ ಬಸದಿಯ ವಾಸ್ತು ಲಕ್ಷಣಗಳ ಆಧಾರದ ಮೇಲೆ ಇದು ವಿಜಯನಗರ ಶೈಲಿಯಲ್ಲಿ ನಿರ್ಮಿತವಾಗಿದೆಯೆಂದು ಹೇಳಬಹುದು.

೪.೨.೫. ಇತರೆ ದೇವಾಲಯಗಳು :-

ದಾವಣಗೆರೆ ಜಿಲ್ಲೆಯಲ್ಲಿ ನಿರ್ಧಿಷ್ಟ ಧಾರ್ಮಿಕ ಪಂಥವೊಂದಕ್ಕೆ ಸೇರದೇ ಇರುವ ದೇವಾಲಯಗಳನ್ನು ಈ ಶೀರ್ಷಿಕೆಯಡಿಯಲ್ಲಿ ವಿವರಿಸಲಾಗಿದೆ. ನಿರ್ಧಿಷ್ಟ ಪಂಥವೊಂದಕ್ಕೆ ಸೇರಿಸಲಾಗದ (ಮಿಶ್ರ ಪಂಥದ) ಹರಿಹರೇಶ್ವರ ದೇವಾಲಯಗಳು ಈ ಜಿಲ್ಲೆಯಲ್ಲಿ ಕಂಡುಬರುತ್ತಿದ್ದು, ಅವುಗಳ ವಾಸ್ತು ವಿವರಣೆ ಈ ರೀತಿ ಇದೆ.

೧. ಊರು : ಅರಸಿಕೆರೆ
೨. ತಾಲೂಕು : ಹರಪನಹಳ್ಳಿ
೩. ಹೆಸರು : ಹರಿಹರೇಶ್ವರ
೪. ಸ್ಥಳ : ಊರಿನ ಆರಕ್ಷಕ ಠಾಣೆ ಹಿಂಭಾಗ
೫. ಅಭಿಮುಖ : ಪಶ್ಚಿಮಾಭಿಮುಖ
೬. ಕಾಲ : ಕ್ರಿ.ಶ. ಸುಮಾರು ೧೧ನೇ ಶತಮಾನ
೭. ಶಿಖರ ಶೈಲಿ : ಕದಂಬನಾಗರ ಶೈಲಿ
೮. ಬಳಸಿದ ಶಿಲೆ : ಗ್ರಾನೈಟ್ ಮತ್ತು ಬಳಪದ ಶಿಲೆ

ಈ ದೇವಾಲಯ ಗರ್ಭಗುಡಿ, ಅಂತರಾಳ, ತೆರೆದ ಮುಖ ಮಂಪಟವನ್ನು ಹೊಂದಿದೆ. ಪೂರ್ವ, ಉತ್ತರ, ದಕ್ಷಿಣದಲ್ಲಿ ದ್ವಾರಗಳನ್ನು ಹೊಂದಿದೆ.

ಅಧಿಷ್ಠಾನದಲ್ಲಿ ಉಪಾನ, ಪದ್ಮ, ಕಪೋತಗಳಿಂದ ಕೂಡಿದ್ದು, ಉಪಾನವನ್ನು ಪದ್ಮಗಳಿಂದ ಅಲಂಕರಿಸಲಾಗಿದೆ. ಮುಖ ಮಂಟಪವು ತೆರೆದ ರೀತಿಯಲ್ಲಿ ಇರುವುದರಿಂದ ಗರ್ಭಗುಡಿ ಮತ್ತು ಅಂತರಾಳದ ಹೊರಭಾಗದಲ್ಲಿ ಮಾತ್ರ ಭಿತ್ತಿ ಇದ್ದು, ಆ ಭಿತ್ತಿಯು ಸರಳವಾಗಿದೆ. ಹಾಗು ಗರ್ಭಗುಡಿ ಭಿತ್ತಿಯ ಸುತ್ತಲಿನ ಮೇಲ್ಭಾಗದಲ್ಲಿ ಮಾತ್ರ ಪ್ರಸ್ತರವಿದೆ. ಈ ಪ್ರಸ್ತರದಲ್ಲಿನ ಕಪೋತ ಭಾಗವು ಸುತ್ತಲೂ ಸ್ವಲ್ಪ ಹೊರಭಾಗಿದ ರೀತಿಯಲ್ಲಿದೆ. ಗರ್ಭಗುಡಿ ಮೇಲೆ ಎಂಟುತಳಗಳಿಂದ ಕೂಡಿದ ಕದಂಬ ನಾಗರ ಶೈಲಿಯ ಶಿಖರವಿದೆ. ಶಿಖರದ ಮೇಲೆ ಕಲಶ ಹಾಗು ಸ್ತೂಪಿ ಇದೆ. ದೇವಾಲಯದ ಒಳಭಾಗದ ಗರ್ಭಗುಡಿಯು ಚೌಕಾಕಾರವಾಗಿದ್ದು, ಅದರಲ್ಲಿ ಹರಿಹರೇಶ್ವರ ಮೂರ್ತಿ ಇದೆ. ಇದರ ಮುಚ್ಚಿಗೆಯಲ್ಲಿ ಪದ್ಮವಿದೆ. ದ್ವಾರ ಮತ್ತು ಲಲಾಟಗಳಲ್ಲಿ ಅಲಂಕಾರವನ್ನು ಹೊಂದಿಲ್ಲ. ಅಂತರಾಳವು ಆಯತಾಕಾರವಾಗಿದ್ದು, ಅಲ್ಲಿ ಯಾವ ಮೂರ್ತಿಗಳಿಲ್ಲ. ಅಂತರಾಳದ ಮುಚ್ಚಿಗೆಯಲ್ಲಿ ಪದ್ಮವಿದೆ. ಅಂತರಾಳದ ಎರಡು ಬದಿಗೂ ಮೊದಲು ಎರಡು ಸ್ತಂಭಗಳ ಮೇಲಿನ ಮಕರ ತೋರಣದಲ್ಲಿ ತ್ರಿಮೂರ್ತಿಗಳನ್ನು ಸ್ಥಾನಿಕರಾಗಿರುವಂತೆ ಕೆತ್ತಲಾಗಿದೆ. ಈ ನವರಂಗದಲ್ಲಿ (ಅಂತರಾಳದ ದ್ವಾರದ ಎಡ ಮತ್ತು ಬಲದಲ್ಲಿ) ಎರಡು ಕೋಷ್ಠಗುಡಿಗಳಿದ್ದು, ಎಡಭಾಗದ

ಕೋಷ್ಠಗುಡಿಯಲ್ಲಿ ಸಪ್ತಮಾತೃಕೆಯರ ಮೂರ್ತಿ ಇದೆ. ನವರಂಗದಲ್ಲಿ ಹನ್ನೆರಡು ಕಂಭಗಳಿದ್ದು, ಚೌಕ, ಅಷ್ಟಕೋನಾಕಾರವಾಗಿವೆ. ಈ ಕಂಬಗಳ ಮೇಲೆ ಯಾವುದೇ ಶಿಲ್ಪಗಳಿಲ್ಲ. ಆದರೆ ಇವುಗಳ ಫಲಕದ ಭಾಗದಲ್ಲಿ ಪುಷ್ಪಗಳ ಅಲಂಕಾರವಿದೆ. ಬೋದಿಗೆಗಳು ಸರಲವಾಗಿವೆ. ಮಧ್ಯದ ನಾಲ್ಕು ಕಂಬಗಳ ಮೇಲಿನ ಮುಚ್ಚಿಗೆಯಲ್ಲಿ ಪದ್ಮವಿದೆ. ಇದೇ ನಾಲ್ಕು ಕಂಬಗಳ ಮಧ್ಯದ ವೇದಿಕೆಯಲ್ಲಿ ನಂದಿ ಇದೆ. ಈ ಮುಖಮಂಟಪಕ್ಕೆ ಪೂರ್ವ, ಉತ್ತರ ಮತ್ತು ದಕ್ಷಿಣಗಳಿಂದ ಪ್ರವೇಶಿಸಲು ದ್ವಾರಗಳಿವೆ. ಈ ಮೂರುದ್ವಾರಗಳಿಗೂ ಸೋಪಾನಗಳಿದ್ದು, ಆ ಸೋಪಾನಗಳ ಎರಡೂ ಬದಿಗೂ ' ಹಸ್ತಿ ಹಸ್ತಿ' ಫಲಕಗಳಿವೆ. ಈ ದೇವಾಲಯದ ವಾಸ್ತು ಲಕ್ಷಣಗಳ ಆಧಾರದ ಮೇಲೆ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಿಸಲಾಗಿದೆಯೆನ್ನಬಹುದು. ಕ್ರಿ.ಶ. ೧೧೧೨ರ ಗುಡಿಹಳ್ಳಿ ಶಾಸನದಲ್ಲಿ ಅರಸಿಕೆರೆ ನೊಳಂಬೇಶ್ವರ ಗುಡಿಯ ದೇವರ ಸೇವೆಗೆ ದತ್ತಿಯನ್ನು ಕೊಟ್ಟಿರುವುದನ್ನು ಆ ಶಾಸನ ಉಲ್ಲೇಖಿಸುತ್ತದೆ[೧೨೫].

೧. ಊರು : ಹರಿಹರ

೨. ತಾಲೂಕು : ಹರಿಹರ

೩. ಹೆಸರು : ಹರಿಹರೇಶ್ವರ

೪. ಸ್ಥಳ : ಊರಿನ ಪಶ್ಚಿಮ ದಿಕ್ಕಿಗೆ ತುಂಗಭದ್ರ ನದಿಯ ಬಲ ದಂಡೆಯ ಮೇಲೆ.

೫. ಅಭಿಮುಖ : ಪೂರ್ವಾಭಿಮುಖ

೬. ಕಾಲ : ಕ್ರಿ.ಶ. ೧೨೨೪[೧೨೬]

೭. ಶಿಖರ ಶೈಲಿ : ಮೂಲ ಶಿಖರವಿಲ್ಲ

೮. ಬಳಸಿದ ಶಿಲೆ : ಬಳಪದ ಶಿಲೆ

ಈ ದೇವಾಲಯ ಗರ್ಭಗುಡಿ, ಅಂತರಾಳ, ನವರಂಗ ತೆರೆದ ಮಹಾ ಮಂಟಪ ಹಾಗು ಮುಖಮಂಪಟವನ್ನು ಒಳಗೊಂಡಿದೆ.

ಅಧಿಷ್ಠಾನವು ಉಪಾನ, ಪದ್ಮ, ಕರ್ಣಿಕಾ, ಕಪೋತ, ಕಂಟಕ, ವೇದಿಗಳಿಂದ ಕೂಡಿದೆ. ಈ ಅಧಿಷ್ಠಾನದ ಕೆಳ ಪಟ್ಟಿ (ಉಪಾನ)ಯ ಭಾಗದಲ್ಲಿ ಲತಾ ಸುರುಳಿಗಳ ನಡುವೆ ಸ್ತ್ರೀ ಮತ್ತು ಪುರುಷರ ಶಿಲ್ಪಗಳನ್ನು ಕೆತ್ತಲಾಗಿದೆ. ಹಾಗೇ ಇದರ ಮೇಲಿನ ಪಟ್ಟಿ (ಪದ್ಮ)ಯಲ್ಲಿ ಪುಷ್ಪಗಳನ್ನು ಅಲಂಕರಿಸಲಾಗಿದೆ. ಭಿತ್ತಿಯು ಅರೆಗಂಭಗಳಿಂದ ಹಾಗು ಆ ಅರೆಗಂಬಗಳ ಮೇಲೆ ಶಿಖರದ ಮಾದರಿಗಳನ್ನು ಕೆತ್ತಲಾಗಿದೆ[೧೨೭]. (ಗರ್ಭಗುಡಿ, ಅಂತರಾಳ, ನವರಂಗ ಭಾಗದವರೆಗೆ ಮಾತ್ರ ಈ ರೀತಿ ಅಲಂಕರಣೆ ಇವೆ). ಗರ್ಭಗುಡಿಯ ಭಿತ್ತಿಯಲ್ಲಿ ಉತ್ತರ, ದಕ್ಷಿಣ ಹಾಗು ಪಶ್ಚಿಮ ದಿಕ್ಕಿಗೆ ಮೂರು ದೇವಕೊಷ್ಠಗಳಿವೆ. ಈ ಕೋಷ್ಠ ಗುಡಿಗಳ ಮೇಲೆ ಶಿಖರದ ಮಾದರಿಗಳನ್ನು ಕೆತ್ತಲಾಗಿದೆ. ದಕ್ಷಿಣ ಹಾಗು ಪಶ್ಚಿಮ ಭಾಗದ ದೇವಕೋಷ್ಠಗಳ ದ್ವಾರದ

[illegible]

[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]

[illegible]

ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವನ್ನು ಕೆತ್ತಲಾಗಿದೆ. ಈ ಮೂರು ದೇವ ಕೋಷ್ಠಗಳ ದ್ವಾರದಲ್ಲಿ ಕೆತ್ತಿದ ದ್ವಾರಪಾಲಕ ಶಿಲ್ಪಗಳು ನಶಿಸುತ್ತಿವೆ. ಮತ್ತು ಈ ಮೂರು ದೇವ ಕೋಷ್ಠಗಳಲ್ಲೂ ಈಗ ಮೂರ್ತಿಗಳಿಲ್ಲ. ಭಿತ್ತಿ ಮೇಲಿನ ಪ್ರಸ್ತರದ ಕಪೋತ ಭಾಗವು ಹೊರಚಾಚಿ ಕೆಳಬಾಗಿದ ರೀತಿಯಲ್ಲಿದೆ. ಇದು ಮಹಾ ಮಂಟಪದ ಸುತ್ತಲೂ ಹೆಚ್ಚು ಹೊರಬಾಗಿದ್ದು, ಆಂಗ್ಲ ವರ್ಣಮಾಲೆಯ 'ಎಸ್' ಆಕಾರದಲ್ಲಿದೆ. ಕಪೋತದ ಈ ಭಾಗದಲ್ಲಿ ಜೋಡಿ ಆನೆಗಳನ್ನು ಕೆತ್ತಲಾಗಿದೆ. ಕಪೋತದ ಮೇಲೆ ಕೂಟ, ಪಂಜರಗಳನ್ನು ಹಾಗು ಕೀರ್ತಿಮುಖಗಳನ್ನು ಕೆತ್ತಲಾಗಿದೆ. ಗರ್ಭಗುಡಿ ಮೇಲೆ ಈಗ ಮೂಲ ಶಿಖರವಿಲ್ಲ. ಆದರೆ ಸಳ ಹುಲಿಯನ್ನು ಕೊಲ್ಲುತ್ತಿರುವ ಶಿಲ್ಪವನ್ನು 'ಸುಖನಾಸಿ'ಯಲ್ಲಿ ಈಗಿನ ಶಿಖರಕ್ಕೆ ಹೊಂದಿಕೊಂಡಂತೆ ಇಟ್ಟಿದ್ದಾರೆ. ನವರಂಗದ ಉತ್ತರ ದ್ವಾರದ ಸ್ವಲ್ಪ ವಿಸ್ತರಿಸಿದ ಭಾಗದಲ್ಲಿ ಕಾಲ ಭೈರವನ ಗುಡಿ ಇದೆ. ಈ ಗುಡಿಯ ಅಧಿಷ್ಠಾನವು ಉಪಾನ, ಪದ್ಮ, ಕರ್ಣಿಕ, ಕಪೋತ, ಕಂಟಕ ಭಾಗಗಳಿಂದ ಕೂಡಿದೆ. ಇದರ ಭಿತ್ತಿಯು ಸರಳವಾಗಿದ್ದು, ಭಿತ್ತಿ ಮೇಲಿನ ಕಪೋತವು ಸ್ವಲ್ಪಹೊರಬಾಗಿದ ರೀತಿಯಲ್ಲಿದೆ. ಮೇಲ್ಗಡೆ ಭಿತ್ತಿಯ ಮೇಲೆ ಶಿಖರದ ಯಾವ ಕುರುಹು ಉಳಿದಿಲ್ಲ.

ಮಹಾಮಂಟಪ ಪ್ರವೇಶಿಸಲು ಪೂರ್ವ, ಉತ್ತರ, ದಕ್ಷಿಣದಲ್ಲಿ ಪ್ರವೇಶದ್ವಾರಗಳಿವೆ. ಮಹಾ ಮಂಟಪದ ಕಕ್ಷಾಸನದ ಹೊರಭಿತ್ತಿ (ಕೈಪಿಡಿ ಗೋಡೆ)ಯನ್ನು ಆರು ಪಟ್ಟಿಕೆಗಳಿಂದ ಸುಂದರವಾಗಿ ಅಲಂಕರಿಸಲಾಗಿದೆ. ಕೆಳಗಿನ ಮೊದಲ ಪಟ್ಟಿಯಲ್ಲಿ ಸುರುಳಿಗಳ ನಡುವೆ ಪುರುಷರನ್ನು ಹಾಗು ಹಂಸಗಳನ್ನು ಕೆತ್ತಲಾಗಿದೆ. ಆದರೆ ಮೇಲಿನ ಪಟ್ಟಿಯಲ್ಲಿ ಆನೆ,ಕುದುರೆ, ಒಂಟೆಗಳ ಮೇಲೆ ಸವಾರಿ ಮಾಡುತ್ತಿರುವ ಯೋಧರ ಶಿಲ್ಪಗಳನ್ನು ಕೆತ್ತಲಾಗಿದೆ. ನಾಲ್ಕನೆಯ ಪಟ್ಟಿಯಲ್ಲಿ ಶಿಖರದ ವಿವಿಧ ಮಾದರಿಗಳನ್ನು ಬಿಡಿಸಲಾಗಿದೆ. (ಬಹುತೇಕ ನಾಗರ ಶೈಲಿಯ ವಿಮಾನಗಳಿವೆ). ಈ ಶಿಖರಗಳ ಮಧ್ಯೆ ಹಿಂಗಾಲುಗಳ ಮೇಲೆ ಎದ್ದು ನಿಂತ ಸಿಂಹಗಳ ಕೆತ್ತನೆ ಮಾಡಲಾಗಿದೆ. ಐದನೆಯ ಪಟ್ಟಿಯಲ್ಲಿ ಅರೆಗಂಬಗಳ ನಡುವೆ ಸಂಗೀತಗಾರರ, ವಾದ್ಯದವರ, ನರ್ತನಗೈಯುತ್ತಿರುವ ಸ್ತ್ರೀ, ಶಿಲ್ಪಗಳಿವೆ. ಮಹಿಷಾಸುರ ಮರ್ಧಿನಿ, ಈಶ್ವರ, ವಿಷ್ಣು, ಬ್ರಹ್ಮ, ಗಣೇಶ, ಭೈರವ ಮೊದಲಾದ ದೇವತಾ ಮೂರ್ತಿಗಳನ್ನೂ ಕೆತ್ತಲಾಗಿದೆ. ಉತ್ತಮ ರೀತಿಯಲ್ಲಿ ಅಲಂಕರಿಸಲಾಗಿದೆ. ಇವುಗಳ ಮೇಲಿನ ಕೊನೆಯ ಪಟ್ಟಿಯ ಸುರುಳಿಯೊಳಗೆ ಲತಾ ಹಾಗು ಪುಷ್ಪಗಳನ್ನು ಮನೋಜ್ಞವಾಗಿ ಅಲಂಕರಿಸಲಾಗಿದೆ[೧೨೮]. ಪೂರ್ವದ್ವಾರಕ್ಕೆ ಅಭಿಮುಖವಾಗಿ ಚಾಲುಕ್ಯ ಶೈಲಿಯ ಎರಡು ದೀಪಸ್ತಂಭಗಳಿವೆ. ಕಲ್ಲಿನ ಕಟ್ಟೆಯ ಮೇಲೆ ನಿಲ್ಲಿಸಲಾದ ಈ ದೀಪ ಸ್ತಂಭಗಳಲ್ಲಿ ಎಣ್ಣೆ ಹಾಗು ಬತ್ತಿಗಳನ್ನಿಡಲು ಮುಂಚಾಚಿದ ಗುಳಿಗಳುಳ್ಳ ಏಣುಗಳಿವೆ. ಒಂದೊಂದು ಕಂಭಕ್ಕೂ ಸುಮಾರು ಎಪ್ಪತ್ತೈದು ಇಂತಹ ಏಣುಗಳಿದ್ದು, ಇವು ದೀಪ ಹಚ್ಚಲು ಸಹಾಯಕವಾಗಿವೆ[೧೨೯].

ದೇವಾಲಯದ ಸುತ್ತಲೂ ಪ್ರಕಾರ ಗೋಡೆಯಿದ್ದು, ಪೂರ್ವದಲ್ಲಿ ಪ್ರವೇಶದ್ವಾರವಿದೆ. ಈ ಪ್ರವೇಶದ್ವಾರವನ್ನು ಹೊಯ್ಸಳರ ಇನ್ನೊಬ್ಬ ಅಮಾತ್ಯ ಸೋಮದಂಡಾಧಿಪತಿಯು ಕ್ರಿ.ಶ.೧೨೬೮ರಲ್ಲಿ

ದೇವಸ್ಥಾನದ ಚೆಲುವನ್ನು ಇಮ್ಮಡಿಸಲು ಐದು ಅಂತಸ್ತುಗಳಿಂದ ಶೋಭಿಸುವಂತೆ ಮಾಡಿದನೆಂದು ಶಾಸನವೊಂದು ಉಲ್ಲೇಖಿಸುತ್ತದೆ[೧೩೦]. ಆದರೆ ಈ ಗೋಪುರದ ಮೊದಲಿನ ಅಂತಸ್ತುಗಳು ಈಗ ಉಳಿದಿಲ್ಲ.

ಒಳಭಾಗದ ಗರ್ಭಗುಡಿಯು ಚೌಕಾಕಾರವಾಗಿದೆ. ಇದರಲ್ಲಿ ಹರಿಹರೇಶ್ವರನ ಮೂರ್ತಿ ಇದೆ. ಗರ್ಭಗುಡಿಯ ಮುಚ್ಚಿಗೆಯಲ್ಲಿ ಪದ್ಮವಿದೆ. ದ್ವಾರದ ಪೇದ್ಯಾ ಭಾಗದಲ್ಲಿ ಕುಂಭದ ಅಲಂಕಾರವಿದ್ದು, ಉಳಿದಂತೆ ದ್ವಾರದಲ್ಲಿ ಯಾವುದೇ ಅಲಂಕಾರವಿಲ್ಲ. ಗರ್ಭಗುಡಿಯ ಮುಂದಿನ ಅಂತರಾಳವು ಆಯತಾಕಾರವಾಗಿದ್ದು, ಇದರಲ್ಲಿ ಯಾವ ಮೂರ್ತಿಗಳಿಲ್ಲ. ಇದರ ಮುಚ್ಚಿಗೆಯಲ್ಲೂ ಪದ್ಮವಿದೆ. ದ್ವಾರದ ಬಲ ಪೇದ್ಯ ಭಾಗದಲ್ಲಿ ಶೈವ, ಎಡಭಾಗದಲ್ಲಿ ವೈಷ್ಣವ (ಒಂದು ಭಾಗಕ್ಕೆ ಇಬ್ಬರಂತೆ ಒಟ್ಟು ನಾಲ್ಕು ಜನ) ದ್ವಾರಪಾಲಕರಿದ್ದಾರೆ. ದ್ವಾರವು ಪುಷ್ಪ, ಲತಾ, ಸ್ತಂಭ,ಶಾಖಾಗಳಿಂದ ಕೂಡಿದ್ದು, ಸ್ತಂಭ ಶಾಖೆಯ ಎರಡೂ ಕಡೆ ಒಂದು ಏಳರಂತೆ ಒಂದೊಂದರಲ್ಲೂ ಎರಡೂ ಸಾಲಿನ ಜಾಲಂಧ್ರಗಳಿವೆ. ಈ ಜಾಲಂಧ್ರಗಳನ್ನು ಪುಷ್ಪಗಳಿಂದ ಅಲಂಕರಿಸಲಾಗಿದೆ. ಮೊದಲಿನ ಎರಡು ಶಾಖೆಗಳು ಲಲಾಟದವರೆಗೂ ಮುಂದುವರಿದಿವೆ. ಚೌಕಾಕಾರದ ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವನ್ನು ಕೆತ್ತಲಾಗಿದೆ. ಗಜಲಕ್ಷ್ಮಿ ಪಟ್ಟಿಕೆಯ ಎರಡೂ ಬದಿಗೂ ಕಮಲದ ಮೊಗ್ಗು ಇಳಿಬಿದ್ದ ರಿತಿಯ ಅಲಂಕಾರವಿದೆ. ನವರಂಗದಲ್ಲಿ (ಅಂತರಾಳದ್ವಾರದ ಎರಡೂ ಬದಿಗೆ) ಎರಡು ಕೊಷ್ಠಗುಡಿಗಳಿವೆ. ಅವುಗಳಲ್ಲಿ ಈಗ ಮೂರ್ತಿಗಳಿಲ್ಲ. ನವರಂಗದಲ್ಲಿ ಬಳಪದ ಶಿಲೆಯ ತಿರುಗುಣಿಯಂತ್ರದಿಂದ ಹೊಳಪಾಗಿಸಿದ ಗಂಟಾಕೃತಿಯ ನಾಲ್ಕು ಕಂಭಗಳಿವೆ. ಪೀಠದ ಮೇಲೆ ನಿಂತಿರುವ ಈ ಕಂಬಗಳ ಕೆಳಭಾಗ ಚೌಕಾಕಾರದಲ್ಲಿದೆ. ಅದರ ಮೇಲೆ ಸುಮಾರು ಹನ್ನೊಂದು ವೃತ್ತಗಳುಳ್ಳ ಭಾಗವಿದ್ದು, ಅದರ ಮೇಲೆ ತಿರುಗಿ ಹಾಕಿದ ಬೋಗುಣಿಯಂತೆ ಮಧ್ಯೆ ಉಬ್ಬಿದ ವೃತ್ತವಿದೆ. ಈ ವೃತ್ತಾಕಾರದ ಭಾಗವು ಪತ್ರ ಹಾಗು ಮಾಲಾಲಂಕಾರದಿಂದ ಕೂಡಿದೆ. ಈ ಕಂಭಗಳ ಮೇಲಿನ ಬೋದಿಗೆಗಳು ಪುಷ್ಪದಳಗಳಿಂದ ಅಲಂಕೃತವಾಗಿವೆ. ಈ ನಾಲ್ಕು ಕಂಬಗಳ ಮಧ್ಯದ ಮೇಲಿನ ಮುಚ್ಚಿಗೆಯಲ್ಲಿ ಅಷ್ಠದಿಕ್ಪಾಲಕರನ್ನು ಅವರ ವಾಹನ ಸಮೇತರಾಗಿ ತುಂಬ ಸುಂದರವಾಗಿ ಕೆತ್ತಲಾಗಿದೆ[೧೩೧]. ಈ ಅಷ್ಠದಿಕ್ಪಾಲಕರ ಮಧ್ಯದ ಪಟ್ಟಿಕೆಯಲ್ಲಿದ್ದ ಶಿಲ್ಪ ಈಗ ನಾಶವಾಗಿ ಹೋಗಿದೆ[೧೩೨].

ಈ ನವರಂಗದ ಉಳಿದ ಮುಚ್ಚಿಗೆಗಳಲ್ಲಿ ಕಮಲದ ಮೊಗ್ಗುಗಳನ್ನು ಕೆತ್ತಲಾಗಿದೆ. ನವರಂಗಕ್ಕೆ ಪೂರ್ವ, ಉತ್ತರ, ದಕ್ಷಿಣದಿಂದ ಪ್ರವೇಶಿಸಲು ದ್ವಾರಗಳಿವೆ. ಉತ್ತರದ್ವಾರವು ದ್ವಾರಪಾಲಕರಿಂದ ಹಾಗು ಲತಾ, ಪುಷ್ಪ, ಸ್ತಂಭ ಶಾಖೆಗಳಿಂದ ಅಲಂಕೃತವಾಗಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಗಜಲಕ್ಷ್ಮಿ ಶಿಲ್ಪದ ಎರಡೂ ಕಡೆ ಇಳಿಬಿದ್ದ ಕಮಲದ ಮೊಗ್ಗುಗಳ ಅಲಂಕಾರವಿದೆ. ದಕ್ಷಿಣದ್ವಾರವು ಉತ್ತರ ದ್ವಾರದ ಅಲಂಕಾರದ ರೀತಿಯಲ್ಲಿಯೇ ಇದೆ. ಆದರೆ ಈ ದ್ವಾರದ ಮುಂದೆ ನಾಲ್ಕು ಕಂಭಗಳಿಂದ ಕೂಡಿದ ಮುಖಮಂಟಪವಿದೆ. ಈ ಮುಖ ಮಂಟಪದ ಒಳಭಾಗಕ್ಕೆ ಕಕ್ಷಾಸನಗಳಿವೆ.

ನವರಂಗದ ಪೂರ್ವದ್ವಾರದ ಪೇದ್ಯಭಾಗದಲ್ಲಿ ದ್ವಾರ ಪಾಲಕರು ಹಾಗು ಚಾಮರಧಾರಿಣಿಯರಿದ್ದಾರೆ. ದ್ವಾರವು ರತ್ನ, ಪುಷ್ಪ, ಸ್ತಂಭ, ಪುಷ್ಪ, ಸ್ತಂಭ, ಸುರಳಿಯೊಳಗೆ ನಾಗದಂಪತಿಗಳನ್ನು ಚಿತ್ರಿಸಿದ ನಾಗಶಾಖೆ, ಯಾಳಿ ಶಾಖೆಗಳಿಂದಕೂಡಿದೆ[೧೩೩]. ಮೊದಲ ಮೂರು ಶಾಖೆಗಳು ಲಲಾಟದವರೆಗೂ ಮುಂದುವರಿದಿದ್ದು, ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವನ್ನು ಚೌಕಾಕಾರದ ಪಟ್ಟಿಕೆಯಲ್ಲಿ ಕೆತ್ತಲಾಗಿದೆ. ಈ ಗಜಲಕ್ಷ್ಮಿ ಶಿಲ್ಪದ ಎರಡೂ ಬದಿಗೂ ಇಳಿಬಿದ್ದ ಕಮಲದ ಮೊಗ್ಗಿನ ಅಲಂಕಾರವನ್ನು ಸುಂದರವಾಗಿ ಮಾಡಲಾಗಿದೆ. ಲಲಾಟದ ಮೇಲಿನ ಉತ್ತರಾಂಗ ಭಾಗವನ್ನು ಪುಷ್ಪ, ಲತೆಗಳಿಂದ ಹಾಗು ಚಿಕ್ಕ ಸ್ತಂಭಗಳಿಂದ ಅಲಂಕರಿಸಲಾಗಿದೆ. ಉತ್ತರಾಂಗ ಭಾಗದ ಮಧ್ಯದಲ್ಲಿ ಹರಿಹರೇಶ್ವರ ಹಾಗು ಆ ಮೂರ್ತಿಯ ಎರಡೂ ಬದಿಗೂ ಕೆಲವು ಧ್ಯಾನಾಸಕ್ತ ಮೂರ್ತಿಗಳನ್ನು ಕೆತ್ತಿದ್ದು, ಇವುಗಳನ್ನು ಕೀರ್ತಿ ಮುಖಗಳಿಂದ ಸಿಂಗರಿಸಲಾಗಿದೆ.

ನವರಂಗದ ಮುಂದಿನ ಮಹಾ ಮಂಟಪವನ್ನು ಪ್ರವೇಶಿಸಲು ಪೂರ್ವ, ಉತ್ತರ, ದಕ್ಷಿಣ ಭಾಗಕ್ಕೆ ಚಿಕ್ಕ ಪ್ರವೇಶದ್ವಾರಗಳಿವೆ. ಹಾಗೆಯೇ ನವರಂಗದ ಭಿತ್ತಿಯ ಮೂಲೆಗಳಲ್ಲಿ ಅಂದರೆ ವಾಯುವ್ಯ ಹಾಗು ನೈರುತ್ಯ ಭಾಗದಲ್ಲಿ ಎರಡು ಚಿಕ್ಕ ಪ್ರವೇಶ ದಾರಿಗಳಿವೆ. ಮಹಾ ಮಂಟಪದಲ್ಲಿ ಅರವತ್ತೆಂಟು ಬಳಪದ ಶಿಲೆಯ ಸುಂದರ ಕಂಬಗಳಿವೆ. ಇವುಗಳ ಸುತ್ತಳತೆ ಹೆಚ್ಚಾಗಿರುವುದರಿಂದ ಕಂಭಗಳು ಕುಳ್ಳಾಗಿರುವಂತೆ ಕಂಡುಬರುತ್ತವೆ. ಕಂಭಗಳ ಪೀಠದ ಮೇಲಿನ ಭಾಗ ಚೌಕಾಕಾರವಾಗಿದ್ದು, ಅದರ ಮೇಲಿನ ಕಂಭಗಳ ವಿನ್ಯಾಸ ನವರಂಗದಲ್ಲಿನ ಕಂಭಗಳಂತೆಯೇ ಇದೆ. ಈ ಕಂಭಗಳ ಮೇಲಿನ ಬೋದಿಗೆಯು ಪುಷ್ಪಗಳ ಅಲಂಕರಣದಿಂದ ಕೂಡಿದೆ. ಈ ಮಹಾಮಂಟಪದ ಮಧ್ಯದ ಮುಚ್ಚಿಗೆ (ವಿತಾನ)ಯಲ್ಲಿ ಅರಳಿದ ಕಮಲದಿಂದ ಹಾಗು ಇಳಿಬಿದ್ದ ಕಮಲದ ಮೊಗ್ಗಿನ(ಪದ್ಮ ಶಿಲಾ) ಅಲಂಕಾರವಿದೆ. ಹಾಗು ಅದರ ಸುತ್ತಲೂ ಲತಾ-ಪುಷ್ಪಗಳನ್ನು ಕೆತ್ತಲಾಗಿದೆ. ಈ ಮಹಾ ಮಂಟಪದ ಸುತ್ತಲೂ ಹೊರಚಾಚಿದ ಕಪೋತದ ಒಳಭಾಗದಲ್ಲಿ ಪುಷ್ಪ, ಸಳನ ಮೇಲೆ ಬಿದ್ದ ಹುಲಿ, ಆನೆ ಹಾಗು ಸಿಂಹಗಳನ್ನು ಮತ್ತು ಕೀರ್ತಿಮುಖಗಳನ್ನು ಸುಂದರವಾಗಿ ಕೆತ್ತಲಾಗಿದೆ. ಮಹಾ ಮಂಟಪದ ಪೂರ್ವ ದ್ವಾರದ ಮುಂದೆ ನಂತರ ಕಾಲದಲ್ಲಿ ನಿರ್ಮಿಸಿದ ಮುಖಮಂಟಪವಿದೆ. ಹೊಯ್ಸಳರ ಕಾಲದಲ್ಲಿ ನಿರ್ಮಿತವಾದ ಈ ದೇವಾಲಯಕ್ಕೆ ನಂತರ ಕಾಲದಲ್ಲಿ ಬಂದ ಅರಸರು ಅಪಾರ ದಾನದತ್ತಿಗಳನ್ನು ಬಿಟ್ಟು ಅದರ ಉಳುವಿಗೆ ಕಾರಣರಾಗಿದ್ದಾರೆ[೧೩೪].

[illegible]

೪.೩. ಕಾಲಾನುಕ್ರಮದಲ್ಲಿ ದೇವಾಲಯಗಳ ಬೆಳವಣಿಗೆ :-

ದಾವಣಗೆರೆ ಜಿಲ್ಲೆಯ ವ್ಯಾಪ್ತಿಯಲ್ಲಿ ವಿವಿಧ ಶೈಲಿಗಳ ಹಾಗು ವಿವಿಧ ಕಾಲಗಳ ದೇವಾಲಯಗಳು ಜಿಲ್ಲೆಯಾದ್ಯಾಂತ ಕೇಂದ್ರೀಕೃತವಾಗಿವೆ. ಪ್ರಾಚೀನ ಮತ್ತು ಮಧ್ಯಯುಗೀನ ಕಾಲಕ್ಕೆ ಸೇರಿದ ಈ ದೇವಾಲಯಗಳ ಕೆಲವು ಭಾಗಗಳನ್ನು ಆರಂಭದ ಅರಸರು ಇಲ್ಲವೇ ಅವರ ಸಾಮಾಂತರು ನಿರ್ಮಿಸಿದ್ದಾರೆ, ಮತ್ತೆ ಕೆಲವು ಭಾಗಗಳನ್ನು ನಂತರ ಬಂದ ಅರಸರು ಇಲ್ಲವೇ ಸಾಮಾಂತರ ಅಧಿಕಾರಿಗಳು ನಿರ್ಮಿಸಿದ್ದರೆ, ದಾನ-ದತ್ತಿಗಳನ್ನು ನೀಡಿ ಪ್ರೋತ್ಸಾಹಿಸಿ, ಈ ಜಿಲ್ಲೆಯ ದೇವಾಲಯಗಳ ಬೆಳವಣಿಗೆಗೆ ಸಹಕಾರಿಯಾಗಿದ್ದಾರೆ. ಇವರುಗಳು ದೇವಾಲಯಗಳ ನಿರ್ಮಾಣವನ್ನು ಖಚಿತವಾಗಿ ಹೇಳಲು ಶಾಸನಗಳು ಸಹಕಾರಿ ಆಗಿವೆ. ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಇರುವ ದೇವಾಲಯಗಳಿಗೆ ನೀಡಿದ ದಾನದತ್ತಿಗಳ ಕುರಿತು ಅಲ್ಲಿ ದೊರೆತ ಬಹುತೇಕ ಶಾಸನಗಳು ವಿವರಿಸುತ್ತವೆ. ಆದರೆ ದೇವಾಲಯಗಳ ನಿರ್ಮಾಣ ಕುರಿತು ಹೇಳುವ ಶಾಸನಗಳು ಹೆಚ್ಚಾಗಿ ದೊರೆತಿಲ್ಲ.

ದಾವಣಗೆರೆ ಜಿಲ್ಲೆಯಲ್ಲಿನ ದೇವಾಲಯಗಳ ಕಾಲಾನುಕ್ರಮದ ಬೆಳವಣಿಕೆಯನ್ನು ನಾವು ಗುರುತಿಸಬೇಕಾದರೆ ದೇವಾಲಯಗಳ ವಾಸ್ತು ಮತ್ತು ಮೂರ್ತಿ ಲಕ್ಷಣಗಳನ್ನು ಆಧಾರವಾಗಿಟ್ಟುಕೊಂಡು, ಅದರ ಜೊತೆಗೆ ದೇವಾಲಯಗಳ ನಿರ್ಮಾಣದಲ್ಲಿ ಬಳಕೆಯಾದ ಶಿಲೆ, ದೇವಾಲಯಗಳ ರಚನಾ ಸ್ವರೂಪ ಹಾಗು ವಿವಿಧ ರಾಜವಂಶಗಳ ಶೈಲಿಗಳನ್ನು ಆಧಾರವಾಗಿಟ್ಟುಕೊಂಡು ಕಾಲವನ್ನು ಗುರುತಿಸಬೇಕಾಗುತ್ತದೆ.

ದಾವಣಗೆರೆ ಜಿಲ್ಲೆಯು ಪ್ರಾಚೀನ ಮತ್ತು ಮಧ್ಯಯುಗೀನ ಕಾಲದಲ್ಲಿ ಮೌರ್ಯ, ಶಾತವಾಹನ, ಕದಂಬ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣಿ ಚಾಲುಕ್ಯ, ಉಚ್ಚಂಗಿ ಪಾಂಡ್ಯ, ಬೆಳಗುತ್ತಿ ಸಿಂದ, ನೊಳಂಬ, ಸೇವುಣ, ಹೊಯ್ಸಳ ಮತ್ತು ವಿಜಯನಗರದ ಅರಸರ ಆಳ್ವಿಕೆಗೆ ಒಳಪಟ್ಟಿತ್ತಾದರೂ ಈ ಎಲ್ಲಾ ರಾಜವಂಶಗಳು ದೇವಾಲಯಗಳ ನಿರ್ಮಾಣ ಮಾಡಿದಂತೆ ತೋರುವುದಿಲ್ಲ. ಈ ಜಿಲ್ಲೆಯಲ್ಲಿರುವ ದೇವಾಲಯಗಳಲ್ಲಿ ಅತಿ ಪ್ರಾಚೀನ ದೇವಾಲಯಗಳೆಂದರೆ; ರಾಷ್ಟ್ರಕೂಟರ ಕಾಲದವುಗಳಾಗಿವೆ. ತದನಂತರ ಕಲ್ಯಾಣಿ ಚಾಲುಕ್ಯರ ಕಾಲದ ದೇವಾಲಯಗಳು ಇದ್ದು, ಅವು ಇತರೆ ದೇವಾಲಯಗಳಿಗಿಂತ ಅಧಿಕವಾಗಿವೆ. ಉಚ್ಚಂಗಿ ಪಾಂಡ್ಯರ, ಬೆಳಗುತ್ತಿ ಸಿಂದರ, ಸೇವುಣರ ಕಾಲದ ದೇವಾಲಯಗಳು ಜಿಲ್ಲೆಯ ಕೆಲವು ಭಾಗಗಳಲ್ಲಿದ್ದು, ಅವುಗಳು ಕಲ್ಯಾಣಿ ಚಾಲುಕ್ಯರ ಶೈಲಿಯ ಮಾದರಿಯಲ್ಲಿಯೇ ಅಲ್ಪ ಸ್ವಲ್ಪ ವ್ಯತ್ಯಾಸ ಮಾಡಿ ಕೆಲ ವಿಭಿನ್ನ ಲಕ್ಷಣಗಳನ್ನು ಅಳವಡಿಸಿಕೊಂಡು ನಿರ್ಮಾಣವಾಗಿರುವುದನ್ನು ನಾವು ಕಾಣಬಹುದು. ಹೊಯ್ಸಳ ಮತ್ತು ವಿಜಯನಗರ ಕಾಲದ ದೇವಾಲಯಗಳು ಕೂಡಾ ಈ ಜಿಲ್ಲೆಯ ವಿವಿಧ ಕಡೆ ಕೇಂದ್ರೀಕೃತವಾಗಿವೆ. ಜಿಲ್ಲೆಯಲ್ಲಿನ ದೇವಾಲಯಗಳ ಕಾಲಾನುಕ್ರಮದ ಬೆಳವಣಿಗೆಯನ್ನು ರಾಜವಂಶಗಳ ನೆಲಗಟ್ಟಿನಲ್ಲಿ ಈ ಕೆಳಗಿನ ರೀತಿಯಲ್ಲಿ ಗುರುತಿಸಲಾಗಿದೆ.

ರಾಷ್ಟ್ರಕೂಟರ ಕಾಲದ ದೇವಾಲಯಗಳು:-

ಕೂಡದಗುಡ್ಡದ ಈಶ್ವರ (ಕ್ರಿ.ಶ. ೮ನೇ ಶತಮಾನದ ಕೊನೆಯ ಭಾಗ), ಮಸಣಕೆರೆಯ ಈಶ್ವರ (ಕ್ರಿ.ಶ. ೯ನೇ ಶತಮಾನ) ಚದುರಗೊಳದ ಬನಶಂಕರಿ ದೇವಾಲಯ (ಕ್ರಿ.ಶ. ಸು. ೯ನೇ ಶತಮಾನದ ಅಂತ್ಯಕಾಲಕ್ಕೆ)ಗಳು ರಾಷ್ಟ್ರಕೂಟರ ಕಾಲಕ್ಕೆ ಸೇರಿದ ದೇವಾಲಯಗಳೆಂದು ಆ ದೇವಾಲಯಗಳ ವಾಸ್ತು ಹಾಗು ಮೂರ್ತಿ ಲಕ್ಷಣಗಳ ಆಧಾರದ ಮೇಲೆ ಹೇಳಬಹುದು. ಬಾಗಳಿಯ ಕಲ್ಲೇಶ್ವರ ದೇವಾಲಯದ ಗರ್ಭಗೃಹ, ಅಂತರಾಳ ಮತ್ತು ನವರಂಗಗಳು ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಾಣವಾಗಿವೆ[೧೬೫]. ಈ ದೇವಾಲಯದ ಅಧಿಷ್ಠಾನವು ರಾಷ್ಟ್ರಕೂಟರ ಕಾಲದ್ದಾಗಿದ್ದು, ಅದು ರಾಯಚೂರು ಜಿಲ್ಲೆಯ ಕೂಕ್ಕನೂರಿನ ನವಲಿಂಗ ದೇವಾಲಯದ ಅಧಿಷ್ಠಾನದ ರೀತಿಯಲ್ಲಿದೆ[೧೬೬].

ಕಲ್ಯಾಣಿ ಚಾಲುಕ್ಯರ ಕಾಲದ ದೇವಾಲಯಗಳು :-

ಈ ಕಾಲದ ದೇವಾಲಯಗಳು ಬಾಗಳಿ ಕಲ್ಲೇಶ್ವರ (ಸೂರ್ಯಗುಡಿ ಕ್ರಿ.ಶ. ೯೮೭), ಮಹಾ ಮಂಟಪ ಹಾಗು ನರಸಿಂಹಗುಡಿ (ಕ್ರಿ.ಶ. ೧೧ನೇ ಶತಮಾನ) ನಂದಿಗುಡಿಯ ಈಶ್ವರ (ಕ್ರಿ.ಶ. ೧೦ನೇ ಶತಮಾನ)[೧೬೭] ಕುರುವದಗಡ್ಡೆ ರಾಮೇಶ್ವರ[೧೬೮] ಬಿಳಚೋಡಿನ ಈಶ್ವರ (ಕ್ರಿ.ಶ. ಸು. ೧೧ನೇ ಶತಮಾನದ ಮಧ್ಯಭಾಗ), ಹಲವಾಗಲಿನ ಕಲ್ಲೇಶ್ವರ , ಬಾಗಳಿ ಚನ್ನಬಸವ, (ಕ್ರಿ.ಶ. ಸು. ೧೧ನೇ ಶತಮಾನದ ಕೊನೆಯ ಭಾಗ) ಅರಸಿಕೆರೆಯ ಹರಿಹರೇಶ್ವರ (ಕ್ರಿ.ಶ. ೧೧ನೇ ಶತಮಾನ) , ಕಲ್ಲೇದೇವರಪುರದ ತ್ರಿಕೂಟಲಿಂಗೇಶ್ವರ (ಕ್ರಿ.ಶ. ೧೧ನೇ ಶತಮಾನ), ಉಚ್ಚಂಗಿದುರ್ಗದ ತವಕ್ಲೇಶ್ವರ (ಕ್ರಿ.ಶ. ೧೧ನೇ ಶತಮಾನದ ಅಂತ್ಯ ಕಾಲ), ಸಾರಥಿಯ ಬಸವೇಶ್ವರ (ಕ್ರಿ.ಶ. ಸು.೧೧ನೇ ಶತಮಾನ), ದೇವರಬೆಳಕೆರೆಯ ಕಲ್ಲೇಶ್ವರ (ಕ್ರಿ.ಶ. ಸು. ೧೧ನೇ ಶತಮಾನ), ನೀಲಗುಂದದ ಭೀಮೇಶ್ವರ (ಕ್ರಿ.ಶ. ೧೧ನೇ ಶತಮಾನದ ಕೊನೆಯ ಭಾಗ), ಉಚ್ಚಂಗಿದುರ್ಗದ ನೊಣ್ಣೇಶ್ವರ(ಕ್ರಿ.ಶ. ೧೧ನೇ ಶತಮಾನದ ಕೊನೆಯ ಭಾಗ) ನೀಲಗುಂದದ ಮುಕ್ತಿ ರಾಮೇಶ್ವರ (ಕ್ರಿ.ಶ. ೧೧ನೇ ಶತಮಾನದ ಅಂತ್ಯಕಾಲ), ನೀಲಗುಂದದ ಅನಂತಶಯನ(ಕ್ರಿ.ಶ. ೧೧ನೇ ಶತಮಾನದ ಕೊನೆಯ ಭಾಗ), ಜಿಗಳಿಯ ರಂಗನಾಥ (ಕ್ರಿ.ಶ. ಸು. ೧೧ನೇ ಶತಮಾನದ ಕೊನೆಯ ಭಾಗ), ನೀಲಗುಂದದ ಲಕ್ಷ್ಮಿ ನಾರಾಯಣ (ಕ್ರಿ.ಶ. ೧೨ನೇ ಶತಮಾನದ ಮೊದಲ ಭಾಗ)[೧೬೯], ಬಾಗಳಿಯ ಸಂಗನಬಸವೇಶ್ವರ (ಕ್ರಿ.ಶ.೧೨ನೇ ಶತಮಾನದ ಮೊದಲ ಭಾಗ), ಚಿಗಟೇರಿಯ ರಾಮಲಿಂಗೇಶ್ವರ (ಕ್ರಿ.ಶ. ೧೨ನೇ ಶತಮಾನದ ಮೊದಲ ಭಾಗ), ಕುಂಚೂರು ಕಲ್ಲೇಶ್ವರ (ಕ್ರಿ.ಶ. ೧೨ನೇ ಶತಮಾನದ ಆರಂಭ ಕಾಲ), ಬಾಗಳಿಯ ಜಿನ ಬಸದಿ (ಕ್ರಿ.ಶ.ಸು. ೧೨ನೇ ಶತಮಾನದ ಮೊದಲ ಭಾಗ) ಈ ಎಲ್ಲಾ ದೇವಾಲಯಗಳಲ್ಲಿ ಕಲ್ಯಾಣ ಚಾಲುಕ್ಯ ಶೈಲಿಯ ವಾಸ್ತು ಲಕ್ಷಣಗಳನ್ನು ಕಾಣಬಹುದಾಗಿದೆ. ಆದುದರಿಂದ ದೇವಾಲಯಗಳ ಶೈಲಿಯ ಆಧಾರದ ಮೇಲೆ ಇವರ

ಕಾಲದಲ್ಲಿ ನಿರ್ಮಾಣವಾಗಿವೆಯೆಂದು ಹೇಳಬಹುದು. ಬಾಗಳಿ ಕಲ್ಲೇಶ್ವರ ದೇವಾಲಯದ ಮುಂಭಾಗದಲ್ಲಿನ ಸೂರ್ಯಗುಡಿಯು ಕ್ರಿ.ಶ. ೯೮೭ರಲ್ಲಿ ಕಲ್ಯಾಣಿ ಚಾಲುಕ್ಯ ದೊರೆ ಅಹಮಲ್ಲನ ಕಾಲದಲ್ಲಿ ನಿರ್ಮಾಣವಾಯಿತೆಂದು ಶಾಸನ ಉಲ್ಲೇಖಿಸುತ್ತದೆ[೧೪೦]. ಈ ಗುಡಿಯ ಅಧಿಷ್ಠಾನವು ಬಳ್ಳಾರಿ ಜಿಲ್ಲೆಯ ಕೊಳಗಲ್ಲು ಕಾಶಿವಿಶ್ವೇಶ್ವರ ದೇವಾಲಯಕ್ಕೆ ಹೋಲಿಕೆಯಾಗುತ್ತದೆ. ಈ ಗುಡಿಯ ಭಿತ್ತಿ ಭಾಗದಲ್ಲಿ ಯಾವ ಅಲಂಕರಣೆ ಇರದೇ ಸರಳವಾಗಿದೆ. ನೀಲಗುಂದದ ಕ್ರಿ. ಶ. ೧೦೯೭ರ ಶಾಸನದಿಂದ ಸ್ವಯಾಂಭು ರಾಮೇಶ್ವರ ದೇವರಿಗೆ ಭೂಮಿಯನ್ನು ದಾನವಾಗಿ ಬಿಟ್ಟ ವಿಚಾರ ತಿಳಿದುಬರುತ್ತದೆ[೧೪೧]. ಶಾಸನ ಉಲ್ಲೇಖಿತ ಭೂಮಿಯು ಭೀಮೇಶ್ವರ ದೇವಾಲಯದ ಉತ್ತರ ಭಾಗಕ್ಕಿದೆ. ಹಾಗಾಗಿ ಇದೇ ಕಾಲದಲ್ಲಿ ಭೀಮಲಿಂಗೇಶ್ವರ ದೇವಾಲಯವು ಅಸ್ಥಿತ್ವಕ್ಕೆ ಬಂದಿರಬೇಕು. ಆದುದರಿಂದ ಈ ದೇವಾಲಯದ ಕಾಲ ಕ್ರಿ.ಶ. ೧೧ನೇ ಶತಮಾನದ ಕೊನೆಯ ಭಾಗವೆಂದು ಹೇಳಬಹುದು.

ಬೆಳಗುತ್ತಿ ಸಿಂದರ ಕಾಲದ ದೇವಾಲಯಗಳು :

ಇವರ ಕಾಲದ ದೇವಾಲಯಗಳೆಂದರೆ; ಬೆಳಗುತ್ತಿಯ ಸಿದ್ಧಲಿಂಗೇಶ್ವರ (ಕ್ರಿ.ಶ. ೧೧ನೇ ಶತಮಾನದ ಮಧ್ಯಭಾಗ) ಹಾಗು ಅದೇ ಗ್ರಾಮದ ಕೇಶವ ದೇವಾಲಯ (ಕ್ರಿ.ಶ. ಸು. ೧೧ನೇ ಶತಮಾನದ ಅಂತ್ಯಕಾಲ) ಈ ಎರಡೂ ದೇವಾಲಯಗಳು ಇವರ ಕಾಲಕ್ಕೆ ಸೇರಿದವೆಂದು ಕೆಲವರು ನಿರ್ಣಯಿಸಿದ್ದಾರೆ[೧೪೨].

ಉಚ್ಚಂಗಿ ಪಾಂಡ್ಯರ ಕಾಲದ ದೇವಾಲಯಗಳು :-

ಇವರ ಕಾಲದ ದೇವಾಲಯಗಳು ದಾವಣಗೆರೆ ಜಿಲ್ಲೆಯಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ದೊರಕಿವೆ. ಅವುಗಳೆಂದರೆ; ಆನೆಕೊಂಡದ ಈಶ್ವರ(ಕ್ರಿ.ಶ. ೧೨ನೇ ಶತಮಾನದ ಮೊದಲ ಭಾಗ)[೧೪೩] ಎಲೆಬೇತೂರಿನ ಕಲ್ಲೇಶ್ವರ (ಕ್ರಿ.ಶ. ೧೦೯೦)[೧೪೪] ಈ ಎರಡೂ ದೇವಾಲಯಗಳು ಕಲ್ಯಾಣಿ ಚಾಲುಕ್ಯರ ಮಾದರಿಯಲ್ಲಿ ಉಚ್ಚಂಗಿ ಪಾಂಡ್ಯರ ಕಾಲಾವಧಿಯಲ್ಲಿ ನಿರ್ಮಾಣವಾಗಿವೆ. ಬೇತೂರು ಉಚ್ಚಂಗಿ ಪಾಂಡ್ಯರ ರಾಜಧಾನಿಯಾಗಿತ್ತು ಹಾಗು ಆನೆಕೊಂಡವು ಸಹ ಅವರ ಕಾಲದ ಒಂದು ಪ್ರಮುಖ ಸ್ಥಳವಾಗಿತ್ತೆಂಬುದು ಗಮನೀಯ ಅಂಶ.

ಸೇವುಣರ ಕಾಲದ ದೇವಾಲಯಗಳು :-

ಅವರಗೊಳ್ಳದ ಈಶ್ವರ (ಕ್ರಿ.ಶ. ೧೦ನೇ ಶತಮಾನ), ಚಿಕ್ಕಬಿದರೆಯ ಕನ್ನೇಶ್ವರ (ಕ್ರಿ.ಶ. ೧೨೫೨)[೧೪೫] ಹಾಗು ಹಿರೇಕೋಗಲೂರಿನ ಈಶ್ವರ(ಕ್ರಿ.ಶ. ೧೨೬೮) ದೇವಾಲಯಗಳು ಇವರ ಕಾಲದಲ್ಲಿ ನಿರ್ಮಿಸಲಾಗಿದೆ. ಚಿಕ್ಕಬಿದರೆಯ ಕ್ರಿ.ಶ. ೧೨೫೨ರ ಶಾಸನವು ಅಲ್ಲಿನ ದೇವಾಲಯವನ್ನು (ಶಾಸನದಲ್ಲಿ ಕನ್ನೇಶ್ವರನೆಂದಿದೆ).

ಬಿಲ್ಲಾಳದ ಅಂಮೆಯ ನಾಯಕನೆಂಬ ಸೇನಾನಿ ನಿರ್ಮಿಸಿದ ಉಲ್ಲೇಖವಿದೆ. ಈ ಮೇಲಿನ ದೇವಾಲಯಗಳ ವಾಸ್ತು ಮತ್ತು ಮೂರ್ತಿಗಳ ಲಕ್ಷಣಗಳು ಸೇವುಣರ ಕಾಲಕ್ಕೆ ಹೋಲಿಕೆಯಾಗುವುದರಿಂದ ಅವರ ಕಾಲದ ವಾಸ್ತು ರಚನೆಗಳೆಂದು ನಿರ್ಧರಿಸಲಾಗಿದೆ.

ಹೊಯ್ಸಳರ ಕಾಲದ ದೇವಾಲಯಗಳು :-

ನಂದಿತಾವರೆಯ ಅಮೃತಲಿಂಗ ಮಾಣಿಕೇಶ್ವರ (ಕ್ರಿ.ಶ. ೧೨೨೦)[೧೪೬] ಕಲ್ಕರೆಯ ಬಳ್ಳೇಶ್ವರ (ಕ್ರಿ.ಶ. ೧೨೨೧) ಹರಿಹರದ ಹರಹರೇಶ್ವರ (ಕ್ರಿ.ಶ. ೧೨೨೯)[೧೪೭] ಲೋಕಿಕೆರೆಯ ಈಶ್ವರ(ಕ್ರಿ.ಶ. ೧೨ನೇ ಶತಮಾನ) ಕಲ್ಲೇದೇವರ ಪುರದ ಕಲ್ಲೇಶ್ವರ (ಕ್ರಿ.ಶ. ೧೩ನೇ ಶತಮಾನ) ದೇವಾಲಯಗಳು ಇವರ ಕಾಲದ ವಾಸ್ತುರಚನೆಗಳಾಗಿವೆ. ಈ ಎಲ್ಲಾ ದೇವಾಲಯಗಳ ವಾಸ್ತು ಮತ್ತು ಮೂರ್ತಿಗಳೂ ಇವರ ಕಾಲಕ್ಕೆ ಹೋಲಿಕೆಯಾಗುತ್ತವೆ.

ವಿಜಯನಗರ ಕಾಲದ ದೇವಾಲಯಗಳು :-

ಗುಡಿಹಳ್ಳಿ ಕಲ್ಲೇಶ್ವರ (ಕ್ರಿ.ಶ. ಸು. ೧೪ನೇ ಶತಮಾನ) ಸೂಳೆಕೆರೆ (ಶಾಂತಿಸಾಗರ)ಯ ಪಾರ್ವತಿ ಗುಡಿ (ಕ್ರಿ.ಶ.ಸು. ೧೪ನೇ ಶತಮಾನ) ಉಚ್ಚಂಗಿದುರ್ಗದ ಜಿನಬಸದಿ (ಕ್ರಿ.ಶ. ಸು.೧೪ನೇ ಶತಮಾನ), ಸೂಳೆಕೆರೆಯ ಸಿದ್ಧೇಶ್ವರ (ಕ್ರಿ.ಶ. ೧೫೪೬)[೧೪೮] ಶಂಕರನಳ್ಳಿ ರಂಗನಾಥ (ಕ್ರಿ.ಶ. ಸು. ೧೫ನೇ ಶತಮಾನ) [೧೪೯], ಮಾಯಕೊಂಡದ ಓಬಳ ನರಸಿಂಹ (ಕ್ರಿ.ಶ.ಸು. ೧೫ನೇ ಶತಮಾನ) , ನೀರ್ಥಡಿಯ ರಂಗನಾಥ(ಕ್ರಿ.ಶ.ಸು. ೧೫ನೇ ಶತಮಾನ), ದೇವರಹಳ್ಳಿಯ ರಂಗನಾಥ(ಕ್ರಿ.ಶ. ಸು.೧೫ನೇ ಶತಮಾನ) , ಕೊಣಚಗಲ್ ರಂಗನಾಥ(ಕ್ರಿ.ಶ.ಸು.೧೫ನೇ ಶತಮಾನ), ಉಚ್ಚಂಗಿ ದುರ್ಗದ ಉತ್ಸವಾಂಬ (ಕ್ರಿ.ಶ.ಸು. ೧೫ನೇ ಶತಮಾನ) ಹಾಗು ಹರಪನಹಳ್ಳಿಯ ಜಿನ ಬಸದಿಯು (ಕ್ರಿ.ಶ. ಸು. ೧೫ನೇ ಶತಮಾನದ ಕೊನೆಯ ಭಾಗ) ಇವರ ಕಾಲದ ವಾಸ್ತು ರಚನೆಗಳಾಗಿವೆ. ಈ ದೇವಾಲಯಗಳ ಬಹುತೇಕ ಲಕ್ಷಣಗಳು ವಿಜಯನಗರ ಶೈಲಿಗೆ ಹೋಲಿಕೆಯಾಗುವುದರಿಂದ ಇವುಗಳನ್ನು ವಿಜಯನಗರ ಕಾಲದ ದೇವಾಲಯಗಳು ಎಂದು ಗುರುತಿಸಲಾಗಿದೆ.

ಹೀಗೆ ದಾವಣಗೆರೆ ಜಿಲ್ಲೆಯ ದೇವಾಲಯಗಳು ವಿವಿಧ ಕಾಲ ಘಟ್ಟಗಳಲ್ಲಿ, ವಿವಿಧ ರಾಜವಂಶಗಳ ಆಶ್ರಯದಲ್ಲಿ ಬೆಳೆದುಬಂದ ರೀತಿಯನ್ನು ಗಮನಿಸಬಹುದಾಗಿದೆ. ಈ ದೇವಾಲಯಗಳ ಕಾಲವನ್ನು ನಿರ್ಧರಿಸಲು ಆಯಾ ರಾಜವಂಶಗಳ ಶೈಲಿಗಳೇ (ವಾಸ್ತು ಮತ್ತು ಮೂರ್ತಿ ಲಕ್ಷಣಗಳು) ಹೆಚ್ಚು ಉಪಯುಕ್ತವಾಗಿವೆ. ಶಾಸನಗಳಿಲ್ಲದೇ ಇರುವ ದೇವಾಲಯಗಳ ಕಾಲವನ್ನು ನಿರ್ಧರಿಸುವಾಗ ವಿವಿಧ ರಾಜ ವಂಶಗಳ ವಾಸ್ತು ಶೈಲಿಯನ್ನು ಅನುಸರಿಸಿ, ನಿರ್ಧರಿಸಲಾಗಿದೆ.

ಕಾಲದಿಂದ ಕಾಲಕ್ಕೆ ಈಮೇಲಿನ ರೀತಿ ಬೆಳವಣಿಗೆಯದ ದಾವಣಗೆರೆ ಜಿಲ್ಲೆಯ ದೇವಾಲಯಗಳು ಕೇವಲ ಧಾರ್ಮಿಕ ಕೇಂದ್ರಗಳಾಗಿರದೆ, ಜನರ ಸಮಾಜಿಕ ಮತ್ತು ಆರ್ಥಿಕ ಜೀವನದಲ್ಲಿಮಹತ್ತರ ಪಾತ್ರವನ್ನು ನಿರ್ಹವಹಿಸಿವೆ.

ದಾವಣಗೆರೆ ತಾಲೂಕಿನ ಕುಂದವಾಡ ಗ್ರಾಮದ ಕ್ರಿ.ಶ.೧೨೧೮ರ ಶಾಸನವು[೧೫೦] ಹೇಳುವಂತೆ ಹೊಯ್ಸಳರಾಣಿಯದ ಅಭಿನವ ಕೇತಲದೇವಿಯು ಆ ಗ್ರಾಮದಲ್ಲಿ ಸಂತೆ ಏರ್ಪಡಿಸುವಂತೆ ಮಾಡಿ ಅದರಿಂದ ಬರುವ ಆದಾಯವನ್ನು ಅಲ್ಲಿನ 'ಸೋಮನಾಥ'ದೇವಾಲಯಕ್ಕೆ (ಈಗ ದೇವಾಲಯ ಉಳಿದಿಲ್ಲ) ದತ್ತಿ ಬಿಟ್ಟಳೆಂದು ತಿಳಿದುಬರುತ್ತದೆ. ಇದೇ ತಾಲೂಕಿನ ಲೋಕಿಕೆರೆ ಗ್ರಾಮದ ಈಶ್ವರ ದೇವಾಲಯದ ಕಂಭ ಒಂದರ ಶಾಸನವು[೧೦೧] ಅಲ್ಲಿನ ಕೇತೇಶ್ವರ ದೇವರಿಗೆ ನಂದಾ ದೀವಿಗೆ ಹಚ್ಚಲು ಸುಂಕ ಸರ್ಬಾಧಿಕಾರಿಗಳು ಅಡಿಕೆ- ಎಲೆ ಮತ್ತು ಸುಂಕದಿಂದ ಬಂದ ಆರು ಗದ್ಯಾಣಗಳನ್ನು ಸಲ್ಲಿಸಲು ಏರ್ಪಾಡು ಮಾಡಿದ್ದನ್ನು ವಿವರಿಸುತ್ತದೆ. ಹರಿಹರದಲ್ಲಿನ ಕ್ರಿ.ಶ. ೧೧೭೨ರ ಶಾಸನವೊಂದು ಸುಂಕದ ಹೆಗ್ಗಡೆ ಹರಿಯಪ್ಪಯ್ಯನು ಹೊಳೆಯ ಸುಂಕದಿಂದ ಬಂದ ಹಣವನ್ನು ಅಲ್ಲಿನ ಶ್ರೀ ಯೋಗೇಶ್ವರ ದೇವರ ನೈವೇದ್ಯಕ್ಕಾಗಿ ಸಲ್ಲಿಸಿದ್ದನ್ನು ತಿಳಿಸುತ್ತದೆ. ಈ ಮೇಲಿನ ಶಾಸನಗಳು ಅಂದು ವಿಧಿಸುತ್ತಿದ್ದ ಸುಂಕಗಳ ಕುರಿತು ವಿವರಿಸುತ್ತವೆ. ಇದರಿಂದ ಅಂದಿನ ಆರ್ಥಿಕ ಜನ ಜೀವನವನ್ನು ತಿಳಿಯಬಹುದು.

ಹರಿಹರದಲ್ಲಿ ದೊರೆತ ಕ್ರಿ.ಶ. ೧೨೬೨ ಶಾಸನವು ಆಷಾಡ ಬಹುಳ ೩೦ರ ಅವಮಾಸೆ ಸೋಮವಾರದಂದು ಕಪ್ಪುಗಡೆಯ ಶಾನುಭೋಗ ' ಮೆದೆಯಿ ' ಯ ಹೆಂಡತಿ ಜಕ್ಕವ್ವೆ ಹರಿಹರ ದೇವರ ಹೂವಿನ ಮಾಲೆ, ತುಳಸಿ ಮಾಲೆಯ ಸೇವೆಗೆ ಮಹಾ ಜನರ ಕೈಯಲ್ಲಿ ಮೂರು ಗದ್ಯಾಣಗಳನ್ನು ಕೊಟ್ಟಳು. ಇದರ ಬಡ್ಡಿಯ ಹಣದಿಂದ ಹರಿಹರ ದೇವರಿಗೆ ಶಾಶ್ವತ ಹೂವಿನ ಮಾಲೆ , ತುಳಿಸಿ ಮಾಲೆಯ ಸೇವೆ ನಡೆಯಬೇಕೆಂದು ಬಯಸಿ, ಕೊಟ್ಟಿರುವ ವಿಚಾರವನ್ನು ಇದು ಉಲ್ಲೇಖಸುತ್ತದೆ. ಇದರಿಂದಾಗಿ ದೇವಾಲಯಗಳಿಗೆ ಸಮಾಜದಲ್ಲಿನ ಜನರು ಸಹ ದಾನದತ್ತಿಗಳನ್ನು ಕೊಡುತ್ತಿದ್ದರೆಂದು ಹಾಗು ದೇವಾಲಯದಲ್ಲಿನ ಹಣವನ್ನು ಬಡ್ಡಿಗಾಗಿ ಕೊಡಲಾಗುತ್ತಿತ್ತೆಂಬ ಅಂಶ ಸ್ಪಷ್ಟವಾಗುತ್ತದೆ.

ಮಳಲಕೆರೆಯ ಮೂಲ ಸ್ಥಾನೇಶ್ವರ, ಕೊಡಗನೂರಿನ ಈಶ್ವರ, ಕೊಗ್ಗನೂರಿನ ಈಶ್ವರ, ನೀರ್ಥಡಿಯ ರಂಗನಾಥ ಸ್ವಾಮಿ, ಹರಿಹರದ ಹರಿಹರೇಶ್ವರ ದೇವಾಲಯಗಳು ಹಾಗು ನೀಲಗುಂದದ ಭೀಮೇಶ್ವರ[೧೫೩] ದೇವಾಲಯಗಳು ಅಗ್ರಹಾರದ ಕೇಂದ್ರಸ್ಥಾನಗಳಾಗಿ ಅಂದರೆ, ಶಿಕ್ಷಣ ನೀಡುವ ಸ್ಥಳಗಳಾಗಿವೆ ಎಂಬ ಅಂಶ ಶಾಸನಗಳಿಂದ ತಿಳಿದು ಬರುತ್ತದೆ. ಇದರಿಂದ ಪ್ರಾಚೀನ ಮತ್ತು ಮಧ್ಯ ಕಾಲೀನ ಯುಗಗಳೆರಡರಲ್ಲೂ ವಿದ್ಯೆಯನ್ನು ನೀಡುವಲ್ಲಿ ಮಹತ್ತರ ಪಾತ್ರವನ್ನು ದೇವಾಲಯಗಳು ನಿರ್ವಹಿಸಿದವು ಎಂಬುದನ್ನು ಮನಗಾಣಬಹುದು.

ನಂದಿತಾವರೆಯ ಅಮೃತಲಿಂಗೇಶ್ವರ ದೇವಾಲಯದ ಭಿತ್ತಿಯ ಮೇಲೆ ಅಲಂಕಾರಯುಕ್ತ ಶಿಲ್ಪಗಳಿದ್ದು, ಅವುಗಳಲ್ಲಿ ಬೇಟೆಗಾತಿ, ದರ್ಪಣ ಸುಂದರಿ ಶಿಲ್ಪಗಳು ಪ್ರಮುಖವಾಗಿವೆ. ಶಾಂತಿ ಸಾಗರ (ಸೂಳೆಕೆರೆ)ದ ಸಿದ್ದೇಶ್ವರ ದೇವಾಲಯದ ಕಂಭದ ಮೇಲೆ ಕೋಲೇ ಬಸವ , ನರ್ತನ ಮಾಡುತ್ತಿರುವ ಸ್ತ್ರೀ ಶಿಲ್ಪಗಳಿವೆ. ನೀರ್ಥಡಿ ರಂಗನಾಥ ಸ್ವಾಮಿ ದೇವಾಲಯದ ಭಿತ್ತಿ ಮತ್ತು ಕಂಭದ ಮೇಲೆ ಹಲವು ಶಿಲ್ಪಗಳಿದ್ದು, ಅವುಗಳಲ್ಲಿ ನರ್ತನ ಮಾಡುತ್ತಿರುವ ಸ್ತ್ರೀ , ಪುರುಷರು ಕೋಲಾಟವಾಡುತ್ತಿರುವ ಜನ ಸಮೂಹ , ಹಾಲುಣಿಸುತ್ತಿರುವ ತಾಯಿ, ಬೇಟೆಗಾರ ಶಿಲ್ಪಗಳಿವೆ. ಕೊಣಚಗಲ್ಲಿನ ವೀರಭದ್ರ ದೇವಾಲಯದ ಭಿತ್ತಿಯ ಮೇಲೆ ಈಟಿ ಹಿಡಿದು, ಆನೆಗಳ ಮೇಲೆ ಕುಳಿತು ಹೋರಾಡುತ್ತಿರುವ ಶಿಲ್ಪಗಳಿವೆ. ಹಾಗೇ ಗೋಪಗೊಂಡನ ಹಳ್ಳಿ ಯ ದೇವಾಲಯದಲ್ಲೂ ಬೇಟೆಗಾರರ, ಕೈಯಲ್ಲಿ ಬಿಲ್ಲು , ಬಾಣ ಹಿಡಿದು ಹೊರಟ ಸ್ತ್ರೀ ಶಿಲ್ಪಗಳು ಮತ್ತು ಆನೆಯ ಮೇಲೆ ಹೋರಾಡುತ್ತಿರುವವರ ಶಿಲ್ಪಗಳಿವೆ. ಈ ದೇವಾಲಯಗಳಲ್ಲಿನ ಶಿಲ್ಪಗಳಿಂದ ಅಂದಿನ ಸಮಾಜದಲ್ಲಿದ್ದ ವಿವಿಧ ಮನೋರಂಜನಾ ಆಟಗಳು ಮತ್ತು ಅವರ ಉಡುಪು, ವಿನ್ಯಾಸವನ್ನು ತಿಳಿಯಬಹುದು. ಮತ್ತು ಈ ಜಿಲ್ಲೆಯ ಮೇಲೆ ಹೇಳಿದ ದೇವಾಲಯಗಳ ಭಿತ್ತಿಗಳಲ್ಲಿ ಬಿಲ್ಲು ,ಬಾಣ, ಈಟಿ ಹಿಡಿದಿರುವ ಸ್ತ್ರೀ ಶಿಲ್ಪಗಳು ಕಂಡುಬರುತ್ತವೆ. ಇದರಿಂದ ಸ್ತ್ರೀಯರೂ ಸಹ ಅಂದಿನ ಯುದ್ಧ, ಹೋರಾಟಗಳಲ್ಲಿ ಭಾಗಿಯಾಗು-ತ್ತಿದ್ದರೆಂದು ಇಲ್ಲವೇ, ಒಂದು ನಿರ್ಧಿಷ್ಟ ವರ್ಗದ ಸ್ತ್ರೀಯರು ಬೇಟೆಯಾಡುವುದರಲ್ಲಿ ಪರಿಣಿತರಾಗಿದ್ದರೆಂದು ಅರ್ಥೈಯಿಸಿಕೊಳ್ಳಬಹುದು. ಬಾಗಳಿ,ನೀಲಗುಂದ, ನಂದಿಗುಡಿಯ ದ್ವಾರಗಳಲ್ಲಿ ವೃತ್ತಾಕಾರದ ಸುರುಳಿಯೊಳಗೆ ವಿವಿಧ ಸಂಗೀತೋಪಕರಣಗಳನ್ನು ಹಿಡಿದವರ , ಇಲ್ಲವೇ ಅದನ್ನು ನುಡಿಸುತ್ತಿರುವಂತಿರುವ ಶಿಲ್ಪಗಳನ್ನು ಕೆತ್ತಲಾಗಿದೆ. ಹಾಗೆಯೇ ನೀರ್ಥಡಿ, ಮಾಯಕೊಂಡ ಮೊದಲಾದ ಕೆಲವು ದೇವಾಲಯಗಳ ಭಿತ್ತಿ ಮತ್ತು ಇತರೆ ಭಾಗಗಳಲ್ಲಿ ವಿವಿಧ ಸಂಗೀತ ವಾದ್ಯಗಳನ್ನುನುಡಿಸುವವರ ಹಾಗು ಮೃದಂಗ ಬಾರಿಸುವವರ ಶಿಲ್ಪಗಳು ಕಂಡುಬರುತ್ತವೆ. ಇದರಿಂದ ಅಂದು ಪ್ರಚಲಿತದಲ್ಲಿದ್ದ ವಿವಿಧ ಸಂಗೀತ ಪರಿಕರಗಳ ಬಗ್ಗೆ ಮಾಹಿತಿ ದೊರೆಯುತ್ತದೆ. ಸಾಮಾಜಿಕ ಮತ್ತು ಆರ್ಥಿಕ ಜನಜೀವನದ ಮೇಲೆ ತನ್ನದೇ ಆದ ಪ್ರಭಾವವನ್ನು ಬೀರಿದ ಈ ಜಿಲ್ಲೆಯ ದೇವಾಲಯಗಳು ಹೀಗೆ ಸಕಲ ಕಲೆಗಳನ್ನು ಪ್ರೋತ್ಸಾಹಿಸುವ ಕೇಂದ್ರಗಳಾಗಿದ್ದವೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಅಡಿ ಟಿಪ್ಪಣಿಗಳು

೧. ಪರ್ಸಿಬ್ರೌನ್,**ಇಂಡಿಯನ್ ಆರ್ಕಿಟೆಕ್ಚರ್ (ಬುದ್ದಿಸ್ಟ್ ಆ್ಯಂಡ್ ಹಿಂದೂ ಪಿರಿಯಡ್)** ೧೯೮೧, ಪು. ೩.

೨. - ಅದೇ -

೩. ಬ್ರೂನೋಡಗೆನ್ಸ್, **ಮಯಮತ**, ೧೯೮೫, ಪು.೩೫

೪. ಗೋಪಾಲ ,ಬಾ.ರಾ. **ವಾಸ್ತು** , ೧೯೯೩,ಪು.೧

೫. - ಅದೇ -

೬. ಪ್ರಭಾಕರ್ ,ಎಂ. ಎನ್. **ದೇವಾಲಯಗಳ ವಾಸ್ತು ಚಂದ್ರಿಕೆ** , ೧೯೯೯ ಪು.೩

೭. ಫಣೇಂದ್ರನಾಥ್‌ಬೋಸ್, ೧೯೭೮ **ಪ್ರಿನ್ಸ್‌ಪಾಲ್ ಆಫ್ ಇಂಡಿಯನ್ ಶಿಲ್ಪಶಾಸ್ತ್ರ**, ಪು.೮

೮. ಪ್ರಭಾಕರ್, ಎಂ. ಎನ್. ಪೂರ್ವೋಕ್ತ ,೧೯೯೯ಪು.೪

೯. ಆಚಾರ್ಯ ಪಿ.ಕೆ. **ಎ ಡಿಕ್ಸನರಿ ಆಫ್ ಹಿಂದೂ ಆರ್ಕಿಟೆಕ್ಚರ್, ಆರ್ಕಾಡಿಂಗ್ ಟು ಮಾನಸಾರ ಶಿಲ್ಪಶಾಸ್ತ್ರ** ೧೯೩೪ ,ಪು. ೧

೧೦. ಸಂತೆಬೆನ್ನೂರು ಸುಮತೀಂದ್ರನಾಡಿಗ **ಜನತಾವಾಣಿ** ದಿನಪತ್ರಿಕೆ, ೧೭.೧.೯೯ ಪು.೨

೧೧. ಅಲೆಕ್ಸಾಂಡರ್‌ರೇ, **ಚಾಲುಕ್ಯನ್ ಆರ್ಕಿಟೆಕ್ಚರ್ (ಎನ್‌ಕ್ಲ್ಯೂಡಿಂಗ್ ಎಕ್ಸಾಂಪಲ್ ಪ್ರಂ ದಿ - ಬಳ್ಳಾರಿ ಡಿಸ್ಟಿಕ್ಟ್)** -೧೯೯೬ ಪು.೬-೩೫

೧೨. ಉಚ್ಚಂಗೆಮ್ಮ ದೇವಾಲಯದ ಎದುರು ಭಾಗದ ಸುತ್ತಲೂ ರಕ್ಷಣಾ ಗೋಡೆಗಳಿರುವ ಎರಡು ಪ್ರದೇಶಗಳಲ್ಲಿ ಈ ಅಗೆತ ಕೈಗೊಂಡಿದ್ದು, ಅದರಲ್ಲಿ ವಾಸದ ಮನೆಯ ಬುನಾದಿಗಳು,ಧಾನ್ಯದ ಕಣಜಗಳು ಹಾಗು ನೆಲದಲ್ಲಿ ಅಮೂಲ್ಯ ವಸ್ತುಗಳನ್ನು ಸಂರಕ್ಷಿಸಲು ಉಪಯೋಸಿದ್ದರೆನ್ನಬಹುದಾದ ಕಲ್ಲಿನ ತೊಟ್ಟಿ ಪ್ರಮುಖವಾಗಿವೆ.

೧೩. ಇದು ಇಂಡೋ- ಇಸ್ಲಾಮಿಕ್ ಶೈಲಿಯಲ್ಲಿದೆ.

೧೪. ಗಿರೀಜ, ಟಿ. **ಚಿತ್ರದುರ್ಗ ಜಿಲ್ಲಾದರ್ಶಿನಿ** , ೧೯೯೧, ಪು. ೧೪೮

೧೫. ರಘುನಾಥ ಭಟ್, ಹೆಚ್. ಆರ್.' ಆರ್ಟ್ ಆ್ಯಂಡ್ ಆರ್ಕಿಟೆಕ್ಚರ್ ಆಫ್ ಶಾತವಾಹನ, ಕದಂಬ ಪಿರಿಯಡ್' , ನರಸಿಂಹಮೂರ್ತಿ, ಎ.ವಿ. (ಸಂ) **ಆರ್ಕಿಯಾಲಾಜಿ ಆಫ್ ಕರ್ನಾಟಕ** ೧೯೭೮ ಪು. ೨೧೬-೨೨೩

೧೬. ಶಿವರಾಮ ಕಾರಂತ , **ಚಾಲುಕ್ಯ ವಾಸ್ತುಶಿಲ್ಪ**, ೧೯೯೧ ಪು. ೧೨-೧೯

೧೭. ರಾಜಶೇಖರ್ ಎಸ್. ಸಿಂದಿಗಿ , **ಕರ್ನಾಟಕ ವಾಸ್ತುಶಿಲ್ಪ ಮತ್ತು ಚಿತ್ರಕಲೆ,** ೧೯೮೮ ಪು.೬೭

೧೮. ಶ್ರೀಕಂಠಶಾಸ್ತ್ರಿ ಎಸ್. **ಹೊಯ್ಸಳ ವಾಸ್ತುಶಿಲ್ಪ**, ೧೯೯೫ ಪು.೨೬

೧೯. ಎಚ್. ಎಂ. ನಾಗರಾಜರಾವ್, **ಹೊಯ್ಸಳ ವಾಸ್ತು ಶಿಲ್ಪ**, ೧೯೮೫ ಪು. ೧೮

೨೦. ದೇವರಕೊಂಡರೆಡ್ಡಿ, **ತಲಕಾಡಿನ ಗಂಗರ ದೇವಾಲಯಗಳು**, ೧೯೯೪, ಪು. ೧೨೫

೨೧. ಸಾಲೆತೊರೆ, ಆರ್. ಎಸ್. **ವಿಜಯನಗರ ಆರ್ಟ್**, ೧೯೮೨, ಪು.೨೫-೫೨

೨೨. **ಎಂ. ಎ. ಆರ್.** ೧೯೩೮, ಪು.೬೫

೨೩. - ಅದೇ -

೨೪. ಪೂರ್ವ ಮತ್ತು ಪಶ್ಚಿಮದಲ್ಲಿ ಗರ್ಭಗುಡಿಗಳಿದ್ದು, ಮೂರ್ತಿಗಳಿವೆ. ಆದರೆ ಉತ್ತರ ಭಾಗದಲ್ಲಿ ಗರ್ಭಗುಡಿಯಷ್ಟೇ ಅಳತೆಯ ಖಾಲಿ ಜಾಗವಿದೆ. ಆ ಗರ್ಭಗುಡಿಯ ದ್ವಾರ ಇತ್ತೆಂದು ಹೇಳಲು ಗೋಡೆಯಲ್ಲಿ ಕುರುಹುಗಳಿವೆ(?)

೨೫. **ಎಂ. ಎ. ಆರ್.** ೧೯೩೮ ಪು. ೬೯

೨೬. - ಅದೇ -

೨೭. ಹಯವದನರಾವ್, ಸಿ., **ಮೈಸೂರು ಗೆಟಿಯರ್**, ಸಂ. ೨, ಭಾಗ- ೧, ೧೯೩೦

೨೮. **ಎಂ. ಎ. ಆರ್.** ಪೂರ್ವೋಕ್ತ

೨೯. - ಅದೇ -

೩೦. **ಎಪಿಗ್ರಾಫಿಯಾ ಕರ್ನಾಟಿಕಾ**, ಸಂ. ೪, ದಾವಣಗೆರೆ ಶಾ.ಸಂ. ೬

೩೧. **ಎಂ. ಎ. ಆರ್.** ೧೯೨೮ ಪು.೩

೩೨. **ಎಪಿಗ್ರಾಫಿಯಾ ಕರ್ನಾಟಿಕಾ** ಸಂ. ೪, ದಾವಣಗೆರೆ ಶಾ.ಸಂ. ೮

೩೩. ರಾಮಚಂದ್ರರಾವ್, ಎಸ್.ಕೆ. **ಆರ್ಟ್ ಆ್ಯಂಡ್ ಆರ್ಕಿಟೆಕ್ಚರ್ ಆಪ್ ಇಂಡಿಯನ್ ಟೆಂಪಲ್ಸ್** ೧೯೯೨, ಪು. ೧೪೦

೩೪. ನಾಗರಾಜರಾವ್, ಎಂ. ಎಸ್.(ಸಂ) **ದಿ ಎನಿಗ್ಮಾಮ ಆಫ್ ಬಾಗಳಿ**, ೧೯೮೩ ಪು. ೧೯೧

೩೫. ಚನ್ನಬಸಪ್ಪ ಎನ್. ಪಾಟೀಲ್ **ಟೆಂಪಲ್ಸ್ ಆಫ್ ರಾಯಚೂರು ಆ್ಯಂಡ್ ಬಳ್ಳಾರಿ ಡಿಸ್ಟ್ರಿಕ್ಟ್**, ೧೯೯೨ ಪು. ೧೧೯

೩೬. ಅದಮ್ ಹಾರ್ಡಿ,**ಇಂಡಿಯನ್ ಟೆಂಪಲ್ ಆರ್ಕಿಟೆಕ್ಚರ್ ಫಾರಮ್ಸ್ ಆ್ಯಂಡ್ ಟ್ರಾನ್ಸ್ ಫಾರ್ಮೆಷನ್**, ೧೯೯೫ ಪು. ೩೨೩

೩೭. ಅನಂತಾಳ್ವರ್ ಎಂ. ಎ. **ಇಂಡಿಯನ್ ಆರ್ಕಿಟೆಕ್ಚರ್**, ೧೯೧೮, ಪು. ೨೬೫

೩೮. ಚನ್ನಬಸಪ ಎಸ್. ಪಾಟೀಲ್, ಪೂರ್ವೋಕ್ತ, ೧೯೯೨, ಪು. ೧೨೧

೩೯. - ಅದೇ - ಪು., ೧೧೮

೪೦. **ಸೌಥ್ ಇಂಡಿಯನ್ ಇನ್‌ಸ್ಕ್ರಿಪ್‌ಷನ್ಸ್** ಸಂ. ೪, ಶಾ. ಸಂ. ೭೫

೪೧. - ಅದೇ - ಶಾ.ಸಂ.೮೦,೮೧,೮೯,೧೪೫,೧೬೮,೧೭೩,೧೭೭,೧೮೯,೧೯೧,೨೦೧,೨೧೧,೨೪೬,೨೫೫, ೨೫೮,೩೧೯,೩೩೧ ಮತ್ತು ೩೪೪.

೪೨. **ಎಂ. ಎ. ಆರ್.** ೧೯೩೮, ಪು. ೬೩-೬೪

೪೩. **ನೋಡಿ ಏಪಿಗ್ರಾಫಿಯಾ ಕರ್ನಾಟಿಕಾ** ಸಂ. ೭, ಶಾಸನ ಸಂಖ್ಯೆ:

೪೪. **ಎಂ. ಎ. ಆರ್.** ಪೂರ್ವೋಕ್ತ , ಪು. ೫೪

೪೫. ಮಾಲಾ, ಎ.ಪಿ. ' ಬೆಳಗುತ್ತಿಯ ಕಲಾ ವೈಭವ '(ಅಪ್ರಕಟಿತ ಲೇಖನ), ಪು. ೧೬

೪೬. ಅಲೆಕ್ಸಾಂಡರ್ ರೇ, ಪೂರ್ವೋಕ್ತ, ೧೮೯೬, ಪು. ೩೦

೪೭. ರಾಮಚಂದ್ರರಾವ್ , ಎಸ್.ಕೆ. ಪೂರ್ವೋಕ್ತ, ೧೯೯೨, ಪು. ೧೨೯

೪೮. ಚನ್ನಬಸಪ್ಪ ಎಸ್. ಪಾಟೀಲ್, ಪೂರ್ವೋಕ್ತ, ೧೯೯೨,ಪು. ೩೦-೩೧

೪೯. ಅಲೆಕ್ಸಾಂಡರ್ ರೇ, ಪೂರ್ವೋಕ್ತ, ೧೮೯೬,ಪು. ೩೦-೩೧

೫೦. **ಸೌಥ್ ಇಂಡಿಯನ್ ಇನ್ಸ್‌ಕ್ರಿಪ್‌ಷನ್ಸ್** , ಸಂ. ೯, ಶಾ. ಸಂ. ೩೮೦

೫೧. ಚನ್ನಬಸಪ್ಪ ಎಸ್. ಪಾಟೀಲ್, ಪೂರ್ವೋಕ್ತ,೧೯೯೨, ಪು. ೧೨೨.

೫೨. ಅಲೆಕ್ಸಾಂಡರ್ ರೇ, ಪೂರ್ವೋಕ್ತ, ೧೮೯೬, ಪು. ೨೭.

೫೩. ಚನ್ನಬಸಪ್ಪ ಎಸ್. ಪಾಟೀಲ್, ಪೂರ್ವೋಕ್ತ,೧೯೯೨, ಪು. ೧೧೭

೫೪. **ಏಪಿಗ್ರಾಫಿಯ ಕರ್ನಾಟಿಕಾ** ಸಂ. ೧೧, ಜಗಲೂರು, ಶಾ.ಸಂ. ೧೮.

೫೫. ಗಿರೀಜ, ಟಿ., ಪೂರ್ವೋಕ್ತ ೧೯೯೧, ಪು. ೨೯

೫೬. ರಾಮಚಂದ್ರರಾವ್ ,ಎಸ್.ಕೆ. ಪೂರ್ವೋಕ್ತ,೧೯೯೨, ಪು. ೨೧೫

೫೭. **ಏಪಿಗ್ರಾಫಿಯಾ ಕರ್ನಾಟಿಕಾ**, ಸಂ. ೧೧, ದಾವಣಗೆರೆ, ಶಾ. ಸಂ. ೩೨.

೫೮. ರಾಮಚಂದ್ರರಾವ್ ಎಸ್.ಕೆ. ಪೂರ್ವೋಕ್ತ, ೧೯೯೨,ಸಂ.-೩, ಪು. ೧೬೭-೧೭೦

೫೯. **ಸೌಥ್ ಇಂಡಿಯನ್ ಇನ್ಸ್‌ಕ್ರಿಪ್‌ಷನ್**, ಸಂ-೯, ಶಾ.ಸಂ. ೧೨೬

೬೦. ರಾಮಚಂದ್ರರಾವ್ ಎಸ್.ಕೆ. ಪೂರ್ವೋಕ್ತ, ೧೯೯೨, ಪು. ೧೨೯-೧೪೩

೬೧. ಈ ದೇವಾಲಯದ ಕಾಲವನ್ನು ೧೨ನೇ ಶತಮಾನದ ಮೊದಲ ಭಾಗ ಎಂದು ಕೆಲವರು ಹೇಳಿದ್ದಾರೆ. ನೋಡಿ. ಆದಮ್‌ಹಾರ್ಡೇ, **ಇಂಡಿಯನ್ ಟೆಂಪಲ್ ಆರ್ಕಿಟೆಕ್ಚರ್ ಫಾರ್ಮ್ ಆ್ಯಂಡ್ ಟಾನ್ಸ್‌ಫಾರ್ಮೆಷನ್** ೧೯೯೫, ಪು. ೩೨೩.

೬೨. ಇದನ್ನು ಕೆಲವರು ಚತುಷ್ಕೂಟ ದೇವಾಲಯವೆಂದಿದ್ದಾರೆ.ನೋಡಿ.ಅಲೆಕ್ಸಾಂಡರ್‌ರೇ, ಪೂರ್ವೋಕ್ತ, ೧೮೯೬, ಪು.೧೮

೬೩. ರಾಜಶೇಖರ ಸಿಂದಿಗಿ, **ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ**, ೧೯೮೮, ಪು. ೯೭.

೬೪. ಅದೇ, ಪು. ೯೯

೬೫. ಅದೇ, ಪು. ೧೦೧

೬೬. ಅನಂತಾಲ್ವರ್, ಎಂ. ಎ. ಮತ್ತು ಅಲೆಕ್ಸಾಂಡರ್ ರೇ(ಸಂಪಾದಕರು) **ಇಂಡಿಯನ್ ಆರ್ಕಿಟೆಕ್ಚರ್**, ೧೯೧೮, ಪು. ೨೬೬

೬೭. ಅಲೆಕ್ಸಾಂಡರ್ ರೇ, ಪೂರ್ವೋಕ್ತ, ೧೯೮೬ ಪು.

೬೮. **ಸೌಥ್ ಇಂಡಿಯನ್ ಇನ್ಸ್‌ಕ್ರಿಪ್‌ಷೆನ್ಸ್,** ಸಂ. ೯, ಶಾ. ಸಂ. ೧೮೧, ೨೯೩, ೩೪೦,೩೫೨ ಹಾಗು ಎ.ಆರ್.ಇ. ೧೯೧೩. ಸಂ. ಬಿ.೧೧೩-೧೧೬,೧೧೭.

೬೯. ಕೊಟ್ರೇಶ್, ಎಂ. **ಉಚ್ಚಂಗಿದುರ್ಗ ಒಂದು ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನ**, ೧೯೯೬, ಪು. ೭೦-೭೧ (ಅಪ್ರಕಟಿತ ಎಂ. ಫಿಲ್. ಪ್ರಬಂಧ)

೭೦. ಕುಂಬಾಸ್, **ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ**, ೧೯೯೦, ಪು. ೩೯.

೭೧. **ಸೌಥ್ ಇಂಡಿಯನ್ ಇನ್ಸ್‌ಕ್ರಿಪೆಷನ್ಸ್**, ಪೂರ್ವೋಕ್ತ, ಶಾ.ಸಂ. ೨೫೨.

೭೨. ಕುಂಬಾಸ, ಪೂರ್ವೋಕ್ತ, ೧೯೯೦ಪು. ೩೮

೭೩. ಅದೇ

೭೪. **ಸೌಥ್ ಇಂಡಿಯನ್ ಇನ್ಸ್‌ಕ್ರಿಪೆಷನ್ಸ್**, ಸಂ. ೯, ಶಾ.ಸಂ. ೭

೭೫. ಅಲೆಕ್ಸಾಂಡರ್ ರೇ. ಪೂರ್ವೋಕ್ತ,೧೯೮೬, ಪು. ೭

೭೬. ಕ್ರಿ.ಶ. ೧೧೪೩ರ ಶಾಸನವೊಂದರಲ್ಲಿ ಜಗತ್ತೇಶ್ವರನೆಂದು ಉಲ್ಲೇಖವಿದೆ. ನೋಡಿ. **ಏಫಿಗ್ರಾಫಿಯಾ ಕರ್ನಾಟಿಕಾ** , ಸಂ. ೯, ದಾವಣಗೆರೆ ಶಾ. ಸಂ. ೪.

೭೭. ಈ ದೇವಾಲಯ ಸು. ೧೧ನೇ ಶತಮಾನದಲ್ಲಿಯೇ ಇದ್ದಿತು. ೧೨ನೇ ಶತಾಬ್ದದಲ್ಲಿ ಉಚ್ಚಂಗಿ ಪಾಂಡ್ಯರು ದೇವಾಲಯದ ಕೆಲ ಭಾಗಗಳನ್ನು ಸೇರಿಸಿದ್ದಾರೆಂದಿದೆ. ನೋಡಿ. ಪುಟ್ಟಪ್ಪ ಕೆ.ವಿ. (ಪ್ರ.ಸಂ) **ಹೊಯ್ಸಳ ವಾಸ್ತು ಶಿಲ್ಪ,** ೧೯೯೬, ಪು. ೭೫.

೭೮. ಹಯವದನ್‌ರಾವ್ , ಸಿ. (ಸಂ) ಪೂರ್ವೋಕ್ತ, ೧೯೩೦, ಪು. ೧೪೧.

೭೯. ನರಸಿಂಹಚಾರ್ ಮತ್ತು ಶೆಟ್ಟರ್ ಎನ್ (ಸಂ) **ಆರ್ಕಿಯಾಲಾಜಿಕಲ್ ಸರ್ವೆ ಆಪ್ ಮೈಸೂರು ಆ್ಯನಿಯಲ್ ರಿಪೋರ್ಟ್, ಸಂ. ೪.** ೧೯೭೭. ಪು. ೪೪-೪೫

೮೦. ಪುಟ್ಟಪ್ಪ ಕೆ.ವಿ. ಪೂರ್ವೋಕ್ತ , ೧೯೯೫, ಪು. ೬೨

೮೧. ಹಾ.ಮ.ನಾಯಕ (ಸಂ) **ಕನ್ನಡ ವಿಷಯ ವಿಶ್ವಕೋಶ**, ೧೯೭೯, ಪು.೫೬.

೮೨. **ಏಪಿಗ್ರಾಫಿಯಾ ಕರ್ನಾಟಿಕಾ**, ಸಂ. ೧೧, ದಾವಣಗೆರೆ ಶಾ. ಸಂ.

೮೩. ಶ್ರೀಕಂಠಶಾಸ್ತ್ರಿ, ಎಸ್. **ಹೊಯ್ಸಳ ವಾಸ್ತು ಶಿಲ್ಪ**, ೧೯೬೫, ಪು.೮೩

೮೪. ಹಾ.ಮಾ. ನಾಯಕ, ಪೂರ್ವೋಕ್ತ, ೧೯೭೯, ಪು. ೮೩೪ ಮತ್ತು **ಕನ್ನಡ ವಿಶ್ವಕೋಶ,** ಸಂ. ೧೦ ಪು. ೧೩.

೮೫. ಶ್ರೀಕಂಠಶಾಸ್ತ್ರಿ ಎಸ್. ಪೂರ್ವೋಕ್ತ, ೧೯೬೫, ಪು. ೫೬

೮೬. ಎಂ. ಎ. ಆರ್. ಪೂರ್ವೋಕ್ತ, ಪು. ೬೫

೮೭. - ಅದೇ -

೮೮. ಈಕೆಯನ್ನು ಪಾರ್ವತಿಯೆಂದು ಗುರುತಿಸಲಾಗಿದೆ. ನೋಡಿ. ಎಂ. ಎ. ಆರ್. ಪು. ೬೬

೮೯. ಶ್ರೀಕಂಠ ಶಾಸ್ತ್ರಿ ಎನ್. ಪೂರ್ವೋಕ್ತ, ೧೯೬೫, ಪು. ೬೩

೯೦. ಹಯವದನರಾವ್. ಪೂರ್ವೋಕ್ತ, ಪು. ೨೧೮-೨೧೯.

೯೧. - ಅದೇ -

೯೨. ರಾಮಚಂದ್ರರಾವ್ ಎಸ್. ಕೆ. **ಮೂರ್ತಿಶಿಲ್ಪ ನೆಲೆ, ಹಿನ್ನಲೆ** ೧೯೭೫ ಪು. ೨೬೯

೯೩. ಅದೇ,

೯೪. ಕುಬೇರನ ವಾಹನ ಸ್ವಯಂ ಚಾಲಿತ ರಥವೆಂದುವೆಂದು ,ವಾಯುವಿನ ವಾಹನ ಭೂತವೆಂದು, ವರುಣನ ವಾಹನ ಜಿಂಕೆಯೆಂದು ನಿರುತಿಯ ವಾಹನ ಮೊಸಳೆ ಎಂದಿದೆ. ನೋಡಿ **ಸೌಥ್ ಇಂಡಿಯನ್ ಗಾಡ್ಸ್,** ಪು. ೮, ೧೯೧

೯೫. **ಎಂ. ಎ. ಆರ್.** ಪೂರ್ವೋಕ್ತ ಪು. ೬೭, ಮತ್ತು **ಎಪಿಗ್ರಾಫಿಯಾ ಕರ್ನಾಟಿಕಾ** ಸಂ. ೯, ಪೀಠಿಕಾ , ಭಾಗ-೮

೯೬. ರಾಮಚಂದ್ರರಾವ್, ಎಸ್. ಕೆ., ಪೂರ್ವೋಕ್ತ, ೧೯೯೨, ಪು. ೨೦೦ ಮತ್ತು **ಎಂ. ಎ. ಆರ್.** ೧೯೪೬, ಪು. ೪೧

೯೭. **ಎಂ. ಎ. ಆರ್.** ೧೯೩೬, ಪು. ೪೧

೯೮. ನೋಡಿ ರಾಮಚಂದ್ರರಾವ್ ಎಸ್. ಕೆ. ಪೂರ್ವೋಕ್ತ, ೧೯೭೫, ಪು. ೨೦೧.

೯೯. **ಎಪಿಗ್ರಾಫಿಯಾ ಕರ್ನಾಟಿಕಾ,** ಸಂ. ೭, ಭಾಗ-೧, ಚನ್ನಗಿರಿ, ಶಾ. ಸಂ. ೨೧, ೨೨

೧೦೦. - ಅದೇ -

೧೦೧. **ಎಪಿಗ್ರಾಫಿಯಾ ಕರ್ನಾಟಿಕಾ,** ಸಂ. ೧೧, ಶಾ. ಸಂ. ೩೧, ೩೨, ೩೩.
ಕ್ರಿ.ಶ. ೧೨೩೫ರಲ್ಲಿ ಹೊಯ್ಸಳ ಸೋಮೇಶ್ವರನು ನೊಳಂಬವಾಡಿ ಮೂವತ್ತು ಸಾವಿರವನ್ನು ಆಳುತ್ತಿರುವಾಗ ತಾನು ಅನೇಕ ಬಿರುದುಗಳನ್ನು ಧರಿಸಿದ್ದನೆಂದು, ಅದೇ ವೇಳೆಯಲ್ಲಿ ನಾರಸಿಂಹನಾಯಕ ಮತ್ತು ಮಲ್ಲಯ್ಯನಾಯಕರು ಬೊಮ್ಮತ್ತನೂರ (ಚಿತ್ರದುರ್ಗ ಸೀಮೆ)ನ್ನು ಆಳುತ್ತಿರುವಾಗ ಬೊಮ್ಮತ್ತನೂರ ಸ್ವಯಂಭು ಮಣಿಲೇಶ್ವರ ದೇವರಿಗೆ ದತ್ತಿಬಿಟ್ಟ ವಿಚಾರ ತಿಳಿಯುತ್ತದೆ.

೧೦೨. **ಎಂ. ಎ. ಆರ್.,** ೧೯೩೮, ಪು. ೫೭

೧೦೩. ಅದೇ ಪು. ೫೮

೧೦೪. ಪ್ರಾಣೇಶ್‌ರಾವ್, ಬಿ. ಎನ್., **ಉಡಮರಡಿ ಶ್ರೀ ಲಕ್ಷ್ಮಿರಂಗನಾಥ ಸ್ವಾಮಿ ಕ್ಷೇತ್ರ ಮಹಿಮೆ ,** ೧೯೯೪ , ಪು. ೫೪. ಹಾಗು ಸುಮತೀಂದ್ರನಾಡಿಗ್, ನೂತನ ದಾವಣಗೆರೆ ಜಿಲ್ಲೆ ಪರಿಚಯ, ೧೯೯೮ ಸೆಪ್ಟೆಂಬರ್ ೯, ಜನತಾವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾದ ಲೇಖನ.

೧೦೫. **ಎಪಿಗ್ರಾಫಿಯಾ ಕರ್ನಾಟಿಕಾ,** ಸಂ. ೭, ಶಾ. ಸಂ.

೧೦೬. ಗಿರೀಜ, ಟಿ. ಪೂರ್ವೋಕ್ತ, ೧೯೯೨, ಪು. ೩೦೫.

೧೦೭. **ಎಪಿಗ್ರಾಫಿಯಾ ಕರ್ನಾಟಿಕಾ** ಸಂ. ೧೧, ಶಾ. ಸಂ. ೩೫.

೧೦೮. ರಾಮಚಂದ್ರರಾವ್, ಎಸ್.ಕೆ., ಪೂರ್ವೋಕ್ತ, ೧೯೮೨, ಪು. ೧೪೧.

೧೦೯. ಡಾ: ವೆಂಕಟೇಶ್ ಆರ್. ಎಚ್. 'ಬೆಳಗುತ್ತಿಯ ಪೂರ್ವ ದೇಗುಲಗಳು' ಪು. ೧೮ (ಅಪ್ರಕಟಿತ ಲೇಖನ)

೧೧೦. ಪಾಟೀಲ್ ಸಿ. ಎಸ್. ಪೂರ್ವೋಕ್ತ, ೧೯೯೨, ಪು. ೧೭೭.

೧೧೧. ಅಲೆಕ್ಸಾಂಡರ್ ರೇ. **ಚಾಲುಕ್ಯನ್ ಆರ್ಕಿಟೆಕ್ಚರ್**, ಆರ್ಕಿಯಾಲಾಜಿಕಲ್ ಸರ್ವೆ ಆಫ್ ಸದರನ್ ಇಂಡಿಯಾ, ೧೮೯೯, ಪು. ೧೯.

೧೧೨. ಭಟ್‌ಸೂರಿ ಕೆ.ಜಿ. ' ಶ್ರೀರಂಗನಾಥ ದೇವಾಲಯ ಶಂಕರನಹಳ್ಳಿ ' , ಅಪ್ರಕಟಿತ ಲೇಖನ. ಪು. ೧

೧೧೩. **ಎಪಿಗ್ರಾಫಿಯಾ ಕರ್ನಾಟಿಕಾ** ಸಂ. ೧೧, ಸಂ. ೧೪೮.

೧೧೪. ಎಂ. ಎ. ಆರ್. ೧೯೩೯, ಪು. ೮೩.

೧೧೫. - ಅದೇ -

೧೧೬. ಹಯವದನ್ ರಾವ್ (ಸಂ), ಪೂರ್ವೋಕ್ತ, ೧೯೩೦, ಪು. ೪೧೪.

೧೧೭. **ಎಂ.ಎ.ಆರ್. ಪೂರ್ವೋಕ್ತ.**

೧೧೮. ಅ.ರಾ. ಶಂಕರಯ್ಯ, ' ನಿರ್ಥಡಿ ರಂಗನಾಥ ದೇವಾಲಯ ', ಶ್ರೀನಿವಾಸ ಮತ್ತು ಲಕ್ಷ್ಮಣ್ ತೆಲಗಾವಿ, (ಸಂ) **ಚಂದ್ರವಳ್ಳಿ** , ೧೯೭೬, ಪು. ೨೮.

೧೧೯. **ಎಪಿಗ್ರಾಫಿಯಾ ಕರ್ನಾಟಿಕಾ** ೧೧, ದಾವಣಗೆರೆ ೧೫೭

೧೨೦. ಅದೇ ಸಂ. ೭, ಚನ್ನಗಿರಿ ೧೧೮.

೧೨೧. ಪ್ರಾಣೇಶರಾವ್ ಬಿ. ಎಸ್. ಪೂರ್ವೋಕ್ತ, ೧೯೯೪, ಪು. ೪೪-೪೬

೧೨೨. ರಾಮಚಂದ್ರರಾವ್, ಎಸ್.ಕೆ. ಪೂರ್ವೋಕ್ತ, ೧೯೯೨, ಸಂ. ೩, ಪು. ೧೭೧.

೧೨೩. ಈ ಮೂರ್ತಿಯನ್ನು ಪೇಶ್ವೆಗಳ ಕಾಲದಲ್ಲಿ ಸುಬೇದಾರ್ ಲಕ್ಷ್ಮಣ ಹರಿ ಎಂಬಾತ ಪ್ರತಿಷ್ಠಾಪಿಸಿದನೆಂದು ಸ್ಥಳೀಯರು ಹೇಳುತ್ತಾರೆ.

೧೨೪. ಉಚ್ಚಂಗೆಮ್ಮ ದೇವಾಲಯದ ಪೂರ್ವ ಪ್ರವೇಶದ್ವಾರದ ಎಡಬದಿಯ ಶಾಸನದಲ್ಲಿದೆ. ಕೊಟ್ರೇಶ್ ಎಂ. ಪೂರ್ವೋಕ್ತ, ೧೯೯೬, ಪು. ೭೪

೧೨೫. ಪಾಟೀಲ್ ಸಿ. ಎಸ್.ಕೆ ವಿನೋದಾ ಸಿ. ಪಾಟೀಲ್, **ಇನ್‌ಸ್ಕ್ರಿಪ್‌ಷನ್ ಆಫ್ ಬಳ್ಳಾರಿ ಡಿಸ್ಟ್ರಿಕ್ಟ್**, ೧೯೯೭, ಶಾ.ಸಂ.೪

೧೨೬. ಹೊಯ್ಸಳ ದೊರೆ ಎರಡನೆಯ ನರಸಿಂಹ ಅಥವಾ ವೀರ ನರಸಿಂಹ (ಕ್ರಿ.ಶ. ೧೨೨೦-೧೨೩೫) ಅಮಾತ್ಯನಾದ ಪೋಲಾಳ್ವದೇವ ದಂಡನಾಯಕನು ಈ ದೇವಾಲಯ ಕಟ್ಟಿಸಿದ ಎಂದಿದೆ. ನೋಡಿ. **ಎಪಿಗ್ರಾಫಿಯಾ ಕರ್ನಾಟಿಕ,** ಸಂ. ೧೧. ದಾವಣಗೆರೆ ಸಂ. ೨೫.

೧೨೭. ಅಲೆಕ್ಸಾಂಡರ್, ರೇ, ಪೂರ್ವೋಕ್ತ, ೧೮೯೬, ಪು. ೩೪.

೧೨೮. ಶಂಕರ ನಾರಾಯಣರಾವ್, ಎಚ್. ಎಂ. ೧೯೮೨, **ಶ್ರೀ ಹರಿಹರ ದೇವಾಲಯ** , ಪು. ೧೪೧.

೧೨೯. ಮಂಜುನಾಥ್, ಡಿ. **ಆರ್ಟ್ ಆ್ಯಂಡ್ ಪ್ಯಾಟ್‌ನೈಜ್ ಆಫ್** ಹರಿಹರ **ಟೆಂಪಲ್,** ೧೯೯೭, ಪು.೩೫

(ಅಪ್ರಕಟಿತ ಎಂ. ಫಿಲ್. ಪ್ರಬಂಧ)

೧೩೦. **ಏಫಿಗ್ರಾಫಿಯಾ ಕರ್ನಾಟಿಕಾ,** ಪೂರ್ವೋಕ್ತ, ಶಾ.ಸಂ. ೩೫.

೧೩೧. ಅನಂತಾಳ್ವರ್, ಎಂ.ಎ.(ಸಂ) ಮತ್ತು ಅಲೆಕ್ಷಂಡರ್ ರೇ (ಸ.ಸಂ)೧೯೧೮, **ಇಂಡಿಯನ್ ಆರ್ಕಿಟೆಕ್ಚರ್,** ಪು.೨೭೬.

೧೩೨. ಮೊದಲು ಹರಿಹರೇಶ್ವರ ಶಿಲ್ಪವಿದ್ದಿತ್ತೆಂದು , ನಂತರ ಅಲ್ಲಿನ ಶಿಲ್ಪವನ್ನು ತೆಗೆದು ಬೇರೆಡೆ ಸ್ಥಾಪಿಸಿದ್ದಾರಂತೆ, ನೋಡಿ. ಶಂಕರ್‌ನಾರಾಯಣ ರಾವ್ ಎಚ್. ಎಂ. ಪೂರ್ವೋಕ್ತ ಪು. ೧೩೮.

೧೩೩. **ಎಂ. ಎ. ಆರ್.** ೧೯೩೮, ಪು. ೭೧.

೨೩೪. ನೋಡಿ. **ಏಫಿಗ್ರಾಫಿಯಾ ಕರ್ನಾಟಿಕಾ,** ಸಂ.೧೧, ದಾವಣಗೆರೆ ಸಂ.೨೩,೨೮,೪೫, ೫೭.

೧೩೫. ಪಾಟೀಲ್ ಸಿ. ಎಸ್. ಪೂರ್ವೋಕ್ತ, ೧೯೯೧, ಪು. ೨೨೩,

೧೩೬. - ಅದೇ -

೧೩೭. ಎಂ. ಎ. ಆರ್. , ೧೯೩೮, ಪು. ೬೯

೧೩೮. - ಅದೇ - ಪು. ೬೪

೧೩೯. ಅಲೆಕ್ಸಾಂಡರ್, ರೇ. ಪೂರ್ವೋಕ್ತ, ೧೮೯೬, ಪು. ೬೨

೧೪೦. **ಸೌಥ್ ಇಂಡಿಯನ್ ಇನ್‌ಸ್ಕ್ರಿಪ್‌ಷನ್ಸ್,** ಸಂ. ೯, ಶಾ.ಸಂ. ೧೧೮

೧೪೧. - ಅದೇ - ಶಾ. ಸಂ. ೧೪೧

೧೪೨. ಮಾಲಾ, ಎ.ಪಿ. ಪೂರ್ವೋಕ್ತ, ಪು. ೮

೧೪೩. **ಎಫಿಗ್ರಾಫಿಯಾ ಕರ್ನಾಟಿಕ,** ಸಂ. ೧೧, ದಾವಣಗೆರೆ, ಶಾ.ಸಂ. ೪

೧೪೪. - ಅದೇ - ಶಾ.ಸಂ. ೬

೧೪೫. ಊರಿನ ಬಡಗಣ ದಿಕ್ಕಿನ ಕನ್ನೇಶ್ವರ ದೇವಾಲಯವೆಂದು ಶಾಸನದಲ್ಲಿ ಉಲ್ಲೇಖಿತವಾಗಿದೆ. ಆದರೆ ಈ ದೇವಾಲಯ ಈಗ ಕಂಡುಬರುತ್ತಿಲ್ಲ. **ಏಪಿಗ್ರಾಫಿಯಾ ಕರ್ನಾಟಿಕ,** ಶಾ.ಸಂ. ೩೨

೧೪೬. ಎಂ. ಎ. ಆರ್. ೧೯೩೮, ಪು. ೬೫,

೧೪೭. **ಎಫಿಗ್ರಾಫಿಯಾ ಕರ್ನಾಟಿಕ,** ಸಂ. ೧೧, ದಾವಣಗೆರೆ, ಶಾ. ಸಂ. ೨೫

೧೪೮. - ಅದೇ - ಸಂ. ೭, ಚನ್ನಗಿರಿ, ಶಾ.ಸಂ.

೧೪೯. ಭಟ್‌ಸೂರಿ , ಕೆ.ಜಿ. ' ಶ್ರೀ ರಂಗನಾಥ ದೇವಾಲಯ ಶಂಕರನಹಳ್ಳಿ ', ಪು. ೧

೧೫೦. **ಎಫಿಗ್ರಾಫಿಯಾ ಕರ್ನಾಟಿಕ,** ಸಂ. ೧೧, ದಾವಣಗೆರೆ, ಶಾ.ಸಂ. ೧೦೫

೧೫೧. **ಎಫಿಗ್ರಾಫಿಯಾ ಕರ್ನಾಟಿಕ,** ಸಂ. ೧೧, ದಾವಣಗೆರೆ, ಶಾ.ಸಂ.೧೨೯

೧೫೨. **ಎಫಿಗ್ರಾಫಿಯಾ ಕರ್ನಾಟಿಕ,** ಸಂ. ೧೧, ದಾವಣಗೆರೆ, ಶಾ.ಸಂ.೬೧

೧೫೩. ಚಾಲುಕ್ಯ ದೊರೆ ೬ನೇ ವಿಕ್ರಮಾದಿತ್ಯನು ಮೂನ್ನೂರು ಜನ ಬ್ರಾಹ್ಮಣರಿಗೆ ವೇದಾದ್ಯಯನ ಮಾಡಲು ನಿಲಗುಂದ ಗ್ರಾಮವನ್ನು ಅಗ್ರಹಾರವಾಗಿ ಪರಿವರ್ತಿಸಿದ. **ಇಂಡಿಯನ್ ಎಪಿಗ್ರಫಿ** , ಸಂ.೧೪, ಪು.೧೪೫

೫. ಮೂರ್ತಿ ಶಿಲ್ಪ :

ಮೂರ್ತಿ ಶಿಲ್ಪದ ಉಗಮ, ವಿಕಾಸ, ಹಿನ್ನಲೆ:- ಭಾರತದಲ್ಲಿ ದೇವತಾರಾಧನೆ ಹಾಗು ವ್ಯವಸ್ಥಿತ ದೇವಾಲಯಗಳ ನಿರ್ಮಾಣ ಎಂದು ಆರಂಭವಾಯಿತೋ ಅಂದಿನಿಂದಲೂ ದೇವತಾ ಮೂರ್ತಿಗಳ ಪ್ರತಿಷ್ಠಾಪನೆ ಮತ್ತು ಆರಾಧನೆ ನಡೆದೇ ಇದೆ. ಯಾವುದೇ ಪಂಥದ ದೇವಾಲಯವಿರಲಿ ಆ ದೇವಾಲಯಕ್ಕೊಂದು ದೇವತಾಮೂರ್ತಿ ಇದ್ದೇ ಇರುತ್ತದೆ. ಈ ರೀತಿಯ ಮೂರ್ತಿಗಳನ್ನು ಕುರಿತು ಶಾಸ್ತ್ರೀಯವಾಗಿ ಅಧ್ಯಯನ ಮಾಡುವ ಶಾಸ್ತ್ರವನ್ನು ನಾವು ಸ್ಥೂಲವಾಗಿ ''ಮೂರ್ತಿಶಾಸ್ತ್ರ'' ಎಂದು ಕರೆಯಬಹುದು.

' ಮೂರ್ತಿ ' ಎಂಬ ಶಬ್ದಗಳನ್ನೊಳಗೊಂಡು ಅದಕ್ಕೆ ಪರ್ಯಾಯವಾಗಿ ಬಳಸಿದ ಶಬ್ದಗಳಲ್ಲಿ ಆದೊಂದು ಭೌತಿಕವಸ್ತು ಎಂಬಂತೆಯೇ ಗ್ರಹಿಸಲಾಗುತ್ತದೆ. ಏಕೆಂದರೆ ' ದೇವತಾಮೂರ್ತಿ ' ಎಂಬ ಶಬ್ದದಲ್ಲಿ ಮೂರ್ತಿಯೇ ದೇವತೆಯಲ್ಲ; ಮೂರ್ತಿ ದೇವತೆಯದು. ಈ ಕುರಿತು ಇರುವ ' ಪ್ರತಿಮಾ ', ' ಬಿಂಬ ', 'ಪ್ರತಿಕೃತಿ', ' ವಿಗ್ರಹ ' ಮುಂತಾದ ಶಬ್ದಗಳು ಇದನ್ನು ಇನ್ನೂ ಸ್ಪಷ್ಟವಾಗಿ ಸೂಚಿಸುತ್ತವೆ. ಇಲ್ಲೆಲ್ಲ ಒಂದು ನಿರಾಕಾರ ಕಲ್ಪನೆಯನ್ನು ಯಥಾವತ್ತಾಗಿ ಅನುಕರಿಸಿದ 'ಸಾಕಾರ ವಸ್ತು ' ಎಂಬ ಪರಿಕಲ್ಪನೆಯಿದೆ[೧]. 'ಅರ್ಚ್ಯ' ಎಂಬ ಶಬ್ದ ' ಪೂಜಿಸಲ್ಪಡುವಂಥದ್ದು ' ಎಂದಾದರೆ ' ಬೇರೆ ' ಕೂಡ ಅದೇ ಅರ್ಥವನ್ನು ಕೊಡುತ್ತದೆ. ' ತನು', ' ವಪು ' ಮುಂತಾದ ಶಬ್ದಗಳು ಮೂರ್ತಿಯನ್ನು ದೇಹವನ್ನಾಗಿ ಗ್ರಹಿಸುವಲ್ಲಿ ಹಾಗು ದೇವರನ್ನು ಅದರ ಆತ್ಮವನ್ನಾಗಿ ಪ್ರತ್ಯೇಕಿಸುತ್ತವೆ[೨].

ಮೂರ್ತಿ ಎಂಬ ಪದಕ್ಕೆ ಸಮಾನಾರ್ಥವಾಗಿ ' ಪ್ರತಿಮೆ ' ಎಂಬ ಪದ ಪ್ರಯೋಗದಲ್ಲಿದೆ. ಅಲ್ಲದೆ, ಮೂರ್ತಿಶಾಸ್ತ್ರವನ್ನು ' ಪ್ರತಿಮಾ ಶಾಸ್ತ್ರ ' ಎಂದೂ ಕರೆಯಲಾಗುತ್ತಿದೆ. (Iconography – Iconomentry) ಪ್ರತಿಮಾ ಲಕ್ಷಣವೆಂದರೆ; ಒಂದು ದೇವತೆಯ ಲಕ್ಷಣವನ್ನು ಮೂರ್ತಿ ರೂಪದಲ್ಲಿ ಪ್ರಮಾಣಬದ್ಧವಾಗಿ ಹೇಗೆ ಹಿಡಿಯಬೇಕೆಂಬುದನ್ನು ವಿಧಿಸುವ ಶಾಸ್ತ್ರ. ಶಾಸ್ತ್ರೀಯ ನಿರೂಪಣೆ ಪ್ರಕಾರ ಮೂರ್ತಿಯು ಒಂದು ರೂಪ ಒಂಭತ್ತು ಅಂಗಗಳನ್ನು ಒಳಗೊಂಡಿರುತ್ತದೆ. ಅವೆಂದರೆ; ನ್ಯಾಸ (ರೂಪ ಸಂಯೋಜನೆ) ಅಲಂಕಾರ (ಆಭರಣ, ವಸ್ತ್ರ, ಕೇಶ ಮುಂತಾದವು) ಮುದ್ರಾ (ಹಸ್ತ ಮುದ್ರೆಗಳು), ಆಯುಧ (ದೇವತೆಯ ಕೈಯಲ್ಲಿರುವ ಆಯುಧಗಳು) ಭಾಘ್ರಕಕ್ಷ (ಆಸನ) ವಾಹನ, ಉಪದೇವ (ಪ್ರಧಾನ ದೇವತೆಯ ಜತೆ ತೋರಿಸಲ್ಪಡುವ ಇತರ ಕಡಿಮೆ ಮಹತ್ವದ ದೇವತೆಗಳು, ಪುರುಷ ದೇವತೆಗಳ ಸಂದರ್ಭದಲ್ಲಿ ಅವರ ' ಸ್ತ್ರೀ ' ದೇವತೆಗಳು) ಆರಿ (ದೇವತೆಯ ವೈರಿ) ಹಾಗು ಸ್ತುವಕ[೩] (ಭಕ್ತರು ಹಾಗು ಇತರ ಸೇವಕರು) ಈ ಶಾಸ್ತ್ರೀಯ ಸಂಪ್ರದಾಯಕ್ಕನುಗುಣವಾಗಿಯೇ ದೇವತಾ ಮೂರ್ತಿಗಳು ರೂಪುಗೊಳ್ಳುತ್ತವೆ. ಮೂರ್ತಿಶಿಲ್ಪಕ್ಕೆ

ಪ್ರಾಗೈತಿಹಾಸಿಕ ಕಾಲದಿಂದಲೂ ಆಧಾರಗಳು ದೊರಕುತ್ತವೆ. ಭಾರತದ ವಿವಿಧ ನೆಲೆಗಳ ಉತ್ಖನನದಿಂದ ಹಲವಾರು ಮಾಹಿತಿಗಳು ದೊರಕಿವೆ. ಅವುಗಳಲ್ಲಿ ಬಿಹಾರ ರಾಜ್ಯದ ಚಿರಾಂಡ[೪]. ರಾಜಸ್ಥಾನದ ಅಹಾರ್[೫] ಮಧ್ಯ ಪ್ರದೇಶದ ಕಾಯಥ, ನವದಾತೋಲಿ ಹಾಗು ಪ್ರಕಾಶ[೬] ಮತ್ತು ಮಹಾರಾಷ್ಟ್ರದ ನೆವಾಸಾ, ಇನಾಂಗಾಂವ್[೭], ಉತ್ತರ ಪ್ರದೇಶದ ಲಾಲ್-ಖಿಲಾದಲ್ಲಿ ಪ್ರಾಣಿ ಹಾಗು ಮಾತೃದೇವತೆಯ ಮೃಣ್ಮೂರ್ತಿಗಳು ದೊರೆತಿವೆ. ಹಾಗು ಗಂಗಾ ಬಯಲಿನ ಪಟ್ಟಣಗಳಾದ ಮಥುರಾ, ಅಹಿಚ್ಚತ್ರ ಮೊದಲಾದ ಪಟ್ಟಣಗಳಲ್ಲಿ ಕ್ರಿ.ಪೂ. ಐದನೇ ಶತಮಾನದಿಂದಲೇ ಮೃಣ್ಮೂರ್ತಿಗಳನ್ನು ಪತ್ತೆ ಹಚ್ಚಲಾಗಿದೆ. ಇವುಗಳು ನಂತರದ ಭಾರತೀಯ ಮೂರ್ತಿ ಲಕ್ಷಣಗಳಿಗೆ ಪ್ರೇರಕವಾಗಿವೆ. ಕರ್ನಾಟಕದ ಕುಪ್ಪಗಲ್, ಪಿಕ್ಲಿಹಾಳ, ಸಂಗನಕಲ್ಲು, ತೆಕ್ಕಲಕೋಟೆ ಮುಂತಾದ ಕಡೆ ನಡೆದ ಉತ್ಖನನಗಳಿಂದ ನೂತನ ಶಿಲಾ ಯುಗ/ಶಿಲಾ ತಾಮ್ರಯುಗಕ್ಕೆ ಸೇರಿದ ಸುಡಾವೆ ಮಣ್ಣಿನ ಗೊಂಬೆಗಳು ದೊರೆತಿವೆ[೮]. ಅವುಗಳಲ್ಲಿ ಎತ್ತು, ಕುರಿ, ಪಕ್ಷಿ, ಮನುಷ್ಯ ಕೃತಿಗಳು ಪ್ರಮುಖವಾಗಿ ದೊರಕಿವೆ. ದಾವಣಗೆರೆ ಜಿಲ್ಲೆಗೆ ಹೊಂದಿಕೊಂಡಂತಿರುವ ಕೂಡ್ಲಿಗಿ ತಾಲೂಕಿನ ಕುಮತಿ, ಹುಲಿಕುಂಟೆ ನೆಲೆಗಳಲ್ಲಿ ಬೃಹತ್ ಶಿಲಾಯುಗಕ್ಕೆ ಸೇರಿದ ಏಕಶಿಲಾ ಮಾನವಾಕೃತಿಗಳು ದೊರತಿವೆ[೯]. ಇದೇರೀತಿಯ ಗೊಂಬೆಗಳು ಹಿರೇಬೆನಕಲ್, ಐಹೊಳೆಯಲ್ಲೂ ಕಂಡುಬಂದಿವೆ. ಇವು ಅಂದಿನ ಧಾರ್ಮಿಕ ನಂಬಿಕೆ, ಭಾವನೆ ಮತ್ತು ಪರಂಪರೆಯನ್ನು ಸೂಚಿಸುವ ಆಕರಗಳಾಗಿರುವುದಷ್ಟೇ ಅಲ್ಲದೇ, ಕರ್ನಾಟಕ ಮೂರ್ತಿಶಿಲ್ಪದ ಪೂರ್ವಭಾವಿ ಹಂತವನ್ನು ಸೂಚಿಸುತ್ತವೆ[೧೦].

ಈ ನಿರ್ಮಿತಿಗಳು ಸರಳ ಹಾಗು ಚತುರ ತಾಂತ್ರಿಕ ಕುಶಲತೆಯನ್ನು ತೋರಿಸುತ್ತವೆ. ಅಷ್ಟೇ ಅಲ್ಲದೆ, ಇವು ತರುವಾಯದ ಶಿಲಾ ನಿರ್ಮಿತಿಗಳಿಗೆ ನಾಂದಿಯಾಗಿದ್ದು, ಆ ಕಾಲದಲ್ಲೇ ಶಿಲ್ಪಿಯು ಕಲ್ಲಿನಲ್ಲಿ ಕೆತ್ತುವ ಕೆಲಸದಲ್ಲಿ ಪರಿಣಿತಿಯನ್ನು ಹೊಂದಿದ್ದನೆಂಬುದರ ನಿದರ್ಶನಗಳಾಗಿವೆ[೧೧].

ಮಹೆಂಜೊದಾರಿನಲ್ಲಿ ದೊರೆತ ಪ್ರಾಣಿಗಳ ಶಿಲ್ಪಗಳು[೧೨] ಹಾಗು ನರ್ತನ ಶಿಲ್ಪ, ಮುದ್ರೆಯ ಮೇಲೆ ದೊರೆತ ವಿಗ್ರಹಗಳಲ್ಲಿ ಮುಖ್ಯವಾಗಿ ಪಶುಪತಿ ಶಿವನೆಂದು ಗುರುತಿಸಲಾಗಿರುವ ಧ್ಯಾನಸ್ಥಮೂರ್ತಿಗಳು ಸಿಂಧೂ ನಾಗರಿಕತೆಯಲ್ಲಿ ದೊರೆಯುವ ಪ್ರಮುಖ ಮೂರ್ತಿಶಿಲ್ಪಗಳಾಗಿವೆ. ವೇದಗಳ ಕಾಲದಲ್ಲಿ ವಿಗ್ರಹಗಳಿಗೆ ಪ್ರಾಧಾನ್ಯವಿರಲಿಲ್ಲವೆಂದು ಪ್ರಕೃತಿ ಶಕ್ತಿಗಳನ್ನು ಆರಾಧಿಸುತ್ತಿದ್ದರೆಂದು ಹೇಳಲಾಗುತ್ತದೆ. ಆದರೂ ಇಂದ್ರ, ವರುಣ, ರುದ್ರ ಮೊದಲಾದ ದೇವತೆಗಳಿಗೆ ಮನುಷ್ಯಾಕಾರದ ಕಲ್ಪನೆಯನ್ನು ಕೊಟ್ಟಿರುವುದು ಕಂಡುಬರುತ್ತದೆ[೧೩].

[illegible]

[illegible]

[illegible]

ರಾಮಾಯಣ , ಮಹಾಭಾರತಗಳಲ್ಲಿಯೂ ದೇವಾಲಯಗಳ ಉಲ್ಲೇಖ ಬರುವುದರಿಂದ ಆ ಕಾಲದಲ್ಲಿಯೇ ವಿಗ್ರಹರಾಧನೆ ತಕ್ಕಮಟ್ಟಿಗೆ ಪ್ರಚಲಿತವಾಗಿರಬೇಕೆನಿಸುತ್ತದೆ[೧೪]. ವೇದೋತ್ತರ ಕಾಲದ ಗೃಹ್ಯಸೂತ್ರಗಳಲ್ಲಿ ಮೂರ್ತಿ ಪೂಜೆಯ ಮೊದಲ ಉಲ್ಲೇಖ ಸಿಗುತ್ತದೆ. ನಂತರದ ಸಾಹಿತ್ಯವಾದ ಶತರುದ್ರೀಯದಲ್ಲಿ ಬ್ರಾಹ್ಮಣ ಸಂಸ್ಕೃತಿಯ ಕೆಲ ಮುಖ್ಯ ದೇವತೆಗಳಾದ ವಿಷ್ಣು, ಶಿವ, ಬ್ರಹ್ಮ, ಕುಮಾರ, ವಕ್ರತುಂಡ, ದುರ್ಗ, ಆದಿತ್ಯ ಮುಂತಾದ ದೇವತೆಗಳ ಉಲ್ಲೇಖ ಬರುತ್ತದೆ. ಹಾಗು ದೇವತಾತನಯಗಳಿಗೆ ಗ್ರಾಂಥಿಕ ಆಧಾರಗಳು ಆ ಕಾಲದಲ್ಲೇ ಸಿಗುತ್ತವೆ[೧೫].

ಮೂರ್ತಿಶಾಸ್ತ್ರಕ್ಕೆ ಕ್ರಿ.ಪೂ. ೩ನೇ ಶತಮಾನದಿಂದ ಆಧಾರಗಳು ಸಿಗುತ್ತವೆ. ಅವೈದಿಕರು ಕೂಡಾ ಮೂರ್ತಿಗಳ ಆರಾಧನೆಯಲ್ಲಿ ತೊಡಗಿದ್ದರೆಂಬುದು ವೈದಿಕ ಸಾಹಿತ್ಯದಿಂದ ವ್ಯಕ್ತವಾಗುತ್ತದೆ[೧೬]. ಕ್ರಿ.ಶ. ನಾಲ್ಕನೆ ಶತಮಾನಕ್ಕೆ ಸೇರಿದ ಅವಶೇಷಗಳು ಗಂಗಾ ಬಯಲಿನಲ್ಲಿ ದೊರೆತಿದ್ದು, ಅವುಗಳಿಂದ ಕ್ರಿ.ಪೂ. ೩ನೇ ಶತಮಾನಕ್ಕೆ ಪೂರ್ವದಲ್ಲೇ ಪ್ರಾಚೀನ ಭಾರತದ ಗ್ರಾಮಗಳಲ್ಲಿ ಮರದ ಮೂರ್ತಿಗಳು ಇದ್ದವೆಂಬುದು ಸ್ಪಷ್ಟವಾಗುತ್ತದೆ. ಈ ಎಲ್ಲಾ ಆಧಾರಗಳಿಂದ ಭಾರತೀಯ ನೆಲದ ಅವೈದಿಕ ಸಮಾಜಗಳಲ್ಲಿ ಮೂರ್ತಿ ಪೂಜೆ ಸಂಪ್ರದಾಯ ಪ್ರಚಲಿತದಲ್ಲಿತ್ತೆಂದು ಹೇಳಬಹುದು[೧೭].

ಭಾರತೀಯ ಮೂರ್ತಿ ಶಿಲ್ಪ ಚರಿತ್ರೆಯಲ್ಲಿಯೇ ಮೌರ್ಯ ಕಾಲದಲ್ಲಿ ಒಂದು ಹೊಸ ಅಧ್ಯಾಯ ಪ್ರಾರಂಭವಾಯಿತು. ತನ್ನ ಪೂರ್ವಿಕರಿಗಿಂತ ಭಿನ್ನವಾಗಿ ಅಶೋಕ ಶಿಲಾ ಮಾಧ್ಯಮಕ್ಕೆ ಆಧ್ಯತೆ ನೀಡಿದ. ಕಲ್ಲಿನಿಂದ ಮಾಡಿದ ಮೂರ್ತಿಗಳಲ್ಲಿ ಮೌರ್ಯರ ಸ್ತಂಭಗಳ ಮೇಲ್ಭಾಗದ ವೃಷಭ, ಆನೆ, ಸಿಂಹ, ಕುದುರೆಯ ಆಕೃತಿಗಳು ಮುಖ್ಯವಾಗಿವೆ. ಧೌಲಿಯ ಬಂಡೆಯ ಮೇಲಿರುವ ಆನೆಯ ಉಬ್ಬುಶಿಲ್ಪ, ಪಾಟ್ನದ ವಸ್ತು ಸಂಗ್ರಹಾಲಯದಲ್ಲಿರುವ ಶಿಲ್ಪಗಳು, ಬೆಸನಗರದ ಯಕ್ಷಿ ,ಸಾರನಾಥದಲ್ಲಿ ದೊರೆತ ಶಿಲ್ಪಗಳು ಪ್ರಮುಖವಾದವುಗಳಾಗಿವೆ. ಭೌದ್ಧ , ಜೈನ ಧರ್ಮಗಳ ಪ್ರಾರಂಭಿಕ ರೂಪಕ್ಕೂ, ಮಧ್ಯಕಾಲಿನ ಯುಗದಲ್ಲಿನ ಅವುಗಳ ಆಚರಣೆಯ ರೂಪಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಅವು ಸ್ಪಷ್ಟವಾಗಿ ಅನಾತ್ಮ, ಅನಿತ್ಯ ವಾದಗಳಿಂದ ಪಾರಮಾರ್ಥಿಕಕ್ಕೆ ಹೊರಳಿಕೊಳ್ಳುತ್ತವೆ. ಜೊತೆಗೆ ತಮ್ಮದೇ ದೇವತಾ ಪ್ರಪಂಚವನ್ನು ನಿರ್ಮಾಣ ಮಾಡಿ, ಸಾಮಾನ್ಯ ಉಪಾಸಕರ, ಸಾಮಾನ್ಯ ಜ್ಞಾನದಲ್ಲಿ ಮೂರ್ತಿ ಪೂಜಾ ಪರಂಪರೆಗಳಾಗಿ ಪರಿವರ್ತನೆ ಹೊಂದುತ್ತವೆ . ಕ್ರಿ.ಪೂ. ಎರಡು ಹಾಗು ಒಂದನೆಯ ಶತಮಾನಕ್ಕೆ ಸೇರಿದ ಸಾಂಚಿಸ್ತೂಪ ಹಾಗು ಭಾರಹೂತ್ ಸ್ತೂಪಗಳಲ್ಲಿ ಭಾರತೀಯ ಪೂಜಾ ಪರಂಪರೆಯ ಆಧಾರಗಳು ದೊರೆಯುತ್ತವೆ.

ಇವುಗಳಲ್ಲಿ ಬುದ್ಧನನ್ನು ಮೂರ್ತಿರೂಪದಲ್ಲಿ ತೋರಿಸದಿದ್ದರೂ, ಬುದ್ಧನ ಪ್ರತೀಕವಾದ ಬೋಧಿವೃಕ್ಷ, ಸಿಂಹಾಸನ, ಸ್ತೂಪ, ಚಕ್ರ ರೂಪದಲ್ಲಿ ಪೂಜಿಸುವ ದೃಶ್ಯಗಳಿರುತ್ತವೆ. ಈ ಪೂಜೆಯಲ್ಲಿ ನಮಸ್ಕಾರ, ಪ್ರದಕ್ಷಿಣೆ, ಧೂಪ, ದೀಪ, ಪುಷ್ಪ, ನೈವೇದ್ಯ ಮುಂತಾದ ಪೂಜೆಯ ಅಂಗಗಳು ಚಿತ್ರಿತವಾಗಿರುತ್ತವೆ. ಈ ಪೂಜೆಯನ್ನು ಮೂರ್ತಿ ಪೂಜೆಯ ಇತಿಹಾಸದಲ್ಲಿ ಒಂದು ಪ್ರಾರಂಭಿಕ ಅವಸ್ಥೆ ಎಂದು ಹೇಳಬಹುದಾಗಿದೆ. ಬುದ್ಧನ ಮೂರ್ತಿಯ ಕಲ್ಪನೆ ಕ್ರಿ.ಶ.ದ ಆರಂಭದಿಂದ ಕ್ರಮೇಣ ಗಟ್ಟಿಗೊಳ್ಳುತ್ತಾ ಹೋಗಿ, ಸುಮಾರು ಕ್ರಿಸ್ತಶಕ ಎರಡನೆಯ ಶತಮಾನದಲ್ಲಿ ಈ ಮೂರ್ತಿಯು ಅಂತಿಮ ರೂಪ ಪಡೆಯಿತು[೧೮]. ಬುದ್ಧನ ಮೂರ್ತಿಯ ಉಗಮದ ಬಗೆಗೆ ಈ ಶತಮಾನದ ಆದಿಯಲ್ಲಿ ಸಾಕಷ್ಟು ಚರ್ಚೆಗಳು ನಡೆದಿವೆ. ಗಾಂಧಾರ ಶಿಲ್ಪಗಳಲ್ಲಿ ಅವು ಗ್ರೀಕ್ ದೇವತೆಗಳ ಶೈಲಿಯಲ್ಲಿ ಕಾಣಿಸಿಕೊಳ್ಳುವುದರಿಂದ ಬುದ್ಧ ಮೂರ್ತಿಗಳು ಗ್ರೀಕ್ ಸಂಸ್ಕೃತಿಯ ಪ್ರಭಾವದಿಂದ ಉಗಮಿಸಿದವು ಎಂಬ ವಾದ ಇತ್ತು[೧೯]. ಪ್ರಾಚೀನ ಭಾರತೀಯ ಗ್ರಾಮ ಸಂಸ್ಕೃತಿಗಳ ಯಕ್ಷ-ಯಕ್ಷಿಯರ ಮೂರ್ತಿ ಶೈಲಿಯೇ ಬುದ್ಧನ ಮೂರ್ತಿಯನ್ನು ರೂಪಿಸಿತು ಎಂದು ಆನಂದ ಕುಮಾರ ಸ್ವಾಮಿಯವರು ಹೇಳಿದ್ದಾರೆ.

ಕ್ರಿಸ್ತ ಪೂರ್ವದಲ್ಲಿ ಕಂಡು ಬರುವ ಭೌದ್ಧ ಸ್ತೂಪಗಳಲ್ಲಿ ಬುದ್ಧಮೂರ್ತಿಯೊಡನೆ ಯಕ್ಷ-ಯಕ್ಷಿಣಿ, ನಾಗ, ಹಾಗು ವೈದಿಕ ದೇವತೆಗಳು ಕೈಮುಗಿದು ನಿಂತಿರುವಂತೆ ಕೆತ್ತಲಾಗಿದೆ[೨೧]. ಬುದ್ಧನನ್ನು ಭಗವಂತ ಎಂದು ಭಾಗವತ ಸಂಪ್ರದಾಯದವರಂತೆ ಕರೆಯುವ ರೂಢಿ ಅದಾಗಲೇ ಬೆಳದಿತ್ತು. ಆತ ' ಚಕ್ರವರ್ತಿ ' ಎಂಬ ಪರಿಕಲ್ಪನೆಯಲ್ಲಿ ಛತ್ರ, ಚಾಮರ, ಧ್ವಜ, ಸಿಂಹಾಸನ, ಲಾಂಛನ ಮುಂತಾದ ಪ್ರಾಚೀನ ಭಾರತೀಯ ರಾಜತ್ವದ ಚಿಹ್ನೆಗಳನ್ನು ಆತನ ಸಂಕೇತಗಳೊಡನೆ ಶಿಲ್ಪಗಳಲ್ಲಿ ತೋರಿಸಲಾಗಿದೆ.

ಜೈನ ಧರ್ಮದಲ್ಲಿ ತೀರ್ಥಂಕರರರನ್ನು ಮೂರ್ತಿ ರೂಪದಲ್ಲಿ ಪೂಜಿಸುವ ಸಂಪ್ರದಾಯ ಕ್ರಿ.ಶ. ಆರಂಭದಲ್ಲೇ ಇದ್ದುದಕ್ಕೆ ಪ್ರಾಕ್ತನ ಶಾಸ್ತ್ರೀಯ ಆಧಾರಗಳು ದೊರೆಯುತ್ತವೆ[೨೨]. ಜಿನಮೂರ್ತಿಯ ಉಲ್ಲೇಖ ಸ್ಪಷ್ಟವಾಗಿ ಖಾರವೇಲನ ಹಾಂಥಿಗುಂಪಾ ಶಾಸನದಲ್ಲಿ ದೊರಕುತ್ತದೆ. ಇದು ಕ್ರಿ.ಪೂ. ಮೊದಲನೇ ಶತಮಾನದ ಮಧ್ಯಭಾಗಕ್ಕೆ ಸೇರಿದ್ದಾಗಿದೆ[೨೩]. ಮಥುರಾದಲ್ಲಿ ಭೌದ್ಧಮೂರ್ತಿಗಳಂತೆ ಪ್ರಾಚೀನ ಜಿನಮೂರ್ತಿಗಳು ದೊರೆಯುತ್ತವೆ., ಮಧ್ಯಕಾಲದಲ್ಲಿ ಪ್ರತಿ ತೀರ್ಥಂಕರರರನ್ನು ಪ್ರತ್ಯೇಕಿಸುವ ನಾಗ, ವೃಕ್ಷ, ಲಾಂಛನ, ಯಕ್ಷ-ಯಕ್ಷಿ ಮುಂತಾದ ಗುರುತುಗಳು ಬೆಳೆಯುತ್ತವೆ.ಜೈನ ಮೂರ್ತಿಶಾಸ್ತ್ರದಲ್ಲಿ ಪ್ರತಿ ತೀರ್ಥಂಕರ ಮೂರ್ತಿಗೂ ಒಬ್ಬ ಯಕ್ಷ ಹಾಗು ಒಬ್ಬ ಯಕ್ಷಣಿಯರು ದ್ವಾರಪಾಲಕರಂತೆ, ಸೇವಕರಂತೆ , ಇಲ್ಲವೇ ಉಪಾಸಕರಂತೆ ಕಲ್ಪಿಸಲಾಗಿದೆ[೨೪]. ಜೈನ ಮೂರ್ತಿಗಳಲ್ಲಿ ದಿಕ್ಪಾಲಕರು, ನವಗ್ರಹಗಳು ಹಾಗು ಇನ್ನು ಅನೇಕ ಶಕ್ತಿಗಳು ಮತ್ತು ದೇವತೆಗಳು ಬ್ರಾಹ್ಮಣ ಮೂರ್ತಿಗಳ ಜತೆ ಸಾಮ್ಯತೆಯನ್ನು ಹೊಂದಿವೆ.

[illegible]

[illegible]

[illegible]

ಶಾಸನ ಮತ್ತು ಸಾಹಿತ್ಯ ಆಧಾರದಿಂದ ಮರದ ಶಿಲ್ಪ ನಿರ್ಮಾಣವು ಕ್ರಿ.ಪೂ. ೩ನೇ ಶತಮಾನದಷ್ಟು ಹಿಂದೆ ಹೋಗುತ್ತದೆ. ಮರದ ಮೂರ್ತಿಗಳ ತಯಾರಿಕೆಯ ಬಗ್ಗೆ ಪ್ರಾಚೀನ ಮತ್ತು ಮಧ್ಯಕಾಲೀನ ಗ್ರಂಥಗಳಲ್ಲಿ ಸಾಕಷ್ಟು ಮಾಹಿತಿ ಇದೆ. ಭಾರತದಲ್ಲಿ ಲೋಹದ ಚಿಕ್ಕ ಚಿಕ್ಕ ಮೂರ್ತಿಗಳು ಬಹಳ ದೊರತಿವೆ. ಕೆಲವು ಪ್ರಾಚೀನ ಗ್ರಂಥಗಳಲ್ಲಿ 'ಮಧುಚೀಷ್ಠ' ವಿಧಾನದ ಬಗ್ಗೆ ಮಾಹಿತಿ ಇದೆ[೨೨].

ದಕ್ಷಿಣ ಭಾರತದಲ್ಲಿ ಶಾತವಾಹನರ ಕಲೆ ಅನೇಕ ಕಡೆ ವಿಜೃಂಭಿಸಿತು. ಗುಡಿಮಲ್ಲಂ ಶಿವಲಿಂಗ ಶಾತವಾಹನರ ಶೈಲಿಯ ಅತ್ಯುತ್ತಮ ಕೊಡುಗೆಯಾಗಿದೆ. ನಾಗಾರ್ಜುನಕೊಂಡ ಶಿಲ್ಪಗಳು ಅಮರಾವತಿಯ ಶೈಲಿಯಲ್ಲಿವೆ. ಬಾದಾಮಿ ಚಾಲುಕ್ಯರ ಶಿಲ್ಪಗಳು ಕರ್ನಾಟದಕ ಐಹೊಳೆ, ಬಾದಾಮಿ, ಮಹಾಕೂಟ, ಪಟ್ಟದಕಲ್ಲು ಮುಂತಾದ ಕಡೆಗಳಲ್ಲಿ ಕಂಡುಬರುತ್ತವೆ. ಐಹೊಳೆಯ ಮೇಗುತಿ ದೇವಾಲಯ, ಹುಚ್ಚಮಲ್ಲಿ ಗುಡಿ ಮತ್ತು ಲಾಡಖಾನಗುಡಿಗಳಲ್ಲಿರುವ ಶಿಲ್ಪಗಳು ಆರಂಭಿಕ ಹಂತದ ಅತ್ಯುತ್ತಮ ಶಿಲ್ಪಗಳಾಗಿವೆ. ನೆರೆಯ ರಾಜ್ಯವಾದ ಮಹಾರಾಷ್ಟ್ರದ ಎಲಿಫೆಂಟಾ, ಎಲ್ಲೋರಾದಲ್ಲಿ ಹಾಗು ಕರ್ನಾಟಕದ ಗದಗ, ರೋಣ, ನಿಡಗುಂದಿ ಮುಂತಾದ ಕಡೆಗಳಲ್ಲಿ ರಾಷ್ಟ್ರಕೂಟರ ಶೈಲಿಯ ಮೂರ್ತಿಗಳು ಇವೆ. ಕರ್ನಾಟದ ದಕ್ಷಿಣ ಭಾಗದಲ್ಲಿ ಗಂಗರ ಶಿಲ್ಪಗಳು ದೊರೆತಿವೆ. ಶ್ರವಣಬೆಳಗೊಳದ ಗೊಮ್ಮಟೇಶ್ವರ ಮೂರ್ತಿ ಮಹತ್ವದ್ದಾಗಿದೆ. ಹೊಯ್ಸಳರ ಮೂರ್ತಿಗಳು ಹೆಚ್ಚಾಗಿ ಅಲಂಕೃತಗೊಂಡಿದ್ದು, ನೋಡಲು ಸುಂದರವಾಗಿವೆ. ವಿಜಯನಗರ ಕಾಲದ ಮೂರ್ತಿಗಳು ವಿಶಿಷ್ಠವಾಗಿವೆ. ಈ ಎಲ್ಲಾ ಸಾಮ್ರಾಜ್ಯಗಳು ಮೂರ್ತಿ ಶಿಲ್ಪಕಲೆಗೆ ಕೊಟ್ಟ ಕಾಣಿಕೆ ಗಣನೀಯವಾದದ್ದು. ಭಾರತ ಮತ್ತು ಕರ್ನಾಟಕದ ಸಂದರ್ಭದಲ್ಲಿ ಮೂರ್ತಿಶಿಲ್ಪಕಲೆ ಬೆಳೆದು ಬಂದ ಬಗೆಯನ್ನು ಸಂಕ್ಷಿಪ್ತವಾಗಿ ಈವರೆಗೆ ಅವಲೋಕಿಸಲಾಗಿದೆ.

ರಾಜ ಮಹಾರಾಜರು, ರಾಣಿಯರು, ಸಾಮಂತರು, ವರ್ತಕರು, ಮೂರ್ತಿಶಿಲ್ಪಕ್ಕೆ ನೀಡಿದ ಅಪಾರ ಪ್ರೋತ್ಸಾಹದಿಂದಾಗಿ ಕರ್ನಾಟಕದಲ್ಲಿ ಮೂರ್ತಿ ಶಿಲ್ಪ ಕಲೆಯು ಅಪರಿಮಿತವಾಗಿ ಬೆಳೆದು ವಿಶಿಷ್ಟ ಸ್ಥಾನವನ್ನು ಪಡೆದಿದೆ. ಈ ಪ್ರೋತ್ಸಾಹವು ಅವರ ಸೌಂದರ್ಯ ಪ್ರಜ್ಞೆಯ ದ್ಯೋತಕವಾಗಿದೆ. ವಿವಿಧ ರಾಜವಂಶದವರು ತಮ್ಮದೇ ಆದ ವಿಶೇಷ ಶೈಲಿ ಮತ್ತು ಅಲಂಕಾರಿಕ ಲಕ್ಷಣಗಳಲ್ಲಿ ವಿಭಿನ್ನ ಮೂರ್ತಿಗಳನ್ನು ನಿರ್ಮಿಸಿ ತಮ್ಮ ವೈಶಿಷ್ಠತೆಯನ್ನು ಉಳಿಸಿಕೊಂಡಿರುವುದು ಭಾರತೀಯ ಮೂರ್ತಿಶಾಸ್ತ್ರದಲ್ಲಿ ಗಮನಾರ್ಹವಾಗಿದೆ.

ದಾವಣಗೆರೆ ಜಿಲ್ಲೆಯು ಪ್ರಾಚೀನ ಮತ್ತು ಮಧ್ಯಯುಗೀನ ಕಾಲದಲ್ಲಿ ಎಲ್ಲ ಧರ್ಮಗಳ ತವರೂರಾಗಿತ್ತು. ಈ ಭಾಗದಲ್ಲಿ ಅಂದು ಆಳ್ವಿಕೆಗೈದ ಅರಸರು ಸಕಲ ಧರ್ಮಗಳನ್ನು ಒಂದೇ ದೃಷ್ಟಿಯಿಂದ ನೋಡಿದ್ದರಿಂದಾಗಿ ವಿಭಿನ್ನ ಧರ್ಮೀಯರ ದೇವಾಲಯಗಳ ನಿರ್ಮಾಣ ಸಾಧ್ಯವಾಗಿದೆ. ಈ ದೇವಾಲಯಗಳ

[illegible]

[illegible]

[illegible]

[illegible]

ತತ್ಸಂಬಂಧಿ ಧರ್ಮೀಯ ಮೂರ್ತಿಗಳು ಪ್ರತಿಷ್ಠಾಪನೆಗೊಂಡಿದ್ದನ್ನು ನಾವು ಗಮನಿಸಬೇಕಾಗಿದೆ. ಈ ಹಿನ್ನಲೆಯಲ್ಲಿ ದಾವಣಗೆರೆ ಜಿಲ್ಲೆಯಲ್ಲಿ ಕ್ಷೇತ್ರ ಕಾರ್ಯ ಕೈಗೊಂಡಾಗ ಕಂಡುಬಂದ ವಿಭಿನ್ನ ಧರ್ಮದ ಪ್ರತಿಮಾ ವಿಧಾನವನ್ನು ಮುಂದಿನ ಅಧ್ಯಾಯದಲ್ಲಿ ನಿರೂಪಿಸಲಾಗಿದೆ. ಈ ಜಿಲ್ಲೆಯಲ್ಲಿ ದೊರೆತ ವಿವಿಧ ಮೂರ್ತಿಗಳನ್ನು ಹೀಗೆ ವಿಭಾಗಿಸಿಕೊಳ್ಳಲಾಗಿದೆ.

೧) ಶಿಲಾ ಮೂರ್ತಿಗಳು
೨) ಕಂಚಿನ ಮೂರ್ತಿಗಳು
೩) ಕಾಷ್ಠ ಮೂರ್ತಿಗಳು

ಪ್ರಸ್ತುತ ದಾವಣಗೆರೆ ಜಿಲ್ಲೆಯಲ್ಲಿ ಶಿಲಾಮೂರ್ತಿಗಳೇ ಪ್ರಧಾನವಾಗಿ ಕಂಡುಬರುತ್ತವೆ. ಅವುಗಳ ವಿವರಣೆ ಈ ಮುಂದಿನಂತಿದೆ.

೫.೧. ಶಿಲಾ ಮೂರ್ತಿಗಳು :

ಆರಂಭದಿಂದಲೂ ಮನುಷ್ಯ ಶಿಲೆಯೊಡನೆ ನಿಕಟ ಸಂಬಂಧ ಹೊಂದಿದ್ದು, ಬಹಳ ಹಿಂದಿನಿಂದಲೂ ಶಿಲೆಯಿಂದ ಮೂರ್ತಿಗಳ ನಿರ್ಮಾಣ ಕಾರ್ಯ ಕೈಗೊಳ್ಳುತ್ತಾ ಬಂದಿದ್ದಾನೆ. ಮತ್ಸ್ಯಪುರಾಣ, ಕಲ್ಲಿನ ಮೂರ್ತಿ ತಯಾರಿಕೆಯ ಬಗ್ಗೆ ನಿರ್ದೇಶಿಸಿದೆ. ಶಿಲೆಗಳಲ್ಲಿ ಪುರುಷ ಶಿಲೆ, ಸ್ತ್ರೀ ಶಿಲೆ, ನಪುಂಸಕ ಶಿಲೆಗಳಿದ್ದು, ಅವುಗಳನ್ನು ಕ್ರಮವಾಗಿ ಮುಖ್ಯ ಮೂರ್ತಿ, ಪೀಠ, ಪಿಂಡಿಕ ಅಥವಾ ಕೆಳಭಾಗದ ರಚನೆಗೆ ಬಳಸಬೇಕೆಂದು ತಿಳಿಸಲಾಗಿದೆ. ಈ ಶಿಲೆಗಳಲ್ಲಿ ಯುವ, ಮಧ್ಯ, ಬಾಲ ಹಾಗು ವೃದ್ಧವೆಂಬ ಬಗೆಗಳಿದ್ದು, ಮೊದಲಿನ ಎರಡು ಪ್ರಕಾರಗಳು ಮೂರ್ತಿ ರಚನೆಗೆ ಯೋಗ್ಯವಾದವುಗಳು. ಮೂರ್ತಿ ರಚನೆಯ ಅಂದಾಜು ಅಳತೆಗಿಂತಲೂ ಕಲ್ಲು ಸ್ವಲ್ಪ ದೊಡ್ಡದಿರಬೇಕಾಗುತ್ತದೆ ಎಂದು ಇದೇ ಗ್ರಂಥ ವಿವರಿಸಿದೆ.

ವಿಷ್ಣುಧರ್ಮಾತ್ತರ ಪುರಾಣ ಶಿಲಾಮೂರ್ತಿಗಳನ್ನು ತಯಾರಿಸುವ ಕುರಿತು ವಿವರಣೆ ನೀಡುತ್ತದೆ. ಇದರ ಹತ್ತೊಂಬತ್ತನೆಯ ಅಧ್ಯಾಯ ಶಿಲಾ ಪರೀಕ್ಷೆಗೆ ಮೀಸಲಾಗಿದೆ. ಇದರಲ್ಲಿ ಬಿಳಿ, ಕೆಂಪು, ಹಳದಿ ಮತ್ತು ಕಪ್ಪು ಕಲ್ಲುಗಳನ್ನು ಕ್ರಮವಾಗಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರು ಆರಾಧಿಸುವ ಮೂರ್ತಿ ರಚನೆಗೆ ಬಳಸಬೇಕೆಂದು ಹಾಗು ಕಲ್ಲುಗಳ ಸರಿಯಾದ ಉದ್ದ, ಅಗಲ ಮತ್ತು ದಪ್ಪವನ್ನು ಹೊಂದಿರಬೇಕೆಂದು ಅದು ಹೇಳುತ್ತದೆ[೨೬]. ಗೋಪಾಲಭಟ್ಟನ 'ಹರಿಭಕ್ತಿ ವಿಲಾಸ'ದ ಹದಿನೆಂಟನೇ ಅಧ್ಯಾಯದ ಕೊನೆಯ ಭಾಗವು ಇದೇ ವಿಷಯವನ್ನು ವಿವರಿಸುತ್ತದೆ.

ಪ್ರಸ್ತುತ ದಾವಣಗೆರೆ ಜಿಲ್ಲೆಯಲ್ಲಿ ಕಂಡು ಬರುವ ಶಿಲಾ ಮೂರ್ತಿಗಳನ್ನು ಅಧ್ಯಯನದ ಅನುಕೂಲಕ್ಕಾಗಿ ಆಯಾ ಧಾರ್ಮಿಕ ಪಂಥಗಳಿಗನುಗುಣವಾಗಿ ಈ ರೀತಿ ವಿಭಾಗಿಸಿಕೊಳ್ಳಲಾಗಿದೆ. ಮತ್ತು ಈ ಜಿಲ್ಲೆಯ ಸ್ಮಾರಕ ಶಿಲೆಗಳಾದ ವೀರಗಲ್ಲು, ಮಾಸ್ತಿಕಲ್ಲುಗಳ ಮೇಲಿನ ಮೂರ್ತಿಗಳ ಶಿಲ್ಪ ವೈಭವವು ಅಂದಿನ ಸಮಾಜಿಕ ಜೀವನವನ್ನು ಕಟ್ಟಿಕೊಡಲು ಸಹಾಯಕವಾಗಿವೆ. ಮೂರ್ತಿ ಶಿಲ್ಪದ ಕಾಲಾನುಕ್ರಮದ ಬೆಳವಣಿಗೆಯನ್ನು ಗುರುತಿಸಲು ಸಹಾಯಕವಾಗಿರುವುದರಿಂದ ಇವುಗಳನ್ನು ಶಿಲಾಮೂರ್ತಿ ಶಿಲ್ಪದಡಿಯಲ್ಲೇ ವಿಭಾಗಿಸಿಕೊಳ್ಳಲಾಗಿದೆ. ವಿಂಗಡಣೆ ಕ್ರಮ ಈ ರೀತಿ ಇದೆ. ಈ ಪ್ರದೇಶದಲ್ಲಿ ಕಾಣಬರುವ ಪ್ರತಿಮೂರ್ತಿಗಳನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡಲಾಗಿದೆ. ಅವುಗಳೆಂದರೆ;

೧) ಶೈವ ಪಂಥೀಯ ಮೂರ್ತಿಗಳು
೨) ವೈಷ್ಣವ ಪಂಥೀಯ ಮೂರ್ತಿಗಳು
೩) ಶಾಕ್ತ ಪಂಥೀಯ ಮೂರ್ತಿಗಳು
೪) ಜಿನ ಪಂಥೀಯ ಮೂರ್ತಿಗಳು
೫) ಇತರೆ ಪಂಥೀಯ ಮೂರ್ತಿಗಳು
೬) ಸ್ಮಾರಕ ಶಿಲೆಗಳ ಮೇಲಿನ ಮೂರ್ತಿಗಳು

೫.೧.೧) ಶೈವ ಪಂಥೀಯ ಮೂರ್ತಿಗಳು :-

ಭಾರತದಲ್ಲಿ ಪ್ರಚಲಿತದಲ್ಲಿರುವ ಆರಾಧನಾ ಪದ್ಧತಿಗಳಲ್ಲಿ ಶಿವನ ಆರಾಧನೆಯು ಪ್ರಮುಖವಾಗಿದೆ[೨]. ಹಿಂದೂ ಪರಂಪರೆಯ ಆರಾಧನಾ ಪದ್ಧತಿಯಲ್ಲಿ ಶಿವನ ಪ್ರತಿರೂಪಗಳಾದ ಲಿಂಗ, ನಂದಿಯನ್ನು ಹೆಚ್ಚಾಗಿ ಪೂಜಿಸಲಾಗುತ್ತದೆ. ಹಾಗು ಲಿಂಗೋದ್ಭವ ಮೂರ್ತಿ, ಕೇವಲ ಮೂರ್ತಿ, ಭಿಕ್ಷಾಟನಾ ಮೂರ್ತಿ, ಕಂಕಾಲಮೂರ್ತಿ, ಕ್ಷೇತ್ರಪಾಲ, ದಕ್ಷಿಣಾಮೂರ್ತಿ, ಗಜಸುರಸಂಹಾರಮೂರ್ತಿ, ಆಲಿಂಗನಮೂರ್ತಿ, ವೃಷಭಮೂರ್ತಿ, ಭೈರವ, ವೀರಭದ್ರ, ಗಣೇಶ, ಸ್ಕಂದ, ಅರ್ಧನಾರೀಶ್ವರ, ಉಮಾ ಮಹೇಶ್ವರ ಮೂರ್ತಿಗಳೆಲ್ಲವನ್ನು ಶೈವ ಪಂಥದ ಮೂರ್ತಿಗಳೆಂದು ಪರಿಗಣಿಸಲಾಗಿದೆ[೨೮].

ದಾವಣಗೆರೆ ಜಿಲ್ಲೆಯಲ್ಲಿ ದೊರೆತ ಶೈವ ಮೂರ್ತಿಗಳಿಗೆ ಸಂಬಂಧಿಸಿದಂತೆ, ಶಿವಲಿಂಗದ ಹೊರತಾಗಿರುವ ಸ್ಥಾನೀಕ, ಆಸೀನ ಮೂರ್ತಿಗಳು ಇಲ್ಲಿ ಪ್ರಧಾನವಾಗಿವೆ. ಶಿವನ ಪ್ರತಿರೂಪವೆಂದು ಭಾವಿಸಲಾಗಿರುವ ಲಿಂಗ ಹಾಗು ಆತನ ವಾಹನವಾದ ನಂದಿ (ವೃಷಭ)ಗಳು ಪ್ರತಿಯೊಂದು ಶೈವ ದೇವಾಲಯದಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. ಹಾಗೇ ಉಮಾಮಹೇಶ್ವರ, ಶೈವದ್ವಾರಪಾಲ,ಭೈರವ, ವೀರಭದ್ರ, ಗಣೇಶ, ಸ್ಕಂದ ಮೂರ್ತಿಗಳು ಈ ಜಿಲ್ಲೆಯ ದೇವಾಲಯಗಳಲ್ಲಿ ಕಂಡುಬರುತ್ತಿದ್ದು, ಅವುಗಳಲ್ಲಿ ಪ್ರಮುಖ ಮೂರ್ತಿಗಳನ್ನು ಪ್ರತ್ಯೇಕವಾಗಿ ಈ ಕೆಳಗಿನ ರೀತಿಯಲ್ಲಿ ಅಧ್ಯಯನ ಮಾಡಿ ವಿವರಿಸಲಾಗಿದೆ.

ಶಿವಲಿಂಗಗಳು :- ಶಿವನನ್ನು ಲಿಂಗ ರೂಪದಲ್ಲಿ ಪೂಜಿಸುವುದು. ಸರ್ವೇಸಾಮಾನ್ಯ. ದಾವಣಗೆರೆ ಜಿಲ್ಲೆಯಲ್ಲಿಯೂ ಕೂಡ ಹೆಚ್ಚಿನ ಮಟ್ಟಿಗೆ ಶಿವನನ್ನು ಲಿಂಗ ರೂಪದಲ್ಲಿ ಪೂಜಿಸಲಾಗುತ್ತಿದೆ. ಉಳಿದ ಜಿಲ್ಲೆಗಳಂತೆ ಶಿವಲಿಂಗದಲ್ಲಿ ಚಲ ಲಿಂಗ ಮತ್ತು ಅಚಲ ಲಿಂಗವೆಂಬ ಎರಡು ವಿಧಗಳಿದ್ದು, ಸುಪ್ರಭೇದಾಗಮದ ಪ್ರಕಾರ ಅಚಲ ಲಿಂಗದಲ್ಲಿ ಒಂಭತ್ತು ನಮೂನೆಯ ಲಿಂಗಗಳಿವೆ. ಅವುಗಳೆಂದರೆ, ಸ್ವಯಾಂಭವ, ಪುರವ, ದೈವತ, ಗಾಣಪತ್ಯ, ಅಸುರ, ಸುರ, ರಾಕ್ಷಸ, ಮಾನುಸ , ಬಾಣ ಲಿಂಗಗಳಾಗಿವೆ [೨೯]. ಅಚಲ ಲಿಂಗದಲ್ಲಿ ಮೂರು ಭಾಗಗಳಿದ್ದು, ಕೆಳಗಿನ ಭಾಗದಲ್ಲಿ ಬ್ರಹ್ಮನನ್ನು ಪ್ರತಿನಿಧಿಸುವ ಅಷ್ಟಕೋನಾಕಾರದ ವಿಷ್ಣು ಭಾಗವಿರುತ್ತದೆ. ಇವರೆಡು ಭಾಗಗಳೂ ಸಹ ಪಾಣಿಪೀಠದಲ್ಲಿ ಸೇರಿರುತ್ತವೆ. ರುದ್ರಭಾಗವು ಕೊಳವೆ ಆಕೃತಿಯಲ್ಲಿದ್ದು , ಪಾಣಿ ಪೀಠದ ಮೇಲಿನ ಈ ಭಾಗವು ಪೂಜೆಗೊಳಪಡುತ್ತದೆ [೩೦].

ಶಿವಲಿಂಗಗಳಲ್ಲಿ ಮೊಟ್ಟೆಯಾಕಾರದ (ಅಂಡಾಕಾರ), ಅರ್ಧಚಂದ್ರಾಕೃತಿಯ, ವೃತ್ತಾಕಾರದ ಹಾಗೂ ಬಾಣಾಕಾರದ ಲಿಂಗಗಳು ಈ ಜಿಲ್ಲೆಯಲ್ಲಿ ಹೆಚ್ಚಾಗಿ ಕಂಡುಬಂದಿವೆ. ಹಾಗು ಮುಖ ರೂಪದ ಲಿಂಗಗಳೂ ಅಲ್ಲಲ್ಲಿ ಕಂಡುಬಂದಿವೆ. ಪೀಠದಲ್ಲಿ ವೃತ್ತಾಕಾರದ, ಚೌಕಾಕಾರದ, ಆಯತಾಕಾರದ ಪೀಠಗಳೂ ಈ ಜಿಲ್ಲೆಯ ವಿವಿಧ ಭಾಗಗಳಲ್ಲಿ ಕಂಡುಬರುತ್ತವೆ. ಪ್ರಸ್ತುತ ದಾವಣಗೆರೆ ಜಿಲ್ಲೆಗೆ ಸಂಬಂಧಿಸಿದಂತೆ ಶಿವಲಿಂಗಗಳಿಗೆ ಮತ್ತು ಅವುಗಳ ಪೀಠಭಾಗಗಳಿಗೆ ಬಳಪದ ಇಲ್ಲವೇ ಕಪ್ಪು ಶಿಲೆಯನ್ನು ಹೆಚ್ಚಾಗಿ ಉಪಯೋಗಿಸಿದ್ದಾರೆ. ಆದರೆ ಅಸಗೋಡಿನ ಶಂಭುಲಿಂಗೇಶ್ವರ ದೇವಾಲಯದ ಲಿಂಗದಲ್ಲಿನ ರುದ್ರ ಭಾಗವು ಗ್ರಾನೈಟ್ ಶಿಲೆಯದಾಗಿದೆ. ರುದ್ರಭಾಗವನ್ನು ಸ್ವಚ್ಛಗೊಳಿಸಿದ ನೀರು ಹೊರ ಹೋಗಲು ' ನಾಲ 'ವೊಂದಿರುತ್ತದೆ. ಇದು ಎಡಭಾಗಕ್ಕಿರುವುದು ಸಾಮಾನ್ಯ. ಆದರೆ ಅಸಗೋಡಿನ ಶಂಭುಲಿಂಗೇಶ್ವರ ,ಅವರಗೊಳ್ಳದ ಈಶ್ವರ ದೇವಾಲಯದ ಲಿಂಗದ 'ನಾಲ'ವು (ಜಲಹರಿ) ಬಲಭಾಗಕ್ಕಿದ್ದು, ಇವುಗಳು ಬಲಹರಿ ಲಿಂಗಗಳೆಂದು ಕರೆಯಲ್ಪಡುವುದು ವಿಶೇಷ.

ಬಳ್ಳೇಶ್ವರ , ಬೆಳಗುತ್ತಿ, ಕಮ್ಮಾರ ಗಟ್ಟೆ, ಗೋಪಗೊಂಡನಹಳ್ಳಿ, ಮಸಣಕೆರೆ, ಚನ್ನಗಿರಿ, ಚಿಗಟೇರಿ, ಬಾಗಳಿ, ಅಸಗೋಡು, ಕಲ್ಲೇ ದೇವರಪುರ, ಜಿಗಳಿ, ದೇವರ ಬೆಳಕೆರೆ ,ನಂದಿಗುಡಿ, ಆನೆಕೊಂಡಗಳಲ್ಲಿ ವಿಭಿನ್ನ ಕಾಲಘಟ್ಟದಲ್ಲಿ ನಿರ್ಮಿತವಾದ ವೈವಿಧ್ಯಮಯ ಶಿವ ಲಿಂಗಗಳು ಕಂಡುಬರುತ್ತವೆ. ಬಾಗಳಿಯ ಚನ್ನಬಸವ, ಕೊಲಹಳ್ಳಿಯ ಬಸವೇಶ್ವರ ಹಾಗು ಮಸಣಕೆರೆಯ ಈಶ್ವರ ದೇವಾಲಯದಲ್ಲಿ ಬಾಣಾಕಾರದ ಲಿಂಗಗಳು ಕಂಡುಬರುತ್ತವೆ. ಇತರೆಡೆ ವೃತ್ತಾಕಾರದ ಇಲ್ಲವೇ ಮೊಟ್ಟೆಯಾಕಾರದ ಲಿಂಗಗಳುಹೆಚ್ಚಾಗಿ ಕಾಣಬರುತ್ತವೆ. ಇಲ್ಲಿನ ಬಹಳಷ್ಟು ಲಿಂಗಗಳಲ್ಲಿ ಮಧ್ಯನಾಡಿಯು ಎರಡು ಸಮಾನಾಂತರ ಊರ್ಧ್ವ ರೇಖೆಗಳನ್ನು ಹೊಂದಿವೆ. ಇವುಗಳ ಪೀಠಭಾಗವು ದೇವಾಲಯದ ಅಧಿಷ್ಠಾನಗಳಂತಿದ್ದು, ಅಧೋಪದ್ಮ, ತ್ರಿಪಟ್ಟಿ ಕುಮುದ, ಊರ್ಧ್ವ ಪದ್ಮದ ಭಾಗಗಳನ್ನು ಹೊಂದಿರುತ್ತದೆ. ಈ ಶಿವ ಲಿಂಗಗಳಿಗೆ ಬ್ರಹ್ಮ ವಿಷ್ಣು ಮತ್ತು ರುದ್ರ ಭಾಗಗಳಿದ್ದು, ಮೊದಲ ಎರಡು ಭಾಗಗಳು ಪಾಣಿಪೀಠದೊಳಗೆ ಇರುವುದರಿಂದ ಅವು ಗೋಚರಿಸುವುದಿಲ್ಲ. ಆದರೆ

ರುದ್ರಭಾಗ ಮಾತ್ರ ಗೋಚರಿಸುತ್ತದೆ. ಉದಾಹರಣೆಗೆ ಬಾಗಳಿಯ ಇಷ್ಟಲಿಂಗೇಶ್ವರ ದೇವಾಲಯದಲ್ಲಿರುವ ಲಿಂಗವು ಮೇಲೆ ವಿವರಿಸಿದ ಎಲ್ಲಾ ಲಕ್ಷಣಗಳನ್ನು ಹೊಂದಿದೆ. ಹಾಗು ಇದರ ಜಲಹರಿಯನ್ನು ಯಾಳಿಯೊಂದು ತನ್ನ ತಲೆಯಿಂದ ಹೊತ್ತು ತನ್ನ ಮುಂದಿನ ಕಾಲನ್ನು ಮುಂದೆ ಚಾಚಿ ಹಿಂದಿನ ಕಾಲನ್ನು ಪೀಠದ ಮೇಲೆ ಇಟ್ಟು ನಿಂತಿರುವುದು . ಈ ಭಾಗದ ವಿಶೇಷತೆಯಾಗಿದೆ . ಪ್ರಾಚೀನ ಕಾಲದ ಕೆಲವು ಲಿಂಗಗಳಿಗೆ ಈಚೆಗೆ ತ್ರಾಮದ ತಗಡಿನಿಂದ ಶಿವನ ಮುಖರೂಪವನ್ನು ಮಾಡಲಾಗಿದ್ದು, ಅವುಗಳು ಬಾಗಳಿ, ಮಸಣಕೆರೆ, ಗೋಪಗೊಂಡನಹಳ್ಳಿಗಳಲ್ಲಿವೆ. ಅವುಗಳನ್ನು ಮುಖಲಿಂಗಳೆನ್ನಬಹುದು. ಕೊಲಂಬಿ , ಸೋಗಿಲು, ನಂದಿಗುಡಿಯ ಲಿಂಗಗಳ ರುದ್ರಭಾಗದಲ್ಲಿ ಮುಖರೂಪವನ್ನು ಕೆತ್ತಲಾಗಿದೆ.

ನಂದಿ ಮೂರ್ತಿಗಳು :

ವೃಷಭ ಅಥವಾ ನಂದಿ ಶಿವನ ವಾಹನವಾಗಿದ್ದು, ಬಹುತೇಕ ಶೈವದೇಗುಲಗಳಲ್ಲಿ ಲಿಂಗಕ್ಕೆ ಎದುರಾಗಿ ಅಂತರಾಳ ಇಲ್ಲವೇ ನವರಂಗದಲ್ಲಿ ಈ ಮೂರ್ತಿಗಳಿರುತ್ತವೆ. ಕೆಲವು ವೇಳೆ ಪ್ರತ್ಯೇಕ ನಂದಿಗುಡಿ (ಗರ್ಭಗುಡಿ ಎದುರಿಗೆ)ಯನ್ನು ಕಟ್ಟಿರುವುದನ್ನು ಕಾಣಬಹುದು. ಉದಾ: ಆನೆಕೊಂಡ, ನಂದಿಗುಡಿ, ನಂದಿತಾವರೆಗಳಲ್ಲಿ ಈ ರೀತಿಯ ಪ್ರತ್ಯೇಕ ನಂದಿ ದೇವಾಲಯಗಳು ಇವೆ. ಲಿಂಗಕ್ಕೆ ಮುಖ ಮಾಡಿರುವ ಇಲ್ಲಿನ ನಂದಿ ಮೂರ್ತಿಗಳನ್ನು ಎರಡು ರೀತಿ ವಿಭಾಗಿಸಿಕೊಂಡು ಅಧ್ಯಯನ ಮಾಡಬಹುದು.

ಅ) ಅಲಂಕಾರ ರಹಿತ ನಂದಿಗಳು ಆ) ಅಲಂಕಾರ ಸಹಿತ ನಂದಿಗಳು

ಅ) <u>ಅಲಂಕಾರ ರಹಿತ ನಂದಿಗಳು :-</u> ಜಿಗಳಿ, ವಾಸನ, ಆಸಗೋಡು, ಕಲ್ಲೇದೇವರಪುರ, (ಕಲ್ಲೇಶ್ವರ ದೇವಾಲಯದ ಹೊರಭಾಗದಲ್ಲಿನ ನಂದಿ) ಮರವಂಜಿ, ಮಸಣಕೆರೆಗಳಲ್ಲಿ ಈ ರೀತಿಯ ನಂದಿಗಳು ಕಂಡುಬರುತ್ತವೆ. ಇವುಗಳು ಸಾಧಾರಣ ನಂದಿಗಳಾಗಿದ್ದು, ತಲೆಯನ್ನು ತಗ್ಗಿಸಿ ಲಿಂಗಕ್ಕೆ ಎದುರಾಗಿದ್ದು, ಮುಂದಿನ ಬಲಗಾಲನ್ನು ಮಡಚಿ ಎಡಗಾಲನ್ನು ಮುಂದೆಚಾಚಿ ಒಂದು ಕಡೆವಾಲಿ ಮಲಗಿದ ರೀತಿ ಇರುತ್ತವೆ. ಪ್ರಾಚೀನಕಾಲದ ಈ ನಂದಿಗಳ ಭುಜವು ಅಷ್ಟೇನು ಎತ್ತರವಾಗಿರುವುದಿಲ್ಲ. ಹಾಗು ಕೊರಳಲ್ಲಿ ಸಾಧಾರಣ ಗಂಟೆ ಸರವೊಂದಿದ್ದು, ಬಾಲವು ಬಾಗಿದ ರೀತಿ ಇರುತ್ತದೆ.

ಆ) <u>ಅಲಂಕಾರ ಸಹಿತ ನಂದಿ ಮೂರ್ತಿಗಳು :-</u> ಕರ್ನಾಟಕದ ಕೆಲವು ಶೈವ ದೇವಾಲಯಗಳಲ್ಲಿ ಅಲಂಕಾರಿಕ ನಂದಿಗಳು ಇರುವುದು ಸರ್ವೇ ಸಾಮಾನ್ಯ. ದಾವಣಗೆರೆ ಜಿಲ್ಲೆಗೆ ಸಂಬಂಧಿಸಿದಂತೆ ಬಳ್ಳೇಶ್ವರ, ಕಮ್ಮಾರಗಟ್ಟೆ,ಗೋಪಗೊಂಡನಹಳ್ಳಿ, ಆನೆಕೊಂಡ, ಕಾಲ್ಕೆರೆ, ಹಿರೇಕೂಗಲೂರು, ಗುಡಿಹಳ್ಳಿ,ಬಾಗಳಿ, ಮುಷ್ಟೂರು, ಕಲ್ಲೇ ದೇವರಪುರ (ತ್ರಿಕೂಟಲಿಂಗೇಶ್ವರ ದೇವಾಲಯದ ನಂದಿ) , ಆಸಗೋಡು, ನಂದಿ ತಾವರೆ, ವಾಸನ, ಹರಿಹರ, ಜಿಗಳಿ, ದೇವರಬೆಳಕೆರೆ ಮೊದಲಾದೆಡೆ ಮಧ್ಯಯುಗಕ್ಕೆ ಸೇರಿದ ನಂದಿಮೂರ್ತಿಗಳು ಈ ಜಿಲ್ಲೆಯಲ್ಲಿ ಕಾಣಬರುತ್ತವೆ. ಆನೆಕೊಂಡ, ನಂದಿಗುಡಿ, ನಂದಿತಾವರೆಯ ನಂದಿಗಳು ಎತ್ತರದ ದೃಷ್ಟಿಯಿಂದಲೂ

ಸೌಂದರ್ಯ ದೃಷ್ಟಿಯಿಂದಲೂ ಆಕರ್ಷಣೀಯವಾಗಿವೆ[೩೧]. ನಂದಿಗುಡಿಯ ನಂದಿ ಸುಮಾರು ಅಡಿ ೧೮ ಇಂಚು, ಆನೆಕೊಂಡದ ನಂದಿ ೩ ಅಡಿ ೧೮ ಇಂಚು, ನಂದಿತಾವರೆಯದು ೪ ಅಡಿ ಎತ್ತರವಾಗಿವೆ. ಈ ಮೂರು ನಂದಿಗಳ ಉದ್ದವು ಸುಮಾರು ಒಂದೇ ಆಗಿದ್ದು, ವಿನೀತ ಭಾವದಿಂದ ತಲೆ ತಗ್ಗಿಸಿ ಲಿಂಗಕ್ಕೆ ಎದುರಾಗಿ ಬಲಗಾಲನ್ನು ಮುಂದೆ ಚಾಚಿ, ಎಡಗಾಲ ಮೇಲೆ ಒರಗಿ ಮಲಗಿಕೊಂಡಹಾಗೆ ಕಾಣಬರುತ್ತವೆ. ಈ ಮೂರ್ತಿಗಳು ಕೊರಳಲ್ಲಿ ಗಂಟಿಸರ, ಹಣೆಪಟ್ಟಿ, ಬೆನ್ನ ಮೇಲೆ ಗಂಟೆ ಸರ ಹಾಗು ಮೈಯನ್ನು ಅಲಂಕಾರಿಕ ಬಟ್ಟೆಯಿಂದ ಮುಚ್ಚಿ ಅಲಂಕರಿಸಿರುವುದು ವಿಶೇಷತೆ. ಕೆಲವೊಮ್ಮೆ ಬಾಲವನ್ನು ಕೆಳಕ್ಕೆ ಬಿಡದ ಹಾಗೆ ಡುಬ್ಬದ ಬಳಿ ಗಂಟು ಹಾಕಿ ಕಟ್ಟಿರುವುದನ್ನು ಕಾಣಬಹುದು.

ಈ ನಂದಿಗಳಿಗಾಗಿ ಲಿಂಗದ ಎದುರಿನಲ್ಲಿ ಪ್ರತ್ಯೇಕವಾಗಿ ನಂದಿ ಮಂಟಪವಿರುವುದನ್ನು ನಂದಿ ತಾವರೆ, ಆನೆಕೊಂಡ, ನೀಲಗುಂದಗಳಲ್ಲಿ ಕಾಣಬಹುದು. ಸಾಮಾನ್ಯವಾಗಿ ದೇವಾಲಯದ ಅಂತರಾಳದಲ್ಲಿ ಇಲ್ಲವೇ ದೇವಾಲಯದ ಆವರಣದೊಳಗೆ ನಂದಿಶಿಲ್ಪಗಳು ಹೆಚ್ಚಾಗಿ ಕಂಡುಬರುತ್ತವೆ.

ಉಮಾಮಹೇಶ್ವರ ಮೂರ್ತಿಗಳು :- ವಿಷ್ಣು ಧರ್ಮೋತ್ತರ ಮತ್ತು ರೂಪ ಮಂಡನ ಗ್ರಂಥಗಳು ಈ ಮೂರ್ತಿಯ ವಿವರಣೆ ನೀಡುತ್ತವೆ. ಉಮೆ ಮತ್ತು ಮಹೇಶ್ವರ (ಶಿವ) ಒಟ್ಟಾಗಿಯೇ ಇರುವ ಈ ಮೂರ್ತಿಯಲ್ಲಿ ಉಮೆ ಶಿವನ ಎಡತೊಡೆಯ ಮೇಲೆ ಕುಳಿತಿರುತ್ತಾಳೆ.[೩೨] ಇಂಥ ಮೂರ್ತಿಗಳು ಅಲ್ಪ ಪ್ರಮಾಣದಲ್ಲಿ ಈ ಜಿಲ್ಲೆಯೊಳಗಡೆ ಕಾಣಬರುತ್ತವೆ.

ಮೂಲತಃ ಬಾಗಳಿಯ ಕಲ್ಲೇಶ್ವರ ದೇವಾಲಯದಲ್ಲಿದ್ದ ಉಮಾ ಮಹೇಶ್ವರ ಮೂರ್ತಿಯು ಅಲ್ಲಿನ ಕೇಂದ್ರ ಸರ್ಕಾರಿ ವಸ್ತು ಸಂಗ್ರಹಾಲಯದಲ್ಲಿದೆ. ಈ ರೀತಿಯ ಮೂರ್ತಿಗಳು ಈ ಭಾಗದ ಕೆಲವು ದೇವಾಲಯಗಳ ಭಿತ್ತಿಗಳಲ್ಲಿ ಕಂಡು ಬರುತ್ತವೆ.

೧. ಊರು : ಬಾಗಳಿ
೨. ತಾಲೂಕು : ಹರಪನಹಳ್ಳಿ
೩. ಹೆಸರು : ಉಮಾ ಮಹೇಶ್ವರಿ
೪. ಸ್ಥಳ : ಈಗ ಊರಿನ ವಸ್ತು ಸಂಗ್ರಹಾಲಯದಲ್ಲಿದೆ.
(ಮೊದಲುಬಾಗಳಿ ಕಲ್ಲೇಶ್ವರ ದೇವಾಲಯದಲ್ಲಿತ್ತು)
೫. ಕಾಲ : ಕ್ರಿ.ಶ.೧೧ ನೇ ಶತಮಾನ
೬. ಬಳಸಿದ ಶಿಲೆ : ಕಪ್ಪು ಹಸಿರು ಶಿಲೆ

ಶಿವನ ಎಡ ತೊಡೆಯ ಮೇಲೆ ಕುಳಿತ ಉಮೆಯು ದಾಂಪತ್ಯಾಸನದಲ್ಲಿ ಕುಳಿತಿದ್ದು, ದುಂಡಾಕಾರವಾಗಿ ಅಲಂಕರಿಸಿದ ತಲೆಗೂದಲು, ಅದರ ಹಿಂಭಾಗದಲ್ಲಿ ಕಲಾತ್ಮಕ ಶಿರಶ್ಚಕ್ರ ಕಟ್ಟಿರುವಂತಿದೆ. ಕಿವಿಯಲ್ಲಿ ಪತ್ರ ಕುಂಡಲ ಕೊರಳಲ್ಲಿ ಕಂಠಾಭರಣ, ಕೊರಳಹಾರ, ಭುಜಕೀರ್ತಿ, ಕೇಯೂರ, ಕೈಗಡಗ, ಎಡಗೈಯಲ್ಲಿ ಫಲ, ಬಲಗೈನಿಂದ ಶಿವನ ಬೆನ್ನಿನ ಹಿಂಭಾಗವನ್ನು ಬಳಸಿಹಿಡಿದಿದ್ದಾಳೆ. ಮೊಣಕಾಲಿನಿಂದ ಕೆಳಗೆ ಇಳಿಬಿದ್ದಿರುವ ಮಣಿಸರದ ಹಾರ, ಕಾಲಿನಲ್ಲಿ ಕಡಗ, ಪಾದಸರಗಳಿವೆ. ಕಾಲಕೆಳಭಾಗದಲ್ಲಿ ಸಿಂಹವಿದೆ.

ಕಿರೀಟ ಮುಕುಟಧಾರಿಯಾದ ಮಹೇಶ್ವರ (ಶಿವ) ಚತುರ್ಭುಜಧಾರಿಯಾಗಿದ್ದು ದಾಂಪತ್ಯಾಸನದಲ್ಲಿ ಕುಳಿತಿದ್ದಾನೆ. ಕಿರೀಟದ ಹಿಂಭಾಗಕ್ಕೆ ಶಿರಶ್ಚಕ್ರವಿದ್ದು, ಮಂದಹಾಸ ಬೀರುತ್ತಿರುವ ಮುಖ, ಕಿವಿಯಲ್ಲಿ ಸರ್ಪಕುಂಡಲ, ಕೊರಳಲ್ಲಿ ಅನೇಕ ಬಗೆಯ ಹಾರಗಳು, ಭುಜಕೀರ್ತಿ, ಕೇಯೂರ , ಕೈಕಡಗ, ಯಜ್ಞೋಪವೀತ ಉದರಬಂಧಗಳಿವೆ. ಮೇಲಿನ ಬಲಗೈನಲ್ಲಿ ತ್ರಿಶೂಲವಿದ್ದು, ಎಡಗೈ ಮೇಲ್ಭಾಗ ತ್ರುಟಿತವಾಗಿರುವುದರಿಂದ ಆ ಕೈಯಲ್ಲಿ ಹಿಡಿದ ಆಯುಧ ಗೋಚರಿಸುತ್ತಿಲ್ಲ. ಕೆಳಗಿನ ಬಲಗೈಯ ವರದ ಮುದ್ರೆಯಲ್ಲಿದ್ದು, ಕೆಳ ಎಡಗೈಯು ಉಮೆಯ ಭುಜವನ್ನು ಆಲಂಗಿಸಿದಂತಿದೆ. ಮಣಿಗಳ ಅಲಂಕಾರಿಕ ಕಟಿಬಂಧವಿದ್ದು, ಒಂದು ಭಾಗವು ಕಾಲ ಮಧ್ಯದಲ್ಲಿ ಇಳಿ ಬಿದ್ದಿದೆ. ಕಾಲಿನಲ್ಲಿ ಕಡಗ, ಪಾದಸರ ಹಾಗು ಕಾಲಿನ ಬೆರಳುಗಳಲ್ಲಿ ಉಂಗುರಗಳಿವೆ. ವೃತ್ತಾಕಾರದಲ್ಲಿರುವ ಮುಖ, ನೀಳವಾದ ಮೂಗು, ಎದ್ದು ಕಾಣುವ ಹುಬ್ಬು, ಉಬ್ಬಿದ ಗಲ್ಲ ಹಾಗು ತುಟಿಗಳು, ಸೌಮ್ಯ ಸ್ವಭಾವವನ್ನು ಪ್ರತಿಬಿಂಬಿಸುವ ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಕಲ್ಯಾಣಿ ಚಾಲುಕ್ಯರ ಕಾಲದ್ದು ಎಂದು ಹೇಳಬಹುದು. ಇದೇ ಲಕ್ಷಣಗಳು ನಂದೀತಾವರೆಯ ಉಮಾಮಹೇಶ್ವರ ಮೂರ್ತಿಯಲ್ಲೂ ಕಂಡುಬರುತ್ತವೆ.

ವೀರಭದ್ರ :- ಶೈವ ದೇವಾಲಯಗಳಲ್ಲಿ ಇಲ್ಲವೇ, ವೀರಭದ್ರನಿಗಾಗಿ ಪ್ರತ್ಯೇಕ ದೇವಾಲಯಗಳನ್ನು ನಿರ್ಮಿಸಿರುವುದನ್ನು ಇಲ್ಲಿ ಕಾಣಬಹುದು. ಕೂರ್ಮ ಪುರಾಣ, ವೀರಭದ್ರ ಪುರಾಣ ಮತ್ತು ಭಾಗವತ ಪುರಾಣ. ವೀರಭದ್ರ ಮೂರ್ತಿಯ ಉಗಮ ಮತ್ತು ಹಿನ್ನಲೆಯನ್ನು ಉಲ್ಲೇಖಿಸಿವೆ. ಶ್ರೀ ತತ್ವನಿಧಿ, ವೀರಭದ್ರನ ಪ್ರತಿಮಾ ಲಕ್ಷಣಗಳನ್ನು ವಿವರಿಸುತ್ತವೆ[೩೩]. ಶಿಲ್ಪರತ್ನ, ಶಿಲ್ಪ ಸಂಗ್ರಹ ಗ್ರಂಥಗಳು ವೀರಭದ್ರಮೂರ್ತಿಯ ವಿವಿಧ ರೂಪಗಳನ್ನು ತಿಳಿಸುತ್ತವೆ.[೩೪] ಈ ಮೂರ್ತಿಗಳು ದಾವಣಗೆರೆ ಜಿಲ್ಲೆಯ ಹಿರೇಕೂಗಲೂರು, ಚನ್ನಗಿರಿ, ಮಸಣಕೆರೆ, ಹಿರೇಕಲ್ಮಠ, ಬೆಣ್ಣೆಹಳ್ಳಿ, ಆಸಗೋಡು, ಕೂಣಚಗಲ್, ಕೂಡದಗುಡ್ಡ ಮೊದಲಾದ ಕಡೆ ವೀರಭದ್ರ ಮೂರ್ತಿಗಳೂ ದೊರೆತಿವೆ. ಇಲ್ಲಿನ ನಾಲ್ಕು ಕೈಗಳುಳ್ಳ ವೀರಭದ್ರ ಮೂರ್ತಿಗಳಲ್ಲಿ ಮೇಲಿನ ಕೈಗಳಲ್ಲಿ ಹಾವು ,ಖಟ್ವಾಂಗ, ಕೆಳಗಿನ ಕೈಗಳಲ್ಲಿ ಖಡ್ಗ, ಖೇಟಕಗಳನ್ನು ಹಿಡಿದು ಸ್ಥಾನಿಕ ಭಂಗಿಯಲ್ಲಿರುವ ಮೂರ್ತಿಗಳಿವೆ.

ಪ್ರಸ್ತುತ ಈ ಪ್ರದೇಶದಲ್ಲಿ ದೊರೆತ ವೀರಭದ್ರ ಮೂರ್ತಿಗಳನ್ನು ಪ್ರತ್ಯೇಕವಾಗಿ ಹೀಗೆ ವಿವರಿಸಬಹುದು:

೧. ಊರು : ಬೆಣ್ಣೆಹಳ್ಳಿ

೨. ತಾಲೂಕು : ಹರಪನಹಳ್ಳಿ

೩. ಹೆಸರು : ವೀರಭದ್ರ

೪. ಸ್ಥಳ : ಗ್ರಾಮದ ಪಂಪಾಪತಿ ದೇವಾಲಯದ ನವರಂಗದಲ್ಲಿನ ಕೋಷ್ಠಗುಡಿಯಲ್ಲಿದೆ.

೫. ಕಾಲ : ಕ್ರಿ.ಶ. ೧೦ ನೇ ಶತಮಾನ

೬. ಬಳಸಿದ ಶಿಲೆ : ಕಪ್ಪು ಶಿಲೆ (ಡೆಕ್ಕನ್‌ಟ್ರಾಪ್)

ಪೀಠದ ಮೇಲೆ ಸ್ಥಾನಿಕವಾಗಿರುವ ಈ ಮೂರ್ತಿಯು ಕಿರೀಟಧಾರಿಯಾಗಿದ್ದು, ಚರ್ತುಭುಜಧಾರಿಯಾಗಿದೆ. ಕಂಠಹಾರ, ವೃತ್ತಾಕಾರದ ಕಿವಿಯೋಲೆ, ಯಜ್ಞೋಪವೀತ, ಪಾದದವರೆಗೆ ಇಳಿಬಿದ್ದ ವೈಜಯಂತಿಹಾರ,ಕಟಿಬಂಧವನ್ನು ಈ ಮೂರ್ತಿ ಧರಿಸಿದ್ದು; ತ್ರಿಶೂಲ, ಬಿಲ್ಲು, ಖಡ್ಗ ಮತ್ತು ಖೇಟಕವನ್ನು ಕ್ರಮವಾಗಿ ಮೇಲಿನ ಬಲ ಮತ್ತು ಕೆಳಗಿನ ಎಡಗೈಗಳಲ್ಲಿ ಹಿಡಿದಿದೆ. ಕೈ ಮತ್ತು ಕಾಲ್ಕಡಗದಿಂದ ಅಲಂಕೃತವಾದ ಈ ಮೂರ್ತಿಯ ಹಿಂಭಾಗದಲ್ಲಿ ಸರ್ಪತೋರಣಯುಕ್ತ ಪ್ರಭಾವಳಿ ಇದೆ. ಮುಖದಲ್ಲಿ ರೌದ್ರವತಾರವಿರುವ ಈ ಮೂರ್ತಿಯ ಲಕ್ಷಣಗಳು ಕಲ್ಯಾಣಿ ಚಾಲುಕ್ಯರ ಕಾಲದ ಮೂರ್ತಿ ಲಕ್ಷಣಗಳಿಗೆ ಹೋಲಿಕೆಯಾಗುತ್ತವೆ. ಆದುದರಿಂದ ಇದು ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಸೇರಿದ್ದೆಂದು ಹೇಳಬಹುದು.

೧. ಊರು : ಅವರಗೊಳ್ಳ

೨. ತಾಲೂಕು : ವೀರಭದ್ರ

೩. ಹೆಸರು : ದಾವಣಗೆರೆ

೪. ಸ್ಥಳ : ಗ್ರಾಮದ ವೀರಭದ್ರ ದೇವಾಲಯದಲ್ಲಿದೆ.

೫. ಕಾಲ : ಕ್ರಿ.ಶ.೧೦ ನೇ ಶತಮಾನ

೬. ಬಳಸಿದ ಶಿಲೆ : ಕಪ್ಪು (ಡೈಕ್)

ಪೀಠದ ಮೇಲೆ ಸ್ಥಾನಿಕವಾಗಿರುವ ಈ ಮೂರ್ತಿಯು ಕಿರೀಟಧಾರಿಯಾಗಿದ್ದು, ಚರ್ತುಭುಜಧಾರಿಯಾಗಿದೆ. ಈ ಮೂರ್ತಿಯು ಕೊರಳಹಾರ , ಕಿವಿಯೋಲೆ, ಯಜ್ಞೋಪವೀತ, ಉದರಬಂಧ, ಕೈ ಕಡಗ ಹಾಗು ಕೇಯೂರ ಧರಿಸಿದೆ. ಮೇಲಿನ ಹಾಗು ಕೆಳಗಿನ ಬಲಗೈಗಳು ತ್ರುಟಿತವಾಗಿದ್ದು, ಎಡಗೈಯಲ್ಲಿ ಬಿಲ್ಲು, ಖೇಟಕವನ್ನು ಹಿಡಿದಿದೆ. ಈ ಮೂರ್ತಿಯ ಹಿಂಭಾಗದಲ್ಲಿ ಕೀರ್ತಿಮುಖಯುಕ್ತ ಪ್ರಭಾವಳಿಯನ್ನು ಉತ್ತಮ ರೀತಿಯಲ್ಲಿ ಅಲಂಕರಿಸಲಾಗಿದೆ. ವೀರಭದ್ರನ ಮುಖಭಾವ, ಮಿತವಾದ ಅಲಂಕರಣೆ , ಆಯುಧಗಳನ್ನು ಹಿಡಿದ ರೀತಿ ಕಲ್ಯಾಣಿ ಚಾಲುಕ್ಯರ ಕಾಲದ ಮೂರ್ತಿಗಳಿಗಿಂತ ಸ್ವಲ್ಪ ಭಿನ್ನವಾಗಿವೆ. ನೀಳವಾದ ಮೂಗು ಹಾಗು ದೇಹದಾಢ್ಯ ಇವುಗಳನ್ನು ಗಮನಿಸಿದಲ್ಲಿ ಇದು ಸೇವುಣರ ಕಾಲದ್ದೆಂದು ಹೇಳಬಹುದು. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಇದು ಸೇವುಣರ ಕಾಲಕ್ಕೆ ಸೇರಿದ್ದೆಂದು ಹೇಳಬಹುದಾಗಿದೆ.

[illegible]

೧. ಊರು : ಆಸಗೋಡು

೨. ತಾಲೂಕು : ಜಗಳೂರು

೩. ಹೆಸರು : ವೀರಭದ್ರ

೪. ಸ್ಥಳ : ಶಂಭುಲಿಂಗೇಶ್ವರ ದೇವಾಲಯದ ಬಳಿ

೫. ಕಾಲ : ಕ್ರಿ.ಶ. ೧೧ ನೇ ಶತಮಾನ

೬. ಬಳಸಿದ ಶಿಲೆ : ಡೆಕ್ಕನ್ ಟ್ರ್ಯಾಪ್ (ಕಪ್ಪು ಶಿಲೆ)

ಪೀಠದ ಮೇಲೆ ಸ್ಥಾನಿಕವಾಗಿರುವ ಈ ಮೂರ್ತಿ ಕಿರೀಟಮುಖಿಯಾಗಿದ್ದು, ಚರ್ತುಭುಜಧಾರಿಯಾಗಿದೆ. ಈ ವೀರಭದ್ರ ಮೂರ್ತಿಯ ಮೇಲಿನ ಬಲಗೈನಲ್ಲಿ ಖಟ್ವಾಂಗ ಮತ್ತು ಮೇಲಿನ ಎಡಗೈಯಲ್ಲಿ ಧನಸ್ಸನ್ನು ಹಿಡಿದಿದ್ದು, ಕೆಳಗಿನ ಬಲಗೈನ ಮುಂಭಾಗ ತ್ರುಟಿತವಾಗಿರುವುದರಿಂದ ಆ ಕೈಯಲ್ಲಿ ಹಿಡಿದ ಆಯುಧ ಗೋಚರವಾಗುವುದಿಲ್ಲ. ಕೆಳಗಿನ ಎಡಗೈನಲ್ಲಿ ಖೇಟಕವನ್ನು ಹಿಡಿದಿದೆ. ಈ ಮೂರ್ತಿಯು ವೃತ್ತಕಾರದ ಕಿವಿಯೋಲೆ, ಕೊರಳಹಾರ, ಕೈಕಡಗ, ಕಾಲ್ಗಡಗ ಧರಿಸಿದೆ. ಈ ಮೂರ್ತಿಯ ವಿಶೇಷವೆಂದರೆ; ಕಚ್ಚೆಯ ಮೇಲೆ ಮೊಣಕಾಲವರೆಗೆ ಇಳಿಬಿದ್ದ ಉಪವೀತದ ಕೆಳಭಾಗವು ರುಂಡಮಾಲೆಯಂತಿದೆ. ಕಾಲ್ಕಡಗವಿದ್ದು, ಪಾದಭಾಗ ಭೂಮಿಯಲ್ಲಿ ಹೂತಿದೆ. ಎಡಭಾಗದಲ್ಲಿ ದಕ್ಷನ ಶಿಲ್ಪವಿದ್ದು, ಸುತ್ತಲೂ ಪ್ರಭಾವಳಿ ಇದೆ. ಈ ಮೂರ್ತಿಯ ಲಕ್ಷಣಗಳನ್ನು ಆಧರಿಸಿ, ಕಲ್ಯಾಣಿಚಾಲುಕ್ಯರ ಕಾಲದ್ದೆಂದು ಹೇಳಬಹುದು.

೧. ಊರು : ಕೊಡದ ಗುಡ್ಡ

೨. ತಾಲೂಕು : ಜಗಳೂರು

೩. ಹೆಸರು : ವೀರಭದ್ರ

೪. ಸ್ಥಳ : ಗ್ರಾಮದ ವೀರಭದ್ರ ದೇವಾಲಯದ ಗರ್ಭಗುಡಿಯಲ್ಲಿ ಬಂಡೆಯೊಂದಕ್ಕೆ ಕೆತ್ತಲಾಗಿದೆ.

೫. ಕಾಲ : ಕ್ರಿ.ಶ. ೧೫ ನೇ ಶತಮಾನ

ಈ ಮೂರ್ತಿಯನ್ನು ಗರ್ಭಗುಡಿಯಲ್ಲಿನ ಹಿಂಭಾಗದ ನೈಸರ್ಗಿಕ ಬಂಡೆಯಲ್ಲಿ ಕೆತ್ತಲಾಗಿದೆ. ಇದು ಉಬ್ಬು ಶಿಲ್ಪವಾಗಿದ್ದರೂ ಸಹ ಪ್ರತ್ಯೇಕವಾಗಿ ಕೆತ್ತಲ್ಪಟ್ಟಿದ್ದರಿಂದಾಗಿ ವಿವರಿಸಬೇಕಾಗಿದೆ. ಕಿರೀಟಧಾರಿಯಾಗಿರುವ ಈ ಮೂರ್ತಿ ಚರ್ತುಭುಜಧಾರಿಯಾಗಿದ್ದು, ಮೇಲಿನ ಬಲಗೈಯಲ್ಲಿ ತ್ರಿಶೂಲ, ಕೆಳಗಿನ ಬಲಗೈಯಲ್ಲಿ ಸೊಂಟಕ್ಕೆ ಸಿಕ್ಕಿಸಿದ ಕಠಾರಿಯನ್ನು ಹಿಡಿದಿದೆ. ಮೇಲಿನ ಎಡಗೈಯಲ್ಲಿ ಧನಸ್ಸು (ಬಿಲ್ಲು), ಕೆಳ ಎಡಗೈಯಲ್ಲಿ ಡಮರುಗವನ್ನು ಹಿಡಿದು ಸ್ಥಾನಿಕವಾಗಿದೆ. ಈ ಮೂರ್ತಿ ಕಿವಿಯೋಲೆ, ಸೊಂಟಪಟ್ಟಿ, ಮೊಣಕಾಲುವರೆಗೆ ಇಳಿಬಿದ್ದ ರುಂಡ ರೂಪದ ಉಪವೀತ ಧರಿಸಿದ ಈ ಮೂರ್ತಿ ಕೈ ಮತ್ತು ಕಾಲ್ಕಡಗ ಹಾಗು ಕೇಯೂರದಿಂದ ಅಲಂಕೃತವಾಗಿದೆ. ಮಿತವಾದ ಅಲಂಕಾರ, ನೆರಿಗೆಯುಕ್ತ ವಸ್ತ್ರಗಳು, ಮುಖಭಾವ, ಬಳಸಿರುವ ಶಿಲೆ ಇವುಗಳನ್ನು ಆಧರಿಸಿ, ವಿಜಯನಗರ ಕಾಲದ್ದೆಂದು ಹೇಳಬಹುದು.

೧. ಊರು : ಹಿರೇ ಕೂಗಲೂರು

೨. ತಾಲೂಕು : ಚನ್ನಗಿರಿ

೩. ಹೆಸರು : ವೀರಭದ್ರೇಶ್ವರ

೪. ಸ್ಥಳ : ಗ್ರಾಮದ ವೀರಭದ್ರ ದೇವಾಲಯದಲ್ಲಿ

೫. ಕಾಲ : ಕ್ರಿ. ಶ. ೧೨ನೇ ಶತಮಾನ

೬. ಬಳಸಿದ ಶಿಲೆ : ಬಳಪದ ಶಿಲೆ

ಪೀಠದ ಮೇಲೆ ಸ್ಥಾನಿಕ ಭಂಗಿಯಲ್ಲಿರುವ ಈ ಮೂರ್ತಿಯು ಕಿರೀಟಧಾರಿಯಾಗಿದ್ದು, ಚರ್ತುಭುಜವನ್ನು ಹೊಂದಿದೆ. ಕಿವಿಯೋಲೆ, ಉದರ ಬಂಧ, ಕಟಿಬಂಧಗಳಿದ್ದು, ಅಲಂಕೃತ ಪಂಚೆ, ಕೈಗಡಗ, ಕೇಯೂರ ಹಾಗು ತೊಡೆಯವರೆಗೆ ಇಳಿಬಿದ್ದ ರುಂಡರೂಪದ ಉಪವೀತ ಉತ್ತರೀಯವಿದೆ. ತ್ರಿಶೂಲ, ಬಿಲ್ಲು, ಖಡ್ಗ, ಖೇಟಕವನ್ನು ಮೇಲಿನ ಬಲ ಮತ್ತು ಕೆಳ ಕೈಗಳಲ್ಲಿ ಕ್ರಮವಾಗಿ ಹಿಡಿದುಕೊಂಡಿದೆ. ಈ ಮೂರ್ತಿ ಕಾಲ್ಕಡಗ ಧರಿಸಿದ್ದು, ಪಾದದ ಕೆಳಗಡೆ ಪಾದ ರಕ್ಷೆಗಳಿವೆ. ಪೀಠದ ಬಿಂಬದಲ್ಲಿ ಪದ್ಮಗಳಿವೆ. ಹಾಗೇ ಬಲಭಾಗದಲ್ಲಿ ದಕ್ಷಬ್ರಹ್ಮ , ಎಡಗಡೆ ಪಾರ್ವತಿ ಶಿಲ್ಪಗಳಿವೆ. ಇದ್ದಾಳೆ. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಸೇವುಣರಕಾಲದ್ದೆಂದು ಹೇಳಬಹುದಾಗಿದೆ.

೧. ಊರು : ಚನ್ನಗಿರಿ

೨. ತಾಲೂಕು : ಚನ್ನಗಿರಿ

೩. ಹೆಸರು : ವೀರಭದ್ರ

೪. ಸ್ಥಳ : ಗ್ರಾಮದ ಕಲ್ಲೇಶ್ವರ ದೇವಾಲಯದಲ್ಲಿದೆ.

೫. ಕಾಲ : ಕ್ರಿ.ಶ. ೧೧ ನೇ ಶತಮಾನ

೬. ಬಳಸಿದ ಶಿಲೆ : ಕಪ್ಪು

ಪೀಠದ ಮೇಲೆ ಸ್ಥಾನಿಕ ಭಂಗಿಯಲ್ಲಿರುವ ಈ ಮೂರ್ತಿಯು ಚರ್ತುಭುಜಧಾರಿಯಾಗಿದೆ. ಕೊರಳಹಾರ, ಕಿವಿಯೋಲೆ, ಭುಜಕೀರ್ತಿ, ಕೇಯೂರ, ಕೈಗಡಗ, ಉಪವೀತವನ್ನು ಧರಿಸಿದ ಈ ಮೂರ್ತಿ ಅಲಂಕಾರಯುಕ್ತವಾಗಿದೆ. ತ್ರಿಶೂಲ, ಧನಸ್ಸು, ಖಡ್ಗ, ಖೇಟಕವನ್ನು ಕ್ರಮವಾಗಿ ಕೈಗಳಲ್ಲಿ ಹಿಡಿದಿರುವ ಈ ಮೂರ್ತಿಗೆ ಕಾಲ್ಗಡಗಗಳಿವೆ. ಪೀಠ ಬಿಂಬದಲ್ಲಿ ನಂದಿ ಇದ್ದು, ವೀರಭದ್ರ ಮೂರ್ತಿಯ ಬಲಗಾಲಿನ ಬಳಿ ಕುರಿ ತಲೆಯ ದಕ್ಷ ಅಂಜಲಿ ಮುದ್ರೆಯಲ್ಲಿ ಸ್ಥಾನಿಕನಾಗಿರುವುದೊಂದು ವಿಶೇಷ. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಇದು ಕಲ್ಯಾಣಿ ಚಾಲುಕ್ಯರ ಕಾಲದ್ದೆಂದು ಹೇಳಬಹುದು.

[illegible]

[illegible]

[illegible]

೧. ಊರು : ಕಂದಗಲ್ಲು

೨. ತಾಲೂಕು : ದಾವಣಗೆರೆ

೩. ಹೆಸರು : ವೀರಭದ್ರ

೪. ಸ್ಥಳ : ಗ್ರಾಮದ ವೀರಭದ್ರ ದೇವಾಲಯದಲ್ಲಿದೆ.

೫. ಕಾಲ : ಕ್ರಿ.ಶ. ೧೪ ನೇ ಶತಮಾನ

೬. ಬಳಸಿದ ಶಿಲೆ : ಕಪ್ಪು ಶಿಲೆ

ಪೀಠದ ಮೇಲೆ ಸ್ಥಾನಿಕ ಭಂಗಿಯಲ್ಲಿರುವ ಈ ಮೂರ್ತಿಯು ಕಿರೀಟಧಾರಿಯಾಗಿದ್ದು, ಚರ್ತುಭುಜ ಧಾರಿಯಾಗಿದೆ. ಈ ಮೂರ್ತಿಯು ಕೊರಳಹಾರ , ಕಿವಿಯೋಲೆ, ಯಜ್ಞೋಪವೀತ, ಉದರಬಂಧ, ಕೈ ಕಡಗ ಹಾಗು ಕೇಯೂರ ಧರಿಸಿದೆ. ಈ ಮೂರ್ತಿಯು ತ್ರಿಶೂಲ, ಬಿಲ್ಲು (ಧನಸ್ಸು), ಖಡ್ಗ, ಖೇಟಕವನ್ನು ಕ್ರಮವಾಗಿ ಕೈಗಳಲ್ಲಿ ಹಿಡಿದಿದೆ. ಕಾಲ್ಕಡಗದಿಂದ ಅಲಂಕೃತವಾಗಿರುವ ಈ ಮೂರ್ತಿಯ ಹಿಂಭಾಗದಲ್ಲಿ ಕೀರ್ತಿಮುಖಯುಕ್ತ ಪ್ರಭಾವಳಿ ಇದೆ. ಈ ಮೂರ್ತಿಯ ಶೈಲಿಯನ್ನು ಆಧರಿಸಿ, ವಿಜಯನಗರ ಕಾಲದ್ದೆಂದು ಹೇಳಬಹುದು.

೧. ಊರು : ಹಿರೇಕಲ್ಮಠ

೨. ತಾಲೂಕು : ಹೊನ್ನಾಳಿ

೩. ಹೆಸರು : ವೀರಭದ್ರ

೪. ಸ್ಥಳ : ಗ್ರಾಮದ ವೀರಭದ್ರನ ಗುಡಿಯಲ್ಲಿ

೫. ಕಾಲ : ಕಕ್ರಿ.ಶ. ೧೪ ನೇ ಶತಮಾನ

೬. ಬಳಸಿದ ಶಿಲೆ : ಕಪ್ಪು ಶಿಲೆ

ಈ ಮೂರ್ತಿ ದ್ವಿಭುಜುಧಾರಿಯಾಗಿದ್ದು, ಖಡ್ಗ ಮತ್ತು ಖೇಟಕವನ್ನು ಕೈಯಲ್ಲಿ ಹಿಡಿದಿದೆ. ಕಿರೀಟದಾರಿಯಾದ ಈ ಮೂರ್ತಿಯ ಕೊರಳಲ್ಲಿ ಕೊರಳ ಹಾರ, ಉದರ ಬಂಧವಿದ್ದು, ಸೊಂಟದಲ್ಲಿ ಸಿಕ್ಕಿಸಿದ ಕಠಾರಿ, ಆಭರಣಗಳಿಂದ ಅಲಂಕೃತವಾದ ಇಳಿಬಿದ್ದ ಪಂಚೆ, ಮೊಣಕಾಲವರೆಗೆ ಇಳಿಬಿದ್ದ ಉಪವೀತವಿದ್ದು ಈ ಮೂರ್ತಿಯ ಸುತ್ತಲೂ ಪ್ರಭಾವಳಿ ಇದೆ. ಈ ಮೂರ್ತಿ ಲಕ್ಷಣಗಳ ಆಧಾರದ ಮೇಲೆ ಇದು ವಿಜಯನಗರ ಕಾಲಕ್ಕೆ ಸೇರಿದ್ದೆಂದು ಹೇಳಬಹುದಾಗಿದೆ.

೧. ಊರು : ಮಸಣಕೆರೆ

೨. ತಾಲೂಕು : ಚನ್ನಗಿರಿ

೩. ಹೆಸರು : ವೀರಭದ್ರ

೪. ಸ್ಥಳ : ಊರಿನ ವೀರಭದ್ರ ದೇವಾಲಯ

೫. ಕಾಲ : ಕ್ರಿ.ಶ.೧೪ನೇ ಶತಮಾನ

೬. ಬಳಸಿದ ಶಿಲೆ : ಬಳಪದ ಶಿಲೆ

ಪೀಠದ ಮೇಲೆ ಸ್ಥಾನಿಕ ಭಂಗಿಯಲ್ಲಿರುವ ಈ ಮೂರ್ತಿಯು ಚರ್ತುಭುಜಧಾರಿಯಾಗಿದೆ. ಕಿರೀಟಧಾರಿಯಾಗಿರುವ ಈ ಮೂರ್ತಿಯ ಕಿವಿಯಲ್ಲಿ ಮಕರಕುಂಡಲ, ಕೊರಳಲ್ಲಿ ಅನೇಕ ಬಗೆಯ ಹಾರಗಳಿದ್ದು, ಉಪವೀತಬಂಧ, ಯಜ್ಞೋಪವೀತ, ಕೈಕಡಗ, ಕೇಯೂರ, ಕಟಿಬಂಧ ಮತ್ತು ಕಾಲಿನವರೆಗೆ ಇಳಿಬಿದ್ದ ಉಪವೀತವಿದೆ. ಮೇಲಿನ ಬಲಗೈನಲ್ಲಿ ಬಾಣ, ಕೆಳ ಬಲಗೈನಲ್ಲಿ ಖಡ್ಗ, ಎಡ ಮೇಲಿನ ಕೈನಲ್ಲಿ ಬಿಲ್ಲನ್ನು ಎತ್ತಿಹಿಡಿದಿದ್ದು, ಖೇಟಕದ ಮೇಲೆ ಕೆಳ ಎಡಗೈ ಬೆರಳುಗಳಿವೆ. ಈ ಖೇಟಕವು ದಕ್ಷ ಬ್ರಹ್ಮನ ತಲೆಗೆ ತಾಗಿದಂತಿರುವುದು ವಿಶೇಷವಾಗಿದೆ. ಕಾಲ್ಕಡಗದಿಂದ ಅಲಂಕಾರಯುಕ್ತವಾದ ಈ ಮೂರ್ತಿಯ ಹಿಂಭಾಗದಲ್ಲಿ ಪ್ರಭಾವಳಿ ಇದೆ. ಈ ದೇವಾಲಯದ ವಾಸ್ತು ಶಿಲ್ಪ ಹಾಗು ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಇದು ವಿಜಯನಗರ ಕಾಲದ್ದೆಂದು ಹೇಳಬಹುದು.

ಭೈರವ ಮೂರ್ತಿಗಳು : ಶೈವ ಮತ್ತು ವೈಷ್ಣವ ದೇವಾಲಯಗಳಲ್ಲಿ ಸಾಮಾನ್ಯವಾಗಿ ಈ ಮೂರ್ತಿಗಳು ಕಾಣಬರುತ್ತವೆ. ಭೈರವನನ್ನು ಅಸುರರೊಡನೆ ಹೋರಾಟ ಮಾಡಿದ ಶಿವನ ಪ್ರತಿರೂಪವೆಂದು ಪರಿಗಣಿಸಲಾಗಿದೆ. ಬ್ರಹ್ಮ ವೈವಾರ್ಥ ಪುರಾಣ, ತಂತ್ರಸಾರ, ವಿಷ್ಣು ಧರ್ಮೋತ್ತರ ಪುರಾಣ ಹಾಗು ಕಾಳಿಕಾ ಪುರಾಣಗಳು ಈ ಮೂರ್ತಿಯ ಕುರಿತು ವಿವರಣೆಯನ್ನು ನೀಡುತ್ತವೆ[೩೫].

ಹಲಕನಾಳು, ಮರವಂಜಿ, ಚಿಗಟೇರಿ, ಗುತ್ತಿದುರ್ಗ, ಚದುರಗೂಳ, ಸಾರಥಿ ಮೊದಲಾದ ಕಡೆ ಈ ಮೂರ್ತಿಗಳು ಕಂಡು ಬರುತ್ತವೆ. ಇಲ್ಲಿನ ಮೂರ್ತಿಗಳನ್ನು ಸ್ಥಾನಿಕ ಮತ್ತು ಆಸೀನ ಮೂರ್ತಿಗಳು ಎಂದು ವಿಭಾಗಿಸಬಹುದು.

೧. ಊರು : ಚದುರಗೂಳ

೨. ತಾಲೂಕು : ಜಗಲೂರು

೩. ಹೆಸರು : ಭೈರವ

೪. ಸ್ಥಳ : ಗ್ರಾಮದ ಭೈರವ ದೇವಾಲಯದಲ್ಲಿ

೫. ಕಾಲ : ಕ್ರಿ. ಶ. ೯ ನೇ ಶತಮಾನ (?)

೬. ಬಳಸಿದ ಶಿಲೆ : ಕಪ್ಪು ಶಿಲೆ

ಪಾಣಿಪೀಠದ ಮೇಲೆ ಸ್ಥಾನಿಕನಾಗಿರುವ ಈ ಮೂರ್ತಿಯ ವೈಶಿಷ್ಟವೆಂದರೆ; ಕಿರೀಟಮುಖಿಯಾಗಿರುವುದರ ಜೊತೆಗೆ ಅಷ್ಟಕೈಗಳನ್ನು ಹೊಂದಿದ್ದು, ವಿವಿಧ ಆಯುಧಗಳನ್ನು ಹಿಡಿದಿರುವುದಾಗಿದೆ. ಸರ್ಪ ಕುಂಡಲ ಕೂರಳಹಾರ, ಕಂಠಾಭರಣ, ಯಜ್ಞೋಪವೀತ, ಉದರಬಂಧ, ಕಟಿಬಂಧ, ಮೊಣಕಾಲವರೆಗೆ ಇಳಿಬಿದ್ದ ಉಪವೀತವಿದೆ. ತ್ರಿಶೂಲ,ಡಮರುಗ, ಅಂಕುಶ, ಖಡ್ಗ, ಕಠಾರಿ, ಧನಸ್ಸು, ಕಪಾಲ ಹಿಡಿದ ಎಂಟು ಕೈಗಳಿಗೂ ಕೈಗಡಗ,ಪಾದರಕ್ಷೆಗಳಿದ್ದು, ನಗ್ನವಾಗಿ ಸರ್ಪದ ಮೇಲೆ ನಿಂತಿರುವ ಮೂರ್ತಿ ಇದಾಗಿದೆ. ಎಡಗಾಲ ಮುಂಭಾಗದಲ್ಲಿ ಸರ್ಪ ಹೆಡೆಬಿಚ್ಚಿ ಹಿಂಭಾಗಕ್ಕೆ ತನ್ನ ಬಾಲವನ್ನು ಚಾಚಿ ಮಲಗಿದಂತಿರುವ ಸರ್ಪದ ಮೇಲೆ ಈ ಮೂರ್ತಿ ಸ್ಥಾನಿಕವಾಗಿದೆ. ಬಲಗಾಲಿನ ಬಳಿ ವಾದ್ಯದವರು, ಎಡಗಾಲಿನ ಬಳಿ ನಾಯಿ ಮತ್ತು ಚಿಕ್ಕ ಪುರುಷ ಶಿಲ್ಪಗಳಿವೆ. ಸುತ್ತಲೂ ಪ್ರಭಾವಳಿ ಸುಂದರವಾಗಿವೆ. ಕಾಲ ಕೆಳಗಿನ ಪಾಣಿಪೀಠದಲ್ಲಿ ಚೇಳು ಮತ್ತು ಪದ್ಮಗಳ ಕೆತ್ತನೆ ಇದೆ.

೧. ಊರು : ಗುತ್ತಿದುರ್ಗ
೨. ತಾಲೂಕು : ಜಗಲೂರು
೩. ಹೆಸರು : ಭೈರವ
೪. ಸ್ಥಳ : ಗ್ರಾಮದ ಭೈರವೇಶ್ವರ ಗುಡಿಯಲ್ಲಿ.
೫. ಕಾಲ : ಕ್ರಿ. ಶ. ೧೦ ನೇ ಶತಮಾನ
೬. ಬಳಸಿದ ಶಿಲೆ : ಕಪ್ಪು ಶಿಲೆ

ಕಿರೀಟ ಮಕುಟಧಾರಿಯಾದ ಭೈರವ ಮೂರ್ತಿಯು ಪಾಣಿಪೀಠದ ಮೇಲೆ ಸ್ಥಾನಿಕವಾಗಿದ್ದು, ಚರ್ತುಭುಜಧಾರಿಯಾಗಿದ್ದಾನೆ. ಸರ್ಪ ಕುಂಡಲ, ಕೂರಳಲ್ಲಿ ಕಂಠಾಭರಣ, ಎದೆಹಾರ, ಯಜ್ಞೋಪವೀತ, ಕಟಿ ಸೂತ್ರ, ಮೊಣಕಾಲಿನವರೆಗೆ ಇಳಿಬಿದ್ದ ರುಂಡಮಾಲೆ , ಮೊಣಕಾಲ ಮೇಲೆ ಎರಡು ಕಾಲನ್ನು ಸುತ್ತುವರಿದ ಸರ್ಪಗಳಿವೆ. ಕೈಗಡಗ, ಕೇಯೂರಗಳಿದ್ದು, ತ್ರಿಶೂಲ, ಡಮರುಗ, ಖಡ್ಗ ಮತ್ತು ಪಾತ್ರೆಯೊಂದಿಗೆ ಕಪಾಲಗಳನ್ನು ಕೈಯಲ್ಲಿ ಈ ಮೂರ್ತಿ ಹಿಡಿದಿದೆ. ಕಾಲ್ಗಡಗ, ಪಾದರಕ್ಷೆಯನ್ನು ಧರಿಸಿದ ಈ ಮೂರ್ತಿಯು ನಿರ್ವಸ್ತ್ರಧಾರಿಯಾಗಿದ್ದು, ಬಲಗಾಲಿನ ಬಳಿ ವಾದ್ಯದವರು. ಎಡ ಕಾಲಿನ ಬಳಿ ಕಪಾಲಹಿಡಿದಿರುವ ಚಿಕ್ಕ ಶಿಲ್ಪಗಳಿವೆ. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಇದು ಕಲ್ಯಾಣಿ ಚಾಲುಕ್ಯರ ಕಾಲದ್ದೆಂದು ಹೇಳಬಹುದು.

೧. ಊರು : ಹಲಕನಾಳು
೨. ತಾಲೂಕು : ಚನ್ನಗಿರಿ
೩. ಹೆಸರು : ಭೈರವ, ಭೈರವೇಶ್ವರ
೪. ಸ್ಥಳ : ಊರಿನ ಭೈರವ ದೇವಾಲಯದಲ್ಲಿ
೫. ಕಾಲ : ಕ್ರಿ. ಶ. ೧೦ ನೇಶತಮಾನ
೬. ಬಳಸಿದ ಶಿಲೆ : ಕಪ್ಪು

[illegible]

[illegible]

[illegible]

[illegible]

ಪೀಠದ ಮೇಲೆ ಸ್ಥಾನಿಕ ಭಂಗಿಯಲ್ಲಿರುವ ಈ ಮೂರ್ತಿಯು ಚತುರ್ಭುಜಧಾರಿಯಾಗಿದೆ. ಜಟಾಮುಕುಟ ಭೈರವನ ಕಿವಿಯಲ್ಲಿ ಸರ್ಪ ಕುಂಡಲಗಳಿದ್ದು , ಜೊತೆಗೆ ಕಂಠಾಭರಣ, ಎದೆಹಾರ, ಯಜ್ಞೋಪವೀತ, ರುಂಡಮಾಲೆ,ಕಟಿಬಂಧ ಹಾಗು ಕೈಕಡಗಗಳಿವೆ. ಎದೆಯಲ್ಲಿ ಮತ್ತು ಮೊಣಕಾಲಿನ ಬಳಿ ಸರ್ಪವೊಂದು ಸುತ್ತುವರಿದಿದೆ. ಕಾಲ್ಕಡಗ, ಪಾದರಕ್ಷೆಗಳನ್ನು ಧರಿಸಿದ ಈ ಮೂರ್ತಿಯ ಹಿಂಭಾಗದಲ್ಲಿ ಸರ್ಪ ತೋರಣಯುಕ್ತ ಪ್ರಭಾವಳಿ ಇದೆ. ಈ ಮೂರ್ತಿಯ ಕಾಲಿನ ಬಲಬದಿಯಲ್ಲಿ ಮೃದಂಗ ಬಾರಿಸುವ ಮತ್ತು ಎಡ ಬದಿಯಲ್ಲಿ ಕಹಳೆ ಊದುತ್ತಿರುವ ಚಿಕ್ಕ ಚಿಕ್ಕ ಶಿಲ್ಪಗಳಿವೆ. ಪಾಣಿ ಪೀಠದ ಬಿಂಬದಲ್ಲಿ ಚೇಳು ಇದೆ. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಇದು ಕಲ್ಯಾಣಿ ಚಾಲುಕ್ಯರ ಕಾಲದ್ದೆಂದು ಹೇಳಬಹುದು.

೧. ಊರು : ಮರವಂಜಿ
೨. ತಾಲೂಕು : ಚನ್ನಗಿರಿ
೩. ಹೆಸರು : ಭೈರವ
೪. ಸ್ಥಳ : ಊರಿನ ಈಶ್ವರ ದೇವಾಲಯದಲ್ಲಿದೆ.
೫. ಕಾಲ : ಕ್ರಿ. ಶ. ೧೧ನೇ ಶತಮಾನ
೬. ಬಳಸಿದ ಶಿಲೆ : ಬಳಪದ ಶಿಲೆ

ಪಾಣಿಪೀಠದ ಮೇಲೆ ನಿಂತಿರುವ ಈ ಮೂರ್ತಿಯು ಚತುರ್ಭುಜಧಾರಿಯಾಗಿದೆ. ಕೆದರಿದ ಜಟೆ, ಸರ್ಪಕುಂಡಲ, ಭುಜಕೀರ್ತಿ, ಕೇಯೂರ, ಕೊರಳಹಾರ, ಎದೆಪಟ್ಟಿ, ಯಜ್ಞೋಪವೀತ, ರುಂಡಮಾಲೆ, ಕೈಗಡಗಗಳಿಂದ ಅಲಂಕೃತವಾದ ಈ ಮೂರ್ತಿಯು ನಗ್ನವಾಗಿದ್ದು, ಮೊಣಕಾಲ ಬಳಿ ಸರ್ಪವೊಂದು ಸುತ್ತಿಕೊಂಡಿದೆ. ತ್ರಿಶೂಲ ಮತ್ತು ಡಮರುಗವನ್ನು ಮೇಲಿನ ಎಡ ಮತ್ತು ಬಲಗೈಗಳಲ್ಲಿ ಹಿಡಿದಿದೆ. ತ್ರಿಶೂಲ ಮತ್ತು ಡಮರುಗದ ಮೇಲೆ ತಲಾ ಒಂದೊಂದು ಶಿರಸ್ಸು ಇವೆ. ಕೆಳಗಿನ ಎಡಗೈಯಲ್ಲಿ ಕಪಾಲವಿದೆ. ಕಾಲ್ಗಡಗ ಧರಿಸಿದ ಈ ಮೂರ್ತಿಯು ಪಾದರಕ್ಷೆಗಳಿಂದ ಅಲಂಕಾರಯುಕ್ತವಾಗಿದ್ದು, ಸುತ್ತಲೂ ಪ್ರಭಾವಳಿ ಇದೆ. ಕಾಲಿನ ಎಡಭಾಗದಲ್ಲಿ ನಾಯಿಯೊಂದು ತನ್ನ ಹಿಂದಿನ ಕಾಲುಗಳ ಮೇಲೆನಿಂತು ತನ್ನ ಮುಂದಿನ ಕಾಲುಗಳನ್ನು ಜೋಡಿಸಿ ನಮಿಸುವ ರೀತಿಯಲ್ಲಿದೆ. ಹಾಗೆಯೇ ಎಡ-ಬಲದಲ್ಲಿ ಕೆಲ ಚಿಕ್ಕ ಸ್ತ್ರೀ ಶಿಲ್ಪಗಳನ್ನು ಕೆತ್ತಲಾಗಿದೆ. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಇದು ಕಲ್ಯಾಣಿ ಚಾಲುಕ್ಯರ ಕಾಲದ್ದೆಂದು ಹೇಳಬಹುದು.

೧. ಊರು : ಚಿಗಟೇರಿ
೨. ತಾಲೂಕು : ಹರಪನಹಳ್ಳಿ
೩. ಹೆಸರು : ಭೈರವ / ಭೀರೇಶ್ವರ
೪. ಸ್ಥಳ : ಊರಿನ ನಾರದಮುನಿ ದೇವಾಲಯ
೫. ಕಾಲ : ಕ್ರಿ. ಶ. ೧೧ ನೇ ಶತಮಾನ
೬. ಬಳಸಿದ ಶಿಲೆ : ಬಳಪದ ಶಿಲೆ

ಪೀಠದ ಮೇಲೆ ಹೆಡೆಬಿಚ್ಚಿದ ಸರ್ಪವಿದ್ದು, ಈ ಸರ್ಪದ ಮೇಲೆ ಚತುರ್ಭುಜಧಾರಿಯಾದ ಭೈರವ ಮೂರ್ತಿಯು ಸುಖಾಸನದಲ್ಲಿ ಕುಳಿತಿರುವುದು ವಿಶೇಷವಾಗಿದೆ. ಜಟಾಧಾರಿ ಭೈರವನ ಹಣೆಯ ಮೇಲ್ಭಾಗದಲ್ಲಿ ಹೆಡೆಬಿಚ್ಚಿದ ಸರ್ಪವು ತಲೆಯನ್ನು ಸುತ್ತುವರಿದಿದೆ. ಕಿವಿಯಲ್ಲಿ ಸರ್ಪಕುಂಡಲ, ಕೊರಳಲ್ಲಿ ಒಂದು ಸರ್ಪ, ರುಂಡಮಾಲೆಯ ಯಜ್ಞೋಪವೀತ, ಕೈಕಡಗ ಹಾಗು ಸರ್ಪ ಕೇಯೂರಗಳನ್ನು ಈ ಮೂರ್ತಿ ಧರಿಸಿದೆ. ಸರ್ಪವೊಂದು ಉದರವನ್ನು ಸುತ್ತಿದಂತಿದ್ದು, ಕಟಿಯಲ್ಲಿ ರುಂಡಮಾಲೆ ಸರವಿದೆ. ತ್ರಿಶೂಲ, ಡಮರು, ಅಂಕುಶ, ಪಾತ್ರೆಯೊಂದಿಗೆ ಕಪಾಲಗಳನ್ನು ಕೈಯಲ್ಲಿ ಕ್ರಮವಾಗಿ ಹಿಡಿದಿದ್ದು, ಕಾಲಿನಲ್ಲಿ ಕಾಲ್ಕಡಗಗಳಿವೆ. ಸುತ್ತಲೂ ಸರ್ಪ ತೋರಣಯುಕ್ತ ಪ್ರಭಾವಳಿ ಇದೆ. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಇದು ಕಲ್ಯಾಣಿ ಚಾಲುಕ್ಯರ ಕಾಲದಕ್ಕೆ ಸೇರಿದೆ ಎಂದು ಹೇಳಬಹುದು.

೧. ಊರು : ದೇವರ ಬೆಳಕೆರೆ
೨. ತಾಲೂಕು : ಹರಿಹರ
೩. ಹೆಸರು : ಭೈರವ
೪. ಸ್ಥಳ : ಊರಿನ ಕಲ್ಲೇಶ್ವರ ದೇವಾಲಯದಲ್ಲಿದೆ.
೫. ಕಾಲ : ಕ್ರಿ.ಶ. ೧೧ನೇ ಶತಮಾನ
೬. ಬಳಸಿದ ಶಿಲೆ : ಕಪ್ಪು (ಡೈಕ್ ಟ್ರಾಪ್)

ಪಾಣಿಪೀಠದ ಮೇಲೆ ಸ್ಥಾನಿಕವಾಗಿರುವ ಈ ಮೂರ್ತಿಯು ಚತುರ್ಭುಜಧಾರಿಯಾಗಿದ್ದು, ಜಟಾಮಕುಟಧಾರಿಯಾಗಿದೆ. ಕಿವಿಯಲ್ಲಿ ಸರ್ಪಕುಂಡಲಗಳಿದ್ದು, ಕೊರಳಲ್ಲಿ ಕಂಠಾಭರಣ, ಎದೆಹಾರ, ಯಜ್ಞೋಪವೀತ, ಮೊಣಕಾಲವರೆಗೆ ಇಳಿಬಿದ್ದ ರುಂಡಮಾಲೆ , ಉದರವನ್ನು ಸುತ್ತುವರಿದ ಸರ್ಪ ಹಾಗು ಕಟಿಬಂಧಗಳಿವೆ. ಮೊಣಕಾಲಿನ ಎರಡುಕಾಲನ್ನು ಸುತ್ತುವರಿದ ಸರ್ಪವಿದ್ದು, ಕಾಲ್ಕಡಗ ಹಾಗು ಪಾದರಕ್ಷೆಗಳನ್ನು ಈ ಮೂರ್ತಿಗಳ ಧರಿಸಿದೆ. ಎಡ ಮೊಣಕಾಲಿನ ಕೆಳಭಾಗ ತ್ರುಟಿತವಾಗಿದೆ. ಈ ಮೂರ್ತಿಯ ಮೇಲಿನ ಕೈಗಳಲ್ಲಿ ಹಿಡಿದ ಆಯುಧಗಳು ತ್ರುಟಿತವಾಗಿರುವುದರಿಂದ ಅವು ಯಾವ ಆಯುಧಗಳೆಂದು ತಿಳಿಯುವುದು ಕಷ್ಟಕರ. ಆದರೂ ಉಳಿದರ್ಧಭಾಗದಿಂದ ತ್ರಿಶೂಲ, ಡಮರುಗಗಳು ಇರುಬಹುದೆಂದು ಗುರುತಿಸಬಹುದಾಗಿದೆ. ಕೆಳಗಿನ ಕೈಗಳ ಮುಂಭಾಗ ತ್ರುಟಿತವಾಗಿರುವುದರಿಂದ ಆ ಕೈಗಳಲ್ಲಿ ಹಿಡಿದ ಆಯುಧಗಳು ಸಹ ಯಾವುವೆಂದು ತಿಳಿಯುವುದಿಲ್ಲ. ಭುಜಕೀರ್ತಿ, ಸರ್ಪಕೇಯೂರ, ಕೈಗಡಗಗಳನ್ನು ಧರಿಸಿದ ಈ ಮೂರ್ತಿಯ ಹಿಂಭಾಗದಲ್ಲಿನ ಪ್ರಭಾವಳಿಯ ಮೇಲಿನ ಭಾಗ ತ್ರುಟಿತವಾಗಿದೆ. ಈ ಮೂರ್ತಿಯು ಕಲ್ಯಾಣಿ ಚಾಲುಕ್ಯರ ಶಿಲ್ಪ ಶೈಲಿಯನ್ನು ಹೊಂದಿದೆ ಎಂದು ಹೇಳಬಹುದು.

[illegible]

[illegible]

[illegible]

೧. ಊರು : ಸಾರಥಿ

೨. ತಾಲೂಕು : ಹರಿಹರ

೩. ಹೆಸರು : ಆಸೀನ ಭೈರವ

೪. ಸ್ಥಳ : ಊರಿನ ಬಸವೇಶ್ವರ ದೇವಾಲಯದಲ್ಲಿದೆ.

೫. ಕಾಲ : ಕ್ರಿ. ಶ. ೧೧ ನೇ ಶತಮಾನ

೬. ಬಳಸಿದ ಶಿಲೆ : ಕಪ್ಪು ಶಿಲೆ (ಡೆಕನ್‌ಟ್ರಾಪ್)

ಚತುರ್ಭುಜಧಾರಿ ಭೈರವನು ನಗ್ನನಾಗಿ ಸರ್ಪದ ಮೇಲೆ ಅಂದರೆ; ಸುಖಾಸನದಲ್ಲಿ ಕುಳಿತಿರುವುದು ಈ ಮೂರ್ತಿಯ ವಿಶೇಷ. ಕೆದರಿದ ಜಟೆ, ಕಿವಿಯಲ್ಲಿ ಕುಂಡಲ, ಭುಜಕೀರ್ತಿ ಎದೆಹಾರ, ಉದರಬಂಧ, ರುಂಡ ಮಾಲೆಯ ಯಜ್ಞೋಪವೀತ, ಕಟಿಹಾರವಿದ್ದು, ತ್ರಿಶೂಲ, ಡಮರುಗ, ಖಡ್ಗ, ಪಾನಪಾತ್ರೆಯನ್ನು,ಕೈಗಳಲ್ಲಿ ಹಿಡಿದಿದೆ. ಸರ್ಪಕೇಯೂರ, ಕೈಕಡಗ ಹಾಗು ಕಾಲಿನಲ್ಲಿ ಕಡಗ, ಪಾದ ಸರ ಗಳನ್ನು ಈ ಮೂರ್ತಿ ಧರಿಸಿದೆ. ಭೈರವನು ಕುಳಿತ ಮಧ್ಯಭಾಗದಲ್ಲಿ ಎರಡು ಸರ್ಪಗಳು ಎಡಬಲದಲ್ಲಿ ಹೆಡೆ ಬಿಚ್ಚಿರುವುದು ವಿಶೇಷವಾಗಿದೆ. ಎಡ ತೊಡೆಯ ಬಳಿಯೂ ಮತ್ತೊಂದು ಹೆಡೆ ಬಿಚ್ಚಿದ ಸರ್ಪವಿದ್ದು, ಮೂರ್ತಿ ಹಿಂಭಾಗದ ಸುತ್ತಲೂ ಅಲಂಕಾರವಿಲ್ಲದ ಪ್ರಭಾವಳಿ ಇದೆ. ಈ ಮೂರ್ತಿಯ ಲಕ್ಷಣಗಳು ಕಲ್ಯಾಣಿ ಚಾಲುಕ್ಯರ ಶಿಲ್ಪ ಶೈಲಿಗೆ ಹೋಲಿಕೆಯಾಗುತ್ತವೆ. ಹಾಗಾಗಿ ಅವರ ಕಾಲದ್ದೆಂದು ಹೇಳಬಹುದು.

ಗಣಪತಿ ಮೂರ್ತಿಗಳು :- ಭಾರತದ ತುಂಬೆಲ್ಲಾ ಗಣೇಶನ ಆಚರಣೆ ಹಿಂದಿನಿಂದಲೂ ರೂಢಿಯಲ್ಲಿದೆ. ಶಿವ, ಬ್ರಹ್ಮಾಂಡ, ಗಣೇಶ, ವರಹ, ಭವಿಷ್ಯ, ಸ್ಕಂದ, ಮೊದಗಲ, ಬ್ರಹ್ಮ ವೈವರ್ಥ ಪುರಾಣಗಳಲ್ಲಿ ಗಣಪತಿಯ ಉಲ್ಲೇಖವಿದೆ[೩೬]. ಗಣಪತಿಯನ್ನು ಕೃಷ್ಣನ ಪ್ರತಿರೂಪವೆಂದೇ ಕೆಲವು ಪುರಾಣ ಗ್ರಂಥಗಳು ಹೇಳುತ್ತವೆ . ಹಾಗು ಗಣಪತಿಯನ್ನು ಪರಬ್ರಹ್ಮನೆಂದು, ಬ್ರಾಹ್ಮಣಸ್ಪಥಿ ಮತ್ತು ಬೃಹಸ್ಪತಿಯೆಂದು ಗುರುತಿಸಲಾಗಿದೆ[೩೭]. ಗಣಪತಿಯು ತನ್ನ ಕೈಗಳಲ್ಲಿ ಕುಟಾಹರ (ಪರುಶು) ಪಾಶ, ಅಂಕುಶ ಮತ್ತು ಅಕ್ಷಮಾಲಾ, ಈಟಿ (ಭರ್ಚಿ), ಮೋದಕ, ತ್ರಿಶೂಲ, ಶಂಕ, ಚಕ್ರ, ರತ್ನಕಲಶ, ಫಲ ಮತ್ತು ಇಕ್ಷೂಚಾಪ ಹಿಡಿದಿದ್ದು, ಜೊತೆಗೆ ಕೆಳಗಿನ ಕೈಗಳುಅಭಯ, ವರದ, ಮುದ್ರೆಗಳಲ್ಲಿರುತ್ತವೆ[೩೮].

ದಾವಣಗೆರೆ ಜಿಲ್ಲೆಯಲ್ಲಿ ಪ್ರಾಚೀನ ಮತ್ತು ಮಧ್ಯಯುಗೀನ ಕಾಲಕ್ಕೆ ಸೇರಿದ ಹಲವಾರು ಗಾಣಪತ್ಯ ಮೂರ್ತಿಗಳು ವಿವಿಧೆಡೆ ದೊರೆತಿದ್ದು, ಇವುಗಳಲ್ಲಿ ದ್ವಿಭುಜ ಮತ್ತು ಚತುರ್ಭುಜ, ಗಣಪತಿ ವಿಗ್ರಹಗಳೇ ಹೆಚ್ಚಾಗಿವೆ.

[illegible]

[illegible]

[illegible]

[illegible]

[illegible]

ಕಲ್ಕೆರೆ, ಹಿರೇ ಕೋಗಲೂರು, ಕಮ್ಮಾರ ಗಟ್ಟೆ, ಬಳ್ಳೇಶ್ವರ, ಕುರುವ, ಗೋಪಗೊಂಡನಹಳ್ಳಿ, ಕಲ್ಲೇದೇವರಪುರ, ಕೂಡದಗುಡ್ಡ, ಗುತ್ತಿದುರ್ಗ, ಚದುರಗೊಳ, ಬಾಗಳಿ, ನೀಲಗುಂದ, ಬೆಣ್ಣಿಹಳ್ಳಿ, ಚಿಗಟೇರಿ, ಗುಡಿಹಳ್ಳಿ, ಸೂಳೆಕೆರೆ, ವಾಸನ, ಸಾರಥಿ, ನಂದಿತಾವರೆ , ನಂದಿಗುಡಿಗಳಲ್ಲಿ ಈ ಮೂರ್ತಿಗಳಿವೆ. ಪ್ರಮುಖ ಮೂರ್ತಿಗಳ ಲಕ್ಷಣಗಳನ್ನು ಈ ಮುಂದೆ ವಿಶ್ಲೇಷಿಸಲಾಗುತ್ತಿದೆ.

೧. ಊರು : ಚಿಕ್ಕ ಬಿದರೆ

೨. ತಾಲೂಕು : ಹರಿಹರ

೩. ಹೆಸರು : ಗಣಪತಿ

೪. ಸ್ಥಳ : ಊರಿನ ಕಲ್ಲೇಶ್ವರ ದೇವಾಲಯದಲ್ಲಿ

೫. ಕಾಲ : ಕ್ರಿ.ಶ. ೧೧ನೇ ಶತಮಾನ

೬. ಬಳಸಿದ ಶಿಲೆ : ಕಪ್ಪುಶಿಲೆ

ಕಿರೀಟಧಾರಿ ಹಾಗು ಚರ್ತುಭುಜಧಾರಿಯಾದ ಈ ಮೂರ್ತಿಯು ಸುಖಾಸನದಲ್ಲಿದೆ. ಮೇಲಿನ ಕೈಗಳಲ್ಲಿ ಅಂಕುಶ, ಪಾಶ, ಕೆಳಗಿನ ಕೈಗಳಲ್ಲಿ ಭಗ್ನದಂತ, ಮೋದಕಪಾತ್ರೆ ಹಿಡಿದಿದ್ದು. ಮೋದಕ ಪಾತ್ರೆಯ ಮೇಲೆ ಸೊಂಡಿಲಿದ್ದು, ಕೈಗಡಗ, ಕಾಲ್ಗಡಗಳನ್ನು ಧರಿಸಿದೆ. ಉದರಭಾಗದಲ್ಲಿ ಒಂದು ರಂಧ್ರವಿರುವುದರಿಂದ (ಜನತೆ ಮಾಡಿದ್ದು) ಉದರಭಾಗದಲ್ಲಿನ ಅಲಂಕಾರಿಕ ಆಭರಣ ಇತ್ಯಾದಿಗಳು ಗೋಚರಿಸುವುದಿಲ್ಲ. ಯಜ್ಞೋಪವೀತ ಕಾಣ ಬರುತ್ತಿಲ್ಲ. ಪಾದಗಳ ಮೇಲೆ ಪಾದಸರಗಳಿವೆ. ಪ್ರಭಾವಳಿ ಅಲಂಕಾರಿಕವಾಗಿರದೆ , ಸಾಧಾರಣವಾಗಿದೆ. ಪೀಠದಲ್ಲಿ ವಿನಾಯಕನ ವಾಹನ ಮೋಷಕನನ್ನು ನಿಂತಿರುವಂತೆ ಕೆತ್ತಿರುವುದು ಈ ಮೂರ್ತಿಯ ವಿಶೇಷತೆ. ಈ ಮೂರ್ತಿಯ ಲಕ್ಷಣಗಳ ಆಧಾರದ ಇದು ಮೇಲೆ ಕಲ್ಯಾಣಿ ಚಾಲುಕ್ಯರ ಕಾಲದ್ದೆಂದು ಹೇಳಬಹುದು.

೧. ಊರು : ಹಿರೇಕೊಗಲೂರು

೨. ತಾಲೂಕು : ಚನ್ನಗಿರಿ

೩. ಹೆಸರು : ಗಣಪತಿ

೪. ಸ್ಥಳ : ಊರಿನ ಈಶ್ವರ ದೇವಾಲಯದಲ್ಲಿ

೫. ಕಾಲ : ಕ್ರಿ.ಶ. ೧೦ನೇ ಶತಮಾನ

೬. ಬಳಸಿದ ಶಿಲೆ : ಕಪ್ಪುಶಿಲೆ

ಇಲ್ಲಿನ ನವರಂಗದಲ್ಲಿನ ಬಲಭಾಗದ (ಉತ್ತರ)ಕೋಷ್ಠಗುಡಿಯಲ್ಲಿರುವ ಈ ಮೂರ್ತಿಯು ಚರ್ತುಭುಜಧಾರಿಯಾಗಿದ್ದು, ಪೀಠದ ಮೇಲೆ ಸುಖಾಸೀನವಾಗಿದೆ. ಕಿರೀಟ ಮುಖಿಯಾದ ಈ ಮೂರ್ತಿಯ ಮೇಲಿನ ಕೈಗಳಲ್ಲಿ ಪಾಶ, ಅಂಕುಶವಿದೆ. ಕೆಳ ಬಲಗೈ ತ್ರುಟಿತವಾಗಿರುವುದರಿಂದ ಆ ಕೈಯಲ್ಲಿ ಹಿಡಿದ ಆಯುಧ ಗೋಚರಿಸುವುದಿಲ್ಲ.

ಕೆಳಗಿನ ಎಡಗೈಯಲ್ಲಿ ಮೋದಕ ಪಾತ್ರೆಯಿದ್ದು, ಆ ಪಾತ್ರೆಯ ಮೇಲ್ಗಡೆ ಸುತ್ತಿದ ಸೊಂಡಿಲಿದೆ. ಕೊರಳಹಾರ, ಉದರವನ್ನು ಸುತ್ತುವರಿದ ಸರ್ಪ, ಯಜ್ಞೋಪವೀತ, ಕೊರಳಿನಲ್ಲಿ ಹಾಕಿದ ಮಣಿ ಸರವೊಂದು ಕಾಲಿನ ಬಳಿ ಇಳಿಬಿದ್ದಿದೆ. ಉದರಬಂಧ ಕಾಲ್ಕಡಗ, ಕೈಕಡಗಳಿವೆ. ಪಾಣಿಪೀಠದ ಬಿಂಬದಲ್ಲಿ ಮೋಷಕವಿದೆ. ತಲೆಯ ಹಿಂಬದಿಯಲ್ಲಿ ಕೀರ್ತಿಮುಖಯುಕ್ತ ಪ್ರಭಾವಳಿ ಇದೆ. ಈ ಮೂರ್ತಿಯ ಲಕ್ಷಣ ಮತ್ತು ಅಲಂಕಾರವನ್ನು ಆಧಾರವಾಗುಟ್ಟುಕೊಂಡು ಇದು ಸೇವುಣರ ಕಾಲಕ್ಕೆ ಸೇರಿದೆ ಎಂದು ಹೇಳಬಹುದು.

೧. ಊರು : ಹಿರೇಕೊಗಲೂರು

೨. ತಾಲೂಕು : ಚನ್ನಗಿರಿ

೩. ಹೆಸರು : ಗಣೇಶ

೪. ಸ್ಥಳ : ಈಶ್ವರ ದೇವಾಲಯದ ಉತ್ತರದ ಗರ್ಭಗುಡಿಯಲ್ಲಿದೆ

೫. ಕಾಲ : ಕ್ರಿ.ಶ. ೧೦ನೇ ಶತಮಾನ

೬. ಬಳಸಿದ ಶಿಲೆ : ಕಪ್ಪು ಹಸಿರು ಶಿಲೆ

ಎಡಗಾಲನ್ನು ಸಮವಾಗಿ ಮಡಚಿ ಬಲಗಾಲನ್ನು ಮೇಲಕ್ಕೆ ಮಡಚಿ ಸುಖಾಸನದಲ್ಲಿರುವ ಈ ಮೂರ್ತಿ ಚತುರ್ಭುಜಧಾರಿಯಾಗಿದ್ದು, ಕರಂಡ ಮುಕುಟಧಾರಿಯಾಗಿದೆ. ಗಣೇಶನ ಮೇಲಿನ ಬಲಗೈಯಲ್ಲಿ ಅಂಕುಶ ಹಾಗು ಮೇಲಿನ ಎಡಗೈಯನ್ನು ಮಡಚಿ ಹಿಡಿದಿದೆ. ಕೆಳಬಲಗೈಯನ್ನು ಕೆಳಗೆ ಬಾಗಿಸಿ, ಮಡಚಿದ ರೀತಿಯಲ್ಲಿದ್ದು, ಎಡಗೈಯಲ್ಲಿ ಮೋದಕ ಪಾತ್ರೆ, ಆ ಪಾತ್ರೆಗೆ ತಾಗಿ ಸೊಂಡಿಲಿದೆ. ಎದೆಯಲ್ಲಿ ಉರಗಬಂಧ, ಯಜ್ಞೋಪವೀತವಿದೆ. ಕಾಲು ಮತ್ತು ಕೈಗಳಲ್ಲಿ ಕಡಗ , ಕೇಯೂರಗಳಿವೆ. ಸುತ್ತಲೂ ಪ್ರಭಾವಳಿ ಇಲ್ಲ. ಪಾಣಿಪೀಠದ ಮೇಲೆ ಕುಳಿತಿರುವ ಹೆಚ್ಚಿನ ಅಲಂಕಾರವಿಲ್ಲದ ಈ ಮೂರ್ತಿಯ ಮಿತವಾದ ಅಲಂಕಾರಣೆ, ಆಯುಧಗಳನ್ನು ಹಿಡಿದ ರೀತಿ ಕಲ್ಯಾಣಿ ಚಾಲುಕ್ಯರ ಮೂರ್ತಿಗಳಿಗಿಂತ ಭಿನ್ನವಾಗಿದೆ. ಈ ಲಕ್ಷಣಗಳ ಆಧಾರದ ಮೇಲೆ ಸೇವುಣ ಆರಂಭ ಕಾಲದ್ದೆಂದು ಹೇಳಬಹುದು.

೧. ಊರು : ಮರವಂಜಿ

೨. ತಾಲೂಕು : ಚನ್ನಗಿರಿ

೩. ಹೆಸರು : ಗಣಪತಿ

೪. ಸ್ಥಳ : ಈಶ್ವರ ದೇವಾಲಯ

೫. ಕಾಲ : ಕ್ರಿ.ಶ. ೧೦ನೇ ಶತಮಾನ

೬. ಬಳಸಿದ ಶಿಲೆ : ಕಪ್ಪು

ಪೀಠದ ಮೇಲಿನ ಈ ಮೂರ್ತಿ ಸುಖಾಸನದಲ್ಲಿದ್ದು, ಚತುರ್ಭುಜಧಾರಿಯಾಗಿದೆ. ಕಿರೀಟಧಾರಿಯಾದ ಈ ಮೂರ್ತಿಯ ಕಾಲಿನಲ್ಲಿ ಕಾಲ್ಗಡಗ, ಉದರಬಂಧ, ಯಜ್ಞೋಪವೀತವಿದ್ದು, ಪೀಠದವರೆಗೆ ಇಳಿಬಿದ್ದ ಮಣಿಸರ, ಎದೆಗೆ ಸುತ್ತುವರಿದ ಸರ್ಪ, ಭುಜ ಕೀರ್ತಿ, ಕೇಯೂರ, ಹಾಗು ಕೈಗಡಗಳಿವೆ. ಮೇಲಿನ ಕೈಯಲ್ಲಿ ಅಂಕುಶ,

[illegible]

ಪಾಶವಿದ್ದು, ಕೆಳಗಿನ ಬಲಗೈ ಅಭಯ ಮುದ್ರೆಯಿಲ್ಲಿದೆ. ಕೆಳ ಎಡಗೈಯಲ್ಲಿ ಮೋದಕ ಪಾತ್ರೆಯಿದ್ದು, ಆ ಪಾತ್ರೆಯ ಮೇಲೆ ಚಾಚಿದ ಸೊಂಡಿಲಿದೆ. ಕಿರೀಟಧಾರಿಯಾದ ಈ ಮೂರ್ತಿಯ ಎರಡೂ ಭುಜದ ಮೇಲೆ ಜಟೆ ಇಳಿಬಿದ್ದಿದ್ದು, ಮೂರ್ತಿಯ ಹಿಂಭಾಗದಲ್ಲಿ ಶಿರಶ್ಚಕ್ರವಿದೆ. ಸುತ್ತಲು ಕೀರ್ತಿಮುಖದಿಂದ ಅಲಂಕಾರಯುಕ್ತ ವಾಗಿರುವ ಪ್ರಭಾವಳಿ ಇದೆ. ಈ ಮೂರ್ತಿಯು ಸೇವುಣ ಶಿಲ್ಪ ಶೈಲಿಗೆ ಹೋಲಿಕೆ ಯಾಗುತ್ತದೆ.

೧. ಊರು : ಮಸಣಕೆರೆ
೨. ತಾಲೂಕು : ಚನ್ನಗಿರಿ
೩. ಹೆಸರು : ಗಣಪತಿ
೪. ಸ್ಥಳ : ಈಶ್ವರ ದೇವಾಲಯದಲ್ಲಿ
೫. ಕಾಲ : ಕ್ರಿ. ಶ. ೧೦ನೇ ಶತಮಾನ
೬. ಬಳಸಿದ ಶಿಲೆ : ಬಳಪದ ಕಲ್ಲು

ಪೀಠದ ಮೇಲೆ ಆಸೀನನಾಗಿರುವ ಈ ಮೂರ್ತಿ ಸುಖಾಸನದಲ್ಲಿದೆ. ಮೇಲಿನ ಬಲಗೈಯಲ್ಲಿ ಅಕ್ಷಯಮಾಲೆ, ಎಡಗೈಯಲ್ಲಿ ಮೋದಕಪಾತ್ರೆ, ಆ ಪಾತ್ರೆಯ ಮೇಲೆ ಗಣೇಶನ ಸೊಂಡಿಲಿದೆ. ಕಾಲ್ಗಡಗ, ಪಾದ ಸರ ಉದರಬಂಧ, ಯಜ್ಞೋಪವೀತ , ಉದರವನ್ನು ಸುತ್ತುವರಿದ ಸರ್ಪ, ಎದೆಪಟ್ಟಿ, ಕಾಲಿನವರೆಗೆ ಇಳಿಬಿದ್ದ ಅಲಂಕಾರಯುಕ್ತ ಮಣಿಸರವಿದೆ. ಕಿರೀಟಮುಖಿಯಾದ ಈ ಮೂರ್ತಿಯ ಹಿಂದೆ ಶಿರಶ್ಚಕ್ರವಿದೆ. ಸುತ್ತಲೂ ಪ್ರಭಾವಳಿ ಇದ್ದು, ಅದು ಕೀರ್ತಿಮುಖದಿಂದ ಅಲಂಕಾರಯುಕ್ತವಾಗಿದೆ. ಈ ಮೂರ್ತಿಯು ಸೇವುಣ ಶಿಲ್ಪ ಶೈಲಿಗೆ ಹೋಲಿಕೆ ಯಾಗುವುದರಿಂದ ಇದು ಅವರ ಕಾಲದ್ದೆಂದು ಹೇಳಬಹುದು.

೧. ಊರು : ನೀಲಗುಂದ
೨. ತಾಲೂಕು : ಹರಪನಹಳ್ಳಿ
೩. ಹೆಸರು : ಗಣಪತಿ
೪. ಸ್ಥಳ : ಮುಕ್ತಿ ರಾಮೇಶ್ವರ ದೇವಾಲಯದಲ್ಲಿ
೫. ಕಾಲ : ಕ್ರಿ.ಶ. ೧೧ನೇ ಶತಮಾನ
೬. ಬಳಸಿದ ಶಿಲೆ : ಬಳಪದ ಶಿಲೆ

ಪೀಠದ ಮೇಲೆ ಸುಖಾಸೀನದಲ್ಲಿರುವ ಈ ಮೂರ್ತಿ ಸರಳರೀತಿಯಲ್ಲಿದೆ. ಮೇಲಿನ ಬಲಗೈನಲ್ಲಿ ಹಿಡಿದ ಆಯುಧ ಸ್ಪಷ್ಟವಾಗಿ ಗೋಚರಿಸುವುದಿಲ್ಲ. ಬೆರಳನ್ನು ಮಡಚಿದ ರೀತಿ ಇದೆ. ಕೆಳ ಎಡಗೈಯಲ್ಲಿ ಮೋದಕಪಾತ್ರೆ, ಕೈಗಳಲ್ಲಿ ಕಡಗವಿದ್ದು, ಕಾಲ್ಗಡಗ, ಯಜ್ಞೋಪವೀತಗಳಿವೆ. ಉಳಿದಂತೆ ಸರಳವಾಗಿದೆ. ಈ ಮೂರ್ತಿಯು ಕಲ್ಯಾಣಿ ಚಾಲುಕ್ಯ ಶೈಲಿಗೆ ಹೊಲಿಕೆಯಾಗುವುದರಿಂದ ಅವರ ಕಾಲಕ್ಕೆ ಸೇರಿದ್ದೆಂದು ಹೇಳಬಹುದು.

[illegible]

[illegible]

[illegible]

[illegible]

[illegible]

೧. ಊರು : ನಲ್ಲೂರು

೨. ತಾಲೂಕು : ಚನ್ನಗಿರಿ

೩. ಹೆಸರು : ಗಣಪತಿ

೪. ಸ್ಥಳ : ಕೇಶವನ ದೇವಾಲದಲ್ಲಿ

೫. ಕಾಲ : ಕ್ರಿ.ಶ. ೧೧ ನೇ ಶತಮಾನದ ಅಂತ್ಯಕಾಲ

೬. ಬಳಸಿದ ಶಿಲೆ : ಬಳಪದ ಶಿಲೆ

ಚರ್ತುಭುಜಧಾರಿಯಾದ ಈ ಮೂರ್ತಿಯು ಕರಂಡಮಕುಟಧಾರಿಯಾಗಿದ್ದು, ಸುಖಾಸನದಲ್ಲಿ ಪೀಠದ ಮೇಲೆ ಕುಳಿತಿದೆ., ಅಗಲವಾದ ಕಿವಿ, ಹಾವಿನ ಉದರ ಬಂಧ, ಮತ್ತು ಹಾವಿನ ನಡುಬಂಧ ಹಾಗು ಯಜ್ಞೋಪವೀತಗಳಿವೆ. ಮೇಲಿನ ಕೈಗಳಲ್ಲಿ ಅಂಕುಶ, ಪಾಶ, ಕೆಳಗಿನ ಬಲಗೈಯಲ್ಲಿ ಮೋದಕಪಾತ್ರೆ ಇರುವುದು ಈ ಗಣಪತಿಯ ವಿಶೇಷವಾಗಿದೆ. ಎಡಗೈಯಲ್ಲಿ ಇರುವ ಮೋದಕ ಪಾತ್ರೆಯಲ್ಲಿನ ಸಿಹಿಯನ್ನು ಸೊಂಡಿಲಿನಿಂದ ತಿನ್ನುವಂತೆ ತೋರಿಸಲಾಗಿದೆ. ಈ ಮೂರ್ತಿ ಲಕ್ಷಣದ ಆಧಾರದ ಮೇಲೆ ಇದನ್ನು ಕಲ್ಯಾಣಿ ಚಾಲುಕ್ಯರ ಕಾಲದ್ದೆಂದು ಹೇಳಬಹುದು.

ಸ್ಕಂದ ಮೂರ್ತಿಗಳು ಅಥವ ಕಾರ್ತಿಕೇಯ ಮೂರ್ತಿಗಳು :- ಸ್ಕಂದನನ್ನು ಕುಮಾರ, ಸುಬ್ರಮಣ್ಯ, ಕಾರ್ತಿಕೇಯ, ಷಣ್ಮುಖ ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಭಾರತದಾದ್ಯಂತ ಈ ದೇವತಾರಾಧನೆ ಕಂಡು ಬರುತ್ತಿದ್ದರೂ ಸಹ ಅದರಲ್ಲೂ ತಮಿಳುನಾಡು ಮತ್ತು ಕರ್ನಾಟಕದಲ್ಲಿ ಹೆಚ್ಚು ಪ್ರಚಲಿತದಲ್ಲಿದೆ[೩೯]. ಸುಪ್ರಭೇದ, ಅಮಸುಮದ್ ಭೇಧಾ, ಉತ್ತರಕಾಮಿಕಾ, ಪೂರ್ವಕರ್ಣ, ಆಗಮ, ಶ್ರೀ ತತ್ವನಿಧಿ, ಕುಮಾರ ತಂತ್ರ ಗ್ರಂಥಗಳಲ್ಲಿ ಈ ದೇವತಾರಾಧನೆಯ ಹಿನ್ನಲೆಯನ್ನು ತಿಳಿಸುತ್ತವೆ[೪೦]. ಶ್ರೀ ಶಂಕರಾಚಾರ್ಯರು ರಚಿಸಿದ 'ಸುಬ್ರಮಣ್ಯ ಭುಜಾಂಗ ಪ್ರಯಾತ ಸೂತ್ರ ' ಲಿಂಗದ ಜೊತೆಗೆ ಸುಬ್ರಮಣ್ಯನನ್ನು ಪೂಜಿಸಲಾಗುತ್ತದೆ ಎಂದು ಉಲ್ಲೇಖಿಸಿದೆ[೪೧].

ದಾವಣಗೆರೆ ಜಿಲ್ಲೆಗೆ ಸಂಬಂಧಿಸಿದಂತೆ ಕಾರ್ತಿಕೇಯ ಅಥವ ಕುಮಾರಸ್ವಾಮಿ ಶಿಲ್ಪಗಳು ದೇವಾಲಯದ ಭಿತ್ತಿಗಳಲ್ಲಿ ಅಲ್ಲಲ್ಲಿ ಕಾಣಿಸಿಕೊಂಡಿವೆ. ಆದರೆ ಪ್ರತ್ಯೇಕ ಮೂರ್ತಿಗಳು ದೊರೆತಿರುವುದು ಬಹುಕಡಿಮೆಯಾಗಿದ್ದರಿಂದ ಈ ದೇವತಾರಾಧನೆ ಕಡಿಮೆ ಇತ್ತೆಂದು ಹೇಳಬಹುದು.

೧. ಊರು : ಮತ್ತಿಗೆ

೨. ತಾಲೂಕು : ಹರಪನಹಳ್ಳಿ

೩. ಹೆಸರು : ಕುಮಾರಸ್ವಾಮಿ, ಕಾರ್ತಿಕೇಯ

೪. ಸ್ಥಳ : ಕುಮಾರಸ್ವಾಮಿ ದೇವಾಲಯ

೫. ಕಾಲ : ಕ್ರಿ.ಶ. ೧೧ನೇ ಶತಮಾನ

೬. ಬಳಸಿದ ಶಿಲೆ : ಬಳಪದಕಲ್ಲು

[illegible]

ಸ್ಥಳೀಯರಿಂದ ನವಿಲುಸ್ವಾಮಿ” ಎಂದು ಕರೆಸಿಕೊಳ್ಳುವ ಈ ಮೂರ್ತಿ ಮೂರು ಮುಖ , ನಾಲ್ಕು ಕೈಗಳನ್ನು ಹೊಂದಿದೆ. ಕರಂಡ ಮಕುಟ, ದಪ್ಪನೆಯ ಕಿವಿಯೋಲೆ, ಕೊರಳಲ್ಲಿ ಕೊರಳಹಾರ ಹಾಗು ಯಜ್ಞೋಪವೀತವಿದೆ. ಶೂಲ, ಧನಸ್ಸು, ಮೇಲಿನ ಕೈಗಳಲ್ಲಿದ್ದರೆ, ಅಕ್ಷಮಾಲೆ, ಮೋದಕ ಪಾತ್ರೆ, ಕೆಳಗಿನ ಎಡ, ಬಲ ಕೈಗಳಲ್ಲಿ ಹಿಡಿದಿದ್ದು ಕೈಗಳಲ್ಲಿ ಕಡಗ, ಭುಜಕೀರ್ತಿ, ಕೇಯೂರಗಳಿವೆ. [illegible]ಲಿನವರೆಗೆ ಕಚ್ಚೆಯಿದ್ದು, ಸುಖಾಸೀನನಾಗಿ ನವಿಲು ಮೇಲೆ ಕುಳಿತಂತೆ ಕೆತ್ತಲಾಗಿದೆ. ಕಾಲಿನಲ್ಲಿ ಕಡಗ ಇದೆ. ಹಾಗೆ ನವಿಲು ಕೂಡಾ ಅಲಂಕಾರಯುಕ್ತವಾಗಿದ್ದು, ಅದರ ತಲೆಭಾಗ ತ್ರುಟಿತವಾಗಿದೆ. ಸುತ್ತಲೂ ಪ್ರಭಾವಳಿಯಿಂದ ಅಲಂಕೃತವಾಗಿದೆ. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಕಲ್ಯಾಣಿ ಚಾಲುಕ್ಯರ ಕಾಲದ್ದೆಂದು ಹೇಳಬಹುದು.

೧. ಊರು : ಕಲ್ಲೇದೇವರಪುರ
೨. ತಾಲೂಕು : ಜಗಲೂರು
೩. ಹೆಸರು : ಕಾರ್ತಿಕೇಯ
೪. ಸ್ಥಳ : ತ್ರಿಕೂಟಲಿಂಗೇಶ್ವರದ ಮುಖಮಂಟಪದ ಮೇಲಿನ ಗೂಡಿನಲ್ಲಿ.
೫. ಕಾಲ : ಕ್ರಿ. ಶ. ಸು. ೧೦ನೇ ಶತಮಾನ
೬. ಬಳಸಿದ ಶಿಲೆ : ಕಪ್ಪು ಶಿಲೆ

ಈಚೆಗೆ ನಿರ್ಮಿಸಿದ ಮುಖಮಂಟಪದ ಮೇಲಿನ ಗೂಡಿನಲ್ಲಿ ಈ ಮೂರ್ತಿ ಇದ್ದು, ನವಿಲ ಮೇಲೆ ಆಸೀನವಾಗಿರುವ ಈ ಮೂರ್ತಿಯು ದ್ವಿಭುಜಧಾರಿಯಾಗಿದೆ. ಪದ್ಮಾಸನದಲ್ಲಿ ಕುಳಿತು ಧ್ಯಾನಾಸಕ್ತವಾಗಿರುವ ಈ ಮೂರ್ತಿಯು ಕರಂಡ ಮಕುಟಧಾರಿಯಾಗಿದೆ. ಕಿವಿಯಲ್ಲಿ ಕುಂಡಲ, ಕೊರಳಲ್ಲಿ ಕಂಠಹಾರ ಹಾಗು ಯಜ್ಞೋಪವೀತಗಳಿವೆ. ಸುತ್ತಲೂ ಪ್ರಭಾವಳಿ ಇಲ್ಲ. ಪಾಣಿಪೀಠದ ಬಿಂಬದಲ್ಲಿ ಗರುಡನ ಶಿಲ್ಪವಿದೆ. ಇದರಿಂದಾಗಿ ಪಾಣಿಪೀಠವು ಮೂಲತಃ ಬೇರೆ ಮೂರ್ತಿಯದೆಂದು ತಿಳಿಯಬಹುದು. ಇದೇ ಲಕ್ಷಣವುಳ್ಳ ಮೂರ್ತಿಗಳು ನಂದಿತಾವರೆ ಮತ್ತು ವಾಸನಗಳಲ್ಲಿ ಕಂಡುಬರುತ್ತವೆ. ಮೂರ್ತಿ ಲಕ್ಷಣದ ಆಧಾರದ ಮೇಲೆ ಇದು ಕಲ್ಯಾಣಿ ಚಾಲುಕ್ಯರ ಕಾಲದ್ದೆಂದು ಹೇಳಬಹುದು.

ಶೈವದ್ವಾರ ಪಾಲಕ ಮೂರ್ತಿಗಳು :- ದೇವಾಲಯದ ಪ್ರವೇಶದ್ವಾರದ ಇಲ್ಲವೇ ಅಂತರಾಳದ ಎಡಬಲದಲ್ಲಿ ದ್ವಾರಪಾಲಕರಿರುವುದು ಸಾಮಾನ್ಯ. ಈ ದ್ವಾರಪಾಲಕರನ್ನು ಆಯಾ ಮುಖ್ಯದೇವರ ಸೇವಕರೆಂದು ಕರೆಯಲಾಗುತ್ತದೆ. ದಾವಣಗೆರೆ ಜಿಲ್ಲೆಯಲ್ಲೂ ಶೈವ ದೇವಾಲಯಗಳ ದ್ವಾರದ ಎಡಬಲದಲ್ಲಿ ಅಭಯ, ವರದ ಹಸ್ತರಾಗಿ, ತ್ರಿಶೂಲ, ಡಮರುಗ ಹಿಡಿದು ನಿಂತಿರುವ ದ್ವಿಭುಜ ಇಲ್ಲವೇ ಚರ್ತುಭುಜವುಳ್ಳ ಶೈವ ದ್ವಾರಪಾಲಕ ಶಿಲ್ಪಗಳು ಕಾಣಬರುತ್ತವೆ.

ಹರಿಹರ ತಾಲೂಕಿನ ನಂದಿಗುಡಿಯಲ್ಲಿ ಎರಡು ಸುಂದರ ಪ್ರತ್ಯೇಕ ಶೈವ ದ್ವಾರಪಾಲ ಶಿಲ್ಪಗಳಿವೆ[೪೨]. ಅವುಗಳ ವಿವರಣೆ ಹೀಗಿದೆ:

೧. ಊರು : ನಂದಿಗುಡಿ
೨. ತಾಲೂಕು : ಹರಿಹರ
೩. ಹೆಸರು : ಹರಿಹರ
೪. ಸ್ಥಳ : ಈಶ್ವರ (ಬಸವೇಶ್ವರ) ದೇವಾಲಯದಲ್ಲಿ
೫. ಕಾಲ : ಕ್ರಿ.ಶ. ೧೧ನೇ ಶತಮಾನ
೬. ಬಳಸಿದ ಶಿಲೆ : ಹಸಿರು ಛಾಯೆಯ ಬಳಪದ ಕಲ್ಲು (ಶಿಸ್ಟ್)

ದೇವಾಲಯದ ಅಂತರಾಳ ದ್ವಾರದ ಎಡ ಮತ್ತು ಬಲದಲ್ಲಿ ಎರಡು ಶೈವ ಮೂರ್ತಿಗಳಿದ್ದು ಅವು ಅಲಂಕಾರ ಹಾಗೂ ಸೂಕ್ಷ್ಮತೆಯ ದೃಷ್ಟಿಯಿಂದ ಮಹತ್ವದ ಸ್ಥಾನ ಪಡೆದಿವೆ.

ಬಲಭಾಗದ ಮೂರ್ತಿಯು ಚತುರ್ಭುಜಧಾರಿಯಾಗಿದ್ದು, ದ್ವಿಭಂಗದಲ್ಲಿ ಸ್ಥಾನಿಕವಾಗಿದೆ. ಕಿರೀಟ ಮಕುಟಧಾರಿಯಾದ ಈ ಮೂರ್ತಿಯ ಕಿವಿಗಳಲ್ಲಿ ಕುಂಡಲಗಳಿವೆ. ನೀಳವಾದ ಕಣ್ಣು, ಮಂದಹಾಸ ಬೀರುತ್ತಿರುವ ಮುಖ, ಕೋರೆಹಲ್ಲುಗಳಿದ್ದು, ಜಟೆಯು ಭುಜದ ಮೇಲೆ ಇಳಿಬಿದ್ದಿದೆ. ಕೊರಳಲ್ಲಿ ಕಂಠಿಹಾರ, ಎದೆಯ ಮೇಲೆ ಅನೇಕ ಬಗೆಯ ಹಾರಗಳಿದ್ದು, ಯಜ್ಞೋಪವೀತವಿದೆ. ಮೊಣಕಾಲಿನಿಂದ ಕೆಳಗೆ ಇಳಿಬಿದ್ದಿರುವ ಹಾರವಿದೆ.

ಸರ್ಪ ಕೇಯೂರ, ಕೈಕಡಗಗಳಿದ್ದು, ಮೇಲಿನ ಬಲಗೈಯಲ್ಲಿ ತ್ರಿಶೂಲ, ಎಡಗೈಯಲ್ಲಿ ಡಮರುಗ, ಕೆಳಬಲಗೈ ಅಭಯ ಮುದ್ರೆಯಲ್ಲಿದ್ದು, ಕೆಳ ಎಡಗೈಯಲ್ಲಿ ಗದೆ ಇದೆ. ಗದೆ ಮತ್ತು ತ್ರಿಶೂಲಗಳಿಗೆ ಸರ್ಪಗಳು ಸುತ್ತುವರಿದು ಹೆಡೆ ಬಿಚ್ಚಿವೆ[೪೩].

ನಡುವಿನಲ್ಲಿ ನಡುಬಂಧ, ಮಣಿಸರಗಳಿಂದ ಅಲಂಕೃತವಾದ ಉಡುಪು, ಎರಡು ಕಾಲಿನ ಮಧ್ಯ ಇಳಿಬಿದ್ದ ಇಳಿಬಟ್ಟೆ ಇದೆ. ಕಾಲಿನಲ್ಲಿ ಕಾಲ್ಕಡಗ, ಪಾದಸರಗಳಿವೆ. ತೋರಣವನ್ನು ತುಂಬಾ ಸೂಕ್ಷ್ಮವಾಗಿ ಲತಾ-ಪದ್ಮಗಳಿಂದ ಅಲಂಕರಿಸಿರುವುದು ವಿಶೇಷವಾಗಿದೆ. ಈ ಎಲ್ಲಾ ಲಕ್ಷಣಗಳನ್ನು ಎಡಭಾಗದ ಮೂರ್ತಿಯು ಹೊಂದಿದ್ದು, ಸಾಮಿಪ್ಯತೆಯನ್ನು ಪಡೆದುಕೊಂಡಿದೆಯಾದರೂ ಕೈಯಲ್ಲಿ ಹಿಡಿದಿರುವ ಆಯುಧ ಮತ್ತು ಮುದ್ರೆಯಲ್ಲಿ ಸ್ವಲ್ಪ ವ್ಯತ್ಯಾಸ ಕಾಣಬರುತ್ತದೆ. ಬಲಗಾಲಿನ ಮೇಲೆ ದೇಹದ ಭಾರವನ್ನೆಲ್ಲಾ ಬಿಟ್ಟು, ಸ್ಥಾನಿಕವಾಗಿರುವ ಈ ಮೂರ್ತಿಯ ಮೇಲಿನ ಎಡಬಲದಲ್ಲಿ ತ್ರಿಶೂಲ ಮತ್ತು ಡಮರಿದೆ. ಕೆಳಬಲಗೈಯಲ್ಲಿ ಗದೆ ಇದ್ದು, ಎಡಗೈ ಅಭಯ ಮುದ್ರೆಯಲ್ಲಿರುವುದು ಈ ಮೂರ್ತಿಯ ವಿಶೇಷತೆ.

[illegible]

[illegible]

[illegible]

[illegible]

[illegible]

ಸ್ಥಾನಿಕ ಮೂರ್ತಿಗಳು ಇಷ್ಟೊಂದು ಅಲಂಕಾರಯುಕ್ತವಾಗಿ ಹಾಗು ಎತ್ತರವಾಗಿ (ಸುಮಾರು ೬ ಅಡಿ) ಇರುವ ಮೂರ್ತಿಗಳು ಇಡೀ ಜಿಲ್ಲೆಯಲ್ಲಿ ಎಲ್ಲಿಯೂ ದೊರೆಯುವುದಿಲ್ಲ. ಉಬ್ಬುಕೆತ್ತನೆಯ ಪ್ರಾಧಾನ್ಯ, ಅಂಗಾಂಗಳನ್ನು ಬಿಡಿಸಿದ ರೀತಿ, ಕಾರ್ಯಕ್ಕೆ ತಕ್ಕ ಮುಖಭಾಗ, ಉಬ್ಬಿದ ಗಲ್ಲ, ಇವುಗಳನ್ನು ಆಧಾರವಾಗಿಟ್ಟುಕೊಂಡು ಈ ಮೂರ್ತಿ ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಸೇರಿದೆಂದು ಹೇಳಬಹುದು ಇಡೀ ಜಿಲ್ಲೆಯಲ್ಲೇ ಎತ್ತರ ಹಾಗೂ ಅಲಂಕಾರ ದೃಷ್ಟಿಯಿಂದ ಮತ್ತು ಸೂಕ್ಷ್ಮ ಕಲಾ ನೈಪುಣ್ಯತೆಯ ದೃಷ್ಟಿಯಿಂದ ಈ ಮೂರ್ತಿಗಳು ಸುಂದರವಾಗಿವೆ ಎಂದು ಹೇಳಿದರೆ ತಪ್ಪಾಗಲಾರದು.

೫.೧.೨. ವೈಷ್ಣವ ಪಂಥೀಯ ಮೂರ್ತಿಗಳು :-

ಶೈವಧರ್ಮದಂತೆ ವೈಷ್ಣವ ಧರ್ಮವು ಕೂಡಾ ಪ್ರಾಚೀನ ಕಾಲದಿಂದಲೂ ಜನರಿಂದ ಮನ್ನಣೆಪಡೆದ ಧಾರ್ಮಿಕ ಪಂಥ. ಇಲ್ಲಿ ವಿಷ್ಣುವೇ ಪ್ರಧಾನವಾಗಿದ್ದು, ಇಪ್ಪತ್ತು ನಾಲ್ಕು ರೂಪ (ಚರ್ತುವಂಶತಿ) ಮತ್ತು ಹತ್ತು ಅವತಾರಗಳಲ್ಲಿ ಪೂಜಿಸಲಾಗುತ್ತದೆ. ಬೃಹತ್ ಸಂಹಿತೆ, ಮತ್ಸ್ಯಪುರಾಣ, ವಿಹಜೇಂದ್ರ ಸಂಹಿತೆ, ವಿಷ್ಣು ಧರ್ಮೋತ್ತರ ಪುರಾಣ , ಸಮರಾಂಗಣ ಸೂತ್ರಧಾರ. ಮೊದಲಾದ ಗ್ರಂಥಗಳು ಈ ಮೂರ್ತಿ ಆರಾಧನೆ ಮತ್ತು ಹಿನ್ನಲೆಯನ್ನು ಉಲ್ಲೇಖಿಸುತ್ತವೆ[೬೫]. ಈ ಪಂಥದಲ್ಲಿ ಸ್ಥಾನಿಕ , ಆಸೀನ, ಶಯನ, ವಾಹನಾರೂಢ, ದೇವಿ ಸಹಿತ ಮೂರ್ತಿ ದಶಾವತಾರ, ಚರ್ತುವಂಶತಿ ಮೂರ್ತಿಗಳೆಂಬ ವಿಧಗಳಿವೆ. ಪ್ರಸ್ತುತ ದಾವಣಗೆರೆ ಜಿಲ್ಲೆಗೆ ಸಂಬಂಧಿಸಿದ ಸ್ಥಾನಿಕ ಮೂರ್ತಿಗಳೇ ಹೆಚ್ಚಾಗಿದ್ದು, ಅವುಗಳಲ್ಲಿ ವಿಷ್ಣು, ಕೇಶವ ,ಜನಾರ್ಧನ, ಮಾದವ ಮೂರ್ತಿಗಳು ಪ್ರಮುಖವಾಗಿವೆ. ಜೊತೆಗೆ ದೇವಿ ಸಹಿತ ಆಸೀನ ಮೂರ್ತಿಗಳು ಅಲ್ಲಲ್ಲಿ ಕಂಡುಬರುತ್ತವೆ. ಹಾಗೆಯೇ ಶಯನ ಮೂರ್ತಿಗಳು ದೊರೆತಿದ್ದು, ಜೊತೆಗೆ ಗರುಡ, ರತಿ-ಮನ್ಮಥ ಮೂರ್ತಿಗಳು ದೊರೆತಿವೆ.

ವಿಷ್ಣು :- ಅಗ್ನಿ ಪುರಾಣ, ಭಾಗವತದ ದಶಮಾಸಕಾಂಡ, ಹರಿವಂಶ, ವಿಷ್ಣು ಪುರಾಣ, ಮಹಾಭಾರತ, ಬ್ರಹ್ಮವೈವರ್ಥ ಪುರಾಣಗಳು ಕೃಷ್ಣನ ಅವತಾರ, ಆರಾಧನೆ ಕುರಿತು ವಿಶ್ಲೇಷಿಸುತ್ತವೆ . ಚದುರಗೊಳ, ಕಕ್ಕರಗೊಳ್ಳ, ನೀಲಗುಂದ, ಬೆಳಗುತ್ತಿ, ಹಿರೇಕೊಗಲೂರು, ಹಲವಾಗಲು, ಸಾರಥಿ , ನಂದಿತಾವರೆ, ದೇವರಹಳ್ಳಿ, ಕೂಡದಗುಡ್ಡ, ಕೊಣಚಗಲ್, ದಾಗಿನಕಟ್ಟೆ, ಜಗಳಿ, ಚಿಗಟೇರಿ, ಅರಸಿಕೆರೆ, ಗುಡಿಹಳ್ಳಿ,ಮಾಯಕೊಂಡ , ನಿರ್ಥಡಿ ಮೊದಲಾದೆಡೆ ಶಯನ, ಸ್ಥಾನಿಕ. ದೇವಿಸಹಿತ ಆಸೀನ ಮೂರ್ತಿಗಳು ಕಂಡು ಬರುತ್ತವೆ.

ಅನಂತ ಶಯನ ಮೂರ್ತಿಗಳು :-

೧. ಊರು : ಚದುರಗೊಳ

೨. ತಾಲೂಕು : ಜಗಲೂರು

೩. ಹೆಸರು : ಅನಂತಶಯನ ವಿಷ್ಣು

೪. ಸ್ಥಳ : ಕಲ್ಲೇಶ್ವರ ದೇವಾಲಯದ ಸಮೀಪದಲ್ಲಿನ ಜಮೀನಿನಲ್ಲಿದೆ

೫. ಕಾಲ : ಕ್ರಿ.ಶ. ೧೧ನೇ ಶತಮಾನ

೬. ಬಳಸಿದ ಶಿಲೆ : ಕಪ್ಪು ಶಿಲೆ

ಪೀಠದ ಮೇಲೆ ಏಳು ಹೆಡೆ ಸರ್ಪವಿದ್ದು, (ಈಗ ನಾಲ್ಕು ಮಾತ್ರ ಉಳಿದ್ದಿದ್ದು, ಉಳಿದವು ತ್ರುಟಿತವಾಗಿವೆ), ಅದರ ಮೇಲುಭಾಗದಲ್ಲಿ ವಿಷ್ಣುವು ಎರಡು ಕಾಲನ್ನು ಚಾಚಿ ಶಯನನಾಗಿದ್ದಾನೆ. ನಾಲ್ಕು ಕೈಗಳಿದ್ದು, ಅವು ತ್ರುಟಿತವಾಗಿವೆ. ಕಿರೀಟಮುಖಿಯಾದ ಈತನ ತಲೆಗೆ ಮೇಲಿನ ಬಲಗೈಯನ್ನು ಒತ್ತಿ ಹಿಡಿದಿದೆ. ಉಳಿದ ಕೈಗಳಲ್ಲಿ ಹಿಡಿದ ಆಯುಧಗಳು ಗೋಚರಿಸುವುದಿಲ್ಲ. ಭುಜಕೀರ್ತಿ, ಕೇಯೂರಗಳಿವೆ. ಕಿವಿಯಲ್ಲಿ ಪತ್ರ ಕುಂಡಲ, ಕೊರಳಲ್ಲಿ ಕಂಠಿಹಾರ, ಉದರ ಬಂಧ, ಯಜ್ಞೋಪವೀತ, ಕಾಲಿನವರೆಗೆ ಇಳಿಬಿದ್ದ ವೈಜಯಂತಿ ಹಾರವಿದೆ. ನಾಭಿಯಿಂದ ಹೊರಬಂದ ಪದ್ಮದ ಮೇಲಿದ್ದ ಬ್ರಹ್ಮ ಶಿಲ್ಪ ಇಲ್ಲಿ ಕಾಣಬರುತ್ತಿಲ್ಲ. ಮೊಣಕಾಲಿನವರೆಗೆ ಇಳಿಬಿದ್ದ ಪಂಚೆಯನ್ನು ಮಣಿ ಹಾಗು ಆಭರಣಗಳಿಂದ ಅಲಂಕರಿಸಲಾಗಿದೆ. ಕಾಲ್ಗಡಗ, ಪಾದಸರಗಳಿಂದ ಅಲಂಕೃತವಾದ ಈ ಕಾಲಿನ ಬಳಿ ಕೇವಲ ಶ್ರೀದೇವಿಯೊಬ್ಬಳೇ ಕಾಣಬರುತ್ತಿದ್ದು, ಭೂದೇವಿಯು ತ್ರುಟಿ ತವಾಗಿರಬೇಕೆನಿಸುತ್ತದೆ. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಕಲ್ಯಾಣಿ ಚಾಲುಕ್ಯರ ಕಾಲದ್ದೆಂದು ಹೇಳಬಹುದು.

೧. ಊರು : ನೀಲಗುಂದ

೨. ತಾಲೂಕು : ಹರಪನಹಳ್ಳಿ

೩. ಹೆಸರು : ಅನಂತಶಯನ ಮೂರ್ತಿ

೪. ಸ್ಥಳ : ಅನಂತಶಯನಗುಡಿಯಲ್ಲಿ

೫. ಕಾಲ : ಕ್ರಿ.ಶ. ೧೧ನೇ ಶತಮಾನ

೬. ಬಳಸಿದ ಶಿಲೆ : ಬಳಪದ ಶಿಲೆ

ಸರ್ಪದ ಮೇಲೆ ತನ್ನ ಎರಡೂ ಕಾಲನ್ನು ಚಾಚಿ ಶಯನನಾಗಿರುವ ಈ ಮೂರ್ತಿ (ಅನಂತಶಯನ) ದ್ವಿಭುಜಧಾರಿಯಾಗಿದೆ. ವಿಷ್ಣು ತನ್ನ ಬಲಗೈಯನ್ನು ತಲೆಗೆ ಆಧಾರವಾಗಿಟ್ಟುಕೊಂಡಂತೆ ಹಾಗು ತನ್ನ

ಎಡಗೈಯನ್ನು ಎಡತೊಡೆ(ಕಾಲಿನ) ಮೇಲೆ ಚಾಚಿರುವ ರೀತಿಯಲ್ಲಿ ಶಿಲ್ಪಿ ಕೆತ್ತಿದ್ದಾನೆ. ಎಡಗಾಲು ತ್ರುಟಿತವಾಗಿದ್ದು ಮತ್ತು ಬ್ರಹ್ಮ ಭೂದೇವಿಯರು ಇಲ್ಲಿ ಕಾಣಬರುತ್ತಿಲ್ಲ. ಕಿರೀಟ ಮಕುಟಧಾರಿಯಾದ ಈ ಮೂರ್ತಿ ಕಿವಿಯೋಲೆ, ಕಂಠಹಾರ, ಯಜ್ಞೋಪವೀತವನ್ನು ಧರಿಸಿದೆ. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಕಲ್ಯಾಣಿ ಚಾಲುಕ್ಯರ ಕಾಲದ್ದೆಂದು ಹೇಳಬಹುದು.

ಸ್ಥಾನಿಕ ವೈಷ್ಣವ ಮೂರ್ತಿಗಳು :-

ವಿಷ್ಣುವಿನ ಇಪ್ಪತ್ತನಾಲ್ಕು ರೂಪದ ಮೂರ್ತಿಗಳು ಸಾಮಾನ್ಯವಾಗಿ ಶಂಖ, ಚಕ್ರ, ಗದಾ ಪದ್ಮಗಳನ್ನು ಮೇಲಿನ ಇಲ್ಲವೇ , ಕೆಳಗಿನ ಕೈಗಳಲ್ಲಿ ಹಿಡಿದು ನಿಂತಿರುವ ಭಂಗಿಯಲ್ಲಿರುತ್ತವೆ. ಕಿರೀಟ, ಮಕುಟ, ಕಂಠಾಭರಣ, ಮಕರಕುಂಡಲ, ಯಜ್ಞೋಪವೀತ, ದೋತಿಯನ್ನು ಧರಿಸಿ ಸಮಭಂಗಿಯಲ್ಲಿರುತ್ತವೆ. ಕೇವಲ ವಿಷ್ಣುವಷ್ಟೇ ಅಲ್ಲದೆ ಕೇಶವ, ವೇಣುಗೋಪಾಲ, ಮಾದವ, ಜನಾರ್ಧನ, ಉಗ್ರ ನರಸಿಂಹ ಮೂರ್ತಿಗಳು ಈ ಜಿಲ್ಲೆಯ ಕಾಣಬರುತ್ತವೆ.

೧. ಊರು : ಚಿಗಟೇರಿ
೨. ತಾಲೂಕು : ಹರಪನಹಳ್ಳಿ
೩. ಹೆಸರು : ಕೇಶವ
೪. ಸ್ಥಳ : ರಾಮಲಿಂಗೇಶ್ವರ ದೇವಾಲಯಲ್ಲಿ
೫. ಕಾಲ : ಕ್ರಿ.ಶ. ೧೧ನೇ ಶತಮಾನದ ಅಂತ್ಯ ಕಾಲ
೬. ಬಳಸಿದ ಶಿಲೆ : ಬಳಪದ ಕಲ್ಲು

ಚತುರ್ಭುಜಧಾರಿಯಾದ ವಿಷ್ಣು, ಸಮಭಂಗಿಯಲ್ಲಿ ನಿಂತಿದ್ದು, ಕಿರೀಟ ಮಕುಟಧಾರಿಯಾಗಿದೆ. ಕಿರೀಟದ ಹಿಂಬದಿಗೆ ಶಿರಶ್ಚಕ್ರವಿದ್ದು, ಕಿವಿಯಲ್ಲಿ ಮಕರಕುಂಡಲಗಳಿವೆ. ಕೊರಳಲ್ಲಿ ಕಂಠಾಭರಣ ಹಾಗು ಅನೇಕ ಬಗೆಯ ಹಾರಗಳಿವೆ. ಅಷ್ಟೇ ಅಲ್ಲದೆ ಉದರಬಂಧ, ಯಜ್ಞೋಪವೀತ, ಭುಜಕೀರ್ತಿ, ಕೇಯೂರ, ಕೈಕಡಗಗಳಿಂದ ಅಲಂಕೃತವಾಗಿದೆ. ಮೇಲಿನ ಬಲಗೈ ಮಾತ್ರ ಕಾಣುತ್ತಿದ್ದು, ಹಿಡಿದ ಆಯುಧ ತ್ರುಟಿತವಾಗಿದೆ. ಹಾಗೆಯೇ ಉಳಿದ ಮೂರು ಕೈಗಳು ಸಹ ತ್ರುಟಿತವಾಗಿವೆ. ಧೋತಿಯನ್ನು ವಿವಿಧ ಮಣಿಸರಗಳಿಂದ ಅಲಂಕರಿಸಲಾಗಿದೆ. ಕಾಲಿನಲ್ಲಿ ಕಾಲ್ಗಡಗಳಿವೆ. ಈ ಮೂರ್ತಿಯ ಕಾಲಿನ ಎಡಬಲದಲ್ಲಿ ಅಲಂಕೃತ ಚಾಮರಧಾರಿಣಿಯರಿದ್ದಾರೆ. ವಿಷ್ಣುವಿನ ದಶಾವತಾರಗಳಾದ ಮತ್ಸ, ಕೂರ್ಮ, ವರಹ, ನರಸಿಂಹ, ವಾಮನ, ಪರಶುರಾಮ, ಶ್ರೀ ರಾಮ, ಕೃಷ್ಣ, ಬುದ್ಧ, ಕಲ್ಕಿ ಅವತಾರಗಳನ್ನು ಪ್ರಭಾವಳಿಯಲ್ಲಿ ಸರ್ಪತೋರಣದ ಮಧ್ಯದಲ್ಲಿ ಕೆತ್ತಿರುವುದು ಈ ಮೂರ್ತಿ ವಿಶೇಷತೆ. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಕಲ್ಯಾಣಿ ಚಾಲುಕ್ಯರ ಅಂತ್ಯ ಕಾಲದ್ದೆಂದು ಹೇಳಬಹುದು.

೧. ಊರು : ಬಾಗಳಿ

೨. ತಾಲೂಕು : ಹರಪನಹಳ್ಳಿ

೩. ಹೆಸರು : ಕೇಶವ

೪. ಸ್ಥಳ : ಚನ್ನಬಸವೇಶ್ವರ ದೇವಾಲಯ

೫. ಕಾಲ : ಕ್ರಿ.ಶ. ೧೧ನೇ ಶತಮಾನ

೬. ಬಳಸಿದ ಶಿಲೆ : ಬಳಪದ ಶಿಲೆ

ಚರ್ತುಭುಜಧಾರಿಯಾದ ಈ ಮೂರ್ತಿ ಸಮಭಂಗಿಯಲ್ಲಿ ನಿಂತಿದೆ. ಕೀರೀಟ ಮಕುಟಧಾರಿಯಾದ ಈ ಮೂರ್ತಿಯ ಕಿವಿಯಲ್ಲಿ ಮಕರ ಕುಂಡಲಗಳಿದ್ದು, ಹಿಂಬಧಿಯಲ್ಲಿ ಶಿರಶ್ಚಕ್ರವಿದೆ. ತಲೆಗೂದಲು ಭುಜದ ಎರಡೂ ಬದಿಗೂ ಇಳಿಬಿದ್ದಿವೆ. ಕೊರಳಲ್ಲಿ ಕಂಠಹಾರ ಹಾಗು ವಿಭಿನ್ನ ಬಗೆಯ ಹಾರಗಳಿದ್ದು, ಉದರಬಂಧ, ಯಜ್ಞೋಪವೀತ, ಮೊಣಕಾಲಿನಿಂದ ಇಳಿಬಿದ್ದ ವೈಜಯಂತಿ ಹಾರವನ್ನು ಈ ಮೂರ್ತಿ ಧರಿಸಿದೆ. ಕೈಗಳಲ್ಲಿ ಕೇಯೂರ, ಕೈಗಡಗಗಳಿದ್ದು, ಶಂಕ, ಚಕ್ರಗಳನ್ನು ಮೇಲಿನ ಕೈಗಳಲ್ಲಿ ಹಿಡಿದಿದೆ. ಕೆಳಗಿನ ಕೈಗಳು ಅರ್ಧಕ್ಕೆ ತ್ರುಟಿತವಾಗಿರುವುದರಿಂದ ಆ ಕೈಗಳಲ್ಲಿ ಹಿಡಿದ ಆಯುಧಗಳು ಕಾಣಬರುವುದಿಲ್ಲ. ಧೋತಿ ವಿಭಿನ್ನ ಬಗೆಯ ಮಣಿ ಸರಗಳಿಂದ ಅಲಂಕೃತಗೊಂಡಿದ್ದು, ಕಾಲಿನಲ್ಲಿ ಕಡಗಗಳಿವೆ. ಎಡ ಮತ್ತು ಬಲಗಾಲಿನ ಬಳಿ ಅಲಂಕೃತಗೊಂಡ ಚಾಮರಧಾರಿಣಿಯರಿದ್ದಾರೆ. ಪ್ರಭಾವಳಿಯಲ್ಲಿ ಕೃಷ್ಣನ ದಶಾವತಾರಗಳನ್ನು ಕೆತ್ತುವುದರ ಮೂಲಕ ಅದನ್ನು ಅಲಂಕಾರಯುಕ್ತವಾಗಿ ಕಾಣುವಂತೆ ಶಿಲ್ಪಿ ತೋರಿಸಿದ್ದಾನೆ. ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಇದನ್ನು ಕಲ್ಯಾಣಿ ಚಾಲುಕ್ಯರ ಕಾಲದ್ದೆಂದು ಹೇಳಬಹುದು.

೧. ಊರು : ಹಲವಾಗಲು

೨. ತಾಲೂಕು : ಹರಪನಹಳ್ಳಿ

೩. ಹೆಸರು : ಕೇಶವ

೪. ಸ್ಥಳ : ಕಲ್ಲೇಶ್ವರ ದೇವಾಲಯದಲ್ಲಿ

೫. ಕಾಲ : ಕ್ರಿ.ಶ. ೧೧ನೇ ಶತಮಾನ

೬. ಬಳಸಿದ ಶಿಲೆ : ಕಪ್ಪು ಶಿಲೆ

ಚರ್ತುಭುಜಧಾರಿಯಾದ ಈ ಮೂರ್ತಿ ಸಮಭಂಗಿಯಲ್ಲಿ ನಿಂತಿದೆ. ಕಿರೀಟ ಮಕುಟಧಾರಿಯಾದ ಮೂರ್ತಿಯ ಹಿಂಭಾಗದಲ್ಲಿ ಶಿರಶ್ಚಕ್ರವಿದ್ದು, ತಲೆಗೂದಲು ಎರಡು ಭುಜದ ಮೇಲೆ ಇಳಿಬಿದ್ದಿವೆ. ಕಿವಿಯಲ್ಲಿ ಸರ್ಪಕುಂಡಲಗಳಿದ್ದು, ಕೊರಳಲ್ಲಿ ಅನೇಕ ಬಗೆಯ ಹಾರಗಳಿವೆ. ಉದರಬಂಧ, ಯಜ್ಞೋಪವೀತ ಹಾಗು ಉಪವೀತವಿದ್ದು, ಕೈಗಳಲ್ಲಿ ಕೇಯೂರ, ಕಡಗಳಿವೆ. ಮೇಲಿನ ಕೈಗಳಲ್ಲಿ ಶಂಖ,ಚಕ್ರಗಳಿದ್ದು, ಕೆಳಗಿನ ಬಲಗೈ

ಮುಂಗೈಭಾಗ ಹಾಗು ಎಡಗೈ ತ್ರುಟಿತವಾಗಿದೆ. ಕಾಲಿನಲ್ಲಿ ಕಡಗಗಳಿದ್ದು, ಕಾಲಿನ ಬಳಿ ಚಾಮರಧಾರಿ ಸ್ತ್ರೀ ಶಿಲ್ಪಗಳಿವೆ. ಸರ್ಪ ತೋರಣಯುಕ್ತ ಪ್ರಭಾವಳಿ ಇದ್ದು, ಕೆಳಗಿನ ಪೀಠ ಬಿಂಬದಲ್ಲಿ ಗರುಡ ಪದ್ಮಾಸನದಲ್ಲಿದ್ದು, ಅಂಜಲಿಬದ್ಧನಾಗಿದ್ದಾನೆ. ಈ ಕೇಶವ ಮೂರ್ತಿಯು ಕಲ್ಯಾಣಿ ಚಾಲುಕ್ಯರ ಶಿಲ್ಪ ಶೈಲಿಗೆ ಹೋಲಿಕೆಯಾಗುವುದರಿಂದ ಅವರ ಕಾಲದ್ದೆಂದು ಹೇಳಬಹುದು.

೧. ಊರು : ಚನ್ನಗಿರಿ
೨. ತಾಲೂಕು : ಚನ್ನಗಿರಿ
೩. ಹೆಸರು : ಕೇಶವ
೪. ಸ್ಥಳ : ಈಶ್ವರ (ಸ್ಥಳೀಯರು ಬಸವಣ್ಣ) ದೇವಸ್ಥಾನದಲ್ಲಿ
೫. ಕಾಲ : ಕ್ರಿ.ಶ. ೧೧ನೇ ಶತಮಾನದ ಕೊನೆಯ ಭಾಗ
೬. ಬಳಸಿದ ಶಿಲೆ : ಕಪ್ಪು

ಚತುರ್ಭುಜಧಾರಿಯಾದ ಈ ಮೂರ್ತಿ ಸಮಭಂಗಿಯಲ್ಲಿ ಸ್ಥಾನೀಕವಾಗಿದೆ. ಕಿರೀಟ ಮಕುಟಧಾರಿಯಾದ ಈ ಮೂರ್ತಿಗೆ ಶಿರಶ್ಚಕ್ರವಿದ್ದು, ಕಿವಿಯಲ್ಲಿ ಕುಂಡಲಗಳಿವೆ. ಕೊರಳಲ್ಲಿ ಕಂಠಾಭರಣ ಹಾಗು ವಿವಿಧ ಬಗೆಯ ಹಾರಗಳಿವೆ. ಹಾಗೇ ಉದರಬಂಧ, ಯಜ್ಞೋಪವೀತ, ಮೊಣಕಾಲವರೆಗೆ ಇಳಿಬಿದ್ದ ಅಲಂಕಾರಯುಕ್ತ ಉಪವೀತ ಮತ್ತು ವೈಜಯಂತಿಮಾಲೆ ಇದೆ. ಮೇಲಿನ ಕೈಗಳಲ್ಲಿ ಶಂಖ, ಚಕ್ರ ಹಾಗು ಕೆಳಗಿನ ಬಲಗೈಯಲ್ಲಿ ಪದ್ಮ ಎಡಗೈಯಲ್ಲಿ ಗದೆ ಹಿಡಿದು ಸ್ಥಾನಿಕವಾಗಿರುವ ಈ ಮೂರ್ತಿಯ ಕೈಗಳಲ್ಲಿ ಭುಜಕೀರ್ತಿ, ಕೇಯೂರ, ಕಡಗಗಳಿವೆ. ನಡುವನ್ನು ಬಿಗಿದು, ಮುಂಭಾಗದಲ್ಲಿ ಗಂಟುಬಿದ್ದಿರುವ ಕಟಿಬಂಧ, ನಡುವಿನ ಎರಡೂ ಕಡೆಗಳಲ್ಲಿ ಇಳಿದಿರುವ ಬಟ್ಟೆಯನ್ನು ಸೇರಿಸುವಂತೆ ಮಧ್ಯೆ ಅರ್ಧಚಂದ್ರಾಕಾರದ ಇಳಿಬಟ್ಟೆ ಇರುವುದು ಈ ಮೂರ್ತಿಯ ವಿಶೇಷವಾಗಿದೆ. ಕಾಲಿನಲ್ಲಿ ದಪ್ಪನೆಯ ಕಡಗಗಳಿದ್ದು, ಕಾಲಿನ ಎಡಬಲದಲ್ಲಿ ಅಲಂಕಾರಯುಕ್ತ, ಚಾಮರದಾರಿಣಿಯರಿದ್ದಾರೆ. ಮಕರ ಅಲಂಕಾರಯುಕ್ತ ಪ್ರಭಾವಳಿಯಲ್ಲಿ ವಿಷ್ಣುವಿನ ದಶಾವತಾರಗಳನ್ನು ಕೆತ್ತಲಾಗಿದೆ. ಪೀಠದಲ್ಲಿ ಗರುಡನಿದ್ದಾನೆ. ಈ ಮೂರ್ತಿಯ ಲಕ್ಷಣಗಳನ್ನು ಪರಿಗಣಿಸಿದಾಗ ಇದು ಕಲ್ಯಾಣಿ ಚಾಲುಕ್ಯರ ಅಂತ್ಯ ಕಾಲಕ್ಕೆ ಸೇರಿದ್ದೆಂದು ಹೇಳಬಹುದು.

೧. ಊರು : ನಲ್ಲೂರು
೨. ತಾಲೂಕು : ಚನ್ನಗಿರಿ
೩. ಹೆಸರು : ಕೇಶವ
೪. ಸ್ಥಳ : ಕೇಶವ ದೇವಾಲಯದಲ್ಲಿ
೫. ಕಾಲ : ಕ್ರಿ.ಶ. ೧೧ನೇ ಶತಮಾನದ ಅಂತ್ಯ ಕಾಲ
೬. ಬಳಸಿದ ಶಿಲೆ : ಬಳಪದ ಶಿಲೆ

[illegible]

[illegible]

[illegible]

[illegible]

ಈ ಮೂರ್ತಿ ಸಮಭಂಗಿಯಲ್ಲಿ ಸ್ಥಾನೀಕವಾಗಿದ್ದು, ಚತುರ್ಭುಜಧಾರಿಯಾಗಿದೆ. ಕಿರೀಟ ಮಕುಟ, ಶಿರಶ್ಚಕ್ರವಿದ್ದು, ಕಿವಿಯಲ್ಲಿ ಮಕರಕುಂಡಲಗಳಿವೆ. ಕೊರಳಲ್ಲಿ ದಪ್ಪನೆಯ ಕಂಠಹಾರ ಮತ್ತು ಇತರೆ ಮಣಿಹಾರಗಳಿವೆ. ಹಾಗು ಉದರಬಂಧ, ಯಜ್ಞೋಪವೀತ, ವೈಜಯಂತಿ ಮಾಲೆಗಳಿವೆ. ಮೇಲಿನ ಕೈಗಳಲ್ಲಿ ಶಂಖ, ಚಕ್ರ, ಕೆಳಗಿನ ಕೈಗಳಲ್ಲಿ ಪದ್ಮ,ಗದೆಗಳಿವೆ. ದಪ್ಪನೆಯ ಕೈಗಡಗ, ಕೇಯೂರಗಳಿದ್ದು, ಕಾಲಿನಲ್ಲಿ ಕಡಗಗಳಿವೆ. ಕಾಲಬಳಿ ಅಲಂಕಾರಯುಕ್ತ ಚಾಮರಧಾರಿಣಿಯರಿದ್ದಾರೆ. ಚನ್ನಗಿರಿ ಕಲ್ಲೇಶ್ವರ ದೇವಾಲಯದ ಕೇಶವ ಮೂರ್ತಿಯ ಎಲ್ಲಾ ಲಕ್ಷಣಗಳು ಈ ಮೂರ್ತಿಯಲ್ಲಿ ಕಂಡು ಬಂದರೂ ಸಹ ಆ ಮೂರ್ತಿಗಿಂತಲೂ ನಲ್ಲೂರಿನ ಮೂರ್ತಿ ಎತ್ತರದಲ್ಲಿ ಕಡಿಮೆ ಇದೆ. ಚಿಕ್ಕದಾಗಿರುವ ಈ ಶಿಲ್ಪದಲ್ಲೇ ಶಿಲ್ಪ ತನ್ನ ಕಲಾ ಕೌಶಲ್ಯವನ್ನು ಮೆರೆದಿದ್ದಾನೆ. ಈ ಮೂರ್ತಿಯ ಮಂದಹಾಸ ಬೀರುತ್ತಿರುವ ಮುಖ ಭಾವ, ದೇಹದ ಮೇಲೆ ಧರಿಸಿರುವ ಆಭರಣ, ಆಯುಧಗಳನ್ನು ಹಿಡಿದ ರೀತಿ ಇವುಗಳ ಆಧಾರದ ಮೇಲೆ ಇದು ಕಲ್ಯಾಣಿ ಚಾಲುಕ್ಯರ ಅಂತ್ಯಕಾಲಕ್ಕೆ ಸೇರಿದ್ದೆಂದು ಹೇಳಬಹುದು.

೧. ಊರು : ಮಾಯಕೊಂಡ
೨. ತಾಲೂಕು : ದಾವಣಗೆರೆ
೩. ಹೆಸರು : ಜನಾರ್ಧನ
೪. ಸ್ಥಳ : ಓಬಳ ದೇವರಗುಡಿಯಲ್ಲಿ
೫. ಕಾಲ : ಕ್ರಿ.ಶ. ೧೧ನೇ ಶತಮಾನದ
೬. ಬಳಸಿದ ಶಿಲೆ : ಕಪ್ಪು

ಸಮಭಂಗಿಯಲ್ಲಿ ಸ್ಥಾನಿಕವಾಗಿರುವ ಈ ಮೂರ್ತಿ ಚತುರ್ಭುಜಧಾರಿಯಾಗಿದೆ. ಕಿರೀಟ ಮಕುಟ, ಶಿರಶ್ಚಕ್ರವಿದ್ದು, ಕಿವಿಯಲ್ಲಿ ಮಕರ ಕುಂಡಲಗಳಿವೆ. ಕಂಠಾಭರಣ, ಕೊರಳಹಾರ, ಯಜ್ಞೋಪವೀತ, ಉದರಬಂಧ ಹಾಗು ವೈಜಯಂತಿ ಮಾಲೆಗಳಿವೆ. ಮೇಲಿನ ಕೈಗಳಲ್ಲಿ ಶಂಖ, ಚಕ್ರ, ಕೆಳಬಲಗೈಯಲ್ಲಿ ಅಕ್ಷಮಾಲೆ ಸಮೇತ ಅಭಯ ಹಸ್ತ, ಕೆಳ ಎಡಗೈಯಲ್ಲಿ ಗದೆ ಇದೆ. ಭುಜಕೀರ್ತಿ ,ಕೇಯೂರ, ಕೈಗಡಗಳಿದ್ದು, ಮಣಿಸರಯುಕ್ತ ಅಲಂಕಾರಿಕ ಧೋತಿ, ಕಾಲಿನಲ್ಲಿ ದಪ್ಪನೆಯ ಕಾಲ್ಗಡಗ ಹಾಗು ಪಾದಸರಗಳಿವೆ. ಕಾಲಿನ ಎಡಬಲದಲ್ಲಿ ಅಲಂಕಾರಯುಕ್ತ ಚಾಮರಧಾರಿಣಿ ಶಿಲ್ಪಗಳಿವೆ. ಮಕರ ಅಲಂಕಾರಯುಕ್ತ ಪ್ರಭಾವಳಿಯಲ್ಲಿ ದಶಾವತಾರದ ಶಿಲ್ಪಗಳನ್ನು ಕೆತ್ತಲಾಗಿದೆ. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಕಲ್ಯಾಣಿ ಚಾಲುಕ್ಯರದ್ದೆಂದು ಹೇಳಬಹುದು.

೧. ಊರು : ಬಿಳಚೋಡು
೨. ತಾಲೂಕು : ಜಗಲೂರು
೩. ಹೆಸರು : ಜನಾರ್ಧನ
೪. ಸ್ಥಳ : ಈಶ್ವರ ದೇವಾಲಯದಲ್ಲಿ
೫. ಕಾಲ : ಕ್ರಿ.ಶ. ೧೧ನೇ ಶತಮಾನ
೬. ಬಳಸಿದ ಶಿಲೆ : ಕಪ್ಪು ಶಿಲೆ

[illegible]

[illegible]

[illegible]

[illegible]

ಚರ್ತುಭುಜಧಾರಿಯಾದ ಈ ಮೂರ್ತಿ ಸಮಭಂಗಿಯಲ್ಲಿ ಸ್ಥಾನಿಕವಾಗಿದೆ. ಈ ಮೂರ್ತಿಯು ಕರಂಡ ಮಕುಟಧಾರಿಯಾಗಿದ್ದು, ಚರ್ತುಭುಜಧಾರಿಯಾಗಿದೆ. ಮೇಲಿನ ಕೈಗಳಲ್ಲಿ ಶಂಖ, ಚಕ್ರ, ಕೆಳಗಿನ ಕೈಗಳಲ್ಲಿ ಪದ್ಮ, ಗದೆಗಳಿವೆ. ಕಿವಿಯಲ್ಲಿ ಮಕರಕುಂಡಲಗಳಿದ್ದು, ಕೊರಳಲ್ಲಿ ಸಾಮಾನ್ಯ ರೀತಿಯ ಹಾರಗಳಿವೆ. ಯಜ್ಞೋಪವೀತ, ಉಪವೀತ, ಕಾಲಿನಲ್ಲಿ ಕಡಗಗಳಿದ್ದು, ಪ್ರಭಾವಳಿಯು ಯಾವುದೇ ಅಲಂಕಾರವಿರದೆ ಸರಳವಾಗಿದೆ. ಈ ಮೂರ್ತಿ ಲಕ್ಷಣಗಳ ಆಧಾರದ ಮೇಲೆ ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಸೇರಿದ್ದೆಂದು ಹೇಳಬಹುದು.

೧. ಊರು : ಬಿಳಚೋಡು
೨. ತಾಲೂಕು : ಜಗಲೂರು
೩. ಹೆಸರು : ಕೇಶವ
೪. ಸ್ಥಳ : ಚನ್ನಕೇಶವ ದೇವಾಲಯದಲ್ಲಿ
೫. ಕಾಲ : ಕ್ರಿ.ಶ. ೧೧ನೇ ಶತಮಾನ
೬. ಬಳಸಿದ ಶಿಲೆ : ಕಪ್ಪು ಶಿಲೆ

ಚರ್ತುಭುಜಧಾರಿಯಾಗಿರುವ ಈ ಮೂರ್ತಿ ಸಮಭಂಗಿಯಲ್ಲಿ ಪೀಠದ ಮೇಲೆ ಸ್ಥಾನಿಕವಾಗಿದೆ. ಕಿರೀಟ ಮಕುಟಧಾರಿಯಾಗಿರುವ ಈ ಮೂರ್ತಿ ಶಿರಶ್ಚಕ್ರ, ಮಕರಕುಂಡಲಗಳನ್ನು ಧರಿಸಿದೆ. ಕೊರಳಲ್ಲಿ ಕಂಠಾಭರಣ,ಕೊರಳಹಾರ, ಯಜ್ಞೋಪವೀತವಿದ್ದು, ವೈಜಯಂತಿ ಮಾಲೆ ಮೊಣಕಾಲಿನಿಂದ ಕೆಳಗೆ ಇಳಿಬಿದ್ದಿದೆ. ಮೇಲಿನ ಕೈಗಳಲ್ಲಿ ಶಂಖ, ಚಕ್ರ, ಕೆಳ ಬಲಗೈ ಅಭಯ ಮುದ್ರೆಯಲ್ಲಿದ್ದು, ಎಡಗೈಯಲ್ಲಿ ಈ ಮೂರ್ತಿ ಗದೆಯನ್ನು ಹಿಡಿದಿದೆ.ಭುಜಕೀರ್ತಿ, ಕೇಯೂರ, ಕೈಕಡಗಗಳಿದ್ದು, ನಡುಬಂಧ ಹಾಗು ಮಣಿಸರಗಳಿಂದ ಅಲಂಕೃತವಾದ ದೋತಿ ಇದೆ. ಕಾಲಿನಲ್ಲಿ ಕಾಲ್ಗಡಗ, ಪಾದ ಸರವಿದ್ದು,ಕಾಲಿನ ಬೆರಳುಗಳಲ್ಲಿ ಮತ್ತು ಕೈಬೆರಳುಗಳಲ್ಲಿ ಉಂಗುರಗಳಿವೆ. ಎಡ ಮತ್ತು ಬಲಗಾಲಿನ ಬಳಿ ಅಲಂಕಾರಯುಕ್ತ ಚಾಮರಧಾರಿಣಿಯರಿದ್ದು, ಇಲ್ಲಿನ ಪ್ರಭಾವಳಿ ಅಲಂಕೃತವಾಗಿರದೆ ಸರಳರೀತಿಯಲ್ಲಿದೆ. ಈ ಮೂರ್ತಿಯ ಮೇಲಿನ ಲಕ್ಷಣಗಳ ಆಧಾರದ ಮೇಲೆ ಕಲ್ಯಾಣಿ ಚಾಲುಕ್ಯರ ಕಾಲದ್ದೆಂದು ಹೇಳಬಹುದು.

೧. ಊರು : ಜಿಗಳಿ
೨. ತಾಲೂಕು : ಹರಿಹರ
೩. ಹೆಸರು : ಕೇಶವ
೪. ಸ್ಥಳ : ರಂಗನಾಥ ದೇವಾಲಯದಲ್ಲಿ
೫. ಕಾಲ : ಕ್ರಿ.ಶ. ೧೧ನೇ ಶತಮಾನ
೬. ಬಳಸಿದ ಶಿಲೆ : ಬಳಪದ ಶಿಲೆ

ಸ್ಥಳೀಯವಾಗಿ ರಂಗನಾಥನೆಂದು ಕರೆಯಲ್ಪಡುವ ಈ ಮೂರ್ತಿ ಚತುರ್ಭುಜಧಾರಿಯಾಗಿದ್ದು, ಸಮಭಂಗಿಯಲ್ಲಿ ಸ್ಥಾನಿಕವಾಗಿದೆ. ಕಿರೀಟ ಮಕುಟಧಾರಿಯಾದ ಈ ಮೂರ್ತಿಗೆ ಶಿರಶ್ಚಕ್ರವಿದ್ದು, ಕಿವಿಯಲ್ಲಿ ಮಕರ ಕುಂಡಲ, ಕೊರಳಲ್ಲಿ ಕಂಠಾಭರಣ, ಎದೆಯಲ್ಲಿ ಅನೇಕ ಬಗೆಯ ಹಾರ, ಉದರಬಂಧ, ಯಜ್ಞೋಪವೀತ,ವೈಜಯಂತಿ ಹಾರಗಳಿವೆ. ಈ ಮೂರ್ತಿಯ ಮೇಲಿನ ಕೈಗಳಲ್ಲಿ ಶಂಖ, ಚಕ್ರ, ಕೆಳಗಿನ ಕೈಗಳಲ್ಲಿ ಪದ್ಮ ಮತ್ತು ಗದೆಗಳಿವೆ. ನಡುವಿನಲ್ಲಿ ನಡುಬಂಧ ಹಾಗು ಅಲಂಕಾರಯುಕ್ತ ಧೋತಿ ಇದ್ದು, ಕಾಲಿನಲ್ಲಿ ಕಡಗ ಮತ್ತು ಪಾದಸರಗಳಿವೆ. ಕಾಲಿನ ಎಡಬಲದಲ್ಲಿ ಚಾಮರಧಾರಿ ಚಾಮರಧಾರಿಣಿ ಶಿಲ್ಪಗಳಿವೆ. ಮೂರ್ತಿಯ ಹಿಂಭಾಗದಲ್ಲಿ ಅಲಂಕಾರಯುಕ್ತ ಪ್ರಭಾವಳಿ ಇದ್ದು, ಕೆಳಗಿನ ಪೀಠ ಬಿಂಬದಲ್ಲಿ ಪದ್ಮಾಸನದಲ್ಲಿ ಕುಳಿತ ಅಂಜಲಿ ಬದ್ಧ ಗರುಡನಿದ್ದಾನೆ. ಈ ಮೂರ್ತಿ ಲಕ್ಷಣಗಳ ಆಧಾರದ ಮೇಲೆ ಇದು ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಸೇರಿರುತ್ತದೆ ಎಂದು ಹೇಳಬಹುದು.

೧. ಊರು : ದೇವರ ಬೆಳಕೆರೆ

೨. ತಾಲೂಕು : ಹರಿಹರ

೩. ಹೆಸರು : ಕೇಶವ

೪. ಸ್ಥಳ : ಮೈಲಾರ ಲಿಂಗೇಶ್ವರ ದೇವಾಲಯದಲ್ಲಿ

೫. ಕಾಲ : ಕ್ರಿ.ಶ. ೧೧ನೇ ಶತಮಾನ

೬. ಬಳಸಿದ ಶಿಲೆ : ಬಳಪದ ಕಲ್ಲು

ಚತುರ್ಭುಜಧಾರಿಯಾದ ಈ ಮೂರ್ತಿ ಸಮಭಂಗಿಯಲ್ಲಿ ಸ್ಥಾನಿಕವಾಗಿದ್ದು, ಕಿರೀಟ ಮಕುಟಧಾರಿಯಾಗಿದೆ. ಶಿರಶ್ಚಕ್ರ, ಕೊರಳಲ್ಲಿ ಕಂಠಾಭರಣ ,ಕೊರಳಹಾರ ಹಾಗು ಯಜ್ಞೋಪವೀತಗಳನ್ನು ಈ ಮೂರ್ತಿ ಧರಿಸಿದೆ. ಮೇಲಿನ ಕೈಗಳಲ್ಲಿ ಶಂಖ, ಚಕ್ರಗಳಿದ್ದು, ಕೆಳಗಿನ ಕೈಗಳು ತ್ರುಟಿತವಾಗಿರುವುದರಿಂದ ಆ ಕೈಗಳಲ್ಲಿ ಹಿಡಿದ ಆಯುಧಗಳು ಕಾಣಬರುತ್ತಿಲ್ಲ. ನಡುವಿನಲ್ಲಿ ನಡುಬಂಧವವಿದ್ದು, ಧೋತಿಯ ಮೇಲೆ ಮಣಿಸರಗಳ ಅಲಂಕಾರವಿದೆ. ಮೊಣಕಾಲವರೆಗೆ ಇಳಿಬಿದ್ದ ವೈಜಯಂತಿ ಮಾಲೆ ಇದ್ದು, ಭುಜದಲ್ಲಿ ಭುಜಕೀರ್ತಿ, ಕೇಯೂರ ಹಾಗು ಕೈಕಡಗಗಳಿವೆ. ಕಾಲಿನಲ್ಲಿ ದಪ್ಪನೆಯ ಕಾಲ್ಗಡಗ ಹಾಗು ಪಾದಸರಗಳಿದ್ದು, ಕಾಲಿನ ಬಳಿ ಚಾಮರಧಾರಿಣಿಯರಿದ್ದಾರೆ. ಸುತ್ತಲೂ ಪ್ರಭಾವಳಿ ಇದೆ. ಅದು ಲತಾ ತೋರಣದಿಂದ ಅಲಂಕೃತವಾಗಿದೆ. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಇದು ಕಲ್ಯಾಣಿ ಚಾಲುಕ್ಯರ ಆರಂಭ ಕಾಲಕ್ಕೆ ಸೇರಿದೆ ಎಂದು ಹೇಳಬಹುದಾಗಿದೆ.

[illegible]

[illegible]

[illegible]

೧. ಊರು : ದೇವರ ಬೆಳಕೆರೆ

೨. ತಾಲೂಕು : ಹರಿಹರ

೩. ಹೆಸರು : ವಿಷ್ಣು

೪. ಸ್ಥಳ : ಮೈಲಾರ ಲಿಂಗೇಶ್ವರ ದೇವಾಲಯದಲ್ಲಿ

೫. ಕಾಲ : ಕ್ರಿ.ಶ. ೧೦ನೇ ಶತಮಾನ

೬. ಬಳಸಿದ ಶಿಲೆ : ಬಳಪದ ಕಲ್ಲು

ಕೈಗಳ ಮುಂಭಾಗ ಹಾಗು ಮೊಣಕಾಲಿನಿಂದ ಕೆಳಭಾಗ ತ್ರುಟಿತವಾಗಿರುವ ಈ ಮೂರ್ತಿಯನ್ನು ಮೂಲತಃ ಇದ್ದ ಪಾಣಿ ಪೀಠದಲ್ಲೇ ಜೋಡಿಸಲಾಗಿದೆ. ಕಿರೀಟ ಮಕುಟಧಾರಿಯಾದ ಈ ಮೂರ್ತಿಯ ತಲೆಗೂದಲು ಭುಜದ ಎರಡು ಬದಿ ಇಳಿಬಿದ್ದಿವೆ. ಕಿವಿಯಲ್ಲಿ ಮಕರ ಕುಂಡಲ, ಕೊರಳಹಾರಗಳಿವೆ. ಈಗ ದ್ವಿಭುಜಗಳು ಮಾತ್ರ ಉಳಿದಿದ್ದು, ಭುಜ ಕೀರ್ತಿ, ಕೇಯೂರ ಗಳು ಕಾಣಬರುತ್ತವೆ. ಉದರ ಬಂಧ , ಯಜ್ಞೋಪವೀತ , ವೈಜಯಂತಿ ಮಾಲೆ ಇದ್ದು, ಸೊಂಟವನ್ನು ಸುತ್ತುವರಿದ ಕಟಿಬಂಧ , ಮಣಿಸರಗಳಿಂದ ಅಲಂಕಾರಿಕವಾದ ಧೋತಿಯನ್ನು ಇದೆ. ಪೀಠದಲ್ಲಿ ಪದ್ಮಾಸನದಲ್ಲಿ ಕುಳಿತು , ಅಂಜಲಿ ಬದ್ಧನಾಗಿರುವ ಗರುಡನ ಶಿಲ್ಪವಿದೆ. ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಇದನ್ನು ಕಲ್ಯಾಣಿ ಚಾಲುಕ್ಯರ ಆರಂಭ ಕಾಲಕ್ಕೆ ಸೇರಿದೆ ಎಂದು ಹೇಳಬಹುದಾಗಿದೆ.

೧. ಊರು : ವಾಸನ

೨. ತಾಲೂಕು : ಹರಿಹರ

೩. ಹೆಸರು : ಮಾಧವ

೪. ಸ್ಥಳ : ಕೇಶವ ದೇವಾಲಯದಲ್ಲಿ

೫. ಕಾಲ : ಕ್ರಿ.ಶ.೧೧ನೇ ಶತಮಾನ

೬. ಬಳಸಿದ ಶಿಲೆ : ಹಸಿರು ಬಳಪದ ಶಿಲೆ

ಸ್ಥಳಿಯರಿಂದ ವಿಷ್ಣುವೆಂದು ಕರೆಯಲ್ಪಡುವ ಈ ಮೂರ್ತಿಚತುರ್ಭುಜಧಾರಿಯಾಗಿದ್ದು, ಸಮಭಂಗಿಯಲ್ಲಿ ಸ್ಥಾನಿಕ ವಾಗಿದೆ. ಕಿರೀಟಧಾರಿಯಾದ ಈಮೂರ್ತಿಯ ತಲೆಗೂದಲು ಭುಜದ ಮೇಲೆ ಇಳಿ ಬಿದ್ದು ಹರಡಿದಂತಿವೆ. ಕಿವಿಯಲ್ಲಿ ಮಕರ ಕುಂಡಲ, ಕೊರಳಲ್ಲಿ ಕಂಠಾಭರಣ ,ಕೊರಳಹಾರಗಳಿದ್ದು, ಉದರಬಂಧವೂ ಸಹ ಇದೆ. ಎಡಭುಜದಿಂದ ಹಾದುಬಂದು ಬಲಗೈ ತೋಳಿನ ಬಳಿ ಇಳಿಬಿದ್ದ ಯಜ್ಞೋಪವೀತ ಹಾಗು ಮೊಣಕಾಲವರೆಗೆ ಇಳಿಬಿದ್ದ ವೃಜಯಂತಿಮಾಲೆ ಇದೆ. ಅಲ್ಲದೆ, ಭುಜ ಕೀರ್ತಿ, ಕೇಯೂರು, ಕೈಕಡಗಗಳಿವೆ. ಮೇಲಿನ ಬಲಗೈಯಲ್ಲಿ ಚಕ್ರವನ್ನು ಪ್ರಯೋಗಿಸುತ್ತಿರುವ ರೀತಿಯಲ್ಲಿದ್ದರೆ, ಎಡಗೈಯಲ್ಲಿ ಶಂಖವನ್ನು ಬೆರಳಿನಿಂದ ಹಿಡಿದಿರುವುದು ಈ ಮೂರ್ತಿಯ ವಿಶೇಷವಾಗಿದೆ. ಬಲ ಕೆಳ ಕೈನಲ್ಲಿ ಗದೆ ಇದ್ದು, ಅದರ ಕೆಳಭಾಗ

[illegible]

ತ್ರುಟಿತವಾಗಿದೆ. ಎಡಗೈ ಕಟ್ಯಾವಲಂಬಿತವಾಗಿದ್ದು, ಕೈಬೆರಳುಗಳಲ್ಲಿ ಉಂಗುರುಗಳಿವೆ. ನಡುವಿನಲ್ಲಿ ಅನೇಕ ಬಗೆಯ ಮಣಿಸರಗಳಿಂದ ಅಲಂಕೃತವಾದ ಧೋತಿ ಇದೆ. ಮೊಣಕಾಲಿನಿಂದ ಕೆಳಭಾಗ ಅಂದರೆ ಪಾದ ಭಾಗ ತ್ರುಟಿತವಾಗಿದೆ. ಮೂಲತಃ ಬೇರೆಡೆ ಇದ್ದ ಈ ಮೂರ್ತಿಯನ್ನು ಇತ್ತೀಚೆಗೆ ಸಿದ್ಧಪಡಿಸಲಾದ ಬೇರ ಪಾಣಿಪೀಠದಲ್ಲಿಟ್ಟು ಜೋಡಿಸಲಾಗಿದೆ. ಪ್ರಭಾವಳಿಯು ತ್ರುಟಿತವಾಗಿದ್ದು, ಮೂಲ ಪ್ರಭಾವಳಿಯಲ್ಲಿನ ಅಲಂಕಾರಿಕ ಸರ್ಪತೋರಣದ ಕೆಲ ಭಾಗ ಮಾತ್ರ ಕಾಣಬರುತ್ತದೆ. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಇದು ಕಲ್ಯಾಣಿ ಚಾಲುಕ್ಯರ ಅಂತ್ಯ ಕಾಲಕ್ಕೆ ಸೇರಿದೆ ಎಂದು ಹೇಳಬಹುದಾಗಿದೆ.

೧. ಊರು : ಸಾರಥಿ

೨. ತಾಲೂಕು : ಹರಿಹರ

೩. ಹೆಸರು : ಕೇಶವ

೪. ಸ್ಥಳ : ಬಸವೇಶ್ವರ ದೇವಾಲಯದಲ್ಲಿ

೫. ಕಾಲ : ಕ್ರಿ.ಶ. ೧೧ನೇ ಶತಮಾನ

೬. ಬಳಸಿದ ಶಿಲೆ : ಬಳಪದ ಶಿಲೆ

ಚರ್ತುಭುಜಧಾರಿ ಈ ಮೂರ್ತಿ ಸಮ ಭಂಗಿಯಲ್ಲಿ ಸ್ಥಾನಿಕವಾಗಿದ್ದು, ಕಿರೀಟಧರಿಸಿದ ಈ ಮೂರ್ತಿಯ ಶಿರದ ಹಿಂಭಾಗದಲ್ಲಿ ಶಿರಶ್ಚಕ್ರವಿದೆ. ಕಿವಿಯಲ್ಲಿ ಮಕರ ಕುಂಡಲ , ಕೊರಳಲ್ಲಿ ಕಂಠಾಭರಣ ಹಾಗು ಅನೇಕ ಬಗೆಯ ಕೊರಳಹಾರಗಳಿವೆ. ಯಜ್ಞೋಪವೀತ, ವೈಜಯಂತಿ ಹಾರಗಳಿದ್ದು, ಭುಜದಲ್ಲಿ ಭುಜಕೀರ್ತಿ, ಹಾಗು ಕೇಯೂರ, ಕೈಕಡಗಗಳಿವೆ. ಮೇಲಿನ ಕೈಗಳಲ್ಲಿ ಶಂಖ, ಚಕ್ರ, ಕೆಳಗಿನ ಬಲಗೈಯಲ್ಲಿ ಪದ್ಮ, ಎಡಗೈನಲ್ಲಿ ಗದೆ ಇದೆ. ನಡುವಿನಿಂದ ಇಳಿಬಿದ್ದ ಧೋತಿ ಇದ್ದು, ಅದನ್ನು ಅದರ ಮುಂಭಾಗದಲ್ಲಿ ಹಾಗು ಪಕ್ಕದಲ್ಲಿ ಮಣಿಸರಗಳಿಂದ ಅಲಂಕರಿಸಲಾಗಿದೆ. ಕಾಲಿನಲ್ಲಿ ಕಾಲ್ಕಡಗ, ಪಾದ ಸರಗಳಿದ್ದು , ಬೆರಳುಗಳಲ್ಲಿ ಉಂಗುರಗಳಿವೆ. ಕಾಲಿನ ಎಡ ಬಲದಲ್ಲಿ ಪದ್ಮ, ಚಾಮರ ಹಿಡಿದು ಕಿರೀಟ ಮುಖಿಯರಾದ ಸೇವಕಿಯರಿದ್ದಾರೆ. ಸುತ್ತಲೂ ಪ್ರಭಾವಳಿ ಇದ್ದು, ಪೀಠಬಿಂಬದಲ್ಲಿ ಅಂಜಲಿ ಹಸ್ತನಾದ ಗರುಡನಿದ್ದಾನೆ. ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಇದನ್ನು ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಸೇರಿದೆ ಎಂದು ಹೇಳಬಹುದಾಗಿದೆ.

೧. ಊರು : ನಂದಿತಾವರೆ

೨. ತಾಲೂಕು : ಹರಿಹರ

೩. ಹೆಸರು : ಕೇಶವ

೪. ಸ್ಥಳ : ಅಮೃತ ಲಿಂಗ ಮಾಣಿಕೇಶ್ವರ ದೇವಾಲಯದ ನವರಂಗದ ಉತ್ತರದ ಗರ್ಭಗುಡಿಯಲ್ಲಿ.

೫. ಕಾಲ : ಕ್ರಿ.ಶ. ೧೧ನೇ ಶತಮಾನ

೬. ಬಳಸಿದ ಶಿಲೆ : ಬಳಪದ ಕಲ್ಲು

ಪದ್ಮಪೀಠದ ಮೇಲೆ ನಿಂತಿರುವ ಈ ಮೂರ್ತಿ ಕಿರೀಟ ಮಕುಟಧಾರಿಯಾಗಿದ್ದು, ಸಮಭಂಗದಲ್ಲಿ ನಿಂತಿದೆ. ಕಿವಿಯಲ್ಲಿ ಮಕರ ಕುಂಡಲ, ಕೊರಳಲ್ಲಿ ಅನೇಕ ಬಗೆಯ ಹಾರಗಳಿವೆ. ಯಜ್ಞೋಪವೀತ, ಉಪವೀತಹಾಗು ವೈಜಯಂತಿ ಮಾಲೆ ಇದೆ. ಚತುರ್ಭುಜಧಾರಿಯಾದ ಈ ಮೂರ್ತಿಯು ಭುಜಕೀರ್ತಿ, ಕೇಯೂರ, ಕೈಕಡಗಗಳನ್ನು ಧರಿಸಿದೆ. ಮೇಲಿನ ಕೈಗಳಲ್ಲಿ ಶಂಖ, ಚಕ್ರ, ಕೆಳಗಿನ ಕೈಗಳಲ್ಲಿ ಪದ್ಮ, ಗದೆ ಹಿಡಿದಿದೆ. ನಡುಬಂಧವಿದ್ದು, ಎರಡು ಕಾಲಿನ ಮಧ್ಯೆ ಇಳಿಬಿದ್ದ ಇಳಿಬಟ್ಟೆ ಇದೆ. ಕಾಲಿನಲ್ಲಿ ಕಡಗ, ಹಾಗು ಪಾದಸರಗಳಿವೆ. ಈ ಮೂರ್ತಿಯ ಕಾಲಿನ ಬಲಭಾಗದಲ್ಲಿ ಕರಂಡಮುಕುಟಧಾರಿಯಾದ ಭೂದೇವಿ ಕಲಶವನ್ನು ಹಿಡಿದು ನಿಂತಿದ್ದಾಳೆ. ಈಕೆಯ ಮುಂಭಾಗದಲ್ಲಿ ಅಂಜಲಿ ಮುದ್ರೆಯಲ್ಲಿರುವ ಗರುಡನಿದ್ದಾನೆ. ಎಡಭಾಗದಲ್ಲಿ ಕಿರೀಟ ಮುಖಿಯಾದ ಲಕ್ಷ್ಮಿ ಅಲಂಕೃತವಾಗಿದ್ದು, ಕೈಗಳಲ್ಲಿ ಫಲ, ಪದ್ಮಗಳನ್ನು ಹಿಡಿದಿದ್ದಾಳೆ. ಈಕೆಯ ಬಳಿ ಒಬ್ಬ ಚಾಮರಧಾರಿಣಿ ಇದ್ದು, ಈಕೆಯ ಬಲಗೈಯನ್ನು ಹಿಡಿದುಕೊಂಡ ಪ್ರಹ್ಲಾದನಿದ್ದಾನೆ. ಲಕ್ಷ್ಮಿಯ ಹಿಂದುಗಡೆ ಆನೆ ಇದೆ. ಪ್ರಭಾವಳಿಯು ಸರ್ಪತೋರಣ ದಿಂದ ಅಲಂಕೃತವಾಗಿದ್ದು, ಅದರಲ್ಲಿ ವಿಷ್ಣುವಿನ ದಶಾವತಾರಗಳನ್ನು ಕೆತ್ತಲಾಗಿದೆ. ಸೌಮ್ಯ ಸ್ವಭಾವದ ಮುಖಭಾವ, ಚೂಪನೆಯ ಮೂಗು,ವೈಭವ ಪೂರಿತ ಅಲಂಕಾರ ಇವುಗಳನ್ನು ಆಧಾರವಾಗಿಟ್ಟುಕೊಂಡು, ಇದು ಹೊಯ್ಸಳರ ಕಾಲಕ್ಕೆ ಸೇರಿದೆಯೆಂದು ಹೇಳಬಹುದು.

೧. ಊರು : ಬಿಳಚೋಡು

೨. ತಾಲೂಕು : ಜಗಲೂರು

೩. ಹೆಸರು : ವೇಣುಗೋಪಾಲ

೪. ಸ್ಥಳ : ವೇಣುಗೋಪಾಲಸ್ವಾಮಿ ದೇವಾಲಯದಲ್ಲಿ

೫. ಕಾಲ : ಕ್ರಿ.ಶ. ಸು. ೧೧ನೇ ಶತಮಾನ

೬. ಬಳಸಿದ ಶಿಲೆ : ಬಳಪದ ಕಲ್ಲು

ಪೀಠದ ಮೇಲೆ ಸ್ಥಾನಿಕವಾಗಿರುವ ಈ ಮೂರ್ತಿ ಚತುರ್ಭುಜಧಾರಿಯಾಗಿದ್ದು, ಕಿರೀಟ ಮಕುಟಧಾರಿಯಾಗಿದೆ. ಕಿವಿಯಲ್ಲಿ ಕುಂಡಲಗಳಿದ್ದು, ಮೇಲಿನ ಕೈಗಳಲ್ಲಿ ಶಂಖ ಚಕ್ರಗಳಿವೆ. ಕೆಳಗಿನ ಕೈಗಳಲ್ಲಿ ವೇಣು (ಕೊಳಲು)ವನ್ನು ಹಿಡಿದು ನುಡಿಸುವಂತಿದೆ. ಕೈಗಳಲ್ಲಿ ಕಡಗ, ಕೇಯೂರಗಳಿದ್ದು,ಕೊರಳಲ್ಲಿ ವಿವಿಧಬಗೆ ಹಾರಗಳಿವೆ. ಯಜ್ಞೋಪವೀತ ಹಾಗು ವೈಜಯಂತಿಹಾರ ಇವೆ. ನಡುವಿನಲ್ಲಿ ನಡುಬಂಧವಿದ್ದು, ಮಣಿಸರಗಳಿಂದ ಅಲಂಕರಿಸಲಾದ ಧೋತಿಯೂ ಇದೆ. ಕಾಲಿನಲ್ಲಿ ಕಡಗ, ಪಾದ ಸರಗಳಿದ್ದು ಕಾಲಿನ ಬಳಿ ಗೋವುಗಳು ಕೊಳಲ ನಾದವನ್ನು ಆಲಿಸುವರೀತಿ ಶಿಲ್ಪಿ ಕೆತ್ತಿದ್ದಾನೆ. ಹಾಗೆಯೇ ಕಾಲಿನ ಬಳಿ ಚಾಮರಧಾರಿಣಿಯರಿದ್ದು, ಸುತ್ತಲೂ ಅಲಂಕಾರಯುಕ್ತ ಪ್ರಭಾವಳಿ ಇದೆ. ಪೀಠದಲ್ಲಿ ಅಂಜಲಿ ಬದ್ಧನಾಗಿರುವ ಗರುಡನ ಶಿಲ್ಪವಿದೆ. ಈ ಮೂರ್ತಿಯ ಶೈಲಿಯನ್ನು ಆಧರಿಸಿ, ಇದು ಕಲ್ಯಾಣಿ ಚಾಲುಕ್ಯರ ಕಾಲದ್ದೆಂದು ಹೇಳಬಹುದಾಗಿದೆ.

೧. ಊರು : ಉಚ್ಚಂಗಿದುರ್ಗ

೨. ತಾಲೂಕು : ಹರಪನಹಳ್ಳಿ

೩. ಹೆಸರು : ವೇಣು ಗೋಪಾಲ

೪. ಸ್ಥಳ : ರಾಮಲಿಂಗೇಶ್ವರ ದೇವಾಲಯದಲ್ಲಿ

೫. ಕಾಲ : ಕ್ರಿ.ಶ.೧೦ ನೇ ಶತಮಾನ

೬. ಬಳಸಿದ ಶಿಲೆ : ಬಳಪದ ಶಿಲೆ

ಚತುರ್ಭುಜಧಾರಿಯಾದ ಈ ಮೂರ್ತಿ ಪೀಠದ ಮೇಲೆಸ್ಥಾನಿಕವಾಗಿದೆ. ಕರಂಡ ಮಕುಟ ಧಾರಿಯಾದ ಈ ಮೂರ್ತಿಯ ಕಿವಿಯಲ್ಲಿ ಕುಂಡಲಗಳಿದ್ದು, ಕಂಠಾಭರಣ, ಕೊರಳಹಾರಗಳಿವೆ. ಈ ಮೂರ್ತಿಯ ಕೈಗಳಲ್ಲಿ ಕೇಯೂರ , ಕಡಗಗಳಿವೆ. ಮೇಲಿನ ಕೈಗಳಲ್ಲಿ ಶಂಖ ,ಚಕ್ರ , ಹಾಗು ಕೆಳಗಿನ ಕೈಗಳಲ್ಲಿ ವೇಣು ಹಿಡಿದಂತೆ ಕೆತ್ತಲಾಗಿದೆ. ನಡುವಿನಲ್ಲಿ ನಡುಬಂಧ, ಹಾಗು ಮಣಿಸರಗಳಿಂದ ಅಲಂಕರಿಸಲಾದ ಧೋತಿ ಹಾಗು ವೈಜಯಂತಿ ಮಾಲೆ ಇದೆ. ಕಾಲ್ಕಡಗ, ಪಾದಸರಗಳು ಕಾಲಿನಲ್ಲಿದ್ದು, ವೇಣು ಗೋಪಾಲನ ಕೊಳಲ ನಾದವನ್ನು ಗೋವುಗಳು ಆಲಿಸುತ್ತಾ ನಿಂತ ರೀತಿಯಲ್ಲಿ ಶಿಲ್ಪಿ ಕೆತ್ತಿದ್ದಾನೆ. ಸುತ್ತಲೂ ಸರಳ ಶೈಲಿಯ ಪ್ರಭಾವಳಿ ಇದೆ. ಈ ಮೂರ್ತಿಯ ಶೈಲಿಯನ್ನು ಆಧರಿಸಿ, ಇದು ಕಲ್ಯಾಣಿ ಚಾಲುಕ್ಯರ ಆರಂಭ ಕಾಲದ್ದೆಂದು ನಿರೂಪಿಸಬಹುದಾಗಿದೆ.

ನರಸಿಂಹ ಮೂರ್ತಿಗಳು :- ವಿಷ್ಣುವಿನ ದಶಾವತಾರಗಳಲ್ಲಿ ನರಸಿಂಹ ಅವತಾರವೂ ಪ್ರಮುಖವಾಗಿದೆ. ಈ ದೇವತಾರಾಧನೆಗೆ ವ್ಯಾಪಕ ಗೌರವವು , ಮನ್ನಣೆಯೂ ಇದೆ[೪೬]. ವಾಯು, ಶೈವ, ವಿಷ್ಣು, ಮತ್ಸ, ವಿಷ್ಣು ಧರ್ಮೋತ್ತರ, ನರಸಿಂಹ, ಕೂರ್ಮ, ಭಾಗವತ, ಅಗ್ನಿ, ನಾರದೀಯ, ಲಿಂಗ, ಪದ್ಮ , ಹರಿವಂಶ ಮತ್ತು ಮಹಾಭಾರತಗಳಲ್ಲಿ ಈ ಅವತಾರದ ಹಿನ್ನಲೆಯನ್ನು ಉಲ್ಲೇಖಿಸಲಾಗಿದೆ[೪೭]. ನರಸಿಂಹಮೂರ್ತಿಯ ಲಕ್ಷಣ ಕುರಿತಂತೆ ಪಂಚರತ್ನಾ, ವೈಖಾನ ಆಗಮಗಳು ತಿಳಿಸುತ್ತವೆ[೪೮]. ನರಸಿಂಹ ಮೂರ್ತಿಗಳಲ್ಲಿ ಹಲವು ವಿಭಿನ್ನ ರೀತಿಯ ಮೂರ್ತಿಗಳು ಕರ್ನಾಟಕದಾದ್ಯಂತ ದೊರೆಯುತ್ತವೆ. ಅವುಗಳೆಂದರೆ:

1) ಪೀಠದ ಮೇಲೆ ಕುಳಿತ ನರಸಿಂಹ, 2) ಯೋಗ ನರಸಿಂಹ, 3) ಹಿರಣ್ಯಕಶ್ಯಪುವನ್ನು ಸಂಹರಿಸುತ್ತಿರುವ ನರಸಿಂಹ, 4) ಹಿರಣ್ಯ ಕಶ್ಯಪುನೊಡನೆ ಹೋರಾಡುತ್ತಿರುವ ನರಸಿಂಹ, 5) ಲಕ್ಷ್ಮಿ ನರಸಿಂಹ, 6) ಕೇವಲ ನರಸಿಂಹ, 7) ನಾಟ್ಯ ನರಸಿಂಹ[೪೯] ಎಂದು ವಿಭಾಗಿಸಬಹುದು. ದಾವಣಗೆರೆ ಜಿಲ್ಲೆಯಲ್ಲಿ ಹಿರಣ್ಯಕಶಪುವನ್ನು ಸಂಹರಿಸುತ್ತಿರುವ ಮೂರ್ತಿಗಳು ದೊರೆತಿವೆ. ಇವನ್ನು ಸಂಹಾರ ನರಸಿಂಹಮೂರ್ತಿಗಳೆಂದು ಹೆಸರಿಸಬಹುದು. ಆ ಮೂರ್ತಿಗಳ ವಿವರಣೆ ಈ ರೀತಿ ಇದೆ.

೧. ಊರು : ನೀಲಗುಂದ

೨. ತಾಲೂಕು : ಹರಪನಹಳ್ಳಿ

೩. ಹೆಸರು : ಉಗ್ರ ನರಸಿಂಹ

೪. ಸ್ಥಳ : ಭೀಮಲಿಂಗೇಶ್ವರ ದೇವಾಲಯದ ಹೊರಭಾಗದ ಪಶ್ಚಿಮದ ದೇವ ಕೋಷ್ಠದಲ್ಲಿ

೫. ಕಾಲ : ಕ್ರಿ.ಶ. ೧೧ನೇ ಶತಮಾನ

೬. ಬಳಸಿದ ಶಿಲೆ : ಬಳಪದ ಶಿಲೆ

ಈ ಮೂರ್ತಿ ಆರು ಕೈಗಳನ್ನು ಹೊಂದಿದ್ದು, ಪೀಠದ ಮೇಲೆ ಆಲೀಡ ಭಂಗಿಯಲ್ಲಿ ಸ್ಥಾನಿಕವಾಗಿದೆ. ಮನುಷ್ಯ ದೇಹ, ಸಿಂಹ ಮುಖಧಾರಿಯಾಗಿರುವ ಈ ಮೂರ್ತಿ ಕಿರೀಟಧರಿಸಿದೆ. ಕೊರಳಲ್ಲಿ ವಿಭಿನ್ನ ಬಗೆಯ ಹಾರಗಳಿದ್ದು, ಯಜ್ಞೋಪವೀತ ಮತ್ತು ಎರಡು ಕಾಲಿನ ಮಧ್ಯೆ ಇಳಿಬಿದ್ದ ವೈಜಯಂತಿ ಹಾರವಿದೆ. ಮೊಣಕೈನಿಂದ ಉಳಿದ ಭಾಗಗಳು ತ್ರುಟಿತವಾಗಿರುವುದರಿಂದ ಕೈಗಳಲ್ಲಿ ಹಿಡಿದ ಆಯುಧಗಳು ಗೋಚರಿಸುವುದಿಲ್ಲ. ಭುಜಕೀರ್ತಿ, ಕೇಯೂರಗಳಿವೆ. ತನ್ನ ಎಡಗಾಲನ್ನು ಮಡಚಿ ಅದರ ಮೇಲೆ ಹಿರಣ್ಯ ಕಶ್ಯಪುವನ್ನು ಮಲಗಿಸಿಕೊಂಡು ಉದರಬಗೆದು ಕರಳನ್ನು ಹೊರತೆಗೆಯುತ್ತಿರುವ ರೀತಿಯಲ್ಲಿ ಕೆತ್ತಲಾಗಿದೆ. ತಲೆಯ ಭಾಗ ಮತ್ತು ಮೊಣಕಾಲಿನ ಕೆಳಭಾಗ ತ್ರುಟಿತವಾಗಿರುವುದರಿಂದ ಈ ಮೂರ್ತಿಯ ಅಧ್ಯಯನ ಪರಿಪೂರ್ಣವಾಗಲಾರದು. ಕಾಲಿನಲ್ಲಿ ದಪ್ಪನೆಯ ಕಾಲ್ಗಡಗಳಿವೆ. ಎಡಭಾಗದಲ್ಲಿ ಪ್ರಹ್ಲಾದ ಅಂಜಲಿಬದ್ಧನಾಗಿ ನಿಂತಿದ್ದಾನೆ. ಪೀಠ ಬಿಂಬದಲ್ಲಿ ಗರುಡನ ನಶಿಸಿದ ಶಿಲ್ಪವಿದೆ.

೧. ಊರು : ಬಾಗಳಿ

೨. ತಾಲೂಕು : ಹರಪನಹಳ್ಳಿ

೩. ಹೆಸರು : ಉಗ್ರ ನರಸಿಂಹ

೪. ಸ್ಥಳ : ಕಲ್ಲೇಶ್ವರ ದೇವಾಲಯಕ್ಕೆ ಹೊಂದಿಕೊಂಡಂತಿರುವ ಉಗ್ರ ನರಸಿಂಹ ದೇವಾಲಯದಲ್ಲಿ

೫. ಕಾಲ : ಕ್ರಿ.ಶ. ೧೧ನೇ ಶತಮಾನ

೬. ಬಳಸಿದ ಶಿಲೆ : ಬಳಪದ ಶಿಲೆ

ಮಾನವದೇಹ ಸಿಂಹ ಮುಖ ತಲೆಯನ್ನು ಹೊಂದಿದ ಈ ನರಸಿಂಹ ಮೂರ್ತಿಗೆ ಹದಿನಾಲ್ಕು ಕೈಗಳಿವೆ[೫೦]. ಉದರಬಂಧ, ಎದೆಹಾರ , ಯಜ್ಞೋಪವೀತಗಳಿದ್ದು, ಭುಜಕೀರ್ತಿ, ಕೇಯೂರಗಳಿಂದ ಅಲಂಕೃತವಾಗಿರುವ ಈ ಮೂರ್ತಿಯು ಹಿಡಿದಿರುವ ಆಯುಧಗಳು ಈ ಕೆಳಗೆ ವಿವರಿಸಲಾಗಿದೆ.

ನರಸಿಂಹ ಮೂರ್ತಿಯ ಆಯುಧ ಮಿಮಾಂಸೆ :

ಕೈಗಳ ಹಂತ	ಎಡಗೈ	ಬಲಗೈ
01	ಕರುಳಿನ ಹಾರ	ಅದೇ
02	ಧನಸ್ಸು	?
03	ಶಂಖ	ಚಕ್ರ
04	ಗದೆ	ಅಂಕುಶ
05	ಪಾಶ	ಹಿರಣ್ಯ ಕಶ್ಯಪನ ಎಡಗಾಲನ್ನು ಹಿಡಿದಿದೆ
06	ಹಿರಣ್ಯಕಶ್ಯಪನ ಕಿರೀಟವನ್ನು ಹಿಡಿದಿದೆ	ಅಂಬು
07	ಹಿರಣ್ಯಕಶ್ಯಪನ ಉದರ ಬಗೆಯುವ ರೀತಿ ಇದೆ.	- ಅದೇ -

ಇಲ್ಲಿ ನರಸಿಂಹ ಮೂರ್ತಿಯಂತೆ ಹಿರಣ್ಯಕಶ್ಯಪನ ಮೂರ್ತಿಯು ಸಹ ಅಲಂಕರಿಸಲ್ಪಟ್ಟಿದೆ. ಚರ್ತುಭುಜಧಾರಿಯಾಗಿರುವ ಈ ಮೂರ್ತಿಯ ಮೇಲಿನ ಕೈಗಳಲ್ಲಿ ಗುರಾಣಿ, ಕೆಳಗಿನ ಕೈಗಳಲ್ಲಿ ಅಂಬು ಹಿಡಿದಿದ್ದು, ಬಲಗೈಯಲ್ಲಿನ ಅಂಬುವನ್ನು ಎಸೆಯುವ ರೀತಿಯಲ್ಲಿ ಕೆತ್ತಲಾಗಿದೆ. ವೈಜಯಂತಿ ಹಾರ ಮತ್ತು ಧೋತಿಯ ಮುಂಭಾಗ ಕಾಲಿನ ಮಧ್ಯದಲ್ಲಿ ಇಳಿಬಿದ್ದಿದ್ದು, ಕಾಲಿನಲ್ಲಿ ಕಾಲ್ಕಡಗ ಮತ್ತು ಪಾದಸರಗಳಿವೆ. ಹಾಗೆಯೇ ಕಾಲಿನ ಬೆರಳುಗಳಲ್ಲಿ ಉಂಗುರಗಳಿವೆ. ಈ ಮೂರ್ತಿಯ ಎಡಗಾಲಿನ ಬಳಿ ಪದ್ಮ ಮತ್ತು ಫಲ ಹಿಡಿದ ಸ್ತ್ರೀ ಮತ್ತು ತಂಬೂರಿ ಹಿಡಿದ ನಾರದನಿದ್ದು, ಬಲಗಾಲ ಬಳಿ ಅಂಜಲಿ ಮುದ್ರೆಯಲ್ಲಿ ಸ್ತ್ರೀ ಹಾಗು ಪುರುಷ ಶಿಲ್ಪಗಳಿವೆ. ಪಾಣಿಪೀಠದಲ್ಲಿ ಅಂಜಲಿ ಮುದ್ರೆಯಲ್ಲಿರುವ ಗರುಡನ ಶಿಲ್ಪವಿದೆ. ಆ ಗರುಡನ ಎಡಭಾಗಕ್ಕೆ ಪ್ರಹ್ಲಾದ, ಬಲಭಾಗಕ್ಕೆ ಹನುಮಂತರಿದ್ದು, ಈ ಎರಡು ಶಿಲ್ಪಗಳು ಸಹ ಅಂಜಲಿ ಮುದ್ರೆಯಲ್ಲಿರುವುದು[೫೧] ಈ ಮೂರ್ತಿಯ ವಿಶೇಷವಾಗಿದೆ. ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಸೇರಿದ ಈ ಮೂರ್ತಿಯು ನೋಡಲು ಅತ್ಯಂತ ಮನೋಹರವಾಗಿದ್ದು, ಇವರ ಕಾಲದ ಶಿಲ್ಪಶೈಲಿಗೆ ಹಿಡಿದ ಕೈಗನ್ನಡಿಯಾಗಿದೆ.

3) ಆಸೀನ ವೈಷ್ಣವ ಮೂರ್ತಿಗಳು :-

ಈ ಜಿಲ್ಲೆಯಲ್ಲಿ ಆಸೀನ ವೈಷ್ಣವ ಮೂರ್ತಿಗಳು ಕಡಿಮೆ ಪ್ರಮಾಣದಲ್ಲಿ ದೊರೆತಿದ್ದು, ಅವುಗಳಲ್ಲಿ ಲಕ್ಷ್ಮಿ ಸಹಿತ ವಿಷ್ಣು (ಲಕ್ಷ್ಮೀ ನಾರಾಯಣ) ಭೂದೇವಿ ಜೊತೆ ವರಹಾ, ಗರುಡ , ಮೂರ್ತಿಗಳು ಪ್ರಮುಖವಾಗಿದ್ದು, ಅವುಗಳನ್ನು ಈ ಕೆಳಗಿನ ರೀತಿ ಅಧ್ಯಯನ ಮಾಡಲಾಗಿದೆ.

೧. ಊರು : ನೀಲಗುಂದ

೨. ತಾಲೂಕು : ಹರಪನಹಳ್ಳಿ

೩. ಹೆಸರು : ಲಕ್ಷ್ಮಿ ನಾರಾಯಣ

೪. ಸ್ಥಳ : ಮೂಲತಃ ಕೋಟೆ ದೇವಾಲಯದಲ್ಲಿದ್ದ ಈ ಮೂರ್ತಿಯು ಪ್ರಸ್ತುತ ಭೀಮಲಿಂಗೇಶ್ವರ ದೇವಾಲಯದಲ್ಲಿದೆ.

೫. ಕಾಲ : ಕ್ರಿ.ಶ. ೧೧ನೇ ಶತಮಾನ

೬. ಬಳಸಿದ ಶಿಲೆ : ಬಳಪದ ಶಿಲೆ.

ಚರ್ತುಭುಜಧಾರಿಯಾದ ಈ ಲಕ್ಷ್ಮಿ ನಾರಾಯಣ ಮೂರ್ತಿ ಪೀಠದ ಮೇಲೆ ಲಲಿತಾಸನದಲ್ಲಿ ಕುಳಿತಿದ್ದು, ಎಡತೊಡೆಯ ಮೇಲೆ ಲಕ್ಷ್ಮಿ ಕುಳಿತಿದ್ದಾಳೆ[೫೨]. ನಾರಾಯಣ ಮೂರ್ತಿಯ ಕಿರೀಟದ ಹಿಂಬದಿಯಲ್ಲಿ ಶಿರಶ್ಚಕ್ರವಿದ್ದು, ಕಿವಿಯಲ್ಲಿ ಮಕರಕುಂಡಲಗಳಿವೆ. ಕೊರಳಲ್ಲಿ ಕಂಠಾಭರಣ, ಕೊರಳಹಾರ, ಉದರಬಂಧ ಹಾಗು ಯಜ್ಞೋಪವೀತವಿದೆ. ಭುಜಕೀರ್ತಿ, ಕೇಯೂರ, ಕೈಕಡಗಳಿದ್ದು, ಬೆರಳಿನಲ್ಲಿ ಉಂಗುರಗಳಿವೆ. ಮೇಲಿನ ಕೈಯಲ್ಲಿ ಚಕ್ರ, ಗದೆ, ಕೆಳಗಿನ ಬಲಗೈಯಲ್ಲಿ ಶಂಖ, ಎಡಗೈನಿಂದ ದೇವಿಯನ್ನು ಆಲಂಗಿಸಿಕೊಂಡ ರೀತಿ ಕೆತ್ತಲಾಗಿದೆ. ನಡುವಿನಲ್ಲಿ ನಡುಬಂಧವಿದ್ದು, ಮಣಿಸರದಿಂದ ಅಲಂಕರಿಸಲಾದ ದೋತಿ ಕಾಲಕೆಳಗಿನಿಂದಇಳಿಬಿದ್ದಂತಿದೆ. ವೈಜಯಂತಿ ಹಾರ, ದಪ್ಪನೆಯ ಕಾಲ್ಗಡಗ ಹಾಗು ಪಾದಸರಗಳಿದ್ದು, ಬೆರಳಿನಲ್ಲಿ ಉಂಗುರಗಳಿವೆ. ನಾರಾಯಣನ ತೊಡೆಯ ಮೇಲೆ ಕುಳಿತದೇವಿ (ಲಕ್ಷ್ಮಿ) ಕಿರೀಟಮುಖಿಯಾಗಿದ್ದು, ಕಿವಿಯಲ್ಲಿ ಚಕ್ರಕುಂಡಲ, ಕೊರಳಲ್ಲಿ ಕಂಠಾಭರಣ ಹಾಗು ಕುಚಬಂಧಗಳನ್ನು ಧರಿಸಿದ್ದಾಳೆ. ದ್ವಿಭುಜಧಾರಿ ಲಕ್ಷ್ಮಿಯು ತನ್ನ ಬಲಗೈಯಿಂದ ವಿಷ್ಣುವಿನ ಬಲಭುಜವನ್ನು ಹಿಡಿದಿದ್ದು, ಎಡಗೈ ಮಧ್ಯಭಾಗಕ್ಕೆ ತುಟಿತವಾಗಿದೆ. ಮಣಿಸರದಿಂದ ಅಲಂಕಾರವಾದ ಸೀರೆ ಇದ್ದು, ಕಾಲಿನಲ್ಲಿ ದಪ್ಪನೆಯ ಕಡಗ ಹಾಗು ಪಾದಸರಗಳಿವೆ. ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಸೇರಿದ ಈ ಮೂರ್ತಿಯು ಉತ್ತಮ ರೀತಿಯಲ್ಲಿ ಅಲಂಕೃತಗೊಂಡಿದ್ದು, ಕಣ್ಮನಸೆಳೆಯುತ್ತದೆ.

೧. ಊರು : ಬಾಗಳಿ

೨. ತಾಲೂಕು : ಹರಪನಹಳ್ಳಿ

೩. ಹೆಸರು : ಲಕ್ಷ್ಮಿ ನಾರಾಯಣ

೪. ಸ್ಥಳ : ಮೊದಲು ಲಕ್ಷ್ಮಿ ನಾರಾಯಣ ದೇವಾಲಯದಲ್ಲಿದ್ದ ಮೂರ್ತಿಯು, ಪ್ರಸ್ತುತ ಇಲ್ಲಿನ ವಸ್ತು ಸಂಗ್ರಹಾಲದಲ್ಲಿದೆ.

೫. ಕಾಲ : ಕ್ರಿ.ಶ. ೧೧ನೇ ಶತಮಾನ

೬. ಬಳಸಿದ ಶಿಲೆ : ಬಳಪದ ಶಿಲೆ

ಚತುರ್ಭುಜಧಾರಿಯಾದ ಈ ಮೂರ್ತಿ ಪೀಠದ ಮೇಲೆ ಲಲಿತಾಸನದಲ್ಲಿ ಕುಳಿತಿದ್ದು, ಈತನ ತೊಡೆಯ ಮೇಲೆ ದೇವಿ ಕುಳಿತಿದ್ದಾಳೆ. ಕಿರೀಟಧಾರಿಯಾದ ನಾರಾಯಣನಿಗೆ ಶಿರಶ್ಚಕ್ರವಿದ್ದು, ಕಿವಿಯಲ್ಲಿ ಕುಂಡಲ, ಕೊರಳಲ್ಲಿ ಕಂಠಾಭರಣ, ಕೊರಳಹಾರ, ಉದರಬಂಧ, ಯಜ್ಞೋಪವೀತ,ಹಾಗು ವೈಜಯಂತಿಹಾರ ಗಳಿಂದ ಅಲಂಕೃತ ವಾಗಿದೆ. ಭುಜಕೀರ್ತಿ, ಕೇಯೂರ, ಕೈಕಡಗಳಿದ್ದು, ನಡುಬಂಧ ಹಾಗು ಅಲಂಕಾರಿಕಧೋತಿಯಿದೆ. ಕಾಲಿನಲ್ಲಿ ಕಡಗ, ಪಾದಸರಗಳಿದ್ದು, ಮೇಲಿನ ಕೈಗಳಲ್ಲಿ ಶಂಖ, ಗದೆ, ಕೆಳಗಿನ ಬಲಗೈ ವರದ ಮುದ್ರೆಯಲ್ಲಿದ್ದು, ಎಡಗೈ ಲಕ್ಷ್ಮಿಯನ್ನು ಆಲಂಗಿಸಿಕೊಂಡಿರುವಂತ ಕೆತ್ತಲಾಗಿದೆ. ನಾರಾಯಣನ ತೊಡೆಯ ಮೇಲೆ ಲಲಿತಾಸನದಲ್ಲಿ ಕುಳಿತ ಲಕ್ಷ್ಮಿ ಕಿರೀಟಧಾರಿಯಾಗಿಲ್ಲ. ಕಂಠಾಭರಣ, ಕೊರಳಹಾರ, ಯಜ್ಞೋಪವೀತ, ಕುಚಬಂಧವಿದ್ದು, ದ್ವಿಭುಜಧಾರಿಯಾಗಿದ್ದಾಳೆ. ಈಕೆಯು ಬಲಗೈಯಿಂದ ವಿಷ್ಣುವನ್ನು ಆಲಂಗಿಸಿಕೊಂಡಿದ್ದಾಳೆ. ತನ್ನ ಎಡಗೈಯನ್ನು ವಿಷ್ಣುವಿನ ಕೈಮೇಲೆ (ತನ್ನ ಉದರದ ಬಳಿಯೇ) ಹಾಕಿದ ರೀತಿ ಶಿಲ್ಪಿ ಕೆತ್ತಿದ್ದಾನೆ. ನಡುಬಂಧ, ಸೀರೆ, ಕಾಲಿನಲ್ಲಿ ಕಾಲ್ಗಡಗ, ಪಾದಸರಗಳಿಂದ ಈ ಮೂರ್ತಿ ಅಲಂಕೃತವಾಗಿದ್ದು, ಪೀಠದಲ್ಲಿ ಗರುಡನ ಶಿಲ್ಪವಿದೆ. ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಸೇರಿದ ಈ ಮೂರ್ತಿ ನೋಡಲು ಸುಂದರವಾಗಿದೆ.

೧. ಊರು : ಬಿಳಚೋಡು
೨. ತಾಲೂಕು : ಜಗಲೂರು
೩. ಹೆಸರು : ಲಕ್ಷ್ಮಿ ನಾರಾಯಣ
೪. ಸ್ಥಳ : ಈಶ್ವರ ದೇವಾಲಯದಲ್ಲಿ
೫. ಕಾಲ : ಕ್ರಿ.ಶ. ೧೧ನೇ ಶತಮಾನ
೬. ಬಳಸಿದ ಶಿಲೆ : ಬಳಪದ ಶಿಲೆ

ಪೀಠದ ಮೇಲೆ ಕುಳಿತ ಈ ಮೂರ್ತಿ ಚತುರ್ಭುಜಧಾರಿಯಾಗಿದೆ[೫೩]. ಲಲಿತಾಸನದಲ್ಲಿರುವ ಈ ಮೂರ್ತಿಯು ಕಿರೀಟಧಾರಿಯಾಗಿದ್ದು, ಮಕರಕುಂಡಲ, ಕಂಠಾಭರಣ, ಕೊರಳಹಾರ, ಉದರಬಂಧ, ಯಜ್ಞೋಪವೀತಗಳಿಂದ ಅಲಂಕೃತವಾಗಿದೆ. ಕೈಗಳಲ್ಲಿ ಕೇಯೂರ, ಕೈಕಡಗಳನ್ನು ಧರಿಸಿದ್ದು, ಮೇಲಿನ ಕೈಗಳಲ್ಲಿ ಹಿಡಿದ ಆಯುಧ ಗೋಚರಿಸುವುದಿಲ್ಲ. ಕೆಳಗಿನ ಬಲಗೈ ಅರ್ಧಕ್ಕೆ ತ್ರುಟಿತವಾಗಿರುವುದರಿಂದ ಅದು ಯಾವ ಮುದ್ರೆಯಲ್ಲಿದೆ ಅಥವಾ ಆ ಕೈಯಲ್ಲಿ ಹಿಡಿದ ಆಯುಧ ಯಾವುದೆಂದು ಹೇಳುವುದು ಕಷ್ಟ. ಎಡಗೈ ಲಕ್ಷ್ಮಿಯನ್ನು ಆಲಂಗಿಸಿದಂತಿದ್ದು, ನಡುಬಂಧ, ಅಲಂಕಾರಿಕ ಧೋತಿ , ಕಾಲ್ಕಡಗ , ಪಾದಸರ, ಬೆರಳುಂಗರಗಳಿವೆ.

ವಿಷ್ಣುವಿನ ತೊಡೆಯ ಮೇಲೆ ಕುಳಿತ ಲಕ್ಷ್ಮಿ ಕಿರೀಟಧಾರಿಯಾಗಿದ್ದು, ಆ ಕಿರೀಟದ ಹಿಂಬದಿ ಶಿರಶ್ಚಕ್ರವಿದೆ. ಕಿವಿಯಲ್ಲಿ ಚಕ್ರಕುಂಡಲ, ಕೊರಳಲ್ಲಿ ಕಂಠಾಭರಣ, ಕೊರಳಹಾರ, ಯಜ್ಞೋಪವೀತ ಹಾಗು ಕುಚಬಂಧಗಳಿವೆ.

ದ್ವಿಭುಜಧಾರಿಯಾದ ಈಕೆಯು ಬಲಗೈಯಿಂದ ನಾರಾಯಣನ ಬಲಭುಜವನ್ನು ಆಲಂಗಿಸಿಕೊಂಡಿದ್ದು, ಎಡಗೈ ಅರ್ಧಭಾಗಕ್ಕೆ ತ್ರುಟಿತವಾಗಿದೆ. ವೈಜಯಂತಿ ಹಾರ, ಕಾಲಿನಲ್ಲಿ ಕಡಗ, ಪಾದಸರ ಹಾಗು ಬೆರಳುಂಗರಗಳಿಂದ ಅಲಂಕೃತವಾಗಿದೆ. ಈಕೆ ತನ್ನ ಎಡಗಾಲ ತೊಡೆಯ ಮೇಲೆ ಬಲಗಾಲನ್ನು ಹಾಕಿಕೊಂಡು ಸುಖಾಸೀನವಾಗಿ ಕುಳಿತಿರುವುದು ಈ ಮೂರ್ತಿಯ ವಿಶೇಷ. ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಸೇರಿದ ಈ ಮೂರ್ತಿಯು ನೋಡಲು ಸುಂದರವಾಗಿದೆ.

ವರಹಾ ಮೂರ್ತಿ :- ವಿಷ್ಣುವಿನ ಮತ್ಸ್ಯ, ಕೂರ್ಮ, ನರಸಿಂಹ ಅವತಾರಗಳಂತೆ ವರಹಾವತಾರವೂ ಸಹ ವಿಷ್ಣುವಿನ ದಶ ಅವತಾರಗಳಲ್ಲಿ ಒಂದು. ಅರ್ಧಪ್ರಾಣಿದೇಹ , ಉಳಿದರ್ಧ ಮನುಷ್ಯ ದೇಹವನ್ನು ಹೊಂದಿದ ಅವತಾರ ಇದಾಗಿದೆ. ಮುಖ ವರಹಾ(ಹಂದಿ)ದಾಗಿದ್ದು, ಉಳಿದ ದೇಹ ಭಾಗ ಮನುಷ್ಯನದಾಗಿರುತ್ತದೆ.[೫೪]. ದಾವಣಗೆರೆ ಜಿಲ್ಲೆಯಲ್ಲಿ ವರಹಾ ಮೂರ್ತಿಗಳು ಬಹು ಕಡಿಮೆ ಪ್ರಮಾಣದಲ್ಲಿ ದೊರೆತಿವೆ. ಅವುಗಳ ವಿವರ ಈ ಕೆಳಗಿನಂತಿದೆ.

೧. ಊರು : ದೇವರ ತಿಮ್ಮಲಾಪುರ
೨. ತಾಲೂಕು : ಹರಪನಹಳ್ಳಿ
೩. ಹೆಸರು : ವರಾಹ
೪. ಸ್ಥಳ : ತಿಮ್ಮಪ್ಪ ದೇವಾಲಯದಲ್ಲಿ
೫. ಕಾಲ : ಕ್ರಿ.ಶ. ೧೩ನೇ ಶತಮಾನದ ಮಧ್ಯ ಭಾಗ
೬. ಬಳಸಿದ ಶಿಲೆ : ಬಳಪದ ಶಿಲೆ

ಸರ್ಪದ ಮೇಲೆ ಲಲಿತಾಸಾನದಲ್ಲಿ ಕುಳಿತ ಈ ಮೂರ್ತಿ ಚತುರ್ಭುಜಧಾರಿಯಾಗಿದೆ. ವರಹನ ತಲೆಯನ್ನು ಹೊಂದಿದ ಈ ಮೂರ್ತಿ ಕರಂಡಮುಕುಟದಾರಿಯಾಗಿದ್ದು, ಕೊರಳಲ್ಲಿ ಅನೇಕ ಬಗೆಯ ಹಾರಗಳಿವೆ. ಉದರಬಂಧ, ಯಜ್ಞೋಪವೀತಗಳಿದ್ದು, ಭುಜಕೀರ್ತಿ, ಕೇಯೂರ ಹಾಗು ಕೈಯಲ್ಲಿ ಕಡಗಗಳಿವೆ. ಮೇಲಿನ ಕೈಗಳಲ್ಲಿ ಚಕ್ರ,(?)ಹಾಗು ಶಂಖವಿದ್ದು, ಬಲ ಕೆಳಗಿನ ಕೈ ಅಭಯ ಮುದ್ರೆಯಲ್ಲಿದೆ. ಎಡಗೈ ತನ್ನ ಎಡತೊಡೆಯ ಮೇಲೆ ಕುಳಿತ ಭೂದೇವಿಯ ಸೊಂಟವನ್ನು ಬಳಸಿ ಹಿಡಿದಿದೆ. ನಡುವಿನಲ್ಲಿ ನಡುಬಂಧ, ಪಾದದವರೆಗೆ ಇಳಿಬಿದ್ದ ಪಂಚೆಯಿದ್ದು, ಕಾಲ್ಕಡಗ ಹಾಗು ಪಾದಸರಗಳಿಂದ ಈಮೂರ್ತಿ ಅಲಂಕೃತವಾಗಿದೆ.

ವರಹಮೂರ್ತಿಯ ಎಡತೊಡೆಯ ಮೇಲೆ ವರಾಹಿ ಕುಳಿತಿದ್ದು, ಆಕೆಯೂ ಸಹ ಕರಂಡ ಮುಕುಟಧಾರಿಯಾಗಿದ್ದಾಳೆ. ಈ ಮೂರ್ತಿಯ ಕಿವಿಯಲ್ಲಿ ಚಕ್ರಕುಂಡಲಗಳಿದ್ದು, ಕೊರಳಲ್ಲಿ ಕಂಠಾಭರಣ, ಕೊರಳಹಾರ ಹಾಗು ಕುಚಬಂಧಗಳಿವೆ. ದ್ವಿಭುಜೆಯಾದ ಈಕೆಯು ಬಲಗೈಯಲ್ಲಿ ಪದ್ಮ , ಎಡಗೈಯಲ್ಲಿ ಫಲ (?) ಹಿಡಿದಿದ್ದು, ಕೈಯಲ್ಲಿ ಕಡಗಗಳಿವೆ. ಪಾದದವರೆಗೆ ಇಳಿಬಿದ್ದ ಸೀರೆಯಿದ್ದು, ಕಾಲಿನಲ್ಲಿ ಕಡಗ ಹಾಗು ಪಾದಸರಗಳಿವೆ.

ಸರ್ಪದ ಮೇಲೆ ಕುಳಿತ ವರಹನ ತಲೆ ಮೇಲೆ ಸರ್ಪ ತನ್ನ ಏಳು ಹೆಡೆಯನ್ನು ಬಿಚ್ಚಿ ಹಿಡಿದಿದಂತಿದೆ. ಪೀಠದಲ್ಲಿ ಅಂಜಲಿಮುದ್ರೆಯಲ್ಲಿ ಧ್ಯಾನಸಕ್ತನಾಗಿರುವ ಗರುಡ ಶಿಲ್ಪ ವಿದ್ದು, ವರಹ ಮೂರ್ತಿಯ ಸುತ್ತಲೂ ಅಲಂಕೃತ ಪ್ರಭಾವಳಿ ಇದೆ. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ವಿಜಯನಗರ ಕಾಲದ್ದೆಂದು ಹೇಳಬಹುದು.

ಗರುಡ ಮೂರ್ತಿಗಳು :- ಗರುಡ ವಿಷ್ಣುವಿನ ವಾಹನ. ಈ ಮೂರ್ತಿಗಳು ಸಾಮಾನ್ಯವಾಗಿ ವೈಷ್ಣವ ಮೂರ್ತಿಗಳ ಪೀಠ ಬಿಂಬದಲ್ಲಿ ಇಲ್ಲವೇ, ಗರ್ಭಗುಡಿ , ಅಂತರಾಳ, ನವರಂಗ ದ್ವಾರದ ಲಲಾಟದಲ್ಲಿ ಈ ಮೂರ್ತಿ ಒಂದು ಚಿಕ್ಕ ಉಬ್ಬು ಶಿಲ್ಪದ ರೀತಿಯಲ್ಲಿರುತ್ತದೆ. ಆದರೆ ದಾವಣಗೆರೆ ಜಿಲ್ಲೆಯ ದೇವಾಲಯಗಳ ಕಂಬಗಳ ಮೇಲೆ ಅಥವ ಭಿತ್ತಿಯಲ್ಲಿ ಗರುಡನನ್ನು ಚಿಕ್ಕ ಶಿಲ್ಪದ ರೀತಿಯಲ್ಲಿ ಕೆತ್ತಿರುವುದನ್ನು ಕಾಣಬಹುದು. ಇದೇ ಜಿಲ್ಲೆಯ ದೇವರಹಳ್ಳಿ ಮತ್ತು ಕೊಣಚಗಲ್ಲಿನಲ್ಲಿ ಗರುಡಮೂರ್ತಿಗಳು ದೊರಕಿವೆ.

೧. ಊರು : ಕೊಣಚಗಲ್ಲು
೨. ತಾಲೂಕು : ಜಗಲೂರು
೩. ಹೆಸರು : ಗರುಡ
೪. ಸ್ಥಳ : ವೀರಭದ್ರ ದೇವಾಲಯದ ಮುಂದಿನ ಗರುಡ ಗಂಬದ ಮೇಲೆ
೫. ಕಾಲ : ಕ್ರಿ.ಶ.೧೫ ನೇ ಶತಮಾನ
೬. ಬಳಸಿದ ಶಿಲೆ : ಗ್ರಾನೈಟ್

ದ್ವಿಭುಜಧಾರಿಯಾದ ಈ ಮೂರ್ತಿ ವೀರಾಸನದಲ್ಲಿದೆ. ಬಲಮೊಣಕಾಲನ್ನು ನೆಲಕ್ಕಿಟ್ಟು ಎಡಗಾಲ ಮೇಲೆ ಕುಳಿತಿರುವ ಈ ಮೂರ್ತಿ, ಹಾರಲು ಸಜ್ಜಾಗುತ್ತಿರುವಂತೆ ಕಾಣಬರುತ್ತದೆ. ಕರಂಡ ಮಕುಟಧಾರಿಯಾದ ಈ ಮೂರ್ತಿಗೆ ಅಗಲವಾದ ಕಿವಿಗಳಿದ್ದು, ಕಿವಿಯಲ್ಲಿ ಕುಂಡಲಗಳಿವೆ. ಕೊರಳಲ್ಲಿ ಕಂಠಾಭರಣ ಹಾಗು ಅನೇಕ ಬಗೆಯ ಹಾರಗಳಿವೆ. ಅಂಜಲಿ ಮುದ್ರೆಯಲ್ಲಿರುವ ಈ ಮೂರ್ತಿಯು ಭುಜಕೀರ್ತಿ, ಕೈಗಳಲ್ಲಿ ಕಡಗ, ಕೇಯೂರಗಳಿಂದ ಅಲಂಕೃತವಾಗಿದ್ದು, ಕೈಗಳ ಭುಜಭಾಗದಲ್ಲಿ ಪಕ್ಷಿಯೋಪಾದಿಯ ರೆಕ್ಕೆಗಳಿವೆ. ಕಾಲಬಳಿ ಇಳಿಬಿದ್ದ ದೋತಿ ಇದ್ದು, ಕಾಲಿನಲ್ಲಿ ಕಡಗಗಳಿವೆ. ಈ ಮೂರ್ತಿಯನ್ನು ಲಕ್ಷಣಗಳ ಆಧಾರದ ಮೇಲೆ ವಿಜಯನಗರ ಕಾಲಕ್ಕೆ ಸೇರಿದ್ದಾಗಿದೆ ಎಂದು ಹೇಳಬಹುದು.

೧. ಊರು : ದೇವರಹಳ್ಳಿ
೨. ತಾಲೂಕು : ಚನ್ನಗಿರಿ
೩. ಹೆಸರು : ಗರುಡ
೪. ಸ್ಥಳ : ರಂಗನಾಥ ದೇವಾಲಯದ ಎದುರಿನ ಗರುಡ ಮಂಟಪದಲ್ಲಿ
೫. ಕಾಲ : ಕ್ರಿ.ಶ. ೧೫ನೇ ಶತಮಾನ
೬. ಬಳಸಿದ ಶಿಲೆ : ಗ್ರಾನೈಟ್

[illegible]

[illegible]

[illegible]

[illegible]

[illegible]

[illegible]

ದ್ವಿಭುಜಧಾರಿಯಾದ ಈ ಮೂರ್ತಿ ಪೀಠದ ಮೇಲೆ ವೀರಾಸನ (?)ದಲ್ಲಿದ್ದು, ಬಲಮೊಣಕಾಲನ್ನು ನೆಲಕ್ಕಿಟ್ಟು, ಎಡಗಾಲ ಮೇಲೆ ಕುಳಿತಿರುವ ಈ ಮೂರ್ತಿ ಹಾರಲು ಸಜ್ಜಾಗುತ್ತಿರುವಂತೆ ಕಾಣುತ್ತದೆ. ಕರಂಡ ಮುಕುಟಧಾರಿಯಾದ ಈ ಮೂರ್ತಿಗೆ ಅಗಲವಾದ ಕಿವಿಗಳಿದ್ದು,. ಕಿವಿಯಲ್ಲಿ ಕುಂಡಲಗಳಿವೆ. ಕೊರಳಲ್ಲಿ ಕಂಠಾಭರಣಗಳಿವೆ. ಅಂಜಲಿ ಮುದ್ರೆಯಲ್ಲಿರುವ ಈ ಮೂರ್ತಿಯು ಭುಜಕೀರ್ತಿ , ಕೈಗಳಲ್ಲಿ ಕಡಗ, ಕೇಯೂರಗಳನ್ನು ಧರಿಸಿದ್ದು, ನಡುವಿನಲ್ಲಿ ನಡುಬಂಧ, ಇಳಿಬಿದ್ದ ಧೋತಿ ಹಾಗು ಕಾಲಿನಲ್ಲಿ ಕಡಗಗಳಿವೆ. ಈ ಮೂರ್ತಿಯು ಕೊಣಚಗಲ್ಲಿನಲ್ಲಿರುವ ಮೂರ್ತಿಗಿಂತಲೂ ಗಾತ್ರದಲ್ಲಿ ದೊಡ್ಡದಾಗಿದೆ. ಮೂರ್ತಿ ಲಕ್ಷಣದ ಆಧಾರದ ಮೇಲೆ ಇದನ್ನು ವಿಜಯನಗರ ಕಾಲದ್ದೆಂದು ಹೇಳಬಹುದು.

ರತಿ ಮನ್ಮಥ :- ಪ್ರೀತಿಯ ದೇವರೆಂದು ಪ್ರಸಿದ್ಧಿಯಾದ ಮನ್ಮಥ ಅಥವ ಕಾಮನ ಮೂರ್ತಿ ಶಿಲ್ಪದ ವಿವರಣೆಯನ್ನು ಶಿಲ್ಪರತ್ನ , ವಿಷ್ಣು ಧರ್ಮೋತ್ತರ ಪುರಾಣ ಗ್ರಂಥಗಳು ಉಲ್ಲೇಖಿಸುತ್ತವೆ[೫೫]. ಮನ್ಮಥನು ತನ್ನ ಹೆಂಡತಿಯರಾದ ರತಿ ಮತ್ತು ಪ್ರೀತಿಯರೊಡನೆ ದ್ವಿಭಂಗದಲ್ಲಿ ಸ್ಥಾನಿಕವಾಗಿರುತ್ತಾನೆ. ಈ ರೀತಿಯ ಮೂರ್ತಿಗಳು ಸಾಮಾನ್ಯವಾಗಿ ದೇವಾಲಯದ ಭಿತ್ತಿ ಇಲ್ಲವೇ ಕಂಭ ಅಥವ ದ್ವಾರದ ಕೆಳಭಾಗದಲ್ಲಿ ಕಾಣಬರುತ್ತವೆ. ಬಾಗಳಿಯ ಕಲ್ಲೇಶ್ವರ ದೇವಾಲಯದ ನವರಂಗದ ದ್ವಾರದ ಕೆಳಭಾಗದಲ್ಲಿ ಈ ರೀತಿಯ ಶಿಲ್ಪಗಳಿವೆ. ಪ್ರತ್ಯೇಕ ಮೂರ್ತಿಗಳು ಚಿಗಟೇರಿಯೊಂದನ್ನು ಹೊರತುಪಡಿಸಿ, ಈ ಜಿಲ್ಲೆಯ ಉಳಿದೆಡೆ ಕಂಡು ಬಂದಿಲ್ಲ.

೧. ಊರು : ಚಿಗಟೇರಿ
೨. ತಾಲೂಕು : ಹರಪನಹಳ್ಳಿ
೩. ಹೆಸರು : ರತಿ ಮನ್ಮಥ
೪. ಸ್ಥಳ : ರಾಮಲಿಂಗೇಶ್ವರ ದೇವಾಲಯದಲ್ಲಿ
೫. ಕಾಲ : ಕ್ರಿ.ಶ. ೧೧ನೇ ಶತಮಾನ
೬. ಬಳಸಿದ ಶಿಲೆ : ಬಳಪದ ಶಿಲೆ

ಕರಂಡ ಮಕುಟಧಾರಿಯಾದ ಈ ಮೂರ್ತಿಯ ಕಿವಿಯಲ್ಲಿ ಕುಂಡಲ ಹಾಗು ಕೊರಳಲ್ಲಿ ವಿವಿಧ ಹಾರಗಳಿವೆ. ಯಜ್ಞೋಪವೀತ ಧರಿಸಿರುವ ಈ ಮೂರ್ತಿ ದ್ವಿಭುಜಧಾರಿಯಾಗಿದ್ದು, ಭುಜಕೀರ್ತಿ, ಕೇಯೂರ, ಕೈಕಡಗಳಿಂದ ಅಲಂಕೃತವಾಗಿದೆ. ಎಡಗೈನಲ್ಲಿ ಜಲ್ಲೆ(ಕಬ್ಬು)ಹಿಡಿದಿದ್ದು , ಬಲಗೈನ ಮುಂಭಾಗ ತ್ರುಟಿತವಾಗಿದೆ. ಉದರಬಂಧ , ನಡುಬಂಧ ವೈಜಯಂತಿ ಹಾರ ಹಾಗು ನಡುವಿನಿಂದ ಇಳಿಬಿದ್ದ ಇಳಿಬಟ್ಟೆಗಳಿವೆ. ಕಾಲಿನಲ್ಲಿ ಕಾಲ್ಕಡಗ ಹಾಗು ಪಾದಸರಗಳಿವೆ. ಮನ್ಮಥನ ಎಡಭಾಗಕ್ಕೆ ಈತನ ಪತ್ನಿ ರತಿ ಇದ್ದು, ಆಕೆಯು ಜಟಾಧಾರೆಯಾಗಿದ್ದಾಳೆ. ಕಿವಿಯಲ್ಲಿ ಕುಂಡಲ, ಕಂಠಾಭರಣ, ಕೊರಳಹಾರ , ಕುಚಬಂಧ ಹಾಗು ಯಜ್ಞೋಪವೀತಗಳಿವೆ. ಕೈಗಳಲ್ಲಿ ಬಳೆಧರಿಸಿದ ಈ ಮೂರ್ತಿಯ ಎಡಗೈಯಲ್ಲಿ ಪದ್ಮವಿದ್ದು, ಬಲಗೈ ಕಟ್ಯಾವಲಂಬಿತವಾಗಿದೆ.

ಕಟಿಬಂಧವಿದ್ದು, ನಡುವಿನಿಂದ ಇಳಿಬಿದ್ದ ಬಟ್ಟೆ ಎರಡೂ ಕಾಲಿನ ಮಧ್ಯದಲ್ಲಿದೆ. ಕಾಲಿನಲ್ಲಿ ಕಾಲ್ಕಡಗ ಮತ್ತು ಪಾದಸರಗಳಿವೆ. ಮನ್ಮಥನ ಬಲಗಾಲ ಬಳಿ ಆತನ ಮತ್ತೊಬ್ಬ ಹೆಂಡತಿಯಾದ ಪ್ರೀತಿ ಇದ್ದು, ಆಕೆ ಅಲಂಕೃತಳಾಗಿದ್ದಾಳೆ. ಎಡಗೈಯಲ್ಲಿ ಕಬ್ಬು, ಬಲಗೈಯಲ್ಲಿ ಫಲವನ್ನು ಹಿಡಿದಿರುವ ಈ ಶಿಲ್ಪವನ್ನು ಚಿಕ್ಕದಾಗಿ ಕೆತ್ತಲ್ಪಟ್ಟಿರುವುದು ಈ ಮೂರ್ತಿ ಶಿಲ್ಪದ ವಿಶಿಷ್ಟತೆ. ಮೂರ್ತಿಯ ಲಕ್ಷಣದ ಆಧಾರದ ಮೇಲೆ ಇದು ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಸೇರಿದ್ದೆಂದು ಹೇಳಬಹುದಾಗಿದೆ.

ಈ ಮೇಲಿನ ಎಲ್ಲಾ ವೈಷ್ಣವ ಮೂರ್ತಿಗಳ ಅಧ್ಯಯನದಿಂದ ದಾವಣಗೆರೆ ಜಿಲ್ಲೆಯಲ್ಲಿ ಇತರೆ ಪಂಥಗಳಂತೆ ವೈಷ್ಣವ ಪಂಥವು ಸಹ ಅಸ್ತಿತ್ವದಲ್ಲಿತ್ತೆಂದು, ಅದರ ಆರಾಧಕರು ಸಹ ತಕ್ಕಮಟ್ಟಿಗೆ ಇದ್ದರೆಂದು ಹೇಳಬಹುದು.

೫.೧.೩. ಶಾಕ್ತ ಪಂಥೀಯ ಮೂರ್ತಿಗಳು :-

ಶಾಕ್ತ ಸಂಪ್ರದಾಯ ವೈದಿಕಯುಗಕ್ಕಿಂತಲೂ ಪ್ರಾಚೀನವೆನ್ನುವುದು ನಿರ್ವಿವಾದ[೫೬]. ಮಾತೃ ಮರ್ಯಾದೆ ಮತ್ತು ಆಚರಣೆಯೇ ಈ ಸಂಪ್ರದಾಯದ ಮೂಲಾಧಾರ. ' ಜಗತ್ ಶಕ್ತಿಮಯಂ ವಿದ್ಯಾತ್ ', ' ಶಕ್ತಿ ಪ್ರೇರಯಿತಾ ಶಿವಃ (ಕಾರಣಾಗಮ) ಎನ್ನುವುದು ಈ ಸಂಪ್ರದಾಯದ ಮುಖ್ಯ ನಿಲವು. ಇದರಲ್ಲಿ ದಕ್ಷಿಣಾಚಾರವೆಂದೂ, ವಾಮಚಾರವೆಂದೂ ಎರಡು ಬಗೆಗಳಿವೆ[೫೭]. ಮೊದಲನೆಯದು ಸಾತ್ತ್ವಿಕ, ವೇದಗಳನ್ನವಲಬಿಂಸಿ ನಿಂತ ಪಂಥವಾಗಿದ್ದು, ಪುರಾಣಗಳ ಪ್ರಭಾವ ಹೆಚ್ಚು. ಎರಡನೆಯದು ರಾಜಸ, ವೇದ ಬಾಹ್ಯವಾದುದೆಂದು ಪ್ರತೀತಿ: ಇದರಲ್ಲಿ ಶಿವನಿಗಿಂತಲೂ ಶಕ್ತಿಗೆ ಪ್ರಾಶಸ್ತ್ಯ ಹೆಚ್ಚು. ಇಲ್ಲಿ ದೇವಿ ಪ್ರಧಾನವಾಗಿದ್ದು, ಭಕ್ತರಿಂದ ಆರಾಧನೆಗೊಳಪಡುವ ದೇವತೆಯಾಗಿದ್ದಾಳೆ. ಹಾಗು ವಿವಿಧ ಹೆಸರುಗಳಿಂದ ಕರೆಯಲ್ಪಡುತ್ತಾಳೆಂದು 'ಬಹ್ವೃಚೋಪ ನಿಷತ್ ', 'ಕೇನೊಪನಿಷತ್ ', 'ವಾಜಸನೇಯಿ ಸಂಹಿತೆ', ಮತ್ತು 'ತೈತ್ತರೀಯ ಬ್ರಾಹ್ಮಣ', 'ಮಾರ್ಕಂಡೇಯ' ಮೊದಲಾದ ಪುರಾಣ ಗ್ರಂಥಗಳಲ್ಲಿ ಉಲ್ಲೇಖವಿದೆ[೫೮]. ಶಾಕ್ತರ ನಂಬಿಕೆ ಪ್ರಕಾರ ಎಲ್ಲಾ ಸ್ತ್ರೀಯರು ದೇವತಾ ಸ್ವರೂಪರು ' (ಸ್ತ್ರೀಯಃ ನಮಸ್ತಾಃ ಸಕಲಾ ಜಗತ್ತ) , (ಪ್ರಕೃತೇ ಪ್ರತಿ ವಿಶ್ವೇಷು ದೇವ್ಯಶ್ಚ ಸರ್ವಯೋಷಿತಃ) ಇದು ನೂರಾರು ಮಾತೃ ದೇವತೆಯರ ಕಲ್ಪನೆಗೆ ಎಡೆ ಮಾಡಿಕೊಟ್ಟಿತು. ಮಾತೃ ಪರಂಪರೆಯಲ್ಲಿ ಪಾರ್ವತಿ ಶಿವನ ಹಿನ್ನಲೆಯಲ್ಲಿ ಪೂಜೆಗೊಳ್ಳಪಟ್ಟರೆ, ಲಕ್ಷ್ಮಿ ವಿಷ್ಣುವಿನ ಜೊತೆ,ಸರಸ್ವತಿ ಬ್ರಹ್ಮನೊಂದಿಗೆ ಗುರುತಿಸಲ್ಪಟ್ಟು ಆರಾಧನೆಗೊಳ್ಳುತ್ತಾರೆ[೫೯].

ದಾವಣಗೆರೆ ಜಿಲ್ಲೆಯಲ್ಲಿ ಸರಸ್ವತಿ, ಪಾರ್ವತಿ, ಲಕ್ಷ್ಮಿ , ಚಾಮುಂಡಿ (ದುರ್ಗಾ) ಮಹಾಕಾಳಿ , ಮಹಿಷಾಸುರಮರ್ಧಿನಿ, ಸಪ್ತ ಮಾತೃಕೆಯರ ಪ್ರತ್ಯೇಕ ಮೂರ್ತಿಗಳು ದೊರೆತಿವೆ.

ಸರಸ್ವತಿ :-

ಮಾತೃದೇವತಾ ಪರಂಪರೆಯಲ್ಲಿ ಸರಸ್ವತಿಗೆ ಅಗ್ರಸ್ಥಾನವಿದೆ. ಮಂಡೊಕ ಉಪನಿಷತ್, ವಿಷ್ಣು ಪುರಾಣ ಮತ್ತು ಮಾರ್ಕಾಂಡೇಯ ಪುರಾಣಗಳು ಬ್ರಹ್ಮ ಮತ್ತು ಸರಸ್ವತಿಯ ಆರಾಧನೆಯನ್ನು ಉಲ್ಲೇಖಿಸುತ್ತವೆ[೬೦]. ಸರಸ್ವತಿ ಆರಾಧನೆ ಈ ಭಾಗದಲ್ಲಿ ಪ್ರಚಲಿತದಲ್ಲಿತ್ತೆಂದು ಹೇಳಲು ಅಲ್ಲಲ್ಲಿ ಸರಸ್ವತಿ ಮೂರ್ತಿಗಳು ದೊರಕಿವೆ.

೧. ಊರು : ಬಾಗಳಿ

೨. ತಾಲೂಕು : ಹರಪನಹಳ್ಳಿ

೩. ಹೆಸರು : ಸರಸ್ವತಿ

೪. ಸ್ಥಳ : ಮೂಲತಃ ಕಲ್ಲೇಶ್ವರ ದೇವಾಲಯದಲ್ಲಿದ್ದ ಈ ಮೂರ್ತಿ, ಇಲ್ಲಿನ ವಸ್ತು ಸಂಗ್ರಹಾಲಯದಲ್ಲಿ[೬೧]

೫. ಕಾಲ : ಕ್ರಿ.ಶ. ೧೧ನೇ ಶತಮಾನ

೬. ಬಳಸಿದ ಶಿಲೆ : ಬಳಪದ ಕಲ್ಲು

ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತಿರುವ ಈ ಮೂರ್ತಿ ಕರಂಡ ಮಕುಟಧಾರಿಯಾಗಿದ್ದು, ಕಿವಿಯಲ್ಲಿ ಕುಂಡಲಗಳಿವೆ. ಕೊರಳಲ್ಲಿ ಕಂಠಹಾರ, ಎದೆಹಾರ, ವೈಜಯಂತಿ ಮಾಲೆಗಳಿದ್ದು, ಕುಚಬಂಧವಿದೆ. ಹಾಗೆಯೇ ಭುಜಕೀರ್ತಿ, ಕೇಯೂರ, ಕೈಕಡಗಗಳಿವೆ. ಚತುರ್ಭುಜಧಾರಿಯಾದ ಈ ಮೂರ್ತಿಯು ಮೇಲಿನ ಕೈಗಳಲ್ಲಿ ಅಂಕುಶ, ಪಾಶ, ಕೆಳಗಿನ ಕೈಗಳಲ್ಲಿ ಅಕ್ಷಯಮಾಲೆ, ಪುಸ್ತಕಗಳಿದ್ದು, ಬೆರಳುಗಳಲ್ಲಿ ಉಂಗುರಗಳಿವೆ. ಅಲಂಕೃತ ನಡುಬಂಧ, ಕಾಲ್ಕಡಗ , ಪಾದಸರವಿದ್ದು, ಸುತ್ತಲೂ ಪ್ರಭಾವಳಿ ಇದೆ. ಆ ಪ್ರಭಾವಳಿಯ ಮೇಲ್ಭಾಗ ತ್ರುಟಿತವಾಗಿದೆ. ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಸೇರಿದ ಈ ಮೂರ್ತಿನೋಡಲು ಆಕರ್ಷಣೀಯವಾಗಿದೆ.

೧. ಊರು : ಗುಡಿಹಳ್ಳಿ

೨. ತಾಲೂಕು : ಹರಪನಹಳ್ಳಿ

೩. ಹೆಸರು : ಸರಸ್ವತಿ

೪. ಸ್ಥಳ : ಕಾಳಿಕಾ ದೇವಾಲಯದಲ್ಲಿ

೫. ಕಾಲ : ಕ್ರಿ.ಶ. ೧೪ನೇ ಶತಮಾನ

೬. ಬಳಸಿದ ಶಿಲೆ : ಬಳಪದ ಕಲ್ಲು

ಪೀಠದ ಮೇಲೆ ಪದ್ಮಾಸನದಲ್ಲಿ ಆಸೀನವಾಗಿರುವ ಈ ಮೂರ್ತಿಯು ಕಿರೀಟ ಮುಕುಟಧಾರಿಯಾಗಿದ್ದು, ಕಿವಿಯಲ್ಲಿ ಪತ್ರ ಕುಂಡಲ , ಮೂಗುಬೊಟ್ಟು, ಕಂಠಾಭರಣ, ಕೊರಳಹಾರ, ಕುಚಬಂಧಗಳಿದ್ದು, ಭುಜಕೀರ್ತಿ, ಕೇಯೂರ, ಕೈಕಡಗ, ಬೆರಳುಗಳಲ್ಲಿ ಉಂಗುರಗಳನ್ನು ಧರಿಸಿದೆ. ಚರ್ತುಭುಜಧಾರಿಯಾದ ಈ ಮೂರ್ತಿಯ ಮೇಲಿನ ಕೈಗಳಲ್ಲಿ ಅಂಕುಶ, ಪಾಶವಿದ್ದು, ಕೆಳಗಿನ ಕೈಗಳಲ್ಲಿ ಅಕ್ಷಮಾಲೆಯುಕ್ತ ಅಭಯ ಹಸ್ತ ಹಾಗು ಪುಸ್ತಕವಿದ್ದು, ಪೀಠದವರೆಗೂ ಇಳಿಬಿದ್ದ ವೈಜಯಂತಿ ಮಾಲೆ ಅಲ್ಲದೆ, ಕಟಿಬಂಧ, ಪಾದಗಳ ಮೇಲೆ ಇಳಿಬಿದ್ದ ವಸ್ತ್ರವಿದೆ. ಕಾಲುಗಳಲ್ಲಿ ದಪ್ಪನೆಯ ಕಾಲ್ಕಡಗ, ಪಾದಸರ ಮತ್ತು ಕಾಲಿನ ಬೆರಳುಗಳಲ್ಲಿ ಉಂಗುರಗಳಿವೆ. ಸುತ್ತಲೂ ಪ್ರಭಾವಳಿಯಿದ್ದು, ಪೀಠದಲ್ಲಿ ಸರಸ್ವತಿಯ ವಾಹನ ಹಂಸವಿದೆ. ಕಿರೀಟ ಮಕುಟ, ಮೂಗುಬೊಟ್ಟು, ಪಾದಗಳವರೆಗೆ ಇಳಿಬಿದ್ದ ವೈಜಯಂತಿ ಮಾಲೆಗಳಿರುವುದು ಈ ಮೂರ್ತಿಯ ವಿಶೇಷವಾಗಿದೆ. ಈ ಮೂರ್ತಿಯು ಲಕ್ಷಣಗಳ ಆಧಾರದ ಮೇಲೆ ಇದು ವಿಜಯನಗರ ಕಾಲಕ್ಕೆ ಸೇರಿದ್ದೆಂದು ಹೇಳಬಹುದು.

೧. ಊರು : ನೀಲಗುಂದ
೨. ತಾಲೂಕು : ಹರಪನಹಳ್ಳಿ
೩. ಹೆಸರು : ಸರಸ್ವತಿ
೪. ಸ್ಥಳ : ಭೀಮಲಿಂಗೇಶ್ವರ ದೇವಾಲಯದ ನವರಂಗದಲ್ಲಿದೆ.
೫. ಕಾಲ : ಕ್ರಿ.ಶ. ೧೧ನೇ ಶತಮಾನ
೬. ಬಳಸಿದ ಶಿಲೆ : ಬಳಪದ ಶಿಲೆ

ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತಿರುವ ಈ ಮೂರ್ತಿಯು ಕಿರೀಟ ಮಕುಟಧಾರಿಯಾಗಿದ್ದು, ಕಿವಿಯಲ್ಲಿ ಚಕ್ರಕುಂಡಲ, ಶಿರಶ್ಚಕ್ರವಿದೆ. ಕೊರಳಲ್ಲಿ ಕಂಠಾಭರಣ, ಕೊರಳಹಾರವಿದ್ದು, ಕುಚಬಂಧವಿದೆ. ಈ ಎರಡು ಮೂರ್ತಿಯ ಕೈಗಳು ಮಾತ್ರ ಗೋಚರಿಸುತ್ತವೆ. ಬಲಗೈ ಸಂಪೂರ್ಣ ತ್ರುಟಿತವಾಗಿದ್ದು, ಎಡಗೈ ಮುಂಭಾಗವು ಸಹ ತ್ರುಟಿತವಾಗಿದೆ. ಕಾಲಿನವರೆಗೆ ಇಳಿಬಿದ್ದ ಸೀರೆ, ಕಾಲ್ಕಡಗ, ಪಾದಸರಗಳಿದ್ದು, ಬಲಗಾಲು ತ್ರುಟಿತವಾಗಿದೆ. ಇಷ್ಟೆಲ್ಲಾ ತ್ರುಟಿತವಾಗಿರುವ ಈ ಮೂರ್ತಿಯ ಲಕ್ಷಣಗಳು ಬಾಗಳಿಯಲ್ಲಿ ದೊರೆತ ಸರಸ್ವತಿ ಮೂರ್ತಿಯ ಲಕ್ಷಣಗಳಿಗೆ ಹೋಲಿಕೆ ಆಗುತ್ತವೆ. ಆದುದರಿಂದ ಸರಸ್ವತಿಯೆಂದು ಹೇಳುವುದರಲ್ಲಿ ಸಂಶಯವಿಲ್ಲ ಹಾಗು ಕಲ್ಯಾಣಿ ಚಾಲುಕ್ಯರ ಕಾಲದ್ದೆಂದು ಹೇಳಬಹುದಾಗಿದೆ.

೧. ಊರು : ಬೇತೂರು
೨. ತಾಲೂಕು : ದಾವಣಗೆರೆ
೩. ಹೆಸರು : ಸರಸ್ವತಿ
೪. ಸ್ಥಳ : ಕಾಳಿಕಾ ದೇವಾಲಯದಲ್ಲಿದೆ
೫. ಕಾಲ : ಕ್ರಿ.ಶ. ೧೧ನೇ ಶತಮಾನ
೬. ಬಳಸಿದ ಶಿಲೆ : ಬಳಪದ ಶಿಲೆ

ಚರ್ತುಭುಜಧಾರಿಯಾದ ಈ ಮೂರ್ತಿ ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತಿದ್ದು, ಈ ಮೂರ್ತಿ ಕಿರೀಟ ಮಕುಟಧಾರಿಯಾಗಿದೆ. ಕಿವಿಯಲ್ಲಿ ಚಕ್ರಕುಂಡಲ, ಮೂಗಿನಲ್ಲಿ ಮೂಗುಬೊಟ್ಟು, ಕೊರಳಲ್ಲಿ ಕಂಠಾಭರಣ, ವಿವಿಧ ಬಗೆಯ ಕೊರಳಹಾರ, ಶಿರಶ್ಚಕ್ರಗಳಿಂದ ಅಲಂಕೃತವಾಗಿದೆ. ಬಾಗಳಿಯ ಸರಸ್ವತಿ ಮೂರ್ತಿಯಂತೆ ಈ ಮೂರ್ತಿಯ ವೈಜಯಂತಿ ಮಾಲೆಯು ಸಹ ಪೀಠದವರೆಗೆ ಇಳಿಬಿದ್ದಿದೆ. ಚರ್ತುಭುಜಧಾರಿ ಈ ಮೂರ್ತಿಗೆ ಭುಜಕೀರ್ತಿ, ಕೇಯೂರ, ಕೈಕಡಗಗಳಿದ್ದು, ಮೇಲಿನ ಕೈಯಲ್ಲಿ ಅಂಕುಶ, ಪಾಶ, ಕೆಳಗಿನ ಕೈಗಳಲ್ಲಿ ಅಕ್ಷಮಾಲೆ ಹಾಗು ಪುಸ್ತಕವಿದ್ದು, ಬೆರಳುಗಳಲ್ಲಿ ಉಂಗುರಗಳಿವೆ. ನಡುವಿನಲ್ಲಿ ಕಟಿಬಂಧವಿದ್ದು, ಕಾಲುಗಳ ಮೇಲೆ ಸೊಂಟದಿಂದ ಇಳಿಬಿದ್ದ ವಸ್ತ್ರವಿದೆ. ಅಲಂಕೃತ ಕಾಲ್ಕಡಗ ಹಾಗು ಪಾದಸರಗಳಿವೆ. ಎಡ ಮತ್ತು ಬಲದಲ್ಲಿ ಪದ್ಮ ಮತ್ತು ಫಲಗಳನ್ನು ಹಿಡಿದ ಸ್ತ್ರೀ ಶಿಲ್ಪಗಳಿವೆ. ಹಾಗೆಯೇ ಅಲಂಕೃತ ಪ್ರಭಾವಳಿ ಸುತ್ತಲೂ ಇದೆ. ನೀಳವಾದ ಮೂಗು, ಹುಬ್ಬುಗಳು ಈ ಮೂರ್ತಿಯ ಅಂದವನ್ನು ಹೆಚ್ಚಿಸಿವೆ. ಈ ಮೂರ್ತಿಯ ಲಕ್ಷಣವನ್ನು ಆಧರಿಸಿ ಇದು ಕಲ್ಯಾಣಿ ಚಾಲುಕ್ಯರ ಕಾಲದ್ದೆಂದು ಹೇಳಬಹುದಾಗಿದೆ.

೧. ಊರು : ಬೇತೂರು

೨. ತಾಲೂಕು : ದಾವಣಗೆರೆ

೩. ಹೆಸರು : ಸರಸ್ವತಿ

೪. ಸ್ಥಳ : ಕಾಳಿಕಾ ದೇವಾಲಯದಲ್ಲಿ

೫. ಕಾಲ : ಕ್ರಿ.ಶ. ೧೧ನೇ ಶತಮಾನ

೬. ಬಳಸಿದ ಶಿಲೆ : ಬಳಪದ ಶಿಲೆ

ಚರ್ತುಭುಜಧಾರಿಯಾದ ಈ ಮೂರ್ತಿ ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತಿದ್ದು, ಈ ಮೂರ್ತಿ ಕಿರೀಟ ಮಕುಟಧಾರಿಯಾಗಿದೆ. ಕಿವಿಯಲ್ಲಿ ಚಕ್ರಕುಂಡಲ, ಮೂಗಿನಲ್ಲಿ ಮೂಗುಬೊಟ್ಟು, ಕೊರಳಲ್ಲಿ ಕಂಠಾಭರಣಹಾಗು ವಿವಿಧ ಬಗೆಯ ಹಾರಗಳಿದ್ದು, ಶಿರಶ್ಚಕ್ರಗಳಿಂದ ಅಲಂಕೃತವಾಗಿದೆ. ಈ ಮೂರ್ತಿಯ ವೈಜಯಂತಿ ಮಾಲೆಯು ಸಹ ಪೀಠದವರೆಗೆ ಇಳಿಬಿದ್ದಿದೆ. ಚರ್ತುಭುಜಧಾರಿ ಈ ಮೂರ್ತಿಗೆ ಭುಜಕೀರ್ತಿ, ಕೇಯೂರ, ಕೈಕಡಗಳಿದ್ದು, ಮೇಲಿನ ಕೈಯಲ್ಲಿ ಅಂಕುಶ, ಪಾಶ, ಕೆಳಗಿನ ಕೈಗಳಲ್ಲಿ ಅಕ್ಷಮಾಲೆ ಹಾಗು ಪುಸ್ತಕವಿದ್ದು, ಬೆರಳುಗಳಲ್ಲಿ ಉಂಗುರಗಳಿವೆ. ನಡುವಿನಲ್ಲಿ ಕಟಿಬಂಧವಿದ್ದು, ಅಲಂಕೃತ ಕಾಲ್ಕಡಗ ಹಾಗು ಪಾದಸರಗಳಿವೆ. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಇದು ಉಚ್ಚಂಗಿ ಪಾಂಡ್ಯರ ಕಾಲದ್ದೆಂದು ಹೇಳಬಹುದು.

ಲಕ್ಷ್ಮಿ :- ಲಕ್ಷ್ಮಿಯನ್ನು ವಿಷ್ಣುವಿನ ಪತ್ನಿಯೆಂದು ಗುರುತಿಸಲಾಗುತ್ತದೆ. ಮಹಾಭಾರತ, ಭಾಗವತ ಪದ್ಮಪುರಾಣ ಮತ್ತು ವಿಷ್ಣು ಪುರಾಣಗಳು ಲಕ್ಷ್ಮಿಯ ಮೂಲವನ್ನು ಕ್ಷೀರ ಸಮುದ್ರದಕ್ಕೆ ಒಯ್ಯುತ್ತವೆ. ಹಾಗೆಯೇ ಅವಳು ಅಲ್ಲಿಂದ ಬಂದವಳೆಂದು ಹೇಳುತ್ತವೆ. ಹಾಗು ಇವಳನ್ನು ' ಕ್ಷೀರಾಬ್ಧಿ ತನಯಳೆಂದು, ಅಂದರೆ ಕ್ಷೀರ ಸಮುದ್ರಾಧಿಪತಿಯ ಮಗಳೆಂದು ಮತ್ತು ಇವಳು ವಿಷ್ಣುವಿನ ಎದೆಯಲ್ಲಿ ವಾಸಿಸುವವಳೆಂದು, 'ವಕ್ಷಸ್ಥಳವಾಸಿನಿ' ಯೆಂದು ಕರೆಯಲ್ಪಡುತ್ತಾಳೆ[೨].

[illegible]

ದೇವಾಲಯಗಳ ಲಲಾಟಬಿಂಬದಲ್ಲಿ ' ಗಜಲಕ್ಷ್ಮಿ ' ಶಿಲ್ಪಗಳು ಸಾಮಾನ್ಯವಾಗಿ ಕಂಡುಬರುತ್ತದೆ. ದಾವಣಗೆರೆ ಜಿಲ್ಲೆಯ ಕೆಲವು ಕಡೆ ಲಕ್ಷ್ಮಿಯ ಪ್ರತ್ಯೇಕ ಮೂರ್ತಿಗಳು ಕಂಡುಬಂದಿದ್ದು,ಅವುಗಳನ್ನು ವಿವರಿಸಲಾಗಿದೆ.

೧. ಊರು : ಚಿಗಟೇರಿ
೨. ತಾಲೂಕು : ಹರಪನಹಳ್ಳಿ
೩. ಹೆಸರು : ಲಕ್ಷ್ಮಿ
೪. ಸ್ಥಳ : ನಾರದಮುನಿ ದೇವಾಲಯದ ಸಮೀಪ ಸರಕುಗಳ ಕೋಣೆಯಲ್ಲಿ.
೫. ಕಾಲ : ಕ್ರಿ.ಶ. ೧೧ನೇ ಶತಮಾನ
೬. ಬಳಸಿದ ಶಿಲೆ : ಬಳಪದ ಶಿಲೆ

ಸ್ಥಳೀಯರಿಂದ ಸತ್ಯಭಾಮೆ, ರುಕ್ಮಿಣಿ ಎಂದು ಕರೆಯಲ್ಪಡುವ ಈ ಮೂರ್ತಿ ಲಲಿತಾಸನದಲ್ಲಿ ಪೀಠದ ಮೇಲೆ ಕುಳಿತಿದೆ. ಕರಂಡ ಮಕುಟಧಾರಿಯಾದ ಈ ಮೂರ್ತಿಯ ತಲೆಯ ಹಿಂಬದಿಯಲ್ಲಿ ಶಿರಶ್ಚಕ್ರವಿದ್ದು, ಕಿವಿಯಲ್ಲಿ ಅಗಲವಾದ ಚಕ್ರಕುಂಡಲಗಳಿವೆ. ಕಂಠಾಭರಣ, ಎದೆಹಾರ, ಯಜ್ಞೋಪವೀತ, ವೈಜಯಂತಿಮಾಲೆ, ಕುಚಬಂಧ ಹಾಗು ಭುಜಕೀರ್ತಿ, ಕೇಯೂರ, ಕೈಕಡಗಗಳನ್ನು ಧರಿಸಿದ್ದು, ಎಡಗೈಯಲ್ಲಿ ಫಲ, ಬಲಗೈಯಲ್ಲಿ ಪದ್ಮಗಳನ್ನು ಹಿಡಿದಿದೆ. ಅಲ್ಲದೆ ಕಟಿ ಬಂಧವಿದ್ದು, ಕಾಲ್ಕಡಗ ಹಾಗು ಪಾದಸರಗಳಿವೆ. ಸುತ್ತಲೂ ಪ್ರಭಾವಳಿಯನ್ನು ಒಳಗೊಂಡಿದ್ದು, ಅದು ಲತಾತೋರಣದಿಂದ ಅಲಂಕಾರಿಕವಾಗಿದೆ. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಇದು ಕಲ್ಯಾಣಿ ಚಾಲುಕ್ಯರ ಕಾಲದ್ದೆಂದು ಹೇಳಬಹುದು.

೧. ಊರು : ಶಾಂತಿ ಸಾಗರ (ಸೊಳೆ ಕೆರೆ)
೨. ತಾಲೂಕು : ಚನ್ನಗರಿ
೩. ಹೆಸರು : ಲಕ್ಷ್ಮಿ
೪. ಸ್ಥಳ : ಸಿದ್ದೇಶ್ವರ ದೇವಾಲಯದ ಸಮೀಪದಲ್ಲಿ
೫. ಕಾಲ : ಕ್ರಿ.ಶ. ೧೪ನೇ ಶತಮಾನ
೬. ಬಳಸಿದ ಶಿಲೆ : ಬಳಪದ ಕಲ್ಲು

ಸ್ಥಳೀಯರಿಂದ ಶಾಂತವ್ವನೆಂದು, ಸಿದ್ದೇಶ್ವರನ ಹೆಂಡತಿಯೆಂದು ಕರೆಯಲ್ಪಡುವ ಈಮೂರ್ತಿಪೀಠದ ಮೇಲೆ ಲಲಿತಾಸನದಲ್ಲಿ ಕುಳಿತಿದೆ. ಈ ಮೂರ್ತಿ ಕರಂಡ ಮಕುಟಧಾರಿಯಾಗಿದ್ದು, ಕಿವಿಯಲ್ಲಿ ಪತ್ರಕುಂಡಲಗಳಿವೆ. ಕಂಠಾಭರಣ, ಎದೆಹಾರ, ಕುಚಬಂಧ, ಯಜ್ಞೋಪವೀತ, ಕಟಿಬಂಧ ಧರಿಸಿದೆ.

ದ್ವಿಭುಜಧಾರೆಯಾದ ಈ ಮೂರ್ತಿ ಬಲಗೈಯಲ್ಲಿ ಪದ್ಮ, ಎಡಗೈಯಲ್ಲಿ ಫಲ (?) ಹಿಡಿದಿದ್ದು, ಕಟಿಬಂಧವಿದೆ. ಮೇಲಿನಿಂದ ಕಾಲಿನವರೆಗೆ ಇಳಿಬಿದ್ದ ಉದ್ದನೆಯ ಸರವಿದೆ. ಕಾಲಿನಲ್ಲಿ ಕಡಗ, ಪಾದ ಸರವಿದ್ದು, ಕೀರ್ತಿಮುಖಯುಕ್ತ ಪ್ರಭಾವಳಿ ಇದೆ. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ವಿಜಯನಗರ ಕಾಲಕ್ಕೆ ಸೇರಿದ್ದೆಂದು ಹೇಳಬಹುದಾಗಿದೆ.

೧. ಊರು : ಚಿಗಟೇರಿ

೨. ತಾಲೂಕು : ಹರಪನಹಳ್ಳಿ

೩. ಹೆಸರು : ಲಕ್ಷ್ಮಿ

೪. ಸ್ಥಳ : ನಾರದಮುನಿ ದೇವಾಲಯದ ಸರಕು ಕೋಣೆಯಲ್ಲಿ.

೫. ಕಾಲ : ಕ್ರಿ.ಶ. ೧೧ನೇ ಶತಮಾನ

೬. ಬಳಸಿದ ಶಿಲೆ : ಕಪ್ಪು

ಸ್ಥಳೀಯರು ರುಕ್ಮಿಣಿ ಎಂದು ಕರೆಯಲ್ಪಡುವ ಈ ಮೂರ್ತಿ ಪೀಠದ ಮೇಲೆ ಲಲಿತಾಸನದಲ್ಲಿ ಕುಳಿತಿದ್ದು, ಕರಂಡ ಮಕುಟಧಾರಿಯಾಗಿದೆ. ತಲೆ ಹಿಂಬದಿಯಲ್ಲಿ ಶಿರಶ್ಚಕ್ರವಿದ್ದು, ಕಿವಿಯಲ್ಲಿ ಅಗಲವಾದ ಚಕ್ರಕುಂಡಲಗಳಿವೆ. ಕಂಠಾಭರಣ, ಕೊರಳಹಾರ, ಕುಚಬಂಧ, ಯಜ್ಞೋಪವೀತವಿದೆ. ದ್ವಿಭುಜಧಾರಿಯಾದ ಈ ಮೂರ್ತಿಗೆ ಭುಜಕೀರ್ತಿ, ಕೇಯೂರ, ಕೈಕಡಗಗಳಿದ್ದು, ಎಡಗೈಯಲ್ಲಿ ಫಲ, ಬಲಗೈಯಲ್ಲಿ ಪದ್ಮಗಳನ್ನು ಹಿಡಿದಿದೆ. ಈ ಮೂರ್ತಿಯು ಕಟಿಬಂಧ, ಕಾಲಿನಲ್ಲಿ ಕಾಲ್ಕಡಗ ಹಾಗು ಪಾದಸರಗಳಿದ್ದು, ಕಾಲಿನವರೆಗೆ ವೈಜಯಂತಿಮಾಲೆ ಇಳಿಬಿದ್ದಿದೆ. ಸುತ್ತಲೂ ಅಲಂಕಾರಿಕ ಪ್ರಭಾವಳಿ ಇದೆ.

ಇದೇ ಸರಕು ಕೋಣಯಲ್ಲಿ ಮತ್ತೊಂದು ಸ್ತ್ರೀ ಮೂರ್ತಿ ಇದೆ. ಅದು ಪದ್ಮಾಸನದಲ್ಲಿ ಕುಳಿತಿದೆ. ಕರಂಡ ಮುಕುಟಧಾರಿಯಾದ ಈ ಮೂರ್ತಿಯ ಕಿವಿಯಲ್ಲಿ ಚಕ್ರಕುಂಡಲಗಳಿದ್ದು, ಕೊರಳಲ್ಲಿ ಸಾಧಾರಣ ರೀತಿಯ ಹಾರಗಳಿವೆ. ಎಡಗೈ ತ್ರುಟಿತವಾಗಿದ್ದು, ಬಲಗೈಯಲ್ಲಿ ಪದ್ಮವಿದೆ. ಸಾಧಾರಣವಾಗಿ ಅಲಂಕಾರವಾಗಿರುವ ಈ ಮೂರ್ತಿಯನ್ನು ಸಹ ಲಕ್ಷ್ಮಿ ಎಂದು ಕರೆಯಬಹುದಾಗಿದೆ. ಈ ಮೇಲಿನ ಮೂರ್ತಿಗಳ ಲಕ್ಷಣಗಳನ್ನು ಗಮನಿಸಿ ಇವುಗಳು ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಸೇರಿವೆ ಎಂದು ಹೇಳಬಹುದು.

ಹರಿಹರದ ಹರಿಹರೇಶ್ವರ ದೇವಾಲಯದ ಸಮೀಪ ಲಕ್ಷ್ಮಿ ದೇವಾಲಯವಿದ್ದು, ಅಲ್ಲಿ ಲಕ್ಷ್ಮಿ ಇಲ್ಲ. ಬದಲಾಗಿ ಮಹಿಷಾಸುರ ಮರ್ಧಿನಿ ಶಿಲ್ಪವಿದೆ[೬೩] ಚನ್ನಗಿರಿ ತಾಲೂಕಿನ ದೇವರಹಳ್ಳಿಯಲ್ಲೂ ಪ್ರತ್ಯೇಕ ಲಕ್ಷ್ಮಿ ದೇವಾಲಯವಿದೆ. ಅಲ್ಲಿ ಮೂಲ ವಿಗ್ರಹ ಕಾಣಬರದೇ ಇತ್ತೀಚಿಗೆ ನಿರ್ಮಿಸಿದ ಲಕ್ಷ್ಮಿ ಮೂರ್ತಿ ಕಾಣಬರುತ್ತದೆ.

ಪಾರ್ವತಿ :-

ಪಾರ್ವತಿಯನ್ನು ಶಿವನ ಪತ್ನಿಯೆಂದು, ಪರ್ವತರಾಜನ ಮಗಳೆಂದು ಗುರುತಿಸಲಾಗಿದೆ. ಪಾರ್ವತಿಗಾಗಿ ಕಟ್ಟಿಸಿದ ಪ್ರತ್ಯೇಕ ದೇವಾಲಯಗಳು ದಾವಣಗೆರೆ ಜಿಲ್ಲೆಯಲ್ಲಿ ಇರದಿದ್ದರೂ , ಅಲ್ಲಲ್ಲಿ ಪಾರ್ವತಿಯ ಪ್ರತ್ಯೇಕ ಮೂರ್ತಿಗಳು ದೊರೆತಿವೆ.

೧. ಊರು : ದೇವರಹಳ್ಳಿ
೨. ತಾಲೂಕು : ಚನ್ನಗಿರಿ
೩. ಹೆಸರು : ಪಾರ್ವತಿ
೪. ಸ್ಥಳ : ಬೆಟ್ಟದ ಮೇಲಿನ ಚೌಡವ್ವನ ಗುಡಿಯಲ್ಲಿ
೫. ಕಾಲ : ಕ್ರಿ.ಶ. ೧೪ನೇ ಶತಮಾನ
೬. ಬಳಸಿದ ಶಿಲೆ : ಬಳಪದ ಶಿಲೆ

ಪೀಠದ ಮೇಲೆ ಲಲಿತಾಸಾನದಲ್ಲಿ ಕುಳಿತಿರುವ ಈ ಮೂರ್ತಿ ಕರಂಡ ಮಕುಟಧರಿಸಿದ್ದು, ಕಿವಿಯಲ್ಲಿ ಅಗಲವಾದ ಪತ್ರ ಕುಂಡಲಗಳಿವೆ. ಕಂಠಾಭರಣ, ಕೊರಳಹಾರ, ಕುಚಬಂಧ, ಹಾಗು ಕೆಳಗೆ ಇಳಿಬಿದ್ದ ಉದ್ದನೆಯಹಾರಗಳಿವೆ. ಚರ್ತುಭುಜಧಾರೆಯಾದ ಈ ಮೂರ್ತಿ ಭುಜಕೀರ್ತಿ, ಕೇಯೂರ, ಕೈಕಡಗಗಳಿದ್ದು, ಮೇಲಿನ ಕೈಗಳಲ್ಲಿ ತ್ರಿಶೂಲ, ಡಮರುಗ , ಕೆಳಗಿನ ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ಫಲವನ್ನು ಹಿಡಿದಿದಂತೆ ಕೆತ್ತಲಾಗಿದೆ. ಕಟಿಬಂಧ ಹಾಗು ಎರಡು ಕಾಲಿನ ಮಧ್ಯೆ ಇಳಿಬಿದ್ದ ವಸ್ತ್ರಇದ್ದು, ಕಾಲಿನಲ್ಲಿ ಕಾಲ್ಕಡಗ ಮತ್ತು ಪಾದಸರಗಳಿವೆ. ಈ ಮೂರ್ತಿಯ ಕಾಲಿನ ಬಳಿ ಸಿಂಹದ ಚಿಕ್ಕ ಶಿಲ್ಪವನ್ನು ಕೆತ್ತಲಾಗಿದೆ. ಸಾಧಾರಣ ರೀತಿಯ ಪ್ರಭಾವಳಿ ಇದೆ. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಇದು ವಿಜಯನಗರ ಕಾಲದ್ದೆಂದು ಹೇಳಬಹುದು.

೧. ಊರು : ಬೇತೂರು
೨. ತಾಲೂಕು : ದಾವಣಗೆರೆ
೩. ಹೆಸರು : ಪಾರ್ವತಿ
೪. ಸ್ಥಳ : ಕಲ್ಲೇಶ್ವರ ದೇವಾಲಯದಲ್ಲಿ
೫. ಕಾಲ : ಕ್ರಿ.ಶ. ೧೧ನೇ ಶತಮಾನ
೬. ಬಳಸಿದ ಶಿಲೆ : ಬಳಪದ ಶಿಲೆ

ಲಲಿತಾಸನದಲ್ಲಿ ಪೀಠದ ಮೇಲೆ ಆಸೀನವಾಗಿರುವ ಈ ಮೂರ್ತಿ ಕಿರೀಟಮಕುಟಧಾರಿಯಾಗಿದ್ದು, ಕಿವಿಯಲ್ಲಿ ಪತ್ರ ಕುಂಡಲಗಳಿವೆ. ತಲೆ ಹಿಂಬದಿಯಲ್ಲಿ ಶಿರಶ್ಚಕ್ರವಿದ್ದು, ಕಂಠಾಭರಣ, ಎದೆಹಾರ, ಕುಚಬಂಧಗಳಿವೆ. ಹಾಗು ಯಜ್ಞೋಪವೀತ,ವೈಜಯಂತಿ ಹಾರಗಳನ್ನು ಧರಿಸಿದ ಈ ಮೂರ್ತಿ ಚರ್ತುಭುಜಧಾರಿಯಾಗಿದ್ದು, ಭುಜಕೀರ್ತಿ, ಕೈಕಡಗಗಳನ್ನು ಧರಿಸಿದೆ. ಕೆಳ ಎಡಗೈಯಲ್ಲಿ ಫಲ, ಬಲಗೈಯಲ್ಲಿ ಪದ್ಮವಿದ್ದು, ಮೇಲಿನ ಕೈಗಳಲ್ಲಿ ತ್ರಿಶೂಲ, ಡಮರುಗಳಿವೆ. ಕಾಲುಗಳಲ್ಲಿ ಕಾಲ್ಕಡಗ, ಪಾದಸರಗಳಿದ್ದು, ಹಿಂಬದಿಯಲ್ಲಿ ಸಾಧಾರಣ ರೀತಿಯ ಪ್ರಭಾವಳಿ ಇದೆ. ಮೂರ್ತಿ ಲಕ್ಷಣದ ಆಧಾರದ ಮೇಲೆ ಇದು ಕಲ್ಯಾಣಿ ಚಾಲುಕ್ಯರ ಕಾಲದ್ದೆಂದು ಹೇಳಬಹುದು.

ಈ ಮೂರ್ತಿಗಳಲ್ಲದೇ ಹೊನ್ನಾಳಿ ತಾಲೂಕಿನ ಬಳ್ಳೇಶ್ವರ ದೇವಾಲಯದ ದಕ್ಷಿಣದ ಗರ್ಭಗುಡಿ ಮತ್ತು ನವರಂಗದಲ್ಲಿನ ದಕ್ಷಿಣ ಕೋಷ್ಠಗುಡಿಯಲ್ಲಿ ಎರಡು ಪಾರ್ವತಿ ಮೂರ್ತಿಗಳಿವೆ. ಇವುಗಳು ಹೊಯ್ಸಳರ ಕಾಲದ ಮೂರ್ತಿಗಳೆಂದು ಅವುಗಳ ಶೈಲಿಯನ್ನು ಆಧಾರವಾಗಿಟ್ಟುಕೊಂಡು ಹೇಳಬಹುದು. ಅಲ್ಲದೇ ಉಚ್ಚಂಗಿ ದುರ್ಗದ ಉತ್ಸವಾಂಭ ದೇವಾಲಯದಲ್ಲಿ ವಿಜಯನಗರ ಕಾಲದ ಎರಡು ಪಾರ್ವತಿ ಮೂರ್ತಿಗಳಿವೆ.

ಭದ್ರಕಾಳಿ :- ಭದ್ರಕಾಳಿಯನ್ನು ವೀರಭದ್ರನೊಡನೆ ಗುರುತಿಸಲಾಗುತ್ತದೆ. ದಕ್ಷಯಜ್ಞವನ್ನು ನಾಶಗೊಳಿಸಲು ಶಿವ ವೀರಭದ್ರನನ್ನು ಸೃಷ್ಟಿಸಿದಾಗ ಪಾರ್ವತಿ ಈಕೆಯನ್ನು ಸೃಷ್ಟಿಸಿ, ವೀರಭದ್ರನಿಗೆ ಸಹಾಯ ಮಾಡಲು ಆತನ ಜೊತೆಯಲ್ಲಿ ಕಳಿಹಿಸುತ್ತಾಳೆ. ಶ್ರೀತತ್ವನಿಧಿ ಗ್ರಂಥವು ಈ ದೇವತೆಯ ಆರಾಧನೆ ಮತ್ತು ಆಕೆಯ ಬಗೆಗಿನ ವಿವರಣೆಗಳನ್ನು ನೀಡುತ್ತದೆ[೬೪]. ಈ ಮೂರ್ತಿಗಳು ನಿಂತ ಇಲ್ಲವೇ ಆಸೀನಭಂಗಿಯಲ್ಲಿದ್ದು, ಕೈಗಳಲ್ಲಿ ತ್ರಿಶೂಲ, ಡಮರು, ಬಿಲ್ಲು , ಬಾಣ, ಕಪಾಲಗಳನ್ನು ತನ್ನ ಕೈಗಳಲ್ಲಿ ಆಯುಧವಾಗಿ ಹಿಡಿದಿರುತ್ತವೆ. ಈ ಭಾಗದ ಭದ್ರಕಾಳಿ ಮೂರ್ತಿಗಳು ಇಂತಿವೆ.

೧. ಊರು : ಚದುರಗೋಳ

೨. ತಾಲೂಕು : ಜಗಲೂರು

೩. ಹೆಸರು : ಭದ್ರಕಾಳಿ(?) ಸ್ಥಳೀಯರು ಬನದಮ್ಮ ಎಂದು ಕರೆಯುತ್ತಾರೆ.

೪. ಸ್ಥಳ : ಬನಶಂಕರಿ ದೇವಾಲಯ

೫. ಕಾಲ : ಕ್ರಿ.ಶ.೯ನೇ ಶತಮಾನ

೬. ಬಳಸಿದ ಶಿಲೆ : ಕಪ್ಪು ಶಿಲೆ

ಪೀಠದ ಮೇಲೆ ಕುಳಿತಿರುವ ಈ ಮೂರ್ತಿಯು ಕಿರೀಟ ಮಕುಟಧಾರಿಯಾಗಿದ್ದು, ಕಿವಿಯಲ್ಲಿ ಚಕ್ರಕುಂಡಲಗಳಿವೆ. ಕಂಠಾಭರಣ, ಕೊರಳಹಾರ, ಕುಚಬಂಧವಿದ್ದು, ಯಜ್ಞೋಪವೀತದಂತಿರುವ ರುಂಡಮಾಲೆಯ ಹಾರ ಕಾಲಿನವರೆಗೆ ಇಳಿಬಿದ್ದಿದೆ.

ಚರ್ತುಭುಜಧಾರಿಯಾದ ಈ ಮೂರ್ತಿಯ ಕೈಗಳಲ್ಲಿ ಕೈಕಡಗ, ಕೇಯೂರಗಳಿವೆ. ಈ ಮೂರ್ತಿಯ ಮೇಲಿನ ಕೈಗಳಲ್ಲಿ ಡಮರು , ತ್ರಿಶೂಲ , ಕೆಳಗಿನ ಕೈಗಳಲ್ಲಿ ಖಡ್ಗ ಹಾಗು ಕಪಾಲಗಳಿವೆ. ನಡುವಿನಲ್ಲಿ ಕಟಿಬಂಧವಿದ್ದು, ಕಾಲಿನಲ್ಲಿ ಕಾಲ್ಕಡಗಳನ್ನು ಧರಿಸಿದ ಈ ಮೂರ್ತಿ ಉಗ್ರಸ್ವರೂಪಿಯಾಗಿದೆ. ಈ ಮೂರ್ತಿಯ ವಸ್ತ್ರಧಾರಣೆ, ಆಭರಣಗಳ ಅಲಂಕಾರ, ಧಾರಣಾ ಮುದ್ರೆ, ಅಂಗಾಂಗಗಳನ್ನು ಬಿಡಿಸಿದ ರೀತಿಯನ್ನು ಆಧಾರವಾಗಿಟ್ಟುಕೊಂಡು ಇದು ರಾಷ್ಟ್ರಕೂಟರ ಕಾಲದ್ದೆಂದು ಹೇಳಬಹುದಾಗಿದೆ.

೧. ಊರು : ಮಳಲಕೆರೆ
೨. ತಾಲೂಕು : ದಾವಣಗೆರೆ
೩. ಹೆಸರು : ಕಾಳಿ
೪. ಸ್ಥಳ : ಈಶ್ವರ ದೇವಾಲಯದಲ್ಲಿ
೫. ಕಾಲ : ಕ್ರಿ.ಶ. ೧೦ನೇ ಶತಮಾನ
೬. ಬಳಸಿದ ಶಿಲೆ : ಕಪ್ಪು ಶಿಲೆ

ಸ್ಥಳೀಯರಿಂದ ಭೈರವಿ ಎಂದು ಕರೆಯಲ್ಪಡುವ ಈ ಮೂರ್ತಿ ಪೀಠದ ಮೇಲೆ ಲಲಿತಾಸನದಲ್ಲಿ ಕುಳಿತಿದೆ. ಕಿರೀಟ ಮಕುಟಧಾರಿಯಾದ ಈ ಮೂರ್ತಿಯ ಕಿವಿಯಲ್ಲಿ ಚಕ್ರಕುಂಡಲಗಳಿದ್ದು, ಕೊರಳಲ್ಲಿ ಅನೇಕ ಬಗೆಯ ಹಾರಗಳಿವೆ. ಉಬ್ಬಿದ ಸ್ತನಗಳು, ಆ ಸ್ತನಗಳ ಮಧ್ಯದಿಂದ ಬಲಭಾಗಕ್ಕೆ ಹಾದು ಹೋಗಿರುವ ರುಂಡಮಾಲೆಯನ್ನು ಯಜ್ಞೋಪವೀತದಂತೆ ಧರಿಸಿದೆ. ಚರ್ತುಭುಜಧಾರೆಯಾದ ಈ ಮೂರ್ತಿಯು ಭುಜಕೀರ್ತಿ, ಕೇಯೂರ, ಕೈಕಡಗಗಳನ್ನು ಧರಿಸಿದೆ. ಮೇಲಿನ ಕೈಗಳಲ್ಲಿ ತ್ರಿಶೂಲ, ಡಮರು, ಕೆಳಗಿನ ಕೈಗಳಲ್ಲಿ ಖಡ್ಗ, ಕಪಾಲಗಳಿವೆ. ಸೊಂಟದಿಂದ ಪೀಠದವರೆಗೆ ಇಳಿಬಿದ್ದ ವಸ್ತ್ರವಿದೆ. ಚದುರುಗೊಳದ ಮೂರ್ತಿಯ ಎಲ್ಲಾ ಲಕ್ಷಣಗಳು ಈ ಮೂರ್ತಿಯಲ್ಲಿ ಕಂಡುಬಂದರೂ ಸಹ ಗಾತ್ರದಲ್ಲಿ ಆ ಮೂರ್ತಿಗಿಂತ ಚಿಕ್ಕದಾಗಿದೆ.

ಮಹಿಷಾಸುರ ಮರ್ಧಿನಿ :- ಶಕ್ತಿ ದೇವತೆಗಳಲ್ಲಿ ಮಹಿಷಮರ್ದಿನಿ ಒಬ್ಬಳಾಗಿದ್ದಾಳೆ. ಇವಳದ್ದು ಉಗ್ರರೂಪವಾಗಿದ್ದು ಕ್ರಿಯೆಯಲ್ಲಿ ಕೊಲ್ಲುತ್ತಿರುವುದೇ ಪ್ರಾಮುಖ್ಯವಾಗಿರುತ್ತದೆ. ಶಾಸ್ತ್ರ ಗ್ರಂಥಗಳಲ್ಲಿ ಈಕೆಯು ಕೋಪಗೊಂಡ ಯುವತಿಯಂತಿದ್ದು, ಒಂದು ಮುಖ ಹಾಗು ಅನೇಕ ಕೈಗಳನ್ನು ಹೊಂದಿರುತ್ತಾಳೆಂದು ವರ್ಣಿಸಿವೆ[೬೫]. ಈಕೆಯನ್ನು ದುರ್ಗ, ದೇವಿಯಂತಲೂ ಕರೆಯಲಾಗುತ್ತದೆ. ಮಹಿಷಮರ್ಧಿನಿಯ ಮುಖವು ಶಿವನ ಬೆಳಕಿನಿಂದಲೂ, ಯಮನ ಶಕ್ತಿಯಿಂದ ಕೂದಲು, ವಿಷ್ಣುವಿನ ಶಕ್ತಿಯಿಂದ ಕೈಗಳು, ಚಂದ್ರನ ಬೆಳಕಿನಿಂದ ಸ್ತನಗಳು, ಇಂದ್ರನಿಂದ ನಡುವು ಹೀಗೆ ಒಂದೊಂದು ದೇವತೆಯ ಬೆಳಕಿನಿಂದ ರೂಪಿತವಾಗಿರುತ್ತವೆ[೬೬]. ಮಹಿಷನು ಕೋಣದ ರೂಪವನ್ನು ಧರಿಸಿ ಬಂದಾಗ, ಮಹಿಷ ಮರ್ಧಿನಿಯು ಕೋಣದ ತಲೆಯನ್ನು ಕತ್ತರಿಸಿ ಕಾಲಿನಿಂದ ಅದನ್ನು ತುಳಿದಾಗ ಅಸುರನು ಕತ್ತಿನಿಂದ ಹೊರಬರುತ್ತಾನೆ. ಅನಂತರ ಅವನನ್ನು ಸಂಹರಿಸುತ್ತಾಳೆ.

ಮಹಿಷಾಸುರ ಮರ್ಧಿನಿ ಮೂರ್ತಿಗಳಲ್ಲಿ ಬಹುತೇಕ ಇದೇ ವಿವರಣೆಯನ್ನು ಕಾಣಬಹುದು. ಕರ್ನಾಟಕದಲ್ಲಿ ಈವರೆಗೆ ದೊರೆತ ಈ ಮೂರ್ತಿಗಳು ಆಲೀಢಭಂಗಿಯಲ್ಲಿದ್ದು ಮುಖಭಾವದಲ್ಲಿ ಮಹಿಷನನ್ನು ಲೀಲಾಜಾಲವಾಗಿ ಕೊಲ್ಲುತ್ತಿರುವಂತೆ ಅಥವ ಕೊಲ್ಲಲು ಹೋಗುತ್ತಿರುವಂತೆ ಇರುತ್ತವೆ. ದಾವಣಗೆರೆ ಜಿಲ್ಲೆಯ ಮಳಲಕೆರೆ , ಬೇತೂರು, ಕೊಗ್ಗನೂರು, ವಾಸನ, ಕೊಡದಗುಡ್ಡ, ಬಾಗಳಿ, ನೀಲಗುಂದ, ಹಲಕನಾಳು ಮೊದಲಾದೆಡೆ ಈ ಮೂರ್ತಿಗಳು ದೊರೆತಿದ್ದು, ದೊರೆತ ಈ ಮೂರ್ತಿಗಳಲ್ಲಿ ಈ ಕೆಳಗಿನ ವಿಧಗಳನ್ನು ಗುರುತಿಸಬಹುದಾಗಿದೆ.

ಅ) ಕೋಣನ ತಲೆಯನ್ನು ತನ್ನ ಎಡಗೈನಿಂದ ಹಿಡಿದು ಬಲಗೈಯಲ್ಲಿನ ಶೂಲದಿಂದ ತಿವಿಯುತ್ತಿರುವ ಮೂರ್ತಿಗಳು. ಉದಾ:- ನೀಲಗುಂದ ಮಹಿಷಾಸುರ ಮರ್ಧಿನಿ.

ಬ) ಸಂಹರಿಸಿದ ಕೋಣನ ತಲೆಯಿಂದ ಹೊರಬಂದ ಸಾಧಾರಣ ಅಲಂಕೃತ ಅಸುರನನ್ನು ಎಡಗಾಲಿನಿಂದ ತುಳಿದು ಸಂಹರಿಸುವಂತಿರುವ ಚತುರ್ಭುಜ ಮೂರ್ತಿ.

ಕ) ಸಂಹರಿಸಿದ ಕೋಣನ ತಲೆಯಿಂದ ಹೊರಬಂದ ಅಲಂಕೃತ ಅಸುರನನ್ನು ಬಲಗಾಲಿನಿಂದ ತುಳಿದು ಸಂಹರಿಸುವಂತಿರುವ ಅಷ್ಟಭುಜ ಮೂರ್ತಿಗಳು ಉದಾ: ಬೇತೂರಿನ ಕಾಳಿಕಾ ದೇವಾಲಯದ ಮೂರ್ತಿ, ಸಾರಥಿಯ ಬಸವೇಶ್ವರ ದೇವಾಲಯದ ಮೂರ್ತಿ.

ಡ) ಕೋಣನ ಮೇಲೆ ತನ್ನ ಬಲಗಾಲನ್ನು ಇಟ್ಟು, ತನ್ನ ಎಡಗಾಲಿನ ಬಳಿಯ ಅಸುರನನ್ನು ಸಂಹರಿಸುತ್ತಿರುವ ಮೂರ್ತಿಗಳು. ಉದಾ: ಹಲಕನಾಳಿನ ಮೂರ್ತಿ.

ಗ) ಸಿಂಹವಾಹನೆಯಾಗಿರುವ ದೇವಿ ಅಸುರನನ್ನು ಕೊಲ್ಲುತ್ತಿರುವುದು. ಉದಾ: ನಲ್ಲೂರಿನ ಮೂರ್ತಿ.

೧. ಊರು : ಬಾಗಳಿ

೨. ತಾಲೂಕು : ಹರಪನಹಳ್ಳಿ

೩. ಹೆಸರು : ಮಹಿಷಾಸುರ ಮರ್ಧಿನಿ

೪. ಸ್ಥಳ : ವಸ್ತುಸಂಗ್ರಾಲಯ

೫. ಕಾಲ : ಕ್ರಿ.ಶ. ೧೧ ನೇ ಶತಮಾನ

೬. ಬಳಸಿದ ಶಿಲೆ : ಕಪ್ಪುಶಿಲೆ

ಕಿರೀಟ ಮಕುಟಧಾರಿಯಾದ ಈ ಮೂರ್ತಿ ಚತುರ್ಭುಜಧಾರಿಯಾಗಿದ್ದು, ಕಿವಿಯಲ್ಲಿ ಚಕ್ರಕುಂಡಲಗಳಿವೆ. ಹಾಗೆಯೇ ಕೊರಳಲ್ಲಿ ವಿವಿಧ ಬಗೆಯ ಹಾರಗಳಿದ್ದು, ಕೈಗಳಲ್ಲಿ ಕೇಯೂರ, ಕಡಗಗಳಿವೆ. ಮೇಲಿನ ಕೈಗಳಲ್ಲಿ ಶಂಖ, ಚಕ್ರ, ಕೆಳಗಿನ ಬಲಗೈಯಲ್ಲಿ ತ್ರಿಶೂಲವಿದೆ. ಆ ತ್ರಿಶೂಲವು ಕೋಣನಿಂದ ಉದಯಿಸಿದ ಅಸುರನಿಗೆ ತಾಗಿದ ರೀತಿಯಲ್ಲಿದೆ.

ಎಡಗೈನಿಂದ ಆತನ ತಲೆಯನ್ನು ಹಿಡಿದುಕೊಳ್ಳಲಾಗಿದೆ. ಆಲೀಢ ಭಂಗಿಯಲ್ಲಿ ಇರುವ ಈ ಮೂರ್ತಿಯ ಎಡಗಾಲು ಅಸುರನ ಎದೆಯ ಬಳಿ ಇದೆ. ಬಲಗಾಲು ಪೀಠದ ಮೇಲಿದ್ದು, ಕಾಲಿನಲ್ಲಿ ಕಡಗಗಳಿವೆ. ಸುತ್ತಲೂ ಅಲಂಕಾರಯುಕ್ತ ಪ್ರಭಾವಳಿ ಇದೆ. ಇದೇ ಲಕ್ಷಣವನ್ನು ಹೋಲುವ ಮತ್ತೊಂದು ಮೂರ್ತಿಯು ಅದೇ ವಸ್ತು ಸಂಗ್ರಹಾಲಯದಲ್ಲಿದೆ. ಈ ಮೂರ್ತಿ ಲಕ್ಷಣಗಳ ಆಧಾರದ ಮೇಲೆ ಇದು ಕಲ್ಯಾಣಿ ಚಾಲುಕ್ಯರ ಕಾಲದ್ದೆಂದು ಹೇಳಬಹುದು.

೧. ಊರು : ಹಲಕನಾಳು
೨. ತಾಲೂಕು : ಚನ್ನಗಿರಿ
೩. ಹೆಸರು : ಮಹಿಷಾಸುರ ಮರ್ಧಿನಿ
೪. ಸ್ಥಳ : ಈಶ್ವರ ದೇವಾಲಯದಲ್ಲಿ
೫. ಕಾಲ : ಕ್ರಿ.ಶ. ೧೧ ನೇ ಶತಮಾನ
೬. ಬಳಸಿದ ಶಿಲೆ : ಬಳಪದ ಕಲ್ಲು

ಪೀಠದ ಮೇಲಿನ ಈ ಮೂರ್ತಿ ಕಿರೀಟಧಾರಿಯಾಗಿದ್ದು, ಕೊರಳಲ್ಲಿ ಕಂಠಾಭರಣ, ಕೊರಳಹಾರಗಳಿದ್ದು, ಕುಚಬಂಧವಿದೆ. ಚತುರ್ಭುಜಧಾರಿಯಾದ ಈ ಮೂರ್ತಿಯು ಭುಜಕೀರ್ತಿ,. ಕೇಯೂರ, ಕೈಕಡಗಗಳನ್ನು ಧರಿಸಿದೆ. ಮೇಲಿನ ಕೈಗಳಲ್ಲಿ ಶಂಖ, ಚಕ್ರವಿದೆ. ಕೆಳ ಬಲಗೈಯಲ್ಲಿ ತ್ರಿಶೂಲವಿದ್ದು, ಅದರಿಂದ ಅಸುರನನ್ನು ತಿವಿಯುವಂತಿದೆ. ಎಡಗೈನಿಂದ ಅಸುರನ ತಲೆಯನ್ನು ಹಿಡಿದಿರುವಂತೆ ಕೆತ್ತಲಾಗಿದೆ. ನಡುವಿನಲ್ಲಿ ಕಟಿ ಬಂಧವಿದ್ದು, ಅಲ್ಲಿಂದ ಸೀರೆ ಹಾಗು ವೈಜಯಂತಿ ಹಾರ ಎರಡು ಕಾಲಿನ ಮಧ್ಯೆ ಇಳಿಬಿದ್ದಿದೆ. ಕಾಲಿನಲ್ಲಿ ದಪ್ಪನೆಯ ಕಾಲ್ಕಡಗ ಹಾಗು ಪಾದಸರಗಳಿದ್ದು, ಎಡಗಾಲನ್ನು ಪೀಠದ ಮೇಲಿಟ್ಟು, ಬಲಗಾಲನ್ನು ಮಹಿಷನ ತಲೆಯ ಮೇಲಿಟ್ಟು ತುಳಿಯುವ ರೀತಿ ಕೆತ್ತಲಾಗಿದೆ. ಸುತ್ತಲೂ ಪ್ರಭಾವಳಿ ಇದ್ದು, ದೇವಿಯ ಬಲಗಾಲಿನ ಬಳಿ ಆಕೆಯ ವಾಹನವಾದ ಸಿಂಹವು ಅಸುರನನ್ನು ಹಿಡಿದುಕೊಂಡಂತಿದೆ. ಹಾಗು ಎಡಭಾಗದ ಕಾಲಿನ ಬಳಿಯಲ್ಲಿ ಮಹಿಷ ಅಲಂಕೃತನಾಗಿದ್ದು, . ಕೈಗಳಲ್ಲಿ ಖಡ್ಗ, ಖೇಟಕಗಳಿವೆ. ಈ ಅಸುರನ ಬದಿಯಲ್ಲಿ ಮತ್ತೊಂದು ಸಿಂಹನಿಂತಿದೆ. ಎರಡು ಸಿಂಹಗಳಿರುವುದು ಈ ಮೂರ್ತಿಯ ವಿಶೇಷವಾಗಿದೆ. ಈ ಮೂರ್ತಿ ಲಕ್ಷಣಗಳ ಆಧಾರದ ಮೇಲೆ ಇದನ್ನು ಕಲ್ಯಾಣಿ ಚಾಲುಕ್ಯರ ಕಾಲದ್ದೆಂದು ಹೇಳಬಹುದು.

೧. ಊರು : ಕಲ್ಕರೆ

೨. ತಾಲೂಕು : ಚನ್ನಗಿರಿ

೩. ಹೆಸರು : ಮಹಿಷಮರ್ಧಿನಿ

೪. ಸ್ಥಳ : ಮೂಲತಃಬಳ್ಳೇಶ್ವರದೇವಾಲಯದಲ್ಲಿದ್ದ ಮೂರ್ತಿಈಗಶಿವಮೊಗ್ಗ ಶಿವಪ್ಪನಾಯಕವಸ್ತುಸಂಗ್ರಾಲಯದಲ್ಲಿದೆ[೬೮]

೫. ಕಾಲ : ಕ್ರಿ.ಶ.೧೧ ನೇಶತಮಾನದ ಅಂತ್ಯಕಾಲ[೬೯]

೬. ಬಳಸಿದ ಶಿಲೆ : ಬಳಪದ ಶಿಲೆ

ಪೀಠದ ಮೇಲೆ ಈ ಮೂರ್ತಿ ಕಿರೀಟಧಾರಿಯಾಗಿದ್ದು, ಅಲೀಢಭಂಗಿಯಲ್ಲಿ ನಿಂತಿದೆ. ಕಿವಿಯಲ್ಲಿ ಚಕ್ರಕುಂಡಲ, ತಲೆಯ ಹಿಂಬಧಿಯಲ್ಲಿ ಶಿರಶ್ಚಕ್ರ, ಕೊರಳಲ್ಲಿ ಕಂಠಾಭರಣ ಮತ್ತು ಕೊರಳಹಾರಗಳಿವೆ. ಚರ್ತುಭುಜಧಾರಿಯಾದ ಈ ಮೂರ್ತಿಯು ಭುಜಕೀರ್ತಿ, ಕೇಯೂರ, ಕೈಕಡಗಗಳಿಂದ ಅಲಂಕೃತವಾಗಿದ್ದು, ಮೇಲಿನ ಕೈಗಳಲ್ಲಿ ಶಂಖ, ಚಕ್ರಗಳಿವೆ. ಕೆಳಗಿನ ಬಲಗೈಯಲ್ಲಿ ತ್ರಿಶೂಲವಿದ್ದು, ಅದು ಅಸುರನನ್ನು ತಿವಿಯುವಂತಿದೆ. ಮಹಿಷನಿಂದ ಉದಯಿಸಿದ ಅಸುರನ ಕಿರೀಟವನ್ನು ಕೆಳ ಎಡಗೈನಿಂದ ಹಿಡಿದಿದೆ. ಮಹಿಷಿ (ಕೋಣ)ನಿಗೆ ದೇವಿಬಿಟ್ಟ ಬಾಣವೊಂದ ತಗುಲಿದೆ. ಬಲಗಾಲನ್ನು ಅಸುರನ ಎದೆಯ ಬಳಿ ಇಟ್ಟು, ಎಡಗಾಲನ್ನು ಪೀಠದ ಮೇಲಿಡಲಾಗಿದೆ. ಅಸುರನು ಕಿವಿಯಲ್ಲಿ ಕುಂಡಲ, ಕೈಕಡಗಗಳಿವೆ. ಅವನ ಕೈಗಳಲ್ಲಿ ಖಡ್ಗ, ಗುರಾಣಿಗಳಿದ್ದು, ಕಾಲಿನಲ್ಲಿ ಕಡಗ ಧರಿಸಲಾಗಿದೆ. ದೇವಿಯ ಕಾಲಿನಲ್ಲೂ ಕಡಗ ಮತ್ತು ಪಾದಸರಗಳಿವೆ. ಸುತ್ತಲೂ ಅಲಂಕೃತ ಪ್ರಭಾವಳಿ ಇದೆ. ಅಲಂಕಾರ ಮತ್ತು ಶೈಲಿಯ ದೃಷ್ಟಿಯಿಂದ ಇದನ್ನು ಹೊಯ್ಸಳರ ಕಾಲದ್ದೆಂದು ಹೇಳಬಹುದು.

೧. ಊರು : ನಲ್ಲೂರು

೨. ತಾಲೂಕು : ಚನ್ನಗಿರಿ

೩. ಹೆಸರು : ಮಹಿಷಮರ್ಧಿನಿ,

೪. ಸ್ಥಳ : ದುರ್ಗಿ ದೇವಾಲಯದಲ್ಲಿ

೫. ಕಾಲ : ಕ್ರಿ.ಶ. ೧೧ನೇ ಶತಮಾನ

೬. ಬಳಸಿದ ಶಿಲೆ : ಕಪ್ಪುಶಿಲೆ

ಪಾಣಿಪೀಠದ ಮೇಲಿನ ಸಿಂಹವಿದ್ದು, ಅದರ ಮೇಲೆ ಕುಳಿತಿರುವಂತಿರುವ ಈ ಮೂರ್ತಿ ಕಿರೀಟಮಕುಟಧಾರಿಯಾಗಿದೆ. ಕಿವಿಯಲ್ಲಿ ಚಕ್ರಕುಂಡಲ, ಕೊರಳಿನಲ್ಲಿ ಅನೇಕಬಗೆಯ ಹಾರಗಳಿದ್ದು, ಕುಚಬಂಧವಿದೆ. ಚರ್ತುಭುಜಧಾರೆಯಾದ ಈ ಮೂರ್ತಿ ಭುಜಕೀರ್ತಿ, ಕೇಯೂರ, ಕೈಕಡಗ ಮತ್ತು

ಬೆರಳುಂಗುರಗಳನ್ನು ಧರಿಸಿದ್ದು, ಮೇಲಿನ ಕೈಗಳಲ್ಲಿ ಶಂಖ ಮತ್ತು ಚಕ್ರ, ಕೆಳಗಿನ ಬಲಗೈಯಲ್ಲಿ ತ್ರಿಶೂಲವನ್ನು ಹಿಡಿದು ಮಹಿಷನನ್ನು ಕೊಲ್ಲುವಂತಿದೆ. ಕೆಳ ಎಡಗೈಯಲ್ಲಿ ಮಹಿಷಾಸುರನ ತಲೆಯ ಹಿಂಬದಿಯನ್ನು ಹಿಡಿದುಕೊಂಡಿದೆ. ಸೊಂಟ ಪಟ್ಟಿ ಹಾಗು ಇಳಿ ವಸ್ತ್ರ ಧರಿಸಿದ ಈ ಮೂರ್ತಿ ಸಿಂಹದ ಮೇಲೆ ಆಸೀನವಾಗಿದ್ದು, ಬಲಗಾಲನ್ನು ಕೆಳಗೆ ಇಳಿಬಿಟ್ಟಿದೆ. ಎಡಗಾಲಿನಿಂದ ಮಹಿಷನನ್ನು ತುಳಿಯುವಂತಿದ್ದು, ಕಾಲಿನಲ್ಲಿ ದಪ್ಪನೆಯ ಕಾಲ್ಕಡಗ , ಪಾದಸರ ಮತ್ತು ಬೆರಳುಂಗುರಗಳಿವೆ. ದೇವಿಯ ಕಾಲಿನ ಎಡಭಾಗಕ್ಕೆ ಒಂದು ಚಿಕ್ಕ ಸ್ತ್ರೀ ಶಿಲ್ಪವಿರುವುದು ಈ ಮೂರ್ತಿಯ ವಿಶೇಷವಾಗಿದ್ದು, ಪೀಠದಲ್ಲಿ ಶಯನಾವಸ್ಥೆಯಲ್ಲಿರುವ ಸ್ತ್ರೀಯೊಬ್ಬಳ ಶಿಲ್ಪವನ್ನು ಚಿಕ್ಕದಾಗಿ ಕೆತ್ತಲಾಗಿದೆ. ಒಟ್ಟಾರೆ ಮೂರ್ತಿಯಲ್ಲಿ ಹೆಚ್ಚಿನ ಅಲಂಕರಣೆಯಿದೆ. ಈ ಮೂರ್ತಿ ಲಕ್ಷಣಗಳ ಆಧಾರದ ಮೇಲೆ ಇದನ್ನು ಹೊಯ್ಸಳರ ಕಾಲಕ್ಕೆ ಸೇರಿದ್ದೆಂದು ಹೇಳಬಹುದಾಗಿದೆ.

೧. ಊರು : ಬೆಳಗುತ್ತಿ
೨. ತಾಲೂಕು : ಹೊನ್ನಾಳಿ
೩. ಹೆಸರು : ಮಹಿಷಮರ್ಧಿನಿ
೪. ಸ್ಥಳ : ಚನ್ನಕೇಶವ ದೇವಾಲಯದ ನವರಂಗದ ಪಶ್ಚಿಮ ಕೋಷ್ಠಗುಡಿ (ಬಲಭಾಗ)
೫. ಕಾಲ : ಕ್ರಿ.ಶ. ೧೦ ನೇ ಶತಮಾನ
೬. ಬಳಸಿದ ಶಿಲೆ : ಬಳಪದ ಕಲ್ಲು

ಕಿರೀಟ ಮಕುಟಧಾರಿಯಾದ ಈ ಮೂರ್ತಿ ಚರ್ತುಭುಜಧಾರಿಯಾಗಿದ್ದು, ಅಲೀಢಭಂಗಿಯಲ್ಲಿ ಸ್ಥಾನಿಕವಾಗಿದೆ. ಕಿವಿಯಲ್ಲಿ ಕುಂಡಲಗಳಿದ್ದು, ಕೊರಳಲ್ಲಿ ವಿವಿಧ ಬಗೆಯ ಹಾರಗಳಿವೆ. ಹಾಗೆಯೇ ಕೈಗಳಲ್ಲಿ ಭುಜಕೀರ್ತಿ, ಕೇಯೂರ, ಕೈಕಡಗಗಳಿವೆ. ಮೇಲಿನ ಕೈಯಲ್ಲಿ ಶಂಖ, ಚಕ್ರಗಳಿದ್ದು, ಕೆಳಗಿನ ಬಲಗೈಯಲ್ಲಿರುವ ತ್ರಿಶೂಲದಿಂದ ಕೋಣನನ್ನು ತಿವಿಯುವಂತಿದೆ. ಎಡಗೈಯಲ್ಲಿ ಬಾಣದ ರೀತಿಯ ಆಯುಧವೊಂದನ್ನು ಹಿಡಿದಿದೆ. ಕಟಿ ಬಂಧ ಹಾಗು ಇಳಿವಸ್ತ್ರಗಳನ್ನು ಧರಿಸಿದ ಈ ಮೂರ್ತಿಯ ಮೊಣಕಾಲಿನ ಕೆಳಭಾಗವು ತ್ರುಟಿತವಾಗಿದೆ. ಹಿಂಭಾಗದಲ್ಲಿ ಅಲಂಕೃತ ಪ್ರಭಾವಳಿ ಇದೆ. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಇದನ್ನು ಕಲ್ಯಾಣಿ ಚಾಲುಕ್ಯರ ಆರಂಭ ಕಾಲದ ಮೂರ್ತಿಗಳಿಗೆ ಹೋಲಿಕೆಯಾಗುತ್ತವೆ.

೧. ಊರು : ಬೇತೂರು
೨. ತಾಲೂಕು : ದಾವಣಗೆರೆ
೩. ಹೆಸರು : ಮಹಿಷ ಮರ್ಧಿನಿ
೪. ಸ್ಥಳ : ಕಾಳಿಕಾ ದೇವಾಲಯ
೫. ಕಾಲ : ಕ್ರಿ.ಶ.೧೦ ನೇಶತಮಾನ
೬. ಬಳಸಿದ ಶಿಲೆ : ಕಪ್ಪು ಶಿಲೆ

ಪೀಠದ ಮೇಲೆ ಆಲೀಢ ಭಂಗಿಯಲ್ಲಿರುವ ಈ ಮೂರ್ತಿಗೆ ಅಷ್ಟಭುಜಗಳಿವೆ. ಕಿರೀಟ ಮಕುಟಧಾರಿಯಾದ ಮೂರ್ತಿಯ ಕಿವಿಯಲ್ಲಿ ಕುಂಡಲಗಳಿವೆ. ಕೊರಳಲ್ಲಿ ಕಂಠಾಭರಣ, ಎದೆಹಾರಗಳಿದ್ದು, ಕುಚಬಂಧವಿದೆ. ಭುಜಕೀರ್ತಿ, ಕೇಯೂರ, ಕೈಕಡಗಗಳನ್ನು ಧರಿಸಿದ ಈ ಮೂರ್ತಿಯ ಕೈಗಳಲ್ಲಿನ ಆಯುಧ ಈ ರೀತಿ ಇದೆ.

ಹಂತ (ಮೇಲಿಂದ ಕೆಳಕ್ಕೆ)	ಬಲಗೈ	ಎಡಗೈ
೧	ಬಾಣ	ಶಂಖ
೨	ಚಿಕ್ಕ ಖಡ್ಗ	ಘಂಟೆ (?)
೩	ಖಡ್ಗ	ಧನಸ್ಸು
೪	ತ್ರಿಶೂಲ	ಅಸುರನ ಬಲಗೈ ಮೇಲಕ್ಕೆತ್ತದಂತೆ ತಡೆ ಹಿಡಿದಿದೆ.

ಕಟಿ ಬಂಧ, ಪಾದದವರೆಗೆ ಇಳಿಬಿದ್ದ ವಸ್ತ್ರ ಧರಿಸಿದ ಈ ಮೂರ್ತಿ ಎಡಗಾಲನ್ನು ಪೀಠದ ಮೇಲಿಟ್ಟು ಬಲಗಾಲನ್ನು ಅಸುರನ ಮೇಲಿಟ್ಟು ತುಳಿಯುವಂತಿದೆ. ಕಾಲಿನಲ್ಲಿ ಕಾಲ್ಕಡಗ, ಪಾದ ಸರಗಳಿವೆ. ಕಾಲಿನ ಬಲಭಾಗದಲ್ಲಿ ಶಿರಚ್ಛೇದಿತ ಕೋಣನ ದೇಹ ಮಾತ್ರವಿದೆ. ಅದೇ ದೇಹವನ್ನು ದೇವಿಯ ವಾಹನವಾದ ಸಿಂಹವು ತನ್ನ ಮುಂಗಾಲಿನಿಂದ ಹಿಡಿದಿವೆ. ಅದಕ್ಕೆ ತೊಂದರೆಯನ್ನುಂಟು ಮಾಡುವಂತಿದೆ. ಖಡ್ಗ ಹಿಡಿದ ಕೆಳಭಾಗದ ಬಲಗೈ ಬಳಿ ಮಹಿಷನ ಛೇದಿತ ಶಿರವಿರುವುದು ಈ ಮೂರ್ತಿಯ ವಿಶೇಷವಾಗಿದೆ. ಕೋಣನಿಂದ ಉದಯಿಸಿದ ಅಸುರನು ಕಿರೀಟ ಮಕುಟಧಾರಿಯಾಗಿದ್ದು, ಕಿವಿಯಲ್ಲಿ ಚಕ್ರಕುಂಡಲಗಳಿವೆ. ಹಾಗು ಕೊರಳಲ್ಲಿ ಅನೇಕಬಗೆಯ ಹಾರಗಳಿವೆ. ಇದನ್ನು ಅಲಂಕೃತವಾದ ರೀತಿಯಲ್ಲಿ ಕೆತ್ತಲಾಗಿದೆ. ದ್ವಿಭುಜಧಾರಿ ಅಸುರನ ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ಗುರಾಣಿ ಹಿಡಿದಿದ್ದು, ಕಟೀಬಂಧ ಹಾಗು ಕಾಲಿನಲ್ಲಿ ಕಡಗಗಳಿವೆ. ಸುತ್ತಲೂ ಪ್ರಭಾವಳಿ ಇದೆ. ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಇದನ್ನು ಕಲ್ಯಾಣಿ ಚಾಲುಕ್ಯರ ಕಾಲದ್ದೆಂದು ಹೇಳಬಹುದು.

೧. ಊರು : ಕೊಗ್ಗನೂರು
೨. ತಾಲೂಕು : ದಾವಣಗೆರೆ
೩. ಹೆಸರು : ಮಹಿಷಮರ್ಧಿನಿ
೪. ಸ್ಥಳ : ಈಶ್ವರ ದೇವಾಲಯ
೫. ಕಾಲ : ಕ್ರಿ.ಶ. ೧೧ನೇ ಶತಮಾನ
೬. ಬಳಸಿದ ಶಿಲೆ : ಬಳಪದ ಶಿಲೆ

[illegible]

[illegible]

[illegible]

ಪೀಠದ ಮೇಲೆ ಅಲೀಢ ಭಂಗಿಯಲ್ಲಿ ಸ್ಥಾನಿಕವಾಗಿರುವ ಈ ಮೂರ್ತಿ ಕಿರೀಟಧಾರಿಯಾಗಿದೆ. ಈ ಮೂರ್ತಿಯು ಚರ್ತುಭುಜಧಾರಿಯಾಗಿದ್ದು, ಕಿವಿಯಲ್ಲಿ ಕುಂಡಲ, ಎದೆಯಲ್ಲಿ ಅನೇಕ ಬಗೆಯಹಾರಗಳಿವೆ. ಕೈಗಳಲ್ಲಿ ಕಡಗಗಳಿದ್ದು, ಮೇಲಿನ ಕೈಗಳಲ್ಲಿ ಶಂಖ, ಚಕ್ರ, ಕೆಳಗಿನ ಬಲಗೈಯಲ್ಲಿ ತ್ರಿಶೂಲ, ಎಡಗೈಯಲ್ಲಿ ಕೋಣನ ತಲೆಯನ್ನು ಹಿಡಿದುಕೊಂಡಿದೆ. ಎಡಗಾಲನ್ನು ಕೋಣನ ದೇಹಕ್ಕೆ ತಾಗುವಂತೆ ಇಟ್ಟು, ಬಲಗಾಲನ್ನು ಪೀಠದ ಮೇಲೆ ಇರುವಂತೆ ಕೆತ್ತಲಾಗಿದೆ. ಕಟಿ ಬಂಧ, ಕಾಲ್ಕಡಗ ಹಾಗು ಪಾದಸರಗಳಿಂದ ಅಲಂಕೃತವಾದ ಈ ಮೂರ್ತಿಯ ಸುತ್ತಲೂ ಪ್ರಭಾವಳಿ ಇದೆ. ಬಲಕಾಲಿನ ಭಾಗದಲ್ಲಿ ಚಿಕ್ಕದಾಗಿ ಸಿಂಹವನ್ನು ಚಿತ್ರಿಸಲಾಗಿದೆ. ಈ ಮೇಲಿನ ಎಲ್ಲಾ ಲಕ್ಷಣಗಳನ್ನು ಮಳಲಕೆರೆಯ ಮಹಿಷಮರ್ಧಿನಿ ಮೂರ್ತಿಯಲ್ಲಿ ಕಾಣಬಹುದಾಗಿದೆ. ಆದರೆ ಇಲ್ಲಿ ಸಿಂಹ ಕಂಡುಬರುತ್ತಿಲ್ಲ. ಮೂರ್ತಿ ಲಕ್ಷಣದ ಆಧಾರದ ಮೇಲೆ ಇದು ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಸೇರಿದ್ದೆಂದು ಹೇಳಬಹುದಾಗಿದೆ.

೧. ಊರು : ಕೊಡದಗುಡ್ಡ

೨. ತಾಲೂಕು : ಜಗಲೂರ

೩. ಹೆಸರು : ಮಹಿಷಮರ್ದಿನಿ

೪. ಸ್ಥಳ : ಕೆರೆಯ ಬಳಿಯ ಈಶ್ವರ ದೇವಾಲಯ

೫. ಕಾಲ : ಕ್ರಿ.ಶ. ೯ನೇ ಶತಮಾನ

೬. ಬಳಸಿದ ಶಿಲೆ : ಬೆಸಾಲ್ಟ್

ಕರಂಡ ಮಕುಟಧಾರಿಯಾದ ಈ ಮೂರ್ತಿಯ ಕಿವಿಯಲ್ಲಿ ಕುಂಡಲಗಳಿವೆ. ಹಾಗೆಯೇ ತಲೆಯ ಹಿಂಬಧಿಯಲ್ಲಿ ಶಿರಶ್ಚಕ್ರವಿದೆ. ಕೊರಳಲ್ಲಿ ಕಂಠಾಭರಣದ ಜೊತೆಗೆ ಅನೇಕ ಬಗೆಯ ಹಾರಗಳಿದ್ದು,ಕುಚಬಂಧವಿದೆ. ಚರ್ತುಭುಜಧಾರಿಯಾದ ಈ ಮೂರ್ತಿಯ ಮೇಲಿನ ಕೈಗಳಲ್ಲಿ ಶಂಖ, ಚಕ್ರ ಕೆಳಗಿನ ಬಲಗೈಯಲ್ಲಿ ತ್ರಿಶೂಲವಿದ್ದು, ಅಸುರನಿಗೆ ತಾಗಿಸಿ ಹಿಡಿದಿದೆ. ಎಡಗೈಯನ್ನು ಅಸುರನ ತಲೆಯ ಮೇಲೆ ಇಡಲಾಗಿದೆ. ಕೈಗಳಲ್ಲಿ ಬಳೆ, ಕೇಯೂರಗಳಿವೆ. ಅಲೀಢ ಭಂಗಿಯಲ್ಲಿರುವ ಈ ಮೂರ್ತಿಯ ಬಲಗಾಲನ್ನು ಪೀಠದ ಮೇಲೆ ಇಟ್ಟಿದ್ದು, ಎಡಪಾದವನ್ನು ಕೋಣನ ಮೇಲೆ ಇಡಲಾಗಿದೆ. ಕಾಲಿನಲ್ಲಿ ಕಡಗ, ಪಾದಸರಗಳಿವೆ.ಇಲ್ಲಿಕೋಣನನನ್ನು ಹಿಮ್ಮುಖನಾಗಿ ಕೆತ್ತಿರುವುದು ಈ ಮೂರ್ತಿಯ ವಿಶೇಷ. ಅಂದರೆ ಕೋಣ ಬಲಗಾಲಿನ ಕಡೆ (ತಲೆಯನ್ನು ಬಾಗಿಸಿ) ಮುಖಮಾಡಿ ನಿಂತಿದೆ. ಕೋಣನ ತಲೆ ಭಾಗದಿಂದ ಅಸುರನು ಹೊರಬಂದಿದ್ದು, ಈ ಅಸುರನು ಎಡಗೈಯಲ್ಲಿ ಗುರಾಣಿ, ಬಲಗೈಯಲ್ಲಿ ಖಡ್ಗ ಹಿಡಿದು ವೀರಗಚ್ಚೆ ಧರಿಸಿರುವಂತೆ ಕೆತ್ತಲಾಗಿದೆ. ಮಹಿಷ ಮರ್ಧನಿಯ ಕಾಲಿನ ಎಡಬದಿಯಲ್ಲಿ ಸಿಂಹವು ಕೋಣನ ಮೇಲೆ ಆಕ್ರಮಣ ಮಾಡಿದಂತಿದ್ದು, ಸುತ್ತಲೂ ಸಾಧಾರಣ ಶೈಲಿಯ ಪ್ರಭಾವಳಿ ಇದೆ. ಮೂರ್ತಿಯ ಲಕ್ಷಣಗಳನ್ನು ಆಧಾರಿಸಿ ಈ ಮೂರ್ತಿಯನ್ನು ರಾಷ್ಟ್ರಕೂಟರ ಕಾಲದ್ದೆಂದು ಹೇಳಬಹುದಾಗಿದೆ.

[illegible]

[illegible]

[illegible]

೧. ಊರು : ಸಾರಥಿ

೨. ತಾಲೂಕು : ಹರಿಹರ

೩. ಹೆಸರು : ಮಹಿಷಾಸುರ ಮರ್ಧಿನಿ

೪. ಸ್ಥಳ : ಬಸವೇಶ್ವರ ದೇವಾಲಯದಲ್ಲಿ

೫. ಕಾಲ : ಕ್ರಿ.ಶ. ೧೧ನೇ ಶತಮಾನ

೬. ಬಳಸಿದ ಶಿಲೆ : ಕಪ್ಪು ಶಿಲೆ

ಪೀಠದ ಮೇಲೆ ನಿಂತಿರುವ ಈ ಮೂರ್ತಿ ಕರಂಡ ಮಕುಟಧಾರಿಯಾಗಿದ್ದು, ಕಿವಿಯಲ್ಲಿ ಕುಂಡಲಗಳಿವೆ. ಕೊರಳಲ್ಲಿ ಕಂಠಾಭರಣ, ಕೊರಳಹಾರ, ಕುಚಬಂಧ ಹಾಗು ಛನ್ನವೀರ ಇದೆ. ಅಷ್ಟಭುಜಧಾರಿಯಾದ ಈ ಮೂರ್ತಿಯು ಕೈಕಡಗ, ಕೇಯೂರ, ಭುಜಕೀರ್ತಿ ಕೈಗಳನ್ನು ಧರಿಸಿದೆ. ಕೈಗಳಲ್ಲಿ ಹಿಡಿದ ಆಯುಧಗಳು ಇಂತಿವೆ :

ಹಂತ (ಮೇಲಿಂದ ಕೆಳಕ್ಕೆ)	ಬಲಗೈ	ಎಡಗೈ
೧ನೇ ಹಂತ	ಬತ್ತಳಿಕೆಯಲ್ಲಿನ ಬಾಣವನ್ನು ಹಿಡಿದಿದೆ.	ಶಂಖ
೨ನೇ ಹಂತ	ಚಕ್ರ	ಘಂಟೆ
೩ನೇ ಹಂತ	ಖಡ್ಗ	ತ್ರುಟಿತವಾಗಿದೆ.
೪ನೇ ಹಂತ	ತ್ರಿಶೂಲ	ಧನಸ್ಸು

ಕಟಿಬಂಧ, ನಡುವಿನಿಂದ ಇಳಿಬಿದ್ದ ವಸ್ತ್ರವಿದ್ದು,ಇದು ಎರಡು ಕಾಲಿನ ಮಧ್ಯದಲ್ಲಿ ಇಳಿಬಿದ್ದಿದೆ. ಕಾಲ್ಕಡಗ, ಪಾದಸರಗಳಿವೆ. ಅಲೀಢ ಭಂಗಿಯಲ್ಲಿರುವ ಈ ಮೂರ್ತಿ ಬಲಗಾಲಿನಿಂದ ಅಸುರರನ್ನು ತುಳಿಯುವಂತಿದೆ. ಎಡಗಾಲು ಪೀಠದ ಮೇಲಿದೆ. ಈ ಮೂರ್ತಿಯ ಬಲಗಾಲಿನ ಕೆಳಭಾಗದಲ್ಲಿ ಮಹಿಷ (ಕೋಣ)ನು ಮಂಡಿಯೂರಿ ನೆಲಕ್ಕೆ ಬೀಳುವಂತಿದ್ದು, ಅದರ ಹಿಂಬದಿಯಿಂದ ಒಬ್ಬ ಅಸುರ ಜನ್ಮ ತಳಿದಿದ್ದು, ಆ ಅಸುರನನ್ನುದೇವಿಯು ತನ್ನ ಮೂರನೆ ಬಲಗೈಯಲ್ಲಿ ಹಿಡಿದಿರುವ ಖಡ್ಗದಿಂದ ತಿವಿಯುತ್ತಿರುವಂತಿದೆ. ಮೃತ ಕೋಣದ ಬಾಯಿ ಭಾಗದಿಂದ ಮತ್ತೊಬ್ಬ ಅಸುರ ಉದಯಿಸಿದ್ದು, ಅವನನ್ನು ತನ್ನ ಬಲಗೈಯಲ್ಲಿರುವ ತ್ರಿಶೂಲದಿಂದ ಆತನ ತಲೆಗೆ ತಿವಿಯುವಂತಿದೆ. (ಆದರೆ ತ್ರಿಶೂಲದ ಸ್ವಲ್ಪ ಭಾಗ ತ್ರುಟಿತವಾಗಿದೆ). ದೇವಿಯ ಎಡಗಾಲ ಬಳಿ ಆಕೆಯ ವಾಹನ ಸಿಂಹವು ಅಸುರನೊಡನೆ ಹೋರಾಟದಲ್ಲಿ ಇರುವ ಹಾಗೆ ಕೆತ್ತಿರುವುದು ವಿಶೇಷ ವಾಗಿದೆ. ಸುತ್ತಲು ಸರಳ ಶೈಲಿಯ ಪ್ರಭಾವಳಿ ಇದೆ. ಮೂರ್ತಿ ಲಕ್ಷಣಗಳ ಆಧಾರದ ಮೇಲೆ ಇದು ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಸೇರಿದ್ದೆಂದು ಹೇಳಬಹುದಾಗಿದೆ.

೧. ಊರು : ವಾಸನ

೨. ತಾಲೂಕು : ಹರಿಹರ

೩. ಹೆಸರು : ಮಹಿಷಾಸುರ ಮರ್ದಿನಿ

೪. ಸ್ಥಳ : ಕೇಶವ ದೇವಾಲಯದ ಬಳಿ

೫. ಕಾಲ : ಕ್ರಿ.ಶ.ಸು. ೧೧-೧೨ನೇ ಶತಮಾನ

೬. ಬಳಸಿದ ಶಿಲೆ : ಬಳಪದಶಿಲೆ

ಪೀಠದ ಮೇಲೆ ಅಲೀಢಭಂಗಿಯಲ್ಲಿ ನಿಂತಿರುವ ಈ ಮೂರ್ತಿ ಕರಂಡ ಮಕುಟಧಾರಿಯಾಗಿದ್ದು, ಕಿವಿಯಲ್ಲಿ ಕುಂಡಲಗಳಿವೆ. ಶಿರಶ್ಚಕ್ರಧರಿಸಿರುವ ಈ ಮೂರ್ತಿಯ ಕೊರಳಲ್ಲಿ ಕಂಠಾಭರಣದೊಡನೆ ಅನೇಕ ಬಗೆಯ ಹಾರಗಳು ಹಾಗು ಕುಚಬಂಧವಿದೆ. ಚತುರ್ಭುಜಧಾರಿಯಾದ ಈ ಮೂರ್ತಿಯ ಕೈಗಳಲ್ಲಿ ಕಡಗ, ಬಳೆ, ಕೇಯೂರ, ಭುಜಕೀರ್ತಿಗಳಿವೆ. ಮೇಲಿನ ಕೈಗಳಲ್ಲಿ ಶಂಖ, ಚಕ್ರ, ಕೆಳಗಿನ ಬಲಗೈಯಲ್ಲಿನ ತ್ರಿಶೂಲದಿಂದ ಅಸುರನನ್ನು ತಿವಿಯುವ ರೀತಿಯಲ್ಲಿ ಹಿಡಿದಿದೆ. ಕೆಳಗಿನ ಎಡಗೈನಿಂದ ಅಸುರನ ತಲೆಯನ್ನು ಹಿಡಿದು, ಕೆಳಕ್ಕೆ ಒತ್ತುವಂತಿದೆ. ಕಟಿಬಂಧವನ್ನು ಧರಿಸಿದ ಈ ಮೂರ್ತಿ ಕಾಲಿನಲ್ಲಿ ಕಡಗ, ಪಾದ ಸರ, ಕಾಲುಂಗರಗಳನ್ನು ಧರಿಸಿದೆ. ದೇವಿಯು ತನ್ನ ಬಲಗಾಲಿನಿಂದ ಕೋಣನನ್ನು ತುಳಿಯುತ್ತಿದ್ದು, ಆಕೆಯ ಎಡಗಾಲು ಪೀಠದ ಮೇಲಿದೆ. ಕೋಣನ ತಲೆಯ ಮೇಲಿಂದ ಅಸುರ ಉದಯಿಸುವಂತಿದ್ದು, ಕೈಗಳಲ್ಲಿ ಗುರಾಣಿ, ಖಡ್ಗ ಹಿಡಿಯಲಾಗಿದೆ. ಹಿಂಬದಿಯಿಂದ ಸಿಂಹವು ಕೋಣನ ಮೇಲೆ ಎರಗುವಂತಿದೆ.

ಸಪ್ತಮಾತೃಕೆಯರು :-

ಸಪ್ತ ಮಾತೃಕೆಯರು ಊರ ಹೆಸರನ್ನು ಪಡೆದ ದೇವತೆಗಳಾಗಿ ಎಲ್ಲ ವರ್ಗದ ಜನರಿಂದ ಪೂಜೆಗೊಳ್ಳುವವರಾಗಿರುತ್ತಾರೆ. ಅನೇಕ ವೇಳೆ ಶಿವ ದೇವಾಲಯದ ಪರಿವಾರ ದೇವತೆಗಳಾಗಿ, ಕೆಲವೊಮ್ಮೆ ಸ್ವತಂತ್ರವಾಗಿಯೂ ಪೂಜೆಗಳ್ಳುತ್ತಿದ್ದಾರೆ. ಇವರನ್ನು ಕನ್ಯೆಯರೆಂದೂ, ಅಮ್ಮನವರೆಂದು ಕರೆಯುವುದು ವಾಡಿಕೆ. ಈ ಮೂರ್ತಿಗಳ ಗಾತ್ರ ಮತ್ತು ಅಂಗಾಂಗಳ ವಿನ್ಯಾಸವು ಕಲ್ಲಿನ ಅಳತೆ, ಆಕಾರವನ್ನು ಅವಲಂಬಿಸಿರುತ್ತದೆ. ಚಾಮುಂಡಿಯನ್ನುಳಿದು ಇತರ ವಿಗ್ರಹಗಳು ಒಂದು ಅಥವ ಒಂದೂವರೆ ಅಡಿ ಎತ್ತರದ ವಿಗ್ರಹಗಳಾಗಿರುತ್ತವೆ. ರಕ್ತಬೀಜನೊಡನೆ ಕೌಶಿಕದುರ್ಗಿ ಹೋರಾಟ ಮಾಡುತ್ತಿರುವಾಗ ಆ ಅಸುರನ ರಕ್ತ ನೆಲಕ್ಕೆ ಬಿದ್ದತಕ್ಷಣ ಮತ್ತೊಬ್ಬ ರಕ್ತಬೀಜಾಸುರ ಜನಿಸಿ ದೇವಿಯೊಡನೆ ಹೋರಾಟಕ್ಕಿಳಿಯುತ್ತಿದ್ದ ಆ ಸಂದರ್ಭದಲ್ಲಿ ದೇವಿಯು ತನ್ನ ಸಹಾಯಕ್ಕಾಗಿ ಏಳು ಜನ ದೇವತೆಯರನ್ನು ಸೃಷ್ಟಿಸಿದಳು. ಆ ಏಳು ಜನರೇ ಸಪ್ತ ಮಾತೃಕೆಯರೆಂದು ಕರೆಯಲ್ಪಡುತ್ತಾರೆಂದು ಮಾತೃದೇವತಾ ಆರಾಧನೆಯನ್ನು ವಿವರಿಸುವ ಗ್ರಂಥವೊಂದರಿಂದ ತಿಳಿದು ಬರುತ್ತದೆ. ದುರ್ಗಸಪ್ತಾಸತಿ ಎನ್ನುವ ಗ್ರಂಥವು ಸಹ ಇದೇ ವಿವರವನ್ನೊದಗಿಸುತ್ತದೆ[೭೦]. ಈ ಮಾತೃ ದೇವತೆಗಳೆಂದರೆ; ಬ್ರಾಹ್ಮಿ, ಮಹೇಶ್ವರಿ, ಕೌಮಾರಿ, ವೈಷ್ಣವಿ, ಇಂದ್ರಾಣಿ ಮತ್ತು ಚಾಮುಂಡಿಯರಾಗಿದ್ದಾರೆ. ಇವರ ಜೊತೆಗೆ ವೀರಭದ್ರ ಅಥವಾ ಗಣೇಶ ಇರುತ್ತಾರೆ.

ಬೃಹತ್ಸಂಹಿತೆಯಲ್ಲಿ (೫೭, ೫೬) ಅವರ ಹೆಸರುಗಳನ್ನು ಹೇಳದಿದ್ದರೂ ಅವರ ಪ್ರಸ್ತಾಪ ಬರುತ್ತದೆ. ವ್ಯಾಖ್ಯಾನಕಾರನಾದ ಉತ್ಪಲ ಸಪ್ತ ಮಾತೃಕೆಯರ ಹೆಸರುಗಳನ್ನು ಹೇಳಿದ್ದಾನೆ. ಬ್ರಾಹ್ಮೀ, ವೈಷ್ಣವೀ, ರೌದ್ರಿ(ಮಾಹೇಶ್ವರಿ) ಕೌಮಾರಿ, ಯಮೀ, ವಾರುಣಿ, ಕೌಬೇರಿ ಇವರು ಕ್ರಮವಾಗಿ ಬ್ರಹ್ಮ , ವಿಷ್ಣು, ಶಿವ, ಸ್ಕಂದ, ಇಂದ್ರ, ಯಮ, ವರುಣ, ಕುಬೇರ ಈ ದೇವತೆಗಳ ಶಕ್ತಿಯರು [೭೧]. ಬ್ರಾಹ್ಮಿಯ ಬಲಭಾಗದಲ್ಲಿ ವೀರಭದ್ರನನ್ನು, ಚಾಮುಂಡಿಯ ಎಡಭಾಗದಲ್ಲಿ ಗಣೇಶನನ್ನು ಇರಿಸಿ, ನಡುವೆ ಮಾತೃಗಣಗಳನ್ನಿರಿಸಬೇಕೆಂದು ವಿಧಿಯಿದೆ. (ವೀರೇಶ್ವರಶ್ಚ ಮಾತೃಣಾಮಗ್ರತೋ ಭವೇತ್, ಅಂತೇ ತೇಷಾಂ ವಿನಾಯಕಃ ಮಧ್ಯೇಚ ಮಾತರಃ ಕಾರ್ಯ)[೭೨]. ಈ ಸಪ್ತ ಮಾತೃಕೆಯ ಪ್ರತ್ಯೇಕ ಆಲಯಗಳು ಅಲ್ಲಲ್ಲಿ

ಕಾಣಬರುತ್ತವೆ. ಈ ಮೂರ್ತಿಗಳ ವಾಹನ ಮತ್ತು ಆಯುಧಗಳು ಈ ರೀತಿ ಇವೆ[೧೮].

ದೇವತೆಯ ಹೆಸರು		ವಾಹನ	ದೇವರು	ಹಿಡಿದ ಆಯುಧಗಳು
೧	ಬ್ರಾಹ್ಮಿ	ಹಂಸ	ಬ್ರಹ್ಮ	ಶೂಲ- ಅಕ್ಷಮಾಲೆ
೨	ಮಹೇಶ್ವರಿ	ನಂದಿ	ಮಹೇಶ್ವರ	,, ,,
೩	ಕೌಮರಿ	ನವಿಲು	ಕುಮಾರ	ಶಕ್ತಿ - ಕುಕ್ಕಟ
೪	ವೈಷ್ಣವಿ	ಗರುಡ	ವಿಷ್ಣು	ಚಕ್ರ- ಶಂಖ
೫	ವರಾ	ಆನೆ	ವರಾಹ	ದಂಡ-ಖಡ್ಗ
೬	ಇಂದ್ರಾಣಿ	ಆನೆ	ಇಂದ್ರ	ವಜ್ರ - ಶಕ್ತಿ
೭	ಚಾಮುಂಡಾ	ಶವ/ನರಿ	ಯಮ	ಕಪಾಲ - ಶೂಲ

ದಾವಣಗೆರೆ ಜಿಲ್ಲೆಯ ನಂದಿತಾವರೆ, ಕೂಡದಗುಡ್ಡ, ಕಮ್ಮಾರಗಟ್ಟೆ, ವಾಸನ, ದೇವರ ಬೆಳಕೆರೆ, ನಂದಿಗುಡಿ, ಬಿಳಚೋಡು, ಮಳಲಕೆರೆ, ಕಂದಗಲ್ಲು, ಕೊಗ್ಗನೂರು . ಅರಸಿಕೆರೆ, ಚಿಗಟೇರಿ, ಬಾಗಳಿ ವಸ್ತು ಸಂಗ್ರಹಾಲಯ ಮೊದಲಾದ ಕಡೆ ಈ ಮಾತೃಕೆಯ ಮೂರ್ತಿಗಳಿದ್ದು, ಶೈವ , ಇಲ್ಲಿವೇ ವೈಷ್ಣವ ದೇವಾಲಯಗಳಲ್ಲಿ ಕಂಡುಬರುತ್ತವೆ. ಈ ಜಿಲ್ಲೆಯಲ್ಲಿ ಎಲ್ಲಿಯೂ ಪ್ರತ್ಯೇಕ ದೇವಾಲಯಗಳು ಇರುವುದು ಕಂಡುಬಂದಿಲ್ಲ. ಆದಾಗ್ಯೂ ಕೂಡ ಅಲ್ಲಲ್ಲಿ ದೊರೆತ ಮೂರ್ತಿಗಳ ಅಧ್ಯಯನವನ್ನು ಈ ರೀತಿ ಮಾಡಲಾಗಿದೆ.

೧. ಊರು : ಅರಸಿಕೆರೆ
೨. ತಾಲೂಕು : ಹರಪನಹಳ್ಳಿ
೩. ಹೆಸರು : ಸಪ್ತ ಮಾತೃಕೆಯರು
೪. ಸ್ಥಳ : ಹರಿಹರೇಶ್ವರ ದೇವಾಲಯದಲ್ಲಿ
೫. ಕಾಲ : ಕ್ರಿ.ಶ.ಸು. ೧೦ ನೇ ಶತಮಾನ
೬. ಬಳಸಿದ ಶಿಲೆ : ಬಳಪದ ಕಲ್ಲು

ಪೀಠದ ಮೇಲೆ ಲಲಿತಾಸನದಲ್ಲಿ ಕ್ರಮವಾಗಿ ಕುಳಿತ ಈ ಮೂರ್ತಿಗಳು ಕಿರೀಟ ಮಕುಟಧಾರಿಗಳಾಗಿವೆ. ಆರಂಭದಲ್ಲಿ ವೀರಭದ್ರ , ಬ್ರಾಹ್ಮೀ, ಮಹೇಶ್ವರೀ, ಕೌಮುದಿ (ಕಾರ್ತಿಕೇಯ ಅಥವ ಮಯೂರಿ) ವೈಷ್ಣವೀ, ವಾರಾಹಿ, ಇಂದ್ರಾಣಿ, ಚಾಮುಂಡಿಯರಿದ್ದು, ಕೊನೆಯಲ್ಲಿ ಗಣೇಶನಿದ್ದಾನೆ. ಇವರೆಲ್ಲರ ಕಿವಿಯಲ್ಲಿ ಕುಂಡಲಗಳಿವೆ. ಕೊರಳಿನಲ್ಲಿ ವಿವಿಧ ಬಗೆಯ ಹಾರಗಳಿದ್ದು, ವೀರಭದ್ರ, ಗಣೇಶನನ್ನು ಹೊರತುಪಡಿಸಿ, ಉಳಿದ ಎಲ್ಲಾ ಮೂರ್ತಿಗಳಿಗೂ ಕುಚಬಂಧಗಳಿವೆ. ಎಲ್ಲಾ ಮೂರ್ತಿಗಳು ಚರ್ತುಭುಜಗಳನ್ನು ಹೊಂದಿದ್ದು, ವೀರಭದ್ರನ ಮೇಲಿನ ಕೈಗಳಲ್ಲಿ ತ್ರಿಶೂಲ, ಡಮರು, ಕೆಳಗಿನ ಬಲಗೈ ವರದ ಮುದ್ರೆಯಲ್ಲಿದ್ದು, ಎಡಗೈಯಲ್ಲಿ ಫಲ (?)ವಿದೆ. ಬ್ರಾಹಿಂಯು ಮೂರು ಮುಖಗಳನ್ನು ಹೊಂದಿದ್ದು, ಮೇಲಿನ ಕೈಗಳಲ್ಲಿ ಅಂಕುಶ, ಪಾಶ, ಕೆಳಗಿನ ಬಲಗೈ ವರದ ಮುದ್ರೆಯಲ್ಲಿದ್ದು, ಎಡಗೈಯಲ್ಲಿ ಪುಸ್ತಕವಿದೆ. ಮಹೇಶ್ವರಿಯ ಮೇಲಿನ ಕೈಗಳಲ್ಲಿ ತ್ರಿಶೂಲ ಮತ್ತು ಡಮರುಗಳಿದ್ದು, ಕೆಳಗಿನ ಬಲಗೈ ವರದ ಮುದ್ರೆಯಲ್ಲಿಯೂ ಹಾಗು ಎಡಗೈಯಲ್ಲಿ ಫಲವಿದೆ. ವೈಷ್ಣವಿಯ ಮೇಲಿನ ಕೈಗಳಲ್ಲಿ ಶಂಖ,ಚಕ್ರ, ಕೆಳಗಿನ ಬಲಗೈ ವರದ ಮುದ್ರೆಯಲ್ಲಿದ್ದು, ಎಡಗೈಯಲ್ಲಿ ಫಲವಿದೆ. ಕೌಮಾರಿಯು ಮೂರು ಮುಖಗಳನ್ನು ಹೊಂದಿದ್ದು, ಮೇಲಿನ ಕೈಗಳಲ್ಲಿ ಬಾಣಗಳನ್ನು ಹಿಡಿದಿದ್ದು ಕೆಳಗಿನ ಬಲಗೈಯಲ್ಲಿ ಪದ್ಮ ಎಡಗೈಯಲ್ಲಿ ಫಲವಿದೆ. ವರಾಹಿಯ (ಹಂದಿಯ ಮುಖ ಧರಿಸಿದ್ದು) ಮೇಲಿನ ಕೈಗಳಲ್ಲಿ ಬಾಣಗಳನ್ನು ಹಿಡಿದಿದ್ದು, ಕೆಳಗಿನ ಕೈಗಳಲ್ಲಿ ವಜ್ರ ಮತ್ತು ಫಲಗಳಿವೆ. ಚಾಮುಂಡ ಮೂರ್ತಿಯ ಮೇಲಿನ ಕೈಗಳಲ್ಲಿ ತ್ರಿಶೂಲ, ಡಮರು, ಕೆಳಗಿನ ಕೈಗಳಲ್ಲಿ ಖಡ್ಗ ಮತ್ತು ಕಪಾಲಗಳಿವೆ. ಕೊನೆಯಲ್ಲಿ ಗಣೇಶನ ಮೇಲಿನ ಕೈಗಳಲ್ಲಿ ಅಂಕುಶ, ಪಾಶಗಳಿದ್ದು, ಕೆಳಗಿನ ಕೈಗಳಲ್ಲಿ ದಂತ ಮತ್ತು ಮೊದಕ ಪಾತ್ರೆಯಿದೆ. ಚಾಮುಂಡಿಗೆ ರುಂಡಮಾಲೆಯ ಯಜ್ಞೋಪವೀತ ಮತ್ತು ಇನ್ನು ಕೆಲವು ಮೂರ್ತಿಗಳಿಗೆ ಯಜ್ಞೋಪವೀತವಿದೆ. ಈ ಎಲ್ಲಾ ಮೂರ್ತಿಗಳಿಗೆ ಕಟಿ ಬಂಧವಿದ್ದು, ಇಳಿವಸ್ತ್ರ ಎರಡು ಕಾಲಿನ ಮಧ್ಯದಿಂದ ಇಳಿಬಿದ್ದಿದೆ. ಈ ಎಲ್ಲಾ ಮೂರ್ತಿಗಳು ಲಲಿತಾಸನದಲ್ಲಿ ಕುಳಿತುಕೊಂಡಿರುವುದು ವಿಶೇಷವಾಗಿದ್ದು, ಪಾದಗಳಲ್ಲಿ ಕಡಗ ಹಾಗು ಪಾದಸರಗಳಿವೆ. ಕಾಲಿನ ಬಳಿ ಅವರವರ ವಾಹನಗಳನ್ನು ಕೆತ್ತಲಾಗಿದೆ. ಇಲ್ಲಿ ಕೌಮಾರಿ ಮೂರು ಮುಖಗಳನ್ನು ಹೊಂದಿರುವುದು ವಿಶೇಷ. ಈ ಸಪ್ತ ಮಾತೃಕೆಯರ ಮೂರ್ತಿ ಲಕ್ಷಣಗಳನ್ನು ಆಧಾರವಾಗಿಟ್ಟುಕೊಂಡು ಇದು ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಸೇರಿದ್ದಾಗಿದೆ ಎಂದು ಹೇಳಬಹುದಾಗಿದೆ.

ದಾವಣಗೆರೆ ಜಿಲ್ಲೆಯ ಈ ಹಿಂದೆ ಹೇಳಿದಡೆಯಲ್ಲೆಲ್ಲ ಈ ಮೂರ್ತಿಗಳು ದೊರಕಿದ್ದು, ಆಯುಧ, ಆಭರಣ, ಉಡುಪುಗಳಲ್ಲಿ ಸಾಮ್ಯತೆ ಇದೆ. ಆದರೆ ಕೆಲವು ಮೂರ್ತಿಗಳನ್ನು ವಿಶೇಷವಾಗಿ ಕೆತ್ತಿರುವುದನ್ನು ನೋಡಬಹುದು. ಹರಪನಹಳ್ಳಿ ತಾಲೂಕಿನ ಚಿಗಟೇರಿಯ ರಾಮಲಿಂಗೇಶ್ವರ ದೇವಾಲಯದಲ್ಲಿನ ಸಪ್ತಮಾತೃಕೆಯರ ಮೂರ್ತಿಗಳಲ್ಲಿ ಮೊದಲೇ ಬ್ರಾಹ್ಮಿ ನಂತರ ಚಾಮುಂಡಿಯಿದ್ದು, ಚಾಮುಂಡಿಯ ಎಡಭಾಗಕ್ಕೆ ವೀಣೆಧಾರಿ ವೀರಭದ್ರ, ಆತನ ಪಕ್ಕದಲ್ಲಿ ಗಣೇಶನಿರುವಂತೆ ಕೆತ್ತಲಾಗಿದೆ. ಹರಿಹರ ತಾಲೂಕಿನ ದೇವರ ಬೆಳಕೆರೆಯ ಮೂರ್ತಿಯಲ್ಲಿ ಮೊದಲಿಗೆ ವೀಣಾಧಾರಿ ವೀರಭದ್ರನಿದ್ದಾನೆ.

ಸೌಂದರ್ಯ ದೃಷ್ಟಿಯಿಂದ ಹೆಚ್ಚು ಅಲಂಕೃತಗೊಂಡ ಸಪ್ತ ಮಾತೃಕೆಯರ ಮೂರ್ತಿಗಳು ಇದೇ ತಾಲೂಕಿನ ನಂದಿಗುಡಿಯ ದೇವಾಲಯದಲ್ಲಿವೆ. ಮೊದಲಿಗೆ ಅಂದರೆ ಬ್ರಾಹ್ಮಿಯ ಬಲಭಾಗಕ್ಕೆ ವೀಣಾಧಾರಿ ವೀರಭದ್ರನಿದ್ದಾನೆ. ಇಲ್ಲಿ ಬ್ರಾಹ್ಮಿಯ ಕೆಳಭಾಗದಲ್ಲಿ ಎರಡು ಹಂಸಗಳು ಒಂದಕ್ಕೊಂದು ಎದುರಾಗಿರುವಂತೆ ಶಿಲ್ಪಿ ಕೆತ್ತಿದ್ದಾನೆ. ಇದರಷ್ಟೇ ಸೌಂದರ್ಯವೂ ಮತ್ತು ಇದೇ ಲಕ್ಷಣವುಳ್ಳ ಸಪ್ತಮಾತೃಕೆಯರ ಮೂರ್ತಿ ಹೊನ್ನಾಳಿ ತಾಲೂಕಿನ ಕಮ್ಮಾರಗಟ್ಟೆಯಲ್ಲಿದೆ. ಹರಿಹರ ತಾಲೂಕು ವಾಸನದಲ್ಲಿನ ಕೇಶವ ದೇವಾಲಯದ ಬಳಿಯ ಸಪ್ತಮಾತೃಕೆಯರ ಮೂರ್ತಿಗಳಲ್ಲಿ ಚಾಮುಂಡಿಯ ಎಡಭಾಗದಲ್ಲಿ ನಾಟ್ಯ ಗಣೇಶನಿರುವುದು ವಿಶೇಷವಾಗಿದೆ. ಚಾಮುಂಡಿಯ ವಾಹನ ನರಿಯನ್ನು ಇಲ್ಲಿ ಇತರೆ ವಾಹನಗಳ ಸಾಲಿನಲ್ಲಿ ಸ್ಪಷ್ಟವಾಗಿ ಕೆತ್ತಲಾಗಿದೆ. ಬಿಳಚೋಡಿ (ಜಗಲೂರು ತಾಲೂಕು)ನ ಈಶ್ವರ ದೇವಾಲಯದ ಬಳಿಯಲ್ಲಿನ ಸಪ್ತಮಾತೃಕೆಯ ಮೂರ್ತಿಶಿಲ್ಪ ತ್ರುಟಿತವಾಗಿದ್ದು, ಅದರಲ್ಲಿ ಕೌಮಾರಿಯಿಂದ ಉಳಿದ ಮುಂದಿನ ಸಾಲು ಉತ್ತಮವಾಗಿದೆ. ಇಲ್ಲಿ ಕೌಮಾರಿ ಮತ್ತು ಚಾಮುಂಡಿಯರು ಬಲಗಾಲನ್ನು ಮಡಚಿ ಎಡಗಾಲನ್ನು ಇಳಿಬಿಟ್ಟು ಲಲಿತಾಸನದಲ್ಲಿದೆ. ಗಣೇಶ ಪದ್ಮಾಸನದಲ್ಲಿರುವುದು ಈ ಮೂರ್ತಿಯ ವಿಶೇಷತೆಯಾಗಿರುತ್ತದೆ. ಈ ಮೇಲಿನ ಸಪ್ತ ಮಾತೃಕೆಯರ ಮೂರ್ತಿಗಳಲ್ಲಿ ಕಲ್ಯಾಣಿ ಚಾಲುಕ್ಯ , ಹೊಯ್ಸಳರ ಕಾಲಕ್ಕೆ ಸೇರಿದವುಗಳು ಹೆಚ್ಚಾಗಿವೆ.

೫.೧.೪. ಜಿನ ಪಂಥೀಯ ಮೂರ್ತಿಗಳು :

ಭರತ ಖಂಡದ ಅನೇಕ ಧರ್ಮಗಳಂತೆ, ಜೈನ ಧರ್ಮವೂ ಅನೇಕ ಮಾರ್ಪಾಟುಗಳಿಗೆ ಒಳಗಾಗಗಿದ್ದರೂ ಜನರ ಮೂರ್ತಿಶಿಲ್ಪದಲ್ಲಿಮಾತ್ರ ಯಾವುದೇ ರೀತಿಯ ವ್ಯತ್ಯಾಸವನ್ನು ಅಳವಡಿಸಿಕೊಳ್ಳಲಿಲ್ಲ. ಪ್ರಾರಂಭದ ಹಂತದಲ್ಲಿದ್ದ ಮೂರ್ತಿಶಿಲ್ಪದ ರೀತಿಯಲ್ಲಿಯೇ ಅಂದರೆ ಪದ್ಮಾಸನದಲ್ಲಿ ಕುಳಿತು ಧ್ಯಾನಿಸುತ್ತಿರುವ ಅಥವ ಕಾಯೋತ್ಸರ್ಗದಲ್ಲಿ (ಭಂಗಿಯಲ್ಲಿ) ನಿಂತು ಧ್ಯಾನಿಸುತ್ತಿರುವ ಶಿಲ್ಪಗಳೆ ಆಗಿರುತ್ತವೆ. ತೀರ್ಥಂಕರ ಅಥವ ಜಿನ ಮೂರ್ತಿಗಳನ್ನು ಇಂದಿಗೂ ಈ ಮೇಲೆ ಹೇಳಿದ ರೀತಿಯಲ್ಲಿ ಮಾತ್ರ ಕಾಣಲು ಸಾಧ್ಯ. ಒಡವೆಗಳ ಅಲಂಕಾರವಾಗಲಿ, ಇನ್ನು ಯಾವುದೇ ರೀತಿಯ ಅಲಂಕಾರವಾಗಲಿ ಕಾಣುವುದಿಲ್ಲ. ಒಂದು ಜಿನ ಪ್ರತಿಮೆಯಿದ್ದಂತೆ ಇನ್ನೊಂದು ಇರಬಹುದು. ಇವರನ್ನು ಗುರುತಿಸಬೇಕಾದರೆ ಪೀಠದ ಕೆಳಗೆ ಇರಬಹುದಾದ ಶಾಸನ ಅಥವಾ ಲಾಂಛನಗಳು ಸಹಾಯ ಮಾಡುತ್ತವೆ[೭೩].

ಜೈನಧರ್ಮ ಒಂದು ವೈದಿಕೇತರ ಧರ್ಮವಾಗಿದ್ದು[೭೪]. ಇಪ್ಪತ್ತು ನಾಲ್ಕು ತೀರ್ಥಂಕರರನ್ನು ಒಳಗೊಂಡಿದೆಯೆಂದು ಪ್ರತೀತಿ ಇದೆ. ಇವುಗಳನ್ನು ಪೀಠದ ಬಳಿಯ ಪ್ರತಿಬಿಂಬಕ ಶಿಲ್ಪ ಇಲ್ಲವೇ ಶಾಸನಾಧಿ ದೇವತೆಯಿಂದ ಗುರುತಿಸಬಹುದು[೭೫].

[illegible]

ತೀರ್ಥಂಕರರು		ಪ್ರತಿಬಿಂಬಕ ಶಿಲ್ಪದಲ್ಲಿನ ಗುರುತು	ಶಾಸನಾಧಿ ದೇವತೆ
೧	ಆದಿನಾಥ	ಬಸವ (ನಂದಿ)	ಗೋಮುಖ ಮತ್ತು ಚಕ್ರೇಶ್ವರಿ
೨	ಅಜಿತನಾಥ	ಆನೆ	ಮಹಾಯಕ್ಷ ಮತ್ತು ರೋಹಿಣಿ
೩	ಸಂಹವನಾಥ	ಕುದುರೆ	ತ್ರಿಮುಖ ಮತ್ತು ಪ್ರಜಾಪತಿ
೪	ಅಭಿನಂದನಾಥ	ಬಾಲವಿರದ ಮಂಗ (ಕೋತಿ)	ಯಕ್ಷೇಶ್ವರ ಮತ್ತು ವಜ್ರಶ್ರೀಮುಖ
೫	ಸುಮತಿನಾಥ	ಪಕ್ಷಿ	ತುಂಬೂರ ಮತ್ತು ಪುರುಷದತ್ತ
೬	ಪದ್ಮಪ್ರಭಾ	ಕಮಲ	ಪುಷ್ಪ ಮತ್ತು ದೊನಾವಗರ
೭	ಸುಪಾರ್ಶ್ವನಾಥ	ಸ್ವಸ್ತಿಕ್	ವರಹಾನಂದಿ ಮತ್ತು ಕಾಲಿ
೮	ಚಂದ್ರ ಪ್ರಭ	ಸ್ತಂಭದೀಪ	ಸ್ವಯಾಮ ಮತ್ತು ಜ್ವಾಲಮಾಲೀನಿ
೯	ಸುವಿಧಿನಾಥ		ಅಜಿತ ಮತ್ತು ಮಹಾಕಾಳಿ
೧೦	ಶಿಥಿಲನಾಥ	ಮರ	ಬ್ರಹ್ಮ ಮತ್ತು ಮನವಿ
೧೧	ಶ್ರೇಯಂಸನಾಥ	ಘೇಂಡಾಮೃಗ	ಈಶ್ವರ ಮತ್ತು ಗೌರಿ
೧೨	ವಸುಪೂಜ್ಯ	ಎಮ್ಮೆ	ಕುಮಾರ ಮತ್ತು ಗಂಧಾರಿ
೧೩	ವಿಮಲನಾಥ	ಹಂದಿ	ಚರ್ತುಮುಖ ಮತ್ತು ವೈರೂತಿ
೧೪	ಅನಂತನಾಥ	ಹಂದಿ	ಪೇತಾಲ ಮತ್ತು ಅನಾಥಮತಿ
೧೫	ದಾರನಾಥ		ಕಿನ್ನರ ಮತ್ತು ಮನ್ನಿ
೧೬	ಶಾಂತಿನಾಥ	ಜಿಂಕೆ	ಗರುಡ ಮತ್ತು ವಿಜಯ
೧೮	ಆರನಾಥ	ಮೀನು	ಕೇಂದ್ರ ಮತ್ತು ಅಪಾರಜೀತ
೧೯	ಮಲ್ಲಿನಾಥ	ಕುಂಭ	ಕುಬೇರ ಮತ್ತು ಅಪಾರಜಿತ
೨೦	ಮುನ್ಸುವರಾಟ	ಆಮೆ	ವರುಣ ಮತ್ತು ಬಹು ರೂಪಿಣಿ
೨೧	ನಾಮಿನಾಥ	ಶಂಖ	ಬ್ರಿಕೃತಿ ಮತ್ತು ಗಂಧಾರ
೨೨	ನೇಮಿನಾಥ	ಶಂಖ	ಗೋಮುಖ ಮತ್ತು ಚಾಮುಂಡ
೨೩	ಪಾರ್ಶ್ವನಾಥ	ಹಾವು	ಧರಣೇಂದ್ರ ಮತ್ತು ಪದ್ಮಾವತಿ
೨೪	ಮಹಾವೀರ	ಸಿಂಹ	ಮತಂಗ ಮತ್ತು ಸಿದ್ದಾಯಿಕ

ದಾವಣಗೆರೆ ಜಿಲ್ಲೆಯ ಬಾಗಳಿ, ಉಚ್ಚಂಗಿದುರ್ಗ, ಬಸವಪಟ್ಟಣ, ಬೇತೂರಿನಲ್ಲಿ ಜಿನಮೂರ್ತಿಗಳು ದೊರೆತಿವೆ. ಇವುಗಳ ಮೂರ್ತಿಲಕ್ಷಣಗಳನ್ನು ಈ ಕೆಳಗಿನಂತೆ ವಿವರಿಸಬಹುದು.

೧. ಊರು : ಬಾಗಳಿ

೨. ತಾಲೂಕು : ಹರಪನಹಳ್ಳಿ

೩. ಹೆಸರು : ಜೈನ ತೀರ್ಥಂಕರ,

೪. ಸ್ಥಳ : ಜಿನ ಬಸದಿ

೫. ಕಾಲ : ಕ್ರಿ.ಶ.೧೧ ನೇ ಶತಮಾನ

೬. ಬಳಸಿದ ಶಿಲೆ : ಬಳಪದ ಕಲ್ಲು

ಕಾಯೋತ್ಸರ್ಗ ಭಂಗಿಯಲ್ಲಿ ಪೀಠದ ಮೇಲೆ ನಿಂತಿರುವ ಈ ಮೂರ್ತಿ ನಿರ್ವಸ್ತ್ರನಾಗಿದ್ದು, ದ್ವಿಭುಜಧಾರಿಯಾಗಿದೆ. ತನ್ನ ಎರಡೂ ಕೈಗಳನ್ನು ಇಳಿಬಿಟ್ಟುನಿಂತಿರುವ ಈ ಮೂರ್ತಿ ಗುಂಗರು ಕೂದಲನ್ನು ಹೊಂದಿದ್ದು, ತಲೆಯ ಹಿಂಬದಿಯಲ್ಲಿ ಶಿರಶ್ಚಕ್ರವಿದೆ. ಅಗಲವಾದ ಕಿವಿಗಳಿದ್ದು, ಮಂದಹಾಸ ಬೀರುತ್ತಿರುವ ಮುಖವಿದೆ. ಧ್ಯಾನಾಸಕ್ತನಾಗಿರುವಂತೆ ಇರುವ ಈ ಮೂರ್ತಿ ಸುತ್ತಲೂ ಸರ್ಪತೋರಣದ ಪ್ರಭಾವಳಿ ಇದೆ. ತಲೆಯ ಮೇಲೆ ಏಳು ಹೆಡೆಯ ಸರ್ಪವೊಂದು ಹೆಡೆ ಬಿಚ್ಚಿದೆ. ಈ ಜಿನ ಮೂರ್ತಿಯ ಲಕ್ಷಣಗಳನ್ನು ಪರಿಶೀಲಿಸಿದಾಗ ಇದು ಕಲ್ಯಾಣ ಚಾಲುಕ್ಯರ ಮೂರ್ತಿ ಶೈಲಿಗೆ ಹೋಲಿಕೆಯಾಗುತ್ತದೆ ಹಾಗು ಅದೇ ಕಾಲಕ್ಕೆ ಸೇರಿದೆ ಎಂದು ಹೇಳಬಹುದಾಗಿದೆ.

೧. ಊರು : ಉಚ್ಚಂಗಿದುರ್ಗ

೨. ತಾಲೂಕು : ಹರಪನಹಳ್ಳಿ

೩. ಹೆಸರು : ಜೈನ ತೀರ್ಥಂಕರ

೪. ಸ್ಥಳ : ಜಿನ ಬಸದಿ

೫. ಕಾಲ : ಕ್ರಿ.ಶ.೧೧ ನೇ ಶತಮಾನ

೬. ಬಳಸಿದ ಶಿಲೆ : ಬಳಪದ ಶಿಲೆ

ಧ್ಯಾನಸಕ್ತ ಮುದ್ರೆಯಲ್ಲಿ ಕುಳಿತಿರುವ ಈ ಮೂರ್ತಿ ಪದ್ಮಾಸನದಲ್ಲಿದ್ದು, ತಲೆಯ ಕೂದಲು ಗುಂಗುರುಗಳಿಂದ ಕೂಡಿದೆ. ಮಂದಹಾಸ ಬೀರುತ್ತಿರುವ ಮುಖವಿದ್ದು, ನಡುವಿನ ಭಾಗ ತ್ರುಟಿತವಾಗಿದೆ. ಈ ಪೀಠದ ಮೂರ್ತಿಯ ಬಳಿ ಏನು ಕಂಡು ಬರದೆ ಇರುವುದರಿಂದ ನಿರ್ಧಿಷ್ಟವಾಗಿ ಇಂತಹ ತೀರ್ಥಂಕರನೇ ಎಂದು ಹೇಳವುದು ಕಷ್ಟಕರವಾಗಿದೆ. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಇದು ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಸೇರಿದ್ದೆಂದು ಹೇಳಬಹುದು.

೧. ಊರು : ಬಸವಪಟ್ಟಣ

೨. ತಾಲೂಕು : ಚನ್ನಗಿರಿ

೩. ಹೆಸರು : ಜೈನ ತೀರ್ಥಂಕರ, ಸ್ಥಳೀಯರು ಬೂತಪ್ಪ, ಬುದ್ದಪ್ಪನೆನ್ನುತ್ತಾರೆ.

೪. ಸ್ಥಳ : ಹಾಲುಸ್ವಾಮಿ ಮಠಕ್ಕೆ ಹೋಗುವ ದಾರಿಯ ಎಡಬದಿಯ ಜಮೀನಿನಲ್ಲಿ

೫. ಕಾಲ : ಕ್ರಿ.ಶ. ೧೪ನೇ ಶಸತಮಾನ

೬. ಬಳಸಿದ ಶಿಲೆ : ಬಳಪದ ಶಿಲೆ

ಜಮೀನಿನ ಗುಂಡಿಯೊಂದರಲ್ಲಿರುವ ಈ ಮೂರ್ತಿಗಳು ದಕ್ಷಿಣಕ್ಕೆ ಮುಖಮಾಡಿವೆ. ಈ ಮೂರ್ತಿಗಳೆರಡೂ ಸಮಾನ ಲಕ್ಷಣಗಳನ್ನು ಹೊಂದಿದ್ದು, ಬಲಭಾಗದ ಮೂರ್ತಿಯ ಎದೆಯ ಕೆಳಗಿನ ಭಾಗ ಮಣ್ಣಿನಲ್ಲಿ ಮುಚ್ಚಿದೆ.

ಬಲಭಾಗದ ಮೂರ್ತಿಯ ಗುಂಗುರು ಕೂದಲು ಸುರುಳಿಯಾಗಿ ಸುತ್ತಿರುವಂತಿವೆ. ಕಿವಿಗಳಿವೆ. ಮುಚ್ಚಿರುವ ಕಣ್ಣುಗಳು , ಮಂದಹಾಸ ಬೀರುತ್ತಿರುವ ಮುಖವಿದ್ದು, ಪದ್ಮಾಸನ ಭಂಗಿಯಲ್ಲಿ ಧ್ಯಾನದಲ್ಲಿ ಮಗ್ನನಾಗಿರುವ ಹಾಗೆ ಈ ಮೂರ್ತಿ ಇದೆ. ಕೊರಳಿನ ಕೆಳಭಾಗದಲ್ಲಿ ಮೂರು ಚಿಕ್ಕ ಗೆರೆಗಳಿವೆ. ಬಲ ಅಂಗೈಯಲ್ಲಿ ಪದ್ಮವನ್ನು ಬಿಡಿಸಲಾಗಿದೆ. ಇದೇ ಸಮಾನ ಲಕ್ಷಣಗಳನ್ನು ಎಡಭಾಗದ ಮೂರ್ತಿ ಹೊಂದಿದೆ. ಈ ಮೂರ್ತಿಗಳ ಲಕ್ಷಣಗಳ ಆಧಾರದ ಮೇಲೆ ಇವು ವಿಜಯನಗರ ಕಾಲದವುಗಳೆಂದು ಹೇಳಬಹುದು.

೧. ಊರು : ಬೇತೂರು

೨. ತಾಲೂಕು : ದಾವಣಗೆರೆ

೩. ಹೆಸರು : ತೀರ್ಥಂಕರರು

೪. ಸ್ಥಳ : ಅಲ್ಲಿನ ಬಯಲು ಕಟ್ಟೆಯಲ್ಲಿವೆ

೫. ಕಾಲ : ಕ್ರಿ.ಶ.೧೧ ನೇ ಶತಮಾನ

೬. ಬಳಸಿದ ಶಿಲೆ : ಬಳಪದ ಶಿಲೆ

ಬಯಲು ಕಟ್ಟೆಯ ಮೇಲೆ ಮೂರು ತೀರ್ಥಂಕರ ಮೂರ್ತಿಗಳಿದ್ದು, ಈ ಮೂರು ಮೂರ್ತಿಗಳ ತಲೆಯಲ್ಲಿನ ಕೂದಲು ಗುಂಗುರಾಗಿ ಸುರಳಿಯೋಪಾದಿಯಲ್ಲಿ ಸುತ್ತಲ್ಪಟ್ಟಿದ್ದು, ಆ ಕೂದಲುಗಳು ಭುಜಗಳ ಮೇಲೆ ಇಳಿಬಿದ್ದಿವೆ. ಮುಚ್ಚಿದ ಕಣ್ಣುಗಳು ಮಂದಹಾಸ ಬೀರುತ್ತಿರುವ ಮುಖಭಾವವಿದೆ. ದ್ವಿಭುಜಧಾರಿಯಾದ ಈ ಮೂರ್ತಿ ಧ್ಯಾನಾಸಕ್ತನಾಗಿ ಪದ್ಮಾಸನದಲ್ಲಿ ಕುಳಿತ ರೀತಿಯಲ್ಲಿ ಈ ಮೂರು ಮೂರ್ತಿಗಳು ಸಮಾನ ಎತ್ತರ ಮತ್ತು ಸಮಾನ ಅಲತೆಯನ್ನು ಹೊಂದಿದ್ದು, ಬಸವಪಟ್ಟಣದ ಮೂರ್ತಿಗಳಿಗಿಂತ

ಎತ್ತರದಲ್ಲಿ ದೊಡ್ಡದಾಗಿದ್ದು, ಇವುಗಳ ಶೈಲಿಯ ಮೇಲೆ ಮಧ್ಯಯುಗೀನ ಕಾಲಕ್ಕೆ ಸೇರುತ್ತವೆಯೆಂದು ಹೇಳಬಹುದು. ಬಾಗಳಿ, ಉಚ್ಚಂಗಿದುರ್ಗದ ಮೂರ್ತಿ ಬೇತೂರು, ಬಸವಪಟ್ಟಣದ ಮೂರ್ತಿಗಳಿಗಿಂತಲೂ ಹಿಂದಿನ ಕಾಲಕ್ಕೆ ಅಂದ್ರೆ ಪ್ರಾಚೀನ ಯುಗಕ್ಕೆ ಸೇರಿದವುಗಳಾಗಿರಬಹುದೆಂದು ಅವುಗಳ ಶೈಲಿಯನ್ನು ಆಧಾರವಾಗಿಟ್ಟುಕೊಂಡು ಹೇಳಬಹುದು.

ದಾವಣಗೆರೆ ತಾಲೂಕಿನ ಶ್ಯಾಮನೂರು ಎಂಬಲ್ಲಿ ಕೆಲವು ಜೈನ ಮೂರ್ತಿಗಳು ದೊರಕಿದ್ದು, (ಈಗ ಕಂಡುಬರುತ್ತಿಲ್ಲ) ಅವುಗಳನ್ನು ಪೂಜಿಸುತ್ತಿದ್ದರೆಂದು ಶ್ರೀ ಹಲ್ಲೂರು ಶ್ರೀನಿವಾಸ ಜೋಯಿಸರು ಹೇಳಿದ್ದಾರೆ[೭೬]. ಹಾಗೇ ಜಗಲೂರು ತಾಲೂಕಿನ ಬೆಳಚೋಡು ಎಂಬಲ್ಲಿ ಜೈನಮೂರ್ತಿ ದೊರೆತ ಬಗ್ಗೆ ಡಾ: ಅ.ಸುಂದರವರು ಸಹ ಉಲ್ಲೇಖಿಸಿದ್ದಾರೆ[೭೭].

ದಾವಣಗೆರೆ ಜಿಲ್ಲೆಯ ಕೆಲವು ಕಡೆ ಜೈನ ಬಸದಿಗಳು ಇವೆ. ಹಾಗೇ ಈ ಮೇಲಿನ ಸ್ಥಳಗಳಲ್ಲಿ ದೊರೆತ ಜಿನ ಮೂರ್ತಿಗಳು ಈ ಭಾಗದಲ್ಲಿ ಜೈನಧರ್ಮ ಆಸ್ತಿತ್ವದಲ್ಲಿತ್ತೆಂದು ಹೇಳಬಹುದು. ಬೇತೂರಿನಿಂದ ಆಳ್ವಿಕೆ ಮಾಡಿದ ಚಾವುಂಡರಸನು ಜೈನ ಮತಾವಲಂಬಿಯಾಗಿದ್ದ[೭೮] ಎಂಬ ಅಂಶ ಶಾಸನವೊಂದರಿಂದ ತಿಳಿದು ಬರುತ್ತದೆ. ಆದುದರಿಂದ ದಾವಣಗೆರೆ ಜಿಲ್ಲೆ ಜೈನ ಧರ್ಮಿಯರ ನೆಲೆಯೂ ಆಗಿತ್ತೆನ್ನಲು ಈ ಮೇಲಿನ ಸ್ಪಷ್ಟ ಆಧಾರಗಳೇ ಸಾಕು.

೫.೧.೫. ಇತರೆ ಪಂಥೀಯ ಮೂರ್ತಿಗಳು :

ಹರಿಹರೇಶ್ವರ, ಬ್ರಹ್ಮ, ಸೂರ್ಯ, ನಾಗ-ನಾಗಿಣಿ ಮೂರ್ತಿಗಳನ್ನು ಶೀರ್ಷಿಕೆಯಡಿಯಲ್ಲಿ ಗುರುತಿಸಲಾಗಿದ್ದು, ಮೇಲಿನ ಪಂಥಗಳಿಗೆ ಹೋಲಿಸಿ ನೋಡಿದರೆ (ಶೈವ ,ವೈಷ್ಣವ, ಶಾಕ್ತ) ಸಂಖ್ಯಾ ಮತ್ತು ಪ್ರಮಾಣದ ದೃಷ್ಟಿಯಿಂದ ಈ ಮೂರ್ತಿಗಳು ಬಹು ಕಡಿಮೆ ಪ್ರಮಾಣದಲ್ಲಿ ದೊರೆತಿವೆ. ಇದರಿಂದ ಈ ಧರ್ಮದ ಆರಾಧಕರು ಸಹ ದಾವಣಗೆರೆ ಭಾಗದಲ್ಲಿ ಬಹು ಕಡಿಮೆ ಇದ್ದರೆಂದು ಹೇಳಬಹುದು.

ಪ್ರಧಾನ ಧಾರ್ಮಿಕ ಪಂಥಗಳಾದ ಶೈವ, ವೈಷ್ಣವ ಈ ಎರಡೂ ಧರ್ಮಗಳ ಸಂಮಿಶ್ರಣ ಮೂರ್ತಿಯಾದ ಹರಿಹರೇಶ್ವರ ಹಾಗು ನಿರ್ಧಿಷ್ಟ ಪಂಥವೊಂದಕ್ಕೆ ಸೇರಿಸಲಾಗದ ಬ್ರಹ್ಮ, ಸೂರ್ಯ ಮತ್ತು ನಾಗನಾಗಿಣಿ ಮೂರ್ತಿಗಳು, ಈ ಜಿಲ್ಲೆಯ ವಿವಿಧ ಭಾಗದಲ್ಲಿ ದೊರೆತಿವೆ. ಅವುಗಳನ್ನು ಇಲ್ಲಿ ವಿವರಿಸಲಾಗುತ್ತದೆ.

ಹರಿ-ಹರೇಶ್ವರ :-

ಎಡ ಅರ್ಧಭಾಗದಲ್ಲಿ ವಿಷ್ಣು , ಬಲ ಅರ್ಧ ಭಾಗಕ್ಕೆ ಶಿವ, ಇವರಿಬ್ಬರಿಂದ ಸೇರ್ಪಡೆಯಾದ ಮೂರ್ತಿಗಳನ್ನು ಹರಿಹರೇಶ್ವರ ಮೂರ್ತಿಗಳೆಂದು ಕರೆಯುತ್ತಾರೆ. ವಿಷ್ಣು ಧರ್ಮೋತ್ತರ ಪುರಾಣ ಮತ್ತು ದೇವತಾಮೂರ್ತಿಪ್ರಕರಣ ಗ್ರಂಥಗಳು ಈ ಮೂರ್ತಿಯ ಕುರಿತು ಉಲ್ಲೇಖಿಸುತ್ತವೆ [೬೯]. ಹರಿಹರರಲ್ಲಿ ಭೇದವಿಲ್ಲ ಅವರಿಬ್ಬರೂ ಒಂದೇ [೭೦] ಎಂಬುದನ್ನು ತೋರಿಸಲು ಈ ರೀತಿಯ ಪರಂಪರೆ ಹುಟ್ಟಿರಬೇಕೆನಿಸುತ್ತದೆ. ದಾವಣಗೆರೆ ಜಿಲ್ಲೆಯ ಈ ಕೆಳಗಿನ ಪ್ರದೇಶಗಳಲ್ಲಿ ದೊರೆತ ಹರಿಹರೇಶ್ವರ ಮೂರ್ತಿಗಳ ಆಧಾರದಿಂದ ಈ ಆರಾಧನೆ ಪ್ರಚಲಿತದಲ್ಲಿತ್ತೆಂದು ಹೇಳಬಹುದು.

೧. ಊರು : ಹರಿಹರ

೨. ತಾಲೂಕು : ಹರಿಹರ

೩. ಹೆಸರು : ಹರಿಹರೇಶ್ವರ

೪. ಸ್ಥಳ : ಹರಿಹರೇಶ್ವರ ದೇವಾಲಯದ ಗರ್ಭಗುಡಿಯಲ್ಲಿ

೫. ಕಾಲ : ಕ್ರಿ.ಶ.೯ ನೇ ಶತಮಾನ

೬. ಬಳಸಿದ ಶಿಲೆ : ಬಳಪದಶಿಲೆ

ಕೂರ್ಮಪೀಠದ ಮೇಲೆ [೭೦] ಸಮಭಂಗಿಯಲ್ಲಿ ಈ ಮೂರ್ತಿನಿಂತಿದ್ದು , ಅಡಿಯಿಂದ ಮುಡಿಯವರೆಗೆ ಹರಿಹರನನ್ನು ಪ್ರತ್ಯೇಕಿಸುವ ಚಿಹ್ನೆಗಳು ಈ ವಿಗ್ರಹದಲ್ಲಿ ಕಾಣಬರುತ್ತವೆ [೭೧]. ಮೂರ್ತಿಯ ಬಲಭಾಗಕ್ಕೆ ಜಟಾಧಾರಿ ಶಿವ. ಆ ಜಟೆಯಲ್ಲಿ ಅರ್ಧಚಂದ್ರ, ಕಿವಿಯಲ್ಲಿ ಸರ್ಪಕುಂಡಲಗಳಿವೆ. ಹಣೆಯಲ್ಲಿ ಅರ್ಧಹಣೆಗಣ್ಣಿದೆ. ಕೈಗಳಲ್ಲಿ ಕಡಗ, ಮೇಲಿನ ಕೈಯಲ್ಲಿ ತ್ರಿಶೂಲವಿದ್ದು, ಕೆಳಗಿನ ಕೈ ಅಭಯ ಮುದ್ರೆಯಲ್ಲಿದೆ. ಹುಲಿ ಚರ್ಮದ ಹೊದಿಕೆ ಅರ್ಧ ಭಾಗಕ್ಕಿದ್ದು ಪಾದಭಾಗ ತ್ರುಟಿತವಾಗಿರುವುದರಿಂದ ಕಾಣಬರುವುದಿಲ್ಲ. ಕಾಲಿನ ಬಲಭಾಗಕ್ಕೆ ಕಿರೀಟ ಮುಕುಟಧಾರಿ ಪಾರ್ವತಿ ಅಭಯಮುದ್ರೆಯಲ್ಲಿದ್ದಾಳೆ. ಎಡಗೈಯಲ್ಲಿ ಖಡ್ಗ ಹಿಡಿದು ಅಲಂಕಾರ ಭೂಷಿತವಾದ ಈ ಶಿಲ್ಪವು ಸ್ಥಾನಿಕವಾಗಿದೆ. ಪಾರ್ವತಿಯ ಕೆಳಭಾಗಕ್ಕೆ ಗಣೇಶ ಆಸೀನನಾಗಿರುವಂತೆ ಕೆತ್ತಲಾಗಿದೆ.

ಕಿರೀಟ ಮಕುಟಧಾರಿಯಾದ ವಿಷ್ಣುವಿನ ಮೂರ್ತಿಯ ಅರ್ಧ ಭಾಗ ಎಡಭಾಗಕ್ಕಿದೆ. ಕಿವಿಯಲ್ಲಿ ಮಕರಕುಂಡಲವಿದ್ದು, ಕೊರಳಲ್ಲಿ ವಿವಿಧ ಬಗೆಯ ಹಾರಗಳಿವೆ. ಕೈಗಳಲ್ಲಿ ಕೇಯೂರ, ಕೈಕಡಗ, ಮೇಲಿನ ಕೈಯಲ್ಲಿ ಚಕ್ರವಿದ್ದು, ಎಡಗೈಯಲ್ಲಿ ಶಂಖವನ್ನು ಹಿಡಿದಿರುವಂತೆ ಕೆತ್ತಲಾಗಿದೆ. ಈ ಶಂಖ ಹಿಡಿದಿರುವ ರೀತಿ ವಿಶೇಷವಾಗಿದೆ. ವಿಷ್ಣುವಿನ ಎಡಗಾಲಿನ ಭಾಗಕ್ಕೆ ಕಿರೀಟ ಮಕುಟಧಾರಿಯಾದ ಲಕ್ಷ್ಮಿ ಶಿಲ್ಪವಿದೆ. ಬಲಗೈ ಅಭಯ ಮುದ್ರೆಯಲ್ಲಿದ್ದು, ಎಡಗೈನ್ನು ಇಳಿಬಿಟ್ಟು ರೀತಿಯಲ್ಲಿದೆ. ಲಕ್ಷ್ಮಿ ಕೆಳಭಾಗಕ್ಕೆ ಋಷ್ಯಶೃಂಗ [೭೩] ಸಮಭಂಗಿಯಲ್ಲಿ ನಿಂತಿದ್ದು, ಸುತ್ತಲೂ ಪ್ರಭಾವಳಿ ಇದೆ.

ಮೂಲಪೀಠ ಮತ್ತು ಪಾದ ಈಗಿನ ನದಿ ಬಳಿ ಇದೆಯೆಂದು ಕೆಲವರು ಹೇಳುತ್ತಾರೆ. ಎಡಗಡೆ ಭುಜ, ಮೂಗು ಮತ್ತು ಬಾಯಿಯ ಭಾಗವು ತ್ರುಟಿತವಾಗಿದೆ. ಅದನ್ನು ಇತ್ತೀಚೆಗೆ ಸಿಮೆಂಟ್‌ನಿಂದ ಸರಿಪಡಿಸಲಾಗಿದೆ. ಬಲತೋಳು ಮತ್ತು ಎಡಗಡೆಯ ಭುಜ ಹಾಗು ಆ ತೋಳುಗಳನ್ನು ಈಚೆಗೆ ಹೊಸದಾಗಿ ಮೂಲ ಕೈಗಳೊಡನೆ ಜೋಡಿಸಲಾಗಿದೆ[೮೪]. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಇದು ರಾಷ್ಟ್ರಕೂಟರ ಕಾಲದ್ದೆಂದು ಹೇಳಬಹುದು. ಮೂರ್ತಿ ರಾಷ್ಟ್ರಕೂಟರ ಕಾಲದ್ದಾಗಿದ್ದರೂ ಸಹ ಹೊಯ್ಸಳರ ಕಾಲದ ದೇವಾಲಯದಲ್ಲಿದೆ[೮೪ ಎ].

೧. ಊರು : ಅರಸಿಕೆರೆ
೨. ತಾಲೂಕು : ಹರಪನಹಳ್ಳಿ
೩. ಹೆಸರು : ಹರಿಹರೇಶ್ವರ
೪. ಸ್ಥಳ : ಹರಿಹರೇಶ್ವರ ದೇವಾಲಯ
೫. ಕಾಲ : ಕ್ರಿ.ಶ.೧೦ ನೇ ಶತಮಾನ
೬. ಬಳಸಿದ ಶಿಲೆ : ಬಳಪದ ಶಿಲೆ

ಪೀಠದ ಮೇಲೆ ಸಮಭಂಗಿಯಲ್ಲಿ ನಿಂತಿರುವ ಈ ಮೂರ್ತಿಯು ಬಲಭಾಗ ಹರನದಾಗಿದೆ. ಜಟಮಕುಟಧಾರಿಯಾದ ಹರನ ಜಟೆಯಲ್ಲಿ ಅರ್ಧಚಂದ್ರನಿದ್ದು, ಕಿವಿಯಲ್ಲಿ ಸರ್ಪಕುಂಡಲ ಎದೆಯಲ್ಲಿ ರುದ್ರಾಕ್ಷಿಸರವಿದೆ. ಅಲ್ಲದೇ ಭುಜಕೀರ್ತಿ, ಕೈಕಡಗಗಳನ್ನು ಧರಿಸಿದ ಈ ಮೂರ್ತಿಯ ಮೇಲಿನ ಕೈಯಲ್ಲಿ ತ್ರಿಶೂಲವಿದ್ದು, ಕೆಳಕೈ ಅಭಯ ಮುದ್ರೆಯಲ್ಲಿದೆ.

ಎಡಭಾಗದ ಮೂರ್ತಿ ಹರಿಯದಾಗಿದ್ದು, ಕಿರೀಟಮುಖಿಯಾಗಿದೆ. ಕಿವಿಯಲ್ಲಿ ಮಕರಕುಂಡಲ, ಕೈಗಳಲ್ಲಿ ಭುಜಕೀರ್ತಿ, ಕೇಯೂರ, ಕೈಕಡಗಗಳಿವೆ. ಮೇಲಿನ ಕೈಯಲ್ಲಿ ಚಕ್ರವಿದ್ದು, ಕೆಳಗಿನ ಕೈಯಲ್ಲಿ ಶಂಖವಿದೆ. ನಡುವಿನಲ್ಲಿ ಸರ್ಪವಿದ್ದು, ನಡುವಿನಿಂದ ಇಳಿಬಿದ್ದ ವಸ್ತ್ರ ಹಾಗು ವೈಜಯಂತಿ ಹಾರವಿದೆ. ಕಾಲುಗಳಲ್ಲಿ ಕಡಗಗಳಿವೆ. ಈ ಮೂರ್ತಿಯ ಬಲ ಕಾಲಿನ ಬಳಿ ಕಿರೀಟಧಾರಿಯಾದ ಪಾರ್ವತಿ ಶಿಲ್ಪವಿದ್ದು, ಬಲಗೈಯು ಕಟ್ಯಾವಲಂಬಿತವಾಗಿದ್ದು, ಎಡಗೈಯಲ್ಲಿ ಫಲಹಿಡಿದ ರೀತಿಯಲ್ಲಿ ಕೆತ್ತಲಾಗಿದೆ. ಎಡಭಾಗದ ಕಾಲಿನ ಬಳಿ ಕಿರೀಟಮುಖಿಯಾದ ಲಕ್ಷ್ಮಿ ಶಿಲ್ಪವಿದ್ದು, ಸಮಭಂಗಿಯಲ್ಲಿರುವ ಈ ಶಿಲ್ಪದ ಬಲಗೈಯಲ್ಲಿ ಪದ್ಮವಿಡಿದು, ಎಡಗೈನ್ನು ಕೆಳಗೆ ಇಳಿಬಿಟ್ಟಿದ್ದಾಳೆ. ಸುತ್ತಲೂ ಪ್ರಭಾವಳಿ ಇದ್ದು, ಕೀರ್ತಿಮುಖದಿಂದ ಅಲಂಕೃತವಾಗಿದೆ. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಇದು ಕಲ್ಯಾಣಿ ಚಾಲುಕ್ಯರ ಆರಂಭ ಕಾಲದ ಮೂರ್ತಿಯೆಂದು ಹೇಳಬಹುದಾಗಿದೆ.

೧. ಊರು : ಮರವಂಜಿ

೨. ತಾಲೂಕು : ಚನ್ನಗಿರಿ

೩. ಹೆಸರು : ಹರಿಹರೇಶ್ವರ

೪. ಸ್ಥಳ : ಈಶ್ವರ ದೇವಾಲಯದಲ್ಲಿ

೫. ಕಾಲ : ಕ್ರಿ.ಶ.೧೧ ನೇ ಶತಮಾನ

೬. ಬಳಸಿದ ಶಿಲೆ : ಕಪ್ಪು ಶಿಲೆ

ಪೀಠದ ಮೇಲೆ ಸಮಭಂಗಿಯಲ್ಲಿ ನಿಂತಿರುವ ಈ ಮೂರ್ತಿ ಕಿರೀಟಧಾರಿಯಾಗಿರುವುದು ಈ ಮೂರ್ತಿಯ ವಿಶೇಷ. ಬಲಕಿವಿಯಲ್ಲಿ ಸರ್ಪಕುಂಡಲವಿದ್ದು, ಚರ್ತುಭುಜಧಾರಿಯಾದ ಈ ಮೂರ್ತಿಯು ಭುಜಕೀರ್ತಿ, ಕೇಯೂರ, ಕೈಕಡಗಗಳನ್ನು ಧರಿಸಿದೆ. ಬಲ ಮೇಲಿನ ಕೈಯಲ್ಲಿ ತ್ರಿಶೂಲ ಹಿಡಿದು, ಕೆಳ ಕೈ ಅಭಯ ಮುದ್ರೆಯಲ್ಲಿದೆ. ಎಡ ಕಿವಿಯಲ್ಲಿ ಮಕರಕುಂಡಲವಿದ್ದು, ಮೇಲಿನ ಎಡಗೈಯಲ್ಲಿ ಗದೆ, ಕೆಳ ಎಡಗೈಯಲ್ಲಿ ಚಕ್ರ (?)ವಿದೆ. ಕಂಠಾಭರಣ ಸೇರಿದಂತೆ ಕೊರಳಲ್ಲಿ ಅನೇಕ ಹಾರಗಳಿದ್ದು , ಇದರಲ್ಲಿ ವೈಜಯಂತಿಮಾಲೆಯೂ ಸೇರಿದೆ. ಉದರಬಂಧ ಹಾಗು ನಡುಬಂಧವಿದ್ದು, ಪಂಚೆ ಉತ್ತಮ ರೀತಿ ಅಲಂಕಾರವನ್ನು ಹೊಂದಿದೆ. ನಡುವಿನ ಇಳಿವಸ್ತ್ರ ಎರಡುಕಾಲಿನ ಮಧ್ಯದಿಂದ ಇಳಿಬಿದ್ದಿದೆ. ಕಾಲಿನಲ್ಲಿ ಕಾಲ್ಕಡಗಗಳಿವೆ. ಮೂರ್ತಿಯ ಬಲಗಾಲಿನ ಬಳಿ ಕಿರೀಟಮುಖಿಯಾದ ಅಲಂಕೃತಳಾದ ಪಾರ್ವತಿ ದ್ವಿಭಂಗದಲ್ಲಿ ನಿಂತಿದ್ದು, ಕೈಗಳಲ್ಲಿ ಪದ್ಮ ಮತ್ತು ಫಲಗಳನ್ನು ಹಿಡಿದಿದ್ದಾಳೆ. ಎಡಗಾಲಿನ ಬಳಿ ಕಿರೀಟಮುಖಿಯಾದ ಹಾಗು ಅಲಂಕೃತ ಲಕ್ಷ್ಮಿ ದ್ವಿಭಂಗದಲ್ಲಿ ನಿಂತಿದ್ದಾಳೆ. ಆಕೆಯ ಬಲಗೈ ಅಭಯ ಮುದ್ರೆಯಲ್ಲಿದ್ದು, ಎಡಗೈ ಕಟಿ ಅವಲಂಬಿತವಾಗಿದೆ. ಸುತ್ತಲೂ ಸುಂದರ ತೋರಣಯುಕ್ತ ಪ್ರಭಾವಳಿ ಇದೆ. ಪಾಣಿಪೀಠದ ಬಿಂಬದಲ್ಲಿ ಹರನ ಭಾಗಕ್ಕೆ (ಬಲಕ್ಕೆ) ನಂದಿ ಇದ್ದು, ಅದೇರೀತಿ ಹರಿಯ (ಎಡಕ್ಕೆ) ಭಾಗದಲ್ಲಿ ಕೆಳಗೆ ಗರುಡನನ್ನು ಚಿತ್ರಿಸಲಾಗಿದೆ. ಈ ಮೂರ್ತಿಯ ಲಕ್ಷಣಗಳ ಆಧಾರ ಮೇಲೆ ಇದು ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಸೇರಿದೆ ಎಂದು ಹೇಳಬಹುದಾಗಿದೆ.

೧. ಊರು : ಹಲಕನಹಾಳು

೨. ತಾಲೂಕು : ಚನ್ನಗಿರಿ

೩. ಹೆಸರು : ಹರಿಹರೇಶ್ವರ

೪. ಸ್ಥಳ : ಈಶ್ವರ ದೇವಾಲಯದಲ್ಲಿ

೫. ಕಾಲ : ಕ್ರಿ.ಶ.೧೧ ನೇ ಶತಮಾನ

೬. ಬಳಸಿದ ಶಿಲೆ : ಬಳಪದ ಶಿಲೆ

ಪೀಠದ ಮೇಲೆ ಸಮಭಂಗಿಯಲ್ಲಿ ನಿಂತಿರುವ ಈ ಮೂರ್ತಿ ಕಿರೀಟಧಾರಿಯಾಗಿರುವುದು ಈ ಮೂರ್ತಿಯ ವಿಶೇಷ. ಬಲಕಿವಿಯಲ್ಲಿ ಸರ್ಪಕುಂಡಲವಿದ್ದು, ಚರ್ತುಭುಜಧಾರಿಯಾದ ಈ ಮೂರ್ತಿಯು ಭುಜಕೀರ್ತಿ, ಕೇಯೂರ, ಕೈಕಡಗಗಳನ್ನು ಧರಿಸಿದೆ. ಬಲ ಮೇಲಿನ ಕೈಯಲ್ಲಿ ತ್ರಿಶೂಲ ಹಿಡಿದು, ಕೆಳ ಕೈ ಅಭಯ ಮುದ್ರೆಯಲ್ಲಿದೆ. ಎಡ ಕಿವಿಯಲ್ಲಿ ಮಕರಕುಂಡಲವಿದ್ದು, ಮೇಲಿನ ಎಡಗೈಯಲ್ಲಿ ಗದೆ, ಕೆಳ ಎಡಗೈಯಲ್ಲಿ ಚಕ್ರ (?)ವಿದೆ. ಕಂಠಾಭರಣ ಸೇರಿದಂತೆ ಕೊರಳಲ್ಲಿ ಅನೇಕ ಹಾರಗಳಿದ್ದು , ಇದರಲ್ಲಿ ವೈಜಯಂತಿಮಾಲೆಯೂ ಸೇರಿದೆ. ಉದರಬಂಧ, ನಡುಬಂಧವಿದ್ದು ಹಾಗು ಪಂಚೆಯು ಉತ್ತಮ ರೀತಿ ಅಲಂಕಾರವನ್ನು ಹೊಂದಿದೆ. ನಡುವಿನ ಇಳಿವಸ್ತ್ರ ಎರಡುಕಾಲಿನ ಮಧ್ಯದಿಂದ ಇಳಿಬಿದ್ದಿದೆ. ಕಾಲಿನಲ್ಲಿ ಕಾಲ್ಕಡಗಗಳಿವೆ. ಮೂರ್ತಿಯ ಬಲಗಾಲಿನ ಬಳಿ ಕಿರೀಟಮುಖಿ ಅಲಂಕೃತಳಾದ ಪಾರ್ವತಿ ದ್ವಿಭಂಗದಲ್ಲಿ ನಿಂತಿದ್ದು, ಕೈಗಳಲ್ಲಿ ಪದ್ಮ ಮತ್ತು ಫಲಗಳನ್ನು ಹಿಡಿದಿದ್ದಾಳೆ. ಎಡಗಾಲಿನ ಬಳಿ ಕಿರೀಟಮುಖಿಯಾದ ಹಾಗು ಅಲಂಕೃತ ಲಕ್ಷ್ಮಿ ದ್ವಿಭಂಗದಲ್ಲಿ ನಿಂತಿದ್ದಾಳೆ. ಆಕೆಯ ಬಲಗೈ ಅಭಯ ಮುದ್ರೆಯಲ್ಲಿದ್ದು, ಎಡಗೈ ಕಟಿ ಅವಲಂಬಿತವಾಗಿದೆ. ಸುತ್ತಲೂ ಸುಂದರ ತೋರಣಯುಕ್ತ ಪ್ರಭಾವಳಿ ಇದೆ. ಪಾಣಿಪೀಠದ ಬಿಂಬದಲ್ಲಿ ಹರನ ಭಾಗಕ್ಕೆ (ಬಲಕ್ಕೆ) ನಂದಿ ಇದ್ದು, ಅದೇರೀತಿ ಹರಿಯ (ಎಡಕ್ಕೆ) ಭಾಗದಲ್ಲಿ ಕೆಳಗೆ ಗರುಡನನ್ನು ಚಿತ್ರಿಸಲಾಗಿದೆ. ಮೂರ್ತಿ ಲಕ್ಷಣಗಳ ಆಧಾರದ ಮೇಲೆ ಇದು ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಸೇರಿದೆ ಎಂದು ಹೇಳಬಹುದಾಗಿದೆ.

ಬ್ರಹ್ಮ :- ಹಿಂದೂ ಸಂಪ್ರದಾಯದಲ್ಲಿ ಬ್ರಹ್ಮನನ್ನು ಪೂಜಿಸುವುದು ಸಹ ಒಂದು ಪದ್ಧತಿಯಾಗಿ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಮಂಡುಕ ಉಪನಿಷತ್ ಮತ್ತು ವಿಷ್ಣು ಪುರಾಣಗಳು ಹೇಳುವ ಹಾಗೆ ಬ್ರಹ್ಮ ಜಗತ್ತನ್ನೇ ಸೃಷ್ಟಿಸುವ ಸೃಷ್ಟಿಕರ್ತ. ಈತನನ್ನು ಪ್ರಜಾಪತಿಯೆಂದು ಸಹ ಗುರುತಿಸಲಾಗುತ್ತದೆ. ಮಾರ್ಕಾಂಡೇಯ ಪುರಾಣದ ಪ್ರಕಾರ ಈತ ಜಗತ್ತಿಗೆ ಮೂಲಾಧಾರ ಅಥವ ಜಗತ್ತಿನ ಸಂಘಟಕನಾಗಿದ್ದಾನೆ[೮೫]. ಕರ್ನಾಟಕದಲ್ಲಿ ದೇವಾಲಯಗಳ ಭಿತ್ತಿಯ ಮತ್ತು ಕಂಭದ ಭಾಗದಲ್ಲಿ ಹೆಚ್ಚಾಗಿ ಈ ಮೂರ್ತಿಗಳನ್ನು ಕಾಣಬಹುದಾಗಿದೆ. ಇವು ಸಾಮಾನ್ಯವಾಗಿ ಸ್ಥಾನಿಕ ಇಲ್ಲವೆ ಆಸೀನ ಭಂಗಿಯಲ್ಲಿವೆ. ದಾವಣಗೆರೆ ಜಿಲ್ಲೆಯ ಕೆಲವು ದೇವಾಲಯಗಳಲ್ಲಿ ಈ ರೀತಿ ಕಂಡುಬಂದಿದ್ದರೂ ಸಹ, ಹೊನ್ನಾಳಿ ತಾಲೂಕಿನ ತೀರ್ಥರಾಮೇಶ್ವರದಲ್ಲಿ ಮಾತ್ರ ಆಸೀನ ಮೂರ್ತಿಯೊಂದು ಕಂಡು ಬಂದಿದೆ[೮೬].

೧. ಊರು : ತೀರ್ಥರಾಮೇಶ್ವರ

೨. ತಾಲೂಕು : ಹೊನ್ನಾಳಿ

೩. ಹೆಸರು : ಚರ್ತುಮುಖ ಬ್ರಹ್ಮ

೪. ಸ್ಥಳ : ಬ್ರಹ್ಮ ದೇವಾಲಯದಲ್ಲಿದೆ.

೫. ಕಾಲ : ಕ್ರಿ.ಶ. ೧೧ ನೇ ಶತಮಾನ

೬. ಬಳಸಿದ ಶಿಲೆ : ಬಳಪದಶಿಲೆ

ಪೀಠದ ಮೇಲೆ ಕುಳಿತ ಈ ಮೂರ್ತಿಗೆ ಚರ್ತುಮುಖವಿದ್ದು, ಕಿರೀಟ ಮುಕುಟಧಾರಿಯಾಗಿದೆ. ಎಲ್ಲಾ ಕಿವಿಗಳಲ್ಲೂ ಪತ್ರಕುಂಡಲಗಳಿವೆ. ಕೊರಳಲ್ಲಿ ಕಂಠಾಭರಣ , ಅನೇಕ ಬಗೆಯ ಕೊರಳಹಾರ ಮತ್ತು ಉಪವೀತವಿದೆ. ಚರ್ತುಭುಜಧಾರಿಯಾದ ಈ ಮೂರ್ತಿಯ ಕೈಗಳಲ್ಲಿ ಭುಜಕೀರ್ತಿ, ಕೇಯೂರ, ಕೈಕಡಗಗಳಿದ್ದು, ಮೇಲಿನ ಕೈಗಳಲ್ಲಿ ಹಿಡಿದ ಆಯುಧಗಳ ಮೇಲಿನ ಭಾಗ ಸ್ವಲ್ಪ ತ್ರುಟಿತವಾಗಿರುವುದರಿಂದ ಆ ಆಯುಧಗಳು ಯಾವುವು ಎಂದು ಗುರುತಿಸುವುದು ಕಷ್ಟಕರವಾಗಿದೆ. ಕೆಳಗಿನ ಬಲಗೈಯಲ್ಲಿ ಅಕ್ಷಯಮಾಲೆ, ಎಡಗೈಯಲ್ಲಿ ಪುಸ್ತಕ(?) ಹಿಡಿದಿದ್ದು, ಉದರಬಂಧ ಹಾಗು ಕಟಿಬಂಧಗಳಿವೆ.ಈ ಮೂರ್ತಿಯ ಕಾಲಿನಲ್ಲಿ ಕಡಗಗಳಿವೆ. ಪಾಣಿಪೀಠದ ಬಿಂಬದಲ್ಲಿ ಹಂಸವಿದೆ. ಸುತ್ತಲೂ ಅಲಂಕೃತ ಪ್ರಭಾವಳಿ ಇದೆ.

ಸೂರ್ಯ :- ಸೂರ್ಯ ದೇವರು ಸೌರಮತದವರಿಂದ ಆಚರಣೆಗೊಳಪಡುವ ದೇವರಾಗಿದ್ದಾನೆ. ಈತನ ಆರಾಧನೆ ಋಗ್ವೇದ ಕಾಲದಲ್ಲಿ ಹೆಚ್ಚಾಗಿತ್ತು. ಕೂರ್ಮಪುರಾಣವು ಸೂರ್ಯನ ಉಗಮ ಮತ್ತು ಹಿನ್ನಲೆಯನ್ನು ತಿಳಿಸುತ್ತದೆ. ವಿಶ್ವಕರ್ಮ ಶಿಲ್ಪ, ಭವಿಷ್ಯ ಪುರಾಣ, ಅಂಶುಮದ್‌ಭೇದ , ಸುಪ್ರಭೇದಾಗಮಗಳು ಸೂರ್ಯಮೂರ್ತಿಯ ಲಕ್ಷಣಗಳನ್ನು ಕುರಿತು ಹೇಳುತ್ತವೆ[೮೭].

ದಾವಣಗೆರೆ ಜಿಲ್ಲೆಯ ಜಿಗಳಿ, ಸಾರಥಿ, ಮಸಣಕೆರೆ, ಕೊಕ್ಕನೂರು, ಬಾಗಳಿ , ಬಳ್ಳೇಶ್ವರ, ಬೆಳಗುತ್ತಿ , ಗುಡಿಹಳ್ಳಿಗಳಲ್ಲಿ ಸೂರ್ಯಮೂರ್ತಿಗಳು ದೊರೆತಿದ್ದು, ಸೌರಮತದ ಪ್ರಭಾವ ಇಲ್ಲಿಯೂ ಇತ್ತೆಂದು ಹೇಳಬಹುದು.

೧. ಊರು : ಜಿಗಳಿ
೨. ತಾಲೂಕು : ಹರಿಹರ
೩. ಹೆಸರು : ಸೂರ್ಯ
೪. ಸ್ಥಳ : ರಂಗನಾಥ ದೇವಾಲಯದ ಕೋಷ್ಠಗುಡಿಯಲ್ಲಿ.
೫. ಕಾಲ : ಕ್ರಿ. ಶ. ೧೧ನೇ ಶತಮಾನ
೬. ಬಳಸಿದ ಶಿಲೆ : ಕಪ್ಪು ಶಿಲೆ

ಸಮಭಂಗದಲ್ಲಿ ನಿಂತಿರುವ ಈ ಮೂರ್ತಿ ಕಿರೀಟ ಮಕುಟಧಾರಿಯಾಗಿದೆ. ಮಕರಕುಂಡಲ, ಕಂಠಾಭರಣ ಯಜ್ಞೋಪವೀತ, ಎಡಗಾಲಿನ ಮೇಲೆ ಇಳಿಬಿದ್ದ ಉಪವೀತ, ವೈಜಯಂತಿಹಾರ ಮತ್ತು ಉದರಬಂಧವನ್ನು ಈ ಮೂರ್ತಿ ಧರಿಸಿದೆ. ದ್ವಿಭುಜಧಾರಿಯಾದ ಈ ಮೂರ್ತಿಗೆ ಭುಜಬಂಧ, ಕೇಯೂರ, ಕೈಕಡಗಗಳಿದ್ದು, ಕೈಗಳಲ್ಲಿ ಪದ್ಮವಿದೆ. ನಡುಬಂಧವಿದೆ. ಮಣಿಸರದಿಂದ ಅಲಂಕೃತವಾದ ಇಳಿವಸ್ತ್ರ ಇದ್ದು, ಕಾಲ್ಕಡಗ ಹಾಗು ಪಾದಸರಗಳಿವೆ.

ಉಷೆ ಮತ್ತು ಪ್ರತ್ಯುಷೆಯರು ತಮ್ಮ ಬಲಗೈಯಲ್ಲಿ ಚಾಮರಹಿಡಿದು ಎಡಗೈ ಕಟ್ಯಾವಲಂಬಿತರಾಗಿ ನಿಂತಿದ್ದಾರೆ. ಪೀಠದಲ್ಲಿ ಏಳು ಕುದುರೆಗಳನ್ನು ಓಡಿಸುತ್ತಿರುವ ಅರುಣನಿದ್ದು, ಆ ರಥಪೀಠದ ಮೇಲೆ ಸೂರ್ಯ ನಿಂತಿದ್ದಾನೆ. ಸುತ್ತಲೂ ಸರ್ಪಾಲಂಕೃತ ಪ್ರಭಾವಳಿ ಇದೆ. ಈ ಮೂರ್ತಿ ಲಕ್ಷಣಗಳ ಆಧಾರದ ಮೇಲೆ ಕಲ್ಯಾಣಿ ಚಾಲುಕ್ಯರ ಕಾಲದ್ದೆಂದು ಹೇಳಬಹುದು.

೧. ಊರು : ಕೊಕ್ಕನೂರು
೨. ತಾಲೂಕು : ಹರಿಹರ
೩. ಹೆಸರು : ಸೂರ್ಯ
೪. ಸ್ಥಳ : ಈಶ್ವರ ದೇವಾಲಯದಲ್ಲಿದೆ.
೫. ಕಾಲ : ಕ್ರಿ. ಶ. ೧೧ನೇ ಶತಮಾನ
೬. ಬಳಸಿದ ಶಿಲೆ : ಬಳಪದ ಶಿಲೆ

ಸಮಭಂಗದಲ್ಲಿ ನಿಂತಿರುವ ಈ ಮೂರ್ತಿ ಕಿರೀಟ ಮಕುಟಧಾರಿಯಾಗಿದೆ. ಮಕರಕುಂಡಲ, ಕಂಠಾಭರಣ ಯಜ್ಞೋಪವೀತ, ಎಡಗಾಲಿನ ಮೇಲೆ ಇಳಿಬಿದ್ದ ಉಪವೀತ, ವೈಜಯಂತಿಹಾರ ಮತ್ತು ಉದರಬಂಧವನ್ನು ಈ ಮೂರ್ತಿ ಧರಿಸಿದೆ. ದ್ವಿಭುಜಧಾರಿಯಾದ ಈ ಮೂರ್ತಿಗೆ ಭುಜಬಂಧ, ಕೇಯೂರ, ಕೈಕಡಗಗಳಿದ್ದು, ಕೈಗಳಲ್ಲಿ ಪದ್ಮವಿದೆ. ನಡುಬಂಧವಿದೆ. ಮಣಿಸರದಿಂದ ಅಲಂಕೃತವಾದ ಇಳಿವಸ್ತ್ರ ಇದ್ದು, ಕಾಲ್ಕಡಗ ಹಾಗು ಪಾದಸರಗಳಿವೆ. ಉಷೆ ಮತ್ತು ಪ್ರತ್ಯುಷೆಯರು ಸೂರ್ಯನ ಎಡಬಲದಲ್ಲಿ ಬಿಲ್ಲು ಹಿಡಿದು ಪ್ರಯೋಗಿಸುತ್ತಿರುವಂತೆ ಕೆತ್ತಿರುವುದು ಹಾಗು ಸುತ್ತಲಿನ ಪ್ರಭಾವಳಿಯಲ್ಲಿ ದ್ವಾದಶ ಆದಿತ್ಯರನ್ನು ಕೆತ್ತಿರುವುದು ಈ ಮೂರ್ತಿಯ ವಿಶೇಷವೆನ್ನಬಹುದು. ಹಾಗೆಯೇ ಪೀಠ ಭಾಗದಲ್ಲಿ ಅಶ್ವಗಳು ರಥವನ್ನು ಎಳೆಯುತ್ತಿರುವಂತೆ ಕೆತ್ತಲಾಗಿದೆ. ಮೂರ್ತಿ ಲಕ್ಷಣದ ಆಧಾರದ ಮೇಲೆ ಇದನ್ನು ಕಲ್ಯಾಣಿ ಚಾಲುಕ್ಯರ ಕಾಲದ್ದೆಂದು ಹೇಳಬಹುದು.

೧. ಊರು : ಮಸಣಕೆರೆ
೨. ತಾಲೂಕು : ಚನ್ನಗಿರಿ
೩. ಹೆಸರು : ಸೂರ್ಯ
೪. ಸ್ಥಳ : ಈಶ್ವರ ದೇವಾಲಯದ ಮುಂದೆ ಇದೆ.
೫. ಕಾಲ : ಕ್ರಿ.ಶ.೧೦ನೇ ಶತಮನ
೬. ಬಳಸಿದ ಶಿಲೆ : ಬಳಪದಕಲ್ಲು

ಭೂಮಿಯಲ್ಲಿ ಮೊಣಕಾಲವರೆಗೆ ಈ ಮೂರ್ತಿ ಹೂತಿದ್ದು, ಕಿರೀಟ ಮಕುಟಧಾರಿಯಾಗಿದೆ. ಕಿವಿಯಲ್ಲಿ ಮಕರ ಕುಂಡಲಗಳಿವೆ. ಕಂಠಾಭರಣ, ಕೊರಳಹಾರ, ಉದರಬಂಧ, ಯಜ್ಞೋಪವೀತವಿದೆ. ವೈಜಯಂತಿ ಹಾರ , ಭುಜಬಂಧ, ಕೇಯೂರಗಳಿವೆ. ಕಟಿಬಂಧಗಳಿಂದ ಅಲಂಕೃತವಾದ ಈ ಮೂರ್ತಿಯ ಮುಂಗೈಭಾಗ ತ್ರುಟಿತವಾಗಿದೆ. ಈ ಮೂರ್ತಿಯು ಭೂಮಿಯಲ್ಲಿ ಹೂತಿದ್ದರಿಂದ ಕಾಲಿನ ಭಾಗ ಮತ್ತು ಅದರ ಕೆಳಗಿನ ಭಾಗ ಸ್ಪಷ್ಟವಾಗಿ ಗೋಚರಿಸುವುದಿಲ್ಲ. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಇದು ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಸೇರಿದ್ದೆಂದು ಹೇಳಬಹುದಾಗಿದೆ.

೧. ಊರು : ಬಾಗಳಿ

೨. ತಾಲೂಕು : ಹರಪನಹಳ್ಳಿ

೩. ಹೆಸರು : ಸೂರ್ಯ

೪. ಸ್ಥಳ : ಕಲ್ಲೇಶ್ವರ ದೇವಾಲಯದ ಮುಂಭಾಗದ ಸೂರ್ಯಗುಡಿಯಲ್ಲಿ.

೫. ಕಾಲ : ಕ್ರಿ. ಶ. ೧೦ನೇ ಶತಮಾನದ ಮೊದಲ ಭಾಗ

೬. ಬಳಸಿದ ಶಿಲೆ : ಬಳಪದ ಶಿಲೆ

ಪೀಠದ ಮೇಲೆ ಸಮಭಂಗದಲ್ಲಿ ನಿಂತಿರುವ ಈ ಮೂರ್ತಿ ಕಿರೀಟ ಮಕುಟಧಾರಿಯಾಗಿದೆ. ಮಕರಕುಂಡಲ, ಕಂಠಾಭರಣ ಯಜ್ಞೋಪವೀತಗಳಿದ್ದು, ಎಡಗಾಲಿನ ಮೇಲೆ ಇಳಿಬಿದ್ದ ಉಪವೀತ, ವೈಜಯಂತಿಹಾರ ಮತ್ತು ಉದರಬಂಧವನ್ನು ಈ ಮೂರ್ತಿ ಧರಿಸಿದೆ. ದ್ವಿಭುಜಧಾರಿಯಾದ ಈ ಮೂರ್ತಿಗೆ ಭುಜಬಂಧ, ಕೇಯೂರ, ಕೈಕಡಗಗಳಿದ್ದು, ಕೈಗಳಲ್ಲಿ ಕಮಲದ ಮೊಗ್ಗುಗಳನ್ನು ಹಿಡಿದಿದೆ. ಮಣಿಸರದಿಂದ ಅಲಂಕೃತವಾದ ಇಳಿವಸ್ತ್ರ ಇದ್ದು, ದಪ್ಪನೆಯ ಕಾಲ್ಕಡಗ ಹಾಗು ಪಾದಸರಗಳಿವೆ. ಈ ಮೂರ್ತಿಯ ಎಡಗಾಲಿನ ಬಳಿ ಇರುವ ಉಷೆಯ ಎಡಗೈಯಲ್ಲಿ ಚಾಮರ, ಬಲಗೈಯನ್ನು ಕಟ್ಯಾವಲಂಬಿತವಾಗಿರುವಂತೆ ಕೆತ್ತಲಾಗಿದೆ. ಅದೇ ರೀತಿ ಈ ಮೂರ್ತಿಯ ಬಲಗಾಲಿನ ಬಳಿ ರುವ ಪ್ರತ್ಯುಷೆಯು ತನ್ನ ಬಲಗೈ ಚಾಮರಹಿಡಿದು ಎಡಗೈ ಕಟ್ಯಾವಲಂಬಿತವಾಗಿರುವ ರೀತಿಯಲ್ಲಿ ಕೆತ್ತಲಾಗಿದೆ. ಪೀಠದಲ್ಲಿ ಏಳು ಕುದುರೆಗಳನ್ನು ಓಡಿಸುತ್ತಿರುವ ಅರುಣನಿದ್ದು, ಆ ರಥಪೀಠದ ಮೇಲೆ ಸೂರ್ಯ ನಿಂತಿದ್ದಾನೆ. ಸುತ್ತಲೂ ಸರ್ಪಾಲಂಕೃತ ಪ್ರಭಾವಳಿ ಇದ್ದು, ಅದರಲ್ಲಿ ದ್ವಾದಶ , ಆದಿತ್ಯರನ್ನು ಸುಂದರವಾಗಿ ಕೆತ್ತಲಾಗಿದೆ. ಮೂರ್ತಿ ಲಕ್ಷಣಗಳ ಆಧಾರದ ಮೇಲೆ ಇದನ್ನು ಕಲ್ಯಾಣಿ ಚಾಲುಕ್ಯರ ಕಾಲದ್ದೆಂದು ಹೇಳಬಹುದು. ಕ್ರಿ.ಶ. ೯೮೭ರಲ್ಲಿ ಅಂದರೆ, ಕಲ್ಯಾಣಿ ಚಾಲುಕ್ಯ ದೊರೆ ಅಹಮಲ್ಲನ ಕಾಲದಲ್ಲಿ ಸೂರ್ಯ ದೇವಾಲಯ ನಿರ್ಮಾಣವಾಗಿದೆ ಎಂದು ಬಾಗಳಿಯಲ್ಲಿ ದೊರೆತ ಶಾಸನವೊಂದರಿಂದ ತಿಳಿದುಬರುತ್ತದೆ.

[illegible]

[illegible]

[illegible]

ನಾಗ- ನಾಗಿಣಿಯರು :-

ಕರ್ನಾಟದಲ್ಲಿ ನಾಗಾರಾಧನೆಯು ಬಹು ಹಿಂದಿನಿಂದಲೂ ರೂಢಿಯಲ್ಲಿದೆ. ಆದಿ ಇತಿಹಾಸ ಕಾಲಕ್ಕೆ ಸೇರಿದ ಬನವಾಸಿಯ ನಾಗಪ್ರತಿಮೆ ಪ್ರಸಿದ್ಧವಾದದ್ದು[೮೮]. ಮೇಲಿನ ಭಾಗ ಮಾನವ ದೇಹ, ಕೆಳಗಿನ ಭಾಗ ಸರ್ಪದ್ದಾಗಿರುವ ಮೂರ್ತಿಗಳು ಇವಾಗಿರುತ್ತವೆ. ನಾಗ-ನಾಗಿನಿ ಶಿಲ್ಪಗಳು ದಾವಣಗೆರೆ ಜಿಲ್ಲೆಯಲ್ಲಿ ಒಟ್ಟಾಗಿ ದೊರೆಯುತ್ತವೆ. ಹರಪನಹಳ್ಳಿ, ಬಾಗಳಿ, ದೇವರ ತಿಮ್ಮಲಾಪುರ, ಚಿಗಟೇರಿ, ವಾಸನ ಮೊದಲಾದೆಡೆ ಈ ಮೂರ್ತಿ ಶಿಲ್ಪಗಳು ದೊರೆಯುತ್ತವೆ. ಮತ್ತೆ ಕೆಲವು ಕಡೆ ಪ್ರತ್ಯೇಕ ನಾಗ ಶಿಲ್ಪಗಳು ಮಾತ್ರವೇ ದೊರೆಯುತ್ತವೆ.

ಹರಪನಹಳ್ಳಿಯ ಬಸ್‌ನಿಲ್ದಾಣದ ಹತ್ತಿರದಲ್ಲಿನ ಕಾಳಿಕ ದೇವಾಲಯದ ಬಳಿ ಗ್ರಾನೈಟ್ ಕಲ್ಲಿನ ಮೇಲೆ ಕೆತ್ತಿದ ನಾಗ ಶಿಲ್ಪವಿದೆ. ಅದರ ಬಲಭಾಗಕ್ಕೆ ನಾಗಿಣಿ ಶಿಲ್ಪವಿದ್ದು, ಅದು ಕರಂಡ ಮಕುಟಧಾರಿಯಾಗಿದೆ. ಈ ಮೂರ್ತಿ ತನ್ನೆರಡು ಭುಜದ ಬಳಿ ಎರಡು ಸರ್ಪಗಳನ್ನು ಹಿಡಿದಿದೆ. ಹಾಗೇ ಅಂಜಲಿ ಬದ್ಧನಾಗಿ ಪದ್ಮಾಸನದಲ್ಲಿ ಕುಳಿತಿದೆ. ಈ ಮೂರ್ತಿ ಸರ್ಪದ ಸುರುಳಿಯ ಮೇಲೆ ಕುಳಿತ ರೀತಿಯಲ್ಲಿದೆ. ಈ ಮೂರ್ತಿ ಆಸೀನವಾಗಿರುವ ಭಾಗದಿಂದ ಅದರ ಕೆಳಗಿನ ಭಾಗಕ್ಕೆ ಬಾಲವಿದೆ. ತಲೆಯ ಮೇಲೆ ಏಳು ಹೆಡೆಯ ಸರ್ಪ ಹೆಡೆಬಿಚ್ಚಿದೆ. ಈ ಶಿಲ್ಪ ಸುಮಾರು ೧೫ನೇ ಶತಮಾನಕ್ಕೆ ಸೇರಿದ್ದೆನ್ನಬಹುದು.

ಚಿಗಟೇರಿಯ ನಾರದ ಮುನಿ ದೇವಾಲಯದ ಹೊರಭಾಗದಲ್ಲಿ ಎರಡು ನಾಗ ನಾಗಿಣಿ ಶಿಲ್ಪಗಳಿದ್ದು; ಮೊದಲನೆ ಮೂರ್ತಿಯಲ್ಲಿ ಕಿರೀಟ ಮಕುಟ , ಕಿವಿಯಲ್ಲಿ ಕುಂಡಲ, ತಲೆ ಹಿಂಬದಿಯಲ್ಲಿ ಶಿರಶ್ಚಕ್ರವಿದೆ. ಕೊರಳಲ್ಲಿ ಅನೇಕಬಗೆಯ ಹಾರಗಳಿವೆ. ಸ್ತ್ರೀ ಶಿಲ್ಪಕ್ಕೆ ಕುಚಬಂಧ ಹಾಗು ಕಟಿಬಂಧಗಳಿವೆ. ನಾಗಶಿಲ್ಪ ಬಲಗೈಯಲ್ಲಿ ಅಂಕುಶ (?) ಎಡಗೈಯಲ್ಲಿ ಫಲವಿದೆ. ನಾಗಿನಿಯ ಬಲಕ್ಕೆ ಫಲವಿದ್ದು, ಎಡಗೈ ಇಳಿಬಿಟ್ಟಿದೆ. ನಡುಬಂಧವಿದ್ದು, ನಡುವಿನಿಂದ ಕೆಳಭಾಗ ಸರ್ಪದ ಬಾಲವಿದ. ನಾಗಶಿಲ್ಪದ ತಲೆ ಮೇಲೆ ಏಳು ಹೆಡೆ ಸರ್ಪವಿದೆ. ನಾಗಿನಿ ಶಿಲ್ಪದ ಮೇಲೆ ಮೂರು ಹೆಡೆಗಳ ಸರ್ಪವಿದೆ. ಈ ಶಿಲ್ಪ ಪ್ರಾಚೀನ ಕಾಲಕ್ಕೆ ಸೇರಿದೆ ಎಂದು ಹೇಳಬಹುದು.

ಮತ್ತೊಂದು ನಾಗ-ನಾಗಿಣಿ ಶಿಲ್ಪವು ಈ ಮೇಲಿನ ಶಿಲ್ಪಕ್ಕಿಂತಲೂ ಅಲಂಕಾರಿಕವಾಗಿದೆ. ನಾಗಶಿಲ್ಪವು ಕರಂಡಮಕುಟಧಾರಿಯಾಗಿದ್ದು, ಕಿವಿಯಲ್ಲಿ ಕುಂಡಲಗಳಿದ್ದು, ಕೊರಳಲ್ಲಿ ವಿವಿಧ ಆಭರಣಗಳಿವೆ. ಉದರಬಂಧ, ಯಜ್ಞೋಪವೀತವಿದ್ದು, ನಡುವಿನಲ್ಲಿ ಕಟಿಬಂದವಿದೆ. ಬಲಗೈಯಲ್ಲಿ ಹಿಡಿದ ಆಯುಧ ಕಾಣಬರುತ್ತಿಲ್ಲ. ಕಾರಣ ಬಲಮುಂಗೈ ತ್ರುಟಿತವಾಗಿದೆ. ನಾಗಿಣಿ ಶಿಲ್ಪವು ಕಿರೀಟ ಮಕುಟಧಾರಿಯಾಗಿದ್ದು, ಕೊರಳಲ್ಲಿ ಕಂಠಾಭರಣ, ಎದೆಹಾರ, ಕುಚಬಂಧವಿದೆ. ಬಲಗೈಯಲ್ಲಿ ಫಲವಿದ್ದು, ಎಡಗೈ ಕಟ್ಯಾವಲಂಬಿತವಾಗಿದೆ. ನಾಗ ಶಿಲ್ಪದ ಹಿಂಬಧಿಯಲ್ಲಿ ಒಂದು ಹೆಡೆಯ ಸರ್ಪವಿದೆ. ಸೊಂಟದಿಂದ ಕೆಳಭಾಗದಲ್ಲಿ ಒಂದು ಹೆಡೆಯ ಸರ್ಪವಿದೆ. ಸೊಂಟದಿಂದ ಕೆಳಭಾಗದಲ್ಲಿ ನಾಲ್ಕು ಸುತ್ತಿನ ಸರ್ಪಗಳಿವೆ.

ಇವುಗಳು ಮಧ್ಯಯುಗೀನ ಕಾಲಕ್ಕೆ ಸೇರಿದವುಗಳೆಂದು ಹೇಳಬಹುದು. ಹರಿಹರ ತಾಲೂಕಿನ ವಾಸನದಲ್ಲಿ ಇದೇ ಕಾಲಕ್ಕೆ ಸೇರಿದ ಏಳ ಹೆಡೆಯ ನಾಗಶಿಲ್ಪವಿದೆ. ಇಲ್ಲಿಯೇ ಪ್ರತ್ಯೇಕ ನಾಗ ಶಿಲ್ಪವಿದ್ದು, ಅದು ಈಚಿನ ಕಾಲಕ್ಕೆ ಸೇರಿದ್ದೆಂದು ಹೇಳಬಹುದು. ಹರಿಹರ ತಾಲೂಕಿನ ಚಿಕ್ಕ ಬಿದಿರೆ ಮತ್ತು ಚನ್ನಗಿರಿ ತಾಲೂಕಿನ ವಾಸನ, ಕಲ್ಕೆರೆಯಲ್ಲಿ ನಾಗಮೂರ್ತಿಗಳಿದ್ದು, ಅವುಗಳ ಲಕ್ಷಣಗಳ ಆಧಾರದ ಮೇಲೆ ಮಧ್ಯಯುಗೀನ ಕಾಲಕ್ಕೆ ಸೇರಿದವುಗಳೆಂದು ಹೇಳಬಹುದು.

೫.೧.೬. ಸ್ಮಾರಕ ಶಿಲೆಗಳ ಮೇಲಿನ ಮೂರ್ತಿಗಳು :-

ದಾವಣಗೆರೆ ಜಿಲ್ಲೆಯ ಕೆಲವು ಭಾಗಗಳಲ್ಲಿ ಸತ್ತವರ ನೆನಪಿಗಾಗಿ ನೆಟ್ಟ ವೀರಗಲ್ಲು ಮತ್ತು ಮಾಸ್ತಿಗಲ್ಲುಗಳು ದೊರೆಯುತ್ತವೆ. ಇವುಗಳಲ್ಲಿ ಚಿತ್ರಿತವಾಗಿರುವ ಶಿಲ್ಪಗಳಿಂದ ಈ ಭಾಗದ ಅಂದಿನ ಸಾಮಾಜಿಕ ಸ್ಥಿತಿಗತಿಯನ್ನು ಚಿತ್ರಿಸಬಹುದು. ರಾಜರಿಂದ, ಸಾಮಾಂತರಿಂದ, ಸಾಮಾನ್ಯರಿಂದ ನಿರ್ಮಿಸಲ್ಪಟ್ಟ ಈ ಸ್ಮಾರಕ ಶಿಲೆಗಳು ಕಲಾ ಇತಿಹಾಸ ರಚಿಸಲು ಸಹಕಾರಿ ಆಗಿವೆ[೫೯].

ಮೂರ್ತಿಶಿಲ್ಪಕ್ಕೆ ನಿರ್ಧಿಷ್ಟವಾದ ಶ್ಲೋಕ ಮತ್ತು ಕಥಾ ಹಿನ್ನಲೆ ಇದ್ದು, ಅದರಂತೆ ಶಿಲ್ಪಿ ಶಿಲ್ಪವನ್ನು ಕೆತ್ತುತ್ತಾನೆ. ಆದರೆ ಶಾಸನ ಅಥವ ವೀರಗಲ್ಲುಗಳ ಸೃಷ್ಟಿಗೆ ಇಂತಹ ಧ್ಯಾನ ಶ್ಲೋಕವಾಗಲಿ, ಪಾರಂಪರಿಕ ಕಥಾ ಹಿನ್ನಲೆಯಾಗಲೀ ಇರುವುದಿಲ್ಲ. ವೀರನ ಸಾಮಯಿಕ ಸಾಹಸವನ್ನು ಮಾತ್ರ ಶಿಲ್ಪಿ ಕೆತ್ತಿರುತ್ತಾನೆ. ಶಿಲ್ಪಿಯು ಹಲವಾರು ಕಟ್ಟುಪಾಡುಗಳಿಂದ ಬಿಡುಗಡೆ ಹೊಂದಿರುವುದರಿಂದ ಶಾಸನ ಶಿಲ್ಪಗಳಲ್ಲಿ ಎದ್ದು ಕಾಣುವಂತಹ ಹಾಗು ಅಪರೂಪವಾದ ಸ್ಮಾರಕ ಶಿಲ್ಪಗಳು ಮೂಡಿ ಬರಲು ಕಾರಣವಾಯಿತು[೬೦].

ಮೂರ್ತಿಶಿಲ್ಪಕ್ಕೆ ದಾವಣಗೆರೆ ಜಿಲ್ಲೆಯ ಅರಸು ಮನೆತನಗಳ ಕೊಡುಗೆಯನ್ನು ವಿಚಾರ ಮಾಡುವಾಗ ಈ ಅರಸು ಮನೆತನಗಳ ಅವಧಿಯಲ್ಲಿ ನಿರ್ಮಿತವಾದ ಈ ಸ್ಮಾರಕ ಶಿಲೆಗಳನ್ನು ವಿಶ್ಲೇಷಿಸುವುದು ಅಗತ್ಯ. ಯುದ್ಧದಲ್ಲಿ ಗೆದ್ದವರ ನೆನಪಿಗೆ, ಶತ್ರುಗಳು ಹಸುಗಳನ್ನು ಇಲ್ಲವೇ ಸ್ತ್ರೀಯರನ್ನು ಕದ್ದೊಯ್ಯುತ್ತಿರುವಾಗ ಹೋರಾಡಿ ಮಡಿದವರ ನೆನಪಿಗೆ. ಇಲ್ಲವೇ ಸ್ವಾಮಿನಿಷ್ಠೆ ತೋರಿಸಲು ತನ್ನ ಒಡೆಯ ಅಥವ ರಾಜ ಮಡಿದಾಗ ಆತ್ಮತ್ಯಾಗ ಮಾಡಿಕೊಂಡ ಸೇವಕರ ನೆನಪಿಗೆ . ಮತ್ತು ಆತ್ಮತ್ಯಾಗ ಗೊಂಡವನಿಗೆ ಪ್ರೇರಕ ಇಲ್ಲವೇ ಸಹಾನುಭೂತಿಯ ದೃಷ್ಟಿಯಿಂದ, ಸಾಮೂಹಿಕವಾಗಿ ಪ್ರಾಣ ತ್ಯಾಗ ಮಾಡಿಕೊಂಡ ಬಂಧು ಬಳಗದವರ ನೆನಪಿಗೆ. ಅಥವ ಕಳ್ಳ, ಕಾಕರು ಗ್ರಾಮವೊಂದರ ಮೇಲೆ ಆಕ್ರಮಣ ಮಾಡಿದಾಗ ಅಲ್ಲಿನ ನಾಯಕರು ತಮ್ಮ ಶೌರ್ಯ ಪರಾಕ್ರಮ ತೋರಿಸಿ ಮರಣ ಹೊಂದಿದವರ ನೆನಪಿಗೆ. ಹಾಗು ಹೋರಾಡುತ್ತಿರುವಾಗ ಮರಣ ಹೊಂದಿದ ನಾಯಿಯಂತಹ ಪ್ರಾಣಿಗಳ ನೆನಪಿಗೆ ಸ್ಮಾರಕ ಶಿಲೆಗಳನ್ನು ನೆಡಲಾಗುತ್ತದೆ[೬೧].

[illegible]

ವೀರಗಲ್ಲುಗಳು:

ಸತ್ತವರ ನೆನಪಿಗಾಗಿ ಈ ಕಲ್ಲುಗಳನ್ನು ನೆಟ್ಟಿರುತ್ತಾರೆ. ಸಾಮಾನ್ಯವಾಗಿ ಬಿಳಿ ಅಥವ ಕಪ್ಪು ಶಿಲೆಯ ಆಯತಾಕಾರದ ಒಂದೇ ಕಲ್ಲಿನಲ್ಲಿ ಐದು ಅಥವ ಮೂರು ಹಂತಗಳಲ್ಲಿ ಶಿಲ್ಪಗಳನ್ನು ಕೆತ್ತಲಾಗಿರುತ್ತದೆ. ಮೊದಲ ಹಂತದಲ್ಲಿ ಸಾಮಾನ್ಯವಾಗಿ ಯುದ್ಧದ ದೃಶ್ಯ, ಎರಡನೇ ಹಂತದಲ್ಲಿ ವೀರನನ್ನು ಪಲ್ಲಕ್ಕಿಯಲ್ಲಿ ಕರೆದೊಯ್ಯುತ್ತಿರುವ ದೃಶ್ಯವಿದ್ದು, ಮೂರನೆ ಹಂತದಲ್ಲಿ ವೀರನು ಸ್ವರ್ಗದಲ್ಲಿ ಅಪ್ಸರೆಯರ ಮಧ್ಯೆಪೀಠದ ಮೇಲೆ ಕುಳಿತಿರುತ್ತಾನೆ.

ಹರಿಹರ, ಬೆಳಗುತ್ತಿ, ಕಲ್ಲೇದೇವರಪುರ, ಕಡ್ಲೆಬಾಳ್, ಚಿಕ್ಕಬಿದರೆ, ವಾಸನ , ಕಾಲ್ಕೆರೆ, ದಾಗಿನಕಟ್ಟೆ, ಬಿಳಚೋಡು ಮೊದಲಾದೆಡೆ ವೀರಗಲ್ಲುಗಳು ಕಾಣಬರುತ್ತವೆ. ಈ ಭಾಗದ ವೀರಗಲ್ಲುಗಳನ್ನು ಮೂರು ವಿಭಾಗಗಳನ್ನಾಗಿ ವಿಭಾಗಿಸಿಕೊಂಡು ಅಧ್ಯಯನ ಮಾಡಬಹುದು.

1) ಕುದುರೆಯನ್ನೇರಿದ ಒಬ್ಬ ಪುರುಷ ಯುದ್ಧಕ್ಕೆ ಹೊರಟಂತಿರುವುದರ ಚಿತ್ರಣ.
2) ಪುರುಷರು ಯುದ್ಧದಲ್ಲಿ ಹೋರಾಡುತ್ತಿರುವುದರ ಚಿತ್ರಣ.
3) ಪ್ರಾಣಿಗಳೊಡನೆ ವೀರರು ಹೋರಾಟ ನಡೆಸುತ್ತಿರುವುದು[೯೨].

ಚನ್ನಗಿರಿ ತಾಲೂಕಿನ ದಾಗಿನ ಕಟ್ಟೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಮೀಪದ ಜಮೀನಿನಲ್ಲಿ ರಂಗನಾಥ ಸ್ವಾಮಿ ವಿಗ್ರಹದ ಬಳಿ ಮಾಸ್ತಿ ಮತ್ತು ವೀರಗಲ್ಲುಗಳಿವೆ. ಮಧ್ಯದಲ್ಲಿ ಒಂದು ವೀರಗಲ್ಲಿದೆ. ಅದರಲ್ಲಿ ಕುದರೆಯನ್ನೇರಿದ ವೀರನೊಬ್ಬ ತನ್ನ ಬಲಗೈಯಲ್ಲಿ ಖಡ್ಗ ಹಿಡಿದು , ಎಡಗೈಯಲ್ಲಿ ಕುದುರೆಯ ಲಗಾಮನ್ನು ಹಿಡಿದು ಯುದ್ಧಕ್ಕೆ ಹೊರಟ ರೀತಿಯಲ್ಲಿ ಕಂಡು ಬರುತ್ತದೆ. ಈತನ ಕೊರಳಲ್ಲಿ ವಿವಿಧ ಬಗೆಯ ಮಣಿಸರಗಳಿವೆ. ಕುದುರೆಯ ಹಿಂಭಾಗ ಮತ್ತು ಮುಂಭಾಗದಲ್ಲಿ ಛತ್ರಿ ಹಿಡಿದ ಸೇವಕರಿದ್ದಾರೆ. ಇದು ವಿಜಯನಗರಕಾಲಕ್ಕೆ ಸೇರಿದ ವೀರಗಲ್ಲು ಎಂದು ಶೈಲಿಯ ಆಧಾರದ ಮೇಲೆ ಹೇಳಬಹುದಾಗಿದೆ.

ಪುರುಷರ ಕಾಳಗದಲ್ಲಿ ಸೆಣಸುತ್ತಿರುವಂತೆ ಕೆತ್ತಲಾದ ವೀರಗಲ್ಲುಗಳು ಕಡ್ಲೆಬಾಳ್, ಕಲ್ಲೇದೇವರಪುರ, ವಾಸನ, ಚಿಕ್ಕಬಿದರೆಗಳಲ್ಲಿ ಕಂಡು ಬರುತ್ತವೆ. ಹರಿಹರ ತಾಲೂಕಿನ ಚಿಕ್ಕಬಿದರೆಯಲ್ಲಿನ ವೀರಗಲ್ಲಿನ (ಕಲ್ಲೇಶ್ವರ ದೇವಾಲಯದ ಮುಂಭಾಗ) ಮೊದಲ ಹಂತದಲ್ಲಿ ವೀರನೊಬ್ಬ ಎಡಗೈಯಲ್ಲಿ ಬಿಲ್ಲನ್ನು ಹಿಡಿದಿದ್ದು, ಬಲಗೈಯಿಂದ ಭುಜದ ಹಿಂದಿರುವ ಬತ್ತಳಿಕೆಯಿಂದ ಬಾಣಗಳನ್ನು ತೆಗೆಯುವಂತಿದೆ. ಕೈಗಳಲ್ಲಿ ಕಡಗ ಧರಿಸಿದ್ದು, ಜಟೆಯನ್ನು ಕಟ್ಟಿದ್ದಾನೆ. ತನ್ನ ಕಾಲ ಕೆಳಗೆ ಮರಣ ಹೊಂದಿದ ಯೋಧನನ್ನು ಕಾಲಿನಿಂದ ತುಳಿಯುತ್ತಲೇ ಹೋರಾಡುತ್ತಿದ್ದಾನೆ. ಆತನ ಎದುರಿನಲ್ಲಿ ಮರಣಶಯ್ಯೆಯಲ್ಲಿರುವ ಇಬ್ಬರು ಯೋಧರು, ಅದರ ಮೇಲಿನ ಹಂತದಲ್ಲಿ ಖಡ್ಗ, ಗುರಾಣಿ ಹಿಡಿದು ಹೋರಾಡುತ್ತಿರುವ ಯೋಧರ ಗುಂಪಿದೆ.

[illegible]

ನಂತರ ಪುಷ್ಪಕ ವಿಮಾನದಲ್ಲಿ ಅಪ್ಸರೆಯರು ಆತನನ್ನು ಕೈಲಾಸಕ್ಕೆ ಒಯ್ಯುತ್ತಿದ್ದಾರೆ. ಮೂರನೇ ಹಂತದಲ್ಲಿ ವೀರನನ್ನು ಕೈಲಾಸದಲ್ಲಿ ಲಿಂಗದ ಬಳಿ ಕುಳ್ಳಿರಿಸಿ ಅಪ್ಸರೆಯರು ಚಾಮರ ಬೀಸುತ್ತಿದ್ದಾರೆ. ಅದರ ಮೇಲೆ ಅಲಂಕಾರಿಕವಾಗಿರುವ ಕುಂಭವೊಂದನ್ನು ಬಿಡಿಸಲಾಗಿದೆ.

ಇಲ್ಲಿಯೇ ಇರುವ ಮತ್ತೊಂದು ವೀರಗಲ್ಲಿನಲ್ಲಿ ಭರ್ಜಿ ಹಿಡಿದು ಪರಸ್ಪರ ಯುದ್ಧದಲ್ಲಿ ತೊಡಗಿರುವಂತೆ, ನಂತರ ಮರಣ ಹೊಂದಿದ ವೀರನನ್ನು ಕೈಲಾಸಕ್ಕೆ ಕೊಂಡೊಯ್ಯುತ್ತಿರುವ ದೃಶ್ಯ, ಉಳಿದ ಏಳು ವೀರಗಲ್ಲುಗಳಲ್ಲಿ ಕಾಣಬಹುದು. ವಾಸನ (ಹರಿಹರ ತಾಲೂಕು) ದಲ್ಲಿನ ಚನ್ನಕೇಶವ ದೇವಾಲಯದ ಬಳಿಯ ವೀರಗಲ್ಲಿನ ಕೆಳಭಾಗದಲ್ಲಿ ವೀರನೊಬ್ಬ ಜಟಾಮಕುಟಧಾರಿಯಾಗಿದ್ದು, ಕೈಯಲ್ಲಿ ಕಡಗ, ಕೇಯೂರ ಧರಿಸಿದ್ದು ಎಡಗೈಯಲ್ಲಿ ಗುರಾಣಿ, ಖಡ್ಗ ಹಿಡಿದು ಶತ್ರುಗಳೊಡನೆ ಹೋರಾಡುತ್ತಿದ್ದಾನೆ. ಅಲೀಢ ಭಂಗಿಯಲ್ಲಿರುವ ಈ ಮೂರ್ತಿ ನಡುವಿಗೆ ನಡುಬಂಧ, ಕಠಾರಿ ಧರಿಸಿದೆ. ಕಾಲಿನಲ್ಲಿ ಕಡಗವಿದ್ದು, ಇತರರರೊಡನೆ ಹೋರಾಡುತ್ತಿದ್ದಾನೆ. ಆತನ ಕಾಲ ಕೆಳಗೆ ಇಬ್ಬರು ಮರಣ ಹೊಂದಿದ್ದು, ಅವರನ್ನು ತುಳಿಯುತ್ತಲೇ ಹೋರಾಡುತ್ತಿದ್ದಾನೆ. ಎರಡನೆ ಹಂತದಲ್ಲಿ ಪುಷ್ಪಕ ವಿಮಾನದಲ್ಲಿ ಈ ವೀರನನ್ನು ಕುಳ್ಳಿರಸಿಕೊಂಡ ನಾಲ್ಕು ಜನ ಅಪ್ಸರೆಯರು ಕೈಲಾಸಕ್ಕೆ ಕರೆದೊಯ್ಯುತ್ತಿದ್ದಾರೆ. ಇಲ್ಲಿನ ಇಬ್ಬರು ಅಪ್ಸರೆಯರು ಚಾಮರವನ್ನು ಹಿಡಿದಿದ್ದಾರೆ. ಮೂರನೇ ಹಂತದಲ್ಲಿ ವೀರನು ಕೈಲಾಸದಲ್ಲಿ ಅಂಜಲಿ ಬದ್ಧನಾಗಿ ಪದ್ಮಾಸನದಲ್ಲಿ ಕುಳಿತಿರುವಂತೆ ಕೆತ್ತಲಾಗಿದೆ. ಅಲ್ಲಿಯೇ ಇರುವ ಲಿಂಗಕ್ಕೆ ಯತಿಯೊಬ್ಬ ಪೂಜಿಸುತ್ತಿರುವಂತಿದೆ. ಆ ಯತಿಯು ಕಿವಿಯಲ್ಲಿ ಕುಂಡಲ, ಯಜ್ಞೋಪವೀತಗಳನ್ನು ಧರಿಸಿದ್ದಾನೆ. ಲಿಂಗದ ಮುಂದೆ ನಂದಿ ಇದ್ದು, ಅದರ ಮೇಲ್ಭಾಗದಲ್ಲಿ ಸೂರ್ಯ-ಚಂದ್ರರಿದ್ದಾರೆ. ಇಲ್ಲಿನ ವೀರ ಯಜ್ಞೋಪವೀತ ಧರಿಸಿದ್ದು ಜಟೆಯನ್ನು ವಿಶೇಷ ರೀತಿಯಲ್ಲಿ ಅಲಂಕರಿಸಿರುವಂತೆ ಕೆತ್ತಲಾಗಿರುವುದು ವಿಶೇಷ. ಇದೇ ಲಕ್ಷಣಗಳನ್ನೊಳಗೊಂಡ ವೀರಗಲ್ಲುಗಳು ಜಗಲೂರು ತಾಲೂಕಿನ ಕಲ್ಲೇದೇವರಪುರ, ದಾವಣಗೆರೆ ತಾಲೂಕಿನ ಕಡ್ಲೆಬಾಳದಲ್ಲಿ[೯೩] ಹಾಗು ಹೊನ್ನಾಳಿ ತಾಲೂಕಿನ ಬೆಳಗುತ್ತಿಯಲ್ಲಿ ಕಂಡುಬರುತ್ತವೆ. ಈ ಮೂರ್ತಿಗಳ ಲಕ್ಷಣಗಳ ಆಧಾರದ ಮೇಲೆ ವಾಸನ ಮತ್ತು ಚಿಕ್ಕ ಬಿದರೆ ವೀರಗಲ್ಲುಗಳು ಕಲ್ಯಾಣ ಚಾಲುಕ್ಯರ ಕಾಲದವುಗಳೆಂದು ಹಾಗು ಕಲ್ಲೇದೇವರಪುರ, ಕಡ್ಲೇಬಾಳು, ಬೆಳಗುತ್ತಿ ವೀರಗಲ್ಲುಗಳು ಹೊಯ್ಸಳರ ಸಮಕಾಲೀನವೆಂದು, ಅವುಗಳ ಲಕ್ಷಣಗಳ ಆಧಾರದ ಮೇಲೆ ಹೇಳಬಹುದು. ವೀರರು ಪ್ರಾಣಿಗಳೊಡನೆ ಹೋರಾಡಿ ಮಡಿದ ವೀರಗಲ್ಲುಗಳು ಕರ್ನಾಟಕದಲ್ಲಿ ಅಲ್ಲಲ್ಲಿ ಕಂಡುಬಂದಿವೆ. ಈ ಜಿಲ್ಲೆಯ ದಾಗಿನಕಟ್ಟೆಯಲ್ಲಿ ಹುಲಿಯೊಡನೆ ಹೋರಾಡುತ್ತಿರುವ ದೃಶ್ಯ ವೀರಗಲ್ಲಿನಲ್ಲಿದೆ. ಇದೇ ರೀತಿ ಹೊನ್ನಾಳಿ ತಾಲೂಕಿನ ಬೆಳಗುತ್ತಿಯಲ್ಲಿ ವೀರನೊಬ್ಬ ಪ್ರಾಣಿಯೊಂದರ ಕೊರಳಭಾಗವನ್ನು (ಪ್ರಾಯಶಃ ನಾಯಿ ?) ತನ್ನ ಕೈಯಿಂದ ಹಿಡಿದಿರುವಂತೆ ಚಿತ್ರಿಸಲಾಗಿದೆ[೯೪].

ಮಾಸ್ತಿಕಲ್ಲು : ಪತಿಯು ವೀರ ಮರಣ ಹೊಂದಿದ ಸಮಯದಲ್ಲಿ ಉರಿಯುತ್ತಿರುವ ಬೆಂಕಿಯಲ್ಲಿ ಹಾರಿ ಸತಿ ಪ್ರಾಣ ಕಳೆದುಕೊಳ್ಳುವುದಕ್ಕೆ ಸತಿ ಸಹಗಮನ ಪದ್ಧತಿ ಎನ್ನುತ್ತಾರೆ[೫]. ಈ ರೀತಿ ಸತಿ ಹೋದವರ ನೆನಪಿಗಾಗಿ ನೆಟ್ಟ ಹಲವು ಮಹಾಸತಿ ಕಲ್ಲುಗಳು ದಾವಣಗೆರೆ ಜಿಲ್ಲೆಯ ಕೆಲವು ಭಾಗಗಳಲ್ಲಿ ಕಂಡುಬರುತ್ತವೆ. ಇವುಗಳನ್ನು ಕೆಲವು ಕಡೆ ಮಾಸ್ತಮ್ಮನೆಂದು ಜನರು ಪೂಜಿಸುತ್ತಾರೆ. ಈ ಶಿಲ್ಪಗಳು ಸಾಮಾನ್ಯವಾಗಿ ಬಲಗೈಯನ್ನು ಮೇಲಕ್ಕೆತ್ತಿರುವಂತೆ ಇಲ್ಲವೆ ಕೆಲವು ಬಾರಿ ಕೈಯಲ್ಲಿ ಕನ್ನಡಿ ಅಥವಾ ನಿಂಬೆಹಣ್ಣು, ಪಾತ್ರೆ ಅಥವಾ ಕಳಶವನ್ನು ಹಿಡಿದಿರುವಂತೆ ಶಿಲ್ಪಿ ಕೆತ್ತಿರುತ್ತಾನೆ.

ಈ ರೀತಿಯ ಸ್ಮಾರಕ ಸತಿ ಶಿಲ್ಪಗಳಲ್ಲಿ ಚನ್ನಗಿರಿ ತಾಲೂಕಿನ ದಾಗಿನಕಟ್ಟೆ ಹರಿಹರ ತಾಲೂಕಿನ ವಾಸನದಲ್ಲಿ ದೊರತ ಸತಿಕಲ್ಲುಗಳು ಮುಖ್ಯವಾಗಿರುವುದರಿಂದ ಅವುಗಳನ್ನು ಮಾತ್ರ ವಿವರಿಸಲಾಗಿದೆ. ದಾಗಿನಕಟ್ಟೆಯ ಹಿರಿಯ ಪ್ರಾಥಮಿಕ ಶಾಲೆಯಬಳಿಯ ಜಮೀನೊಂದರಲ್ಲಿ ಎರಡು ಮಹಾಸತಿ ಮೂರ್ತಿಶಿಲ್ಪಗಳಿವೆ. ಅವೆರೆಡರ ಮಧ್ಯೆ ಒಂದು ವೀರಗಲ್ಲಿದೆ. ಬಲಗೈಯಲ್ಲಿ ನಿಂಬೆಹಣ್ಣು ಹಿಡಿದು ಮೇಲಕ್ಕೆತ್ತಿರುವ ಕೈ, ಕೈಗಳಲ್ಲಿ ಬಳೆ, ಕೊರಳಲ್ಲಿ ಅನೇಕ ಬಗೆಯ ಹಾರಗಳಿವೆ. ವಿಶೇಷ ರೀತಿಯಲ್ಲಿ ಧರಿಸಿದ ಸೀರೆ ಇದೆ. ಕಿವಿಯಲ್ಲಿ ಕುಂಡಲಗಳು, ಅಲಂಕೃತವಾಗಿ ಹೆಣೆದ ಕೇಶರಾಶಿಯು ಆಕೆಯ ಭುಜದ ಮೇಲಿದೆ. ತಲೆಯಲ್ಲಿ ಅರಳಿದ ಪುಷ್ಪ (ಪ್ರಾಯಶಃ ತಾವರೆ) ಧರಿಸಿದ್ದಾಳೆ. ಬಲಗಾಲಿನ ಬಳಿ ಈಕೆಯ ಸೇವಿಕೆಯೊಬ್ಬಳು ಅಂಜಲಿ ಮುದ್ರೆಯಲ್ಲಿ ನಿಂತಿದ್ದಾಳೆ. ತನ್ನ ಒಡತಿಯ ಜೊತೆಯಲ್ಲಿ ಈಕೆಯೂ ಸಹ ಪ್ರಾಣಾರ್ಪಣೆ ಮಾಡಿಕೊಂಡಿರಬೇಕೆನಿಸುತ್ತದೆ!.

ಈ ಶಿಲ್ಪದ ಎಡಬದಿಯಲ್ಲಿ ಇದೇ ಲಕ್ಷಣವನ್ನೊಳಗೊಂಡ ಮತ್ತೊಂದು ಮಹಾಸತಿಯ ಮೂರ್ತಿ ಶಿಲ್ಪವಿದೆ. ವಾಸನದ ಚನ್ನಕೇಶವ ದೇವಾಲಯದ ಮುಂಭಾಗದಲ್ಲಿ ಮಧ್ಯ ಕಾಲಿನ ಯುಗಕ್ಕೆ ಸೇರಿದ ಎರಡು ಮಹಾಸತಿ ಸ್ಮಾರಕಗಳಿದ್ದು[೬], ಅವರೆಡೂ ಸಮಾನ ಲಕ್ಷಣಗಳನ್ನು ಹೊಂದಿವೆ. ಸತಿ ಹೋದ ಸ್ತ್ರೀಯನ್ನು ಇಬ್ಬರು ಅಪ್ಸರೆಯರು ತಮ್ಮ ಹೆಗಲ ಮೇಲೆ ಕೈಗಳನ್ನು ಹಾಕಿಸಿಕೊಂಡು ಕರೆದೊಯ್ಯುವಂತಿದೆ. ಬಲ ಅಪ್ಸರೆ ತನ್ನ ಬಲಗೈನ್ನು ಮೇಲಕ್ಕೆತ್ತಿದ್ದಾಳೆ. ಎಡ ಅಪ್ಸರೆ ತನ್ನ ಎಡಗೈಯನ್ನು ಇಳಿಬಿಟ್ಟಿದ್ದಾಳೆ. ಎರಡನೆ ಹಂತದಲ್ಲಿ ಅಪ್ಸರೆಯರು ಪುಷ್ಪಕ ವಿಮಾನದಲ್ಲಿ ಆ ಸ್ತ್ರೀಯನ್ನು ಕುಳ್ಳರಿಸಿಕೊಂಡಿದ್ದಾರೆ. ಮೂರನೇ ಹಂತದಲ್ಲಿ ಕೈಲಾಸದಲ್ಲಿ ಆ ಸ್ತ್ರೀಯು ಪದ್ಮಾಸನದಲ್ಲಿ ಅಂಜಲಿ ಹಸ್ತಳಾಗಿ ಕುಳಿತಿರುವಂತಿದೆ. ಅಲ್ಲಿ ಶಿವಲಿಂಗ, ನಂದಿ , ಸೂರ್ಯ-ಚಂದ್ರರಿದ್ದಾರೆ. ಸತಿ ಹೋದ ಸ್ತ್ರೀ ತನ್ನ ಕೇಶರಾಶಿಯನ್ನು ತುರುಬಿನ ರೀತಿಯಲ್ಲಿ ಕಟ್ಟಿದ್ದು, ಕಿವಿಗಳಲ್ಲಿ ಓಲೆ ಹಾಗು ಕೊರಳಲ್ಲಿ ಅನೇಕ ಬಗೆಯ ಸರಗಳಿವೆ. ಸೀರೆಯನ್ನು ಕಚ್ಚೆಯ ರೀತಿಯಲ್ಲಿ ಧರಿಸಿರುವುದು ಹಾಗು ಕಾಲಿನಲ್ಲಿ ಕಾಲ್ಗಡಗಗಳಿರುವುದನ್ನು ನೋಡಬಹುದು. ಕರ್ನಾಟಕದಲ್ಲಿ ದೊರೆಯುವ ಸತಿ ಶಿಲ್ಪಗಳಲ್ಲಿ ಈ ಸತಿ ಶಿಲ್ಪ ವಿಶೇಷವೆನ್ನಬಹುದು. ಏಕೆಂದರೆ; ಸತಿ ಹೋದ ಸ್ತ್ರೀಯನ್ನು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವ ದೃಶ್ಯವನ್ನು ವಾಸನದ ಈ ಶಿಲ್ಪದಲ್ಲಿ ಕೆತ್ತಿರುವುದು ಶಿಲ್ಪದ ದೃಷ್ಟಿಯಿಂದ ವಿಶೇಷ ಹಾಗು ಮಹತ್ವದಾಯಕವೆನ್ನಬಹುದಾಗಿದೆ.

ಈ ಸ್ಮಾರಕ ಶಿಲ್ಪಗಳ ಸೂಕ್ಷ್ಮ ಅಧ್ಯಯನದಿಂದ ದಾವಣಗೆರೆ ಜಿಲ್ಲೆಯಲ್ಲಿ ಅಂದು ಬಳಕೆಯಲ್ಲಿದ್ದ ಆಯುಧಗಳಾದ ಬಿಲ್ಲು, ಬಾಣ, ಈಟಿ (ಭರ್ಜಿ) , ಉದ್ದನೆಯ ಗುರಾಣಿ, ಖಡ್ಗಗಳನ್ನು ಯುದ್ಧದ ಸಮಯದಲ್ಲಿ ಬಳಸುತ್ತಿದ್ದರೆಂದು ಹಾಗು ಈ ಆಯುಧೋಪಕರಣಗಳನ್ನು ತಯಾರಿಸುತ್ತಿದ್ದರೆಂದು ತಿಳಿದುಬರುತ್ತದೆ. ಇದಲ್ಲದೆ ಅಂದಿನ ಸೈನಿಕ ಸಂಘಟನೆಯ ರೀತಿ ನೀತಿಗಳನ್ನು ಅರಿಯಬಹುದಾಗಿದೆ. ಇಲ್ಲಿನ ಶಿಲ್ಪಗಳು ಒಂದೇ ರೀತಿಯಾಗಿಲ್ಲದ ಕಾರಣ ಪ್ರಾದೇಶಿಕ ಶಿಲ್ಪ ವೈಭಿನ್ನತೆಯನ್ನು ಇಲ್ಲಿ ಕಾಣಬಹುದು. ಇವುಗಳು ಸ್ಥಳೀಯ ಮೂರ್ತಿ ಶಿಲ್ಪಿಗಳ ಮೇಲೆ ಬೀರಿದ ಪ್ರಭಾವವನ್ನು ಇಲ್ಲಿನ ದೇವಾಲಯದ ವಿಭಿನ್ನ ಭಾಗಗಳಲ್ಲಿ ಕೆತ್ತಿದ ಶಿಲ್ಪಗಳಿಂದ ಗುರುತಿಸಬಹುದಾಗಿದೆ.

ಕಾಲದಿಂದ ಕಾಲಕ್ಕೆ ಮೂರ್ತಿ ಶಿಲ್ಪದಲ್ಲಾದ ಬೆಳವಣಿಗೆಯ ಹಂತಗಳನ್ನು ಈ ಸ್ಮಾರಕ ಶಿಲ್ಪಗಳಿಂದ ಗುರುತಿಸುವುದಷ್ಟೇ ಅಲ್ಲದೆ ಸ್ಥಳೀಯ ಶೈಲಿಯ ಪ್ರಾಧಾನ್ಯತೆಯಿಂದ ಆಗಿನ ಕಾಲದ ಜನರ ಉಡುಪು,(ಈಗಲೂ ಇಲ್ಲಿನ ಸ್ತ್ರೀಯರು ಮಹಾಸತಿ ಶಿಲ್ಪದಲ್ಲಿ ಕಂಡುಬರುವ ರೀತಿ ಸೀರೆ ಹಾಗು ಪುಷ್ಪ ಧರಿಸುತ್ತಾರೆ). ಹಾಕಿಕೊಳ್ಳುತ್ತಿದ್ದ ಆಭರಣಗಳು ಇತ್ಯಾದಿಗಳನ್ನು ಗುರುತಿಸಬಹುದು. ಇದರ ಜೊತೆಯಲ್ಲಿ ಅಂದು ಪ್ರಧಾನವಾಗಿ ಆಚರಿಸಲ್ಪಡುತ್ತಿದ್ದ ದೇವಾನುದೇವತೆಗಳನ್ನು ಇಲ್ಲಿ ಕೆತ್ತಲ್ಪಟ್ಟಿರುವ ಶಿಲ್ಪಗಳಿಂದ ಅರಿಯಬಹುದು. ಹೀಗೆ ದಾವಣಗೆರೆ ಜಿಲ್ಲೆಯ ಮೂರ್ತಿ ಶಿಲ್ಪ ಪರಂಪರೆಗೆ ವೀರ, ಮಾಸ್ತಿಯಂಥಹ ಸ್ಮಾರಕ ಶಿಲ್ಪಗಳ ಪಾತ್ರವು ಗಣನೀಯವಾಗಿದೆ.

೫.೨. ಕಂಚಿನ ಮೂರ್ತಿಗಳು :-

ಕಂಚನ್ನು ವಿವಿಧ ಮಿಶ್ರಲೋಹಗಳ ಸಂಮಿಶ್ರಣದಿಂದ ತಯಾರಿಸಲಾಗುತ್ತದೆ[೯೭]. ತಾಮ್ರ, ಬೆಳ್ಳಿ, ಬಂಗಾರ, ಹಿತ್ತಾಳೆ ಮತ್ತು ಬಿಳಿ ಸೀಸ, ಈ ಐದು ಲೋಹಗಳಿಂದ ತಯಾರಿಸಲ್ಪಟ್ಟ ಲೋಹವನ್ನು ಪಂಚ ಲೋಹವೆನ್ನುತ್ತಾರೆ. ಹೀಗೆ ತಯಾರಿಸಿದ್ದನ್ನು ಸಾಮಾನ್ಯವಾಗಿ ಕಂಚು ಎನ್ನುತ್ತಾರೆ[೯೮]. ಹತ್ತು ಭಾಗ ತಾಮ್ರ, ಅರ್ಧಭಾಗ ಹಿತ್ತಾಳೆ, ಮುಕ್ಕಾಲು ಭಾಗ ಬಿಳಿ ಸೀಸವನ್ನು ಸೇರಿಸಿ ಕಂಚಿನ ಲೋಹ ಶಿಲ್ಪ ತಯಾರಿಸುವ ಬಗ್ಗೆ ಶಿಲ್ಪಶಾಸ್ತ್ರ ಗ್ರಂಥ ವಿವರಿಸುತ್ತದೆ[೯೯].

ಮೇಣದಿಂದ ಮೂರ್ತಿಗಳನ್ನು ತಯಾರಿಸುವ ವಿಧಾನಕ್ಕೆ ಮಧು ಶಿಷ್ಟ ವಿಧಾನ (Madhuchista Vidhanam) ಎನ್ನುತ್ತಾರೆ[೧೦೦]. ಜೇಡಿ ಮಣ್ಣಿನ ಮೂರ್ತಿಗಳಿಗೆ ಮೇಣವನ್ನು ಲೇಪಿಸಿ , ಅದನ್ನು ಬಿಸಿಲಿನಲ್ಲಿ ಒಣಗಿಸಿದ ನಂತರ ಸುಟ್ಟಾಗ ಉತ್ತಮ ಮೂರ್ತಿಗಳು ಸಿದ್ಧವಾಗುತ್ತವೆಂದು , ಇದೇ ವಿಧಾನದ ಮೂಲಕ ಲೋಹ ಮೂರ್ತಿಗಳನ್ನು ತಯಾರಿಸಿ, ನೀರಿನಿಂದ ತೊಳೆಯ ಬೇಕೆಂದು ಶಿಲ್ಪ ಶಾಸ್ತ್ರ ತಿಳಿಸುತ್ತದೆ[೧೦೧].

ಕಂಚಿನ ಮೂರ್ತಿಗಳನ್ನು ಮೇಣ ಮತ್ತು ಜೇಡಿ ಮಣ್ಣಿನ ಸಹಾಯದಿಂದ ತಯಾರಿಸಿ, ನಂತರ ನಿರ್ಧಿಷ್ಟ ಶಾಖಕ್ಕೆ ಒಳಪಡಿಸಿ ಸಿದ್ಧಪಡಿಸಬೇಕೆಂಬುದನ್ನು ವಿಷ್ಣು ಸಂಹಿತೆ ಗ್ರಂಥವು ವಿವರಿಸುತ್ತದೆ. ಮೂರನೇ ಸೋಮೇಶ್ವರನಿಂದ ರಚಿತವಾದ ಮಾನಸೋಲ್ಲಾಸ ಗ್ರಂಥವು ಮೂರ್ತಿ ತಯಾರಿಕೆಯ ವಿವರಣೆಯನ್ನು ನೀಡುತ್ತದೆ[೧೦೨]. ಮಾನಸಾರವು ಸಹ ಮೇಣದ ಸಹಾಯದೊಡನೆ ಕಂಚಿನ ಮೂರ್ತಿಯ ಅಂತಿಮ ತಯಾರಿಕೆಯ ವಿಧಾನವನ್ನು[೧೦೩], ಅಭಿಲಾಷಾರ್ಥ ಚಿಂತಾಮಣಿ ಗ್ರಂಥವು ಸಹ ಸ್ಥಪತಿಗಳು ಅನುಸರಿಸುವ ನಿಯಮ, ಉಚ್ಚರಿಸುವ ಶ್ಲೋಕಗಳ ವಿವರಣೆ ನೀಡುತ್ತದೆ[೧೦೪]. ಕಂಚಿನಮೂರ್ತಿಗಳ ತಯಾರಿಕೆಯಲ್ಲಿ ರಂಧ್ರ(Hallow) ಮತ್ತು ಘನೀಕೃತ (Solid) ಎಂಬ ಎರಡು ವಿಧಾನಗಳನ್ನು ಅನುಸರಿಸಲಾಗುತ್ತದೆ.

ಭಾರತದಲ್ಲಿ ಈಗ ದೊರೆತಿರುವ ಕಂಚಿನ ಮೂರ್ತಿಗಳಲ್ಲಿ ಸಮಭಂಗದಲ್ಲಿ ನಿಂತಿರುವ ಮೂರ್ತಿಗಳು, ದ್ವಿಭಂಗ ಇಲ್ಲವೇ ತ್ರಿಭಂಗದಲ್ಲಿರುವ, ಇಲ್ಲವೇ ನಾಟ್ಯ ಶಿವ ಮೂರ್ತಿಗಳೇ ಹೆಚ್ಚಾಗಿ ದೊರೆತಿವೆ. ಬಹಳ ಹಿಂದಿನಿಂದಲೂ ಈ ಮೂರ್ತಿಗಳು ಕಂಡುಬಂದಿವೆ. ಕ್ರಿ. ಪೂ. ಮೂರನೆಯ ಸಹಸ್ರಮಾನದಲ್ಲಿ ಅಂದರೆ; ಹರಪ್ಪ ಸಂಸ್ಕೃತಿಯಲ್ಲಿ ದೊರೆತಿರುವ ಸಣ್ಣ ಸ್ತ್ರೀ ಮೂರ್ತಿಯ ನಿರೂಪಣೆಯಲ್ಲಿ ಅಸಾಧಾರಣ ಕೌಶಲ್ಯ ಮತ್ತು ಚಾತುರ್ಯ ಕಂಡುಬಂದಿದೆ. ಆ ಸಂಸ್ಕೃತಿಯು ತನ್ನ ಸಮಕಾಲೀನವಾದ ಇತರ ಸಂಸ್ಕೃತಿಗಳಿಗಿಂತ ಲೋಹ ವಿಜ್ಞಾನದಲ್ಲಿ ಮುಂದಿತ್ತು ಎಂಬ ಅರುವು ಮೂಡುತ್ತದೆ[೧೦೫]. ವೈದಿಕ ಯುಗದಲ್ಲಿಯೂ ಲೋಹ -ಶಿಲ್ಪ ಜ್ಞಾನ ಚೆನ್ನಾಗಿ ಬೆಳೆದುಬಂದಿತ್ತು. ಯಜುರ್ವೇದವು ಲೋಹ ಶಿಲ್ಪಿಯನ್ನು ಸೃಷ್ಟಿಕರ್ತನೆಂದೇ ಹೊಗಳುತ್ತದೆ. ಆತನನ್ನು ದೈವ ಶಿಲ್ಪಿ '' ತ್ವಷ್ಟ '' ನೊಂದಿಗೆ ಸಮೀಕರಿಸುತ್ತದೆ[೧೦೬]. ರಾಮಾಯಣ ಮತ್ತು ಮಹಾಭಾರತಗಳಲ್ಲಿಯೂ ಆ ಕಾಲದಲ್ಲಿ ಲೋಹ ಶಿಲ್ಪಕಲೆ ಬಹಳವಾಗಿ ಉಪಯೋಗದಲ್ಲಿದ್ದುದಕ್ಕೆ ಸಾಕಷ್ಟು ಮಾಹಿತಿಗಳಿವೆ. ಪ್ರಾಚೀನ ಸಾಹಿತ್ಯಗಳಿಂದ ಭಾರತದಲ್ಲಿ ಲೋಹ ಶಿಲ್ಪಕಲೆ ಸಾಕಷ್ಟು ಪ್ರವರ್ಧಮಾನವಾಗಿ ಬೆಳೆದಿತ್ತು ಎಂಬ ವಿಚಾರ ಸ್ಪಷ್ಟವಾದರೂ ಲೋಹ ಶಿಲ್ಪಗಳ ಉದಾಹರಣೆಗಳು ದೊರೆತಿರುವುದು ಮಾತ್ರ ಅತೀ ಕಡಿಮೆ. ಇದಕ್ಕೆ ಕಾರಣ ಲೋಹ ಅಮೂಲ್ಯವಸ್ತುವಾಗಿದೆ. ನಮ್ಮ ಪೂರ್ವಜರು ಲೋಹವನ್ನು ಮತ್ತೆ ಮತ್ತೆ ಕರಗಿಸಿ ಉಪಯೋಗಿಸುತ್ತಿದ್ದುದರಿಂದ ಹಳೆಯ ಲೋಹದ ವಸ್ತುಗಳು ದೊರೆಯುವುದು ಕಡಿಮೆ. ಯಾವ ಲೋಹದ ವಸ್ತುಗಳು ಕಳೆದು ಹೋಗಿ ಭೂಮಿಯಲ್ಲಿ ಹುದುಗಿ; ಅಡಗಿದವೋ, ಯಾವ ವಸ್ತು ಶಿಲ್ಪಗಳನ್ನು ಅಮೂಲ್ಯವೆಂದು ಸಂರಕ್ಷಿಸಿ ಇಡಲಾಯಿತೋ ಅಂತಹ ಉದಾಹರಣಗಳು ಮಾತ್ರ ಇಂದು ದೊರೆತಿವೆ.

ದಕ್ಷಿಣ ಭಾರತದಲ್ಲಿಯೂ ಲೋಹಕಲೆ ಸಾಕಷ್ಟು ಪ್ರವರ್ಧಮಾನವಾಗಿ ಬೆಳೆದಿತ್ತು. ತಮಿಳುನಾಡಿನ ಆದಿಚ್ಚನಲ್ಲೂರ್[೧೦೭] ಉತ್ಖನನಗಳಲ್ಲಿ ದೊರೆತಿರುವ ಕ್ರಿ.ಪೂ. ಸುಮಾರು ೧೦೦೦ದಷ್ಟು ಹಳೆಯದಾದ 'ಮಾತೃ ದೇವತೆ 'ಯ ಲೋಹ ಮೂರ್ತಿ, ಸೌಂದರ್ಯದ ದೃಷ್ಟಿಯಿಂದ ಕಳಪೆ ಎನಿಸಿದರೂ, ಲೋಹ ಕಲೆಯ ದೃಷ್ಟಿಯಿಂದ ಅಮೂಲ್ಯವಾದದ್ದು. ಈರೋಡ್ ಬಳಿ ಇರುವ ಕೋಡುಮನಾಳ್ ಎಂಬಲ್ಲಿ

ನಡೆಸಿದ ಇತ್ತೀಚಿನ ಉತ್ಖನನಗಳಲ್ಲಿ ಬೃಹತ್ ಶಿಲಾ ಸಂಸ್ಕೃತಿಗೆ ಸೇರಿದ ಒಂದು ಸಣ್ಣ ಕಂಚಿನ ಹುಲಿಯ ಮೂರ್ತಿ ಸಿಕ್ಕಿದೆ. ಮೂರ್ತಿ ಚಿಕ್ಕದಾದರೂ ಸಹಜ ಸುಂದರವಾಗಿದೆ. ಈ ಶಿಲ್ಪದ ಒಂದು ವೈಶಿಷ್ಟ್ಯವೆಂದರೆ, ಇದರ ಮೈಮೇಲೆ ಅರೆ-ಅಮೂಲ್ಯವಾದ ಕಲ್ಲುಗಳನ್ನು ಮೆಟ್ಟಿ, ಅಲಂಕರಿಸಲಾಗಿದೆ[೧೦೮].

ಕರ್ನಾಟಕದಲ್ಲಿ ಲೋಹ ಶಿಲ್ಪಕಲೆ ತಾಮ್ರ ಶಿಲಾಯುಗದಿಂದ ಪ್ರಾರಂಭವಾಗುತ್ತದೆ. ಕ್ರಿ.ಪೂ. ೧೦೦೦ಕ್ಕೆ ಸೇರಿದುದೆಂದು ನಿರ್ಧರಿಸಲಾಗಿದೆ. ಈ ಸಂಸ್ಕೃತಿಯ ನಿವೇಶನಗಳಲ್ಲಿ ತಾಮ್ರ ವಸ್ತುಗಳು ಬಳಕೆಯಲ್ಲಿದ್ದುದಕ್ಕೆ ಆಧಾರಗಳು ದೊರೆತಿವೆ. ಆದರೆ ಕಲಾಕೃತಿಗಳೆಂದು ಹೇಳಬಹುದಾದ ವಸ್ತುಗಳಾವವೂ ದೊರೆತಿಲ್ಲ. ಕರ್ನಾಟಕದ ಅತ್ಯಂತ ಪ್ರಾಚೀನ ಲೋಹ ಕಲಾಕೃತಿಗಳು ಶಾತವಾಹನರ ಕಾಲದಿಂದ ಪ್ರಾರಂಭವಾಗುತ್ತವೆ. ಶಾತವಾಹನರ ಚಕ್ರಾಧಿಪತ್ಯ ಮಹಾರಾಷ್ಟ್ರ, ಆಂಧ್ರ ಪ್ರದೇಶ ಮತ್ತು ಕರ್ನಾಟಕಗಳನ್ನೊಳಗೊಂಡಿದ್ದರೂ ಕರ್ನಾಟಕದ ದಕ್ಷಿಣ ಭಾಗಗಳು ಅವರ ಆಳ್ವಿಕೆಗೆ ಒಳಪಟ್ಟಿರಲಿಲ್ಲ. ಕೇವಲ ಉತ್ತರ ಕರ್ನಾಟಕದ ಭಾಗಗಳು ಮಾತ್ರ ಶಾತವಾಹನರ ವಶದಲ್ಲಿದ್ದವು. ಶಾತವಾಹನ ಕಾಲದ ಲೋಹ ಕೃತಿಗಳು ಮಹಾರಾಷ್ಟ್ರ ಆಂಧ್ರ ಪ್ರದೇಶಗಳಲ್ಲಿ ಹೇರಳವಾಗಿ ದೊರೆತಿದ್ದರೂ, ಕರ್ನಾಟಕದಲ್ಲಿ ಮಾತ್ರ ಇವುಗಳು ಕೇವಲ ನಾಣ್ಯಗಳಿಗೆ ಮಾತ್ರ ಮೀಸಲು. ಕರ್ನಾಟದಲ್ಲಿ ದೊರೆತಿರುವ ಶಾತವಾಹನರ ನಾಣ್ಯಗಳ ತಂತ್ರ ವಿಧಾನ, ಆಕೃತಿಗಳಲ್ಲಿ ಅವರ ಇತರೆ ನಾಣ್ಯಗಳಂತೆಯೇ ಇದ್ದು, ಲೋಹಕಲೆ ಶಾತವಾಹನರ ರಾಜ್ಯದ ಎಲ್ಲಾ ಭಾಗಗಳಲ್ಲಿಯೂ ಹೆಚ್ಚೂ ಕಡಿಮೆ ಒಂದೇ ರೀತಿ ಇತ್ತು ಎಂಬ ಅಂಶವನ್ನು ವಿಶದಪಡಿಸುತ್ತದೆ. ಶಾತವಾಹನರ ಲೋಹ ಶಿಲ್ಪಗಳು ಕರ್ನಾಟಕದಲ್ಲಿ ದೊರೆಯದಿದ್ದರೂ ಆ ಕಲೆಗೆ ಪೂರ್ವಭಾವಿಯಾಗಿದ್ದ ಶಿಲ್ಪ ಕಲೆ ಕರ್ನಾಟಕದಲ್ಲಿ ಚೆನ್ನಾಗಿ ಬೆಳೆದಿತ್ತು ಎಂಬ ವಿಚಾರ ಸನ್ನತಿಯ ಸುಂದರ ಶಿಲ್ಪಗಳು, ಬನವಾಸಿಯ ಚೈತ್ಯಾಲಯಗಳು ಇತ್ಯಾದಿಗಳಿಂದ ತಿಳಿಯಬಹುದಾಗಿದೆ.

ಭಾರತೀಯ ಕಂಚು ಶಿಲ್ಪಗಳ ಅಧ್ಯಯನ ಮಾಡುವಾಗ ನಾವು ಗಮನದಲ್ಲಿ ಇರಿಸಿಕೊಳ್ಳಬೇಕಾದ ಅಂಶವೆಂದರೆ; ಕಂಚು ಶಿಲ್ಪಗಳು ಸಾಮಾನ್ಯವಾಗಿ ನಮಗೆ ವಸ್ತು ಸಂಗ್ರಹಾಲಯ, ದೇವಾಲಯ ಮತ್ತು ಉತ್ಖನನಗಳಲ್ಲಿ ದೊರೆಯುತ್ತವೆ. ಅಲ್ಲದೇ ಕೆಲವೊಮ್ಮೆ ಆಕಸ್ಮಿಕವಾಗಿ ಭೂಮಿಯಲ್ಲಿ ದೊರೆಯುತ್ತವೆ. ಕೆಲವು ಮಾತ್ರ ಶಾಸನಗಳನ್ನು ಹೊಂದಿವೆ. ಶಾಸನ ಸಹಿತವಾದ ಕಂಚುಗಳಿಗೆ ಮಾತ್ರ ನಾವು ಕಾಲವನ್ನು ನಿಖರವಾಗಿ ನಿರ್ಣಯಿಸಬಹುದು. ಆದರೆ ಉಳಿದೆಲ್ಲಾ ಕಂಚು ಶಿಲ್ಪಗಳ ಕಾಲವನ್ನು ನಾವು ಕೇವಲ ಶೈಲಿಯ ಆಧಾರದ ಮೇಲೆಯೇ ಗುರುತಿಸಬೇಕು. ಇದಕ್ಕೆ ಶಿಲಾ ಮೂರ್ತಿಗಳೇ ಆಧಾರ.

ದಕ್ಷಿಣ ಭಾರತದಲ್ಲಿ ಶಾತವಾಹನರ ನಂತರ ಬಾದಾಮಿ ಚಾಲುಕ್ಯರು ರಾಜ್ಯವಾಳಿದರು. ಇವರ ಕಾಲದ ಕಂಚಿನ ಪ್ರತಿಮೆಗಳು ಅಪರೂಪವಾಗಿ ದೊರೆತಿವೆ. ಸಂಖ್ಯೆಯಲ್ಲಿ ಇವು ಸ್ವಲ್ಪವಾದರೂ, ಸೌಂದರ್ಯದಲ್ಲಿ, ಗುಣಮಟ್ಟದಲ್ಲಿ ಬಹಳ ಉಚ್ಛಮಟ್ಟದ್ದಾಗಿವೆ.

[illegible]

[illegible]

[illegible]

[illegible]

[illegible]

ಈಗ ಬೊಂಬಾಯಿಯ 'ಪ್ರಿನ್ಸ್ ಆಫ್ ವೇಲ್ಸ್' ವಸ್ತು ಸಂಗ್ರಹಾಲಯದಲ್ಲಿರುವ ಜೋಗೇಶ್ವರೀ ಗುಹಾಲಯದಲ್ಲಿ ಕಂಡುಬಂದ ಸುಮಾರು ೧೨೨ ಸೆಂ. ಮೀ. ಉದ್ದದ ಆನೆ ಸವಾರನ ಮೂರ್ತಿ ಇದೆ. ಇದು ಉದ್ದನೆಯ ಸರಪಳಿಯನ್ನು ಹೊಂದಿದ್ದು, ಒಂದು ತುದಿಯಲ್ಲಿ ಕೊಂಡಿ , ಮತ್ತೊಂದು ತುದಿಯಲ್ಲಿ ಆನೆಯ ಸವಾರನನ್ನು ಒಳಗೊಂಡಿದೆ. ಇವುಗಳ ಮಧ್ಯೆ ಅಲ್ಲಲ್ಲಿ ತಾಳ ಮೃದಂಗಗಳನ್ನು ಭಾರಿಸುತ್ತಾ ನರ್ತಿಸುತ್ತಿರುವ ನರ್ತಕ, ನರ್ತಕಿಯರಿದ್ದು, ನೋಡಲು ನಯನ ಮನೋಹರವಾಗಿದೆ. ಈಗ ಇದು ಸಧ್ಯ ಮದರಾಸು ವಸ್ತುಸಂಗ್ರಹಾಲಯದಲ್ಲಿದೆ.

ಪ್ರಿನ್ಸ್ ಆಫ್ ವೇಲ್ಸ್ ವಸ್ತು ಸಂಗ್ರಹಾಲಯದಲ್ಲಿರುವ ಮತ್ತೊಂದು ವಿಗ್ರಹವು ಕ್ರಿ.ಶ. ಸುಮಾರು ೯ನೇ ಶತಮಾನದಾಗಿದ್ದು, ಚಾಲುಕ್ಯ ಶೈಲಿಯ ಲಕ್ಷಣಗಳನ್ನು ಹೊಂದಿದೆ. ಬಾಹುಬಲಿಯ ಈ ವಿಗ್ರಹವನ್ನು ಎಲ್ಲೋರದಲ್ಲಿರುವ ಬಾಹುಬಲಿಯ ಅನೇಕ ವಿಗ್ರಹಗಳೊಂದಿಗೆ ಲಕ್ಷಣದಲ್ಲಿ ಸಮೀಕರಿಸಬಹುದಾಗಿದೆ. ಕರ್ನಾಟಕದಲ್ಲಿ ಉತ್ಸವ ಮೂರ್ತಿ, ಪೂಜಾ ಸಂಪ್ರದಾಯ ಮೊದ ಮೊದಲು ಬಹಳ ನಿಧಾನವಾಗಿ ಬೆಳೆಯಿತು. ಅದರಲ್ಲೂ ತಮಿಳು ರಾಜ್ಯದ ಗಡಿಗೆ ಸೇರಿದ ಮತ್ತು ಹತ್ತಿರದ ಪ್ರದೇಶಗಳಲ್ಲಿ ಈ ಪದ್ಧತಿಯನ್ನು ನಾವು ಸ್ಪಷ್ಟವಾಗಿ ಗುರುತಿಸಬಹುದು. ಕರ್ನಾಟಕದ ದಕ್ಷಿಣ , ಅದರಲ್ಲೂ ಆಗ್ನೇಯ ಭಾಗಗಳಲ್ಲಿ ಈ ಪದ್ಧತಿ ಮೊದಲು ಪ್ರಾರಂಭವಾಯಿತು. ಚಾಲುಕ್ಯರ ನಂತರ ದಕ್ಷಿಣ ಕರ್ನಾಟಕದಲ್ಲಿ ಆಳಿದ ಗಂಗರು ಮತ್ತು ನೊಳಂಬರ ಕಾಲದ ಕಂಚಿನ ಪ್ರತಿಮೆಗಳು ಹೆಚ್ಚಿಗೆ ದೊರಕುವಂತಾಯಿತು ಎಂದು ಹೇಳಬಹುದು. ಬೆಂಗಳೂರಿನ ಬಳಿ ಇರುವ ನಂದಿ ಗ್ರಾಮದ ಭೋಗ ನಂದೀಶ್ವರ ದೇವಾಲಯದಲ್ಲಿದ್ದ ಸೋಮಸ್ಕಂದ ಮೂರ್ತಿ ಈಗ ಬೆಂಗಳೂರು ವಸ್ತು ಸಂಗ್ರಹಾಲಯದಲ್ಲಿದೆ. ಇದು ಕ್ರಿ.ಶ. ೯ನೇ ಶತಮಾನಕ್ಕೆ ಸೇರಿದ್ದು, ಇದು ಪ್ರಾಚೀನ ಕಾಲಕ್ಕೆ ಸೇರಿದ ಮೂರ್ತಿಯೆಂದು ನಿರ್ಣಯಿಸಲಾಗಿದೆ. ಪೀಠದ ಮೇಲೆ ಕುಳಿತಿರುವ ಶಿವ ಪಾರ್ವತಿಯರ ಭಾವ ಭಂಗಿಗಳು ಮುಖಚರ್ಯೆ, ಅಲಂಕರಣ, ದೈಹಿಕ ರೂಪರೇಷೆಗಳು ಇತ್ಯಾದಿ ಇದೇ ತರಹದ ಮತ್ತು ಇದೇ ಕಾಲದ ಪಲ್ಲವರ ಕಂಚಿನ ಪ್ರತಿಮೆಗಳನ್ನು ನೆನಪಿಗೆ ತರುತ್ತವೆ. ಪೀಠದ ಮೇಲಿರುವ ನೆಗೆಯುತ್ತಿರುವ ಸಿಂಹಗಳ ಆಕೃತಿಗಳು, ಪಲ್ಲವರ ಅರೆಗಂಭಗಳ ಸಿಂಹಗಳನ್ನು ಹೋಲುತ್ತಿವೆ.

ಬಾದಾಮಿ ಚಾಲುಕ್ಯ ಮತ್ತು ಕಂಚಿಯ ಪಲ್ಲವರ ಕಾಲ ದಕ್ಷಿಣ ಭಾರತದ ವಾಸ್ತು ಶಿಲ್ಪ ದೃಷ್ಟಿಯಿಂದ ಒಂದು ಪರ್ವಕಾಲ ಹಿಂದೆಂದೂ ಕಾಣದ ಅಮಿತ ಉತ್ಸಾಹ, ಆನಂದ, ಕಲ್ಪನೆ, ಕ್ರಿಯಾ ಶೀಲತೆ ಈ ಕಾಲದ ವಾಸ್ತು ಶಿಲ್ಪಗಳಲ್ಲಿ ಕಾಣಬರುತ್ತದೆ. ಈ ಕಾಲ ವೈಧಿಕ ಧರ್ಮದ ಪುನರುಜ್ಜೀವನ ಕಾಲವೆಂದು ಕರೆಯಬಹುದು. ಹಿಂದೂ ಪೂಜಾ ಪದ್ಧತಿಗೆ ಅನುಗುಣವಾಗಿ ವಾಸ್ತು ಶಿಲ್ಪದಲ್ಲೂ ಬದಲಾವಣೆಯಾಗಿ ಇವೆರಡರ ನಡುವೆ ಸಮನ್ವಯ ಸಾಧಿಸಲಾಗಿದೆ.

ಕರ್ನಾಟಕದಲ್ಲಿ ವೈದಿಕ ಧರ್ಮದ ಜೊತೆಗೆ ಜೈನಧರ್ಮವು ಸಹ ನಿರಂತರವಾಗಿ ಬೆಳೆಯಿತು. ತಲಕಾಡಿನ ಗಂಗರ ಆಸರೆಯಲ್ಲಿ ರಾಜ್ಯದ ಪ್ರಮುಖ ಧರ್ಮವಾಗಿ ಜೈನಧರ್ಮ ರಾರಾಜಿಸಿತು. ಶ್ರವಣಬೆಳಗೊಳವು ಜೈನಧರ್ಮದ ಪ್ರಮುಖ ಕೇಂದ್ರವಾಗಿತ್ತು. ಬಾಹುಬಲಿಯ ಬೃಹನ್ಮೂರ್ತಿ ಗಂಗ ಮಾರಸಿಂಹನ ಕಾಲದಲ್ಲಿ ನಿರ್ಮಾಣವಾಯಿತು. ಶಿಲಾ ಮೂರ್ತಿಗಳ ಜೊತೆಗೆ ಕಂಚಿನ ಶಿಲ್ಪಗಳು ಸಹ ಸಾಕಷ್ಟು ಸಂಖ್ಯೆಯಲ್ಲಿ ತಯಾರಿಸಲ್ಪಟ್ಟವು. ನಮಗೆ ದೊರೆತಿರುವ ಜೈನ ಕಂಚಿನ ಶಿಲ್ಪಗಳು ಅಪಾರವೆನಿಸಿದ್ದರೂ, ಅವುಗಳ ಗುಣಮಟ್ಟು ಮತ್ತು ತಂತ್ರ ಕೌಶಲ್ಯ ಪ್ರಶಂಸಾರ್ಹವಾದದ್ದು. ಸರಳ ಸುಂದರ ರೂಪ, ಮುಗ್ಧ ಹಾಗು ಶಾಂತ ಮುಖ ಭಾವ ಈ ಶಿಲ್ಪಗಳ ಮುಖ್ಯ ಲಕ್ಷಣಗಳು. ಶ್ರವಣಬೆಳಗೊಳದ ಮಠದಲ್ಲಿರುವ ಒಂದು ಜಿನಮೂರ್ತಿ, ಅದರ ಪೀಠದ ಮೇಲಿರುವ ಶಾಸನವು ಎರಡನೆಯ ಗಂಗ ಮಾರಸಿಂಹನ ಅಕ್ಕ ಕುಂದಣ ಸೋಮಿದೇವಿ ಮಾಡಿಸಿದ ವಿಗ್ರಹವೆಂದು ಹೇಳುತ್ತದೆ. ಇದೇ ಕಾಲಕ್ಕೆ ಸೇರಿದ ಅರ್ಧ ಪದ್ಮಾಸನದಲ್ಲಿ ಕುಳಿತಿರುವ ಮತ್ತು ಹಿಂಭಾಗದಲ್ಲಿ ವಾಸ್ತು ಅಲಂಕರಣದ ಪ್ರಭಾವಳಿಯನ್ನು ಹೊಂದಿರುವ ಜಿನ ಮೂರ್ತಿಯೊಂದು ಕಲ್ಕತ್ತಾ ವಸ್ತು ಸಂಗ್ರಹಾಲಯದಲ್ಲಿದೆ. ಪೀಠದ ಮೇಲೆ ಕನ್ನಡದ ಶಾಸನವೊಂದಿದ್ದು, ಅದರ ಪ್ರಕಾರ ಜಿನವಲ್ಲಭನ ಪತ್ನಿ ಭಗಿಯಬ್ಬೆ ಈ ಪ್ರತಿಮೆಯನ್ನು ಮಾಡಿಸಿದಳು[೧೧೦]. ಈಗ ಮದರಾಸು ವಸ್ತು ಸಂಗ್ರಹಾಲಯದಲ್ಲಿರುವ ಕಂಚಿನ ಜಿನ ಮೂರ್ತಿಯೊಂದರ ಪೀಠ ಶಾಸನದಲ್ಲಿ ಪೈಠ್ವಣೆ (ಪೈಥಾನಿನ) ಭಾಗಿಯಬ್ಬೆ ಮಾಡಿಸಿದಳೆಂದು ಹೇಳಿದೆ[೧೧೧]. ಇದೇ ರೀತಿ ಹೊಯ್ಸಳ ಮತ್ತು ವಿಜಯನಗರ ಕಾಲದಲ್ಲಿಯೂ ಸಾಕಷ್ಟು ಸಂಖ್ಯೆಯಲ್ಲಿ ಕಂಚಿನ ಜಿನ ಪ್ರತಿಮೆಗಳು ತಯಾರಾದವು. ಆದರೆ ಈ ಎಲ್ಲಾ ವಿಗ್ರಹಗಳು ಒಂದೇ ರೀತಿಯ ವಿಷಯ ನಿರೂಪಣೆ , ಅಲಂಕರಣ ಇತ್ಯಾದಿಗಳನ್ನು ಹೊಂದಿರುವುದರಿಂದ ಶಾಸನ ಅಥವಾ ಬೇರೆ ಇನ್ನಾವುದೇ ಆಧಾರಗಳಿಲ್ಲದೆ ನಿಖರವಾಗಿ ಇವುಗಳ ಕಾಲ ತೀರ್ಮಾನ ಮಾಡುವುದು ಕಷ್ಟ.

ಕರ್ನಾಟಕದಲ್ಲಿ ಭೌದ್ಧ, ಧರ್ಮ, ಜೈನಧರ್ಮದಷ್ಟು ಪ್ರಭಾವಶಾಲಿಯಾಗಿರಲಿಲ್ಲ. ಶಾತವಾಹನರಕಾಲದಲ್ಲಿ ಭೌದ್ಧ ಧರ್ಮ ಪ್ರಚಲಿತದಲ್ಲಿತ್ತೆಂಬುದಕ್ಕೆ ಸಾಕಷ್ಟು ಸಾಕ್ಷ್ಯಾಧಾರಗಳಿವೆ. ನಂತರ ಕಾಲದಲ್ಲಿ ಎಲ್ಲೋ ಕೆಲವು ಸಣ್ಣಪುಟ್ಟ ಕೇಂದ್ರಗಳಲ್ಲಿ ಮಾತ್ರ ಭೌದ್ಧ ಧರ್ಮ ಉಳಿದಿತ್ತು. ಇದರಿಂದಾಗಿ ಭೌದ್ಧ ಶಿಲ್ಪಗಳು ಅದರಲ್ಲೂ ಕಂಚಿನ ಶಿಲ್ಪಗಳು ಬಹಳ ಕಡಿಮೆ. ಮಂಗಳೂರಿನ ಸಮೀಪದ ಕದ್ರಿಯಲ್ಲಿ ಬುದ್ಧ ಎಂದು ಹೇಳಲಾದ ಕೆಲವು ಕಂಚಿನ ಶಿಲ್ಪಗಳಿವೆ . ಅವುಗಳನ್ನು ಗುರುತಿಸುವಲ್ಲಿ ವಿಧ್ವಾಂಸರಲ್ಲಿ ಭಿನ್ನಾಭಿಪ್ರಾಯವಿದ್ದರೂ ಅಲ್ಲಿಯ ಲೋಕೇಶ್ವರ ವಿಗ್ರಹದ (೧೨೦ ಸೆಂ.ಮೀ.) ಸೌಂದರ್ಯ ಇಡೀ ಭಾರತೀಯ ಕಂಚಿನ ಶಿಲ್ಪ ಪರಂಪರೆಯಲ್ಲೇ ವಿಶಿಷ್ಟವಾದುದೆಂದು ಹೇಳಬಹುದು. ಈ ವಿಗ್ರಹದ ಪೀಠದ ಮೇಲಿರುವ ಶಾಸನದಲ್ಲಿ ಶಕ ೮೯೦ರಲ್ಲಿ (ಕ್ರಿ.ಶ. ೯೬೮) ಆಳುಪ ದೊರೆ ಕಂದವರ್ಮನು ಈ ಪ್ರತಿಮೆಯನ್ನು ಮಾಡಿಸಿ, ಕದರಿಕಾ (ಕದ್ರಿ) ವಿಹಾರದಲಿ ಪ್ರತಿಷ್ಠಾಪಿಸಿದನೆಂದು ಹೇಳಿದೆ. ಇದೇ ಗುಂಪಿಗೆ ಸೇರಿದ ಅವಲೋಕಿತೇಶ್ವರ ಮತ್ತು ಬುದ್ಧ ವಿಗ್ರಹಗಳು ಇದೇ ದೇವಾಲಯದಲ್ಲಿವೆ.

ಕ್ರಿ.ಶ. ೧೦ನೇ ಶತಮಾನದ ಉತ್ತರಾರ್ಧದಲ್ಲಿ ಕರ್ನಾಟಕದ ಆಗ್ನೇಯ ಭಾಗಗಳು ಚೋಳರ ಧಾಳಿಗೆ ಒಳಗಾದವು. ಚೋಳರ ಕಂಚು ಶಿಲ್ಪ ಶೈಲಿಯ ಪ್ರಭಾವವನ್ನು ಹೊಂದಿರುವ ಅನೇಕ ಕಂಚಿನ ಮೂರ್ತಿಗಳು ಆಗ್ನೇಯ ಕರ್ನಾಟಕದ ವಿವಿಧ ಭಾಗಗಳಲ್ಲಿ ಕಂಡು ಬಂದಿವೆ. ಕೋಲಾರ ಜಿಲ್ಲೆಯ ನರಸಮಂಗಲದ ನಟರಾಜ (೧೨೨ ಸೆಂ.ಮೀ) ಮತ್ತು ಶಿವಕಾಮ ಸುಂದರಿ (೮೫ ಸೆಂ.ಮೀ) ಕಂಚಿನ ಶಿಲ್ಪಗಳು ಭವ್ಯಮೂರ್ತಿಗಳಾಗಿದ್ದು, ನಟರಾಜ ಮೂರ್ತಿಯು ಕರ್ನಾಟಕದಲ್ಲಿ ಇದುವರೆಗೆ ದೊರೆತಿರುವುವುಗಳಲ್ಲೇ ಅತ್ಯಂತ ದೊಡ್ಡದಾಗಿದೆ. ಚತುರ್ಬಾಹುಗಳಿಂದ ಕೂಡಿದ ಶಿವನು ಅಗ್ನಿ ಡಮರುಗಳನ್ನು ಹಿಡಿದು ಅಭಯ ಮತ್ತು ಲಂಭ ಹಸ್ತಗಳಲ್ಲಿ ಅಪಸ್ಮಾರ ಪುರುಷನ ಮೇಲೆ ನರ್ತಿಸುತ್ತಿದ್ದಾನೆ. ವಿಶಾಲವಾದ ಪ್ರಭಾವಳಿಯೊಂದು ವಿಗ್ರಹದ ಸುತ್ತಲೂ ಇದೆ. ಮೈಮಾಟ, ಅಲಂಕರಣ ಮತ್ತು ಗಾತ್ರದಲ್ಲಿ ಈ ವಿಗ್ರಹವು ಕ್ರಿ.ಶ. ೧೦೦೦ ದಲ್ಲಿ ರಾಜರಾಜ ಚೋಳನ ತಂಜಾ ಊರಿನ ಬೃಹದೇಶ್ವರ ದೇವಾಲಯಕ್ಕೆ ದಾನ ನೀಡಿದ ನಟರಾಜನ ಶಿಲ್ಪಕ್ಕೆ ಸಮವಾಗಿದೆ. ನರಸಮಂಗಲದ ನಟರಾಜನ ಶಿಲ್ಪವು ಪ್ರಾಯಶಃ ರಾಜರಾಜ ಚೋಳನು ನೊಳಂಬವಾಡಿಯನ್ನು ಆಕ್ರಮಿಸಿಕೊಂಡ ಕಾಲಮಾನ (ಕ್ರಿ.ಶ. ಸುಮಾರು ೧೦೦೦) ರಚಿಸಲಾದ ವಿಗ್ರಹವಿರಬಹುದು. ನರಸಮಂಗಲ ಸಮೀಪದಲ್ಲಿಯೇ ಇರುವ ಬೆಳ್ಳೂರಿನಲ್ಲಿ ಕೆಲವು ಕಂಚಿನ ಶಿಲ್ಪಗಳಿವೆ. ಅವುಗಳಲ್ಲಿ ಸೋಮಸ್ಕಂದ (೫೦ಸೆಂ.ಮೀ) ವಿಗ್ರಹವು ಬಹಳ ಮುಖ್ಯವಾದದ್ದು. ಚೋಳರ ಕಾಲದ ಮತ್ತು ಅವರ ಶಿಲ್ಪ ಶೈಲಿಯ ಪ್ರಭಾವವನ್ನು ಹೊಂದಿರುವ ಇನ್ನೂ ಅನೇಕ ಮೂರ್ತಿಗಳು ನಮಗೆ ದೊರೆತಿವೆ. ಅವುಗಳೆಂದರೆ, ತೆರಕಣಾಂಬಿಯಲ್ಲಿನ ಶಿವ, ಗಂಗೆ, ಗೌರಿ, ರಾಮ, ಸೀತೆಯರ ಕಂಚು ಶಿಲ್ಪಗಳು, ನಂಜನಗೂಡಿನ ಶಿವ, ಪಾರ್ವತಿಯರ ಉತ್ಸವ ಮೂರ್ತಿಗಳು, ಕೊಡಲೂರು ಬಳಿ ದೊರೆತ ನಟರಾಜ, ಪಾರ್ವತಿ ಇತ್ಯಾದಿ.

ಕ್ರಿ.ಶ. ಸುಮಾರು ೧೧೦೦ರ ಹೊತ್ತಿಗೆ ಪ್ರಬಲರಾದ ಹೊಯ್ಸಳರು ತಮ್ಮ ಆಳ್ವಿಕೆಯಲ್ಲಿ ವಾಸ್ತು ಮತ್ತು ಶಿಲ್ಪದ ಬಗ್ಗೆ ಬೆಳವಣಿಗೆಗೆ ಬಹಳ ಪ್ರೋತ್ಸಾಹ ಕೊಟ್ಟರು. ಆದರೆ ಹೊಯ್ಸಳರ ಕಂಚು ಶಿಲ್ಪಗಳ ಅಲಂಕರಣ ಭವ್ಯತೆಯನ್ನು ಹೊಂದಿಲ್ಲವಾದರೂ ಇತರೆ ಶೈಲಿಯ ಕಾಲದ ಶಿಲ್ಪಗಳಿಗೆ ಹೋಲಿಸಿದಲ್ಲಿ ಸ್ವಲ್ಪ ಜಾಸ್ತಿಯೇ ಎನ್ನುವಷ್ಟು ಅಲಂಕರಣವನ್ನು ಇವು ಖಂಡಿತವಾಗಿಯು ಹೊಂದಿರುತ್ತವೆ ಹೊಯ್ಸಳರ ಕಂಚುಗಳು ಶಿವಗಂಗೆ, ಕಿಕ್ಕೇರಿ, ನಾಗಮಂಗಲ, ಬೇಲೂರು ಇತ್ಯಾದಿ ಕಡೆಗಳಲ್ಲಿದೊರೆತಿವೆ ಶಿವಗಂಗೆಯಲ್ಲಿ ನರ್ತಿಸುತ್ತಿರುವ ಶಿವನ ಕಂಚಿನ ವಿಗ್ರಹವು (೭೫ ಸೆಂ.ಮೀ) ಹೊಯ್ಸಳ ಶೈಲಿಯ ಅತ್ಯಂತ ಅಮೋಘಶಿಲ್ಪವೆನ್ನಬಹುದು. ವಿಶೇಷವಾಗಿ ಅಲಂಕರಿಸಿದ ಜಟಾಮುಕುಟ ಜ್ವಾಲೆಯಂತೆ ಹರಡಿರುವ ಕೇಶರಾಶಿಯಿರುವ ಶಿಲ್ಪಕ್ಕೆ ಕೆಂಪಿನ ಹರಳಿನ ಆಭರಣಗಳಿವೆ. ಕಿಕ್ಕೇರಿಯ ಬ್ರಹ್ಮೇಶ್ವರ ದೇವಾಲಯದಲ್ಲಿನ ಶಿವನಶಿಲ್ಪ (೭೦ ಸೆಂ.ಮೀ.) ಹೊಯ್ಸಳ ಶೈಲಿಯ ಅತ್ಯಂತ ಅಮೋಘ ಶಿಲ್ಪವೆನ್ನಬಹುದು. ವಿಶೇಷವಾಗಿ ಅಲಂಕರಿಸಿದ ಜಟಾಮಕುಟ ಜ್ವಾಲೆಯಂತ ಹರಡಿರುವ ಕೇಶರಾಶಿಯಿರುವ ಈ ಶಿಲ್ಪಕ್ಕೆ ಕೆಂಪಿನ ಹರಳುಗಳನ್ನು ಹಾಕಲಾಗಿದೆ. ಕಿಕ್ಕೇರಿಯ ಬ್ರಹ್ಮೇಶ್ವರ ದೇವಾಲಯದಲ್ಲಿನ ಶಿವನ ಶಿಲ್ಪ (೭೫ಸೆಂ.ಮೀ) ಹಾಗು ತೆರಕಣಾಂಬಿಯಲ್ಲಿನ ಮೂಲನಾಥೇಶ್ವರ ದೇವಾಲಯದಲ್ಲಿ ಇರುವ ಶಿವ (೭೦ ಸೆಂ.ಮೀ) ಪಾರ್ವತಿಯರ (೫೦ ಸೆಂ.ಮೀ) ವಿಗ್ರಹಗಳು ಹೊಯ್ಸಳ ಕಾಲದ ಸುಂದರ ಶಿಲ್ಪಗಳು.

[illegible]

[illegible]

ಈ ಕಂಚು ಶಿಲ್ಪಗಳೇ ಅಲ್ಲದೆ, ಹೊಯ್ಸಳ ಕಾಲದ ಅನೇಕ ಹಿಂದೂ, ಜೈನ ಕಂಚು ಶಿಲ್ಪಗಳು ಅವರ ರಾಜ್ಯದ ಅನೇಕ ದೇವಾಲಯಗಳಲ್ಲಿ ಸಂಗ್ರಹವಾಗಿವೆ. ಈ ಎಲ್ಲ ಶಿಲ್ಪಗಳ ಅಧ್ಯಯನ ನಡೆದಾಗ ಮಾತ್ರ ಹೊಯ್ಸಳರ ಕಂಚು ಶಿಲ್ಪಗಳ ನಿಜವಾದ ಲಕ್ಷಣ, ವೈವಿಧ್ಯತೆ ಮತ್ತು ಮೌಲ್ಯಗಳು ನಮಗೆ ತಿಳಿಯುವುದು ಸಾಧ್ಯ.

ಕರ್ನಾಟದಕ ಕಂಚಿನ ಶಿಲ್ಪಗಳ ಸುವರ್ಣಯುಗವನ್ನು ವಿಜಯನಗರ ಕಾಲದಲ್ಲಿ ನಾವು ನೋಡಬಹುದು[೧೨]. ಈ ಯುಗದಲ್ಲಿ ಕರ್ನಾಟದ ಮತ್ತು ತಮಿಳು ಸಂಸ್ಕೃತಿಗಳು ಹೆಚ್ಚಿನ ಮಟ್ಟದಲ್ಲಿ ಮತ್ತು ವೇಗದಲ್ಲಿ ಸಮ್ಮಿಳಿತಗೊಂಡವು. ಪ್ರತಿಯೊಂದು ದೇವಾಲಯದಲ್ಲೂ ಉತ್ಸವ ಮೂರ್ತಿ ಪೂಜೆ ಪ್ರಾರಂಭವಾಯಿತು. ಶಿವ, ವಿಷ್ಣುವಿನ ವಿವಿಧ ಅವತಾರಗಳು, ಲೀಲೆಗಳು, ರೂಪಗಳು, ಪರಿವಾರ ದೇವತೆಗಳು, ಸಣ್ಣಪುಟ್ಟ ದೇವರುಗಳು, ಆಳ್ವಾರುಗಳು, ನಾಯನಾರುಗಳು, ವಾಹನ ಮೂರ್ತಿಗಳು, ಆಯುಧ ಪುರುಷರು ಇತ್ಯಾದಿ ಎಲ್ಲ ವಿಧಧ, ಆಕಾರದ, ಗಾತ್ರದ ಮೂರ್ತಿಗಳು ಹಿಂದೆಂದೂ ಕಾಣದಷ್ಟು ಸಂಖ್ಯೆಯಲ್ಲಿ ಬಳಕೆಗೆಬಂದವು. ವಿಜಯನಗರದ ಕಂಚುಗಳು ಕೇವಲ ಸಂಖ್ಯೆಯಲ್ಲಿ ಮಾತ್ರ ಹೆಚ್ಚಾಗಿರದೆ, ಸೌಂದರ್ಯ, ಪ್ರಮಾಣ, ಗಾತ್ರಗಳಲ್ಲೂ ಹೆಸರುವಾಸಿಯಾಗಿವೆ. ದೇವತಾ ಮೂರ್ತಿಗಳ ಜೊತೆಗೆ ವ್ಯಕ್ತಿ ಶಿಲ್ಪಗಳೂ ಈ ಅವಧಿಯಲ್ಲಿ ತಯಾರಿಸಲ್ಪಟ್ಟವು.

ವಿಜಯನಗರ ಕಂಚಿನ ಶಿಲ್ಪಗಳು ಸಾಮಾನ್ಯವಾಗಿ ಒಂದೇ ರೀತಿಯ ಮುಖಚರ್ಯೆ, ಆಭರಣಾಲಂಕಾರ, ನಿಲವು, ಸೊಬಗುಗಳನ್ನು ಹೊಂದಿದ್ದು, ಬೇರೆ ಕಾಲದ ಶೈಲಿಯ ಕಂಚುಗಳಿಗಿಂತ ವಿಭಿನ್ನವಾಗಿರುವುದರಿಂದ ಇವುಗಳನ್ನು ಸುಲಭವಾಗಿ ಗುರುತಿಸಬಹುದು. ಉದ್ದವಾದ ಕಿರೀಟ, ದುಂಡುಮುಖ, ಅಗಲ ಹಾಗು ದುಂಡಾದ ನೇತ್ರಗಳು, ಅಗಲವಾದ ಕೆನ್ನೆ, ಸ್ವಲ್ಪ ಪ್ರಮುಖವಾದ ಗಲ್ಲ, ಚಿಕ್ಕದಾದ ಬಾಯಿ, ಚೂಪಾದ ಮೂಗು ಮತ್ತು ಪ್ರಧಾನವಾದ ಮೂಗಿನ ಹೊಳ್ಳು ಮುಂತಾದ ಕೆಲವು ವೈಶಿಷ್ಟ್ಯಗಳು. ಪುರುಷ ವಿಗ್ರಹಗಳು ದೃಢಕಾಯವನ್ನು ಹೊಂದಿದ್ದರೆ, ಸ್ತ್ರೀಶಿಲ್ಪಗಳು ಮೇಲೆತ್ತಿದ ದುಂಡಾದ ಸ್ತನ, ಪ್ರಧಾನವಾದ ನಿತಂಬ ಮುಂತಾದವುಗಳನ್ನು ಹೊಂದಿರುತ್ತವೆ. ಸ್ತ್ರೀ, ಪುರುಷ ವಿಗ್ರಹಗಳಲ್ಲಿ ಆಭರಣಗಳು ಸಾಕಷ್ಟಿದ್ದು, ವಸ್ತ್ರಾಲಂಕರಣ ಕೇವಲ ದೇಹದ ಕೆಳಭಾಗದಲ್ಲಷ್ಟೇ ಇರುತ್ತದೆ. ಮಡಚಿದ ನೆರಿಗೆ ಕೆಲವು ಬಾರಿ ಪಾರದರ್ಶಕವಾಗಿಯೂ ಇರುತ್ತದೆ. ಪಾರ್ಶ್ವಗಳಲ್ಲೂ ದಪ್ಪನಾದ ವಸ್ತ್ರದ ಗಂಟುಗಳು, ನೆರಿನೆರಿಯಾಗಿ ಇಳಿಬಿದ್ದ ವಸ್ತ್ರಗಳು ಕಂಡುಬರುವುದು ಸಾಮಾನ್ಯ. ವಿಗ್ರಹಗಳು ಆಯುಧಗಳನ್ನು ಬಹಳ ಬೆಡಗಿನಿಂದ ಹಿಡಿದಿರುತ್ತವೆ. ಆದರೂ ಈ ಶಿಲ್ಪಗಳಲ್ಲಿ ಹೊಯ್ಸಳ ಶಿಲ್ಪಗಳ ಸ್ವಾಭಾವಿಕತೆ, ಓಜಸ್ಸು, ಸೊಬಗು ಕಾಣಬರುವುದು ಕಡಿಮೆ.

ವಿಜಯನಗರ ಕಾಲದ ಕಂಚು ಶಿಲ್ಪಗಳಲ್ಲಿ ವ್ಯಕ್ತಿ ಶಿಲ್ಪಗಳು ಮುಖ್ಯವಾದುವು. ಅವುಗಳಲ್ಲಿ ತಿರುಮಲ ಬೆಟ್ಟದ ಮೇಲಿರುವ ಕೃಷ್ಣದೇವರಾಯ ಮತ್ತು ಆತನ ಇಬ್ಬರು ರಾಣಿಯರ ನೈಜಾಕಾರದ ಶಿಲ್ಪಗಳು ಗಮನಾರ್ಹವಾದವು.

[illegible]

ವೆಂಕಟೇಶ್ವರನ ಮುಂದೆ ನಮಸ್ಕರಿಸುತ್ತಾ ನಿಂತಿರುವ ಈ ವಿಗ್ರಹಗಳು ಅವರ ಹೆಸರಿನ ಶಾಸನಗಳನ್ನು ಹೊಂದಿದ್ದು, ಸರಳ ಸೌಂದರ್ಯ ಮತ್ತು ಸೊಬಗಿನಿಂದ ಕೂಡಿವೆ.

ವಿಜಯನಗರ ಶೈಲಿಯು ನಾಯಕರು, ಪಾಳೆಯಗಾರರು ಮತ್ತು ಮೈಸೂರಿನ ಒಡೆಯರುಗಳ ಆಳ್ವಿಕೆಯಲ್ಲೂ ಮುಂದುವರಿಯಿತು. ಆದರೆ ಈ ಕಾಲದ ಕಂಚಿನ ಮೂರ್ತಿಗಳ ಸ್ವರೂಪದಲ್ಲಿ ಒಂದು ರೀತಿಯ ಜೀವರಹಿತ, ಭಾವನಾ ರಹಿತ ಸ್ಥಿರ ಭಾವನೆಗಳು ಕಾಣಬರುತ್ತವೆ. ಗುಣಮಟ್ಟ ಕಡಿಮೆಯಾಗಿ ಸಂಖ್ಯಾಬಲ ಜಾಸ್ತಿಯಾಯಿತು. ಹಿಂದಿನಂತೆಯೇ ವಿಷ್ಣುವಿನ ಅವತಾರಗಳು, ರೂಪಗಳು, ಶಿವನ ಲೀಲೆಗಳು, ಇತರೇ ದೇವರುಗಳು, ಭಕ್ತರ ವಿಗ್ರಹಗಳು ಇತ್ಯಾದಿ ನೂರಾರು ಮೂರ್ತಿಗಳು ತಯಾರಾದವು. ಆದರೆ ಇವು ರೂಪದಲ್ಲಿ ಮತ್ತು ಭಾವನೆಯಲ್ಲಿ ಒಂದೇ ಸ್ವರೂಪದ್ದಾಗಿವೆ. ಈ ವಿಗ್ರಹಗಳ ಅಂಗ ಸೌಷ್ಠವ ಅಸ್ವಾಭಾವಿಕವೆಂದೇ ಹೇಳಬಹುದು. ಮೈಸೂರು, ನಂಜನಗೂಡು, ಶ್ರೀರಂಗಪಟ್ಟಣ, ನರಸೀಪುರ, ಬೆಟ್ಟದಪುರ, ಬೆಂಗಳೂರು, ನಾಗಮಂಗಲ, ಗುಂಡ್ಲುಪೇಟೆ, ಹಂಗಳ, ತೆರಕಣಾಂಬಿ ಇತ್ಯಾಧಿ ಕಡೆಗಳಲ್ಲಿ ಮೈಸೂರು ಒಡೆಯರ ಕಾಲದ ಅನೇಕ ಕಂಚಿನ ಮೂರ್ತಿಗಳನ್ನು ಕಾಣಬಹುದು. ಕೆಳದಿಯ ಅರಸರ ಕಾಲದ ಕೆಲವು ಕಂಚಿನ ವಿಗ್ರಹಗಳು ಈಗ ಶಿವಮೊಗ್ಗ ವಸ್ತು ಸಂಗ್ರಹಾಲಯದಲ್ಲಿವೆ.

ಕರ್ನಾಟಕದ ದಕ್ಷಿಣಭಾಗ ಅಂದರೆ; ಹಳೆಯ ಮೈಸೂರು ಪ್ರಾಂತ್ಯದಲ್ಲಿ ವಿಜಯನಗರ ನಂತರ ಕಾಲದ ಕಂಚು ಶಿಲ್ಪಗಳು ಹೇರಳವಾಗಿ ದೊರೆಯುತ್ತವೆ. ಆದರೆ ಉತ್ತರ ಕರ್ನಾಟದಲ್ಲಿ ಈ ಕಾಲದ ಕಂಚುಗಳು ಬಹಳ ಕಡಿಮೆ. ದಕ್ಷಿಣ ಕರ್ನಾಟಕ ಮೊದಲಿನಿಂದಲೂ ತಮಿಳು ಸಂಸ್ಕೃತಿಯೊಂದಿಗೆ ಸಂಪರ್ಕವನ್ನು ಹೊಂದಿದ್ದುದರಿಂದ ಈ ಭಾಗದಲ್ಲಿ ಕಂಚಿನ ಶಿಲ್ಪಗಳ ಸಂಖ್ಯೆಯೂ ಹೆಚ್ಚಾಗಿ ಕಾಣಬರುವುದಕ್ಕೆ ಕಾರಣವಾಯಿತು. ಕರ್ನಾಟಕದ ಉಳಿದ ಭಾಗಗಳಲ್ಲಿ ಉತ್ಸವ ಮೂರ್ತಿ ಸಂಪ್ರದಾಯ ಪ್ರಚಲಿತದಲ್ಲಿದ್ದರೂ ತೀವ್ರವಾಗಿರಲಿಲ್ಲವಾದ ಕಾರಣ, ಉತ್ತರ ಕರ್ನಾಟಕದಲ್ಲಿ ಈ ಕಾಲದ ಕಂಚು ಶಿಲ್ಪಗಳು ವಿರಳವಾಗಿ ಕಾಣಬರುತ್ತವೆ.

ಈ ಮೇಲಿನ ಎಲ್ಲಾ ವಿವರಣೆಯು ಭಾರತ ಮತ್ತು ಕರ್ನಾಟಕದ ಮೂರ್ತಿಗಳ ಹಿನ್ನಲೆ, ಬೆಳವಣಿಗೆಯನ್ನು ಸೂಚಿಸುತ್ತದೆ. ಅದು ದಾವಣಗೆರೆ ಜಿಲ್ಲೆಯ ವ್ಯಾಪ್ತಿಯಲ್ಲಿನ ಕಂಚಿನ ಮೂರ್ತಿ ಶಿಲ್ಪಗಳನ್ನು ಅಧ್ಯಯನ ಮಾಡಲು ಸಹಕಾರಿಯಾಗಬಲ್ಲದು. ದಾವಣಗೆರೆ ಜಿಲ್ಲೆಯಲ್ಲಿ ಕಂಚಿನ ಮೂರ್ತಿಗಳ ತಯಾರಿಕೆ ಮತ್ತು ಆರಾಧನೆ ಕಡಿಮೆ ಎಂದೇ ಹೇಳಬಹುದು . ಏಕೆಂದರೆ ಚನ್ನಗಿರಿ ಮತು ಹರಪನಹಳ್ಳಿ ,ಜಗಲೂರು ತಾಲೂಕಿನ ಕೆಲವು ಭಾಗಗಳಲ್ಲಿ ಮಾತ್ರ ಮೂರ್ತಿಗಳು ದೊರೆತಿವೆ . ಅವುಗಳ ವಿವರಣೆ ಕೆಳಗಿನಂತಿದೆ :

[illegible]

[illegible]

[illegible]

[illegible]

[illegible]

೧. ಊರು : ಗಂಗ ಗೊಂಡನಹಳ್ಳಿ

೨. ತಾಲೂಕು : ಚನ್ನಗಿರಿ

೩. ಹೆಸರು : ರಂಗನಾಥ, ಕೇಶವ (?)

೪. ಸ್ಥಳ : ರಂಗನಾಥ ಸ್ವಾಮಿ ಗರ್ಭಗುಡಿಯಲ್ಲಿ

೫. ಕಾಲ : ಕ್ರಿ.ಶ. ೧೫ನೇ ಶತಮಾನ

೬. ಬಳಸಿದ ಶಿಲೆ : ಕಂಚು

ಕಂಚಿನ ಲೋಹದಿಂದ ತಯಾರಿಸಲ್ಪಟ್ಟ ಈ ಮೂರ್ತಿ ಕಿರೀಟಮಕುಟಧಾರಿಯಾಗಿದ್ದು ಸಮಭಂಗಿಯಲ್ಲಿ ನಿಂತಿದೆ. ಕಿವಿಯಲ್ಲಿ ಮಕರಕುಂಡಲ ,ಕೊರಳಲ್ಲಿ ಮತ್ತು ಎದೆಯಲ್ಲಿ ಹಾರಗಳಿವೆ .ಚರ್ತುಭುಜಧಾರಿಯಾದ ಈ ಮೂರ್ತಿಯ ಕೈಗಳಲ್ಲಿ ಕಡಗ, ಕೇಯೂರ, ಭುಜಕೀರ್ತಿಗಳಿವೆ. ಮೇಲಿನ ಕೈಗಳಲ್ಲಿ ಶಂಕ ಮತ್ತು ಚಕ್ರಗಳಿದ್ದು, ಕೆಳಗಿನ ಬಲಗೈ ವರದ ಮುದ್ರೆಯಲ್ಲಿದ್ದು, ಎಡೆಗೈಯಲ್ಲಿ ಗದೆ ಇದೆ. ಮೇಲ್ಗಡೆಯಿಂದ ಇಳಿಬಿದ್ದ ವೈಜಯಂತಿ ಮಾಲೆ ಹಾಗು ಪಂಚೆ ಇದೆ. ಈ ಮೂರ್ತಿಯ ಎಡಬಲದಲ್ಲಿ ಸಿರಿ ಮತ್ತು ಭೂದೇವಿಯರಿದ್ದು, ಈ ಎರಡು ಮೂರ್ತಿಗಳನ್ನು ಸಹ ಕಂಚಿನಿಂದ ತಯಾರಿಸಲಾಗಿದೆ. ಇವರೆಡು ಮೂರ್ತಿಗಳು ಕರಂಡ ಮಕುಟಧಾರಿಯಾಗಿದ್ದು, ಕಿವಿಯಲ್ಲಿ ಕುಂಡಲ, ಕೊರಳು ಮತ್ತು ಎದೆಯಲ್ಲಿ ವಿವಿಧ ಬಗೆಯ ಹಾರಗಳು, ಕುಚಬಂಧ, ಭುಜಕೀರ್ತಿ, ಕೇಯೂರ, ನಡುಬಂಧ , ಸೀರೆ ಇವೆ. ದ್ವಿಭುಜಧಾರಿಯಾದ ಈ ಮೂರ್ತಿಗಳು (ಬಲಗಡೆಯ ಮೂರ್ತಿ) ಬಲಗೈ ಇಳಿಬಿಟ್ಟು, ಎಡಗೈಯಲ್ಲಿ ಪದ್ಮ ಹಿಡಿದಿದ್ದು, ಎಡಗಡೆಯ ಮೂರ್ತಿಯು ಬಲಗೈಯಲ್ಲಿ ಪದ್ಮ ಹಿಡಿದಿದೆ. ಎಡಗೈ ಕಟ್ಯಾವಲಂಬಿತವಾಗಿದೆ.

ಅಲಂಕಾರಿಕ ದೃಷ್ಟಿಯಿಂದ ಮಹತ್ವದ ಸ್ಥಾನ ಪಡೆದ ಈ ಮೂರ್ತಿಗಳನ್ನು ಲಕ್ಷಣದ ಆಧಾರದ ಮೇಲೆ ವಿಜಯನಗರ ಕಾಲಕ್ಕೆ ಸೇರಿದವುಗಳೆಂದು ಹೇಳಬಹುದು.ಚನ್ನಗಿರಿ ತಾಲೂಕಿನ ದೇವರಹಳ್ಳಿ, ಜಗಲೂರು ತಾಲೂಕಿನ ಚದುರಗೊಳ, ಹೊನ್ನಾಳಿ ತಾಲೂಕಿನ ಗೋಪಗೊಂಡನಹಳ್ಳಿ, ದಾವಣಗೆರೆ ತಾಲೂಕಿನ ಶಂಕನಹಳ್ಳಿ[೧೧೩], ಹರಪನಹಳ್ಳಿ ತಾಲೂಕಿನ ಬೆಣ್ಣೆಹಳ್ಳಿಗಳಲ್ಲಿ ಕೆಲವು ಕಂಚಿನ ವಿಷ್ಣುಮೂರ್ತಿಗಳು ಕಂಡುಬಂದಿವೆ. ಅವುಗಳ ಈ ಮೇಲೆ ಹೇಳಿದ ಎಲ್ಲಾ ಲಕ್ಷಣಗಳನ್ನು ಹೊಂದಿವೆ. ಹಾಗೆಯೇ ಇದರಲ್ಲಿ ಕೆಲವು ಇತ್ತೀಚೆಗೆ ತಯಾರಿಸಲ್ಪಟ್ಟವುಗಳೆಂದು ಅವುಗಳ ಲಕ್ಷಣಗಳ ಆಧಾರದ ಮೇಲೆ ಹೇಳಬಹುದಾಗಿದೆ.

೫.೩. ಕಾಷ್ಠ ಮೂರ್ತಿಗಳು :-

ಮರದಲ್ಲಿ ಮೂರ್ತಿಗಳನ್ನು ಕೆತ್ತುವುದು ಇತರೆ ಮೂರ್ತಿ ಶಿಲ್ಪಗಳ ಪರಂಪರೆಯಂತೆ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಮರದಿಂದ ತಯಾರಿಸಲಾದ ಮೂರ್ತಿಗಳನ್ನು ಕಾಷ್ಠಶಿಲ್ಪವೆಂದು ಹೇಳಲಾಗುತ್ತದೆ. ದಾವಣಗೆರೆ ಜಿಲ್ಲೆಯಲ್ಲಿ ಕಾಷ್ಠ ಶಿಲ್ಪವನ್ನು ನಾವು ಗುರುತಿಸಬೇಕಾದರೆ ದೇವಾಲಯಗಳ ಬಳಿ ಇರುವ ರಥಗಳನ್ನು ಗಮನಿಸಬೇಕಾಗುತ್ತದೆ. ಹಾಗೆಯೇ ಈ ಜಿಲ್ಲೆಯೊಳಗಡೆ ಕೆಲವು ಲೌಕಿಕ ಶಿಲ್ಪಗಳನ್ನು ಮರದಿಂದ ತಯಾರಿಸಲಾಗಿದೆ. ಅವುಗಳನ್ನು ಅಧ್ಯಯನದ ದೃಷ್ಟಿಯಿಂದ ಗಮನಿಸಿ, ಅಧ್ಯಯನ ಮಾಡುವುದು ಸೂಕ್ತವೆನಿಸುತ್ತದೆ.

ಚನ್ನಗಿರಿ ತಾಲೂಕಿನ ದಾಗಿನಕಟ್ಟೆ, ಶಾಂತಿಸಾಗರ (ಸೂಳೆಕೆರೆ), ದೇವರಹಳ್ಳಿ[೧೧೪], ಹೊನ್ನಾಳಿ ತಾಲೂಕಿನ ಗೋವಿನಕೋವಿ, ಗೋಪಗೊಂಡನಹಳ್ಳಿ[೧೧೫], ಹರಿಹರ ತಾಲೂಕಿನ ಸಾರಥಿ, ವಾಸನ[೧೧೬], ಜಗಲೂರು ತಾಲೂಕಿನ ಮಡ್ರಹಳ್ಳಿ, ಮರೇನಹಳ್ಳಿ, ಕೊಣಚಗಲ್, ಕಲ್ಲೇದೇವರಪುರ[೧೧೭], ದಾವಣಗೆರೆ ತಾಲೂಕಿನ ಆನೆಕೊಂಡ, ಬೇತೂರು, ವೊಡ್ಡಿನಹಳ್ಳಿ[೧೧೮], ಹರಪನಹಳ್ಳಿ ತಾಲೂಕಿನ ಚಿಗಟೇರಿ, ಬೆಣ್ಣೆಹಳ್ಳಿ, ಹಲವಾಗಲು[೧೧೯] ಮೊದಲಾದೆಡೆ ರಥದಲ್ಲಿ ಕೆತ್ತಿದ ಮೂರ್ತಿಗಳು ಕಾಣಬರುತ್ತವೆ.

ಇಲ್ಲಿನ ರಥಗಳನ್ನು ಶಾರ್ದೂಲ, ಇಲ್ಲವೇ ಯಾಳಿಗಳು ಇಲ್ಲವೇ ಅಲಂಕೃತ ಪುರುಷರು ಹೊತ್ತಿರುವಂತೆ ಕೆತ್ತಲಾಗಿರುತ್ತದೆ. ರಥದ ಮೇಲಿನ ಪಟ್ಟಿಯಲ್ಲಿ ಹಂಸವನ್ನೊಳಗೊಂಡಂತೆ ಇತರೆ ಪಕ್ಷಿಗಳನ್ನು ಸಾಲುಗಳಲ್ಲಿ ಕೆತ್ತಲಾಗಿರುತ್ತದೆ. ರಥದ ಮುಂಭಾಗದಲ್ಲಿ ಗಣೇಶ, ಲಕ್ಷ್ಮಿ, ಸರಸ್ವತಿ[೧೨೦]ಯನ್ನು ಇನ್ನು ಕೆಲವು ರಥಗಳಲ್ಲಿ ಬ್ರಹ್ಮ, ವಿಷ್ಣು, ಈಶ್ವರ[೧೨೧]ರನ್ನು ಬಿಡಿಸಲಾಗಿರುತ್ತದೆ. ರಥದ ಉಳಿದ ಭಾಗದಲ್ಲಿ ಅಷ್ಟದಿಕ್ಪಾಲಕರನ್ನು ಇಲ್ಲವೇ ನವಗ್ರಹಗಳನ್ನು ಅವುಗಳ ಜೊತೆಗೆ ವೀರಭದ್ರ, ಷಣ್ಮುಖ ಮೊದಲಾದ ದೇವತಾ ಮೂರ್ತಿಗಳನ್ನು ಕೆತ್ತಿರುತ್ತಾರೆ[೧೨೨]. ಹಾಗೇ ಅಲ್ಲಲ್ಲಿ ಮಿಥುನ ಶಿಲ್ಪಗಳನ್ನು ವಿವಿಧ ಭಂಗಿಯಲ್ಲಿ ಕೆತ್ತಿರುವುದನ್ನು ಕಾಣಬಹುದಾಗಿದೆ. ಇವಿಷ್ಟೇ ಅಲ್ಲದೇ ಆನೆ, ಕುದುರೆಗಳನ್ನು ಸಹ ಕೆತ್ತಿರುತ್ತಾರೆ.

ಚನ್ನಗಿರಿ ತಾಲೂಕಿನ ದೇವರಹಳ್ಳಿ, ಗಂಗೊಂಡನಹಳ್ಳಿ, ಸೂಳೆಕೆರೆ ಮೊದಲಾದೆಡೆ ಹಾಗು ಹರಪನಹಳ್ಳಿ, ಜಗಲೂರು ತಾಲೂಕಿನ ಕೆಲವು ಭಾಗಗಳಲ್ಲಿ ಕಾಷ್ಠ ಪ್ರತ್ಯೇಕ ಶಿಲ್ಪಗಳು ದೊರಕಿವೆ. ದೇವರಹಳ್ಳಿಯ ರಂಗನಾಥ ದೇವಾಲಯದ ಬಳಿ ಇರುವ ಒಂದು ಸ್ತ್ರೀ ಶಿಲ್ಪವು ಮರದಿಂದ ತಯಾರಿಸಲ್ಪಟ್ಟಿದೆ. ಇದು ಪದ್ಮಾಸನದಲ್ಲಿ ಕುಳಿತಿದ್ದು, ಕಿವಿಯಲ್ಲಿ ಚಕ್ರಕುಂಡಲಗಳಿವೆ. ದ್ವಿಭುಜಧಾರಿಯಾಗಿರುವ ಈ ಮೂರ್ತಿಯ ಎರಡು ಕೈಗಳು ನಾಶವಾಗಿವೆ. ಕೊರಳಲ್ಲಿ ಅನೇಕ ಬಗೆಯ ಹಾರಗಳಿದ್ದು, ಕುಚಬಂಧವಿದೆ. ವೈಜಯಂತಿಮಾಲೆ ಕಾಲಿನವರೆಗೂ ಇಳಿಬಿದ್ದಿದೆ.

ಹಾಗೇ ದೇವಾಲಯದ ಬಳಿ ಒಂದು ಪುರುಷ ಮೂರ್ತಿ ಇದೆ. ಇದು ಜಟಾಮುಕುಟಧಾರಿಯಾಗಿದ್ದು, ದ್ವಿಭುಜಧಾರಿಯಾಗಿದೆ. ಕಿವಿಯಲ್ಲಿ ಕುಂಡಲಗಳಿವೆ. ಕೈಯಲ್ಲಿ ಕಡಗ, ಎಡಗೈಯಲ್ಲಿ ಫಲ, ಬಲ ಮುಂಗೈ ತ್ರುಟಿತವಾಗಿರುವುದರಿಂದ ಅದರ ಮುದ್ರೆಯಾಗಲಿ ಅಥವ ಆಯುಧವಾಗಲಿ ಸ್ಪಷ್ಟವಾಗುವುದಿಲ್ಲ. ಈ ಮೂರ್ತಿ ಅಲಂಕಾರಯುಕ್ತ ಪಂಚೆಧರಿಸಿದ್ದು, ಪೀಠದ ಮೇಲೆ ನಿಂತಿದೆ. ಎಡಬಲದಲ್ಲಿ ಅಂಜಲಿಬದ್ಧರಾಗಿ ನಿಂತಿರುವ ಸ್ತ್ರೀಯರಿದ್ದಾರೆ. ಸುತ್ತಲೂ ಅಲಂಕಾರಯುಕ್ತ ಮಕರ ತೋರಣವಿದೆ.

ಉಳಿದ ಕೆಲವು ಭಾಗಗಳಲ್ಲಿ ಸ್ತ್ರೀ ಮತ್ತು ಪುರುಷರನ್ನು ಪ್ರತ್ಯೇಕವಾಗಿ ಮರದಲ್ಲಿ ಕೆತ್ತಿ ನಿಲ್ಲಿಸಲಾಗಿದೆ[೧೩]. ಇವುಗಳನ್ನು ಲೌಕಿಕ ಶಿಲ್ಪಗಳಿಗೆ ಉದಾಹರಿಸಬಹುದು. ಈ ಎಲ್ಲಾ ಮೂರ್ತಿ ಮತ್ತು ಶಿಲ್ಪಗಳನ್ನು ಮಧ್ಯಯುಗೀನ ಅಂತ್ಯಕಾಲಕ್ಕೆ ಸೇರಿಸಬಹುದಾಗಿದೆ.

:: ಅಡಿ ಟಿಪ್ಪಣಿಗಳು ::

೦೧) ಮೂರ್ತಿಶಾಸ್ತ್ರ ಗ್ರಂಥಗಳಲ್ಲಿ ಸಾಧಾರಣವಾಗಿ ಸಿಗುವ ಶಬ್ದ ' ಪ್ರತಿಮಾ ', ಹೋಲುವಂಥದ್ದು, ಅನುಸರಿಸಿದ್ದು, ಪಡಿಯಚ್ಚು ಎಂಬ ಅರ್ಥ ಬರುತ್ತದೆ. ಪ್ರತಿಕೃತಿ, ಪ್ರತಿ + ಕೃತಿ, ಒಂದಕ್ಕೆ ಪ್ರತಿಯಾಗಿ ಮತ್ತೊಂದನ್ನು ಮಾಡಿದ್ದು ಎಂಬ ಅರ್ಥವನ್ನು ಕೊಡುತ್ತದೆ. ವಿಗ್ರಹ, ವಿ + ಗ್ರಹ , ಪ್ರತ್ಯೇಕಿಸಿದ ಆಕಾರ ಎಂಬರ್ಥವನ್ನು ಕೊಡುತ್ತದೆ.

೦೨) ರಾಜರಾಂ ಹೆಗಡೆ, 'ಭಾರತೀಯ ಮೂರ್ತಿಶಾಸ್ತ್ರ, ಧರ್ಮ, ದೇವತಾರಾಧನೆ ಹಾಗು ಸಾಂಸ್ಕೃತಿಕ ರಾಜಕೀಯದ ಐತಿಹಾಸಿಕ ವಿಶ್ಲೇಷಣೆ,' **ಅರಿವು ಬರಹ,** ೧೯೯೨, ಸಂ. ೩, ಭಾಗ- ೧, ಪುಟ: ೩೫-೩೬.

೦೩) - ಅದೇ -

೦೪) ಚಿರಾಂಡ್‌ದ ಉತ್ಖನನದ ನೂತನ ಶಿಲಾಯುಗ ಸ್ತರಗಳಲ್ಲಿ ಕ್ರಿ.ಪೂ. ೧೮೦೦-೧೪೦೦ರ ಅವಧಿಯ ಹಾವು ಹಾಗು ಪಕ್ಷಿಗಳ ಮೃಣ್ಮೂರ್ತಿಗಳು ದೊರೆತಿವೆ.

೦೫) ಆಲ್ಚಿನ್ ಎಫ್.ಆರ್. **ದ ರೈಸ್ ಆಂಡ್ ಬರ್ತ್ ಆಫ್ ಇಂಡಿಯನ್ ಸಿವಿಲೆಜೇಷನ್,** ೧೯೯೮, ಪು.೧೭೭

೦೬) ಈ ನೆಲೆಗಳ ತಾಮ್ರ ಶಿಲಾಯುಗದ ಸ್ತರಗಳಲ್ಲಿ ಕ್ರಿ.ಪೂ. ೧೭೦೦-೧೪೦೦ರ ಅವಧಿಯ ಮಾತೃ ದೇವತೆಯ ಹಾಗು ಪ್ರಾಣಿಗಳ ಮೂರ್ತಿಗಳು ದೊರೆತಿವೆ.

೦೭) ಈ ನೆಲೆಗಳ ತಾಮ್ರ ಶಿಲಾಯುಗದ ಸ್ತರಗಳಲ್ಲಿ ಕ್ರಿ.ಪೂ. ೧೪೦೦-೯೦೦ರ ಅವಧಿಯ ಮಾತೃ ದೇವತೆಯ ಹಾಗು ಪ್ರಾಣಿಗಳ ಮೂರ್ತಿಗಳು ದೊರೆತಿವೆ.

೦೮) ರಾಮಚಂದ್ರರಾವ್ ಎಸ್. ಕೆ., **ಪ್ರತಿಮಾ ಕೋಶ** ವ್ಯಾಲ್ಯುಂ VI, ೧೯೯೨, ಪು. ೨೧೩

೦೯) ತಿಪ್ಪೇಸ್ವಾಮಿ. ಹೆಚ್. 'ಕೂಡ್ಲಿಗಿ ತಾಲೂಕಿನ ಅಪರೂಪದ ಮಾನವಾಕೃತಿಗಳು', ನಾಗರಾಜ ಎಂ. ಜಿ. ಮತ್ತು ಕೃಷ್ಣಮೂರ್ತಿ (ಸಂ) **ಇತಿಹಾಸ ದರ್ಶನ,** ಸಂ. ೧೪, ೧೯೯೮, ಪು. ೧೯.

೧೦) ಸುಂದರ ಅ., ' ಪ್ರಾಗೀತಿಹಾಸ ಕಾಲದ ನಿರ್ಮಿತಿ ಮತ್ತು ಚಿತ್ರಕಲೆ ', ಪ್ರೊ.ಷೇಕ್ ಅಲಿ, ಸುಂದರ,ಅ (ಸಂ.) **ಕರ್ನಾಟಕ ಚರಿತ್ರೆ, ಸಂಪುಟ-೧** ,೧೯೯೮ ಪು. ೨೪೧-೨೪೨.

೧೧) ಅದೇ

೧೨) ಇವುಗಳಲ್ಲಿ ಕೋತಿ, ಮೊಸಳೆ, ಅಳಿಲು, ಗೂಳಿ, ಎಮ್ಮೆ, ಖಡ್ಗಮೃಗ, ನಾಯಿ ಪ್ರಮುಖವಾಗಿವೆ.

೧೩) ಉಮೇಶ್, ಎಸ್. ಹಿರೇಮಠ **ಮೂರ್ತಿ ಶಿಲ್ಪಕಲೆ**, ೧೬೬೬, ಪು. ೫೩ (ಅಪ್ರಕಟಿತ ಪ್ರಬಂಧ)

೧೪) ರಾಜರಾಂ ಹೆಗಡೆ, ಪೂರ್ವೋಕ್ತ, ೧೯೯೨, ಪು. ೭೨

೧೫) ಅದೇ, ಪು. ೨೮.

೧೬) ' ಶಿಶ್ನದೇವಾ ' ಲಿಂಗಪೋಜಕರು, ' ಮೂಢದೇವಾ ', ಮೂಢ ವಸ್ತುಗಳನ್ನು ಪೂಜಿಸುವವರು ಎಂಬ ಉಲ್ಲೇಖ ಆ ಸಾಹಿತ್ಯದಲ್ಲಿದೆ.

೧೭) ರಾಜರಾಂ ಹೆಗಡೆ, ಪೂರ್ವೋಕ್ತ , ೧೯೯೨

೧೮) ಅದೇ

೧೯) ' ಗಾಂಧಾರ ಶಿಲ್ಪ ' ಹಿಂದಿನ ಗಾಂಧಾರ ಪ್ರದೇಶದಲ್ಲಿ ಕ್ರಿಸ್ತಶಕ ಒಂದನೆಯ ಶತಮಾನದಿಂದ ನಾಲ್ಕನೆಯ ಶತಮಾನದವರೆಗೆ ಪ್ರಚಲಿತದಲ್ಲಿದ್ದ ಶಿಲ್ಪ ಶೈಲಿ, ತಕ್ಷಶಿಲೆ, ಸ್ವಾಟ್‌ಕಣಿವೆ, ಕಾಬೂಲ್, ಕಂದಹಾರ ಪ್ರದೇಶಗಳಲ್ಲಿ ಹೆಲೆನಿಕ್ ಗ್ರೀಕ್ ಶೈಲಿಯನ್ನು ಹೋಲುವ ಅನೇಕ ಭೌದ್ಧ ಶಿಲ್ಪಗಳು ಸಿಕ್ಕಿವೆ. ಇವೆಲ್ಲ ಭೌದ್ಧ ಸ್ತೂಪಗಳಿಗೆ ಸಂಬಂಧಿಸಿದ್ದು, ಶಿಲ್ಪದ ವಸ್ತು ಬುದ್ಧ ಚರಿತ್ರೆಯೇ ಆಗಿದೆ. ಜೊತೆಗೆ ಅಸಂಖ್ಯ ಬುದ್ಧಮೂರ್ತಿಗಳು ಗುಂಗುರುಕೂದಲು, ನೀಳಮುಖ, ಚೂಪುಮೂಗು, ಗ್ರೀಕ್ ಶೈಲಿಯ ಹಸನ್ಮುಖ ಹಾಗು ರೋಮನ್ ಶೈಲಿಯ ದೇವತೆಗಳ ರೀತಿಯಲ್ಲಿ ಕೆತ್ತಲ್ಪಟ್ಟಿವೆ.

೨೦) ಗಾಂಧಾರ ಶೈಲಿ ಭಾರತೀಯ ಸಂಸ್ಕೃತಿಯದೇ ವಿಕಾಸವಾಗಿದ್ದು, ಅದು ಮಥುರಾದ ಸುತ್ತಮುತ್ತಲೇ ರೂಪುಗೊಂಡಿತು. ಮತ್ತು ಗಾಂಧಾರದಲ್ಲಿ ಗ್ರೀಕ್ ಶೈಲಿಯನ್ನು ಅನುಸರಿಸಿದ ಶಿಲ್ಪಗಳ ಕೈಯಲ್ಲಿ ಅದು ಗ್ರೀಕೋ-ರೋಮನ್ ರೂಪವನ್ನು ತಳೆದರೂ ಪರಿಕಲ್ಪನೆ ಆ ಶೈಲಿಗೆ ಹೊರಗಿನದೇ ಆಗಿತ್ತು ಎಂದಿದ್ದಾರೆ.

೨೧) ಆನಂದ ಕುಮಾರಸ್ವಾಮಿ ' **ದ ಆರ್ಟ್ ಹಿಸ್ಟರಿ ಆಫ್ ಇಂಡಿಯಾ ಆ್ಯಂಡ್ ಇಂಡೋನೇಷಿಯಾ** ', ೧೯೬೩ ಪು.೨೭.

೨೨) ಇದಕ್ಕೂ ಮೊದಲೇ ಅಂದರೆ ಕ್ರಿ.ಪೂ.ದಲ್ಲಿ ಜಿನಮೂರ್ತಿಗಳು ದೊರೆತಿವೆ. ಬಿಹಾರದ ಲೂನಿಪುರದಲಿ ಸಿಕ್ಕ ಒಂದು ನಗ್ನ ಮೂರ್ತಿಯ ದೇಹದ ಭಾಗವನ್ನು ತೀರ್ಥಂಕರ ಮೂರ್ತಿಯೆನ್ನಲಾಗಿದೆ. ಇದರ ನುಣುಪಿನ ಆಧಾರದ ಮೇಲೆ ಇದನ್ನು ಮೌರ್ಯ ಕಾಲಕ್ಕೆ ಸೇರಿದೆಯೆಂದು ಹೇಳಲಾಗುತ್ತದೆ.

೨೩) ಮಧುಸೂಧನ್‌ರಾವ್ 'ದಿ ಹಿಸ್ಟರಿ ಆಫ್ ಜೈನ ಆರ್ಟ್ ಆ್ಯಂಡ್ ಆರ್ಕಿಟೆಕ್ಚರ್' (ದಿನಾಂಕ ೦೮.೦೩.೧೯೭೭ರ **ದಿ ಹಿಂದೂ** ದಿನಪತ್ರಿಕೆ) ಪು. ೧೬.

೨೪) ರಾಜರಾಂ ಹೆಗಡೆ ಪೂರ್ವೋಕ್ತ, ೧೯೯೨, ಪು. ೫೪

೨೫) ' ಮಧು ಚಿಷ್ಠ ' ವೆಂದರೆ; ಜೇನುಮೇಣದಿಂದ ಬೇಕಾದ ಆಕಾರ ಮಾಡಿ, ಅದಕ್ಕೆ ಮಣ್ಣಿನ ಲೇಪನ ಮಾಡಿ ನೆರಳಿನಲ್ಲಿ ಒಣಗಿಸಿ ಸುಟ್ಟಾಗ ನಿರ್ಧಿಷ್ಟ ಆಕಾರ ರೂಪುಗೊಳ್ಳುತ್ತದೆ.

೨೬) ನಾಗರಾಜು ಹು. ತೇರದಾಳ, ' ಮೂರ್ತಿಶಿಲ್ಪ ಉಗಮ, ವಿಕಾಸ ', **ಬಿಜಾಪುರ ಜಿಲ್ಲೆಯ ಕಲೆ ಮತ್ತು ವಾಸ್ತು ಶಿಲ್ಪ**, ೧೯೯೬, (ಅಪ್ರಕಟಿತ ಪ್ರಬಂಧ) ಪು. ೫೪.

೨೭) ರಾಮಚಂದ್ರರಾವ್ ಎಸ್.ಕೆ., **ಪ್ರತಿಮಾಕೋಶ** , ಸಂ. ೪, ೧೯೮೨, ಪು. ೨೧೩.

೨೮) ಸ್ವಾಮಿ ಹರ್ಷಾನಂದ , **ಹಿಂದು ಗಾಡ್ಸ್ ಅಂಡ್ ಗಾಡೆಸೆಸ್**, ೧೯೮೨, ಪು. ೮೨.

೨೯) ಗೋಪಿನಾಥರಾವ್ ಟಿ. ಎ. , **ಎಲಿಮೆಂಟ್ಸ್ ಆಫ್ ಹಿಂದೂ ಐಕ್ನೋಗ್ರಫಿ**, ಸಂ೨, ಭಾಗ-೧, ೧೯೮೫, ಪು. ೭೫

೩೦) - ಅದೇ - ಪು. ೭೯

೩೧) ಎಂ. ಎ. ಆರ್. ೧೯೩೮, ಪು . ೬೮

೩೨) ಗೋಪಿನಾಥರಾವ್, ಟಿ. ಎ. ಪೂರ್ವೋಕ್ತ, ೧೯೮೫,ಪು. ೧೩೨-೧೩೭.

೩೩) ರಾಮಚಂದ್ರರಾವ್, ಎಸ್.ಕೆ. ಪೂರ್ವೋಕ್ತ,೧೯೮೨, ಪುಟ ೧೫೦

೩೪) - ಅದೇ -

೩೫) - ಅದೇ - ಪು. ೨೦೮-೨೧೫

೩೬) ಗೋಪಿನಾಥರಾವ್, ಟಿ. ಎ., ಪೂರ್ವೋಕ್ತ, ೧೯೮೫, ಸಂ.೨ , ಭಾಗ೧, ಪು. ೩೫-೬೭.

೩೭) ಬ್ರಹ್ಮ ವೈವರ್ತ ಪುರಾಣವು ಗಣಪತಿಯನ್ನು ಕೃಷ್ಣನೆಂದು ಪರಿಗಣಿಸಿ, ಮೂಲತಃ ಮನುಷ್ಯ ರೂಪಿ ಎನ್ನುತ್ತದೆ. ನೋಡಿ ಗೋಪಿನಾಥರಾವ್ ಟಿ. ಎ., ಪೂರ್ವೋಕ್ತ, ೧೯೮೫ , ಪು. ೪೫.

೩೮) ಗುರುರಾಜಭಟ್, ಪಿ. **ಸ್ಟಡೀಸ್ ಆಪ್ ತುಳುವ ಹಿಸ್ಟರಿ ಅಂಡ್ ಕಲ್ಚರ್**, ೧೯೭೫, ಪು. ೨೮೨.

೩೯) ಶಿವರುದ್ರಸ್ವಾಮಿ, ಎಸ್. ಎನ್. **ವಿಜಯನಗರ ಟೆಂಪಲ್ಸ್ ಇನ್ ಕರ್ನಾಟಕ** ೧೯೯೬, ಪು. ೧೫೪.

೪೦) ರಾಮಚಂದ್ರರಾವ್, ಎಸ್.ಕೆ. , **ಮೂರ್ತಿ ಶಿಲ್ಪ ನೆಲೆ-ಹಿನ್ನಲೆ,** ೧೯೭೫, ಪು.೧೯೦-೧೯೩, ಪು: ೨೧೩.

೪೧) ಭಟ್ಟಸೂರಿ ಕೆ.ಜಿ. **ಆರ್ಟ್ ಆ್ಯಂಡ್ ಆರ್ಕಿಟೆಕ್ಚರ್ ಆಪ್ ನಾರ್ತ್ ಕನ್ನಡ** (ಅರ್ಲಿ ಅಂಡ್ ಮಿಡಿವಲ್-ಪೇಸ್), ೧೯೮೭ (ಅಪ್ರಕಟಿತ ಪಿಎಚ್.ಡಿ. ಪ್ರಬಂಧ), ಪು. ೨೧೧

೪೨) ಎಂ. ಎ. ಆರ್. ೧೯೩೮, ಪು. ೭೦

೪೩) - ಅದೇ -

೪೪) ಕುಂಬಾಸ, **ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ,** ೧೯೯೦, ಪು. ೧೨೯.

೪೫) ರಾಮಚಂದ್ರರಾವ್, ಎಸ್.ಕೆ. ಪೂರ್ವೋಕ್ತ, ೧೯೭೫,ಪು. ೧೨೦-೧೪೦

೪೬) ಚನ್ನಬಸಪ್ಪ, ಎಸ್.ಪಾಟೀಲ್, **ಟೆಂಪಲ್ಸ್ ಆಪ್ ರಾಯಚೂರು ಅಂಡ್ ಬಳ್ಳಾರಿ ಡಿಸ್ಟ್ರಿಕ್ಟ್** , ೧೯೯೨, ಪು. ೨೧೮

೪೭) ನರಸಿಂಹಾಚಾರ್ಯ, ಎಂ. **ಹಿಸ್ಟರಿ ಅಂಡ್ ಕಲ್ಟ್ ಆಪ್ ನರಸಿಂಹ ಇನ್ ತೆಲಂಗಾಣ ,ವಾರಂಗಲ್** ೧೯೮೯, ಪು. ೧೦

೪೮) ರಾಮಚಂದ್ರರಾವ್, ಎಸ್.ಕೆ. ಪೂರ್ವೋಕ್ತ, ೧೯೮೨, ಪುಟ ೧೯೨.

೪೯) ಕಾಂಬ್ಳೆ, ಎಂ.ಟಿ. **ವಿಜಯನಗರ ಟೆಂಪಲ್ಸ್ ಆಟ್ ಹಂಪಿ ಎ ಸ್ಟಡಿ** , (ಅಪ್ರಕಟಿತ ಪಿಎಚ್.ಡಿ. ಪ್ರಬಂಧ) ೧೯೯೩, ಪು. ೩೦೭

೫೦) ಚನ್ನಬಸಪ್ಪ, ಎಸ್. ಪಾಟೀಲ್., ಪೂರ್ವೋಕ್ತ, ಪು. ೧೧೯.

೫೧) - ಅದೇ - ಪು. ೨೧೯

೫೨) - ಅದೇ -

೫೩) ಗಿರೀಜ, ಟಿ. **ಚಿತ್ರದುರ್ಗ ಜಿಲ್ಲಾ ದರ್ಶಿನಿ,** ೧೯೯೧, ಪು.೩೧೯

೫೪) ಶಿವರುದ್ರಸ್ವಾಮಿ, ಎಸ್. ಎನ್. ಪೂರ್ವೋಕ್ತ, ಪು. ೧೬೦ ಹಾಗು ಕಾಂಬ್ಳೆ ಎಂ.ಟಿ. , ಪೂರ್ವೋಕ್ತ, ಪು. ೩೦೬

೫೫)	**ಗೋಪಿನಾಥರಾವ್, ಟಿ. ಎ., ಪೂರ್ವೋಕ್ತ, ಸಂ. ೧, ಭಾಗ - ೧, ೧೯೮೫, ಪು.೨೭೬**

೫೬)	ರಾಮಚಂದ್ರರಾವ್, ಎಸ್.ಕೆ. ಪೂರ್ವೋಕ್ತ, ೧೯೭೫, ಪು. ೧೬೨

೫೭)	ರಾಮಚಂದ್ರರಾವ್, ಎಸ್.ಕೆ. ಪೂರ್ವೋಕ್ತ, ೧೯೭೫, ಪು. ೧೬೨

೫೮)	ಗೋಪಿನಾಥ ರಾವ್, ಟಿ. ಎ. ಪೂರ್ವೋಕ್ತ , ೧೯೮೫, ಪು. , ರಾಮಚಂದ್ರರಾವ್ ಎಸ್.ಕೆ. ಪೂರ್ವೋಕ್ತ,

೧೯೭೫, ಪು. ೧೬೩

೫೯)	ಸ್ವಾಮಿ ಹರ್ಷಾನಂದ, ೧೯೮೨, ಪೂರ್ವೋಕ್ತ, ಪು. ೯೮

೬೦)	ರಾಮಚಂದ್ರರಾವ್, ಎಸ್.ಕೆ. ಪೂರ್ವೋಕ್ತ , ೧೯೮೨, ಸಂಪುಟ ೩, ಪು. ೭೨

೬೧)	ಪಾಟೀಲ್, ಸಿ. ಎಸ್. ಪೂರ್ವೋಕ್ತ, ಪು. ೨೨೦

೬೨)	ನರಸಿಂಹ ಚಾರ್ಯ, ಎಂ. ಪೂರ್ವೋಕ್ತ ,೧೯೯೨, ಪು. ೧೩೨

೬೩)	ಶಂಕರ ನಾರಾಯಣರಾವ್, **ಹರಿಹರ ದೇವಾಲಯ** ,೧೯೮೨ , ಪು. ೧೪೩

೬೪)	ಗೋಪಿನಾಥ್‌ರಾವ್, ಟಿ. ಎ. ಪೂರ್ವೋಕ್ತ, ೧೯೮೫, ಸಂಪುಟ ೧, ಭಾಗ ೧.

೬೫)	- ಅದೇ - ಪು. ೧೮೬

೬೫)	ರಾಜೇಶ್ವರಿ, ಡಿ. ಆರ್. **ಶಕ್ತಿ ಐಕನೋಗ್ರಫಿ,** ಪು. ೫೩-೫೪

೬೭)	ದೇವರ ಕೊಂಡರೆಡ್ಡಿ, **ತಲಕಾಡಿನ ಗಂಗರ ದೇವಾಲಯಗಳು** ೧೯೯೪, ಪು. ೯೮.

೬೮)	ಎಂ. ಎ . ಆರ್. ೧೯೩೯ ಪು. ೪೧

೬೯)	ಭಟ್‌ಸೂರಿ, ಕೆ.ಜಿ. **ಆಂಟಿಕ್ಯೂಟೀಸ್ ಇನ್ ದ ಗರ್ವನಮೆಂಟ್ ಮ್ಯೂಜಿಯಂ ಶಿವಮೊಗ್ಗ, ಎ ಸ್ಟಡಿ**

೧೯೯೫, ಪು.೨೯.

೭೦)	ಸ್ವಾಮಿ ಹರ್ಷನಂದ , ಪೂರ್ವೋಕ್ತ, ೧೯೮೨, ಪು. ೯೮

೭೧)	ರಾಮಚಂದ್ರರಾವ್, ಎಸ್.ಕೆ. ಪೂರ್ವೋಕ್ತ , ೧೯೭೫, ಪು. ೧೭೨-೧೭೩

೭೨)	ಬ್ಯಾನರ್ಜಿ, ಜಿ. ಎನ್. **ಡೆವಲಪ್‌ಮೆಂಟ್ ಆಪ್ ಹಿಂದೂ ಐಕನೋ ಗ್ರಫಿ** ೧೯೪೧, ಪು.

೭೩)	ಭಟ್ಟಾಚಾರ್ಯ, ಬಿ.ಸಿ., **ಜೈನ ಐಕನೋಗ್ರಫಿ** ೧೯೭೪ , ಸಂ. ೨, ಪು. ೧೦೩-೧೦೪

೭೪)	ಗುಪ್ತೆ , ಆರ್.ಎಸ್. **ಐಕನೋಗ್ರಫಿ ಆಫ್ ಹಿಂದೂಸ್, ಬುದ್ದಿಸ್ಟ್ ಆ್ಯಂಡ್ ಜೈನಿಸ್**, ೧೯೭೨, ಪು. ೧೭೪

೭೫)	ಭಟ್‌ಸೂರಿ, ಕೆ.ಜಿ. ಪೂರ್ವೋಕ್ತ, ೧೯೯೧, ಪು. ೨೩೯.

೭೬)	ಗಿರೀಜ, ಟಿ. ಪೂರ್ವೋಕ್ತ, ೧೯೯೧, ಪು. ೨೧೫.

೭೭)	ಸುಂದರ, ಅ. 'ಸರ್ವಜೈನ ಸ್ಕಲ್ಪಚರ್ಸ್ ಶಿವಮೊಗ್ಗ ಆ್ಯಂಡ್ ಚಿತ್ರದುರ್ಗ ಏರಿಯಾ' **ರಂಗೋಲಿ,**

೧೯೮೯, ಪು.೨೭.

೭೮)	ಗಿರೀಜ, ಟಿ. ಪೂರ್ವೋಕ್ತ , ೧೯೯೧, ಪು.

೭೯)	ಗೋಪಿನಾಥರಾವ್, ಟಿ. ಎ., ಪೂರ್ವೋಕ್ತ , ೧೯೮೫, ಸಂಪುಟ ೨, ಭಾಗ ೧, ಪು. ೩೩೪.

೮೦)	ರಾಮಚಂದ್ರರಾವ್, ಎಸ್.ಕೆ. ಪೂರ್ವೋಕ್ತ , ೧೯೭೫, ಪು. ೧೩೦

೮೧)	ಶಂಕರನಾರಾಯಣರಾವ್, ಪೂರ್ವೋಕ್ತ, ೧೯೮೨, ಪು. ೯೦.

೮೨)	ಮಂಜುನಾಥ, ಡಿ. **ಆರ್ಟ್ ಆ್ಯಂಡ್ ಪ್ಯಾಟ್ರನೇಜ್ ಆಫ್ ಹರಿಹರ ಟೆಂಪಲ್** ಅಪ್ರಕಟಿತ ಎಂ.ಫಿಲ್. ಪ್ರಬಂಧ, ಪು. ೫೭

೮೩)	ಶಂಕರನಾರಾಯಣರಾವ್, ಪೂರ್ವೋಕ್ತ, ೧೯೮೨, ಪು. ೯೧
ಅಲೆಕ್ಸಾಂಡರ್ ರೇ, **ಚಾಲುಕ್ಯನ್ ಆರ್ಕಿಟೆಕ್ಚರ್** ೧೮೯೬, ಪು. ೩೪.

೮೪)	ಎಂ. ಎ. ಆರ್. ೧೯೩೯ , ಪು. ೭೧.

೮೪ಎ)	-ಅದೇ-

೮೫)	ರಾಮಚಂದ್ರರಾವ್, ಎಸ್. ಕೆ. ಪೂರ್ವೋಕ್ತ, ೧೯೮೨, ಸಂಪುಟ ೩, ಪು. ೬೨

೮೬)	**ತರಳಬಾಳು ಹುಣ್ಣಿಮೆ ಸ್ಮರಣ ಸಂಚಿಕೆ** - ೧೯೯೪, ಪು. ೪೫.

೮೭)	ರಾಮಚಂದ್ರರಾವ್, ಎಸ್.ಕೆ. ಪೂರ್ವೋಕ್ತ, ೧೯೮೨, ಸಂಪುಟ ೪, ಪು. ೨೭೮.

೮೮)	ಸಿಂದಗಿ ರಾಜಶೇಖರ್, **ಕರ್ನಾಟಕ ವಾಸ್ತು ಶಿಲ್ಪ ಮತ್ತು ಚಿತ್ರಕಲೆ,** ೧೯೮೮, ಪು. ೧೦

೮೯)	'ಮೆಮೋರಿಯಲ್ ಸ್ಟೋನ್, ಎ ಸ್ಟಡಿ ಆಫ್ ದೇರ್ ಆರಿಜನ್, ಸಿಗ್ನಿಫಿಕೆನ್ಸ್ ಆ್ಯಂಡ್ ವೇರಿಟಿ'
ಶೆಟ್ಟರ್ ,ಎಸ್.ಗುಂಥಾರ್ ಡಿ. ಮತ್ತು ಸಂಥೀಮಿರ್ (ಸಂಪಾಕರು) **ಮೆಮೋರಿಯಲ್ ಸ್ಟೋನ್ಸ್ ಇನ್‌ಸೌಥ್ ಇಂಡಿಯಾ,** ೧೯೮೨ , ಪು.೧೯೪.

೯೦)	**ಶೇಷಶಾಸ್ತ್ರಿ**, ಆರ್. **ಕರ್ನಾಟಕದ ವೀರಗಲ್ಲುಗಳು**, ೧೯೮೨, ಪು. ೩೦

೯೧)	ಶೆಟ್ಟರ್ ಎಸ್. ಗುಂಥಾರ್ ಡಿ. ಮತ್ತು ಸಂಥಿಮಿರ್ ,(ಸಂಪಾದಕರು) ಪೂರ್ವೋಕ್ತ, ೧೯೮೨, ಪು.೧೯೪-೧೯೬.

೯೨)	ಚನ್ನಗಿರಿ ತಾಲೂಕು ದಾಗಿನಕಟ್ಟೆಯ ವೀರಗಲ್ಲಿನಲ್ಲಿ ವೀರನೊಬ್ಬ ಯುದ್ಧಕ್ಕೆ ಸಿದ್ಧನಾಗಿರುವಂತಿದೆ. ಮತ್ತು ಚನ್ನಗಿರಿ ತಾಲೂಕಿನ ಕಾಲ್ಕರೆಯಲ್ಲಿನ ವೀರಗಲ್ಲೊಂದರಲ್ಲಿ ಹುಲಿಯೊಡನೆ ಸೆಣಸುತ್ತಿರುವ ದೃಶ್ಯವಿದೆ.

೯೩)	ಗಿರಿಜಾ ಟಿ. ಪೂರ್ವೋಕ್ತ ಪು. ೧೫೩.

೯೪)	ಬೆಳಗುತ್ತಿಯ ಸಿದ್ಧೇಶ್ವರ ದೇವಾಲಯದ ವಾಯುವ್ಯ ಮೂಲೆಯಲ್ಲಿನ ವೀರಗಲ್ಲಿನಲ್ಲಿ ಈ ಚಿತ್ರಣವಿದೆ. ಬಹುತೇಕ ಈ ವೀರಗಲ್ಲು ತ್ರುಟಿತವಾಗಿದ್ದು, ಉಳಿದಿರುವ ಕೆಲವು ಕುರುಹುಗಳಿಂದ ಊಹಿಸಬಹುದು.

೯೫)	ಶೇಷಾಶಾಸ್ತ್ರಿ, ಪೂರ್ವೋಕ್ತ , ೧೯೯೨

೯೬) ಇದೇ ಗ್ರಾಮದ ಕೇದಾರೇಶ್ವರ ದೇವಾಲಯಗದ ಬಳಿ ಎಂಟು ವೀರಗಲ್ಲುಗಳಿದ್ದು, ಇಲ್ಲಿನ ಎರಡನೆ ವೀರಗಲ್ಲು ಶಾಸನದಿಂದ ಕ್ರಿ.ಶ. ೧೩೭೯ರಲ್ಲಿ ಮುದಿ ಹೆಗ್ಗಡೆಯ ಮಗ ಬಯಚೆ ಹೆಗ್ಗಡೆ ಆತನ ಮಗ, ನುಂಕೆಗೌಡ, ಆತನ ಮಗ ಬೊಮ್ಮಯ್ಯ ಗೌಡನು ಸ್ವರ್ಗಸ್ಥನಾದ . ಈ ಗೌಡ ಮಹಾಸತಿಯರಲ್ಲಿ 'ಲಕುಮಾಯಿ' ಎನ್ನವಾಕೆ ಅಗ್ನಿ ಪ್ರವೇಶ ಮಾಡಿ, ಸತಿಯಾದ ಹನ್ನೊಂದು ದಿನಕ್ಕೆ ಹರಿಯಗೌಡನ ಮಗ ಕೇತೇಗೌಡನು ಈ ವೀರಗಲ್ಲು ನಿಲ್ಲಿಸಿದ ಎಂದು ಉಲ್ಲೇಖಿತವಾಗಿದೆ. ಪ್ರಾಯಶಃ ಇವರೆರಡರಲ್ಲಿ ಒಂದು 'ಲಕುಮಾಯಿ' ಯ ಮಾಸ್ತಿಕಲ್ಲು ಇರಬಹುದೇ?

೯೭) ಚಿಂತಾಮಣಿಕರ್, **ಇಂಡಿಯನ್ ಮೆಟಲ್ ಸ್ಕಲ್ಪಚರ್** ೧೯೫೨ , ಪು. ೨೯

೯೮) ಗಂಗೋಲಿ ಒ.ಸಿ. **ಸೌತ್ ಇಂಡಿಯನ್ ಬ್ರಾಂಜೆಸ್**., ೧೯೭೮, ಪು. ೩೩.

೯೯) ಧಮಿಜಾ ಜಸ್ಲೀನ್, **ಇಂಡಿಯನ್ ಫೋಕ್ ಆರ್ಟ್ಸ್ ಆ್ಯಂಡ್ ಕ್ರಾಫ್ಟ್ಸ್ ,** ೧೯೭೦, ಪು.೭೨

೧೦೦) 'ಲೋಹಂ ಸಕಲಂ ಯತ್ತಾ ಮಧು ಶಿಷ್ಠ ನಿರ್ಮಿತಂ' ಮೇಣ ಮೂರ್ತಿಗಳ ತಯಾರಿಕೆಯಿಂದಲೇ ಲೋಹಮೂರ್ತಿಗಳ ಕಲ್ಪನೆ ಬಂದಿದೆ.

೧೦೧) ಶಿವರಾಮ ಮೂರ್ತಿ, ಸಿ. **ಸೌಥ್ ಇಂಡಿಯನ್ ಬ್ರಾಂಜಸ್**, ೧೯೬೩, ಪು. ೧೪, ಹಾಗು **ಮಾನಸಾರ** ೮, ೨೦-೨೩.

೧೦೨) ಅದೇ ಪು. ೧೪

೧೦೩) ಚಿಂತಾಮಣಿಕರ್, ಪೂರ್ವೋಕ್ತ, ೧೯೫೨, ೧೯೫೨ ಪು. ೩೧.

೧೦೪) ಶಿವರಾಂ ಮೂರ್ತಿ, ಸಿ. ಪೂರ್ವೋಕ್ತ, ೧೯೬೩, ಪು. ೧೧೫.

೧೦೫) ಅದೇ - ಪು. ೧೭

೧೦೬) ಈ ಅಂಶವು ವೇದಕಾಲದಲ್ಲಿ ಶಿಲ್ಪಿಯು ಸಮಾಜದಲ್ಲಿ ಪಡೆದಿದ್ದ ಗೌರವ ಸ್ಥಾನವನ್ನು ಮನವರಿಕೆ ಮಾಡಿಕೊಡುತ್ತದೆ.

೧೦೭) ಶ್ರೀನಿವಾಸನ್ ಪಿ. ಆರ್. **ಬುಲೆಟಿನ್ ಆಪ್ ದಿ ಮದ್ರಾಸ್ ಗೌರ್ನಮೆಂಟ್ ಮ್ಯೂಸಿಯಂ- ಬ್ರಾಂಜ್ ಆಪ್ ಸೌತ್ ಇಂಡಿಯಾ** ಪು. ೧೧.

೧೦೮) **ದಿ ಹಿಂದೂ** ದಿನ ಪತ್ರಿಕೆ ೨೨-೧೦-೧೯೮೯ ಭಾನುವಾರ

೧೦೯) ಶಿವರಾಂ ಮೂರ್ತಿ ಸಿ. ಪೂರ್ವೋಕ್ತ, ೧೯೬೩, ಚಿತ್ರಗಳು ೧ಬಿ, ೧ಸಿ, ೧ಡಿ, ೨ಎ.

೧೧೦) ಈ ಜಿನವಲ್ಲಭನು ಆದಿಕವಿ ಪಂಪನ ತಮ್ಮ ಎಂದು ಹೇಳಿದೆ ನೋಡಿ ಪ್ರೊಸೆಡಿಂಗ್ಸ್ ಆಪ್ ದ ಸೌಥ್ ಇಂಡಿಯನ್ ಹಿಸ್ಟರಿ ಕಾಂಗ್ರೆಸ್ (ನಾಲ್ಕನೇ ಸಮ್ಮೇಳನ , ತಿರುಪತಿ ೧೯೮೪) ೧೯೮೬, ಪು. ೨೦೯-೨೧೧.

೧೧೧) ಪೈಥಾನಿನ ಈ ಭಾಗಿಯೆಬ್ಬೆ ಜಿನವಲ್ಲಭನ ಪತ್ನಿ ಇರಬಹುದೇ?

೧೧೨) ಕೃಷ್ಣಮೂರ್ತಿ. ಎಂ. ಎಸ್. 'ಕರ್ನಾಟಕದ ಕಂಚು ಶಿಲ್ಪಗಳು'. ಲಕ್ಷ್ಮಣ್ ತೆಲಗಾವಿ (ಸಂಪಾದಕರು) , **ಸಂಶೋಧನೆ** , ೧೯೮೬. ಪು.

೧೧೩) ಭಟ್‌ಸೂರಿ ಕೆ.ಜಿ. 'ಶಂಕರನಹಳ್ಳಿ ರಂಗನಾಥ ದೇವಾಲಯ' ಅಪ್ರಕಟಿತ ಲೇಖನ, ಪು. ೨.

೧೧೪) ಹಾ.ಮ.ನಾಯಕ, **ಕನ್ನಡ ವಿಷಯ ವಿಶ್ವಕೋಶ**, ೧೯೭೯, ಪು. ೯೨೬

೧೧೫) ಅದೇ, ಪು. ೧೦೩೦

೧೧೬) ಗಿರೀಜ ಟಿ. ಪೂರ್ವೋಕ್ತ, ೧೯೯೧, ಪು. ೪೫೬-೪೭೩.

೧೧೭) ಅದೇ, ಪು. ೨೯೪, ೨೫೪, ೩೦೨, ೩೨೦.

೧೧೮) ಅದೇ, ೧೯೮೫, ಪು. ೧೪೮, ೧೬೨, ೧೩೪, ೧೫೬

೧೧೯) ಕುಂಬಾಸ ಪೂರ್ವೋಕ್ತ, ೧೯೯೦, ಪು. ೬೮, ೭೮, ೫೬

೧೨೦) ದಾಗಿನಕಟ್ಟೆ ಕಥದಲ್ಲಿ ಕೆತ್ತಲಾಗಿದೆ.

೧೨೧) ಚಿಗಟೇರಿ ನಾರದಮುನಿ ದೇವಾಲಯದ ರಥದಲ್ಲಿ ಕೆತ್ತಲಾಗಿದೆ.

೧೨೨) ಸೂಳೆಕೆರೆಯ ಸಿದ್ಧೇಶ್ವರ ದೇವಾಲಯದ ರಥದಲ್ಲಿ.

೧೨೩) ಜಗಲೂರು ತಾಲೂಕಿನ ಮರೇನಹಳ್ಳಿಯ ದೇವಾಲಯವೊಂದರಲ್ಲಿ ಒಂದು ಪುರುಷ ಮೂರ್ತಿ ಮತ್ತು ಸ್ತ್ರೀಮೂರ್ತಿಯರಿದ್ದು, ಅವುಗಳನ್ನು ರಥದ ಕೋಣೆಯಲ್ಲಿ ಇಡಲಾಗಿದೆ. ಹಾಗೇ ಗಂಗಗೊಂಡನ ಹಳ್ಳಿಯ ದೇವಾಲಯದಲ್ಲಿ ಕುದುರೆಯನ್ನೇರಿದ ಇಬ್ಬರು ಪುರುಷರು ಅಲಂಕೃತರಾಗಿದ್ದಾರೆ.

೬. ಸಮಾರೋಪ :-

ದಾವಣಗೆರೆ ಜಿಲ್ಲೆಯು ಕರ್ನಾಟಕ ರಾಜ್ಯದ ಮಧ್ಯ ಭಾಗದಲ್ಲಿ ಕೇಂದ್ರೀಕೃತವಾಗಿದೆ. ಇಲ್ಲಿನ ಉತ್ತಮ ಭೌಗೋಳಿಕ ಪರಿಸರವು ಪ್ರಾಗೈತಿಹಾಸ ಕಾಲದಿಂದಲೂ ಮಾನವನಿಗೆ ಉಪಕಾರಿಯಾಗಿದೆ. ಈ ಜಿಲ್ಲೆಯ ಆಸಗೋಡು ಅರಷಿಣಗುಂಡಿ, ಕೂಣಚಗಲ್ ಹಾಗು ಕಣಕುಪ್ಪೆ, ಉಚ್ಚಂಗಿ ದುರ್ಗಗಳಲ್ಲಿ ಪ್ರಾಗೈತಿಹಾಸಿಕ ಕಾಲದ ನೆಲೆಗಳಿವೆ. ಈ ಜಿಲ್ಲೆಯಲ್ಲಿನ ಉತ್ತಮ ಪರಿಸರವೇ ಮುಂದೆ ಚಾರಿತ್ರಿಕ ಕಾಲಘಟ್ಟದಲ್ಲಿ ಅನೇಕ ರಾಜವಂಶಗಳು ಆಳ್ವಿಕೆ ನಡೆಸಲು ಅವಕಾಶ ನೀಡಿದೆ. ಮೌರ್ಯ, ಶಾತವಾಹನ, ರಾಷ್ಟ್ರಕೂಟ, ಚಾಲುಕ್ಯ, ಸೇವುಣರು, ಸಿಂಧರು, ಉಚ್ಚಂಗಿ ಪಾಂಡ್ಯರು, ಹೊಯ್ಸಳರು, ವಿಜಯನಗರದ ಅರಸರು ಇಲ್ಲವೇ ಅವರ ಸಾಮಂತ ಅಧಿಕಾರಿಗಳು ಈ ಜಿಲ್ಲೆಯಲ್ಲಿ ಆಳ್ವಿಕೆ ಮಾಡಿ, ಅನೇಕ ಪ್ರಜಾಹಿತ ಕಾರ್ಯಗಳನ್ನು ಕೈಗೊಂಡಿದ್ದಾರೆ. ಆದುದರಿಂದ ದಾವಣಗೆರೆ ಜಿಲ್ಲೆ ಹಲವು ತೆರನಾದ ವೈಶಿಷ್ಠಗಳ ಬೀಡು ಎಂದು ಪ್ರಸಿದ್ಧಿಯಾಗಿದೆ. ಇಲ್ಲಿನ ಅನೇಕ ದೇವಾಲಯಗಳು ಈ ಮೇಲಿನ ಕೆಲವು ರಾಜವಂಶಗಳ ಕೊಡುಗೆಗಳಾಗಿವೆ.

ದಾವಣಗೆರೆ ಜಿಲ್ಲೆಯ ವಾಸ್ತು ಮತ್ತು ಮೂರ್ತಿ ಶಿಲ್ಪಗಳ ಅಧ್ಯಯನವನ್ನು ಅವು ಮೂಡಿಬಂದ ಪರಿಸರದ ಹಿನ್ನಲೆಯಲ್ಲಿ ವಿವೇಚಿಸುತ್ತಾ, ವಿವಿಧ ಕಾಲಘಟ್ಟಗಳಲ್ಲಿ ನಿರ್ಮಿತವಾದ ವಾಸ್ತು ಮತ್ತು ಮೂರ್ತಿ ಶಿಲ್ಪಗಳ ಒಂದು ಚಿತ್ರವನ್ನು ನೀಡುವ ಪ್ರಯತ್ನವು ಈ ಪ್ರಬಂಧದಲ್ಲಿ ಮೊದಲ ಬಾರಿಗೆ ಮಾಡಲಾಗಿದೆ.

ಜಿಲ್ಲೆಯಾದ್ಯಂತ ಚದುರಿ ಹೋಗಿರುವ ರಾಷ್ಟ್ರಕೂಟ, ಕಲ್ಯಾಣಿ ಚಾಲುಕ್ಯ, ಸೇವುಣ, ಸಿಂದರು, ಪಾಂಡ್ಯರು, ಹೊಯ್ಸಳ, ವಿಜಯನಗರ ಕಾಲಗಳಲ್ಲಿ ನಿರ್ಮಿತವಾದ ದೇವಾಲಯಗಳು ಹಾಗೂ ಬಸದಿಗಳ ವಾಸ್ತು ಕಲೆ ಮತ್ತು ಮೂರ್ತಿ ಶಿಲ್ಪಗಳನ್ನು ವ್ಯಾಪಕ ಕ್ಷೇತ್ರಕಾರ್ಯ ಕೈಗೊಂಡು ಗುರುತಿಸಲಾಗಿದೆ. ವಿಭಿನ್ನ ಧರ್ಮಗಳಿಗೆ ಸಂಬಂಧಿಸಿದ ಅನೇಕ ದೇವಾಲಯಗಳು, ಬಸದಿಗಳು ಜಿಲ್ಲೆಯ ಬೇರೆ ಬೇರೆ ಕಡೆ ಸ್ಥಾಪಿತವಾಗಿವೆ. ಇವುಗಳಲ್ಲಿ ಪ್ರಮುಖವಾದ ದೇವಾಲಯಗಳ ಹಾಗು ಬಸದಿಗಳ ವಾಸ್ತು ರಚನೆ ಬಗ್ಗೆ ಒಂದು ಸ್ಥೂಲ ಚಿತ್ರ ದೊರೆಯುವಂತೆ ಮಾಡಲಾಗಿದೆ. ವಿಭಿನ್ನ ಕಾಲಾವಧಿಯಲ್ಲಿ ನಿರ್ಮಿತವಾಗಿರುವ ಈ ದೇವಾಲಯಗಳ ವಾಸ್ತು ರಚನೆಯನ್ನು ಗುರುತಿಸುವುದರಿಂದ ವಿವಿಧ ರಾಜ ಮನೆತನಗಳ ಸಾಮ್ರಾಜ್ಯದ ಎಲ್ಲೆಗಳನ್ನು ಗುರುತಿಸಲು ಸಹ ನೆರವಾಗುತ್ತದೆ.

ಶಾಸನಾಧಾರಗಳಿರುವ ದೇವಾಲಯಗಳನ್ನಲ್ಲದೇ, ಶಾಸನಾಧಾರಗಳಿಲ್ಲದ ದೇವಾಲಯಗಳನ್ನು ಹಾಗೂ ಬಸದಿಗಳನ್ನು ಕ್ಷೇತ್ರ ಪರಿವೀಕ್ಷಣಾ ಸಮಯದಲ್ಲಿ ಗುರುತಿಸಲಾಗಿದೆ. ಇವುಗಳು ರಾಷ್ಟ್ರಕೂಟ, ಕಲ್ಯಾಣಿ ಚಾಲುಕ್ಯ, ಬೆಳಗುತ್ತಿ ಸಿಂದರ, ಉಚ್ಚಂಗಿ ಪಾಂಡ್ಯ, ಸೇವುಣ, ಹೊಯ್ಸಳ, ವಿಜಯನಗರ ಶೈಲಿಯಲ್ಲಿವೆ. ಇದು ಈ ಅಧ್ಯಯನದ ಪ್ರಮುಖ ಉದ್ದೇಶವೆಂದರೆ ತಪ್ಪಾಗಲಾರದು.

[illegible]

ದಾವಣಗೆರೆ ಜಿಲ್ಲೆಯಾದ್ಯಂತ ದೊರೆತಿರುವ ದೇವಾಲಯಗಳು, ಬಸದಿಗಳ ಹಾಗು ಮೂರ್ತಿಗಳನ್ನು ಆಧಾರವಾಗಿಟ್ಟುಕೊಂಡು ಜಿಲ್ಲೆಯ ಪ್ರಾಚೀನ ಮತ್ತು ಮಧ್ಯಯುಗೀನ ಕಾಲದ ಧಾರ್ಮಿಕ ಇತಿಹಾಸವನ್ನು ಕೂಡಾ ರಚಿಸಬಹುದಾಗಿದೆ. ಈ ಜಿಲ್ಲೆಯಲ್ಲಿ ಶೈವ, ವೈಷ್ಣವ, ಶಾಕ್ತ, ಜಿನ (ಜೈನ) ಇತರೆ (ಸೂರ್ಯ, ಬ್ರಹ್ಮ, ಹರಿಹರೇಶ್ವರ) ಧರ್ಮಗಳಿಗೆ ಸಂಬಂಧಿಸಿದ ದೇವಾಲಯಗಳು, ಬಸದಿಗಳು ಹಾಗು ಮೂರ್ತಿಗಳು ವಿವಿಧ ಸ್ಥಳಗಳಲ್ಲಿದೊರೆತಿವೆ. ಶೈವ ಧರ್ಮಕ್ಕೆ ಸಂಬಂಧಿಸಿದ ದೇವಾಲಯಗಳು ಹಾಗು ಮೂರ್ತಿಗಳು ಇತರೆ ಧರ್ಮಗಳ ದೇವಾಲಯ ಮೂರ್ತಿಗಳಿಗಿಂತಲೂ ಅಧಿಕ ಪ್ರಮಾಣದಲ್ಲಿ ದೊರೆತಿವೆ. ಇದರಿಂದಾಗಿ ಶೈವ ಧರ್ಮದ ಆರಾಧಕರು ಹೆಚ್ಚಾಗಿದ್ದರೆಂದು ಹಾಗು ಪ್ರಾಚೀನ ಮತ್ತು ಮಧ್ಯಯುಗೀನ ಕಾಲದಲ್ಲಿ ಶೈವ ಧರ್ಮ ಇತರೆ ಧರ್ಮಗಳಿಗಿಂತ ಪ್ರಾಬಲ್ಯದಲ್ಲಿತ್ತೆಂಬ ಅಂಶ ಸ್ಪಷ್ಟವಾಗುತ್ತದೆ.

ಶಾಕ್ತ ಧರ್ಮಕ್ಕೆ ಸೇರಿದ ದೇವಾಲಯಗಳು ಕಡಿಮೆ ಪ್ರಮಾಣದಲ್ಲಿ ದೊರೆತಿವೆ. ಆದರೆ ಆ ಧರ್ಮದ ಮೂರ್ತಿಗಳು ಹೆಚ್ಚು ದೊರೆತಿವೆ. ಇದರಿಂದಾಗಿ ಪ್ರಾಚೀನ ಮತ್ತು ಮಧ್ಯಯುಗೀನ ಕಾಲಗಳೆರಡರಲ್ಲೂ ಈ ಧರ್ಮ ಅಸ್ತಿತ್ವದಲ್ಲಿತ್ತೆಂದು ಹೇಳಬಹುದಾದರೂ, ಅದು ಶೈವ ಧರ್ಮದಷ್ಟು ಪ್ರಾಬಲ್ಯತೆಯನ್ನು ಪಡೆದುಕೊಂಡಿರಲಿಲ್ಲ ಎಂಬುದಂತು ಸ್ಪಷ್ಟ.

ಪ್ರಾಚೀನ ಕಾಲದಲ್ಲಿ ವೈಷ್ಣವ ಧರ್ಮಕ್ಕೆ ಸಂಬಂಧಿಸಿದ ದೇವಾಲಯಗಳು , ಮೂರ್ತಿಗಳು ಅತಿ ಕಡಿಮೆ ದೊರೆತಿವೆ. ಆದರೆ ಈ ಜಿಲ್ಲೆಯ ವ್ಯಾಪ್ತಿಯಲ್ಲಿ ಮಧ್ಯಯುಗೀನ ಕಾಲಕ್ಕೆ ಸೇರಿದ ದೇವಾಲಯಗಳು ಮೂರ್ತಿಗಳು ಪ್ರಾಚೀನ ಕಾಲಕ್ಕಿಂತಲೂ ಹೆಚ್ಚಾಗಿ ಕಂಡುಬರುತ್ತವೆ. ಇದರಿಂದಾಗಿ ವೈಷ್ಣವ ಧರ್ಮಕ್ಕೆ ಇಲ್ಲಿನ ರಾಜವಂಶಗಳ ಸಹಕಾರ, ಪ್ರೋತ್ಸಾಹ ಹೆಚ್ಚು ದೊರೆತಿದ್ದು ಇದೇ ಕಾಲದಲ್ಲಿ ಎಂದು ಹೇಳಬಹುದು. ಉಳಿದ ಧರ್ಮಗಳು ಶೈವ, ಶಾಕ್ತ, ವೈಷ್ಣವ ಧರ್ಮಗಳಷ್ಟು ಪ್ರಾಬಲ್ಯದ ಸ್ಥಾನವನ್ನು ಪಡೆದುಕೊಂಡಿರಲಿಲ್ಲವೆಂದು ಅಲ್ಲಿ ದೊರೆತಿರುವ ಬಸದಿ, ದೇವಾಲಯಗಳು ಹಾಗು ಮೂರ್ತಿಗಳ ಆಧಾರದಿಂದ ಖಚಿತಪಡಿಸಿಕೊಳ್ಳಬಹುದಾಗಿದೆ.

ಇದುವರೆಗೆ ಹಲವಾರು ವಿದ್ವಾಂಸರು ಅಧ್ಯಯನ ನಡೆಸಿರುವ ಹಾದಿಯಲ್ಲಿಯೇ ಮುಂದುವರಿದು, ಈ ಜಿಲ್ಲೆಯಲ್ಲಿನ ವಿವಿಧ ಕಾಲಘಟ್ಟಗಳ ವಾಸ್ತು ಮತ್ತು ಮೂರ್ತಿ ಶಿಲ್ಪಗಳ ಲಕ್ಷಣಗಳನ್ನು ಗುರುತಿಸುವಲ್ಲಿ ಪ್ರಸ್ತುತ ಅಧ್ಯಯನ ಯಶಸ್ವಿಯಾಗಿದೆಯೆಂದು ಹೇಳಬಹುದಾಗಿದೆ. ಹಾಗೆಯೇ ಮೂರ್ತಿ ಶಿಲ್ಪದ ಅನಿವಾರ್ಯ ಅಂಗವಾದ ಸ್ಮಾರಕ ಶಿಲೆಗಳ ಮೇಲಿನ ಮೂರ್ತಿ ಶಿಲ್ಪಗಳ ಬಗ್ಗೆಯೂ ಈ ಪ್ರಬಂಧದಲ್ಲಿ ಚರ್ಚಿಸಲಾಗಿದೆ.

ದಾವಣಗೆರೆ ಜಿಲ್ಲೆಯ ಹಲವು ದೇವಾಲಯಗಳಲ್ಲಿ ಇಂದಿಗೂ ಪೂಜೆ ನಡೆಯುತ್ತಿದ್ದು, ಅವುಗಳ ಹಿಂದೆ ಹೆಣೆದುಕೊಂಡಿರುವ ಜಾನಪದ ನಂಬಿಕೆ, ಐತಿಹ್ಯ, ಪುರಾಣಗಳನ್ನು ವಿಶ್ಲೇಷಿಸುವ ಅಗತ್ಯತೆ ಖಂಡಿತಾ ಇದೆ. ಕ್ಷೇತ್ರ ಪರಿವೀಕ್ಷಣಾ ಸಮಯದಲ್ಲಿ ಗುರುತಿಸಿದ ಒಂದು ಮುಖ್ಯ ಅಂಶವೆಂದರೆ ಇಲ್ಲಿನ ಜನ ಸಾಮಾನ್ಯರು ಇಲ್ಲಿನ ದೇವಾಲಗಳನ್ನು 'ಜಕಣಾಚಾರಿ ಕಟ್ಟಡ' ವೆಂದು ಹಾಗು ಈ ದೇವಾಲಯದಲ್ಲಿ ಬಂಗಾರದ ಕಳಶ, ರಥ ಮುಳುಗಿ ಹೋಗಿವೆಯೆಂದೂ, ಜೊತೆಗೆ ಇಲ್ಲವೇ ದೇವಾಲಯದಲ್ಲಿರುವ ನಿಧಿಯನ್ನು ಸರ್ಪ ಕಾಯುತ್ತಿದೆ ಎಂದು ಮುಂತಾಗಿ ನಂಬಿರುವ ಐತಿಹ್ಯಗಳ ಬಗ್ಗೆ ವಿಶ್ಲೇಷಣಾ ಕಾರ್ಯ ನಡೆಸಬೇಕಾದ ಅಗತ್ಯತೆ ಇದೆ. ಹಾಗೇಯೆ ವಿವಿಧ ದೃಷ್ಟಿಕೋನಗಳಿಂದ ಇಲ್ಲಿನ ದೇವಾಲಯಗಳ ಅಧ್ಯಯನ ಇನ್ನು ಹೆಚ್ಚಿನ ಮಟ್ಟದಲ್ಲಿ ಮಾಡುವುದಕ್ಕೆ ಅವಕಾಶವೂ ಕೂಡ ಇದೆ.

ದಾವಣಗೆರೆ ಜಿಲ್ಲೆಯ ದೇವಾಲಯಗಳ ಮತ್ತು ಮೂರ್ತಿಗಳ ಕುರಿತು ಈವರೆಗೆ ನಡೆದಿರುವ ಕೆಲವು ವಿರಳವಾದ ಅಧ್ಯಯನಗಳನ್ನು ಕುರಿತು ಈ ಹಿಂದೆಯೇ ಸ್ಪಷ್ಟಪಡಿಸಲಾಗಿದೆ. ಈ ಹಿನ್ನಲೆಯಲ್ಲಿ ದಾವಣಗೆರೆ ಜಿಲ್ಲೆಯಲ್ಲಿ ವಿವಿಧ ಕಾಲಘಟ್ಟಗಳಲ್ಲಿ ನಿರ್ಮಿತವಾದ ದೇವಾಲಯಗಳ ವಾಸ್ತು ಮತ್ತು ಮೂರ್ತಿ ಶಿಲ್ಪದ ಬಗ್ಗೆ ಒಂದೆಡೆ, ಇಡಿಯಾಗಿ ನೀಡುವಂಥ ಪ್ರಯತ್ನವನ್ನು ಮೊದಲ ಬಾರಿಗೆ ಈ ಪ್ರಬಂಧದಲ್ಲಿ ಮಾಡಲಾಗಿದೆ. ಇಷ್ಟಾಗಿಯೂ ಇಲ್ಲಿನ ವಾಸ್ತು ಮತ್ತು ಮೂರ್ತಿಶಿಲ್ಪಗಳ ಕುರಿತು ವಿವಿಧ ದೃಷ್ಟಿಕೋನಗಳಿಂದ ಮತ್ತಷ್ಟು ಅಧ್ಯಯನ ನಡೆಸುವುದಕ್ಕೆ ಅವಕಾಶಗಳಿವೆ.

[illegible]

[illegible]

ಅನುಬಂಧ

೧) ಕೆಲವು ಪ್ರಕಟಿತ ಮತ್ತು ಅಪ್ರಕಟಿತ ಶಾಸನಗಳು

ಅ) ಬೆಳಗುತ್ತಿ ಸಿದ್ಧಲಿಂಗೇಶ್ವರ ದೇವಾಲಯದ ದಕ್ಷಿಣ ಭಾಗದಲ್ಲಿರುವ ೨ನೇ ವೀರಕಲ್ಲು

೧ ಓಂನಮಃಶಿವಾಯ ‖ ಸ್ವಸ್ತಿ ಸಮಸ್ತ ಭುವನಾಶ್ರಯಂಶ್ರೀಪೃಥ್ವೀವಲ್ಲಭಂಮಹಾರಾಜಾಧಿರಾ

೨ ಜಂಯಾದವನಾರಾಯಣಂಪ್ರತಾಪ ಚಕ್ರವರ್ತ್ತಿಸಿಂಹಳದೇವರ ವಿಜಯರಾಜ್ಯಮಾಚಂದ್ರಾರ್ಕಂ

೩ ಬರಂಸಲುತ್ತಿರೆ ‖ ತತ್ಪಾದಪದ್ಮೋಪಜೀವಿಮಾಯಿದೇವದಣ್ನಾಯಕರುಬನವಸೆನಾಡಮೇಲಾಳಿಕೆಯಧಿ

೪ ಕಾರಂಮಾಡುತ್ತಿರೆ ‖ ಸಿಂದಕುಳಾಂಬರದ್ಯುಮಣಿಯಂಕಲಿಮಲ್ಲನ್ರಿಪಾಳಪುತ್ರನಂಮಂದರಧೈ

೫ ಯ್ರ್ಯನಂವಿಬುಧರಕ್ಷಕನಂಫಣಿರಾಜವಂಶನಂಸಂದಮುಕುಂದಪಾದಯುಗಪಂಕಜಭ್ರಿಂಗ

೬ ನನೀಜಗಜ್ಜನಂಕುಂದದೆಬಣ್ಣಿಕುಂಧರೆಯೊಳೀಶ್ವರದೇವನನುದ್ಘಪುಣ್ಯನಂ ‖ ಸ್ವಸ್ತಿ ಸಮಸ್ತಪ್ರ

೭ ಶಸ್ತಿ ಸಹಿತಂತ್ರೀಮನುಮಹಾಮಂಡಳೇಶ್ವರಂ ಈಶ್ವರದೇವರಸರುಬೆಳಗವತ್ತಿಯೊಳು

೮ ಸುಖದಿರಾಜ್ಯಂಗೆಯ್ಯುತಮಿರೆ ‖ ಶಕವರ್ಷದ ೧೧೩೮ನೆಯ ಧಾತುಸಂವತ್ಸರದ

೯ ವೈಶಾಖಶು ೫ ಬ್ರಿಹವಾರದಲೀಶ್ವರದೇವಂಚಿಣ್ನೆಯಸಾಹಣಿಯಂಬೆಸಸೆ ‖ ಮಾದನಬಾಗಂದೇದರ್ಬ್ಬೇದಿ

೧೦ ಸಿಪ್ಪಾಯ್ದಿರುದುತರುಗಳಂಕಯ್ಕೊಂಡಿಂವೋದರೆನೆಮುಳಿದಜನವನನ್ತಾದಂಬೆನ್ನಟ್ಟಿಪಟ್ಟಸಾಹಣಿಚಿಣ್ಣಂ ‖ ಭರ

೧೧ ದಿಂದಂಪರಿದೆಯ್ದಿ ಬೇಡವೆಡಯಂಕಂಡಾದ್ದುರ್ಬೆಂಕೊಂಡುತತ್ತುರಗಂವಾಯುಜವಾಧಿಕಂಪರಿಯಿಸು

೧೨ ತ್ತಂಕುತ್ತಿಕೊಂದಿಕ್ಕಿತಚ್ಚೆರಮಂತಾಂಪೊಡೆಸೆಂಡನಾಡೆಪದಪಿಂದಾಳಂಕರಂಮೆಚ್ಚಲಚ್ಚರಿಯಾಗಲ್ತುರವಂಮಗು

೧೩ ಳ್ಚಿಪಗೆಯಂಪರ್ದ್ದಿಂಗೆಬಿರ್ದ್ದಿಕ್ಕಿದಂ ‖ ಸಂಗರರಂಗದೊಳತಿಧೀರಂಗುಣಿಜನಸೇವ್ಯನಿವನೊಳಾರ್ಸ್ಸರಿಚಿಣ್ಣಯ್ಯಂ

೧೪ ಗೆನಲೀಶ್ವರಭೂಪನಡಿಂಗರಿಗೆಂಸ್ವಾಮಿಕಾರ್ಯಹಿತರತಜೀವಂ ‖ ಅನ್ತುಸ್ವಾಮಿಕಾರ್ಯದಿಂಚಿಣ್ಣಯ್ಯಂ

೧೫ ಸ್ವರ್ಗ್ಗಸ್ಥನಾಗೆಡಿಂಗರಿಗವೃತ್ತಿಯಾಗಿಬೂತನಕೊಂಡದಕೆಳಗೆಗದ್ದೆ ಮತ್ತ ೧ ಅತ್ತಿಕೆರೆಯಕೆಳಗೆಹದ್ದಲೆಮತ್ತ ೧

೧೬ ಮೊರೂರಲುಗ ೧ ವಂ ಈಶ್ವರದೇವರಸರುಚಿಣ್ಣಯನಮಗಂಗಂ ಆತನತಮ್ಮಯಂಕಯ್ಯನಮಕ್ಕಳಮ

೧೭ ಕ್ಕಳ್ಗೆಸಲಿಸುವರುಯಿದನಳಿಹಿದಂಮಹಾಪಾತಕನಕ್ಕು ‖ ನಮಃಶಿವಾಯ ‖

[illegible]

[illegible]

[illegible]

[illegible]

[illegible]

೮) ಉಚ್ಚಂಗಿ ದುರ್ಗದ ಹಾಲಮ್ಮನ ದೇವಾಲಯದ ಮುಂದಿರುವ ಅಪ್ರಕಟಿತ ಶಾಸನ

ನಮಸ್ತುಂಗ ಸಿರಶ್ಚುಂಬಿ ಚಂದ್ರ ಚಾಮರವೇ। ತ್ರೈಲೋಕ್ಯನಗರಾರಂಭಮೂ -
ಲ ಸ್ತಂಭಾಯ ಸಂಭುವೇ॥ ಸ್ವಸ್ತಿ ಸಮಸ್ತ ಭುವನಾಶ್ರಯಂ ಶ್ರೀ ಪೃಥ್ವೀವಲ್ಲ -
ಭ ಮಹಾರಾಜಾಧಿರಾಜ ರಾಜ ಪರಮೇಶ್ವರ ಪರಮ ಭಟ್ಟಾರಕಂ ಸತ್ಯಾಶ್ರಯ ಕುಳತಿಳ -
ಕಂ ಚಾಳುಕ್ಯಾ ಭರಣಂ ಶ್ರೀಮತ್ರಿಭುವನ ಮಲ್ಲದೇವರ ವಿಜಯ ರಾಜ್ಯ ಮುತ್ತರೋತ್ತ -
ರಾಭಿವೃದ್ಧಿ ಪ್ರವರ್ಧಮಾನ ಮಾಚಂದ್ರಾರ್ಕತಾರಂಬರಂ ಸಲುತ್ತಮಿರೆ ತತ್ಪಾದ ಪದ್ಮೋ -
ಜೀವಿ॥ ಸ್ವಸ್ತಿ ಸಮಧಿಗತ ಪಂಚ ಮಾ ಶಬ್ದ ಮಹಾಮಂಡಳೇಶ್ವರಂ -
ಪುರವರೇಶ್ವರಂ ಯದ್ವಸಾಂಬರ ದ್ಯುಮಣಿ ಸುಭಟ ಚೂಡಾಮಣಿ ನಿಜಕುಳಕ -
ಮಳ ಮಾರ್ತ್ತಣ್ಡಂ ಪರಿಚ್ಚೇದಿಗಂಣ್ಡಂ ರಾಜಿಗ ಚೋಳ ಮನೋ ಭಂಗಂ ಶ್ರೀಮತ್ರಿಭುವನ -
ಮಲ್ಲದೇವ ಪಾದಾಬ್ದಿ ಭ್ರಿಂಗಂನಾಮಾದಿ ಪ್ರಶಸ್ತಿಸಹಿತಂ ಶ್ರೀಮನ್ಮಹಾ -
ಮಣ್ಡಳೇಶ್ವರಂ ತ್ರಿಭುವನಮಲ್ಲ ಪಾಣ್ಡ್ಯ ದೇವರು ನೊಳಂಬವಾಡಿ ಮೂವತ್ತಿರ್ಚ್ಛಾಸಿರ -
ಮುಮಂ ದುಷ್ಟ ನಿಗ್ರಹ ಸಿಷ್ಟ ಪ್ರತಿ ಪಾಳನದಿಂ ಭೇರುವಿನ ನೆಲೆವೀಡಿನೊಳ್ಸುಬಸಂ
ಖತ ವಿನೋದದಿಂ ರಾಜ್ಯಂಗೆಯ್ಯುತ್ತಮಿರೇ॥ ಸ್ವಸ್ತಿಸಮಧಿಗತ ಪಂಚಮಹಾಶಬ್ದಮ -
ಹಾಸಾಮನ್ತ ವೀರ ಲಕ್ಷ್ಮೀಕಾಂತ ಗೋತ್ರ ಪವಿತ್ರ ಸುಜಯ್ಯ ಮಿತ್ರ ಅನಾಗತ ವ್ಯಾಸ ಕೀರ್ತಿ -
ವಿಳಾಸಂ ಪರೋಪಕಾರಾರ್ತ್ಥಿ ನಿಶದಯಶೋ ಮೂರ್ತಿ ಗುರು ಪಾದಾಂಭೋಜ ಮಧುಕರ ಶಿವಪಾದ -
ಶೇಖರ ಕೋದಣ್ಡರಾಮ ಕಾಮಿನೀ ಕಾಮ ಭಾನ್ದವ ಸರೋೇರರಿ ಹಂಸ ಸ್ವಾಮಿ ವಂಚಕರಂ -
ಶ್ರೀಮತ್ರಿಭುವನಮಲ್ಲ ಪಾಂಡ್ಯದೇವ ಪಾದಾರಾಧಕಂ ವೈರಿ ಬಳಸಾಧಕಂ ನಾಮಾದಿ ಸಮಸ್ತ ಪ್ರ -
ಸಕ್ತಿ ಸಹಿತಂ ಶ್ರೀಮನ್ಮಹಾಸಾಮನ್ತನುಂ ಬಳನಾಡಾಳ್ವರು ಶ್ರೀ ಪಾಣ್ಡ್ಯ ದೇವರ್ಗೆ ಭಿನ್ನಪಂಗೆಯ್ಯಲು -
ಅನಾದಿ ಸಂಸಿದ್ಧಿಯ ಪಟ್ಟಣಂ ಉಚ್ಚಂಗಿಯ ಕೋಟೆಯ ಕೆರೆಯಟ್ಟಿ ಉಚ್ಚಂಗಿಯ ದೇವಿಗೆ ಪಾಣ್ಡ್ಯ -
ದೇವರು ಶ್ರೀಮಚಾಳುಕ್ಯ ವಿಕ್ರಮ ವರ್ಷದ ೩ಳನೆಯ ಸಂವತ್ಸರದ ಜೆ-
ಷ್ಟದಮಾವಾಸೆ ಸೋಮವಾರ ಸೂರ್ಯ ಗ್ರಹಣ ನಿಮಿತ್ತ ಮಾಗಿ ಕೊಡಲೂರು ಸ (೦)
ಕರನಾರಾಯಣ ದೇವರ ತೀರ್ಥದಲು........................ಕೆ ಗೌಡಿಕೆ ಸ್ಥಾನಂ ಯು......
.... ಧಾರಾಪೂರ್ವಕಂ ಮಾಡಿ ಸರ್ವ್ವ ನಮಸ್ಯ -
ಮಾಗಿ ಬಿಟ್ಟರು .....ಯ ಕೊಳನ ಕೆರೆಯ ನೀರ್ಮಣ್ಣನಿತಲು ಭಯಮ ಉಚ್ಚಂಗಿ ದೇವಿಯಸ -
ಇರೋತ್ತರು ...... ಬೆದ್ದಲೆಯಂ ಕೆರೆಯ... ಳಾರುಮತ್ತರು ಬೆದ್ದಲೆಯು ಬಿಟ್ಟ ಗಳ್ದೆ ಕೆಳಗಣಗ

೨೫ ದ್ದೆಯುಂ....ವಾ ಬಡಗಹನ್ನಿರ್‍ಮ್ರತ್ತರು ಬೆದ್ದಲೆಯ........

೨೬ ....

೨೭ .... ಇಂಳಿಸಿದ ವರ್ಗೆ.......ಗಂಗೆ ಪ್ರಿಯಾಗೆವಾರಣಾ....

೨೮ ಸಿ ಅರ್ಗ್ಧ್ಯ ತೀರ್ಥ್ಧ ಕುರುಕ್ಷೇತ್ರದೊ....... ಸಿರ ಕವಿಲೆಯ ಕೋಡು ಕೊಳಗುಮಂ ಪಂಚರತ್ನದೊಳಟ್ಟಸಿ.

೨೯ ಸಾಸಿರ್ಬರು ವೇದ ಪಾರಾಗರಪ್ಪ-ಹ್ಮಣರ್ಗ್ಗೆಸಾಸಿರ ತಪೋಧನರ್ಗೆ ದಾನಂಗೆಯ್ದೆಫಳಯಕ್ಕು

೩೦ ಈ ಧರ್ಮಮಮನಾವನೋರ್ವನಳಿದಾತನಾ ತೀರ್ತ್ಥದಲು ಸಾಸಿರ ಕಳಿಲೆಯಂ ಸಾಸಿರ ಬ್ರಾಹ್ಮಣರುಮಂ ಸಾಸಿರ

೩೧ ತಪೋಧರುಮನಳಿದ ಪಂಚ ಮಹಾಪಾತಕ ನಕಲಿ ಅಳಿದಮಕ್ಕುಂ ನಿದನೆಕ್ಕೋಟಿಯಳಿದಂ ತೀರ್ತ್ಥಂಗ

೩೨ ಳ್ವೆನಿತುಮನಾ .... ಸುವಂ ಪಾರುವರನಳಿದಂ ಮೈಯ.. ನಾತಜಾ .....ಚ್ಚಂಗಿ

೩೩ ದಂ॥ ಸಾಮಾನ್ಯೋಯಂ ಧರ್ಮಸೇತು ನೃಪಾಣಾಮ್ ಕಾಲೇ ಕಾಲೇ ಪಾಲನೀಯೋಭವದ್ಧಿಃ

೩೪ ಪಾರ್ಥಿವೇಂದ್ರ ಭೂಯೋ ಭೂಯೋ ಯಾಚತೇ ರಾಮಭದ್ರ।ಸ್ವದತ್ತಂವಾ

೩೫ ಯೋಹರೇತಿ ವಸುಂಧರ ಶಷ್ಟಿರ್ವ್ವರ್ಷಸಹಸ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿ॥ಈ ಸಾಸ

೩೬ ನಮಂ ಬರೆದಂ ಸೇನಬೋವ ಚಾವರಾಜ ಕಂಡರಿಸಿದನಕ್ಕಸಾಲೆ ಮಾದಿಯೋಜ.

ಇ) ಹಳೇಕತ್ತಲಗೆರೆ ಹನುಮಂತ ದೇವಾಲಯಕ್ಕೆ ಪೂರ್ವಕಡೆ ನೆಟ್ಟ ಶಾಸನ

೧ ಶ್ರೀಹರಿಹರಾಯನಮಃ।ಸ್ವಸ್ತಿಶ್ರೀಶಕವರುಷ

೨ ೧೪೪೯ನೆಯಯೀಶ್ವರಸಂವತ್ಸರದಜೇಷ್ಟಸ್ತುಗು

೩ ಯಾದವನಾರಾಯಣಂಭುಜಬಳಪ್ರೌಢಪ್ರ

೪ ತಾಪಚಕ್ರವರ್ತ್ತಿಶ್ರೀರಾಮಚಂದ್ರರಾಯರಾ

೫ ಜ್ಯೋದಯೇಶ್ರೀಮತುರಾಯರಾಜಗುರುರೇಣು

೬ ಕದೇವನುಶ್ರೀಹರಿಹರದೇವರಅಂಗಭೋಗ

೭ ರಂಗಭೋಗ...... ಳಗಣಕತ್ತ

೮ ಲೆಗೆರೆಯ.............

೯ ಸಮಂನ್ವಿತ. ಸಹ.....ಹಾರವಾಚಂ

೧೦ ದ್ರಾರ್ಕ್ಕಸ್ಥಾಯಿಯಾಗಿಧಾರಾಪೂರ್ವ್ವಕಂಮಾ

೧೧ ಡಿ...ತ್ತಿಯಲ್ಲಿ...ಪುಣ್ಯಂಪಡದು

೧೨ ಕೊಂಡನು।ಸ್ವದತ್ತಾಂಪರದತ್ತಾಂವಾಯೋಹ

೧೩ ರೇತಿವಸುಂಧರಾ।ಶಷ್ಟಿರ್ವ್ವರುಶಸಹಸ್ರಾ

೧೪ ಣವಿಷ್ಟಾಯಾಂಜಾಯತೇಕ್ರಿಮಿ॥

೧೫ ಮಂಗಳ ಮಹಾಶ್ರೀಶ್ರೀಶ್ರೀ

ಈ) ಲೋಕೀಕೆರೆ ಕಲ್ಲೇಶ್ವರ ದೇವಸ್ಥಾನದ ನವರಂಗದ ನೈರುತ್ಯ ಮೂಲೆಯ ಕಂಬದ ದಕ್ಷಿಣ ಮುಖದಲ್ಲಿನ ಶಾಸನ :

೧ ಸ್ವಸ್ತಿ ಶ್ರೀ ಮತುಯಾದವ ನಾರಾಯಣ ಪ್ರ
೨ ತಾಪ ಚಕ್ರವರ್ತ್ತಿ ಹೊಯ್ಸಣ ಶ್ರೀ ವೀರನಾರಸಿಂಹ ದೇವ
೩ ನ ರಾಜ್ಯಾಭ್ಯುದಯದ ಶಕ ವರ್ಷ ೧೧೫೧ನೆಯ ವಿರೋ
೪ ಧಿ ಸಂವತ್ಸರದ ಚೈತ್ರದ ಬಹುಳದಮಾವಾಸೆ ಸೋಮವಾರ ಸಂ
೫ ಕ್ರಮಣ ವ್ಯತೀಪಾತದಂದು ಶ್ರೀ ಮನ್ಮಹಾ ಪ್ರಧಾನಂ ಪೊಲಾ
೬ ಳ್ವ ದಂಣ್ನಾಯಕರ ಸುಂಕಾಧಿಕಾರಿ ಗೋಪರಸ ದೊಸೆಯ
೭ ಮಂಚೆಯ್ಯ ದೇವ ಕರದೇವ ಸಿರಿ ಪೈಯ್ಯನಳಿಯ ಮ
೮ ಲೈಯ್ಯಂಗಳು ಲೋಕಿಯ ಕೆರೆಯ ಮೂಲಸ್ಥಾನದ ಶ್ರೀ
೯ ಕಲಿ ದೇವರ ನಂದಾ ದೀವಿಗೆಗೆ ಯಡಕೆಯ ಸುಂಕದೊ
೧೦ .ಳಗೆ ವರ್ಶ್ಯ ನಿಬಂಧಿಯಾಗಿ ಯಾ ಚಂದ್ರಾರ್ಕ್ಕತಾರಂಬ
೧೧ ರಂ ಧಾ ರಾ ಪೂರ್ವ್ವಕಂ ಮಾಡಿ ಕೊಟ್ಟ ಗದ್ಯಾಣವೊಂದು ಹ

<u>ಅದೇ ಕಂಬದ ಪೂರ್ವ ಮುಖದಲ್ಲಿನ ಶಾಸನ</u> :-

೧೨ ಣವೆರಡುಮಂ ಯಾವನಧಿಕಾರಿಯಾಗಿ ಬಂದಡಂ ವಪ್ಪಿ
೧೩ ಕೂಡುವರು ಈ ಧರ್ಮ್ಮಮಂ ಆ ಸ್ಥಳದ ಮಳಿಗೆ ಮುಂಮುರಿ
೧೪ ದಂಡಂಗಳು ಸುಂಕದಧಿಕಾರಿಗಳ ಕೈಯ್ಯಲೀಕೊಡು
೧೫ ವರು ಮಂಗಳ ಮಹಾಶ್ರೀ

ಉ) ಹರಿಹರದ ಹರಿಹರೇಶ್ವರ ದೇವಾಲಯದ ದಕ್ಷಿಣ ಭಾಗದಲ್ಲಿರುವ ಶಾಸನ :-

೧ ಸ್ವಸ್ತಿ. ಶ್ರೀ ಜಯಾಭ್ಯುದಯಶ್ಚ ಆಂಗಿರ(ಸ) ಸಂವತ್ಸರದ ಮಾರ್ಗಶಿರ ಬ. ೧೪
೨ (ಚತುರ್ದಶಿ) ಮಂ(ಗಳವಾರ) ಶ್ರೀಹರಿಹರದೇವರಿಗೆ ವೈರಿನಾರಾಯಣಂ ಚವುಡವೆಗ್ಗಡೆಯ
೩ ಮಗ ಬೀರಯ್ಯನು ಗ. ೩೮ರ ಬಡ್ಡಿಗೆ ನಂದಾದೀವಿಗೆಗೆ ೧೮ರ ಬಡ್ಡಿಗೆ ಮನಮಾಲೆ ಅಂತು
೪ ಗಳ ನು ಮಹಾಜನಂಗಳ ಕಯ್ಯಲು ಪೆರುಮಾಳೆ ದೇವನು ಆಚಂದ್ರಾರ್ಕಸ್ಥಾಯಿಯಾಗಿ
೫ ನಡವಂತಾಗಿ ಕೊ(ಟ್ಟ)ರು. ಮಂ(ಗ)ಳ ಮಹಾ ಶ್ರೀಶ್ರೀ.

ಊ) ಹರಿಹರದ ಹರಿಹರೇಶ್ವರ ದೇವಾಲಯದ ಮುಂಭಾಗದಲ್ಲಿ ನೆಟ್ಟ ಶಾಸನ :-

೧ ಶ್ರೀಗಣಾಧಿಪತಯೇನಮಃ।
೨ ನವಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇ।
೩ ತ್ರೈಲೋಕ್ಯನಗರಾರಂಭಮೂಲಸ್ತಂಭಾಯ ಶಂಭವೇ॥
೪ ಶ್ರೀವತ್ಸ ಶಶಿವತ್ಸಾಂಕ (ಮುಪಲುಪ್ತ) ಮನೋಭವಂ।
೫ ಪೀತವೀತಾಂಬರಂ ವಂದೇ ತೇಜೋ ಹರಿಹರಾತ್ಮಕಂ॥

೬ ಶ್ರೀಮನ್ಮಹಾರಾಜಾಧಿರಾಜಪರಮೇಶ್ವರ ಶ್ರೀ ವೀರಪ್ರತಾಪ ಶ್ರೀ ವೀರಅಚ್ಯುತದೇವ
೭ ಮಹಾರಾಯಕೃತ ಮಹಾನಂದನಿಧಿಪ್ರಶಂಸಾಪದ್ಯದ್ವಯಂ ಲಿಖ್ಯತೇ -

೮ ಶಾಕೇ ಚಂದ್ರರಸಾಮರೇಂದ್ರಗಣಿತೇ (ವರ್ಷೇ ವಿಕಾರ್ಯಾಹ್ವಯೇ
೯ ಪಕ್ಷೇ) ಭಾದ್ರಪದಸ್ಯ ಪೋಷಿತ ವಿಧೌ ದ್ವಾದಶ್ಯಭಿಖ್ಯೇ ತಿಥೌ।
೧೦ ವಾರೇ ಭೂಮಿಸುತಸ್ಯ ವಿಷ್ಣ್ವಧಿಪತೌ ತಾರೇಽಚ್ಯುತಕ್ಷ್ಮಾಪತಿಃ
೧೧ ಕೃತ್ವಾಽನಂದನಿಧಿಂ ದ್ವಿಜಾನ್ ಧನದಯನ್ನಾಮೋದಯನ್ಮಾಧವಂ॥

೧೨ ಪುಣ್ಯೌಘೈಃ ಪರಿಪಾಲಿತಸ್ಯ ಪರಿತೋ ಭೂತಾಳಿ ಸಂವೇಷ್ಟಿತಾಃ
೧೩ ಸದ್ವರ್ಗೈಃ ಸ್ವವಶೀಕೃತಸ್ಯ ಸಂತತಾಕ್ರಾಂತಾ(ಭುಜಂಗ) ವ್ರಜೈಃ।
೧೪ ಪ್ರಾಪ್ತಸ್ಯಾಭಿನವಪ್ರಶಸ್ತಿ ಮಧಿಕಪ್ರಖ್ಯಾತ ಶೌರ್ಯಾನ್ವಿತಾಃ
೧೫ ಮಂದಾನಂದನಿಧೇರ್ನವಾಃಽಪಿ ನಿಧಯಃ ಕಿಂ ತೇ ಲಭಂತೇ ತುಲಾಂ॥

೨) ಪಾರಿಭಾಷಿಕ ಪದಗಳು

ಅಧಿಷ್ಠಾನ	-	ದೇವಾಲಯ ಗೋಡೆಗೆ ಆಧಾರವಾಗಿರುವ ಕೆಳಭಾಗ
ಅರೆಗಂಭ	-	ಗೋಡೆಗಳ ನಡುವಣ ಅರ್ಧಕಂಭ, ಕಂಭದ ಅರ್ಧ ಭಾಗ ಗೋಡೆಯಲ್ಲಿಸೇರಿದ್ದು, ಉಳಿದಧಬಾಗಮಾತ್ರಗೋಚರಿಸುತ್ತದೆ.
ಅಭಿಷೇಕ ಜಲ	-	ದೇವತಾ ಮೂರ್ತಿಗೆ ಎರೆಯುವ ನೀರು
ಅಕ್ಷಮಾಲಾ (ಅಕ್ಷ ಸೂತ್ರ)	-	ಮಣಿಗಳ ಸರ (ಜಪಮಾಲೆ)
ಅಂಕಣ	-	ವಿಂಗಡಣೆಯ ಒಂದು ಭಾಗ
ಅಂಕುಶ	-	ಆಯುಧಗಳಲ್ಲಿನ ಒಂದು ವಿಧ
ಅಂತರಾಳ	-	ಗರ್ಭಗುಡಿ ಮತ್ತು ನವರಂಗದ ಮಧ್ಯ ಭಾಗ
ಅಂತರ್ಭಿತ್ತಿ	-	ಗರ್ಭ ಗೃಹದ ಸುತ್ತ ಇರುವ ಒಳ ಭಿತ್ತಿ
ಅಂಜಲಿ ಮುದ್ರೆ	-	ಎರಡು ಕೈ ಜೋಡಿಸಿ ಮುಗಿಯುತ್ತಿರುವುದು
ಅಭಯ ಹಸ್ತ	-	ಸಂರಕ್ಷಣಾ ಸೂಚಿ ಹಸ್ತ
ಈಟಿ	-	ಭರ್ಜಿ
ಉದರಬಂಧ	-	ಮೂರ್ತಿ ಎದೆಯ ಭಾಗದಲ್ಲಿ ಧರಿಸಿರುವ ಅಭರಣ
ಉಪಪೀಠ	-	ದೇವಾಲಯದ ಅಧಿಷ್ಠಾನದಲ್ಲಿನ ಒಂದು ಭಾಗ
ಊರ್ಧ್ವಮುಖ ಕ್ರಮ	-	ದೇವಾಲಯದ ಹೊರಭಾಗದಲ್ಲಿ ಕೆಳಗಿನಿಂದ ಮೇಲಕ್ಕೆ ಒಂದಾದ ಮೇಲೊಂದು ಭಾಗವನ್ನು ನಿಶ್ಚಿತ ರೀತಿಯಲ್ಲಿ ರಚಿಸುವುದು.
ಕಟ್ಯಾವಲಂಬಿತ	-	ಕಟಿ (ಸೊಂಟ) ಹಿಡಿದಿರುವ ಕೈ
ಕಲಶ	-	ಶಿಖರದ ಮೇಲಿನ ಪಾತ್ರೆಯಂತಹ ಭಾಗ
ಕಕ್ಷಾಸನ	-	ಕುಳಿತುಕೊಳ್ಳಲು ನಿರ್ಮಿಸಿದ ಕಟ್ಟೆ
ಕಿರೀಟ ಮಕುಟ	-	ತಲೆಯ ಮೇಲೆ ಕಿರೀಟ ಧರಿಸಿದ ಮೂರ್ತಿ
ಕೀರ್ತಿಮುಖ	-	ಅಲಂಕಾರದ ಒಂದು ವಿಧ, ವೈಭವ, ಭವ್ಯತೆಯನ್ನು ಸೂಚಿಸುವ ಅಲಂಕಾರ
ಕುಚಬಂಧ	-	ಸ್ತನಪಟ್ಟಿ
ಕುಂಭಲತಾ	-	ಭಿತ್ತಿಯಲ್ಲಿ ಕುಡ್ಯ ಸ್ತಂಭಗಳ ನಡುವಿನ ಅಲಂಕಾರಿಕ ಭಾಗ
ಕುಂಜಾರಕ್ಷಾ	-	ಆನೆಯ ಕಣ್ಣನ್ನು ಹೋಲುವ ಕಿಟಕಿ
ಕುಮುದ	-	ಅಧಿಷ್ಠಾನದಲ್ಲಿ ಕಾಣಬರುವ ಅಂಗ

[illegible]

ಕೋಷ್ಠಗುಡಿ - ಮೂರ್ತಿಗಳನ್ನು ಇಡಲು ಮಾಡಿದ ಚಿಕ್ಕಗೂಡು

ಖಡ್ಗ - ಖತ್ತಿ

ಖಟ್ವಾಂಗ - ಮೊಣಕೈ ಮೂಳೆಯಿಂದ ತಯಾರಿಸಿದ ಗದೆಯಾಗಿದ್ದು, ಮೇಲ್ಭಾಗದಲ್ಲಿ ಮನುಷ್ಯನ ತಲೆ ಬುರುಡೆ ಇರುತ್ತದೆ.

ಖೇಟಕ -

ಗರ್ಭಗೃಹ - ಮೂಲ ದೇವತಾ ಮೂರ್ತಿ ಇರುವ ದೇವಾಲಯದ ಭಾಗ

ಗರುಡ ಗಂಭ - ದೇವಾಲಯದ ಮುಂದೆ ನಿಲ್ಲಿಸಿರುವ ಗರುಡನ ಚಿತ್ರ ಕೆತ್ತಿದ ದೀಪಸ್ತಂಭ

ಗವಾಕ್ಷಿ - ಗೋವಿನ ಕಣ್ಣನ್ನು ಹೋಲುವ ಕಿಟಕಿ

ಗೃಹ ಪಿಂಡಿ - ಗರ್ಭಗೃಹದ ಸುತ್ತ ಇರುವ ಭಿತ್ತಿ

ಗೋಪುರ - ಪ್ರವೇಶ ದ್ವಾರದ ಮೇಲಿನ ಮೇಲ್ಕಟ್ಟಡ

ಚಕ್ರಕುಂಡಲ - ದುಂಡಾಕಾರದ ಕಿವಿಯೋಲೆ (ಕಿವಿಯ ಆಭರಣ)

ಜಗತಿ - ಅಧಿಷ್ಠಾನದ ತಳಹದಿ

ಜಟಾಮುಕುಟ - ಮೂರ್ತಿಗಳ ಕೂದಲನ್ನೆ ಕಿರೀಟದಂತೆ ಅಲಂಕರಿಸಿರುವುದು

ಡಮರುಗ - ಶಿವನ ಕೈಯಲ್ಲಿರುವ ವಾದ್ಯ

ತಳ - ಅಂತಸ್ತು

ತಂಬೂರಿ - ನಾರದನ ಕೈಯಲ್ಲಿ ಹಿಡಿದಿರುವ ಸಂಗೀತದ ಉಪಕರಣ

ತ್ರಿಪಟ್ಟಿ ಕುಮುದ - ಮೂರು ಮುಖದ ಕುಮುದ

ತ್ರಿಕೂಟ ಚಲ - ಮೂರು ಗರ್ಭಗುಡಿಗಳಿರುವ ದೇವಾಲಯ

ದರ್ಪಣ - ಕನ್ನಡಿ

ದ್ವಾರ ಪಾಲಕರು - ಬಾಗಿಲನ್ನು ಕಾಯುವ ಸೇವಕರು

ದೈತ್ಯ, ದಾನವ - ರಾಕ್ಷಸ

ಧನಸ್ಸು - ಬಿಲ್ಲು

ದ್ವಿಕೂಟ - ಎರಡು ಗರ್ಭಗುಡಿಗಳಿರುವ ದೇವಾಲಯ

ನಾಗಬಂಧವಾತಾಯನ - ನಾಗರಹಾವುಗಳು ಒಂದಕ್ಕೊಂದು ಸುತ್ತಿಕೊಂಡಂತಿದ್ದು, ಮಧ್ಯ ಭಾಗ ಟೊಳ್ಳಾಗಿರುವ ಕಿಟಕಿ .

ನಾಗಿಣಿ - ನಾಗದೇವತೆ

ನಾಭಿ - ಹೊಕ್ಕಳು

ನೀಲೋತ್ಪಲ	-	ನೀಲಿ ನೈದಿಲೆ
ನಂದಿ ಮಂಟಪ	-	ನಂದಿಗಾಗಿ ಕಟ್ಟಿಸಿರುವ ಪ್ರತ್ಯೇಕ ಗುಡಿ
ನಿರಂಧಾರ ದೇವಾಲಯ	-	ಗರ್ಭಗೃಹದ ಸುತ್ತ ಪ್ರದಕ್ಷಿಣಾಪಥ ಇರದೆ ಇರುವ ದೇವಾಲಯ
ದ್ವಿತಳ	-	ಎರಡು ಅಂತಸ್ತಿರುವ ಗೋಪುರ
ಪದ್ಮ	-	ಕಮಲ
ಪದ್ಮಾಸನ	-	ಪದ್ಮದ ಮೇಲೆ ಕುಳಿತಿರುವುದು/ ಎರಡು ಕಾಲನ್ನು ಒಳ ಭಾಗಕ್ಕೆ ಮಡಚಿ ಕುಳಿತಿರುವುದು.
ಪದ್ಮ ಪೀಠ	-	ಪದ್ಮದಿಂದ ಅಲಂಕರಿಸಿರುವ ಪೀಠ
ಪಟ್ಟಿಕಾ	-	ಅಧಿಷ್ಠಾನದ ಕೊನೆಯ ಅಂಗ, ವಾಜನದಂತೆಯೇ ಹೊರಚಾಚಿರುವ ಅಗಳವಾದ ಪಟ್ಟಿ
ಪರಶು	-	ಯುದ್ಧ ಕೊಡಲಿ
ಪರಿವಾರ	-	ಮುಖ್ಯ ದೇವತೆಯರ ಉಪ ದೇವತೆಗಳು
ಪೀನಕ	-	ಶಿವನ ಧನಸ್ಸಿನ ಹೆಸರು (ಹಾವಿನಿಂದ ಮಾಡಲ್ಪಟ್ಟಿದ್ದು)
ಪುಷ್ಪ ಬೋದಿಗೆ	-	ಪದ್ಮಾಲಂಕಾರವುಳ್ಳ ಬೋದಿಗೆ
ಪ್ರದಕ್ಷಿಣಾ ಪಥ	-	ಭಕ್ತಾಧಿಗಳು ಗರ್ಭಗುಡಿಯನ್ನು ಸುತ್ತಿ ಬರಲುಇರುವದಾರಿ
ಪ್ರಣಾಳ	-	ಅಭಿಷೇಕ ಮಾಡಿದ ನೀರು ಹೊರ ಹೋಗಲು ಮಾಡಿರುವ ನಾಳ
ಪ್ರಭಾವಳಿ	-	ಮೂರ್ತಿಗಳ ಬೆನ್ನು ಹಿಂದೆ ಮಾಡಿರುವ ಸುತ್ತಲಿನ ಅಲಂಕಾರಿಕ ಪಟ್ಟಿ
ಪಂಚ ಕೂಟ	-	ಐದು ಗರ್ಭಗುಡಿಗಳಿರುವ ದೇವಾಲಯ
ಪಂಜರ	-	ಗೂಡು (ಕೂಟ-ಶಾಲಾಗಳ ಮಧ್ಯಭಾಗ)
ಬಸದಿ	-	ಜೈನ ದೇವಾಲಯ
ಬಾಡ	-	ಗೋಡೆ
ಭಿತ್ತಿ	-	ಗೋಡೆ
ಭುಜಬಂಧ	-	ಮೂರ್ತಿ ಭುಜಕ್ಕೆ ಧರಿಸಿದ ಆಭರಣ
ಮಕರ ಧ್ವಜ	-	ಮೊಸಳೆ ಹೊಂದಿರುವ ಧ್ವಜ
ಮಕರ ತೋರಣ	-	ಮೊಸಳೆಯ ಬಾಯಿಂದ ತೋರಣಗಳು ಹೊರಬಂದಹಾಗೇ ಮಾಡಿರುವ ಅಲಂಕಾರ.
ಮಹಾದ್ವಾರ	-	ಮುಖ್ಯ ಪ್ರವೇಶದ್ವಾರ

ಮಹಾ ಮಂಟಪ	-	ನವರಂಗ (ಸಭಾ ಮಂಟಪ)ಕ್ಕೆ ಹೊಂದಿಕೊಂಡಿರುವ ಉದ್ದನೆಯ ಭಾಗ
ಮಂಚಬಂಧ	-	ಅಧಿಷ್ಠಾನದ ಒಂದು ರೀತಿ
ಮುಖ ಮಂಟಪ	-	ಪ್ರವೇಶ ಮಂಟಪ
ಮುಖ್ಯ ವಿಮಾನ	-	ಐದರಿಂದ ಹನ್ನೆರಡು ತಲಗಳನ್ನು ಹೊಂದಿರುವ ದೇವಾಲಯದ ಗೋಪುರಗಳ ಭಾಗ
ಮಂಚ ಬಂಧ	-	ಅಧಿಷ್ಠಾನದ ಒಂದು ರೀತಿ.
ಯಜ್ಞೋಪವೀತ	-	ದೇಹದಲ್ಲಿ ಧರಿಸಿದ ಪವಿತ್ರ ದಾರ
ಯೋಗ ಮುದ್ರೆ	-	ಧ್ಯಾನದಲ್ಲಿ ಕುಳಿತ ಭಂಗಿ
ರುಂಡ ಮಾಲೆ	-	ತಲೆ ಬುರುಡೆಯ ಹಾರ
ರೂವಾರಿ	-	ಶಿಲ್ಪಿ
ಲತಿನ	-	ಉತ್ತರ ಭಾರತದ ಒಂದು ಶೈಲಿಯ ದೇವಾಲಯ
ಲಲಾಟ ಬಿಂಬ	-	ದ್ವಾರದ ಮಧ್ಯದಲ್ಲಿ ಧಾರ್ಮಿಕ ಪಂಥವನ್ನು ಸೂಚಿಸುವ ಪ್ರತಿಬಿಂಬ ಕ ಚಿತ್ರಬಿರುವ ಅಲಂಕೃತ ಭಾಗ.
ಲಲಿತಾಸಾನ	-	ಒಂದು ಕಾಲನ್ನು ಇಳಿಬಿಟ್ಟು ಮತ್ತೊಂದು ಕಾಲನ್ನು ಮಡಚಿ ಕುಳಿತುರವ ಭಂಗಿ
ಲಂಬ ಹಸ್ತ	-	ನರ್ತನ ಸಮಯದಲ್ಲಿ ಉಪಯೋಗಿಸುವ ಹಸ್ತ ಸೂಚಿ
ವರದ ಹಸ್ತ	-	ಭಕ್ತರಿಗೆ ವರ ನೀಡುವ ಹಸ್ತ
ವಲ್ಲೀ ಬಂಧ	-	ಬಳ್ಳಿಗಳು ಒಂದಕ್ಕೊಂಡು ವೃತ್ತಕಾರದಲ್ಲಿ ಹೆಣೆದುಕೊಂಡಂತಿರುವ ಕಿಟಕಿ.
ವಾತಾಯನ	-	ಗಾಳಿ ಬೆಳಕಿಗಾಗಿ ಗೋಡೆಯಲ್ಲಿ ಮಾಡಿರುವ ಕಿಟಕಿ
ವೇದಿ (ವೇದಿಕಾ)	-	ಭಿತ್ತಿಯಲ್ಲಿ ಬರುವ ಮೊದಲ ಅಂಗ
ವಿಮಾನ ನಗರ	-	ಶಿಖರದ ಮಧ್ಯದಲ್ಲಿ ಎತ್ತರ ಶಿಖರವಿದ್ದು, ಸುತ್ತಲೂ ಸಣ್ಣ ಸಣ್ಣ ಶಿಖರವಿರುವುದಕ್ಕೆ ವಿಮಾನ ನಾಗರ ಎನ್ನುತ್ತಾರೆ.

ಶುರ್ರುಕ್ (ಶುರುವ್)	-	ಅರ್ಧಗೋಳಾಕಾರದ ಚಮಚ (ಚೌಟು), ಯಜ್ಞದ ಸಮಯದಲ್ಲಿ ಉಪಯೋಗಿಸುವ ಚಮಚ
ಸಮಭಂಗಿ	-	ಎರಡು ಕಾಲಿನ ಮೇಲೆ ಸಮನಾಗಿ ನಿಂತ ಭಂಗಿ
ಸರ್ವತೋಭದ್ರ	-	ನಾಲ್ಕು ಮುಖದ, ನಾಲ್ಕು ಕಡೆ ಪ್ರವೇಶ ದ್ವಾರವಿರುವ ದೇವಾಲಯಗಳಿಗಿರುವ ಹೆಸರು
ಸಂಧಾರ ದೇವಾಲಯಗಳು	-	ಗರ್ಭಗೃಹದ ಸುತ್ತ ಪ್ರದಕ್ಷಿಣಾಪಥವಿರುವ ದೇವಾಲಯಗಳು
ಸೂತ್ರಧಾರಿ	-	ವಾಸ್ತು ಶಿಲ್ಪಿ
ಸ್ತೂಪಿ	-	ಕಳಶದ ಮೇಲಿನ ಮೊನಚಾದ ಕೊನೆಯ ಭಾಗ

ಪೂರಕ ಗ್ರಂಥ ಸೂಚಿ

ಅ. ಅನುಷಂಗಿಕ ಆಕರ : ಕನ್ನಡ

೦೧. ಕೃಷ್ಣ ಎಂ. ಹೆಚ್. ೧೯೮೭ **ಕನ್ನಡ ನಾಡಿನ ಚರಿತ್ರೆ**, ಭಾಗ೩, ಕನ್ನಡ ಸಾಹಿತ್ಯಪರಿಷತ್, ಬೆಂಗಳೂರು

೦೨. ಕೃಷ್ಣಶರ್ಮ ಬೆಟಗೇರಿ ೧೯೭೧ ಕರ್ನಾಟಕ ಜನ ಜೀವನ, ಸಮಾಜ ಪುಸ್ತಕಾಲಯ, ಧಾರವಾಡ

೦೩. ಕೃಷ್ಣರಾವ್ ಎಂ.ವಿ. ಮತ್ತು ೧೯೭೦ ಕರ್ನಾಟಕ ಇತಿಹಾಸ ದರ್ಶನ, ಕರ್ನಾಟಕ ಸಹಕಾರಿ ಪ್ರಕಾಶನ ಕೇಶವ ಭಟ್ಟ ಮಂದಿರ, ಚಾಮರಾಜಪೇಟೆ

೦೪. ಗುರುರತ್ನಬಾಬು ಡಿ. ೧೯೯೭ **ದಕ್ಷಿಣ ಭಾರತೀಯ ಕಲೆ ಮತ್ತು ವಾಸ್ತುಶಿಲ್ಪ, ಯುವವಾಣಿ,** ಕ್ರಿಯೇಟಿವ್, ಮಾನಸಗಂಗೋತ್ರಿ, ಮೈಸೂರು

೦೫. ಗಿರೀಜ, ಟಿ. ೧೯೯೧ **ಚಿತ್ರದುರ್ಗ ಜಿಲ್ಲಾದರ್ಶಿನಿ,** ರೇಖಾ ಪ್ರಕಾಶನ, ದಾವಣಗೆರೆ

೦೬. ಗಿರೀಜ, ಟಿ. ೧೯೮೫ **ದಾವಣಗೆರೆ ದರ್ಶಿನಿ,** ಪ್ರಜಾವಾದಿ ಪ್ರಕಾಶನ, ದಾವಣಗೆರೆ.

೦೭. ಚಿದಾನಂದಮೂರ್ತಿ ಎಂ. ೧೯೭೯ **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** (ದ್ವಿ.ಮು) ಮೈಸೂರು ವಿ.ವಿ., ಮೈಸೂರು

೦೮. ತಿಪ್ಪೇರುದ್ರಸ್ವಾಮಿ ಹೆಚ್. ೧೯೯೨ **ಕನ್ನಡ ಸಂಸ್ಕೃತಿ ಸಮೀಕ್ಷೆ**, ವಾಣಿಪ್ರೆಸ್, ಮೈಸೂರು

೦೯. ದೇವರಕೊಂಡಾರೆಡ್ಡಿ ೧೯೯೪ **ತಲಕಾಡಿನ ಗಂಗರ ದೇವಾಲಯಗಳು ಒಂದು ಅಧ್ಯಯನ** ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೧೦. ದೇಶಾಯಿ ಪಾಂಡುರಂಗರಾಯರು ೧೯೫೬ **ಶಾಸನ ಪರಿಚಯ,** ಕರ್ನಾಟಕ ಇತಿಹಾಸ ಸಂಶೋಧಕ ಮಂಡಳಿ, ಧಾರವಾಡ.

೧೧. ದೇಶಾಯಿ ಪಿ.ಬಿ. ಮತ್ತಿತರರು ೧೯೮೧ **ಕರ್ನಾಟಕ ಇತಿಹಾಸ,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೨. ನಾಯಕ ಹಾ.ಮ.(ಪ್ರ.ಸಂ) ೧೯೭೫ **ಕನ್ನಡ ವಿಷಯ ವಿಶ್ವಕೋಶ,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೩. ಪಾಟೀಲ್ ಚನ್ನಬಸಪ್ಪ ಎಸ್. ೧೯೮೪ **ಕರ್ನಾಟಕ ಶಿಲ್ಪಗಳಲ್ಲಿ ಪಂಚತಂತ್ರ,** ಪ್ರಾಚ್ಯವಸ್ತು ಸಂಗ್ರಹಾಲಯ, ಮೈಸೂರು

೧೪. ಮುತ್ತುಚಾರ್ಯ ಟಿ.ವಿ. ೧೯೮೭ **ಭಾರತೀಯ ಶಿಲ್ಪಶಾಸ್ತ್ರಸಾರ** ಭಾಗ೧ ಶಿಲ್ಪಕಲಾ ಪರಿಷತ್, ಬೆಂಗಳೂರು.

೧೫. ರಾಜಶೇಖರ ಸಿಂದಿಗಿ ೧೯೮೮ **ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ,** ಸುಜಾತ ಪಬ್ಲಿಕೇಷನ್, ಧಾರವಾಡ.

೧೬. ರಾಮಚಂದ್ರರಾವ್ ಎಸ್.ಕೆ. (ಸಂಪಾದಕ) ೧೯೭೮ **ಕರ್ನಾಟಕದ ಕಲೆಗಳು, ವಾಸ್ತು,** ಸಂ.೪ ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೧೭. ರಾಮಚಂದ್ರರಾವ್ ಎಸ್.ಕೆ. ೧೯೭೫ **ಮೂರ್ತಿಶಿಲ್ಪ ನೆಲೆ ಹಿನ್ನಲೆ,** ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೧೮. ರಾಮಚಂದ್ರರಾವ್ ಎಸ್.ಕೆ. ೧೯೭೯ **ಭಾರತದ ದೇವಾಲಯ ನೆಲೆ:ಹಿನ್ನೆಲೆ,** ಐ.ಬಿ. ಎಚ್. ಪ್ರಕಾಶನ, ಬೆಂಗಳೂರು

೧೯. ರಾಮಚಂದ್ರರಾವ್ ೧೯೯೨ **ಶ್ರೀ ತತ್ವನಿಧಿ (ಸಂ. ೧)** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೦. ಲಕ್ಷ್ಮಣ್ ತೆಲಗಾವಿ (ಸಂ) ೧೯೮೭ **ಹರತಿಸಿರಿ,** ವಾಲ್ಮೀಕಿ ಸಾಹಿತ್ಯ ಸಂಪದ ಹರ್ತಿಕೋಟ

೨೧. ಲಕ್ಷ್ಮಿನಾರಾಯಣ ರಾವ್, ಎನ್. ಮತ್ತು ಪಂಚಮುಖಿ ಆರ್. ಎಸ್. ೧೯೪೬ **ಕರ್ನಾಟಕದ ಅರಸು ಮನೆತನಗಳು,** ಧಾರವಾಡ.

೨೨. ಸದಾಶಿವಪ್ಪ ಕುಂಬಾ ೧೯೯೦ **ಬಳ್ಳಾರಿ ಜಿಲ್ಲಾ ಸಾಂಸ್ಕೃತಿ ದರ್ಶನ,** ಮಾಲತೇಶ ಪ್ರಕಾಶನ, ಕುಂಚೂರು.

೨೩. ಶಂಕರನಾರಾಯಣರಾವ್ ಎಚ್. ೧೯೮೨ **ಶ್ರೀ ಹರಿಹರ ದೇವಾಲಯ,** ಶಾರದ ಮಂದಿರ, ಮೈಸೂರು.

೨೪. ಶ್ರೀಕಂಠಶಾಸ್ತ್ರಿ, ಎಸ್. ೧೯೬೫ **ಹೊಯ್ಸಳ ವಾಸ್ತು ಶಿಲ್ಪ,** ಪ್ರಸರಾಂಗ, ಮೈಸೂರು ವಿ.ವಿ., ಮೈಸೂರು.

೨೫. ಶ್ರೀಕಂಠಶಾಸ್ತ್ರಿ ಎಸ್. ೧೯೭೫ **ಸಂಶೋಧನಾ ಲೇಖನಗಳು,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ., ಮೈಸೂರು.

೨೬. ಶಿವರಾಮ ಕಾರಂತ ೧೯೬೯ **ಚಾಲುಕ್ಯ ವಾಸ್ತು ಶಿಲ್ಪ,** ಮೈಸೂರು ರಾಜ್ಯದ ಲಲಿತಕಲಾ ಅಕಾಡೆಮಿ, ಬೆಂಗಳೂರು.

೨೭. ಶಿವರಾಮ ಕಾರಂತ ೧೯೭೫ **ಭಾರತೀಯಶಿಲ್ಪ**, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೨೮. ಶೇಷಶಾಸ್ತ್ರಿ, ಆರ್. ೧೯೮೨ **ಕರ್ನಾಟಕದ ವೀರಗಲ್ಲುಗಳು,** ಬೆಂಗಳೂರು.

೨೯. ಪ್ರೊ: ಷೇಕ್ ಅಲಿ ಬಿ. ಮತ್ತು ಅ.ಸುಂದರ (ಸಂ) ೧೯೯೭ **ಕರ್ನಾಟಕ ಚರಿತ್ರೆ, ಸಂಪುಟ-೧,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಕಮಲಾಪುರ

೩೦. ಪ್ರೊ:ಷೇಕ್ ಅಲಿ ಬಿ. (ಪ್ರಧಾನ ಸಂಪಾದಕ) ೧೯೯೭ **ಕರ್ನಾಟಕ ಚರಿತ್ರೆ**, ಸಂಪುಟ-೩, ಕ್ರಿ.ಶ. ೧೩೩೬, ೧೭೬೦ ಪ್ರಸರಾಂಗ, ಕನ್ನಡ ವಿಶ್ವವಿದ್ಯಾಲಯ, ಕಮಲಾಪುರ

೩೧. ಪ್ರೊ.ಷೇಕ್ ಅಲಿ ಬಿ.(ಪ್ರ.ಸಂ) ೧೯೯೭ **ಕರ್ನಾಟಕ ಚರಿತ್ರೆ**, ಸಂ.೨ ಕ್ರಿ.ಶ. ೬೮೦,೧೩೩೬, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಕಮಲಾಪುರ

೩೨. ಜ್ಞಾನಾನಂದ ಜಿ. ೧೯೯೨ **ವಾಸ್ತು ಪುರುಷ ನೆಲೆ- ಹಿನ್ನಲೆ** ಸಂಸ್ಕೃತಿ ಸಾಹಿತ್ಯ ಪ್ರಸಾರ ಸಮಿತಿ, ಕೆ.ಜಿ. ಎಫ್.

ಸಹಾಯಕ ಆಂಗ್ಲ ಭಾಷ ಆಕರಗಳು

ಅ. ಪ್ರಾಥಮಿಕ ಆಕರ :-

1) Ephigraphia Carnatica-Volume No.VII ,Part I & II, XI .
(B.L. Rice Volumes. 1902)
2) South Indian Inscriptions IX.
3) Vijayanagara Inscriptions Volume- I, II & III (Ed, Gopal B.R)
4)

ಆ. ಅನುಷಂಗಿಕ ಆಕರ :-

01	Acharya P.K.	1978	**Encyclopaedia of Hindu Architecture**, J.K. Publishing House, Bhopal
02	Suryanath Kamth. U. (Chief Editor)	1975	Shimoga Dist. Gazetteer, Govt Press, Bangalore.
03	Acharya P.K.	1934	**Architecture of Mamasara**. Volume-IV, Oriental Books Reprint Corportion, New Delhi.
04	Adam Hardy	1995	**Indian Temple Arcthitecture.** The Karnataka Dravida Tradition 7th to 13th Centuries , Abhinava Publication's, New Delhi.
05	Ananda. K. Coomaraswamy	1992	**Essay's in Early Indian Architecture**, Indira Gandhi National Architecture Arts, New Delhi
06	Ananthalwar (Edit) Rea. A.. (Joint Edit)	1918	**Indian Arceitecture**, A.V.T. & Sons., Madras.
07	Ananthalwar M.A and Rea Alexander	1921	**Indian Architecture,** Volume-II,AVT I yer and sons, Madras
08	Banderkar D.R	1986	**Ancient History of India**, Asian Educational services, New Delhi.
09	Banerjea. J.N.	1941	**Development of Hindu Iconography,** University of Calcutta, Calcutta.

10 Bhatsoori. K.G. 1987 **Art & Architecture of North Kannada,** (Early & Medival Phase) Un-published Thessis. Karnataka University, Dharwad.

11 Brown Percy 1943 **Indian Architecture, (Buddhist & Hindu Periods)** D.B. Tarapore vale Sons & Co., Private Ltd., Bombay.

12 Cousens. H. 1926 **The Chalukyan Architecture of Kanarese District,** Archaeological Survey of India, Calcutta.

13 Dhaky. M.A. 1977 **The Indian Temple forms in Karnataka inscriptions & Architecture** Abhinava Publications, New Delhi.

14 Divakar and Other's (Edts) 1968 **Karnataka Through the Ages,** The Govt. of Mysore, Mysore.

15 Gerard Foekema 1994 **Hoysala Architecture,** Books & Books, New Delhi.

16 Gertude Jobes 1962 **Dictonary of Mythology & Symbols** (Part I & II)The Scarecrow Press.Inc. New Yark.

17 Gopal B.R. 1978 **The Chalukay'sll of Kalyana and the Kalachuris,** Karnataka University, Dharwad.

18 Gopinath Rao. T.A. 1985 **Elements of Hindu Iconography,** Vols. I, II & parts., New Delhi.

19 Gururajachar S. 1974 **Some Asspects of Economic and Social life in Karnataka,** University of Mysore, Mysore.

20 Harle. J.C. 1986 **The Art and Architecture of the Indian sub continent,** Penguin Books, Ltd., England.

21 Harshananda 1982 **Hindu Gods and Goddesses,** Mysore

22 Jose Pereia 1987 **Elements of Indian Architecture,** Matilal Banarsidass, Delhi.

[illegible]

23	Kamble. M.T.	1993	**Vijaynagara Temples at Hampi: A study**,un-published Ph.D. Thesis, Karnataka University, Dharwad.
24	Kramrish Stella	1946	**Hindu Temple**, Vol-I and II University of Calcutta, Calcutta.
25	Krishna Murthy. C.	1985	**Saiva Art & Architecthure in South India** , Sundeep Prabashan, Delhi.
26	Mathuram Bhoothalingam	1990	**Temples of India Myths and legends** Publication Devision, Ministry of Information & Bradcasting , Govt. of India, New Delhi.
27	Narshimaha Murthy. A.V.	1978	**Arechaeology of Karnataka,** Mysore University, Mysore.
28	Nilkanta Sastri K.A	1987	**A History of South India**, Oxford University Press, Madras.
29	Pancha Mukhi R.S.	1956	**An out Line of Karnataka Sculpture** Karnataka Historical Society, Dharwad.
30	Patil. C.S.	1994	**Temple of Raichur & Bellary Districts** Directorate of Archaeology and Museum, Mysore.
31	Patil. C.S. & Vinoda Patil	1997	**Inscriptions of Bellary Districts.** Directorate of Archaeology and Museum, Mysore.
32	Raja Sekhara. S.	1991	**Rashtrakuta Art in Karnataka**, Sujata Publications Dharwad.
33	Rajeshwari. D.R.	1989	**Shakthi Iconography,** Intellectual Publishing House,New Delhi.
34	Ramachandra Rao. S.K	1992	**Art and Arecuitecture of Indian Temples**, Voluem- III.Bangalore

35 Ramappa. Y. 1994 **Hoysala Temples of Shimoga & Chitradurga Districts** (Un-published, Ph.D., Thesis) Mysore University.

36 Rea-Alexr 1896 **Chalukyan Architecture(Including Examples from the Bellary District)** Superdentent, Govt. Press, Calcutta.

37 Sathan. B.N. (Chief Editor) 1975 **Chitradurga District Gazetter**, Govt, Press Bangalore.

38 Sahai Bagavant 1975 **Iconography of minor Hindu and Buddhist Deities,** New Delhi.

39 Shivakant. D Widivedi 1991 **Temple Sculptures of South India,** Agamkala Prabashan, Delhi.

40 Smith. D.H. 1982 **Festival in pancaratra Litrature**, Monohar Publications, New Delhi.

41 Soundara Rajan 1971 **Indian Temple Styles,** Munshiram Monoharlal, New Delhi.

42 Srinivasan. K.R. 1971 **Temples of South India**.National Book Trast India, New Delhi

43 Srinivasan. P.R. 1982 **The Indian Temple Art and Architecture**, Prasaranga, Mysore University, Mysore

44 Sundara. A. 1987 **The Keladi Nayaka's Architecture and Art**, Directorate of Archeaology & Museums, Govt, of Karnataka.

45 Suryanatha Kamath 1983 **Karnataka State Gazetter** Part-I Govt., of Karnataka Publication.

46 Tewari. S.P. 1979 **Hindu Iconography**, (Based on Anthological Verses, Literature, Artand Epigraphs) Agam Kala Prakashan, New Delhi.

47 Trivedi. R.D. 1987 **Iconography of Parvati,** Agram Kala Prakashan, Delhi.

48 Veeratappa. K. 1987 **Studies in Karnataka Alistory & Culture**,Bharathi Prakashan, Mysore.

ಪತ್ರಿಕೆ , ಗೆಜೆಟಿಯರ್ ಮತ್ತು ವರದಿಗಳು

ಕರ್ನಾಟಕ ಭಾರತಿ, ಧಾರವಾಡ

ಮಾನವಿಕ ಕರ್ನಾಟಕ, ಮೈಸೂರು

ಇತಿಹಾಸ ದರ್ಶನ, ಬೆಂಗಳೂರು

ಪ್ರಜಾವಾಣಿ, ಬೆಂಗಳೂರು

ಸಂಯುಕ್ತ ಕರ್ನಾಟಕ,ಹುಬ್ಬಳ್ಳಿ

ಜನತಾವಾಣಿ, ದಾವಣಗೆರೆ

Journal of Indian History


Quarterly Journal of the Mythic Society


Mysore State Gazetter

Mysore Archaeological Reports 1928-1946




ಕರ್ನಾಟಕ ರಾಜ್ಯ
0 10 20 30 40 ಕಿ.ಮೀ.
ಜಿಲ್ಲಾ ಕೇಂದ್ರ
ಬಿಜಾಪುರ
ಬಾಗಲಕೋಟೆ
ರಾಯಚೂರು
ಬೆಳಗಾಂ
ಧಾರವಾಡ
ಗದಗ
ಕೊಪ್ಪಳ
ಬಳ್ಳಾರಿ
ಉತ್ತರ ಕನ್ನಡ
ಹಾವೇರಿ
ದಾವಣಗೆರೆ
ಚಿತ್ರದುರ್ಗ
ಶಿವಮೊಗ್ಗ
ಉಡುಪಿ
ಚಿಕ್ಕಮಗಳೂರು
ತುಮಕೂರು
ಕೋಲಾರ
ಹಾಸನ
ದಕ್ಷಿಣ ಕನ್ನಡ
ಮಂಡ್ಯ
ಕೊಡಗು
ಮೈಸೂರು


ದಾವಣಗೆರೆ ಜಿಲ್ಲೆಯ ನಕ್ಷೆ
0 10 20 30 40 ಕಿ.ಮೀ.
ಎಲ್ಲೆ
ತಾಲೂಕು ಕೇಂದ್ರಗಳು
ಹರಪನಹಳ್ಳಿ
ಹರಿಹರ
ದಾವಣಗೆರೆ
ಜಗಳೂರು
ಹೊನ್ನಾಳಿ
ಚನ್ನಗಿರಿ
ದೇವಾಲಯಗಳು ಇರುವ ಸ್ಥಳಗಳು
೧. ಬಾಗಳಿ
೨. ಹಲವಾಗಲು
೩. ನೀಲಗುಂದ
೪. ಉಚ್ಚಂಗಿದುರ್ಗ
೫. ಗುಡಿಹಳ್ಳಿ
೬. ಅರಸಿಕೆರೆ
೭. ಕೋಡದಗುಡ್ಡ
೮. ಬಿಳಚೋಡು
೯. ಚದುರಗೊಳ
೧೦. ಕೊಣಚಗಲ್
೧೧. ಕಲ್ಲೇದೇವರ ಪುರ
೧೨. ಎಲೆಬೇತೂರು
೧೩. ಆನೇಕೊಂಡ
೧೪. ಆವರಗೊಳ್ಳ
೧೫. ನೀರ್ಥಡಿ
೧೬. ಮಾಯಕೊಂಡ
೧೭. ಲೋಕಿಕೆರೆ
೧೮. ಚಿಕ್ಕಬಿದರೆ
೧೯. ಸಾರಥಿ
೨೦. ವಾಸನ
೨೧. ಜಿಗಳಿ
೨೨. ನಂದಿತಾವರೆ
೨೩. ನಂದಿಗುಡಿ
೨೪. ಬಳ್ಳೇಶ್ವರ
೨೫. ಬೆಳಗುತ್ತಿ
೨೬. ತೀರ್ಥರಾಮೇಶ್ವರ
೨೭. ಕುರುವ
೨೮. ಬಸವಪಟ್ಟಣ
೨೯. ಸಂತೇಬೆನ್ನೂರು
೩೦. ಶಾಂತಿಸಾಗರ (ಸೂಳೆಕೆರೆ)
೩೧. ದೇವರಹಳ್ಳಿ
೩೨. ಮಸಣ
೩೩. ಕಲ್ಕೆರೆ
೩೪. ಜೋಳದಾಳು




ಕಲ್ಲೇಶ್ವರ ದೇವಾಲಯದ ತಳ ನಕ್ಷೆ - ಬಾಗಳಿ






ಕೇತೇಶ್ವರ (ಕಲ್ಲೇಶ್ವರ) ದೇವಾಲಯದ ತಳ ನಕ್ಷೆ - ಚನ್ನಗಿರಿ






ಕಲ್ಲೇಶ್ವರ ದೇವಾಲಯ ತಳ ನಕ್ಷೆ - ಹಲವಾಗಲು




ಭೀಮಲಿಂಗೇಶ್ವರ ದೇವಾಲಯದ ತಳ ನಕ್ಷೆ - ನೀಲಗುಂದ






ಚನ್ನಬಸವ (ಪ್ರ) ದೇವಾಲಯದ ತಳ ನಕ್ಷೆ - ಬಾಗಳಿ





ಲಕ್ಷ್ಮೀನಾರಾಯಣ ದೇವಾಲಯದ ತಳ ನಕ್ಷೆ - ನೀಲಗುಂದ





ಹರಿಹರೇಶ್ವರ ದೇವಾಲಯದ ತಳ ನಕ್ಷೆ - ಹರಿಹರ

ಛಾಯಾಚಿತ್ರ ವಿವರಣಾ ಪಟ್ಟಿ

೧. ದಕ್ಷಿಣದ ಪ್ರವೇಶ ದ್ವಾರ - ಕಲ್ಲೇಶ್ವರ ದೇವಾಲಯ, ಬಾಗಳಿ
೨. ಅಧಿಷ್ಠಾನ ಸೇರಿದಂತೆ ಹಿಂಭಾಗದ ನೋಟ - ಕಲ್ಲೇಶ್ವರ ದೇವಾಲಯ, ಬಾಗಳಿ
೩. ಅಂತರಾಳದ ದ್ವಾರ - ಕಲ್ಲೇಶ್ವರ ದೇವಾಲಯ, ಬಾಗಳಿ
೪. ಜಾಲಂಧ್ರ ವಿನ್ಯಾಸ - ಕಲ್ಲೇಶ್ವರ ದೇವಾಲಯ, ಬಾಗಳಿ
೫. ನವರಂಗದ ದ್ವಾರ - ಕಲ್ಲೇಶ್ವರ ದೇವಾಲಯ, ಬಾಗಳಿ
೬. ಮಹಾ ಮಂಟಪದ ಮುಚ್ಚಿಗೆಯಲ್ಲಿನ ಅಲಂಕರಣೆ - ಕಲ್ಲೇಶ್ವರ ದೇವಾಲಯ, ಬಾಗಳಿ
೭. ಮಹಾ ಮಂಟಪದಲ್ಲಿನ ಒಂದು ಕಂಭ - ಕಲ್ಲೇಶ್ವರ ದೇವಾಲಯ, ಬಾಗಳಿ
೮. ದೇವಾಲಯದ ದಕ್ಷಿಣ ಭಾಗದ ನೋಟ - ಕಲ್ಲೇಶ್ವರ ದೇವಾಲಯ, ಚಿಕ್ಕಬಿದರೆ
೯. ದೇವಾಲಯದ ಪಾರ್ಶ್ವ ನೋಟ - ತವಕ್ಲೇಶ್ವರ ದೇವಾಲಯ, ಉಚ್ಚಂಗಿದುರ್ಗ
೧೦. ದೇವಾಲಯದ ಪಾರ್ಶ್ವ ನೋಟ - ಬಸವೇಶ್ವರ ದೇವಾಲಯ, ಸಾರಥಿ
೧೧. ದೇವಾಲಯದ ಪಶ್ಚಿಮ ಭಾಗದ(ಮುಂಭಾಗ) ನೋಟ - ಹರಿಹರೇಶ್ವರ ದೇವಾಲಯ, ಅರಸೀಕೆರೆ
೧೨. ನವರಂಗದಲ್ಲಿನ ಒಂದು ಕಂಭ - ತ್ರಿಕೂಟಲಿಂಗೇಶ್ವರ ದೇವಾಲಯ, ಕಲ್ಲೇದೇವರ ಪುರ
೧೩. ದೇವಾಲಯದ ಪಾರ್ಶ್ವ ನೋಟ - ಕಲ್ಲೇಶ್ವರ ದೇವಾಲಯ, ಚದುರಗೋಳ
೧೪. ಗರ್ಭಗುಡಿಯ ಮೇಲಿನ ಶಿಖರ - ಕೇಶವ ದೇವಾಲಯ, ಬೆಳಗುತ್ತಿ
೧೫. ಅಧಿಷ್ಠಾನ - ಭೀಮಲಿಂಗೇಶ್ವರ ದೇವಾಲಯ, ನೀಲಗುಂದ
೧೬. ದೇವಾಲಯದ ಪಾರ್ಶ್ವ ನೋಟ - ಭೀಮಲಿಂಗೇಶ್ವರ ದೇವಾಲಯ, ನೀಲಗುಂದ
೧೭. ಪಶ್ಚಿಮ ಭಾಗದ ಅಧಿಷ್ಠಾನ ಮತ್ತು ಭಿತ್ತಿಯ ನೋಟ - ಭೀಮಲಿಂಗೇಶ್ವರ ದೇವಾಲಯ, ನೀಲಗುಂದ
೧೮. ದಕ್ಷಿಣ ಭಿತ್ತಿಯಲ್ಲಿನ ದೇವಕೋಷ್ಠ - ಭೀಮಲಿಂಗೇಶ್ವರ ದೇವಾಲಯ, ನೀಲಗುಂದ
೧೯. ದೇವಾಲಯದ ಪಾರ್ಶ್ವ ನೋಟ - ಭೀಮಲಿಂಗೇಶ್ವರ ದೇವಾಲಯ, ನೀಲಗುಂದ
೨೦. ಮುಚ್ಚಿಗೆಯಲ್ಲಿ ತಾವರೆಯ ಅಲಂಕಾರ - ಅನಂತಶಯನ ದೇವಾಲಯ, ನೀಲಗುಂದ
೨೧. ಅಧಿಷ್ಠಾನ - ಹರಿಹರೇಶ್ವರ ದೇವಾಲಯ, ಹರಿಹರ
೨೨. ಮಹಾಮಂಟಪದ ಮುಚ್ಚಿಗೆಯಲ್ಲಿನ ಅಲಂಕಾರ - ಹರಿಹರೇಶ್ವರ ದೇವಾಲಯ, ಹರಿಹರ
೨೩. ದೇವಾಲಯದ ಪಾರ್ಶ್ವ ನೋಟ - ಹರಿಹರೇಶ್ವರ ದೇವಾಲಯ, ಹರಿಹರ
೨೪. ದೇವಾಲಯದ ಪಾರ್ಶ್ವ ನೋಟ - ಲಕ್ಷ್ಮೀ ದೇವಾಲಯ, ಹರಿಹರ
೨೫. ದೇವಾಲಯದ ಭಿತ್ತಿಯ ನೋಟ - ಅಮೃತಲಿಂಗ ಮಾಣಿಕೇಶ್ವರ ದೇವಾಲಯ, ನಂದಿತಾವರೆ
೨೬. ಭಿತ್ತಿಯ ಮೇಲಿನ ಬೇಟೆಗಾತಿ - ಅಮೃತಲಿಂಗ ಮಾಣಿಕೇಶ್ವರ ದೇವಾಲಯ, ನಂದಿತಾವರೆ.
೨೭. ದೇವಾಲಯದ ನೋಟ - ಸಿದ್ಧೇಶ್ವರ ದೇವಾಲಯ, ಶಾಂತಿಸಾಗರ (ಸೂಳೆಕೆರೆ)
೨೮. ಭದ್ರಕಾಳಿ - ಬನಶಂಕರಿ ದೇವಾಲಯ, ಚದುರಗೋಳ

೨೯. ಸೂರ್ಯ - ಕಲ್ಲೇಶ್ವರ ದೇವಾಲಯ, ಬಾಗಳಿ

೩೦. ಉಗ್ರನರಸಿಂಹ - ಕಲ್ಲೇಶ್ವರ ದೇವಾಲಯ, ಬಾಗಳಿ

೩೧. ನಂದಿ - ಕಲ್ಲೇಶ್ವರ ದೇವಾಲಯ, ಬಾಗಳಿ

೩೨. ಉಮಾ ಮಹೇಶ್ವರಿ - ವಸ್ತು ಸಂಗ್ರಹಾಲಯ, ಬಾಗಳಿ

೩೩. ಸರಸ್ವತಿ - ವಸ್ತು ಸಂಗ್ರಹಾಲಯ, ಬಾಗಳಿ

೩೪. ಲಿಂಗ - ಇಷ್ಟಲಿಂಗೇಶ್ವರ ದೇವಾಲಯ, ಬಾಗಳಿ

೩೫. ವಿಷ್ಣು - ಇಷ್ಟಲಿಂಗೇಶ್ವರ ದೇವಾಲಯ , ಬಾಗಳಿ

೩೬. ಕೇಶವ - ಕಲ್ಲೇಶ್ವರ (ಕೇತೇಶ್ವರ) ದೇವಾಲಯ, ಚನ್ನಗಿರಿ

೩೭. ಲಕ್ಷ್ಮೀ ನಾರಾಯಣ - ಈಶ್ವರ ದೇವಾಲಯ, ಬಿಳಚೋಡು

೩೮. ಶೈವ ದ್ವಾರಪಾಲಕ - ಈಶ್ವರ ದೇವಾಲಯ, ನಂದಿಗುಡಿ

೩೯. ಸಪ್ತ ಮಾತೃಕೆಯರು - ಈಶ್ವರ ದೇವಾಲಯ, ನಂದಿಗುಡಿ

೪೦. ಅನಂತಶಯನ - ಚದುರಗೋಳ

೪೧. ಆಸೀನಭೈರವ - ಬಸವೇಶ್ವರ ದೇವಾಲಯ, ಸಾರಥಿ

೪೨. ಮಹಿಷಾಸುರ ಮರ್ಧಿನಿ - ಬಸವೇಶ್ವರ ದೇವಾಲಯ, ಸಾರಥಿ

೪೩. ಅನಂತಶಯನ - ಅನಂತಶಯನ ದೇವಾಲಯ, ನೀಲಗುಂದ

೪೪. ಸೂರ್ಯ - ಕಲ್ಲೇಶ್ವರ ದೇವಾಲಯ, ಗುಡಿಹಳ್ಳಿ

೪೫. ಗಣಪತಿ - ಈಶ್ವರ ದೇವಾಲಯ , ಹಿರೇಕೂಗಲೂರು

೪೬. ಗಣಪತಿ - ಈಶ್ವರ ದೇವಾಲಯ , ಹಿರೇಕೂಗಲೂರು

೪೭. ಭೈರವ - ಈಶ್ವರ ದೇವಾಲಯ, ಮರವಂಜಿ

೪೮. ಜಿನ ತೀರ್ಥಂಕರ - ಬೇತೂರು.

೪೯. ಸರಸ್ವತಿ - ಕಲ್ಲೇಶ್ವರ ದೇವಾಲಯ, ಗುಡಿಹಳ್ಳಿ

೫೦. ವರಹಾ - ವೆಂಕಟೇಶ್ವರ ದೇವಾಲಯ, ದೇವರ ತಿಮ್ಮಲಾಪುರ.




೧. ದಕ್ಷಿಣದ ಪ್ರವೇಶ ದ್ವಾರ - ಕಲ್ಲೇಶ್ವರ ದೇವಾಲಯ, ಬಾಗಳಿ



೨. ಅಧಿಷ್ಠಾನ ಸೇರಿದಂತೆ ಹಿಂಭಾಗದ ನೋಟ - ಕಲ್ಲೇಶ್ವರ ದೇವಾಲಯ, ಬಾಗಳಿ



೩. ಅಂತರಾಳದ ದ್ವಾರ - ಕಲ್ಲೇಶ್ವರ ದೇವಾಲಯ, ಬಾಗಳಿ



೪. ಜಾಲಂಧ್ರ ವಿನ್ಯಾಸ - ಕಲ್ಲೇಶ್ವರ ದೇವಾಲಯ, ಬಾಗಳಿ



೫. ನವರಂಗದ ದ್ವಾರ - ಕಲ್ಲೇಶ್ವರ ದೇವಾಲಯ, ಬಾಗಳಿ



೬. ಮಹಾ ಮಂಟಪದ ಮುಚ್ಚಿಗೆಯಲ್ಲಿನ ಅಲಂಕರಣೆ - ಕಲ್ಲೇಶ್ವರ ದೇವಾಲಯ, ಬಾಗಳಿ



೭.　ಮಹಾ ಮಂಟಪದಲ್ಲಿನ ಒಂದು ಕಂಭ - ಕಲ್ಲೇಶ್ವರ ದೇವಾಲಯ, ಬಾಗಳಿ



೮.　ದೇವಾಲಯದ ದಕ್ಷಿಣ ಭಾಗದ ನೋಟ - ಕಲ್ಲೇಶ್ವರ ದೇವಾಲಯ, ಬಿಕ್ಕಬಿದರೆ



೯. ದೇವಾಲಯದ ಪಾರ್ಶ್ವ ನೋಟ - ತವಕ್ಲೇಶ್ವರ ದೇವಾಲಯ, ಉಚ್ಚಂಗಿದುರ್ಗ



೧೦. ದೇವಾಲಯದ ಪಾರ್ಶ್ವ ನೋಟ - ಬಸವೇಶ್ವರ ದೇವಾಲಯ, ಕಾಂಪ್ಲಿ



೧೧. ದೇವಾಲಯದ ಪಶ್ಚಿಮ ಭಾಗದ(ಮುಂಭಾಗ) ನೋಟ - ಹರಿಹರೇಶ್ವರ ದೇವಾಲಯ, ಅರಸೀಕೆರೆ



೧೨. ನವರಂಗದಲ್ಲಿನ ಒಂದು ಕಂಭ - ತ್ರಿಕೂಟಲಿಂಗೇಶ್ವರ ದೇವಾಲಯ, ಕಲ್ಲೇದೇವರ ಪುರ



೧೩. ದೇವಾಲಯದ ಪಾರ್ಶ್ವ ನೋಟ - ಕಲ್ಲೇಶ್ವರ ದೇವಾಲಯ, ಚದುರಗೋಳ



೧೪. ಗರ್ಭಗುಡಿಯ ಮೇಲಿನ ಶಿಖರ - ಕೇಶವ ದೇವಾಲಯ, ಬೆಳಗುತ್ತಿ



೧೫. ಅಧಿಷ್ಠಾನ - ಭೀಮಲಿಂಗೇಶ್ವರ ದೇವಾಲಯ, ನೀಲಗುಂದ



೧೬. ದೇವಾಲಯದ ಪಾರ್ಶ್ವ ನೋಟ - ಭೀಮಲಿಂಗೇಶ್ವರ ದೇವಾಲಯ, ನೀಲಗುಂದ



೧೭. ಪಶ್ಚಿಮ ಭಾಗದ ಅಧಿಷ್ಠಾನ ಮತ್ತು ಭಿತ್ತಿಯ ನೋಟ - ಭೀಮಲಿಂಗೇಶ್ವರ ದೇವಾಲಯ, ನೀಲಗುಂದ



೧೮. ದಕ್ಷಿಣ ಭಿತ್ತಿಯಲ್ಲಿನ ದೇವಕೋಷ್ಠ - ಭೀಮಲಿಂಗೇಶ್ವರ ದೇವಾಲಯ, ನೀಲಗುಂದ



೧೯. ದೇವಾಲಯದ ಪಾರ್ಶ್ವ ನೋಟ - ಭೀಮಲಿಂಗೇಶ್ವರ ದೇವಾಲಯ, ನೀಲಗುಂದ



೨೦. ಮುಚ್ಚಿಗೆಯಲ್ಲಿ ತಾವರೆಯ ಅಲಂಕಾರ - ಅನಂತಶಯನ ದೇವಾಲಯ, ನೀಲಗುಂದ



೨೧. ಅಧಿಷ್ಠಾನ - ಹರಿಹರೇಶ್ವರ ದೇವಾಲಯ, ಹರಿಹರ



೨೨. ಮಹಾಮಂಟಪದ ಮುಚ್ಚಿಗೆಯಲ್ಲಿನ ಅಲಂಕಾರ - ಹರಿಹರೇಶ್ವರ ದೇವಾಲಯ, ಹರಿಹರ



೨೩. ದೇವಾಲಯದ ಪಾರ್ಶ್ವ ನೋಟ - ಹರಿಹರೇಶ್ವರ ದೇವಾಲಯ, ಹರಿಹರ



೨೪. ದೇವಾಲಯದ ಪಾರ್ಶ್ವ ನೋಟ - ಲಕ್ಷ್ಮೀ ದೇವಾಲಯ, ಹರಿಹರ




೨೫. ದೇವಾಲಯದ ಭಿತ್ತಿಯ ನೋಟ - ಅಮೃತಲಿಂಗ ಮಾಣಿಕೇಶ್ವರ ದೇವಾಲಯ, ನಂದಿತಾವರೆ



೨೬. ಭಿತ್ತಿಯ ಮೇಲಿನ ಬೇಟೆಗಾತಿ - ಅಮೃತಲಿಂಗ ಮಾಣಿಕೇಶ್ವರ ದೇವಾಲಯ, ನಂದಿತಾವರೆ.




೨೭. ದೇವಾಲಯದ ನೋಟ - ಸಿದ್ಧೇಶ್ವರ ದೇವಾಲಯ, ಶಾಂತಿಸಾಗರ (ಸೂಳೆಕೆರೆ)



೨೮. ಭದ್ರಕಾಳಿ - ಬನಶಂಕರಿ ದೇವಾಲಯ, ಚದುರಗೋಳ



೨೯. ಸೂರ್ಯ - ಕಲ್ಲೇಶ್ವರ ದೇವಾಲಯ, ಬಾಗಳಿ



೩೦. ಉಗ್ರನರಸಿಂಹ - ಕಲ್ಲೇಶ್ವರ ದೇವಾಲಯ, ಬಾಗಳಿ



೩೧.   ನಂದಿ - ಕಲ್ಲೇಶ್ವರ ದೇವಾಲಯ, ಬಾಗಳಿ



೩೨.   ಉಮಾ ಮಹೇಶ್ವರಿ - ವಸ್ತು ಸಂಗ್ರಹಾಲಯ, ಬಾಗಳಿ



೩.೩. ಸರಸ್ವತಿ - ವಸ್ತು ಸಂಗ್ರಹಾಲಯ, ಬಾಗಳಿ



೩.೪. ಲಿಂಗ - ಇಷ್ಟಲಿಂಗೇಶ್ವರ ದೇವಾಲಯ, ಬಾಗಳಿ



೩.೫. ವಿಷ್ಣು - ಇಷ್ಟಲಿಂಗೇಶ್ವರ ದೇವಾಲಯ, ಬಾಗಳಿ



೩.೬. ಕೇಶವ - ಕಲ್ಲೇಶ್ವರ (ಕೇತೇಶ್ವರ) ದೇವಾಲಯ, ಚನ್ನಗಿರಿ



೩.೭. ಲಕ್ಷ್ಮೀ ನಾರಾಯಣ - ಈಶ್ವರ ದೇವಾಲಯ, ಬಿಳಚೋಡು



೩.೮. ಶೈವ ದ್ವಾರಪಾಲಕ - ಈಶ್ವರ ದೇವಾಲಯ, ನಂಟಗುಟಿ



೩೯. ಸಪ್ತ ಮಾತೃಕೆಯರು - ಈಶ್ವರ ದೇವಾಲಯ, ನಂದಿಗುಡಿ



೪೦. ಅನಂತಶಯನ - ಚದುರಗೋಳ



೪೧. ಆಸೀನಭೈರವ - ಬಸವೇಶ್ವರ ದೇವಾಲಯ, ಸಾರಥಿ



೪೨. ಮಹಿಷಾಸುರ ಮರ್ಧಿನಿ - ಬಸವೇಶ್ವರ ದೇವಾಲಯ, ಸಾರಥಿ



೪೩. ಅನಂತಶಯನ - ಅನಂತಶಯನ ದೇವಾಲಯ, ನೀಲಗುಂದ



೪೪. ಸೂರ್ಯ - ಕಲ್ಲೇಶ್ವರ ದೇವಾಲಯ, ಗುಡಿಹಳ್ಳಿ



೪೫. ಗಣಪತಿ - ಈಶ್ವರ ದೇವಾಲಯ, ಹಿರೇ[illegible]



೪೭. ಗಣಪತಿ - ಈಶ್ವರ ದೇವಾಲಯ, ಹಿರೇ[illegible]




೪೭. ಭೈರವ - ಈಶ್ವರ ದೇವಾಲಯ, ಮರವಂಜಿ



೪೮. ಜಿನ ತೀರ್ಥಂಕರ - ಬೇತೂರು.



೪೯. ಸರಸ್ವತಿ - ಕಲ್ಲೇಶ್ವರ ದೇವಾಲಯ, ಗ[illegible]ಹಳ್ಳಿ



೫೦. ವರಾಹ - ವೆಂಕಟೇಶ್ವರ ದೇವಾಲಯ, ದೇವರ ತಿಮ್ಮಲಾಪುರ.